
ಸಂಪಾದಕರು :
ತ್ರಿವೇಣಿ ಶ್ರೀನಿವಾಸರಾವ್, ಎಂ. ಆರ್. ದತ್ತಾತ್ರಿ



ಮಥಿಸಿದಷ್ಟೂ ಮಾತು

ಅಮೆರಿಕದ ಕನ್ನಡಿಗರ
ಸಲ್ಲಾಪ-ಹರಟೆ-ಚಿಂತನೆ

ಕನ್ನಡ ಸಾಹಿತ್ಯ ರಂಗ, ಯುಎಸ್‌ಎ ಮತ್ತು ಅಭಿನವ

ಕನ್ನಡ ಸಾಹಿತ್ಯ ರಂಗ ಪುಸ್ತಕ ಮಾಲೆ - ೫

ಮಥಿಸಿದಷ್ಟೂ ಮಾತು

ಅಮೆರಿಕದ ಕನ್ನಡಿಗರ ಸಲ್ಲಾಪ-ಹರಟೆ-ಚಿಂತನೆ

ಪ್ರಧಾನ ಸಂಪಾದಕಿ

ತ್ರಿವೇಣಿ ಶ್ರೀನಿವಾಸರಾವ್

ಸಹ ಸಂಪಾದಕ

ಎಂ. ಆರ್. ದತ್ತಾತ್ರಿ

ಕನ್ನಡ ಸಾಹಿತ್ಯ ರಂಗ

ನ್ಯೂ ಜೆರ್ಸಿ, ಯು.ಎಸ್.ಎ.

ಅಭಿನವ

ಬೆಂಗಳೂರು

MATHISIDASTU MATU – Collection of Kannada essays, edited by Triveni Shreenivasa Rao & M.R. Dattatri. This is the 5th book in the series of Kannada Sahithya Ranga Pustakamale. Published by **Kannada Sahitya Ranga,** Inc., No. 194 Schanck Road, Freehold, NJ 07728, USA, and **Abhinava,** 17/18-2, 1st Main, Marenahalli, Vijayanagar, Bangalore 560040 (India) Mob: 9448804905

First Published in 2011 Pages: 280 + iv Photos =284 Price Rs 150/-

Paper used: 80 GSM N.S. Maplitho
Book Size: 1/8 Demy

ಮೊದಲ ಮುದ್ರಣ: ೨೦೧೧

ಬೆಲೆ: ಒಂದು ನೂರಾ ಐವತ್ತು ರೂಪಾಯಿಗಳು

ಸಂಪಾದಕ ಮಂಡಳಿ
ಎಚ್. ವೈ. ರಾಜಗೋಪಾಲ್
ಎಂ. ಎಸ್. ನಟರಾಜ
ನಾಗ ಐತಾಳ (ಆಹಿತಾನಲ)
ಎಚ್. ಕೆ. ಚಂದ್ರಶೇಖರ್
ನಳಿನಿ ಮೈಯ

ಇಲ್ಲಿರುವ ಅಭಿಪ್ರಾಯಗಳು ಲೇಖಕರವೇ ಹೊರತು ಪ್ರಕಾಶಕರದಲ್ಲ

ಪ್ರಸರಣೆ: ಕೃಷ್ಣಾ ಚೆಂಗಡಿ

ಮುಖಪುಟ ವಿನ್ಯಾಸ : ಅಪಾರ

ಅಕ್ಷರ ಜೋಡಣೆ : ಶ್ರೀಧರ್

ಮುದ್ರಣ : ಲಕ್ಷ್ಮೀ ಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು-೧೮

ಮುನ್ನುಡಿ

ಅಮೆರಿಕದಲ್ಲಿ ಬೇರೆ ಬೇರೆ ಬಗೆಯ ಕನ್ನಡಿಗರ ಸಮಾವೇಶಗಳು ನಡೆಯುವುದು ನಮಗೆಲ್ಲ ತಿಳಿದಿದೆ. ಅವುಗಳಲ್ಲೆಲ್ಲ ಗಂಭೀರ ಸಾಹಿತ್ಯಾಸಕ್ತರು ಸೇರಿ ರಚಿಸಿಕೊಂಡಿರುವ ಸಾಹಿತ್ಯರಂಗದ ಕಾರ್ಯಕ್ರಮಗಳು ಇದಕ್ಕಿಂತ ಕೊಂಚ ಭಿನ್ನವಾಗಿವೆ ಮತ್ತು ವಿಶಿಷ್ಟವಾಗಿವೆ. ಸಾಹಿತ್ಯ ರಂಗವು ಕನ್ನಡ ಸಾಹಿತ್ಯದ ಮೇಲೆ ಚರ್ಚೆಯನ್ನು ಏರ್ಪಡಿಸುತ್ತದೆ; ಮತ್ತು ಅಮೆರಿಕದಲ್ಲಿರುವ ಕನ್ನಡ ಲೇಖಕರು ಬರೆದಿರುವ ಬರೆಹಗಳ ಸಂಕಲನವನ್ನು ಪ್ರಕಟಿಸುತ್ತದೆ. ಕರ್ನಾಟಕದಲ್ಲಿ ಉತ್ಸವಗಳು ಹೆಚ್ಚಾಗುತ್ತ ಸಂವಾದ ಮತ್ತು ಚರ್ಚೆಗಳು ಕಡಿಮೆಗೊಳ್ಳುತ್ತಿವೆ ಅನಿಸುತ್ತಿರುವ ಈ ಹೊತ್ತಲ್ಲಿ, ಸಾಹಿತ್ಯ ರಂಗದ ಈ ಉಪಕ್ರಮವು ಮಹತ್ವದ್ದಾಗಿ ತೋರುತ್ತಿದೆ. ಅಮೆರಿಕ ಕನ್ನಡಿಗರ ಬರೆಹಗಳ ಸಂಕಲನವಾಗಿರುವ ಪ್ರಸ್ತುತ ಕೃತಿಯು, ಈ ಬಾರಿಯ ವಸಂತೋತ್ಸವದಲ್ಲಿ ಬಿಡುಗಡೆಯಾಗುತ್ತಿದೆ. ಇದಕ್ಕೆ ನಾನು ಮುನ್ನುಡಿಯನ್ನು ಬರೆಯಬೇಕೆಂದು ಸಾಹಿತ್ಯ ರಂಗದ ಅಧ್ಯಕ್ಷರಾದ ಶ್ರೀ ಎಚ್.ವೈ. ರಾಜಗೋಪಾಲ್ ಅವರು ಇಚ್ಛೆಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಕೆಲವು ಅನಿಸಿಕೆಗಳನ್ನು ಹಂಚಿಕೊಳ್ಳುತ್ತಿದ್ದೇನೆ.

ಈ ಸಂಕಲನದಲ್ಲಿರುವ ಬರೆಹಗಳನ್ನು ಸಂಪಾದಕರು ಸಲ್ಲಾಪ ಹರಟೆ ಚಿಂತನೆ ಎಂದು ಮೂರು ಭಾಗಗಳಲ್ಲಿ ವಿಂಗಡಿಸಿದ್ದಾರೆ. ಆದರೆ ಅನುಭವ ಮತ್ತು ಚಿಂತನಾ ಪ್ರಧಾನವಾದ ಈ ಬರೆಹಗಳನ್ನು ಒಟ್ಟಾರೆಯಾಗಿ ಪ್ರಬಂಧಗಳು ಎನ್ನಬಹುದು. ಈ ಪ್ರಬಂಧಗಳನ್ನು ಓದುತ್ತ ನನಗೆ ಅಮೆರಿಕ ಕನ್ನಡಿಗರ ಬಾಳಿನ ಒಂದು ಮುಖದ ದರ್ಶನವಾದಂತಾಯಿತು.

ಬೇರೆ ಬೇರೆ ಕ್ಷೇತ್ರದಲ್ಲಿ ಹಾಗೂ ಜ್ಞಾನಶಿಸ್ತಿನಲ್ಲಿ ಕೆಲಸ ಮಾಡುವ ಜನರು ಕನ್ನಡದೊಳಗೆ ಬರೆಯುವುದರಿಂದ ಕನ್ನಡ ಬರೆಹಕ್ಕೆ ಹೊಸಶಕ್ತಿಯ ಆವಾಹನೆಯಾಗುತ್ತದೆ ಎಂದು ನಂಬಿದವನು ನಾನು. ಈ ಬರೆಹಗಳನ್ನು ಓದಿದ ಮೇಲೆ, ಬೇರೆ ಬೇರೆ ದೇಶಗಳಲ್ಲಿ ಇರುವ ಕನ್ನಡಿಗರು ಬರೆದಾಗಲೂ ಕನ್ನಡಕ್ಕೆ ಹೊಸ ಆಯಾಮದ ಕೂಡಿಕೆಯಾಗುತ್ತದೆ ಎಂದು ಅನಿಸುತ್ತಿದೆ. ಈ ಬರೆಹಗಳ ಹಿನ್ನೆಲೆಯಲ್ಲಿ ಅಮೆರಿಕಕ್ಕೆ ಹೋಗಿಬಂದವರು ಬರೆದ ಅನೇಕ ಪ್ರವಾಸಕಥನಗಳ ಮಿತಿಯೂ ಹೊಳೆಯುತ್ತಿದೆ.

ಇಲ್ಲಿನ ಲೇಖಕರು ಮುಖ್ಯವಾಗಿ ವೈದ್ಯರು ಇಂಜಿನಿಯರರು ವಿಜ್ಞಾನಿಗಳು ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಆಗಿರುವವರು. ಇವರಲ್ಲಿ ಅರ್ಧದಷ್ಟು ಜನ ಮಹಿಳೆಯರು ಎನ್ನುವುದು ಸಹ ಕುತೂಹಲಕರ. ಇಲ್ಲಿನ ಲೇಖಕರಿಗೆ ಪುರುಸೊತ್ತೇ ಇಲ್ಲದ ದುಡಿಮೆ ಮತ್ತು ಸಾಂಸ್ಕೃತಿಕ

ಏಕಾಂಗಿತನವೇ ಈ ಬಗೆಯ ಬರೆಹಗಳಲ್ಲಿ ಅವರನ್ನು ತೊಡಗಿಸಿರುವಂತೆ ತೋರುತ್ತದೆ. ಹೀಗಾಗಿ ಇಲ್ಲಿನ ಬರೆಹಗಳಿಗೆ ಆಯಾ ಲೇಖಕರ ವೈಯಕ್ತಿಕ ವಿಶಿಷ್ಟತೆ ಮತ್ತು ಲೋಕದೃಷ್ಟಿಗಳ ಆಚೆ, ಒಂದು ಸಾಮುದಾಯಕ ಲಕ್ಷಣವೂ ಇದೆ. ಉದಾಹರಣೆಗೆ, ಇಲ್ಲಿನ ಬರೆಹದ ಮುಖ್ಯವಸ್ತು, ಕಳೆದುಹೋದ ಬಾಳಿನ ಅಥವಾ ಬಿಟ್ಟುಬಂದ ದೇಶದ ನೆನಪುಗಳಿಗೆ ಸಂಬಂಧಪಟ್ಟಿರುವುದನ್ನು ಗಮನಿಸಬೇಕು. ಹೀಗಾಗಿಯೇ ಬಾಲ್ಯದ ಬದುಕಿನ ಸಂಗತಿಗಳು ಇಲ್ಲಿ ಬಹುತೇಕ ಬರೆಹಗಳ 'ವಸ್ತು'ವಾಗಿವೆ. ಇದರಿಂದ ಸಹಜವಾಗಿಯೇ ಬರೆಹಗಳಲ್ಲಿ ಭಾವುಕತೆ ಪ್ರಧಾನವಾಗಿ ಕೆಲಸ ಮಾಡಿದೆ. ಇಲ್ಲಿರುವ ಅಡುಗೆ ಮತ್ತು ಊಟದ ವಿವರಗಳು ಕೂಡ ಗತದ ಸ್ಮೃತಿಗಳಲ್ಲಿ ಆಹಾರ ಸಂಸ್ಕೃತಿಯ ಪ್ರಾಮುಖ್ಯವನ್ನು ಸೂಚಿಸುತ್ತಿವೆ. ಇಲ್ಲಿ ಬಳಕೆಯಾಗಿರುವ ಕರ್ನಾಟಕದ ಬೇರೆ ಬೇರೆ ಭಾಗದ ಪ್ರಾದೇಶಿಕ ವಿಶಿಷ್ಟವಾದ ಮಾತುಕತೆಗಳು ಬರೆಹವನ್ನು ಜೀವಂತಗೊಳಿಸಿವೆ. ಮಾತ್ರವಲ್ಲ, ಅವು ದೂರದೇಶದಲ್ಲಿದ್ದು ಊರನ್ನು ನೆನೆಯುವ ಒಳ ಉಪಾಯವಾಗಿಯೂ ಬಂದಂತಿವೆ.

ಇಲ್ಲಿನ ಬರೆಹಗಳಿಗೆ ಇನ್ನೊಂದು ಮುಖವಿದೆ. ಅದು ಬದುಕಿಗಾಗಿ ಆಯ್ದುಕೊಂಡಿರುವ ಹೊಸ ದೇಶದಲ್ಲಿ ಅನುಭವಿಸುವ ಕಷ್ಟ ಸುಖಗಳನ್ನು ಕುರಿತದ್ದು. ಅಪರಿಚಿತವಾದ ನಾಗರಿಕ ಸಮಾಜದಲ್ಲಿ ಬದುಕನ್ನು ಸವಾಲಾಗಿ ಸ್ವೀಕರಿಸಿದ ಜನ ಮಾಡಿರುವ ಹೋರಾಟ ಮತ್ತು ಬೆಳೆಸಿಕೊಂಡಿರುವ ಹೊಸ ಸಂಬಂಧಗಳ ಚಿತ್ರಣವೂ ಇಲ್ಲಿದೆ. ಗೆಳತಿಯ ಮನೆಗೆ ಹೋದ ಅನುಭವವನ್ನು ಹೇಳಿಕೊಂಡಿರುವ ಮಾಲಾರಾವ್ ಅವರ ಲೇಖನವು ಅಮೆರಿಕವನ್ನು ತನ್ನದೆಂದು ಭಾವಿಸಿದ ಸದರ ಮತ್ತು ಆಪ್ತತೆಯಲ್ಲಿಯೇ ಹುಟ್ಟಿದ್ದು. ಇದಕ್ಕೆ ಪ್ರತಿಯಾಗಿ, ಮರಳಿ ಸ್ವದೇಶಕ್ಕೆ ಬಂದಾಗ, ಸ್ವಂತ ಊರಿನಲ್ಲಿ ತಿರುಗಾಡುವಾಗ, ಪರಕೀಯತೆಯ ಭಾವ ಅನುಭವಿಸುವಿಕೆ ಬರೆಹಗಳೂ ಇವೆ. ಬಹುಶಃ ಪರದೇಶದಲ್ಲಿ ಅನುಭವಿಸುವ ಪರಕೀಯತೆಯ ಭಾವಕ್ಕಿಂತ ನಮ್ಮ ಊರುಗಳಲ್ಲೇ ಅನುಭವಿಸುವ ಪರಕೀಯತೆಯು ಹೆಚ್ಚು ವಿಚಿತ್ರವಾದುದು. ಸಂಕಟಕರವಾದುದು. ಆದರೆ ಅದನ್ನು ಹೇಳಿಕೊಳ್ಳುವುದಕ್ಕೆ ಪ್ರಾಮಾಣಿಕತೆ ಬೇಕು. ದತ್ತಾತ್ರಿಯವರ ಲೇಖನವು, ನೆನಪುಗಳ ಭಾವುಕತೆಯು ಬದಲಾದ ವಾಸ್ತವತೆಯ ಜತೆ ಮುಖಾಮುಖಿ ಮಾಡಿದಾಗ ಹುಟ್ಟುವ ಕಟುವಾದ ಅನುಭವಗಳನ್ನು ನಮಗೆ ಮುಟ್ಟಿಸುತ್ತದೆ.

ಹೀಗೆ ಬಿಟ್ಟುಹೋದ ದೇಶದ ಮತ್ತು ಬದುಕುತ್ತಿರುವ ದೇಶದ ಎರಡೂ ಅನುಭವ ಲೋಕಗಳು ಸೇರಿ, ಇಲ್ಲಿನ ಬರೆಹಗಳಲ್ಲಿ ಒಂದು ಬಗೆಯ ಇಂಡೊ-ಅಮೆರಿಕನ್ ಎಂದು ಕರೆಯಬಹುದಾದ ಒಂದು ಅನುಭವಲೋಕವು ನಿರ್ಮಾಣವಾಗಿದೆ. ಹೊಸ ಮತ್ತು ಹಳೆಯ ತಲೆಮಾರಿನ ಲೇಖಕರು ಒಟ್ಟಿಗೆ ಬರೆದಿರುವುದರಿಂದ, ಹಳೆಯ ಅಮೆರಿಕ ಚಿತ್ರದಿಂದ ಬದಲಾದ ಅಮೆರಿಕದ ಚಿತ್ರದವರೆಗೆ ಹಳೆಯ ಭಾರತದಿಂದ ಬದಲಾದ ಭಾರತದವರೆಗೆ, ಎರಡೂ ದೇಶಗಳ ಅಂದು ಇಂದಿನ ಚಿತ್ರಗಳು ಇಲ್ಲಿ ಸಿಗುತ್ತವೆ. ಒಟ್ಟಾರೆ ಇಲ್ಲಿರುವುದು ಬದಲಾದ ಅಥವಾ ಬದಲಾಗುತ್ತಿರುವ ದೇಶಗಳ ಕಥನ.

ಇಲ್ಲಿನ ಎರಡು ಲೇಖನಗಳು ಅಮೆರಿಕದ ಹಿಂದುಧರ್ಮ ಬದಲಾಗುತ್ತಿರುವ ಚಿತ್ರವನ್ನು ಕೊಡುತ್ತದೆ. 'ಅಮೆರಿಕೋಪನಯನ' ಎಂಬ ಇಲ್ಲಿನ ಒಂದು ಲೇಖನದ ಹೆಸರು, ಬಹುಶಃ ಈ ಮಿಶ್ರಸಂಸ್ಕೃತಿಯನ್ನು ಮಾರ್ಮಿಕವಾಗಿ ಸೂಚಿಸುತ್ತಿದೆ. 'ಗೆ' ಮದುವೆ ಮಾಡಿಸಿದ ಪುರೋಹಿತನಿಂದ ಹಿಡಿದು ಭಾಷಣದ ಮೊದಲು ಶಂಖ ಊದುವ ವ್ಯಕ್ತಿಯವರೆಗೆ ಎಷ್ಟೊಂದು ಬಗೆಯ ಚಿತ್ರಗಳಿವೆ ಇಲ್ಲಿ! ಇವೆಲ್ಲವೂ ಸಂಸ್ಕೃತಿ ಧರ್ಮ ಅಧ್ಯಯನ ಮಾಡುವವರಿಗೆ ಮಹತ್ವದ ಸಂಗತಿಗಳಾಗಿವೆ. ಅಮೆರಿಕದ ಕನ್ನಡಿಗರ ಅನುಭವಲೋಕ ಮತ್ತು ಚಿಂತನಕ್ರಮಗಳಲ್ಲಿ ನಾನಾ ಪರಿಯಲ್ಲಿ ಅಡಗಿರುವ ಸಂಕರತನವು, ಅದನ್ನು ಅಭಿವ್ಯಕ್ತಿ ಮಾಡಲು ಬಳಸುತ್ತಿರುವ ಭಾಷೆಯನ್ನು ಸಹ ಸಂಕರಗೊಳಿಸಿಗೊಂಡಿದೆ. ಹೊಸ ಅನುಭವ ಮತ್ತು ಚಿಂತನೆಗಳು ಹೊಸ ಭಾಷೆಯನ್ನು ಕಟ್ಟಿಕೊಳ್ಳಲು ಒತ್ತಾಯ ಹಾಕುವುದು ಸಾಮಾನ್ಯ.

ಇಲ್ಲಿನ ಬರೆಹಗಳಲ್ಲಿ ಸಂಕ್ರಮಣದ ಅವಸ್ಥೆಯಲ್ಲಿರುವ ಜೀವನದ ಲಯವನ್ನು ಹಿಡಿಯುವುದೇ ಪ್ರಧಾನವಾಗಿದೆ. ಜಂಗಮಕ್ಕಳಿವಿಲ್ಲ ನಿಜ. ಆದರೆ ಜಂಗಮತನಕ್ಕೆ ನೋವಿನ ತಲ್ಲಣದ ಅಸ್ಥಿರತೆಯ ಸಂಕಟಗಳೂ ಇವೆ. ಇಲ್ಲಿನ ಅನೇಕ ಬರೆಹಗಳಲ್ಲಿ ಬದಲಾವಣೆ ಸಹಜವೆಂಬ ಭಾವವಿದ್ದರೂ, ಆಳದಲ್ಲಿ ಎಂತಹುದೊ ಒಂದು ಬಗೆಯ ಆತಂಕವೂ ಸುಪ್ತವಾಗಿ ಮಿಡಿಯುತ್ತ ಇದೆ. ಈ ಆತಂಕದ ಭಾಗವಾಗಿಯೇ ಇಲ್ಲಿನ ಬರೆಹಗಳಲ್ಲಿರುವ ವಿನೋದ ಪ್ರಜ್ಞೆಯನ್ನು ನೋಡಬೇಕು. ಇಲ್ಲಿನ ಬರೆಹಗಳ ಶಕ್ತಿಯೂ ಆಗಿರುವ ಈ ಲಘುಶೈಲಿಯು ಲೇಖಕರ ಸಹಜ ವಿನೋದಪ್ರಜ್ಞೆಯಿಂದ ಮಾತ್ರ ಬಂದಿದ್ದಲ್ಲ; ಅದು ಬದುಕಿನ ಪರಿಸ್ಥಿತಿಗಳೇ ಅದನ್ನು ಸಹ್ಯವಾಗಿಸಿಕೊಂಡು ಬದುಕಲು ಹುಟ್ಟಿಸಿದ ಅನಿವಾರ್ಯವಾದ ಕೀಲೆಣ್ಣೆಯಂತೆ ಬಂದಂತಿದೆ. ತಮ್ಮ ಹತೋಟಿಗೆ ಮೀರಿದ ಪಲ್ಲಟಗಳನ್ನು ಸಹಿಸುವುದಕ್ಕೆ ಈ ಹಾಸ್ಯಪ್ರಜ್ಞೆ ನೆರವಾಗಿರುವಂತಿದೆ. ವೈಯಕ್ತಿಕವಾಗಿ ಮೈತ್ರೀ ಅವರ ಪ್ರಾಮಾಣಿಕ ಪೋಲಿತನ ಧ್ವನಿಪೂರ್ಣವಾದ ಮಾತುಗಳನ್ನು ಸಹಜವಾಗಿ ಬರೆಯುವುದು ಇಷ್ಟವಾಗುತ್ತದೆ.

ಇಲ್ಲಿನ ಬರೆಹಗಳ ಗುಣಮಟ್ಟ ಬೇರೆ ಬೇರೆ ತರಹ ಇದೆ. ಬರವಣಿಗೆಯ ಕಲೆಯನ್ನು ಬಲ್ಲ ಕುಶಲರು ಇರುವಂತೆ, ಕುಶಲತೆಯಿಲ್ಲದವರೂ ಇದ್ದಾರೆ. ಲವಲವಿಕೆಯ ಬರೆಹಗಳಿರುವಂತೆ ಕೆಲವು ಸೋತ ಬರೆಹಗಳೂ ಇವೆ. ಕೆಲವು ಪ್ರಬಂಧಗಳು ಅನುಭವ ಪ್ರಧಾನವಾಗಿವೆ. ಕೆಲವು ಚಿಂತನ ಪ್ರಧಾನವಾಗಿವೆ. ಆದರೆ ಅನುಭವ ಮತ್ತು ಚಿಂತನೆಯ ಎರಡೂ ಆಯಾಮಗಳನ್ನು ಬೆಸೆಯಲು ಯತ್ನಿಸಿರುವ ಬರೆಹಗಳೇ ಇಲ್ಲಿನ ಯಶಸ್ವೀ ಬರೆಹಗಳು. ದತ್ತಾತ್ರಿ, ಕಾಗಿನೆಲೆ, ಶಾಂತಲಾ, ಶಶಿಕಲಾ ಅವರ ಲೇಖನಗಳಲ್ಲಿ ಅಳವಟ್ಟಿರುವ ಚಿಂತನೆ ಅಪೂರ್ವವಾಗಿದೆ. ವೈಶಾಲಿ ಮತ್ತು ಶಶಿಕಲಾ ಅವರು ಒಳ್ಳೆಯ ಪ್ರಬಂಧಕಾರರು. ವಿಮಲಾ ಅವರು ಬಹಳ ಸಹಜವಾಗಿ ಬರೆದಿರುವ ಬರೆಹವು ಬಹಳ ಆಳವನ್ನು ಹೊಂದಿದೆ. ಅವರಿಗೆ ರೋಚಕಗೊಳ್ಳದೆ ತಣ್ಣಗೆ ದೊಡ್ಡದನ್ನು ಬರೆಯುವ ಶಕ್ತಿಯಿದೆ. ರಾಮಪ್ರಿಯನ್ ಅವರ ಬರೆಹ ಹಳಹಳಿಕೆಯಿಂದ ಕೂಡಿದ್ದರೂ ಕಳೆದುಹೋದ ದಿನಗಳ ಚಿತ್ರವನ್ನು ಕೊಡುವ ಕಾರಣಕ್ಕಾಗಿಯೇ ಚಾರಿತ್ರಿಕ ಮಹತ್ವ ಪಡೆದಿದೆ.

ಅಮೆರಿಕದ ಬಗ್ಗೆ ಅದರ ಹೊರಗಿರುವ ನಮ್ಮಂತಹವರಿಗೆ ಎರಡು ಅತಿರೇಕದ ಗ್ರಹಿಕೆಗಳಿದ್ದಂತಿವೆ. ಒಂದು ರೆಡ್‌ಇಂಡಿಯನರನ್ನು ಕೊಂದು ದೇಶವನ್ನು ಆಕ್ರಮಿಸಿಕೊಂಡು, ಗುಲಾಮಗಿರಿಯನ್ನು ಎಗ್ಗಿಲ್ಲದೆ ಮಾಡುತ್ತ, ತಮ್ಮ ಹಿತಾಸಕ್ತಿಗಳಿಗೆ ಯುದ್ಧಘೋರ ನೀತಿಯನ್ನು ಮಾಡುತ್ತಿರುವ ದೊಡ್ಡಣ್ಣ ಎಂಬುದು; ಇನ್ನೊಂದು ಅಮೆರಿಕವು ತಂತ್ರಜ್ಞಾನ ವಿಜ್ಞಾನದಲ್ಲಿ ಶಿಕ್ಷಣವುಳ್ಳ ಮಂದಿಗೆ ತೆರೆದಿರುವ ಭುವಿಯ ಮೇಲಣ ಸ್ವರ್ಗ ಎಂಬುದು. ಈ ಎರಡನೆಯ ಚಿತ್ರಕ್ಕೆ ಕಾರಣ, ಪ್ರವಾಸಿಗರಾಗಿ ಅಮೆರಿಕಕ್ಕೆ ಹೋಗಿಬಂದವರ ಪ್ರವಾಸ ಕಥನಗಳೂ ಇರಬೇಕು. ಆದರೆ ಈ ಎರಡಕ್ಕೂ ಹೊರತಾಗಿ, ಅಲ್ಲಿಯೇ ಬದುಕುತ್ತಿರುವ ಜನರ ಗ್ರಹಿಕೆಗಳು ಬೇರೆ ಬೇರೆ ತರಹ ಇವೆ ಎಂಬುದನ್ನು ಈ ಕೃತಿ ಸಾದರಪಡಿಸುತ್ತದೆ. ಇಷ್ಟಾಗಿಯೂ ೯/೧೧ರ ಸ್ಮೃತಿಯು ಅನೇಕ ಬರೆಹಗಳಲ್ಲಿ ಕಾಣಿಸಿದ್ದು ಅದೊಂದು ವಿಷಾದಕರ ಘಟನೆಯಾಗಿ ಪಾಸಾಗಿದೆ. ಆದರೆ ಬರೆಹಗಳಲ್ಲಿ ಅಮೆರಿಕದ ಯುದ್ಧ ಮತ್ತು ವಿದೇಶ ನೀತಿಯನ್ನು ಕುರಿತ ವಿಮರ್ಶೆಯ ಮಾತು ಒಂದೇ ಒಂದು ಕಡೆ ಧ್ವನಿಪೂರ್ಣವಾಗಿ ಬಂದಿರುವುದು ಬಿಟ್ಟರೆ, ಉಳಿದಂತೆ ಈ ಕುರಿತು ಎಚ್ಚರಿಕೆಯ ಮೌನವೇ ಆವರಿಸಿದೆ. ಬಹುಶಃ ಅಮೆರಿಕದಲ್ಲಿದ್ದೇ ಅದನ್ನು ವಿಮರ್ಶಿಸುವುದು ಕಷ್ಟವೊ ಅಥವಾ ಹಾಗೆ ವಿಮರ್ಶೆ ಮಾಡುವಂತಹ ದೃಷ್ಟಿಕೋನವೇ ಇಲ್ಲವೊ ತಿಳಿಯದು. ಆದರೆ ಅಮೆರಿಕನ್ ಸಮಾಜದ ಚಿತ್ರಣವು ಇಲ್ಲಿನ ಬರೆಹಗಳಲ್ಲಿ ಬಹುಮಟ್ಟಿಗೆ ಕ್ಷೀಣವಾಗಿದೆ.

ತನ್ನ ಪಾಡಿಗೆ ತಾನಿರುವ ಅಮೆರಿಕನ್ ಬದುಕೇ ಇಂತಹುದೊ? ಅಥವಾ ದೈಹಿಕ ಶ್ರಮ ಮಾಡುವ ಜನರು ಅಮೆರಿಕಕ್ಕೆ ಹೋಗಿ ಬರೆದರೆ ಅವರ ಅನುಭವಲೋಕ ಭಿನ್ನವಾಗಿರುವುದೊ? ಈ ಕುತೂಹಲವು ಈ ಬರೆಹಗಳನ್ನು ಓದಿದ ಬಳಿಕ ಹಾಗೆ ಉಳಿಯುತ್ತದೆ. ಇಲ್ಲಿನ ಲೇಖಕರ ಸಾಮಾಜಿಕ ಹಿನ್ನೆಲೆ ಮತ್ತ ವರ್ಗದ ಸ್ತರವು ಇಲ್ಲಿನ ಬರೆಹಗಳ ಅನುಭವ ಲೋಕಕ್ಕೆ ಒಂದು ಪರಿಮಿತಿಯನ್ನು ಒದಗಿಸಿದೆ. ಆದರೆ ಇಲ್ಲಿನ ಬರೆಹಗಳು ಅನಿವಾರ್ಯವಾಗಿ ಹೇರಲ್ಪಡುವ ಇಂತಹ ಸಾಮಾಜಿಕ ರಾಜಕೀಯ ಚೌಕಟ್ಟನ್ನು ಹೇರಲು ಪ್ರೇರಿಸುತ್ತವೆ. ಇದು ತಾನೇ ಬರೆಹದ ಅಥವಾ ಕಲೆಯ ಶಕ್ತಿ? ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿಯುವ ಚಹರೆಗಳು ಇಲ್ಲಿನ ಬರೆಹಗಳಲ್ಲಿವೆ. ಕನ್ನಡನಾಡಿನಲ್ಲಿ ಇರುವವರು ಬರೆಯುತ್ತಿರುವುದನ್ನು ವಿಶ್ವದ ಕನ್ನಡಿಗರು ಓದುವುದು ಒಂದು ಬಗೆಯಾಗಿದೆ; ವಿಶ್ವದ ಬೇರೆ ಬೇರೆ ಭಾಗದಲ್ಲಿರುವ ಕನ್ನಡಿಗರು ಬರೆಯುವುದನ್ನು ಒಳನಾಡಿನಲ್ಲಿರುವ ನಾವು ಓದುವುದು ಇನ್ನೊಂದು ಬಗೆಯಾಗಿದೆ. ನಾವು ಎಲ್ಲಿದ್ದು ಬರೆಯುತ್ತೇವೆ ಎನ್ನುವುದು ಬರೆಹದ ಸ್ವರೂಪವನ್ನು ನಿರ್ಣಯಿಸುವಂತೆ, ನಾವು ಎಲ್ಲಿದ್ದುಕೊಂಡು ಓದುತ್ತೇವೆ ಎನ್ನುವುದು ನಮ್ಮ ಓದಿನ ಪರಿಯನ್ನೂ ನಿಯಂತ್ರಿಸುತ್ತದೆ.

ಅಮೆರಿಕದ ಕನ್ನಡಿಗರ ತಳಮಳಗಳನ್ನು ಸುಖ ಸಂಭ್ರಮಗಳನ್ನು ಆಶೋತ್ತರಗಳನ್ನು ಈ ಮೂಲಕ ತಿಳಿಯುವಂತೆ ಮಾಡಿದ ಇಲ್ಲಿನ ಲೇಖಕರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ರಹಮತ್‌ತರೀಕೆರೆ

ಅರಿಕೆ

ಈ ಲೇಖನಗಳು ನಮ್ಮ ಮಾತುಗಳು. ಒಂದು ರೀತಿಯಲ್ಲಿ ನಮ್ಮಷ್ಟಕ್ಕೆ ನಾವೇ ಆಡಿಕೊಂಡಂತೆ ಕಾಣುವ ನಮ್ಮ ಅಂತರಂಗದ ಮಾತುಗಳು. ಸಾಹಿತ್ಯ ಸಾಧನೆಗಿಂತಲೂ ಹೆಚ್ಚಾಗಿ ನಮ್ಮ ಮನಸ್ಸಿನಲ್ಲಿರುವುದನ್ನು ನಿಮ್ಮೆದುರು ಬರಿದು ಮಾಡಿ ಹಗುರಾಗಲು ಆಡಿದ ಮಾತುಗಳು. ಈ ಸಂಕಲನದ ಬರಹಗಳೆಲ್ಲವೂ ಅಮೆರಿಕದ ಕನ್ನಡಿಗರಿಂದ ಬಂದದ್ದು. 'ಕನ್ನಡ' ಎನ್ನುವ ಭಾಷೆಯೊಂದಿದೆ ಎಂಬುದನ್ನೇ ಅರಿಯದ, ಅರಿಯುವ ಅಗತ್ಯವೂ ಇಲ್ಲದ ಜನಗಳ ನಡುವೆ ಬದುಕುವ ನಾವು ನಮ್ಮ ತಾಯಿನುಡಿಯಲ್ಲಿ ನಮ್ಮ ಸುಖ-ದುಃಖಗಳನ್ನು ನಿಮ್ಮೊಂದಿಗೆ ಹಂಚಿಕೊಂಡಿರುವ ಪರಿಯಿದು. ವೃತ್ತಿಯ ಆಧಾರದ ಮೇಲೆ ಬದುಕನ್ನರಸಿ ಈ ದೂರ ತೀರಗಳನ್ನು ಸೇರಿರುವ ನಮಗೆ ಕನ್ನಡನಾಡಿನ ಸಾಮಾಜಿಕ ಬದುಕನ್ನು ಕಳೆದುಕೊಳ್ಳುತ್ತಿರುವ ಕೊರಗು. ಮೂಲ ಸಾಮಾಜಿಕ ಬದುಕಿನಿಂದ ದೂರವಿರುವುದರ ನಿರ್ದಯೀ ಪರಿಣಾಮವೆಂದರೆ ಮೂಲ ಭಾಷೆಯಿಂದಲೂ ದೂರವಾಗುವುದು. ಆ ಪರಿಸ್ಥಿತಿಯಲ್ಲಿ ಈ ಬರಹಗಳು ನಮಗೆ ವಿಶೇಷವೆನಿಸಿದ್ದು – ಕನ್ನಡ ಸಾಹಿತ್ಯೇತರ ಸಂಸ್ಕೃತಿಯಲ್ಲಿ ಉಸಿರಾಡುತ್ತಿರುವಾಗಲೂ ನಮ್ಮ ತೀರಾ ಒಳಮನಸ್ಸಿನ ಮಾತುಗಳನ್ನು ತೆರೆದಿಡಲು ಕನ್ನಡವೇ ಬೇಕಾಯಿತು ಎನ್ನುವುದರಲ್ಲಿ. ಎದೆಯಾಳದಿಂದ ಬರುವ ಮಾತುಗಳಿಗೆ ಸೂಕ್ತ ಅಭಿವ್ಯಕ್ತಿಯನ್ನು ಮಾತೃಭಾಷೆಯೊಂದೇ ನಿರ್ಮಿಸಿಕೊಡಲು ಸಾಧ್ಯ ಎನ್ನುವುದರಲ್ಲಿ.

ಇಲ್ಲಿಯ ಪ್ರತಿ ಲೇಖನದಲ್ಲಿಯೂ ಎದ್ದು ಕಾಣುವ ಅಂಶವೆಂದರೆ, ತಮ್ಮ ದೈನಂದಿನ ಅನುಭವಗಳನ್ನು ಮತ್ತು ಗಮನಿಸಿದ ವಿಶೇಷಗಳನ್ನು ಹಂಚಿಕೊಳ್ಳುವ ತುಡಿತ. ಅತಿ ಸಾಮಾನ್ಯವೆನಿಸುವ ಆಫೀಸಿಗೆ ಸೈಕಲ್ ಪಯಣವಾಗಿರಬಹುದು, ವಿಮಾನಯಾನದಲ್ಲಿ ಕಳೆದು ಸಿಕ್ಕಿದ ಸೂಟ್‌ಕೇಸಿನ ಕಥೆಯಿರಬಹುದು; ತಮ್ಮ ಮನೆಯಂಗಳದಲ್ಲಿ ನಾಯಿಯೊಂದು ಮರಿಯಿಟ್ಟ ಪ್ರಸಂಗವಾಗಿರಬಹುದು, ಆ ಕಾಲವನ್ನು ಈ ಕಾಲದೊಂದಿಗೆ ತಾಳೆ ಹಾಕಿ ನೋಡುವ ಚಿಂತನೆಯ ಕ್ಷಣಗಳಿರಬಹುದು, ನಮ್ಮ ಬದುಕನ್ನೇ ಆವರಿಸಿಕೊಂಡಿರುವ ಎಲೆಕ್ಟ್ರಾನಿಕ್ ಪದಾರ್ಥಗಳಿರಬಹುದು; ಇವೆಲ್ಲವೂ ವಿಷಯ ಸಂಪತ್ತಿಗಿಂತ ಹೆಚ್ಚಾಗಿ ತನ್ನ ಪ್ರಾಮಾಣಿಕ ಅಭಿವ್ಯಕ್ತಿಯಿಂದಲೇ ಇಲ್ಲಿ ಲೇಖನಗಳಾಗಿವೆ. ಹಾಗೆಯೇ, ವೃತ್ತಿಗೆ ಸಂಬಂಧಿಸಿದ ಪ್ರಸಂಗಗಳು ಅನೇಕ ಲೇಖನಗಳ ವಸ್ತುವಾಗುವುದರ ಜೊತೆಗೆ ಅಲ್ಲಿರುವ ಸುಖ-ದುಃಖಗಳ, ಸಿಹಿ-ಕಹಿ ಅನುಭವಗಳನ್ನು ತಾಜಾ ಭಾಷೆಯಲ್ಲಿ ನಮ್ಮೊಂದಿಗೆ ಹಂಚಿಕೊಳ್ಳುತ್ತವೆ. ಇದಕ್ಕೆ

ಉದಾಹರಣೆಯಾಗಿ, ದೇಸಿ ಕನ್ಸಲ್ಟೆಂಟ್ ಲೇಖನವನ್ನು ನೋಡಬಹುದು. ಕನ್ಸಲ್ಟೆಂಟ್ ಬದುಕನ್ನು ತೆಳುಹಾಸ್ಯದಿಂದ ಚಿತ್ರಿಸುತ್ತಲೇ ಬಿಸಿನೆಸ್ ಪ್ರಪಂಚದ ಕರಾಳ ಮುಖವನ್ನೂ ಇದು ಪರಿಚಯಿಸುತ್ತದೆ. ಹಾಗೆಯೇ, ತಮ್ಮ ವೃತ್ತಿಯಲ್ಲಿ ಪ್ರತಿದಿನವೂ ಸಾವು-ಬದುಕಿನ ಆಟವನ್ನೇ ಕಾಣುವ ವೈದ್ಯರೊಬ್ಬರು ತಾವು ಕಂಡ ಸಾವುಗಳನ್ನು ಫಿಲಾಸಫಿಕಲ್ ಆಗಿ ವಿಭಿನ್ನ ದೃಷ್ಟಿಕೋನದಿಂದ ನೋಡುವ ಪರಿ ಇಲ್ಲಿ ಪ್ರಬಂಧವೊಂದಕ್ಕೆ ವಸ್ತುವಾಗಿದೆ. ಮಕ್ಕಳು ಬೆಳೆದುನಿಂತು, ಮನೆಯಿಂದ ಹೊರಗೆ ಹೋಗುವಾಗ ತಂದೆ ತಾಯಿ ಅನುಭವಿಸುವ ನೋವಿನ ಹಂತವನ್ನು ಒಂದು ಲೇಖನ ವಿವರಿಸಿದರೆ, ಮತ್ತೊಂದು ಲೇಖನ ನಿವೃತ್ತಿಯಂತಹ ಅನಿವಾರ್ಯ ಹಂತವನ್ನು ಸ್ವೀಕರಿಸಿದ ಬಗೆಯನ್ನು ಆಸಕ್ತಿಪೂರ್ಣವಾಗಿ ಮತ್ತು ಲವಲವಿಕೆಯಿಂದ ವಿವರಿಸುತ್ತದೆ. ಇವುಗಳ ಜೊತೆಯಲ್ಲಿ ಹರಟೆ ಸ್ವರೂಪದ ಲೇಖನಗಳೂ ಇವೆ. ಇವೆಲ್ಲವೂಗಳನ್ನು ಮೀರಿ ನಿಂತು ತುಸು ಗಂಭೀರವೆನ್ನಿಸಿ, ಚಿಂತನೆಗೆ ಹಚ್ಚುವ ವಿಷಯಗಳೂ ಇಲ್ಲಿವೆ. ಹೀಗೆ ಯಾವುದೇ ನಿರ್ದಿಷ್ಟ ವಿಷಯಕ್ಕೆ ಜೋತು ಬೀಳದೆ ಮನಸ್ಸಿಗೆ ಇಷ್ಟವೆನಿಸಿದ ಮತ್ತು ಹಂಚಿಕೊಳ್ಳಬಯಸಿದ ವಿಷಯಗಳೆಲ್ಲಾ ಇಲ್ಲಿ ಲೇಖನದ ರೂಪವನ್ನು ಪಡೆದುಕೊಂಡಿವೆ.

ನಮಗೆ ಬಂದಿದ್ದ ಲೇಖನಗಳಲ್ಲಿ, ನಮ್ಮ ಸಂಪಾದಕ ಮಂಡಳಿಯ ಸಹಮತದಿಂದ ಆಯ್ದ ಇಪ್ಪತ್ತೇಳು ಪ್ರಬಂಧಗಳು ಈ ಸಂಕಲನದಲ್ಲಿವೆ. ಈ ಬರಹಗಳನ್ನು ಅವುಗಳು ಒಳಗೊಂಡ ವಿಷಯಗಳನ್ನಾಧರಿಸಿ ಸಲ್ಲಾಪ, ಹರಟೆ, ಚಿಂತನೆ ಎಂಬ ವಿಭಾಗಗಳಲ್ಲಿ ಜೋಡಿಸಲಾಗಿದೆ. ಸೃಜನಶೀಲ ಪ್ರಕಾರವಾದ ಪ್ರಬಂಧಗಳ ವೈಶಿಷ್ಟವೆಂದರೆ ಅದರ ವೈವಿಧ್ಯವೇ! ಇಲ್ಲಿರುವ ಪ್ರಬಂಧಗಳಿಗೂ ಕೂಡ ಅದನ್ನು ಬರೆದ ಲೇಖಕರ ವಯಸ್ಸು, ವೃತ್ತಿ, ಅವರು ಕಂಡುಂಡ ಜೀವನಾನುಭವಗಳಿಂದಾಗಿ ಓದುಗರ ಗಮನ ಸೆಳೆಯುವಂತಹ ವೈವಿಧ್ಯತೆ ಪ್ರಾಪ್ತವಾಗಿದೆ ಎಂದು ನಾವು ಅಂದುಕೊಂಡಿದ್ದೇವೆ.

ನಮಗೆ, ಈ ಸಂಕಲನವನ್ನು ಸಂಪಾದಿಸುವ ಅವಕಾಶವನ್ನು ಒದಗಿಸಿಕೊಟ್ಟ ಕನ್ನಡ ಸಾಹಿತ್ಯ ರಂಗದ ಅಧ್ಯಕ್ಷರಾದ ಶ್ರೀ ಎಚ್. ವೈ. ರಾಜಗೋಪಾಲ್ ಅವರಿಗೂ, ಬರಹಗಳ ಆಯ್ಕೆಯಿಂದ ಹಿಡಿದು, ಮುದ್ರಣ ಹಂತದವರೆಗೆ ಎಲ್ಲಾ ವಿಧದಲ್ಲಿಯೂ ಸಹಕಾರ ನೀಡಿದ ಸಂಪಾದಕ ಮಂಡಲಿಗೂ ನಾವು ಆಭಾರಿಗಳಾಗಿದ್ದೇವೆ.

ಕನ್ನಡದ ಪ್ರಮುಖ ಲೇಖಕ, ಚಿಂತಕ, ಸಂಶೋಧಕ, ಹಂಪಿ ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರೂ ಆದ ಶ್ರೀ ರಹಮತ್ ತರೀಕೆರೆಯವರ ಮುನ್ನುಡಿಯೊಂದಿಗೆ ಈ ಸಂಕಲನ ಹೊರಬರುತ್ತಿರುವುದು ನಮ್ಮ ಸಂತಸವನ್ನು ಇನ್ನಷ್ಟು ಹೆಚ್ಚಿಸಿದೆ. ಅವರಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು. ತಮ್ಮ ಬಿಡುವಿರದ ಕೆಲಸಗಳ ನಡುವೆ ಒಂದಿಷ್ಟು ಸಮಯವನ್ನು ನಮಗಾಗಿ ಮೀಸಲಿಟ್ಟು, ಇಲ್ಲಿರುವ ಲೇಖನಗಳ ಬಗೆಗೆ ಅಕ್ಕರೆಯ ಬೆನ್ನುಡಿಯಾಡಿರುವ ಕವಿ, ಕಥೆಗಾರ ಮತ್ತು ಉತ್ತಮ ಪ್ರಬಂಧಕಾರರೂ ಆಗಿರುವ ಜಯಂತ ಕಾಯ್ಕಿಣಿ ಅವರಿಗೂ ನಮ್ಮ ನಮನಗಳು. ಕನ್ನಡ ಸಾಹಿತ್ಯ ರಂಗದ ಸಹ-ಪ್ರಕಾಶಕರಾಗಿ,

ಪ್ರಕಟನೆ, ಪ್ರಚಾರದ ಎಲ್ಲಾ ಕೆಲಸವನ್ನು ಮುತುವರ್ಜಿಯಿಂದ ನಡೆಸಿಕೊಂಡು ಬಂದಿರುವ 'ಅಭಿನವ'ದ ಗೆಳೆಯರಿಗೆ ಕನ್ನಡ ಸಾಹಿತ್ಯ ರಂಗದ ಪರವಾಗಿ ಧನ್ಯವಾದಗಳನ್ನು ಸಲ್ಲಿಸಬಯಸುತ್ತೇವೆ. ಕರಡು ಜರಡಿ ಹಿಡಿದು ಚೊಕ್ಕಗೊಳಿಸಿಕೊಟ್ಟ ಕವಯತ್ರಿ ಜ್ಯೋತಿ ಮಹಾದೇವರಿಗೂ, ಮುಖಪುಟ ವಿನ್ಯಾಸ ಮಾಡಿಕೊಟ್ಟಿರುವ ಕಲಾವಿದ ಅಪಾರ ಅವರಿಗೂ, ಅಂದವಾಗಿ ಮುದ್ರಿಸಿರುವ 'ಲಕ್ಷ್ಮಿ ಮುದ್ರಣಾಲಯ'ದ ಮಾಲೀಕರಿಗೂ ನಮ್ಮ ಹಾರ್ದಿಕ ವಂದನೆಗಳು. ಕನ್ನಡ ಸಾಹಿತ್ಯ ರಂಗದ ಈವರೆಗಿನ ಎಲ್ಲಾ ಚಟುವಟಿಕೆಗಳಿಗೂ ಪ್ರಚಾರ ಒದಗಿಸಿ, ಪ್ರೋತ್ಸಾಹ ನೀಡುತ್ತಾ ಬಂದಿರುವ ದಟ್ಸ್ ಕನ್ನಡ ತಾಣದ ಸಂಪಾದಕರಾದ ಎಸ್. ಕೆ. ಶಾಮಸುಂದರ್ ಮತು ಸಿಬ್ಬಂದಿವರ್ಗಕ್ಕೂ ನಮ್ಮ ಕೃತಜ್ಞತೆಗಳು.

ಸಾಹಿತ್ಯಾಭಿಮಾನಿಗಳಾಗಿದ್ದ ದಿವಂಗತ ತಾಯಿತಂದೆಗಳ ಸ್ಮರಣೆಯಲ್ಲಿ, ಅವರ ಪ್ರೀತಿಯ ಮಕ್ಕಳಾದ ಶ್ರೀಮತಿ ಗೋದಾ ಪ್ರಸಾದ್ ಮತ್ತು ಶ್ರೀ ಬಾಲಾಜಿ ಹೆಬ್ಬಾರ್ ಅವರು ಈ ಪುಸ್ತಕವನ್ನು ಹೊರತರುವುದರಲ್ಲಿ ವಿಶೇಷವಾದ ನೆರವು ನೀಡಿದ್ದಾರೆ. ಇತ್ತೀಚೆಗೆ ಗತಿಸಿದ ಶ್ರೀಮತಿ ಸೀತಾ ಗೋಪಾಲಕೃಷ್ಣ ಮತ್ತು ಶ್ರೀ ಕೆ. ಎನ್. ಗೋಪಾಲಕೃಷ್ಣ ಅವರ ನೆನಪಿಗೆ ಈ ಸಾಹಿತ್ಯ ಕೃತಿಯನ್ನು ತಮ್ಮ ಮನೆಯವರೆಲ್ಲರ ನೆನಪಿನ ಕಾಣಿಕೆಯಾಗಿ ನೀಡಿದ್ದಾರೆ. ಅವರಿಗೆ ಕನ್ನಡ ಸಾಹಿತ್ಯ ರಂಗದ ಹೃತ್ಪೂರ್ವಕ ವಂದನೆಗಳು.

ಈ ಲೇಖನ ಸಂಗ್ರಹವನ್ನು ನಿಮಗೊಪ್ಪಿಸಲು ನಮಗೆ ಬಹಳ ಸಂತೋಷವಾಗುತ್ತಿದೆ. ಕನ್ನಡ ಸಾಹಿತ್ಯ ರಂಗದ ಹಿಂದಿನ ಪ್ರಕಟನೆಗಳಿಗೆ ಸಿಕ್ಕಿದ ಆದರವನ್ನೇ ಈ ಸಂಕಲನಕ್ಕೂ ತಾವು ತೋರುವಿರೆಂಬ ಆಶಯ ನಮ್ಮದು.

ಸ್ನೇಹಪೂರ್ವಕವಾಗಿ,

ತ್ರಿವೇಣಿ ಶ್ರೀನಿವಾಸರಾವ್
ಎಂ. ಆರ್. ದತ್ತಾತ್ರಿ

ಐದನೆಯ ವಸಂತ ಸಾಹಿತ್ಯೋತ್ಸವ

ಏಪ್ರಿಲ್ ೩೦-ಮೇ ೧, ೨೦೧೧

ವುಡ್ ಸೈಡ್, ಕ್ಯಾಲಿಫೋರ್ನಿಯ

ಸಂಪಾದಕ ಮಂಡಲಿ

ಎಚ್. ವೈ. ರಾಜಗೋಪಾಲ್

ಎಂ. ಎಸ್. ನಟರಾಜ

ನಾಗ ಐತಾಳ (ಆಹಿತಾನಲ)

ಎಚ್. ಕೆ. ಚಂದ್ರಶೇಖರ್

ನಳಿನಿ ಮೈಯ

ಅನುಕ್ರಮಣಿಕೆ

ಸಲ್ಲಾಪದಂಗಳ

ಹರಟೆ ಕಟ್ಟೆ

ಚಿಂತನೆ ಚಾವಡಿ

ಅನುಬಂಧಗಳು



ಸೀತಾ ಗೋಪಾಲಕೃಷ್ಣ (೧೯೩೪-೨೦೧೦)

ಮತ್ತು

ಕೆ.ಎನ್. ಗೋಪಾಲಕೃಷ್ಣ (೧೯೧೮-೨೦೦೯)

(ವಿವಾಹ ಸಮ್ಮಿಳನದ ಶುಭದಿನ: ಜೂನ್ ೭, ೧೯೪೦)

ಕೃತಜ್ಞತೆಗೂ ಮಿಗಿಲಾದ ನಲ್ಮೆಯಿನ್ನೊಂದಿಲ್ಲ
ಅದು ಮಿಕ್ಕೆಲ್ಲ ಸುಗುಣಗಳ ತಾಯಿ-ತಂದೆ
ನೀವಿತ್ತ ಪೋಷಣೆಯ ಅಮೃತಕಳಶಗಳಲ್ಲಿ
ನಿಮ್ಮ ಗುಣ ನಮ್ಮ ಋಣ ಬೆರೆತು ಒಂದಾದವು!


ನೀವು ಬಾಳಿದ ರೀತಿ ನೀವು ತೋರಿದ ಪ್ರೀತಿಗಳ ಸ್ಮರಣೆಯಲಿ
ಇದೋ ನಮ್ಮ ನಲ್ಮೆಯ ಕಾಣಿಕೆ!

ಕೊನೆಯಿಲ್ಲದಾದರದೊಡನೆ-
ನಿಮ್ಮ ಪ್ರೀತಿಯ ಮಗಳು-ಮಗ-ಅಳಿಯ-ಸೊಸೆ-ಮೊಮ್ಮಕ್ಕಳು-ಮರಿಮಕ್ಕಳು

ಲೇಖಕರ ಭಾವಚಿತ್ರಗಳು



ಆಹಿತಾನಲ



ಹಂ. ಕ. ಕೃಷ್ಣಪ್ರಿಯ



ತ್ರಿವೇಣಿ ಶ್ರೀನಿವಾಸರಾವ್



ಎಂ. ಆರ್. ದತ್ತಾತ್ರಿ



ಮಾಲಾ ರಾವ್



ಮೀರ ಪಿ. ಆರ್.



ವಿಮಲ ರಾಜಗೋಪಾಲ್



ಶಶಿಕಲಾ ಚಂದ್ರಶೇಖರ್



ಶಾಂತಲಾ ಭಂಡಿ




ಅಲಮೇಲು ಅಯ್ಯಂಗಾರ್



ನಳಿನಿ ಮೈಯ



ಮೀನಾ ಸುಬ್ಬರಾವ್



ಎಚ್.ವೈ. ರಾಜಗೋಪಾಲ್



ವಲ್ಲೀಶ ಶಾಸ್ತ್ರಿ




ಶ್ರೀಕಾಂತ ಬಾಬು



ಶ್ರೀನಾಥ್ ಭಲ್ಲೆ



ಜ್ಯೋತಿ ಮಹಾದೇವ್



ಪಿ. ಎಸ್. ಮೈಯ



ಅನಿಲ ದೇಶಪಾಂಡೆ



ಗುರುಪ್ರಸಾದ್ ಕಾಗಿನೆಲೆ



ಗುಂಡು ಶಂಕರ್



ಮೈ. ಶ್ರೀ. ನಟರಾಜ



ಪ್ರಕಾಶ್ ನಾಯಕ್



ಹಂ. ಕ. ರಾಮಪ್ರಿಯನ್



ಎಚ್. ವಿ. ರಂಗಾಚಾರ್



ವೈಶಾಲಿ ಹೆಗಡೆ



ಶಶಿಕಲಾ ನಿಂಬಾಳ

ಸಲ್ಲಾಪದಂಗಳ

ನಿವೃತ್ತನೊಬ್ಬನ ದಿನಚರಿಯಿಂದ

-ಆಹಿತಾನಲ

ಸುಮಾರು ಮೂವತ್ತು ವರ್ಷಗಳಿಂದ ಯುನಿವರ್ಸಿಟಿಯಲ್ಲಿ ಕೆಲ್ಸ ಮಾಡೀ... ಮಾಡೀ... ಸಾಕಾಗಿ ಹೋಗಿತ್ತು ನನಗೆ. ಯಾವತ್ತಿಗಪ್ಪಾ ರಿಟಾಯರ್‌ಮೆಂಟ್ ತಗೊಳ್ಳೋದು ಅಂತ ಆ ದಿನವನ್ನ ಕಾಯ್ತಾ ಇದ್ದೆ. ಬೆಳಿಗ್ಗೆ ಬೇಗ ಎದ್ದು, ಗಡಿಬಿಡಿ ಮಾಡ್ಕೊಂಡು, ಕೆಲ್ಸಕ್ಕೆ ಹೋಗೋ ನರಕಯಾತನೆಯಿಂದ ಬಿಡುಗಡೆ ಮಾಡಪ್ಪಾ... ಅಂತ ದೇವ್ರನ್ನ ಬೇಡ್ಕೊಳ್ತಿದ್ದೆ. ನನ್ನ ಮೊರೆಯನ್ನ ದೇವ್ರು ಕೇಳ್ಸ್ಕೊಂಡ ಹಾಗಿತ್ತು. 'ಅಲ್ವೋ... ಸಾಕಿನ್ನು... ಸ್ವಸ್ಥ ಮನೇಲಿ ಹಾಯಾಗಿರು... ಬೇಗ ರಿಟಾಯರ್‌ಮೆಂಟ್ ತಕೋ...' ಅಂತ ನನ್ನ ಅಂತರಾತ್ಮ ಹೇಳಿದ್ದನ್ನ ಕೇಳ್ಸ್ಕೊಂಡ್ಮೇಲೆ, ನಾನು ನಿಶ್ಚಯ ಮಾಡೇ ಬಿಟ್ಟೆ. ಹಾಗಂತ, ನನ್ನವಳ ಹತ್ರ 'ನೋಡಮ್ಮಾ... ಮುಂದಿನ ತಿಂಗ್ಳು ನಾನು ರಿಟಾಯರ್‌ಮೆಂಟ್ ತಗೊಳ್ಳೋಣ ಅಂತ ಮಾಡಿದ್ದೀನಿ... ದುಡ್ದದ್ದು ಸಾಕು... ಇನ್ಮುಂದೆ ಮನೇಲಿ ಹಾಯಾಗಿರೋಣ ಅಂತ ನಿಶ್ಚಯ್ಸಿದ್ದೀನಿ...' ಅಂತ ಅನೌನ್ಸ್ ಮಾಡ್ದೆ. ಅವಳಿಂದ ಏನಾದ್ರೂ ಪ್ರೋತ್ಸಾಹ ಸಿಗತ್ತೋ ಏನೋ ಅಂತ ಮಾಡ್ಕೊಂಡಿದ್ದೆ.

ಆದ್ರೆ... 'ಇದೇನು... ಇಷ್ಟ್ಬೇಗಾ...? ಉದ್ಯೋಗಂ, ಪುರುಷ ಲಕ್ಷಣಂ ಅಂತ ಗಾದೆ ಇದ್ಯಲ್ಲಾ... ಕೆಲ್ಸ ಮಾಡ್ಕೊಂಡಿದ್ರೆ

ಅದೊಂದು ಭೂಷಣ! ಇಲ್ಲಿದ್ರೆ... ನಿರುದ್ಯೋಗಿ ಅಂತ ನಿಕೃಷ್ಟವಾಗಿ ಕಾಣ್ತಾರೆ ಜನರು...' ಅಂತ ಅವಳಿಂದ ಪ್ರತಿಕ್ರಿಯೆ ಬಂತು.

'ಅಲ್ವೇ... ನನ್ಗೀಗ ಆಗ್ಲೇ ಅರವತ್ತೆಂಟು ವರ್ಷ ಆಯ್ತು! ಇನ್ನೆಷ್ಟು ದಿವ್ಸ ದುಡಿಯೋದು? ದಣಿದ ದೇಹಕ್ಕೆ ರೆಸ್ಟ್ ಬೇಡ್ವೇ?' ಅಂತ ನಾನು ಕೇಳಿದೆ.

'ನಿಮ್ಗೇನೋ ರೆಸ್ಟ್! ಆದ್ರೆ... ನಾನು ಅದ್ರಿಂದ ಚಟ್ನಿ...'

'ಹಾಗಂದ್ರೆ ಏನು? ನಾನ್ ರಿಟಾಯರ್ ಆದ್ರೆ... ನೀನ್ಹೇಗೆ ಚಟ್ನಿ ಆಗ್ತೀಯಾ?'

'ಮೂರ್ಹೊತ್ತೂ ನೀವ್ಮನೇಲಿರ್ತೀರಾ... ನಿಮ್ ಕೈಲಿ ಹೆಣ್ಗಾಗ್ದ್ಕೊಂಡಿರೋದು... ಅದೇನು ಸುಲಭ ಅಂತ ತಿಳ್ಕೊಂಡಿದ್ದೀರಾ? ಅದೇ ನನ್ಗೆ ಯೋಚ್ನೆ...'

'ಸಾಕು ಸುಮ್ನಿರೇ! ಏನೋ ಮಹಾ... ಅಂತ ಹೇಳ್ತಿದ್ದಾಳೆ!'

'ಮಹಾ... ಏನ್ಬಂತು? ಇದ್ದದ್ದನ್ನ ಹೇಳ್ದೆ...'

'ನಿನ್ನಷ್ಟಕ್ಕೆ ನೀನಿರು... ನನ್ನಷ್ಟಕ್ಕೆ ನಾನಿರ್ತೀನಿ...'

'ನನ್ನಷ್ಟಕ್ಕೆ ನಾನಿರ್ಲಿಕ್ಕೆ... ನೀವ್ಬಿಡ್ಬೇಕಲ್ಲಾ... ಮೂರ್ಹೊತ್ತೂ ಕಿರಿಕಿರಿ ಮಾಡ್ತಾನೇ ಇರ್ತೀರಲ್ಲ!'

ಮದುವೆ ಆದ ಹೊಸದ್ರಲ್ಲಿ ಅವಳು ಹೀಗೆಲ್ಲಾ ಮಾತಾಡ್ತಿರ್ಲಿಲ್ಲ. ಆದರೆ... ಬರ್ತಾ ಬರ್ತಾ ಅವಳ ನಾಲಿಗೆ ಚೂಪಾಗ್ತಾ ಇದೆ. ನಾನಂದ್ರೆ ಅವಳಿಗೆ ಇತ್ತೀಚೆಗೆ ಒಂಥರಾ ತಾತ್ಸಾರ. ಅವಳನ್ನ ಕೇಳಿದ್ರೆ... ಅವಳು ಒಪ್ಕೊಳ್ಳೋದಿಲ್ಲ ಅನ್ನಿ! ಈಗೀಗ, ಈ ರೀತಿ ಚುಚ್ಚು ಮಾತಾಡಿ ನನ್ನ ಬಾಯ್ಮುಚ್ಚಿಸೋದ್ರಲ್ಲಿ ಅವಳು ನಿಸ್ಸೀಮಳಾಗಿದ್ದಾಳೆ. ನಾನು ಅದಕ್ಕೆಲ್ಲಾ ಉತ್ತರ ಕೊಡೋ ಅವಕಾಶಾನೇ ಕೊಡ್ತಿಲ್ಲ. ಏನಾದ್ರೂ ಹೇಳಿದ್ರೆ... ನನ್ನ ಮಾನ-ಮರ್ಯಾದೇನೆಲ್ಲ ಕೊಡ್ವಿಬಿಡ್ತಾಳೆ. ಅದಕ್ಕೇ, ಅವಳ ಮಾತಿಗೆ ನಾನೇನೂ ಹೇಳ್ದೆ, ಸುಮ್ಮನಿದ್ದೆ. ಆದರೆ, ನನ್ನ ರಿಟಾಯರ್‌ಮೆಂಟ್ ನಿಶ್ಚಯ ಮಾತ್ರ ಬದ್ಲಾಯಿಸೋಕಾಗಲ್ಲ ಅನ್ನೋದನ್ನ ಸ್ಪಷ್ಟವಾಗಿ ಸ್ಥಿರಪಡಿಸಿದೆ.

ಕೊನೆಗೂ ನಾನು ಹಾತೊರೆದು ಕಾಯ್ತಿದ್ದ ದಿವ್ಸ ಬಂದೇ ಬಂತು! ರಿಟಾಯರ್ ಆಗೋ ದಿನ ನಮ್ಮ ಬಾಸ್ ನನಗೊಂದು going away ಪಾರ್ಟಿ ಕೊಟ್ಟಿದ್ರು. ರಿಟಾಯರ್ ಆಗೋ ನನಗೆ ಒಂದು ಗೋಲ್ಡನ್ ವಾಚನ್ನೂ ಉಡುಗೊರೆಯಾಗಿ ಕೊಟ್ಟಿದ್ದು ನನಗೆ ತುಂಬಾ ಖುಷಿಯಾಗಿತ್ತು. ಆದರೆ, ಇನ್ಮುಂದೆ ಯುನಿವರ್ಸಿಟಿ ಕಡೆ ಮುಖ ಹಾಕಬೇಕಾದ್ದಿಲ್ಲ... ಅಂತ ಎಣಿಸ್ಕೊಂಡಾಗ ಆದ ಖುಷಿ ಮುಂದೆ ಆ ಗೋಲ್ಡನ್ ವಾಚು ಕೊಟ್ಟ ಸಂತೋಷ ಅಷ್ಟೊಂದು ಹೆಚ್ಚೇನಲ್ಲ ಅನ್ನಿ!

ಮನೆಗೆ ಬಂದು, ಬಲು ಹೆಮ್ಮೆಯಿಂದ ಆ ಗೋಲ್ಡನ್ ವಾಚನ್ನ ನನ್ನವಳಿಗೆ ತೋರ್ಸಿದೆ. ಅವಳೂ ನೋಡಿ, ಸಂತೋಷಪಟ್ಟಳು ಅಂತ ನಾನೇನೋ ಎಣಿಸ್ಕೊಂಡೆ. ಆ ದಿನ ರಾತ್ರಿ

ಊಟಕ್ಕೆ ಅವಳು ಏನಾದ್ರೂ ಸ್ಪೆಶಲ್ ಮಾಡ್ತಾಳಂತ ನಾನು ತಿಳ್ಕೊಂಡಿದ್ದೆ. ಆದರೆ, ಬರೀ ಅನ್ನ-ಸಾರು ತಟ್ಟೆ ಮೇಲೆ ಬಿತ್ತು. ನಾನು, 'ಅಲ್ವೇ... ಇವತ್ತು ನನ್ನ ಪಾಡಿಗೆ ಒಂದು ಸ್ಪೆಶಲ್ ದಿನ... ಊಟಕ್ಕೇನಾದ್ರೂ... ಪಾಯ್ಸ-ಗೀಯ್ಸ ಅಂತ ಸ್ಪೆಶಲ್ ಮಾಡ್ತೀಯ ಅಂತ ಎಣಿಸ್ಕೊಂಡಿದ್ದೆ... ಇದೇನು? ಬರೀ ಅನ್ನ-ಸಾರು?' ಅಂತ ತಮಾಷೆಗೆ ಅವಳನ್ನ ಕೇಳ್ದೆ.

'ಓಹೋ... ಹೋ... ನಮ್ಮನೆ ಮಹಾರಾಜ್ರು ರಿಟಾಯರ್ ಆಗ್ತಾರಂತ... ನಮ್ಮನೇಲಿ ಹಬ್ಬದ ಅಡ್ಗೆ ಮಾಡ್ಬೇಕಾಗಿತ್ತಾ? ಪಾಯ್ಸವಂತೆ... ಪಾಯ್ಸ! ಪಾಯ್ಸ ಬೇಕಾಗಿದ್ರೆ... ಹೋಟ್ಲಿಗ್ಹೋಗಿ... ಈಗ ಈ ಅನ್ನ-ಸಾರನ್ನ ಸುಮ್ನೆ ಮಾತಿಲ್ದೇ ಊಟಮಾಡಿ, ನೋಡೋಣ...' ಅಂತ ಮೂದಲಿಸಿದಳು ನನ್ನವಳು.

ಊಟ ಆದ್ಮೇಲೆ, ಒಂದಿಷ್ಟು ಟೀವಿ ನೋಡೋದು ನನ್ನ ಅಭ್ಯಾಸವಾಗಿತ್ತು. ಅವತ್ತು ನಾನು ರಿಟಾಯರ್ ಆದ ಪ್ರಯುಕ್ತ, ಸ್ವಲ್ಪ ಜಾಸ್ತಿ ಹೊತ್ತು ಟೀವಿ ನೋಡೋಣ ಅಂತ ಮನಸು ಮಾಡ್ದೆ. ರಾತ್ರಿ ಸುಮಾರು ೧೧:೩೦ ಆಗಿರ್ಬೇಕು, ಒಳಗಿನಿಂದ ಒಂದು (ಕರ)ಕರೆ ಬಂತು... 'ಏನು? ಇವತ್ತು ಮಲ್ಗೋ ಆಲೋಚ್ನೆ ಇಲ್ವಾ?' ಅಂತ. ನಾನು ಅದನ್ನ ಕೇಳಿದ್ರೂ ಕೇಳ್ದವನ್ಹಾಗೆ, ಟೀವಿ ನೋಡ್ತಾ ಕುಳಿತೆ. ಒಂದು ಹತ್ತು ನಿಮಿಷದ್ಮೇಲೆ ಇನ್ನೊಂದು ಆಜ್ಞಾಪನೆ ಬಂತು. ಅದು ಹೆಚ್ಚೂಕಡಿಮೆ ultimatum ಅಂದ್ರೂ ಸರಿಯೇ! 'ಹೇಳಿದ್ದು ಕೇಳಿಸ್ಲಿಲ್ವಾ...? ಇವತ್ತೇನು... ಇಡೀ ರಾತ್ರೆ ಜಾಗರಣೇನಾ? ಎಲೆಕ್ಟ್ರಿಕ್ ಬಿಲ್ ಬಂದಾಗ ಗೊಣಗ್ತೀರಾ! ಆ ಟೀವಿ ಆರ್ಸಿ... ಅದ್ರ ಶಬ್ದ ನನ್ನ ನಿದ್ರೆನೂ ಕೆಡ್ಸತ್ತೆ...' ಅಂತ.

ಸರಿ! ಇನ್ನು ಇವಳ ಕಿರಿಕಿರಿ ಜಾಸ್ತಿಯಾಗತ್ತೆ ಅಂತ ಟೀವಿ ಆರ್ಸಿ, ಬೆಡ್‌ರೂಂಗೆ ಬಂದೆ. ಮಲಗ್ತಾ, ಮಂಚ ಅಲುಗಾಡ್ತು ಅಂತ ನನ್ನವಳು, 'ನೀವು ಮಲ್ಗೋ ಸಂಭ್ರಮಕ್ಕೆ... ನನ್ನ ನಿದ್ರೆನೆಲ್ಲಾ ಇನ್ನಷ್ಟು ಹಾಳ್ಮಾಡ್ತೀರಿ... ಮಂಚನ್ನ ಹಾಗೆ ಅಲುಗಾಡಿಸ್ದೆ ಮಲ್ಗೋಕೆ ಬರಲ್ವಾ ನಿಮ್ಗೆ? ದಿವ್ಸಾನೂ ನಿಮ್ಮ ಅವಸ್ತೆ ಅಷ್ಟೆ!' ಅಂತ ಗೊಣಗಿದಳು. ಇಂಥಾ ಗೊಣಗನ್ನ ಕೇಳಿ ಕೇಳಿ ನನಗೆ ರೂಢಿಯಾಗಿದೆ ಅನ್ನಿ! ಅದನ್ನ ಮನಸ್ಸಿಗೆ ಹಚ್ಕೊಳ್ದೇ, ನನ್ನ ರಿಟಾಯರ್‌ಮೆಂಟ್ ಸುಖ ಅನುಭವಿಸ್ತಾ... ಹಾಗೇ ನಿದ್ರೆ ಹೋದೆ. ಮನಸ್ಸಿನೊಳ್ಗೇ, '...ನಾಳೆ ಬೆಳಿಗ್ಗೆ ಬೇಗ ಏಳಬೇಕಾದ್ದಿಲ್ಲ... ಎಷ್ಹೊತ್ತು ಬೇಕಾದ್ರೂ ಮಲಗ್ಬಹುದು...' ಅಂತ ಎಣಿಸ್ಕೊಂಡೇ ಖುಷಿಪಡ್ತಿದ್ದೆ.

*

ನಿವೃತ್ತನ ಮೊದಲನೆಯ ದಿನ

ಆದರೆ... ಸುಟ್ಟದ್ದು... ಮರುದಿವ್ಸ ಬೆಳಿಗ್ಗೆ ೬:೩೦ಗೇ ಎಚ್ಚರವಾಗ್ಬೇಕೇ? ಎದ್ದು... ಇನ್ನೇನು ಸ್ನಾನ-ಗೀನ ಪೂರೈಸಿ... ಕೆಲ್ಸಕ್ಕೆ ಹೋಗೋ ಟೈಮ್ ಆಯ್ತು ಅಂತ ಚಡಪಡಿಸುತ್ತಿದ್ದಂತೆ, ಅವತ್ತು ಯುನಿವರ್ಸಿಟಿಗೆ ಹೋಗ್ಬೇಕಾದ್ದಿಲ್ಲ ಅಂತ ಜ್ಞಾಪಕಕ್ಕೆ ಬಂದು, ಪುನಃ ಮುಸುಕೆಳೆದು

ಮಲಗಿದೆ. ಅಹಾ..ಹಾ...ಹ... ಆ sweet slumber ಸುಖ ಏನಂತ ಹೇಳ್ಲಿ! ನನಗೆ ತುಂಬ ಇಷ್ಟವಾದ ಬಾದಾಮ್ ಹಲ್ವಕ್ಕಿಂತ್ಲೂ ಸ್ವೀಟ್! ಹಾಗೇ... ಮಲಗಿದ್ದೆ, ಎಷ್ಟು ಹೊತ್ತೋ ಏನೋ!

ಸರಿ... ಇದ್ದಕ್ಕಿದ್ದಂತೆ ಅಡುಗೆ ಮನೆಯಿಂದ ಒಂದು ಆರ್ಭಟ ಕೇಳಿಸ್ತು! 'ಏನು... ಇವತ್ತು ಏಳೋ ಆಲೋಚ್ನೆ ಇಲ್ವಾ? ಸೋಂಬೇರಿ ಹಾಗೆ ಇನ್ನೂ ಮಲ್ಗಿದ್ದೀರಲ್ಲ? ಏಳಿ... ಎದ್ದೇಳಿ...' ಅಂತ. ಹಿಂದೆ, ನನ್ನ ತಾಯಿ ಮೊಸರು ಕಡೆಯುತ್ತ, '...ಶಿವನೆ... ಏಳಯ್ಯ ಬೆಳಗಾಯಿತು...' ಅಂತ ಹಾಡು ಹೇಳ್ತಿದ್ಳು. ಆ ಶಿವನಾದ್ರೂ ಎಂಥ ಪುಣ್ಯ ಮಾಡಿರ್ಬೇಕು? ಹಾಡಿನ ಕರೆಗೆ ಅವನು ಏಳ್ತಿದ್ದ! ಈಗ ನನ್ನವಳ ಕರಕರೆಗೆ ನಾನು ಏಳ್ಬೇಕಾಯ್ತು!

ನಾನು, ಅವಳು ಕೂಗಿದ್ದನ್ನ ಕೇಳಿಸ್ಕೊಳ್ಲಿಲ್ಲಾ ಅಂತ ನಟಿಸಿ, ಪುನಃ ಮುಸುಕೆಳೆದು ಮಲಗಿದೆ. ನನ್ನವಳು ಬಿಡ್ತಾಳಾ? ಇನ್ನೊಂದು ಆರ್ಭಟ ಬಂತು. 'ನಾನ್ಹೇಳಿದ್ದು ತರವೇ ಇಲ್ವಲ್ಲಾ... ನಿಮ್ಗೆ? ಕುಂಭಕರ್ಣನ ಹಾಗೆ ಇನ್ನೂ ಮಲ್ಗಿದ್ದೀರಲ್ಲಾ? ಗಂಟೆ ಎಷ್ಟಾಯ್ತು ಅಂತ ನೋಡಿ...' ಅಂತ.

ಮುಖದ ಮೇಲಿನ ಹೊದಿಕೆಯನ್ನು ಸ್ವಲ್ಪ ಸರ್ಸಿ, ಗಡಿಯಾರ ನೋಡಿದೆ. ೯:೩೫ ಆಗಿತ್ತು! 'ಆಗ್ಲೀಳು! ಗಡಿಬಿಡಿ ಯಾಕೆ? ಕೆಲ್ಸಕ್ಕಂತೂ ಹೋಗ್ಬೇಕಾದ್ದಿಲ್ಲ! ಆದ್ರೆ... ಇವ್ಳದ್ದೇನು ಆತಂಕ? ಇವ್ಳಿಗೆ ನಾನು ಸುಖಪಡೋದು ಹೊಟ್ಟೆಕಿಚ್ಚು ಅಂತ ಕಾಣ್ಸತ್ತೆ! ನನ್ನ ಪಾಡಿಗೆ ನಾನು ನಿದ್ರೆ ಮಾಡಿದ್ರೆ... ಇವ್ಳದ್ದೇನು ಗಂಟು ಖರ್ಚಾಗತ್ತೆ?' ಅಂತ ಅಂದುಕೊಂಡು, ಮುಸುಕಿನೊಳಗಿಂದ್ಲೇ, 'ನಾನು ನಿದ್ರೆ ಮಾಡಿದ್ರೆ... ನೀನ್ಗೇನೇ ತೊಂದ್ರೆ?' ಅಂತ ನಾನೂ ಕಿರುಚಿ ಹೇಳ್ದೆ.

'ನನ್ನ ಕೆಲ್ಸಕ್ಕೆ ತೊಂದ್ರೆ ಆಗತ್ತಲ್ರೀ! ನಿಮ್ಗೇನು? ಎಷ್ಟೊತ್ತು ಬೇಕಾದ್ರೂ... ಗೊರ್ಕೆ ಹೊಡೀತೀರಾ...'

'ನಿನ್ನ ಪಾಡಿಗೆ ನೀನ್ ಕೆಲ್ಸ ಮಾಡ್ಕೊ... ಅದಕ್ಕೂ ನನ್ ನಿದ್ರೆಗೂ ಏನ್ ಸಂಬಂಧ?' ಮಲಗಿದಲ್ಲೇ ಕೇಳಿದೆ.

ಅವಳು ಆ ಮಾತಿಗೆ ಸುಮ್ಮನಾದದ್ದು ಸ್ವಲ್ಪ ಸಮಾಧಾನ ಕೊಟ್ಟಿತು. ಆದರೆ, ಅದೆಲ್ಲ ಒಂದೇ ಕ್ಷಣ. ವ್ಯಾಕ್ಯೂಮ್ ಮಾಡ್ತಾ ನನ್ನವಳು ಮಲಗೋ ಕೋಣೆಗೆ ಬಂದ್ಳು. ಆ ಶಬ್ದಕ್ಕೆ ನಿದ್ರೆನಾದ್ರೂ ಮಾಡೋದು ಹ್ಯಾಗೆ ಹೇಳಿ...? 'ಥತ್ ತೇರಿ... ಒಳ್ಳೇ ರಾಕ್ಷಸಿ ಕಣೇ ನೀನು...' ಅಂತ ಹೇಳ್ತಾ ಹಾಸಿಗೆಯಿಂದ ಎದ್ದೆ.

'ಏನಂದ್ರೀ? ನಾನ್ ರಾಕ್ಷಸೀನಾ? ಹಾಗೆಲ್ಲ ರಾಕ್ಷಸಿ ಅಂತ ಕರೆಯೋದು ಚೆನ್ನಾಗಿರಲ್ಲ... ಏನು ಅಂಥಾ ರಾಕ್ಷಸಿ ಕಾರ್ಯ ನಾನ್ಮಾಡಿದ್ದು?' ಅಂತ ಕೇಳಿದಳು. ಅವಳ ಆರ್ಭಟ ವ್ಯಾಕ್ಯೂಮ್ ಕ್ಲೀನರ್ ಶಬ್ದವನ್ನೇ ಮೀರ್ಸಿತ್ತು.

‘ಹಿಂದೆ, ಋಷಿಗಳ ತಪಸ್ಸನ್ನ ಕೆಡ್ಸೋದಕ್ಕೆ ರಾಕ್ಷಸ್ರು ಬರ್ತಿದ್ರಂತೆ... ನನ್ನ ನಿದ್ರೆ ಕೆಡ್ಸೋದಕ್ಕೆ, ನೀನು ನನ್ನ ಪಾಲಿಗೆ ರಾಕ್ಷಸಿಯಲ್ದೇ ಮತ್ತೇನು?’

‘ಕ್ಷಮಿಸ್ಬೇಕು ಮಹಾ ಮುನಿಗಳೇ... ನನ್ನದು ಅಕ್ಷಮ್ಯ ಅಪರಾಧವಾಯ್ತು...’ ಎಂದು ನಾಟಕೀಯವಾಗಿ ಅಣಕಿಸಿದಳು ನನ್ನವಳು. ಆ ಅಣಕದ ಹಿಂದೆ ಅವಳ ಕೋಪ ಮಾತ್ರ ಎದ್ದು ಕಾಣುತ್ತಿತ್ತು. ಮುಂದುವರಿಯುತ್ತ, ‘ನೀವೇ ಹೇಳಿದ್ರಿ... ನಿನ್ ಕೆಲ್ಸ ನೀನ್ ಮಾಡ್ಕೋ... ಅಂತ! ನೆನಪ್ಪೋಯ್ತಾ?’ ಅಂತ ಸವಾಲ್ ಹಾಕಿದ್ಳು.

ಅವಳ ಹತ್ತಿರ ಮಾತು ಮುಂದುವರಿಸಿದ್ರೆ ನನಗೆ ಉಳಿಗಾಲ ಇಲ್ಲ... ಅಂತ ನಾನು ಸುಮ್ನೆ ಎದ್ದು, ಬಾತ್ ರೂಂಗೆ ಹೋದೆ. ಮುಖ-ಮಾರ್ಜನ ಮುಗ್ಸಿ, ಅಡುಗೆ ಮನೆಗೆ ಬಂದು, ‘ಇವತ್ತು ಬೆಳಗಿನ ತಿಂಡಿಗೇನಾದ್ರೂ ಸ್ಪೆಶಲ್ ಇದ್ಯಾ?’ ಅಂತ ಕೇಳಿದೆ.

‘ಇದೇನ್ ನಿಮ್ದು? ನಿನ್ನೆಯಿಂದ ಸ್ಪೆಶಲ್... ಸ್ಪೆಶಲ್... ಅಂತ ಕೇಳ್ತಿದ್ದೀರಲ್ಲ? ಇದ್ದದ್ರಲ್ಲೇ ಏನಾದ್ರೂ ತಕೊಂಡು ಬ್ರೇಕ್‌ಫಾಸ್ಟ್ ಮುಗ್ಸಿ...’ ಅಂತ ಆರ್ಡರ್ ಬಂತು. ಯಾವತ್ತೋ ತಂದಿದ್ದ ಎರಡು ಟೋಸ್ಟ್ ತುಂಡನ್ನ ತಿಂದೆ. ಹಾಗೇ, ಸ್ವಹಸ್ತದಿಂದ ಒಂದು ಲೋಟ ಇನ್‌ಸ್ಟೆಂಟ್ ಕಾಫಿ ಮಾಡ್ಕೊಂಡು, ಲಿವಿಂಗ್ ರೂಂಗೆ ಬಂದು ಅದನ್ನ ನಿಧಾನವಾಗಿ ಹೀರ್ತಾ ಕುಳ್ತಿದ್ದೆ.

ಈ ‘ಸ್ವಹಸ್ತ’ ಕಾಫಿ ಮಾಡೋ ವಿಚಾರ ಸ್ವಲ್ಪ ಹೇಳ್ಬೇಕಾಗಿದೆ ಇಲ್ಲಿ. ಅದರ ಹಿನ್ನೆಲೆ ಹೀಗಿದೆ:

ನಾನು ಮದುವೆಯಾದ ಹೊಸತು. ನನ್ನವಳ ಜೊತೆಗೆ ಸಂಸಾರ ಹೂಡಿದ ಹೊಸ್ತು. ಅವಳಿಗೆ ಸಹಾಯ ಮಾಡಲು, ನಮ್ಮ ಅತ್ತೆ ಹೆಚ್ಚು-ಕಡ್ಮೆ ಮೂರು ತಿಂಗ್ಳು ನಮ್ಜೊತೆ ಇದ್ದಿದ್ರು. ಅವರು ಬಂದ ಮೊದಲ ಕೆಲವು ದಿನ, ಬೆಳಿಗ್ಗೆ ಕಾಫಿ ಅತ್ತೆನೇ ಮಾಡಿ ಕೊಡ್ತಿದ್ರು. ಆದರೆ, ಸ್ವಲ್ಪ ದಿನ ಕಳದ್ಮೇಲೆ, ನಮ್ಮವಳು, ‘ಇವತ್ತು ನಾನೇ ಕಾಫೀ ಮಾಡಿ ಕೊಡ್ತೀನಿ...’ ಅಂತ ಅನೌನ್ಸ್ ಮಾಡಿದ್ಳು. ನಮ್ಮ ಅತ್ತೆ, ‘ಬೇಡ ಕಣೇ... ಇನ್ನೂ ಸ್ವಲ್ಪ ದಿನ ತಡಿ... ಎಲ್ಲಾ ನಿಧಾನ್ವಾಗಿ ಅಭ್ಯಾಸ ಮಾಡ್ಕೊಂಡು... ಆಮೇಲೆ ನೀನೇ ಎಲ್ಲ ಮಾಡುವಿಯಂತೆ...’ ಅಂತ ಹೇಳಿದ್ರೂ ನಮ್ಮವಳು ಕೇಳ್ಲಿಲ್ಲ. ನಾನೂ, ‘ಮಾಡ್ಕೊಳ್ಲಿ... ಬಿಡಿ ಅತ್ತೇ... ಹಾಗೇ ಅಭ್ಯಾಸವಾಗತ್ತೆ...’ ಅಂತ ಒಂದು ತರ ಉತ್ತೇಜನನೂ ಕೊಟ್ಟೆ.

ಸರಿ, ನನ್ನವಳು ಕಾಫಿ ಮಾಡೋಕೆ ಹೊರಟಳು. ಇದ್ದ ಪಾತ್ರೆ ಎಲ್ಲಾ ಗಡಬಡ ಶಬ್ದ ಮಾಡ್ತಾ, ಕೌಂಟರ್ ಮೇಲೆ ಬಿತ್ತು. ನಾನು ಕಾಫಿ ಬರತ್ತೆ... ಅಂತ ಕಾಯ್ತಾ ಕುಳ್ತಿದ್ದೆ. ಅದೆಷ್ಟೋ ಹೊತ್ತಿನ ಮೇಲೆ ಕಾಫಿ ಲೋಟ ಹಿಡ್ದು ಅಮ್ಮಾವ್ರ ರೂಪ ಪ್ರತ್ಯಕ್ಷವಾಯ್ತು. ಕಾಫಿ ನಾಲ್ಗೆ ಸುಡುವಷ್ಟು ಬಿಸಿಯಾಗಿತ್ತು. ‘ಉಫ್... ಉಫ್...’ ಅಂತ ಆರ್ಸ್ಕೊಂಡು, ಒಂದು ಗುಟುಕು ಕಾಫಿ ಹೀರಿದೆ. ‘ಭಗವಂತಾ... ಇದು ಎಂಥಾ ಸಂಕಟ ಬಂತಪ್ಪಾ! ಈ ಕಾಫಿ ಕುಡಿಯೋ ನಾನು ನಿಜಕ್ಕೂ ಪಾಪಿನೇ ಹೌದು!’ ಅಂತ ಮನಸಲ್ಲೇ ಹೇಳ್ಕೊಂಡೆ.

ಅಲ್ಲೇ ನಿಂತಿದ್ದ ನನ್ನವಳು, 'ಹೇಗಿದೆ ಕಾಫಿ?' ಅಂತ ಪುಚ್ಚೇರ್ರಿ ಕೇಳಿದ್ಲು.

ನಾನು ಸುಮ್ನೆ, 'ಪರ್ವಾಗಿಲ್ಲ...' ಅಂತ ಹೇಳಿದ್ರೆ ಸಾಕಾಗಿತ್ತು. ಹಾಗೆ ಮಾಡದೇ, ಬರೀ ಚೆನ್ನಾಗಿದೆ ಅಂತಲ್ಲ, 'ಬಹಳಾ ಚೆನ್ನಾಗಿದೆ...' ಅಂತ ಹೇಳ್ದೆ. ಅವಳು ಅದನ್ನ ಕೇಳಿ ಖುಷಿ ಪಟ್ಟಿದ್ದೇನೋ ಸರಿ! ಆದರೆ, ನಾನು ಮಾತ್ರ ಆ ನನ್ನ ತಪ್ಪಿನಿಂದ ತುಂಬ ದಿವ್ಸ ನರಕಯಾತ್ನೆ ಅನ್ಭವಿಸ್ಬೇಕಾಯ್ತು. ಒಂದೊಂದು ದಿವ್ಸ ಒಂದೊಂದು ಥರ ಕಾಫಿ ಮಾಡ್ಲಿಕ್ಕೆ ಶುರು ಮಾಡಿದ್ಲು. ಒಂದು ದಿವ್ಸ ಹಾಲು ಜಾಸ್ತಿಯಾದ್ರೆ, ಇನ್ನೊಂದು ದಿವ್ಸ ಕಾಫಿ ಪುಡಿ ಕಡ್ಮೆ... ಹಾಲೂ, ಪುಡಿ ಎರಡೂ ಕಡ್ಮೆ... ಇಲ್ಲಾ... ಸಕ್ಕರೆ ಜಾಸ್ತಿ... ಹೀಗೆ ಕಾಫಿಪುಡಿ, ಹಾಲು, ಸಕ್ಕರೆ, ಈ ಮೂರರೊಳಗೆ permutation and combination ಮಾಡ್ತಾ, ನನ್ಮೇಲೆ experiment ಆಗ್ತಿತ್ತು, ಅವ್ಳದ್ದು.

ನನ್ನ ಸಂಕಟವನ್ನ ಸಹಿಸಿಕೊಂಡೇ, 'ಇಂಥಾ ಇಂಟರೆಸ್ಟಿಂಗ್ ಕಾಫಿ ಮಾಡೋಕೆ ಎಲ್ಲಿ ಕಲ್ತೆ ಮಹಾರಾಯ್ತೀ?' ಅಂತ ಕೇಳ್ದೆ. ಮದುವೆಯಾದ ಹೊಸದಲ್ಲವೇ? ಏನೇ ಆದ್ರೂ ಸಹಿಸ್ಕೊಂಡು, ಅವಳ ಮನಸ್ಸು ನೋಯಿಸಬಾರ್ದೆಂದು ನನ್ನ ನಿಲುವಾಗಿತ್ತು (ಇಲ್ಲಿ ಇಂಟರೆಸ್ಟಿಂಗ್ ಎಂಬ ಶಬ್ದದ ಅರ್ಥವೇ ಬೇರೆಯಾಗಿತ್ತು, ಅಂತ ಆಗ ಹೊಳಿಲಿಲ್ಲ, ಅವಳಿಗೆ!).

'ಅಲ್ರೀ... ನಾನು ಬಂದದ್ದು ಎಲ್ಲಿಂದ ಅಂತ ತಿಳ್ಕೊಂಡಿದ್ದೀರಿ? ಮಲ್ನಾಡಿಂದ. ಮಲ್ನಾಡು... ಮಲ್ನಾಡಿನ ಕಾಫಿ ಅಂದ್ರೆ ಅದೇನ್ ಸಾಮಾನ್ಯನೇ?' ಅಂತ ಜಂಭ ಪಡ್ತಾ ಹೇಳಿದ್ಲು.

ಮುಂದೆ, ತುಂಬ ದಿನ ಅವಳ ಕಾಫಿ ಕುಡ್ದು ಸುಸ್ತಾಗಿ ಹೋದೆ. ಕೊನೆಗೆ, ಆ ಸಂಕಟ ತಡೀಲಾರ್ದೆ, ಒಂದು ದಿನ ಹೇಳೇಬಿಟ್ಟೆ, 'ಅಲ್ವೇ... ಇದೇನ್ ಕಾಫಿ ಅಂತ ಮಾಡ್ದೆ? ಕುದ್ರೆ ಉಚ್ಚೆ ಇದ್ದಾಗಿದೆ, ಕುಡಿದ್ರೆ...' ಅಂತ.

ಅಷ್ಟುವರೆಗೂ ನನಗೆ ಗೌರವ ಕೊಟ್ಟು ಮಾತಾಡ್ತಿದ್ದವಳು ತಕ್ಷಣ, 'ನೀವ್ಯಾವಾಗ ಕುದ್ರೆ ಉಚ್ಚೆ ಕುಡ್ದಿದ್ರಿ?' ಅಂತ ಕೇಳಿಬಿಡೋದೇ? ಮುಂದುವರಿಯುತ್ತ, 'ನೋಡಿ... ಇನ್ಮೇಲೆ ನಾನ್ ನಿಮ್ಗೆ ಕಾಫಿ ಮಾಡಿ ಕೊಡಲ್ಲ... ಬೇಕಾದ್ರೆ... ನೀವೇ ಮಾಡ್ಕೊಳ್ಳಿ...' ಅಂತ ಮುಖ ದಪ್ಪ ಮಾಡ್ಕೊಂಡು, ಅಲ್ಲಿಂದ ಎದ್ದು ಹೋದಳು.

ಆಮೇಲಿಂದ ನಾನೇ ನನ್ನ 'ಸ್ವಹಸ್ತ'ದಿಂದ ಕಾಫಿ ಮಾಡ್ಕೊಳ್ಳೋಕೆ ಶುರು ಮಾಡ್ದೆ.

ಇರಲಿ. ಲಿವಿಂಗ್ ರೂಂನಲ್ಲಿ ಕಾಫಿ ಕುಡಿತಾ ನನ್ನ ರಿಟಾಯರ್‌ಮೆಂಟ್ ಮೊದಲನೆಯ ದಿನಾನ ಅನುಭವಿಸ್ತಾ 'ಏನೀ ವೈಭೋಗ... ನಿವೃತ್ತ ಜೀವನದ ಈ ಸುಖ ಯೋಗ...' ಅಂತ ಅದೆತಾನೇ ನಾನೇ ಹೆಣೆದ ಹಾಡನ್ನ ಹಾಡ್ತಾ ಖುಷಿಪಡ್ತಿದ್ದೆ. ಬಂತು ನೋಡಿ, ಒಳಗಿನಿಂದ ಬುಲಾವ್... 'ರೀ... ಇಲ್ಬನ್ನಿ... ಈ ಗಾರ್ಬೇಜ್ ಕ್ಯಾನ್ ಫುಲ್

ಆಗಿದೆ... ಹೋಗಿ... ಇದನ್ನ ಡಂಪ್‌ಸ್ಟರ್‌ಗೆ ಹಾಕ್ಬಿಟ್ಟು ಬನ್ನಿ...' ಅಂತ. ಅಷ್ಟರಲ್ಲಿ ಕಾಫೀನೂ ಮುಗ್ದಿತ್ತು. ಸರಿ... ಎದ್ದು ಅಡ್ಗೆ ಮನೇಲಿದ್ದ ಆ ಗಾರ್ಬೇಜ್ ಬ್ಯಾಗ್ ಹಿಡ್ಕೊಂಡು ಹೊರ್ಗಡೆ ಡಂಪ್‌ಸ್ಟರ್‌ನಲ್ಲಿ ಎಸೆದು, ಇನ್ನೇನು ಒಳಗೆ ಬರ್ಬೇಕಂತ ಮಾಡ್ತಿರೋವಾಗ, ಪಕ್ಕದ ಮನೆ ಗಂಡ್ಸು ಅಲ್ಲಿ ಕಾಣಿಸ್ಕೊಂಡ. ನನ್ನನ್ನ ನೋಡಿ 'Good morning...' ಅಂತ ವಿಶ್ ಮಾಡಿದ. ನಾನೂ ಅವ್ನಿಗೆ ಗುಡ್ ಮಾರ್ನಿಂಗ್ ಹೇಳ್ದೆ.

ಅವನು ನನ್ ಜೊತೆ ಮಾತಿಗೆ ಶುರುಮಾಡ್ದ. 'ಏನು... ಇವತ್ತು ಕೆಲ್ಸಕ್ಕೆ ರಜಾ ಹಾಕಿದ್ದೀರಾ...?' ಅಂತ ಕೇಳ್ದ.

'ಇಲ್ಲ... ನಿನ್ನೆ ತಾನೇ ನಾನು ರಿಟಾಯರ್‌ಮೆಂಟ್ ತಗೊಂಡೆ... ಇನ್ಮೇಲೆ ಕೆಲ್ಸಕ್ಕೆ ಹೋಗೋ ಅವಶ್ಯಕತೇನೇ ಇಲ್ಲ...' ನಾನೆಂದೆ.

'ಬಹಳಾ ಸಂತೋಷ... Wish you happy retirement... ನಾನು ರಿಟಾಯರ್ ಆಗಿ, ಆಗ್ಲೇ ಮೂರು ವರ್ಷ ಆಯ್ತು... ಮುಂದೇನು ಮಾಡ್ಬೇಕಂತ ಇದ್ದೀರಾ?'

'ಸದ್ಯಕ್ಕಂತೂ ಆ ಬಗ್ಗೆ ಯೋಚ್ನೆ ಮಾಡಿಲ್ಲ...'

'ಮನುಷ್ಯ ಅಂದ್ಮೇಲೆ ಏನಾದ್ರೂ ಮಾಡ್ತಾ ಇರ್ಬೇಕಲ್ವೆ? ಮೂರ್ಹೊತ್ತೂ ಮನೇಲಿ ಕೂತಿರೋಕೆ ಸಾಧ್ಯವೇ? ಇಲ್ದಿದ್ರೆ... ಯಾರಿಗಾದ್ರೂ ಹುಚ್ಚು ಹಿಡಿಯೋದೇ ಸರಿ...'

ಬಹುಶಃ ಅವ್ನ ಹೆಂಡ್ತೀನೂ ಮನೇಲಿ ಕಿರಿಕಿರಿ ಮಾಡೋಳು ಇರ್ಬೇಕು... ಅಂತ ಅಂದ್ಕೊಂಡೆ.

ಆತ ಪುನಃ ಮಾತು ಮುಂದುವರಿಸಿದ: 'ಬೆಳಿಗ್ಗೆ ಎದ್ದು ಕಾಫಿ ಆದ್ಮೇಲೆ ಒಂದು ಮುಕ್ಕಾಲು ಗಂಟೆ ಆಗುವಷ್ಟು ಕಾಲ ವಾಕಿಂಗ್‌ಗೆ ಹೋಗ್ತೀನಿ... ನೀವೂ ಬರೋದಾದ್ರೆ... ಇಬ್ರೂ ಒಟ್ಟಿಗೇ ಹೋಗ್ಬಹುದು...'

'ಹಾಗೇ ಮಾಡೋಣ... ನಾಳೆ ನೀವು ಹೊರ್ಡೋ ಮುಂಚೆ ಒಂದು ಫೋನ್ ಮಾಡಿ... ನಾನು ರೆಡೀ ಆಗ್ತೀನಿ...' ಅಂತ ಹೇಳಿ, ನನ್ನ ಫೋನ್ ನಂಬರ್ ಕೊಟ್ಟೆ, ಅವ್ನಿಗೆ.

ಆಮೇಲೆ ಸ್ವಲ್ಪ ಹೊತ್ತು, ಅದು-ಇದು ಅಂತ ಮಾತಾಡಿ, ಒಳಕ್ಕೆ ಬಂದೆ. ನನ್ನವಳು, 'ಏನ್ರೀ... ಇಷ್ಟು ಹೊತ್ತೇ... ಗಾರ್ಬೇಜ್ ಎಸಿಲಿಕ್ಕೆ?' ಅಂತ ಇನ್‌ವೆಸ್ಟಿಗೇಟ್ ಮಾಡೋಕೆ ಶುರು ಮಾಡಿದ್ಳು.

'ಪಕ್ಕದ ಮನೆಯವ್ನು ಸಿಕ್ಕಿದ... ಹಾಗೇ ಸ್ವಲ್ಪ ಹೊತ್ತು ಮಾತಾಡ್ತಿದ್ದ... ಅವ್ನು ಬೆಳಿಗ್ಗೆ ಎದ್ದು, ಮುಕ್ಕಾಲು ಗಂಟೆ ವಾಕ್ ಮಾಡ್ತಾನಂತೆ... ನನ್ನನ್ನೂ ಬಾ ಅಂತ ಕರೆದ... ನಾಳೆಯಿಂದ ಅವ್ನ ಜೊತೆ ನಾನೂ ವಾಕಿಂಗ್ ಹೋಗ್ತೀನಿ...' ಅಂತ ನಾನು ನನ್ನವಳಿಗೆ ಹೇಳ್ದೆ.

‘ಅಷ್ಟೊತ್ತಿಗ ಎದ್ದು, ವಾಕ್ ಹೋದ್ರೆ... ನಿಮ್ಮ sweet slumber ಗತಿ ಏನು?’

‘ಅಯ್ಯೋ... ವಾಕ್ ಮುಗಿದ್ಮೇಲೆ ನಿದ್ರೆ ಮಾಡಿದ್ರಾಯ್ತು... ಅದಕ್ಕೇನು?’

‘ನೀವೇನೋ ಮಾಡುವವರೇ!’ ಅಂತ ಕುಹಕದ ನಗು ನಗ್ತಾ ಒಳಕ್ಕೆ ಹೋದಳು ನನ್ನವ್ಳು.

ಮಧ್ಯಾಹ್ನ ೧೨:೩೦ ಆದ್ರೂ, ನನ್ನ ಸ್ನಾನ ಆಗ್ದಿದ್ದನ್ನ ನೋಡಿ, ‘ಏನ್ರೀ... ಇದು? ಹನ್ನೆರ್ಡೂವರೆ ಆಯ್ತಲ್ಲಾ... ಇನ್ನೂ ಸ್ನಾನ ಆಗ್ಲಿಲ್ವೇ? ಎಷ್ಟೊತ್ತಿಗೆ... ಇವತ್ತು ಲಂಚ್?’ ಅಂತ ಕೇಳಿದ್ಳು.

‘ಹೌದೇ? ಆಗ಼್ೇ ಹನ್ನೆರ್ಡೂವರೆ ಆಯ್ತೇ? ಬೇಗ ಮೈಮೇಲೆ ಒಂದಿಷ್ಟು ನೀರೆರ್ಕೊಂಡು ಬರ್ತೀನಿ... ಏನಿವತ್ತು ಲಂಚ್‌ಗೆ ಸ್ಪೆಶಲ್?’

‘ಏನಿದು? ಇನ್ನೂ ನಿಮ್ ಸ್ಪೆಶಲ್‌ನ್ನ ನೀವು ಬಿಡ್ಲಿಲ್ಲ, ಅಲ್ವೇ? ಇರ್ಲಿ... ಇವತ್ತು ನಿಮ್ಗೆ ಇಷ್ಟವಾದ ರವಾ ಧೋಕ್ಲಾ ಮಾಡಿದ್ದೀನಿ...’

‘ಸರಿ ಮತ್ತೆ... ಬೇಗ ಸ್ನಾನ ಮುಗಿಸ್ತೀನಿ...’ ಅಂತ ಹೇಳಿ ಸ್ನಾನದ ಮನೆಗೆ ಓಡಿದೆ. ಸ್ನಾನಾನೂ ಬೇಗ ಮುಗಿಸ್ದೆ. ತಟ್ಟೆ ಮೇಲೆ ಬಿಸಿ-ಬಿಸಿ ಧೋಕ್ಲಾ ನನಗಾಗಿ ಕಾಯ್ತಿತ್ತು. ಅದಕ್ಕೆ ಮತ್ತೆ... ಡೇಟ್ಸ್ ಹಾಕಿದ ಸ್ವೀಟ್ ಅಂಡ್ ಸವರ್ ಚಟ್ನಿ ಬೇರೆ! ನಮ್ಮವ್ಳ ಬಾಯಿ ಎಷ್ಟು ಚುರುಕೋ... ಅಡ್ಗೇಲೂ ಅವ್ಳದ್ದು ಮೇಲ್‌ಗೈ ಮತ್ತೆ ಅಷ್ಟೇ ಚುರುಕು... ಅದೂ, ಆ ಡೇಟ್ಸ್ ಚಟ್ನಿಯಂತೂ... ತಿಂದವ್ರಿಗೇ ಗೊತ್ತು... ಅದ್ರ ರುಚಿ! ಬಹಳಾ ಖುಷಿ ಮಾಡ್ಕೊಂಡು, ಧೋಕ್ಲಾನ ಪಟ್ಟಾಗಿ ತಿಂದೆ. ಹೊಟ್ಟೆ ಬರ್ತಿ ತುಂಬಿದ್ದು, ಯಾಕೋ... ಕಣ್ಣು ಎಳೀತಾ ಇತ್ತು. ಸರಿ... ನನ್ಗಿನ್ನೇನು ಬೇರೆ ಕೆಲ್ಸ? ಹ್ಯಾಗೂ ರಿಟಾಯರ್ಡ್ ಲೈಫ್! ಸುಖ ಅನುಭವಿಸೋದಕ್ಕೇ ಇರೋದು ಈ ರಿಟಾಯರ್‌ಮೆಂಟ್ ಅಲ್ವೇ? ಸೀದಾ ಬೆಡ್‌ರೂಂಗೇ ನನ್ನನ್ನ ಕಾಲೆಳ್ದುಕೊಂಡು ಹೋಯ್ತು. ಹೊದ್ಕೆ ಹೊದ್ದು, ನಿದ್ರಾದೇವಿಯ ತೆಕ್ಕೇಲಿ ಬಿದ್ದೆ. ದಿಂಬು ಒರ್ಗಿದ್ದೊಂದೇ ಗೊತ್ತು! ಅದೆಷ್ಟು ಹೊತ್ತಿಗೆ ನಿದ್ರೆ ಬಂತೋ... ದೇವ್ರೇ ಬಲ್ಲ! ತಿಳ್ದವ್ರು ಹೇಳ್ತಾರೆ... ಇಂಥಾ ಹಗಲು ನಿದ್ರೆ... ‘power nap’... ಅಂತ. ಅದ್ರಲ್ಲಿ ಪವರ್ ಇದೆಯೋ... ಇಲ್ವೋ! ‘ನ್ಯಾಪ್’ ಅಂತೂ ತುಂಬಾ ಸೊಗ್ಸಾಗಿತ್ತು.

ಎಚ್ಚರ ಆದಾಗ ನಾಲ್ಕು ಗಂಟೆ ಮೇಲಾಗಿತ್ತು. ಅಷ್ಟರಲ್ಲಿ ನಮ್ಮವಳಿಂದ ಏನೂ ಆರ್ಡರ್ ಬಾರ್ದೇ ಇದ್ದಿದ್ದೇ ಆಶ್ಚರ್ಯ! ನಿಧಾನವಾಗಿ ಎದ್ದು ಪುನಃ ‘ಸ್ವಹಸ್ತ’ದ ಕಾಫಿ ಮಾಡ್ಲಿಕ್ಕೆ ಹೊರಟೆ. ಹಾಲನ್ನ ಮೈಕ್ರೋವೇವ್‌ನಲ್ಲಿ ಒಂದ್ ನಿಮಿಷ ಬಿಸಿ ಮಾಡ್ಲಿಕ್ಕಿಟ್ಟು, ಮೈಕ್ರೋವೇವ್ ‘...ಟ್ರಿನ್...’ ಅಂತ ಶಬ್ದ ಮಾಡೋದಕ್ಕಾಗಿ ಕಾಯ್ತಾ... ಇದ್ದೆ.

ನಮ್ಮವಳು ಇದ್ದಕ್ಕಿದ್ದಂತೆ, ‘ಅರೆರೇ... ಏನಿದು? ಕುದಿ ಬಂದು, ಹಾಲು ಮೈಕ್ರೋವೇವ್‌ನಲ್ಲೆಲ್ಲಾ ಚೆಲ್ಕೋಗ್ತಿದೆಯಲ್ಲಾ... ಟೈಮರ್ ಎಷ್ಟೊತ್ತಿಗಿಟ್ರೀ?’ ಅಂತ ನನ್ನನ್ನ

ತರಾಟೆಗೆ ತಕೊಂಡ್ಳು. ನೋಡ್ತೀನಿ... ಟೈಮರ್ ಇನ್ನೂ ೮:೨೭ ಇದೆ ಅಂತ ತೋರಿಸ್ತಿತ್ತು. ಒಂದು ನಿಮಿಷ ಒತ್ತೋಕೆ ಹೋಗಿ, ೧:೦೦ ಅಂತ ಒತ್ತೋ ಬದ್ಲು, ಒಂದು ಸೊನ್ನೆ ಹೆಚ್ಗೆ ಒತ್ತಿದ್ದೆ ಅಂತ ಕಾಣ್ಸತ್ತೆ. ಅದು ೧೦.೦೦ ಅಂತ ಆಗಿರ್ಬೇಕು. ಹಾಗಾಗಿ, ಹಾಲು ಕುದಿಬಂದು ಚೆಲ್ಲಿ ಹೋಗಿರ್ಬೇಕು.

ನನ್ನ ಹೆಡ್ತನಕ್ಕೆ ನನಗೇ ನಾಚ್ಕೆ ಬರುವಂತಾಯ್ತು! ಅರ್ಥವಿಲ್ಲದ ನಗು ನಗುತ್ತ, ಮಾತಿಲ್ಲದೆ ನನ್ನ ಕೈಲಾದಂತೆ, ಮೈಕ್ರೋವೇವ್‌ನ್ನ ಕ್ಲೀನ್ ಮಾಡಿ, ನನ್ನವಳಿಗೆ, 'Sorry..., ಮಾಡಿದ ತಪ್ಪಿಗೆ, ಎಲ್ಲಾ ಕ್ಲೀನ್ ಮಾಡಿದ್ದೀನಿ...' ಅಂತ ಹೇಳಿದೆ.

ನನ್ನವಳು ಹಿಂದಿನ ಜನ್ಮದಲ್ಲೆಲ್ಲೋ FBI ಇನ್ಸ್‌ಪೆಕ್ಟರ್ ಆಗಿದ್ದಿರ್ಬೇಕು! ಮೈಕ್ರೋವೇವ್‌ನ್ನ ಕೂಲಂಕಷ ಇನ್ಸ್‌ಪೆಕ್ಟ್ ಮಾಡಿ, 'ಇದೇನ್ ಕ್ಲೀನ್ ಮಾಡಿದ್ದು? ನೋಡಿ, ಇಲ್ಲಿ... ಹಾಲೆಲ್ಲ ಒಣ್ಗಿ ಅಂಟ್ಕೊಂಡಿರೋದು! ನಾನ್ ತಿರ್‍ಗಾ ಕ್ಲೀನ್ ಮಾಡ್ಬೇಕು... ಅಷ್ಟೆ! ಸ್ವಲ್ಪ ಸರೀರಿ ಅಲ್ಲಿಂದ... ನಿಮ್ ಕೆಲ್ಸ ಮುಗೀತಲ್ಲ! ಇನ್ ಹೋಗಿ... ಒಂದ್ ಕೆಲ್ಸಾನೂ ಸುಸೂತ್ರ ಮಾಡೋಕೆ ನಿಮ್ ಕೈಲಿ ಆಗೋದೇ ಇಲ್ಲ... ಅಲ್ವೇ?' ಅಂತ ತರಾಟೆಗೆ ತೆಗ್ದುಕೊಂಡ್ಳು. ನಾನು ಅದಕ್ಕೆ ಏನೂ ಹೇಳೋ ಹಾಗಿರ್‍ಲಿಲ್ಲ. ಸುಮ್ನೆ, ಹಲ್ಲು ಕಿರೀತಾ ನಿಂತ್ಕೊಂಡೆ. ಅವಳು ಮೈಕ್ರೋವೇವ್ ಕ್ಲೀನ್ ಮಾಡಿದ ಮೇಲೆ, 'ಇನ್ಮೇಲಾದ್ರೂ ಸ್ವಲ್ಪ ಜಾಗ್ರತೆಯಿಂದ, ಅಚ್ಚುಕಟ್ಟಾಗಿ ಕೆಲ್ಸ ಮಾಡೋಕಾಗತ್ತಾ ಅಂತ ನೋಡಿ...' ಎಂದು ಒಂದು ತರ ವಾರ್ನಿಂಗ್ ಕೊಟ್ಳು. ನಾನು ಮಾತಿಲ್ದೆ, ಅಲ್ಲಿಂದ ಜಾರ್ಕೊಂಡೆ.

ಮನೇಲಿದ್ರೆ, ಇನ್ನೇನಾದ್ರೂ ಅನಾಹುತ ಆಗಿ, ತಿರ್‍ಗಾ ಇನ್ನೇನಾದ್ರೂ ಅನಿಸ್ಕೊಳ್ಬೇಕಾಗುತ್ತೆ ಅಂತ ಎಣ್ಸಿ, ಸ್ವಲ್ಪ ಹೊತ್ತು ಹೊರ್‍ಗಡೆ ವಾಕ್ ಆದ್ರೂ ಹೋಗಿ ಬರೋಣ ಅಂತ, ಮನೆಯಿಂದ ಜಾರಿದೆ. ವಾಕ್ ಮುಗ್ಸಿ, ಮನೆಗೆ ಬರೋವಾಗ ಕತ್ಲೆ ಆಗೋಕೆ ಶುರುವಾಗಿತ್ತು. ನಾನು ಬಂದ ತಕ್ಷಣ ನನ್ನವಳು, 'ಏನಿದು? ಎಷ್ಟೊತ್ತು ನಿಮ್ಮ ವಾಕ್?' ಅಂತ ಸ್ವಲ್ಪ ಕಣ್ಣರಳಿಸಿ ಕೇಳಿದ್ಳು.

'ಅರೇ... ಸ್ವಲ್ಪ ವಾಕ್ ಹೋಗೋದಕ್ಕೂ... ಬರೋದಕ್ಕೂ, ನಿನ್ನ ಪರ್ಮಿಷನ್ ತಕೋಬೇಕಾ?' ಅಂತ ನಾನೂ ಜಿಗುಪ್ಸೆಯಿಂದ ಸ್ವಲ್ಪ ಬಿಗುವಾಗಿಯೇ ಹೇಳಿದೆ.

'ಅಲ್ಲಾ... ಹೊತ್ತು-ಗೊತ್ತೂ ಇಲ್ವೇ ನಿಮ್ಗೆ? ಇಂತಲ್ಲಿಗೆ ಹೋಗ್ತೀನಿ ಅಂತ ಹೇಳಿ ಹೋಗಿದ್ರೇನಾಗ್ತಿತ್ತು? ಗಂಡ-ಹೆಂಡಿರ ಮಧ್ಯೆ ಸರಿಯಾದ ಕಮ್ಯುನಿಕೇಷನ್ ಇರ್ಬೇಕು...' ಅವಳು ಬುದ್ಧಿ ಹೇಳಿದ್ಳು.

ಸರಿ... ಇವ್ಳತ್ರ ಮಾತಾಡಿ ಪ್ರಯೋಜ್ನ ಇಲ್ಲಾ... ಅಂತ ನಾನು ಸುಮ್ನಾದೆ. ಊಟಕ್ಕಿನ್ನೂ ಇನ್ನೊಂದೆರ್ಡು ಗಂಟೆನಾದ್ರೂ ಕಾಯ್ಬೇಕು. ಅಷ್ಟ್ರಲ್ಲಿ ಏನಾದ್ರೂ ಓದಿ, ಕಾಲಹರಣ ಮಾಡೋಣ ಅಂತ ಶೆಲ್ಫ್‌ನಲ್ಲಿದ್ದ ಪುಸ್ತಕಗಳ ಮೇಲೆ ಕಣ್ಣಾಡಿಸ್ದೆ. ಮೊದ್ಲಿಗೆ

ಕಾಣ್ಸದ್ದೇ, *Biochemistry* - by L. Stryer ಪುಸ್ತಕ. '...ಈ ಬಯೋಕೆಮಿಸ್ಟ್ರಿಯಿಂದ ಪಾರಾಗ್ಬೇಕಂತ಼್ಲೇ ರಿಟೈರ್‌ಮೆಂಟ್ ತಗೊಂಡಿದ್ದು! ಮತ್ತದೇ ಕಾಣಿಸ್ತಿದೆಯಲ್ಲಾ...' ಅಂತ ಅಂದ್ಕೊಂಡು, ಶೆಲ್ಫ್‌ನಲ್ಲಿ ಬೇರೆ ಕಡೆ ಇದ್ದ, ಅ.ರಾ. ಮಿತ್ರರ, 'ನಾನೇಕೆ ಕೊರೆಯುತ್ತೇನೆ?' ಎಂಬ ಪುಸ್ತಕ ಕೈಲ್ಹಿಡ್ದು ಓದ್ಲಿಕ್ಕೆ ಶುರುಮಾಡ್ದೆ.

ಸುಮಾರು ೭ ಗಂಟೆ ಹೊತ್ತಿಗೆ ಅಮ್ಮಾವ್ರ ಕರೆ ಬಂತು: 'ಏಳಿ... ಊಟಕ್ಕೆ ಬನ್ನಿ...' ಅಂತ. ಪುಸ್ತಕ ಮುಚ್ಚಿ, ಊಟಕ್ಕೆ ಎದ್ದೆ. ಅಡ್ಗೆ ಮನೆಯಿಂದ ಒಳ್ಳೆ ಗಮ-ಗಮ ಪರಿಮಳ ಬರ್ತಿತ್ತು. 'ಏನಿದು? ಒಳ್ಳೆ ಪರಿಮಳ ಬರ್ತಿದೆಯಲ್ಲಾ?' ಅಂತ ಕುತೂಹಲದಿಂದ ಕೇಳಿದೆ.

'ಬನ್ನಿ... ಸುಮ್ನೆ... ನಿನ್ನೆಯಿಂದ ಸ್ಪೆಶಲ್... ಸ್ಪೆಶಲ್... ಅಂತಿದ್ರಲ್ಲಾ... ಸ್ಪೆಶಲ್ ಆಗಿ, ನಿಮ್ಗೆ ಇಷ್ಟವಾಗಿದ್ದೇ ಎಲ್ಲ ಮಾಡಿದ್ದೀನಿ... ಬನ್ನಿ...' ಅಂತ ಹೇಳಿದ್ಳು.

ಬಂದು ನೋಡ್ತೀನಿ! ಡೈನಿಂಗ್ ಟೇಬಲ್ ಮೇಲೆ ಪೂರಿ... ಸಾಗು... ಶ್ರೀಖಂಡ್... ನನ್ ಕಣ್ಮುಂದೆ ರಾರಾಜಿಸ್ತಿತ್ತು. ಅಷ್ಟೊತ್ತೂ ಅವಳ್ಮೇಲೆ ಕೋಪ ಮಾಡ್ಕೊಂಡಿದ್ದು... ಅವಳನ್ನ ರಾಕ್ಷಸಿ ಅಂತ ಕರ್ದಿದ್ದು... ಎಲ್ಲ ಮರ್ತ್ಹೋಯ್ತು, ಆ ಕ್ಷಣ! ಖುಷಿ ಮಾಡ್ಕೊಂಡು ತಟ್ಟೆಗೆ ಕೈಹಾಕ್ದೆ. ಪೂರಿ ಮೇಲೆ ಪೂರಿ... ಅಂತ ಏಳೆಂಟು ಪೂರಿನಾದ್ರೂ ಹೊಡ್ದಿರ್ಬೇಕು. ಅದನ್ನ ತಿನ್ನೋದಕ್ಕೆ ಶ್ರೀಖಂಡ್ ಬೇರೆ ಇದ್ದಿತ್ತು! ಅದನ್ನ ತಿನ್‌ತಾ, 'ಈ ಶ್ರೀಖಂಡ್‌ಗೆ ಸ್ವಲ್ಪ ಸ್ವೀಟ್ ಕಮ್ಮಿಯಾಯ್ತು... ಇನ್ನೂ ಮೂರ್ನಾಲ್ಕು ಸ್ಪೂಂಡಾ ಪ್ಯಾಕೆಟ್ ಹಾಕ್ಬಹುದಾಗಿತ್ತು...' ಅಂತ ಕಾಮೆಂಟ್ ಮಾಡ್ದೆ.

'ನಿಮ್ಗೆ ಕಂಪ್ಲೈಂಟ್ ಮಾಡ್ದೇ ಊಟ ಮಾಡೋಕೇ ಬರಲ್ಲ ಅಂತ ಕಾಣ್ಸತ್ತೆ... ಸ್ವೀಟೂ ಸಾಕು... ಎಲ್ಲ ಸಾಕು... ಸ್ವೀಟ್ ಜಾಸ್ತಿ ತಿಂದೇ ಡಯಾಬಿಟಿಸ್ ಬರ್ಸ್ಕೊಂಡ್ರಿ... ಏನ್ಮಾಡಿದ್ರೂ... ಅದಕ್ಕೊಂದು ಊನ ಇದ್ದೇ ಇರತ್ತೆ ನಿಮ್ದು... ಸುಮ್ನೆ ತಿನ್ನಿ ನೋಡೋಣ...' ಅಂತ ರಿಪ್ರಿಮಾಂಡ್ ಮಾಡಿದ್ಳು ನನ್ನವಳು.

ನಾನೇನೂ ಹೇಳ್ದೆ, ಊಟ ಮಾಡ್ದೆ. ಅಷ್ಟೊಂದು ಮುತುವರ್ಜಿಯಿಂದ ಅಡ್ಗೆ ಮಾಡಿದ್ದಾಳೆ... ಅಂದ್ಮೇಲೆ, ಅವ್ಳಿಗೆ ಉತ್ತರ ಕೊಡೋದು ಖಂಡಿತ ಸೂಕ್ತವಲ್ಲ... ಅಂತ ಅನಿಸ್ತು. ಹಾಗೇ ಅನ್ನ ಹಾಕ್ಕೊಂಡು, ಹಾಗ್ಲಕಾಯಿ 'ಕಾಯಿರಸ' ಬಡಿಸ್ಕೊಂಡೆ (ಬೆಂಗ್ಳೂರಲ್ಲಿ 'ಗೊಜ್ಜು' ಅಂತಾರಲ್ಲಾ, ಅದನ್ನ ಮಲ್ನಾಡಲ್ಲಿ, 'ಕಾಯಿರಸ' ಅಂತ ಕರೀತಾರೆ). ಹಾಗಲಕಾಯಿ ಕಾಯಿರಸ ಅಂದ್ರೆ ನನಗೆ ಪಂಚಪ್ರಾಣ ಅಂತ ಅವ್ಳಿಗೆ ತಿಳ್ದಿತ್ತು. ಅಭ್ಯಾಸ ಬಲವೋ ಏನೋ! ನನಗೆ ಗೊತ್ತಿಲ್ದಂತೆ ನನ್ಬಾಯಿಂದ ಹೊರ ಬಂತು, 'ಇದಕ್ಕೆ ಸ್ವಲ್ಪ ಉಪ್ಪು ಕಡ್ಮೆ ಆಯ್ತು...' ಅಂತ.

'ನೋಡಿ... ತಿರ್ಗಾ ನಿಮ್ ಕಂಪ್ಲೈಂಟ್! ಉಪ್ಪೂ ಸಾಕು... ಗಿಪ್ಪೂ ಸಾಕು... ಸುಮ್ನೆ ಊಟ ಮಾಡ್ತೀರಾ? ಉಪ್ಪು ಜಾಸ್ತಿ ತಿಂದೇ ಬ್ಲಡ್ ಪ್ರೆಶರ್ ಬಂದಿದ್ದು! ನಿಮ್ಮ ಒಳ್ಳೇದಕ್ಕೇ ಎಲ್ಲ ಮಾಡಿದ್ರೆ... ನೀವು ಅದನ್ನ ಆಲೋಚ್ನೆ ಮಾಡಲ್ವಲ್ಲಾ!' ಅಂತ ಗದರ್ಸಿದ್ಳು, ನನ್ನಾಕೆ.

ಊಟ ಮುಗ್ಸಿ, ಲಿವಿಂಗ್ ರೂಂಗೆ ಬಂದು, ಯೋಚ್ನೆ ಮಾಡ್ತಾ ಇದ್ದೆ: '...ನಿಜಕ್ಕೂ ನನ್ನವ್ಳ ಬಾಯಿ ಸ್ವಲ್ಪ ಜೋರಿರ್ಬಹುದು... ಆದ್ರೆ... ಅವ್ಳ ಉದ್ದಿಶ್ಯಗಳಂತೂ ಒಳ್ಳೇವೇ! ಚೆನ್ನಾಗಿ, ರುಚಿ-ರುಚಿ ಅಡ್ಗೆ ಮಾಡ್ತಾಳೆ... ನನ್ನ ಒಳ್ಳೇದಕ್ಕೇ ಎಲ್ಲ ಹೇಳ್ತಾಳೆ... ಮಾಡ್ತಾಳೆ... ನಾನು ಸುಮ್ನೆ ಅವ್ಳನ್ನ ರೇಗಸ್ತಿದ್ದೀನಿ... ಅಷ್ಟೆ! ಕೆಲವ್ಸಾರಿ... ನಾನು ತಮಾಷೆಗೆಂದು ಏನಾದ್ರೂ ಹೇಳಿದ್ರೆ ಅವ್ಳಿಗದು ಕಿರಿಕಿರಿ ಆಗತ್ತೆ. ಅವ್ಳದ್ದು ಎಲ್ಲ ಸೀರಿಯಸ್ ಸ್ವಭಾವ. ಅವ್ಳ ಜೊತೆ ಹೊಂದ್ಕೊಂಡು ಹೋಗ್ಬೇಕಾದ್ದನ್ನ ನಾನು ಕಲೀಬೇಕು... ಇಷ್ಟು ದಿವ್ಸ ನಂದೇ ದರ್ಬಾರು... ನನ್ಗೂ ವಯಸ್ಸಾಗ್ತಾ ಬಂತು... ಇನ್ಮುಂದೆಲ್ಲಾ ಅವ್ಳು ಹೇಳ್ದಾಗೆ ಕೇಳ್ಕೊಂಡಿರ್ಬೆಕು... ಅಷ್ಟೆ!' ಅಂತ.

ರಾತ್ರಿ ಮಲಗ್ತಾ, 'ಚಿನ್ನಾ... ನಾನು, ನನ್ನ ಮೊದ್ಲನೇ ದಿನದ ರಿಟಾಯರ್‌ಮೆಂಟ್‌ನ ಅನುಭವ ಸಪ್ಪೆಯಾಗಿತ್ತು ಅಂತ ತಿಳ್ಕೊಂಡಿದ್ದೆ. ಆದ್ರೆ... ನೀನು, ನನ್ನ ಅಂಥ ಮನವರಿಕೆ ತಪ್ಪು ಅಂತ ತೋರ್ಸಿಕೊಟ್ಟೆ! ಥ್ಯಾಂಕ್ಸ್... ಡಿಯರ್!' ಅಂತ ಅವ್ಳಿಗೆ ಹೇಳ್ದೆ.

'ಸರಿ... ಸರಿ... ಈಗ ಸುಮ್ನೆ ಮಲ್ಕೊಳ್ಳಿ...' ಅಂತ ನನ್ನ ಮಾತನ್ನು ತಟ್ಟಿ ಹಾರಿಸಿ, ನನಗೆ ಬೆನ್ನು ಹಾಕುವಂತೆ, ಬೇರೆ ಕಡೆ ಮುಖ ಹಾಕಿ ಮಲಗಿದಳು.

*

ಇದು, ನನ್ನ ನಿವೃತ್ತ ಜೀವನದ ಮೊದಲನೆಯ ದಿನದ ಅನುಭವ. ಈಗ, ನಾನು ರಿಟಾಯರ್ ಆಗಿ ೧೦ ವರ್ಷಗಳೇ ಆದುವು. ಈ ಮಧ್ಯೆ, ನನ್ನ ನಿವೃತ್ತ ಜೀವನದಲ್ಲಿ ಸಂಭವಿಸಿದ ಅದೆಷ್ಟೋ ಸ್ವಾರಸ್ಯಕರ ಸಂಗತಿಗಳನ್ನು ವಿವರಿಸುತ್ತ ಹೋದಲ್ಲಿ, ಅದೊಂದು ದೊಡ್ಡ ಪುರಾಣವೇ ಆದೀತು. ಅವನ್ನೆಲ್ಲಾ ಇಲ್ಲಿ ಲಿಸ್ಟ್ ಮಾಡಿ, ನಿಮ್ಗೆ ಬೋರ್ ಹಿಡ್ಸೋದಕ್ಕೆ ಇಚ್ಛೆನೂ ಇಲ್ಲ. ಆದರೆ, ಈ ಕೆಳಗಿನ ಒಂದು ಸ್ವಾರಸ್ಯಕರ ಸಂಗತಿಯನ್ನು ನಿಮ್ಮಲ್ಲಿ ಹಂಚಿಕೊಳ್ಳಲೇಬೇಕಂತ ನನ್ನ ಮನಸ್ಸು ಹೇಳ್ತಿದೆ.

ನನ್ನ ನಿವೃತ್ತ ಜೀವನದಲ್ಲಿ, ನನ್ನವ್ಳಿಗೆ ಮನೆಗೆಲಸದಲ್ಲೇನಾದ್ರೂ ಸಹಾಯ ಮಾಡ್ಬೇಕಂತ ನನ್ನ ಇಚ್ಛೆಯಾಗಿತ್ತು. ಒಂದ್ಸಾರಿ, ಇಡ್ಲಿ ಮಾಡೋದ್ರಲ್ಲಿ, ಅವ್ಳಿಗೆ ಸಹಾಯ ಮಾಡೋಕೆ ಹೋಗಿ, ದೊಡ್ಡ ಅವಾಂತ್ರನೇ ಆಗಿಹೋಗಿತ್ತು. ನನ್ನವ್ಳು ಇಡ್ಲಿಗೆ ರುಬ್ಬಿ, ಅಂಗಡಿಗೆ ಏನೋ ಸಾಮಾನು ಕೊಂಡ್ಕೊಳ್ಳೋಕೆ ಹೋಗಿದ್ಳು. ಅವ್ಳು ಬರೋದ್ರೊಳ್ಗೆ, ಇಡ್ಲಿ ಮಾಡಿ, ಅವ್ಳನ್ನ ಸರ್‌ಪ್ರೈಸ್ ಮಾಡೋಣ ಅಂತ... ನಾನು, ಅವ್ಳು ಹೊರ್ಗಡೆ ಹೋದ್ಮೇಲೆ, ಇಡ್ಲಿ ಮಾಡೋಕೆ ಶುರುಮಾಡ್ದೆ. ಹಿಟ್ಟನ್ನ ಇಡ್ಲಿ ತಟ್ಟೆಗೆ ಸುರಿದು, ಅಟ್ಟದಲ್ಲಿ ಬೇಯ್ಸೊಕಿಟ್ಟೆ. ಅಷ್ಟರಲ್ಲಿ, ನಮ್ಮ ಪಕ್ಕದ ಮನೆ ಗಂಡ್ಸು ಬಂದು ಕಾಲಿಂಗ್ ಬೆಲ್ ಒತ್ತಿದ. ನಾನು ಅವ್ನ ಹತ್ರ ಮಾತಾಡ್ತಾ, ಒಲೆ ಮೇಲೆ ಇಡ್ಲಿ ಅಟ್ಟ ಇಟ್ಟದ್ದನ್ನೇ ಪೂರ್ತಿ ಮರ್ತು ಬಿಟ್ಟೆ. ಪಕ್ಕದ ಮನೆಯವ್ನು ಹೋದ್ಮೇಲೂ, ನಾನು ಒಲೆ ಮೇಲಿಟ್ಟ ಇಡ್ಲಿ ತಟ್ಟೆ ಬಗ್ಗೆ ಗಮನ ತಕೊಳ್ದೆ,

ಲಿವಿಂಗ್ ರೂಂನಲ್ಲೇ ಏನೋ ಓದ್ತಾ ಕುಳ್ತೆ. ಎಷ್ಟೊ ಹೊತ್ತಿನ ಮೇಲೆ, ಅಡ್ಗೆ ಮನೆಯಿಂದ ಸೀದು ಹೋದ ವಾಸ್ನೆ ಬಂದಾಗ, ಫಟ್ಟನೆ ಜ್ಞಾಪಕಕ್ಕೆ ಬಂತು, ಇಡ್ಲಿ ಅಟ್ಟ ಒಲೆ ಮೇಲಿದೆ ಅಂತ. ಓಡಿ ಬಂದು ನೋಡ್ತೀನಿ... ಒಲೆ ಮೇಲಿಟ್ಟ ಅಲ್ಯೂಮಿನಿಯಮ್ ಪಾತ್ರದ ತಳ ಎಲ್ಲಾ ಕರಗಿ, ಒಳಗಿದ್ದ ಇಡ್ಲಿ ತಟ್ಟೆನೂ ಕರಗಿ, ಸುಟ್ಟ ವಾಸ್ನೆ ಬರ್ತಿತ್ತು. ಇಡ್ಲಿಯಂತೂ ಕರಿ ಮಸಿಯಾಗಿ ಹೋಗಿತ್ತು. ತಕ್ಷಣ ಒಲೆ ಬೆಂಕಿ ಆರಿಸ್ದೆ. ಏನೋ ಮಾಡೋಕೆ ಹೋಗಿ ಏನೋ ಆಯ್ತಲ್ಲ... ಅಂತ ಪೆಚ್ಚು ಮುಖ ಮಾಡಿ, ತಲೆಮೇಲೆ ಕೈಕೊಟ್ಟು, ಸುಮ್ನೆ ಅಲ್ಲಿ ಯೋಚಿಸ್ತಾ ನಿಂತೆ.

ಅಂಗಡಿ ಕೆಲ್ಸ ಮುಗ್ಸಿ, ನನ್ನವ್ಳು ಬಂದು ಅಲ್ಲಿನ ನಾಚಾರ ನೋಡಿ, 'ನಿಮ್ಮ ಮೇಲೆ ಮನೆ ಬಿಟ್ಟು ಹೋದ್ರೆ... ಮನೆಗೇ ಬೆಂಕಿ ಹಚ್ಚಿಸ್ತಿದ್ರಿ... ಸ್ವಲ್ಪಾನೂ ಜವಾಬ್ದಾರಿ ಇಲ್ವಲ್ಲಾ ನಿಮ್ಗೆ! ಸದ್ಯ ಇಷ್ಟಕ್ಕೇ ಮುಗಿತಲ್ಲಾ... ಏಳಿ... ಈ ಕಡೆ ಬನ್ನಿ... ನೀವ್ಮಾಡಿದ ಉಪ್ಕಾರ ಇಷ್ಟೇ ಸಾಕು... ಹೋಗಿ ಆಚೆಕಡೇ... ಇನ್ನು ಈ ನಾಚಾರ ನಾನು ಕ್ಲೀನ್ ಮಾಡ್ಬೇಕಲ್ಲಾ!' ಅಂತ ಹೇಳಿ ನನ್ನನ್ನ ಅಡ್ಗೆ ಮನೆಯಿಂದ ಹೊರಗೆ ಕಳುಹಿಸಿದ್ಳು. ಆ ಕ್ಷಣ ನಾನೇನೂ ಹೇಳೋ ಸ್ಥಿತಿಯಲ್ಲಿರ್ಲಿಲ್ಲ.

ನನ್ನವಳು ಎಲ್ಲ ಕ್ಲೀನ್ ಮಾಡಿದ್ಮೇಲೆ, ನಾನು, 'ನಿನ್ಗೇನಾದ್ರೂ ಹೆಲ್ಪ್ ಮಾಡೋಣ ಅಂತ ಹೋದ್ರೆ... ಅದಕ್ಕೆ ಬದ್ಲಾಗಿ ತೊಂದ್ರೆನೇ ಕೊಟ್ಟೆ... Sorry... ಪಕ್ಕದ ಮನೆಯವ್ನು ಬಂದಿದ್ದ... ಅವ್ನ ಹತ್ರ ಮಾತಾಡ್ತಾ ಒಲೆಮೇಲೆ ಇಡ್ಲಿ ಬೇಯಿಸೋದಕ್ಕೆ ಇಟ್ಟದ್ದೇ ಮರ್ತು ಹೋಯ್ತು... ಎಂಥಾ ಕೆಲ್ಸ ಮಾಡ್ದೆ!' ಅಂತ ಅವಳಲ್ಲಿ ಕ್ಷಮೆ ಕೇಳ್ದೆ.

ನನ್ನವಳು ನಿಧಾನವಾಗಿ, 'ಅದಿರ್ಲಿ... ಆಗಿದ್ದು ಆಯ್ತಲ್ಲ! ಅದ್ರ ಮೇಲಿನ ಆಲೋಚ್ನೆ ಬಿಟ್ಬಿಡಿ... ಆದ್ರೆ... ಈಗ ನೀವು ನನ್ಗೊಂದು ದೊಡ್ಡ ಸಹಾಯ ಮಾಡ್ಬೇಕಲ್ಲಾ...' ಅಂತ ಕೈಮುಗಿದು ಕೇಳಿಕೊಂಡ್ಳು.

ನಾನು ಮಾಡಿದ ತಪ್ಪನ್ನ ನಿವಾರಿಸೋದಕ್ಕೆ, ಅವ್ಳು ಏನ್ಹೇಳಿದ್ರೂ ಅದನ್ನ ಮಾಡ್ಲಿಕ್ಕೆ ಆ ಕ್ಷಣ ತಯಾರಿದ್ದೆ. 'ನಾನಿನ್ಗೇನ್ಬೇಕಾದ್ರೂ ಮಾಡೋಕೆ ಸಿದ್ಧ! ಇದೊಂದು ತಪ್ಪನ್ನ ಕ್ಷಮ್ಸಿ ಬಿಡು...' ಅಂತ ದೈನ್ಯದಿಂದ ಕೇಳ್ಕೊಂಡೆ.

ಅವಳು ನಿಧಾನವಾಗಿ, 'ಇನ್ಮೇಲೆ... ದಯವಿಟ್ಟು, ನನ್ಗೆ ಸಹಾಯ ಮಾಡೋಕ್ ಮಾತ್ರ ಖಂಡಿತ ಬರ್ಬೇಡಿ... ದಯವಿಟ್ಟು... ಅಷ್ಟೊಂದು ಉಪ್ಕಾರ ಮಾಡಿ... ನಿಮ್ ದಮ್ಮಯ್ಯ!' ಅಂತ ಅಣಕಿಸುವ ದನಿಯಲ್ಲಿ, ಕೈ ಮುಗಿದ್ಕೊಂಡೇ, ಬೇಡಿಕೊಂಡಾಗ ನಾನು ಪೆಚ್ಚಾದೆ! ಮುಂದೆ ಅಂಥಾ ಸಾಹಸಕ್ಕೆ ಕೈಹಾಕಲೇ ಇಲ್ಲ ಅನ್ನಿ!

*

ಹೀಗೇ, ಏರಿಳಿತ, ಸರಸ-ವಿರಸಗಳ ಮಧ್ಯೆ, ಈ ಹತ್ತು ವರ್ಷಗಳ ನನ್ನ ನಿವೃತ್ತ ಜೀವನ ಸಾಗಿ ಬಂದಿದೆ. ಅದ್ರಲ್ಲಿ, ನಾನು ಒಂದು ಥರಾ... ತೃಪ್ತಿಯನ್ನೇ ಪಡೀತಿದ್ದೀನಿ. ಬೆಳಿಗ್ಗೆ ಬೇಗ ಏಳ್ಬೇಕಾದ್ದಿಲ್ಲ... ಎದ್ದು 'ಸ್ವಹಸ್ತ'ದ ಕಾಫಿ ಕುಡ್ದ ಮೇಲೆ, ಒಂದು ಸಣ್ಣ ವಾಕಿಂಗ್... ಮೊದ್ಲು, ಪಕ್ಕದ ಮನೆಯವ್ನ ಜೊತೆ ಹೋಗ್ತಿದ್ದೆ... ಈಗ ಅವ್ನು ಅಲ್ಲಿಲ್ಲ... ಹಾಗಾಗಿ ನಾನೊಬ್ನೇ ಹೋಗ್ತಿದ್ದೀನಿ... ಆಮೇಲೆ ಅದು-ಇದು ಮಾಡ್ತಾ ಬೆಳ್ಗಿನ ಸಮಯ ಕಳೀತೀನಿ. ಮಧ್ಯಾಹ್ನ ಹನ್ನೆರ್ಡು-ಹನ್ನೆರ್ಡೂವರೆಗೆ ಸ್ನಾನ ಮುಗ್ಸಿ, ನನ್ನವಳು ಹಾಕಿದ ಸೊಗ್ಸಾದ ಲಂಚ್ ತಿಂದು, ಪಟ್ಟಾಗಿ 'ನ್ಯಾಪ್' ಹೊಡ್ದಾ ಅಂದ್ರೆ... ಏಳೋದು ನಾಲ್ಕು-ನಾಲ್ಕೂವರೆ ಗಂಟೇನೇ ಆಗತ್ತೆ... ಸಾಯಂಕಾಲ ಒಂದಿಷ್ಟು ಓದ್ತಾ ಸಮಯ ಕಳೀತೀನಿ... ಒಂದೊಂದ್ಸಾರಿ, ಯಾರಾದ್ರೂ ಮನೆಗೆ ಬರ್ತಾರೆ. ಅವ್ರ ಹತ್ರ ಮಾತಾಡ್ತಾ ಸಮಯ ಕಳದ್ಹೋಗತ್ತೆ... ಸರಿ, ಏಳು ಗಂಟೆಗೆಲ್ಲ ನಮ್ಮವ್ಳು ಡಿನ್ನರ್ ರೆಡಿ ಮಾಡ್ತಾಳೆ... ಒಂದೊಂದು ದಿವ್ಸ, ಒಂದೊಂದು ಪರಿ ಅಡ್ಗೆ... ಉಪ್ಪಿಲ್ಲ... ಖಾರ ಜಾಸ್ತಿ... ಅಂತ ಕಂಪ್ಲೈಂಟ್ ಮಾಡ್ತಾನೇ, ಹೊಟ್ಟೆ ತುಂಬ ಊಟ ಮಾಡ್ತೀನಿ... ಆಮೇಲೊಂದಿಷ್ಟು ಹೊತ್ತು ಟೀವಿ ವಾಚ್ ಮಾಡೋದು... ರಾತ್ರಿ ಒಂದು ಲೋಟ ಬಿಸಿ-ಬಿಸಿ ಹಾಲು ಕುಡ್ದು, ಸುಮಾರು ೧೧:೩೦ ಹೊತ್ತಿಗೆ ದಿಂಬು ಒರಗಿದಾ ಅಂದ್ರೆ... ಬೆಳಿಗ್ಗೆ ಎಂಟೊಂಬತ್ತು ಗಂಟೆ ಕಡಿಮೆ ಏಳಲ್ಲ... ಮತ್ತೆ ತಿರ್ಗಾ ಹಿಂದಿನ ದಿನದಂತೆ ನಿಯತ ಕಾರ್ಯಕ್ರಮದಲ್ಲೇ ದಿನ ಸಾಗತ್ತೆ. ಈ ನನ್ನ ನಿವೃತ್ತ ದಿನಚರಿ ನನ್ಗೇನೂ ಬೇಸ್ರ ಕೊಡ್ತಿಲ್ಲ. ಈ ಮಧ್ಯೆ, ನನ್ನ-ನನ್ನವಳ ನಡುವೆ, ಚಕ್ಕಂದ, ಜಗಳ, ಸರಸ-ಸಲ್ಲಾಪ, ಇತ್ಯಾದಿ ನಡೀತಾನೇ ಇರತ್ತೆ.

ಸಮಯ ನಮ್ಗೆ ಗೊತ್ತಿಲ್ಲದ್ಹಾಗೆ ಸರಿತಾ ಇರತ್ತೆ. ಅದನ್ನ ಮಾತ್ರ ನಮ್ಮ ಕೈಲಿ ನಿಲ್ಸೋಕಾಗಲ್ಲ ಅನ್ನಿ! ಯುನಿವರ್ಸಿಟೀಲಿ ಕೆಲ್ಸ ಮಾಡ್ತಿದ್ದಾಗ, ವೀಕ್ ಎಂಡ್ ಯಾವಾಗಪ್ಪಾ ಬರತ್ತೆ... ಅಂತ ಕತ್ತುನೀಡಿ ಕಾಯ್ತಿದ್ದೆ. ಆದ್ರೆ... ಈಗ ಆ ತಾಪತ್ರಯನೇ ಇಲ್ಲ... ಯಾಕೆಂದ್ರೆ... ನನ್ಮಟ್ಟಿಗೆ, ವಾರದ ಏಳು ದಿವ್ಸಾನೂ 'ವೀಕ್ ಎಂಡ್'! ಬೆಳಿಗ್ಗೆ ಎದ್ದು, ಒಂದೊಂದ್ಸಾರಿ... ಇವತ್ತು ಯಾವ ವಾರವಪ್ಪಾ... ಅಂತ ತಲೆ ಕೆರ್ಕೊಳ್ಬೇಕಾಗತ್ತೆ. ಅದ್ರಲ್ಲೇ ಒಂದು ಮಜಾ ಇದೆ! ಗೋಡೆ ಮೇಲೆ ಕ್ಯಾಲೆಂಡರ್ ನಾಮಕಾವಾಸ್ತೆಗೆ ತೂಗ್ಕೊಂಡಿರತ್ತೆ... ಅಷ್ಟೆ! ಎಲ್ಲಕ್ಕೂ ಮುಖ್ಯವಾಗಿ, ಬದುಕನ್ನ ವಿಶೇಷವಾಗಿ ನೋಡುವ ಒಂದು ದೃಷ್ಟಿಯನ್ನ, ಈ ನನ್ನ ನಿವೃತ್ತ ಜೀವನ ಕಾಣಿಕೆಯಾಗಿ ಕೊಟ್ಟಿದೆ... ಉರುಳಿಹೋದ ವರ್ಷಗಳಲ್ಲಿ ಅನುಭವಿಸಿದ ಸವಿಸ್ಮರಣೆಗಳ ನೆನಪುಗಳನ್ನ ಮೆಲುಕುವ ಅವಕಾಶವನ್ನ ನೀಡಿದೆ... ನನ್ನ ಸ್ನೇಹಿತರು ಹೇಳ್ತಾರೆ... 'You have rightfully earned this leisurely life...' ಅಂತ. ಇದ್ರೂ ಇರ್ಬಹುದು. ನನ್ನವಳು, ಮೊದ್ಲು ಮೊದ್ಲು, ನನ್ನನ್ನ 'ಸೋಂಬೇರಿ' ಅಂತ ಕರೀತಿದ್ರೂ... ಇತ್ಲಾಗಿ ನನ್ನ ಆ ಸೋಮಾರಿತನವನ್ನೂ, ಇನ್ನೆಲ್ಲಾ ನ್ಯೂನತೆಗಳನ್ನೂ, (ನಿರ್ವಾಹವಿಲ್ಲದೇ?) ಒಪ್ಕೊಂಡಿದ್ದಾಳೆ. ನನ್ ಜೊತೆ ನನ್ನವಳು ಹೊಂದ್ಕೊಂಡು... ನಾನೂ ಅವ್ಳ ಜೊತೆ ಹೊಂದ್ಕೊಂಡು... ಅದ್ಯಾವುದೋ ಒಂದು ತೃಪ್ತಿಕರ ಕ್ರಮದಲ್ಲಿ ಸಹಜೀವನನ ನಡ್ಸ್ಕೊಂಡು ಬರ್ತಿದ್ದೀವಿ. ನನಗೆ

ಅದ್ರಲ್ಲಿ ಯಾವ ರಿಗ್ರೆಟ್ಟೂ ಇಲ್ಲ! ಮತ್ತಿನ್ನೇನು ಬೇಕು ಹೇಳಿ, ನನ್ನ ಇಳಿ ವಯಸ್ಸಿನ, ಸಂಜೆಗಡಿಯ ಈ ಬದುಕಲ್ಲಿ?

ಕೊನೇಗೊಂದು ಡಿಸ್‌ಕ್ಲೈಮರ್: ಇಲ್ಲಿ 'ನನ್ನವಳು' ಅಂತ ಉಲ್ಲೇಖಿಸಿದವಳು ಖಂಡಿತ ನನ್ನವಳಲ್ಲ. ಹಾಗೂ, ಇಲ್ಲಿ ನಾನು ಅಂತ ಹೇಳ್ಕೊಂಡ 'ನಾನು' ಕೂಡ ನಾನಲ್ಲ. ಇಲ್ಲಿ ವಿವರಿಸಿದ ಸ್ವಾರಸ್ಯಕರ ಸಂಗತಿಗಳು ಕಾಲ್ಪನಿಕವಾಗಿದ್ದು, ಬೇರೆ ಯಾರಾದರೊಬ್ಬರ ಬದುಕಿನಲ್ಲಿ ನಡೆಯುವ ಸಂಭವವಿದ್ದರೂ ಇರಬಹುದು ಅಂತ ಒಪ್ಕೊಳ್ತೀನಿ. ಹಾಗೆಲ್ಲಾದರೂ ಅಲ್ಲಿ-ಇಲ್ಲಿ ಹೋಲಿಕೆ ಕಂಡುಬಂದಲ್ಲಿ ಅದು ತೀರ ಆಕಸ್ಮಿಕ - ಎಂದು ಈ ಮೂಲಕ ಡಿಕ್ಲೇರ್ ಮಾಡ್ತಿದ್ದೇನೆ. ಓದುಗರು ಇದನ್ನು ಗಮನಕ್ಕೆ ತಂದ್ಕೋತಾರಂತ ಭಾವಿಸ್ತಿದ್ದೀನಿ.

●

ಸೈಕಲ್ಲೇರಿ ಕೆಲಸಕೆ ಹೋಗುವ ಆನಂದ

–ಹಂ. ಕ. ಕೃಷ್ಣಪ್ರಿಯ

Commuter ಕೆಲಸಕ್ಕೆ ಹೋಗಿ ಬರಲೆಂದೆxpressway ಕಟ್ಟಿಟ್ಟಿಹರ್
Carಗಳ್ ಮಾರಿ, ಅವನ್ನಡೆಸಲೆಂದೆಲ್ಲೆಲ್ಲು gas ತಂದಿಟ್ಟಿಹರ್।
Expresswayಯಲಿ ಕಾದು ಕಾದಿರುತಿರಲ್ ACಯ ಹಾಕಿಟ್ಟಿಹರ್
ಇಂತೆಲ್ಲಾ ಅಣಿಮಾಡಿಯೋಡಿಸುವರೀ ವಾಣಿಜ್ಯದಾ ಚಕ್ರವಂ॥

Carಅಲ್ಲಾ ಕೆಲಸಕ್ಕೆ ಹೋಗುವುದನೇ ಬಿಟ್ಟಾಯ್ತು ವರ್ಷಾಂತರಂ
Cycleಏರಿಯೆ ನಾನು ಹೋಗಿ ಬರುವೆನ್ CaltrainG stationನಿಗೆ।
Trainಅಲ್ ನಾ ಕುಳಿತೋದುವೆನ್ ಬರೆಯುವೆನ್ composeಉವೆನ್ ಪದ್ಯಗಳ್
ಇಂತೀ ಯುಕ್ತಿವಿಶೇಷದಿಂದ ತೊರೆವೆನ್ commuteನ ಕಷ್ಟಂಗಳಂ॥

–ಕಪ್ಪಿನಿಯ*

ಸುಮಾರು ಒಂಬತ್ತು ವರ್ಷಗಳ ಕೆಳಗೆ ನಾನು ನನ್ನ ಕೆಲಸಕ್ಕೆ ಹೋಗುವ ರೀತಿಯನ್ನು ಬದಲಾಯಿಸಿಕೊಂಡೆ. ಮೊದಲು, ನಾನು ನನ್ನ ಇತರ ಸಹಕರ್ಮಾಫಲಾನುಭವಿಗಳಂತೆ ಕಾರಿನಲ್ಲಿ ಕುಳಿತು,

---

* ಕಪಿಸಯ್ಯ ಅಲ್ಲ; 'ಕಪ್ಪಿನಿಯ'ನ ಈ ಶಾರ್ದೂಲವಿಕ್ರೀಡಿತಗಳನ್ನು ಇಲ್ಲಿ ಅಳವಡಿಸಿಕೊಂಡ ನಂತರ ಗಮನಿಸಿದ್ದು –ಅವುಗಳ ಕೊನೆಯ ಹಿಂದಿನ ಸಾಲಿನ compose ಎಂಬ ಒಂದು ಪದ ಬಿಟ್ಟರೆ ಮಿಕ್ಕ ಇಂಗ್ಲಿಷ್ ಪದಗಳು ನಮ್ಮ ಈಗಿನ ಕನ್ನಡದಲ್ಲಿ ಕನ್ನಡದಂತೆಯೇ ಕಾಣುತ್ತವೇನೋ?!

ಇಪ್ಪತ್ತು ಮೈಲಿ ಉದ್ದದ ಫ್ರೀವೇಯಲ್ಲಿ ನಿಧಾನವಾಗಿ ಚಲಿಸುತ್ತಿದ್ದ ವಾಹನಗಳ ಮಧ್ಯೆ ನಿಲ್ಲುತ್ತಾ, ಮುಂದೆ ಹೋಗುತ್ತಾ, ಟ್ರಾಫಿಕ್ಕನ್ನು, ಅದರಲ್ಲಿ ಕಾರು ಓಡಿಸಬೇಕಾದ ನನ್ನ ಹಣೆಬರಹವನ್ನು ಶಪಿಸುತ್ತಾ, ಕೆಲಸಕ್ಕೆ ಹೋಗುತ್ತಾ ಒಂದು ಗಂಟೆ, ಕೆಲಸದಿಂದ ಬರುತ್ತಾ ಇನ್ನೊಂದು ಗಂಟೆ, ಕಳೆಯುತ್ತಿದ್ದೆ. ಈಗ ಮನೆಯಿಂದ ನಾಲ್ಕು ಮೈಲಿ ದೂರದ ಸನ್ನಿವೇಲ್ ರೈಲು ನಿಲ್ದಾಣಕ್ಕೆ ಸೈಕಲ್ ಹೊಡೆದುಕೊಂಡು, ನಂತರ ಸೈಕಲ್ಲನ್ನು ಸೈಕಲ್ ಸವಾರರಿಗಾಗಿಯೇ ಸೈಕಲ್ಲು ಏರಿಸಿಕೊಂಡು ಹೋಗಲು ಕಾದಿರಿಸಿರುವ ಬೋಗಿಯಲ್ಲಿ ಎತ್ತಿಟ್ಟುಕೊಂಡು, ನನ್ನ ಕೆಲಸದ ಜಾಗದ ಹತ್ತಿರ ಇರುವ ಬೆಲ್ಮಾಂಟ್ ನಿಲ್ದಾಣದಲ್ಲಿ ಇಳಿದು, ಇನ್ನೊಂದು ಒಂದೂಕಾಲು ಮೈಲಿ ಸೈಕಲ್ ತುಳಿದು ಕೆಲಸ ಸೇರುತ್ತೇನೆ. ಸಾಯಂಕಾಲ ಇದೇ ರೀತಿ, ಸೈಕಲ್, ರೈಲು ಮತ್ತೆ ಸೈಕಲ್ ಏರಿ ಮನೆ ಸೇರುತ್ತೇನೆ. ನಾನಿರುವ ಕ್ಯಾಲಿಫೋರ್ನಿಯದ ಕೊಲ್ಲಿ ಪ್ರದೇಶದ ಸೈಕಲ್ ಸವಾರಿ ಮಾಡಲು ಅನುಕೂಲವಾದ ಹವೆ, ಅನೇಕ ಕಡೆ ಸವಾರರಿಗೇ ಕಾದಿರಿಸಿರುವ ರಸ್ತೆಯ ಅಂಚಿನ ಭಾಗ, ಸೈಕಲ್ಲು ಏರಿಸಿಕೊಂಡು ಹೋಗಲು ರೈಲಿನಲ್ಲಿ ಮಾಡಿಕೊಟ್ಟಿರುವ ಅನುಕೂಲ ಇವೆಲ್ಲಾ ಕಾರಣಗಳಿಂದ ಈ ಅಭ್ಯಾಸ ಕಾರಿನಲ್ಲಿ ಕೆಲಸಕ್ಕೆ ಹೋಗುವುದಕ್ಕಿಂತ ಹಿತಕರವಾಗಿದೆ. ಪೀಕ್ ಅವರಿನಲ್ಲಿ ಕಾರಿನಲ್ಲಿ ಹೋದರೂ ಅಷ್ಟೆ, ಸೈಕಲ್ಲಿನ ಮೇಲೆ ಹೋದರೂ ಅಷ್ಟೆ! ಸುಮಾರು ಅಷ್ಟೇ ಹೊತ್ತಾಗುತ್ತದೆ.

ಈಚೆಗೆ ಪರಿಸರ ಮಾಲಿನ್ಯ ಕಡಿಮೆ ಮಾಡಬೇಕು, ಆರೋಗ್ಯಕ್ಕಾಗಿ ವ್ಯಾಯಾಮದ ಅಭ್ಯಾಸ ಇಟ್ಟುಕೊಂಡಿರಬೇಕು, ಎಂಬ ಘನೋದ್ದೇಶಗಳಿಂದ ನೀನು ಸೈಕಲ್ಲಿನ ಮೇಲೆ ಕೆಲಸಕ್ಕೆ ಹೋಗುತ್ತೀಯಾ ಎಂದು ಕೆಲವರು ಕೇಳಿದ್ದಾರೆ. ಅವರಿಗೆ, 'ನನಗೆ ಅವೆಲ್ಲಾ ಏನೂ ಇಲ್ಲ. ಸೈಕಲ್ ತುಳಿಯುವುದರಿಂದ ಉಂಟಾಗುವ ಆನಂದ ಒಂದು, ಕಾರು ಓಡಿಸದೆ ಇರುವುದರಿಂದ ಆಗುವ ಆನಂದ ಇನ್ನೊಂದು; ಇವೆರಡೇ ಕಾರಣಕ್ಕಾಗಿ ಸೈಕಲ್ಲಿನ ಮೇಲೆ ಕೆಲಸಕ್ಕೆ ಹೋಗುತ್ತೇನೆ' ಎಂದು ಹೇಳುತ್ತೇನೆ.

ಆದರೆ ಆರಂಭದಲ್ಲಿ ಇದು ನನ್ನ ಜೀವನಕ್ರಮದ ಮುಖ್ಯ ಬದಲಾವಣೆಯಾದ್ದರಿಂದ, ಇದರ ಬಗ್ಗೆ ಸಾಕಷ್ಟು ಯೋಚನೆ ಮಾಡಬೇಕಾಯಿತು. ಸ್ಯಾನ್ ಫ್ರಾನ್ಸಿಸ್ಕೋ ಕೊಲ್ಲಿ ಪ್ರದೇಶದಲ್ಲೂ ಅಮೆರಿಕದ ಇತರ ದೊಡ್ಡ ಊರುಗಳಂತೆ (ನ್ಯೂಯಾರ್ಕ್ ನಗರ ಪ್ರದೇಶವನ್ನು ಬಿಟ್ಟು) ಸಾಮಾನ್ಯವಾಗಿ ಜನ ಕೆಲಸಕ್ಕೆ ಹೋಗುವುದು ಕಾರು ನಡೆಸಿಕೊಂಡು. ಇಲ್ಲಿನ ಊರುಗಳನ್ನು ಕಟ್ಟಿರುವುದೇ ಹೀಗೆ- ಜನಗಳಿಗೆ ಕಾರು ಇಟ್ಟುಕೊಂಡು ಕೆಲಸಕ್ಕೆ ಹೋಗುವ ಅನುಕೂಲ ಇದೆ, ಅದಕ್ಕಾಗಿ ಬೇಕಾದ ರಸ್ತೆಗಳ ಅನುಕೂಲ ಇದೆ ಎಂಬ ಎಣಿಕೆ ಇಟ್ಟುಕೊಂಡು. ನಾನು ಉದ್ದೇಶಿಸಿದ ಬದಲಾವಣೆ ಈ ರೂಢಿಗೆ ಬೇರೆ ಆದದ್ದರಿಂದ, ಇದು ನನ್ನ ಜೀವನಕ್ರಮದ ಮೇಲೆ, ನನ್ನ ಸಂಸಾರದ ಜೀವನಕ್ರಮದ ಮೇಲೆ ಯಾವ ಪರಿಣಾಮ ಉಂಟುಮಾಡುತ್ತದೆ ಎನ್ನುವುದನ್ನು ಗಂಭೀರವಾಗಿ ಪರಿಶೀಲಿಸಬೇಕಾಯಿತು. ಹೊಸ ಬದಲಾವಣೆಗೆ ಪರವಾಗಿ, ಒಟ್ಟಿನಲ್ಲಿ ಆಗುವ ಹಣದ ಉಳಿತಾಯ, ರೈಲಿನಲ್ಲಿ ಆರಾಮವಾಗಿ

ಕುಳಿತು ಮಾಡಬಹುದಾದ ಕೆಲಸಗಳು (ಇವುಗಳಲ್ಲಿ ಮುಖ್ಯವಾದದ್ದು ಕಾಲು ನೀಡಿ ತೂಕಡಿಸುವುದೂ ಒಂದು ಎನ್ನುವುದನ್ನು ನಾನು ಮರೆಯಲಿಲ್ಲ), ಸೈಕಲ್ ತುಳಿಯುವುದರಿಂದ ದೊರಕುವ ದೈನಂದಿನ ವ್ಯಾಯಾಮ, ರೈಲು ಹಿಡಿಯಬೇಕಾದದ್ದರಿಂದ ಕೆಲಸಕ್ಕೆ ಹೋಗುವ ಬರುವ ಹೊತ್ತು ಮೀರದಿರುವಂತೆ ತಾನಾಗಿಯೇ ನಿಯಂತ್ರಣವಾಗುವುದು ಇವನ್ನೆಲ್ಲಾ ಗಮನಿಸಿದೆ. ವಿರುದ್ಧವಾಗಿ ಗಮನಿಸಬೇಕಾದ ವಿಷಯಗಳೂ ಇದ್ದವು. ಇದರಿಂದ ಕಾರಿನಲ್ಲಿ ಇಷ್ಟವಾದಾಗ ಕುಳಿತು ಹೊರಡುವ ಅನುಕೂಲ ಇರುವುದಿಲ್ಲ. ಇದ್ದಕ್ಕಿದ್ದಂತೆ ಮಕ್ಕಳ ಶಾಲೆಯಿಂದ ಫೋನ್ ಬಂದು, 'ನಿಮ್ಮ ಮಗುವಿಗೆ ಜ್ವರ, ತಕ್ಷಣ ಬಂದು ವೈದ್ಯರ ಹತ್ತಿರ ಕರೆದುಕೊಂಡು ಹೋಗಿ' ಎಂದು ಹೇಳಿದರೆ ಏನು ಮಾಡುವುದು? ಕೆಲಸಕ್ಕೆ ಹೋಗುವ ದಾರಿಯಲ್ಲಿ ಮಾಡಿಕೊಂಡು ಹೋಗಬಹುದಾದ ಅದು ಇದು ಕೆಲಸಗಳನ್ನು ಹೇಗೆ ಮಾಡುವುದು? ಅವುಗಳಿಗಾಗಿಯೇ ವಾರಾಂತ್ಯ ಬೇರೆಯಾಗಿ ಓಡಾಡಬೇಕಾಗುತ್ತದೆಯೇ? ನಾನು ಹೀಗೆ ಮಾಡುವುದರಿಂದ ಈಗಾಗಲೇ ಮನೆಯ ಹೊರಗೆ ಒಳಗೆ ದುಡಿಯುತ್ತಿರುವ ನನ್ನವಳ ಮೇಲೆ ಆಗುವ ಪರಿಣಾಮ ಏನು? ಇತ್ಯಾದಿ, ಇತ್ಯಾದಿ.

ಈ ಮೀನಮೇಷ ನಡೆಯುತ್ತಿರುವಾಗ, ಕೆಲಸಕ್ಕಾಗಿ ರೈಲು ಪ್ರಯಾಣವನ್ನು ಹೆಚ್ಚು ಗಂಭೀರವಾಗಿ ಗಣಿಸುವುದಕ್ಕೆ ಪ್ರೇರಿಸುವ ಒಂದೆರಡು ಘಟನೆಗಳು ನಡೆದವು. ಆ ವರ್ಷ ಬೇಸಗೆ ಬಿಸಿಲು ಹೆಚ್ಚಾಗಿತ್ತು. ಆಗಾಗ ಪವರ್ ಕಟ್ಟುಗಳು ಆಗುತ್ತಿದ್ದವು. ಪೆಟ್ರೋಲಿನ ಬೆಲೆ ಇದ್ದಕ್ಕಿದ್ದಂತೆ ಹೆಚ್ಚಾಯಿತು. ರೈಲಿನ ಟಿಕೆಟ್ಟಿನ ದರ ಬದಲಾಗದೆ ಹಾಗೇ ಇತ್ತು. ಜೊತೆಗೆ ನನ್ನ ಯೋಚನಾಸರಣಿ ಹೇಗೋ ಕ್ಯಾಲ್ಟ್ರೇನಿನವರಿಗೆ ತಿಳಿದು, ನನಗೆ ರೈಲು ಪ್ರಯಾಣ ಹೇಗಿರುತ್ತದೆ ತಿಳಿದುಕೊಳ್ಳಲು ಅನುಕೂಲವಾಗಲು ಆರು ಬಿಟ್ಟಿ ಟಿಕೆಟ್ಟು ಕಳಿಸಿದರು. ಅವನ್ನು ಬಳಸಿ ಮೂರು ದಿನ ಕೆಲಸಕ್ಕೆ ಹೋಗಿ ಬಂದೆ. ಈ ರೀತಿ ಹೋಗಿಬರುವುದು ಸಾಧ್ಯ ಎಂದು ಮನದಟ್ಟಾಯಿತು. ಮೊದಲು ಅಳುಕಿನಿಂದಲೇ ಹತ್ತುಹತ್ತು ಟಿಕೆಟ್ಟುಗಳಿದ್ದ ಪಾಸು ಕೊಂಡುಕೊಳ್ಳಲು ಆರಂಭಿಸಿದೆ. ಕೆಲವು ದಿನಗಳ ನಂತರ, ತಿಂಗಳ ಪಾಸು ಕೊಳ್ಳುವ ಅಭ್ಯಾಸ ಮಾಡಿಕೊಂಡೆ.

ಈಗ ಈ ರೀತಿ ಕೆಲಸಕ್ಕೆ ಹೋಗುವುದರಲ್ಲಿ ಹಳಬನಾಗಿದ್ದೇನೆ. ಹಿಂತಿರುಗಿ ನೋಡಿದರೆ ನಾನು ಮೊದಲೇ ಯೋಚಿಸಿದ್ದ ಅನುಕೂಲಗಳೆಲ್ಲಾ ಅಂದುಕೊಂಡಂತೆಯೇ ಸಿದ್ಧಿಸಿವೆ. ಅನಾನುಕೂಲಗಳೂ ಆಗಾಗ ತೋರಿವೆ. ನನ್ನ ಕಾರಿನ ಒಡಾಮೀಟರು ಹತ್ತಾರು ಸಾವಿರ ಮೈಲಿ ಕಡಮೆ ತೋರಿಸುತ್ತಿದೆ. ಅದರ ಪರಿಣಾಮವಾಗಿ ಕಾರುಗಳ ಸ್ವರ್ಗಕ್ಕೆ ಹೋಗದೆ (ನಮಗೆ ಕೊಟ್ಟಿರುವ ಸೇವೆಯ ಸತ್ಕರ್ಮಫಲವಾಗಿ ಅದು ಸ್ವರ್ಗಕ್ಕಲ್ಲದೆ ನರಕಕ್ಕೆ ಹೋದೀತೇ?), ಇನ್ನೂ ನಮ್ಮ ಮನೆಯ ಹೊರಗಡೆ ಸ್ಥಾಣುವಾಗಿದೆ. ರೈಲಿನಲ್ಲಿ ಹೋಗುವುದರಿಂದ ಸಾಕಷ್ಟು ಓದು ಬರಹ ನಡೆದಿದೆ. ಉದಾಹರಣೆಗೆ, ಈ ಪ್ರಬಂಧದ ಮೊದಲ ಕರಡುಗಳು ರೈಲಿನಲ್ಲೇ ಕುಳಿತು ಬರೆದವು. ದಿನವೂ ಸೈಕಲ್ ಸವಾರಿ ಕೊಡುವ ವ್ಯಾಯಾಮದ ಫಲದಿಂದ ದೇಹ ವಯಸ್ಸಿಗೆ ತಕ್ಕಷ್ಟು ದೃಢವಾಗಿದೆ. ಮೈ ತೂಕ ಹತೋಟಿಯಲ್ಲಿದೆ. ಇಷ್ಟು ಹೊತ್ತಿಗೆ ಮನೆಗೆ

ಕಡ್ಡಾಯವಾಗಿ ಹೋಗಬೇಕು ಎಂದಿರುವುದರಿಂದ ಆಫೀಸಿನಲ್ಲಿರುವಾಗ ಕೆಲಸಕ್ಕೆ ಏಕಾಗ್ರತೆ ಬಂದಿದೆ. ಆಗಾಗ ಆಫೀಸಿನಲ್ಲಿ ಕಾರು ಇದ್ದು ಮನೆಗೆ ತಕ್ಷಣ ಹೋಗಲು ಅನುಕೂಲವಾಗಿದ್ದಿದ್ದರೆ ಉಪಯೋಗವಾಗುತ್ತಿತ್ತು ಎನ್ನುವ ಅನಿಸಿಕೆಯೇನೋ ಬಂದಿದೆ. ಆದರೆ ಹಾಗೆ ಅನ್ನಿಸಿರುವುದು ಬಹಳ ಅಪರೂಪವಾಗಿ. ಇದಕ್ಕೆ ತುರ್ತು ಸನ್ನಿವೇಶಗಳಲ್ಲಿ ತಕ್ಷಣ ಓಗೊಡಲು ಬಹುಪಾಲು ಸಿದ್ಧಳಾಗಿರಬೇಕಾಗಿದ್ದ ನನ್ನವಳಿಗೆ ಕೃತಜ್ಞನಾಗಿರಬೇಕು.

ಇದಲ್ಲದೆ ನಾನು ಮೊದಲಿನಿಂದ ನಿರೀಕ್ಷಿಸದೆ ಇದ್ದ ಕೆಲವು ಲಾಭಗಳೂ ಉಂಟಾಗಿವೆ. ಒಂದು ರೀತಿ ನೋಡಿದರೆ ಇವುಗಳಿಗೆ ಬೆಲೆ ಕಟ್ಟುವುದು ಕಷ್ಟ. ಏಕೆಂದರೆ, ಇವುಗಳ ಮೌಲ್ಯ ನನ್ನ ಅಭಿರುಚಿಗಳನ್ನು, ನನ್ನ ಪ್ರಯಾಣದ ರೀತಿಯನ್ನು ಅವಲಂಬಿಸಿವೆ. ಆದರೆ ನನಗೇನೋ ಇವು ಬಹಳ ಬೇಕಾದ ಲಾಭಗಳು. ನನ್ನ ಹೊಸ ದಿನಚರಿ, ನನ್ನನ್ನು ಪ್ರತಿ ದಿನವೂ ಅದೇ ಹೊತ್ತಿಗೆ ಮನೆಯಾಚೆ, ಕಟ್ಟಡಗಳ ಹೊರಗೆ, ಆಕಾಶದ ಕೆಳಗೆ ಇರುವಂತೆ ಮಾಡಿತು. ಇದರಿಂದ ಆಕಾಶದಲ್ಲಿ ಚಂದ್ರನ ಮಾಸಿಕ ಬದಲಾವಣೆಗಳನ್ನು, ಗ್ರಹ ನಕ್ಷತ್ರಗಳ ಜಾಗಗಳ ಬದಲಾವಣೆಗಳನ್ನು, ನನ್ನ ಹದಿಹರೆಯದ ವಯಸ್ಸಿನ ಖಗೋಳಶಾಸ್ತ್ರದ ಪ್ರಾಯೋಗಿಕ ಯೋಜನೆಯ ನಂತರ ಮೊದಲನೆಯ ಸಲ ಗಮನಿಸಲು ಆರಂಭಿಸಿದೆ. ಪಂಚಾಂಗದಲ್ಲಿ ಹೇಳಿದಂತೆಯೇ ನವರಾತ್ರಿಯ ದಿನಗಳಲ್ಲಿ, ದೀಪಾವಳಿಗೆ ಮೊದಲಿನ ದಿನಗಳಲ್ಲಿ, ಚಂದ್ರ ತನ್ನ ಆಕಾರ, ಗಾತ್ರ, ಜಾಗಗಳನ್ನು ಬದಲಾಯಿಸಿಕೊಂಡು, ಪಂಚಾಂಗಗಳನ್ನು ರಚಿಸುವ ದಿನಗಳಿಗೂ ಮೊದಲೇ ಹೇಗೋ ಹಾಗೆಯೇ ಶುಕ್ರನ ಕಡೆಗೋ, ಗುರುವಿನಿಂದ ದೂರವೋ ಪ್ರಯಾಣ ಮಾಡುತ್ತಿದ್ದದ್ದು ಗೋಚರವಾಯಿತು. ಆಗಾಗ ಉಲ್ಕೆಗಳೂ ಕಾಮನ ಬಿಲ್ಲುಗಳೂ ಕಾರಿನ ಮೇಲ್ಛಾಪಿನ ತಡೆಯಿಲ್ಲದೆ ಆಕಾಶದಲ್ಲಿ ಕಂಗೊಳಿಸಿದವು. ರಸ್ತೆಯ ಬದಿಯ ಘಮಗಳು ಮೂಗಿಗೆ ಹೊಡೆಯಲು ಆರಂಭಿಸಿದವು. ಕಣ್ಣು ಮುಚ್ಚಿಕೊಂಡೇ ಸೈಕಲ್ ತುಳಿದಿದ್ದರೂ (ಈ ಪ್ರಯತ್ನ ಮಾಡುವ ವಯಸ್ಸು ಈಗ ಮೀರಿದೆ ಎನ್ನುವುದು ತಿಳಿದಿದೆ), ಗೋಣಿಚೀಲದ, ಬೇಳೆಯ ವಿಶಿಷ್ಟ ವಾಸನೆಯಿಂದ ದಾರಿಯಲ್ಲಿದ್ದ ಭಾರತೀಯ ದಿನಸಿ ಅಂಗಡಿಯ ಹತ್ತಿರ ಬಂದಿದ್ದೇನೆ ಎಂದು ತಿಳಿಯುತ್ತಿತ್ತು. ಫ್ರೆಂಚ್ ಫ್ರೈಸ್ ಮತ್ತು ಹ್ಯಾಮ್‌ಬರ್ಗರುಗಳ ವಾಸನೆಯಿಂದ ಮನೆಯ ಹತ್ತಿರದ ಮೆಕ್‌ಡಾನಾಲ್ಡ್ ರೆಸ್ಟೋರೆಂಟಿನ ಹತ್ತಿರ ಬಂದಿದ್ದೇನೆ, ಇನ್ನೇನು ಎರಡು ನಿಮಿಷದಲ್ಲಿ ಮನೆ ಸೇರುತ್ತೇನೆ ಎಂದು ಗೊತ್ತಾಗುತ್ತಿತ್ತು.

ರೈಲು ಬೇರೆ ಬೇರೆ ನಿಲ್ದಾಣಗಳಲ್ಲಿ ಬೇರೆ ಬೇರೆ ರೀತಿ ಪ್ಲಾಟ್‌ಫಾರಮ್ಮಿಗೆ ಬರುವ ವೈವಿಧ್ಯ ಈ ರೀತಿ ಪ್ರತಿ ದಿನವೂ ಪ್ರಯಾಣ ಮಾಡುವವರಿಗೆ ಮಾತ್ರ ಗೊತ್ತಾಗುತ್ತದೆ. ಕೆಲಸಕ್ಕೆ ಹೋಗುವಾಗ ಹತ್ತುತ್ತಿದ್ದ ನಿಲ್ದಾಣವಾದ ಸನ್ನಿವೇಲಿನಲ್ಲಿ ಬಹಳ ದೂರದಿಂದಲೇ ರೈಲು ಬರುತ್ತಿರುವುದು, ಅದರ ಮುಂದಿನ ದೀಪದ ಹೊಳಪು ಮೊದಲು ಮಂದವಾಗಿದ್ದು, ಬರುಬರುತ್ತಾ ಪ್ರಕಾಶಮಾನವಾಗುವುದು ಕಾಣುತ್ತದೆ. ಅದೇ ಹಿಂತಿರುಗುವಾಗ, ಬೆಲ್ಮಾಂಟ್ ನಿಲ್ದಾಣದಲ್ಲಿ, ರೈಲುದಾರಿಯ ತಿರುವಿನ ಹಿಂದಿನಿಂದ ರೈಲು ಮೆತ್ತಗೆ ಶಬ್ದವಿಲ್ಲದೆ ಗೋಚರಿಸಿ,

ಹತ್ತಿರ ಬರುಬರುತ್ತಾ ಆರ್ಭಟ ಹೆಚ್ಚಾಗಿ, ಬ್ರೇಕಿನ, ಕಿವಿಗೆ ಹಿಂಸೆಯಾಗುವ ಕರ್ಕಶ ಶಬ್ದದೊಡನೆ, ಪ್ಯಾಡುಗಳು ಸುಟ್ಟ ವಾಸನೆಯೊಡನೆ ಬಂದು ನಿಲ್ಲುತ್ತದೆ.

ಜನಸಂಪರ್ಕ ಸಾಮಾನ್ಯವಾಗಿ ಕೆಲಸದಲ್ಲಿ ನೋಡುವ ಸಹೋದ್ಯೋಗಿಗಳಿಗೆ, ವಾರಾಂತ್ಯ ನೋಡುವ ಪರಿಮಿತ ಸ್ನೇಹಿತವರ್ಗಕ್ಕೆ ಸೀಮಿತವಾಗಿರುವ ಇಲ್ಲಿನ ಜೀವನದಲ್ಲಿ, ನಾನು ರೈಲಿನಲ್ಲಿ ಆಗಾಗ ನೋಡುವ ಸಹಪ್ರಯಾಣಿಕರ ವೃಂದ ಸಾಕಷ್ಟು ಕುತೂಹಲಕಾರಿ ಯಾದದ್ದು. ಯಾರೇ ಮನುಷ್ಯರಾದರೂ, ಮೇಲ್ನೋಟಕ್ಕೆ ತಮ್ಮ ಸುತ್ತಮುತ್ತಲ ಜನರಂತೆಯೇ ಕಂಡರೂ, ಸ್ವಲ್ಪ ಮಾತುಕತೆ ನಡೆದರೆ, ಅವರದೇ ಆದ ವೈಶಿಷ್ಟ್ಯಗಳನ್ನು ತೋರುತ್ತಾರೆ. ನನ್ನ ಸಹಪ್ರಯಾಣಿಕರೂ ಇದಕ್ಕೆ ಹೊರತಲ್ಲ. ಮದರಾಸಿನ ಕಡೆಯ ಒಬ್ಬ ಕ್ರೈಸ್ತ ಸ್ನೇಹಿತ ಬಯೋಕೆಮಿಸ್ಟ್ರಿಯಲ್ಲೋ, ಮಾಲಿಕ್ಯುಲರ್ ಬಯಾಲಜಿಯಲ್ಲೋ ಕೆಲಸ ಮಾಡುವವನು, ಎಲ್ಲರ ಜೊತೆಯೂ ನಯವಾಗಿ ಮಾತನಾಡುತ್ತಾನೆ. ನಾನು ತಮಿಳು ಬೈಬಲ್ಲಿನ ಬಗ್ಗೆ ಆಸಕ್ತಿ ತೋರಿದ ಮಾರನೆಯ ದಿನವೇ ಅದರ ಒಂದು ಪ್ರತಿ ತಂದು ಕೊಡುತ್ತಾನೆ. ಅವನ ಗಾತ್ರಕ್ಕೆ ತೀರ ಚಿಕ್ಕದಾದ ಸೈಕಲ್ ಹೊಡೆಯುವುದನ್ನು ನೋಡಿದ ಒಬ್ಬಾಕೆ ತನ್ನ ಹತ್ತಿರ ಇದ್ದ ಹಳೆಯ, ಆದರೆ ಅವನ ಸೈಕಲ್ಲಿಗಿಂತ ಸ್ವಲ್ಪ ದೊಡ್ಡದಾದ ಸೈಕಲ್ಲನ್ನು ಅವನಿಗೆ ದಾನವಾಗಿ ಕೊಡುತ್ತಾಳೆ. ಅವಳು, ಅವಳ ಗಂಡ ತಮ್ಮ ಮನೆಯಲ್ಲಿ ಬೆಳೆಯುವ ತರಕಾರಿ, ನಮ್ಮ ಮನೆಯ ತರಕಾರಿ ಗಿಡಗಳಿಗೆ ಹೋಲಿಸಿ ನೋಡಿದರೆ ಹೆಚ್ಚು ಉತ್ಪತ್ತಿ ಕೊಡುತ್ತವೆಯೇ, ಇಲ್ಲವೇ ಎಂದು ಚರ್ಚಿಸುತ್ತಾರೆ. ಮಿನೆಸೋಟದಿಂದ ಇಲ್ಲಿ ಬಂದು ನೆಲಸಿರುವ ಒಬ್ಬಾತ ಹೆಮ್ಮೆಯಿಂದ ಅಲ್ಲಿನ ಗವರ್ನರ್- ಜೆಸಿ ವೆನ್ಚೂರ, ಕುಸ್ತಿ ಆಡುವ ಕಸುಬಿನಿಂದ ನಿವೃತ್ತನಾದವನು- ಬಗ್ಗೆ ಹೇಳಿಕೊಳ್ಳುತ್ತಾನೆ. ಒಬ್ಬ ಕಂಡಕ್ಟರ್ ಟಿಕೆಟ್ಟು ಪರಿಶೀಲಿಸುವ ಕೆಲಸದ ನಡುವೆ ಬಿಡುವು ಮಾಡಿಕೊಂಡು, ಅವನು ಅದೇ ರೈಲಿನಲ್ಲಿ ಓಡಾಡುವ ಭಾರತೀಯ ಯುವತಿಯೊಬ್ಬಳಿಗೆ ಮಾರುಹೋಗಿರುವುದಾಗಿ ಹೇಳಿ ಅವಳನ್ನು ಹೇಗೆ ಪರಿಚಯಿಸಿಕೊಳ್ಳಲಿ, ಹೇಗೆ ಡೇಟ್ ಮಾಡಲು ಒಪ್ಪಿಸಲಿ ಎಂದು ಕೇಳುತ್ತಾನೆ. ನನಗೆ ಈ ವಿಷಯದಲ್ಲಿ ಈಚೆಗೆ ಅಷ್ಟು ಪರಿಶ್ರಮ ಇಲ್ಲ ಎಂದು ನಾನು ಹೇಳಬೇಕಾಗುತ್ತದೆ. ಆಗಾಗ ಒಂದು ಕಂದು ಕಾಗದದ ಪ್ಯಾಕೆಟ್ಟಿನಲ್ಲಿ ಎಂಥದೋ ಬಾಟ್ಲಿ ಇಟ್ಟುಕೊಂಡು ಅದರಲ್ಲಿನ ಪೇಯವನ್ನು ಆಗಾಗ ಹೀರುತ್ತಾ, ಅಪರಿಚಿತರೊಡನೆ ಸಲೀಸಾಗಿ ಮಾತು ಬೆಳೆಸುವ ಪ್ರಯತ್ನ ಮಾಡುವ ಪ್ರಯಾಣಿಕರು ಕಾಣುತ್ತಾರೆ.

ಇವೆಲ್ಲಾ ಅಲ್ಲದೆ, ದಿನವೂ ಸೈಕಲ್ ತುಳಿಯುವ ಅಭ್ಯಾಸ, ನನಗೆ ವಾರಾಂತ್ಯ ಇಲ್ಲಿನ ಸುತ್ತಮುತ್ತಲ ಊರು, ಬೆಟ್ಟ, ಕಾಡು ನೋಡಲು ಹೋಗುವ ಅಭ್ಯಾಸಕ್ಕೆ, ಅದನ್ನು ಅತಿ ಶ್ರಮ ಮಾಡಿಕೊಳ್ಳದೆ ಸಾಧಿಸುವುದಕ್ಕೆ ಅನುವುಮಾಡಿಕೊಟ್ಟಿತು. ನಾನು ಇರುವ ಜಾಗ ಸಿಲಿಕಾನ್ ಕಣಿವೆ, ನಗರ ಪ್ರದೇಶವಾದರೂ, ಅದರ ಹೆಸರಿನಿಂದಲೇ ಎರಡು ಬೆಟ್ಟದ ಸಾಲಿನ ನಡುವಣ ಪ್ರದೇಶ ಎಂದು ತಿಳಿಯುತ್ತದೆ ತಾನೆ. ಮನೆಯಿಂದ ಒಂದು ನಾಲ್ಕು

ಮೈಲಿ ಪಶ್ಚಿಮಕ್ಕೆ ಹೋದರೆ ವರ್ಷಪೂರ್ತಿ ಹಸಿರಾಗಿರುವ ಮರಗಳಿಂದ ತುಂಬಿದ ಗುಡ್ಡಗಾಡು ಪ್ರದೇಶ ಸಿಕ್ಕುತ್ತದೆ. ಅಲ್ಲಿ ಮೊಲ, ಜಿಂಕೆ, ಟರ್ಕಿ ಕೋಳಿ, ಕಯೋಟಿ, ಬಾಬ್‌ಕ್ಯಾಟುಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ನೋಡಬಹುದು. ಅದೃಷ್ಟವಿದ್ದರೆ ಪೂಮ (ಇವನ್ನು ಮೌಂಟನ್ ಲಯನ್ ಎಂದೂ ಕರೆಯುತ್ತಾರೆ) ಎಂಬ ದೊಡ್ಡ ಹುಲಿಸಿಂಹಗಳ ಜಾತಿಗೆ ಸೇರಿದ ಪ್ರಾಣಿಯನ್ನೂ ನೋಡಬಹುದು. ದುರದೃಷ್ಟವಿಲ್ಲದಿದ್ದರೆ, ಹಿಂತಿರುಗಿ, ನೋಡಿದ್ದನ್ನು ಇತರರಿಗೂ ಹೇಳಬಹುದು, ಹೇಳಿದ್ದೇನೆ. ಅಲ್ಲಿ ಮಟಮಟ ಮಧ್ಯಾಹ್ನ ಬೆಟ್ಟದ ಮೇಲೆ ಮೋಡವಿಲ್ಲದ ಆಕಾಶದಲ್ಲಿ, ಸುಡುವ ಬಿಸಿಲಿನಲ್ಲಿ, ಒಂಟಿಯಾಗಿ ದೂರದಲ್ಲಿ ಒಂದು ಹದ್ದು, ಹತ್ತಿರ ನೆಲದ ಮೇಲೆ ಓಡಿಹೋಗುವ ಹಲ್ಲಿ ಇರುವ ನಿಶ್ಚಲ ಪ್ರಪಂಚದಲ್ಲಿ ನಿಶ್ಚಲವಾಗಿರಬಹುದು.

ಮನೆಯಿಂದ ಒಂದಾರು ಮೈಲಿ ಉತ್ತರಕ್ಕೆ ಹೋದರೆ ಸ್ಯಾನ್ ಫ್ರಾನ್ಸಿಸ್ಕೋ ಕೊಲ್ಲಿಯ ದಡ ಸೇರಬಹುದು. ಅಲ್ಲಿನ ಸೈಕಲ್ ಹಾದಿಗಳಲ್ಲಿ ಸೈಕಲ್ ತುಳಿಯುತ್ತಾ, ಸಮುದ್ರದ ದಡದ ವಿಶಿಷ್ಟ ಘಮ (ಈ ವಾಸನೆ ಹಿಡಿಸದೆ ಇದ್ದವರಿಗೆ ಅದು ನಾತ ಆಗಬಹುದು) ಅನುಭವಿಸಬಹುದು. ಇತರರು ಪ್ರಾಣಿಸಂಗ್ರಹಾಲಯಗಳಲ್ಲಿ, ಪಕ್ಷಿಧಾಮಗಳಲ್ಲಿ ಮಾತ್ರ ನೋಡಬಹುದಾದ ಕೊಕ್ಕರೆ, ಪೆಲಿಕನ್, ಕಾರ್ಮೊರಾಂಟ್, ಕ್ಯಾನಡ ಗೂಸ್ ಮೊದಲಾದ ಜಲಪಕ್ಷಿಗಳನ್ನು ನೋಡಬಹುದು. ಅನುಕೂಲವಾಗಿ ಇವನ್ನೆಲ್ಲಾ ನೋಡಿ ಅನುಭವಿಸ ಬಹುದಾದದ್ದು ಸೈಕಲ್ ಬಳಸುವುದರಿಂದ ಮಾತ್ರ ಸುಲಭ ಸಾಧ್ಯ.

ಒಟ್ಟಿನಲ್ಲಿ ಕೆಲಸಕ್ಕೆ ಸೈಕಲ್ ತುಳಿದು ಹೋಗುವ ಅಭ್ಯಾಸ ಆರಂಭವಾಗಿ ಅದರ ಆನಂದ ಅನುಭವವೇದ್ಯವಾದ ನಂತರ, ಮತ್ತೆ ಕಾರಿನಲ್ಲಿ ಕುಳಿತು ಪೃಷ್ಠದಿಂದ ಹೊಗೆ ಉಗುಳುತ್ತ ಹೋಗುವ ಪರಿಪಾಠ ವಿಚಿತ್ರವಾಗಿ ಕಾಣುತ್ತದೆ. ಯಾವಾಗಲಾದರೂ ಹೋಗಲೇಬೇಕಾದಾಗ, ಸದ್ಯ ಇದು ದಿನದಿನವೂ ಮಾಡಬೇಕಾಗಿಲ್ಲವಲ್ಲ ಎಂದು ಸಂತೋಷವಾಗುತ್ತದೆ. ದಿನದಿನವೂ ಇದನ್ನು ಮಾಡಬೇಕಾದ ಕರ್ಮ ನನಗೆ ಮತ್ತೆ ಎಂದಿಗೂ ಬರದಿರಲಿ ಎಂದು ಹಾರೈಸುವಂತೆ ಅನ್ನಿಸುತ್ತದೆ.

●

ಕಳೆದೂ ಉಳಿಯುವ ಮೋಡಿ

-ತ್ರಿವೇಣಿ ಶ್ರೀನಿವಾಸರಾವ್

ಕೆಲವು ದಿನಗಳ ಹಿಂದೆ ಸ್ನೇಹಿತರ ಮನೆಯ ಸ್ನೇಹಕೂಟದಲ್ಲಿ ಸೇರಿದ್ದೆವು. ಗೆಳತಿಯರೆಲ್ಲ ಮಹಡಿಯ ಮೇಲಿನ ಕೋಣೆಯೊಂದರಲ್ಲಿ, ಮಾತುಕಥೆಯಲ್ಲಿ ಮುಳುಗಿಹೋಗಿದ್ದೆವು. 'ಅಮ್ಮಾ, ನೀನೆಲ್ಲಿ ಕಳೆದುಹೋಗಿದ್ದೆ? ನಿನಗಾಗಿ ಮನೆಯೆಲ್ಲ ಹುಡುಕಿದೆ.' ಗೆಳತಿಯ ಮಗ ಕಣ್ಣುಗಳಲ್ಲಿ ಆಕ್ಷೇಪಣೆ ತುಂಬಿಕೊಂಡು ಮುದ್ದು ಬರುವಂತೆ ನಿಂತಿದ್ದ. ಇಂಗ್ಲಿಷಿನ 'Where are you lost?' ಎಂಬುದನ್ನು ಆ ಪೋರ ಸರಳವಾಗಿ 'ನೀನೆಲ್ಲಿ ಕಳೆದುಹೋಗಿದ್ದೆ?' ಎಂದು ಕನ್ನಡಕ್ಕೆ ಅನುವಾದಿಸಿಕೊಂಡಿದ್ದ. ಆ ಪುಟ್ಟ ಅಮೆರಿಕನ್ನಡಿಗನ ಬಾಯಿಂದ ಬಂದ ಆ ಅಪರೂಪದ ಕನ್ನಡ ಪದಪ್ರಯೋಗಕ್ಕೆ ಬೆಕ್ಕಸ ಬೆರಗಾಗಿದ್ದೆ. 'ನೀನೆಲ್ಲಿ ಕಳೆದುಹೋಗಿದ್ದೆ?' ಎಂಬ ಆ ಪದವನ್ನು ಕೇಳುತ್ತಿದ್ದಂತೆಯೇ, ನಿಜವಾಗಿಯೂ ನಾನು ಇನ್ನೆಲ್ಲೋ ಕಳೆದೇಹೋದೆ.

ಆಗಿನ್ನು ನನಗೆ ಚಿಕ್ಕ ವಯಸ್ಸು. ಮನಸ್ಸು ಆಗಷ್ಟೇ ಸಾಹಿತ್ಯದ ಆಕರ್ಷಣೆಗೆ ಸಿಲುಕಿಕೊಳ್ಳುತ್ತಿದ್ದ ಸುಂದರ ಘಟ್ಟ. ಪತ್ರಿಕೆ, ನಿಯತಕಾಲಿಕೆಗಳಲ್ಲಿ ಬರುವುದನ್ನೆಲ್ಲ ಒಂದೂ ಬಿಡದೆ ಓದುತ್ತಿದ್ದ ಆ ಕಾಲದಲ್ಲಿ, ಕವನ ಮತ್ತು ಕಥೆಗಳಲ್ಲಿ ಆಗಾಗ ಕಾಣಿಸಿಕೊಳ್ಳುತ್ತಲೇ ಇರುತ್ತಿದ್ದ ಕೆಲವು ಪದಗಳನ್ನು ಕುತೂಹಲದಿಂದ ಗಮನಿಸುತ್ತಿದ್ದೆ.

ಅವು ಯಾವುವೆಂದರೆ 'ಕಳಕೊಂಡವರು', 'ಕಳೆದುಹೋದದ್ದು', 'ಕಳೆದುಹೋದವರು' ಈ ರೀತಿಯವು. ಕಥೆ, ಕವಿತೆಗಳಿಗೆ ಹೆಸರಿಡುವ ಮುನ್ನ ಟೈಟಲ್ ಕ್ಲಿಯರೆನ್ಸ್ ಬೇಕಿಲ್ಲದ ಕಾರಣ, ಆಗ ಬರುತ್ತಿದ್ದ ಕಥೆಗಳಲ್ಲೂ ಇವೇ ಶೀರ್ಷಿಕೆಗಳ ಪುನರಾವರ್ತನೆ. ಕಳೆದದ್ದರ ಬಗ್ಗೆ, ಕಳಕೊಂಡವರ ಬಗ್ಗೆ ನಮ್ಮ ಲೇಖಕರಿಗೆ ಅದಿನ್ನೆಂಥ ಪ್ರೀತಿಯೋ ಅಂದುಕೊಳ್ಳುತ್ತಲೇ ನಾನೂ ಆ ಪದಗಳ ಮೋಡಿಗೊಳಗಾಗಿದ್ದೆ. ಅದರ ಕುರುಹಾಗಿ ಆಗೀಗ ನನ್ನ ಮಾತಿನಲ್ಲಿಯೂ ಅವು ಪಣಕಿ ಹಾಕುತ್ತಿದ್ದವು. ಇವನ್ನು ಗಮನಿಸಿದ ಮನೆಯ ಹಿರಿಯರು, ನಾನೊಬ್ಬಳು ಬರಹಗಾರ್ತಿಯಾದೇನೆಂಬ ಲಕ್ಷಣವನ್ನು ಮೊಳಕೆಯಲ್ಲೇ ಗುರುತಿಸಿ ಹಿಗ್ಗಿರಲೂಬಹುದೇನೊ. ಅದೇಕೋ ಏನೋ, ಇರುವುದೆಲ್ಲವ ಬಿಟ್ಟು ಇರದುದರೆಡೆಗೆಯೇ ಸದಾ ತುಡಿವ ನಮಗೆ ಕಳೆದುಹೋಗಿದ್ದರ, ಕಳಕೊಂಡಿದ್ದರ ಬಗ್ಗೆಯೂ ಮಿತಿಮೀರಿದ ವ್ಯಾಮೋಹವಿರುವುದರಲ್ಲಿ ಅಚ್ಚರಿಯೇನಿಲ್ಲ ಬಿಡಿ.

'ಕೂಡೋ ಕಳೆಯೋ ಆ ಲೆಕ್ಕ... ಎಣಿಸುವ ಗುಣಿಸುವ ಆ ಲೆಕ್ಕ... ಯಾರಿಗೆ ಬೇಕು ಈ ಲೆಕ್ಕ?' 'ಶುಭಮಂಗಳ' ಚಿತ್ರದ ಈ ಹಾಡು ನೆನಪಿದೆಯಲ್ಲವೇ? ಯಾರಿಗೂ ಬೇಡದಿದ್ದರೂ, ಎಣಿಸುವ, ಗುಣಿಸುವ, ಕೂಡುವ ಲೆಕ್ಕದ ಜೊತೆಜೊತೆಗೆ ಬಾಳಿನಲ್ಲಿ ನಿರಂತರ ನಡೆಯುತ್ತಲೇ ಇರುವ ಇನ್ನೊಂದು ಕ್ರಿಯೆ ಕಳೆಯುವುದು. ಗಣಿತ ಕಲಿಯುವಾಗಲೂ ಅಷ್ಟೆ, ಸಂಕಲನದ ನೆರಳಿನಂತೆ ಹಿಂಬಾಲಿಸುವ ವ್ಯವಕಲನ. ನಾವು ಬದುಕಿನುದ್ದಕ್ಕೂ ಕಳೆಯುತ್ತಲೇ ಹೋಗುತ್ತೇವೆ: ದುಡ್ಡು ಕಳೆಯುತ್ತೇವೆ, ಹೊತ್ತು ಕಳೆಯುತ್ತೇವೆ, ಕರ್ಚೀಫು, ಕೈಗವಸುಗಳಂತಹ ಸಣ್ಣಪುಟ್ಟ ವಸ್ತುಗಳಿಂದ ಹಿಡಿದು ಮೊಬೈಲು, ಚಿನ್ನದೊಡವೆಗಳ ತನಕ ಒಂದಲ್ಲಾ ಒಂದನ್ನು ಕಳೆದುಕೊಂಡು ಮನಸ್ಸಿನಲ್ಲಿ ದುಗುಡ ಅನುಭವಿಸುತ್ತೇವೆ. ಏನೇ ಹೊಸದು ಪಡೆದುಕೊಳ್ಳುತ್ತಿರಲಿ, ಕಳೆದುಕೊಂಡಿದ್ದರ ಬಗ್ಗೆ ಎದೆಯಲ್ಲೊಂದು ವೇದನೆಯ ಕುಂಡ ನಿರಂತರ ಉರಿಸುತ್ತಲೇ ಇರುತ್ತೇವೆ. ಕಳಕೊಂಡುದರ ಎಡೆಗೆ ನಮಗೆ ಅದೇಕೋ ಏನೋ ಬಿಟ್ಟೆನೆಂದರೂ ಬಿಡದ ವ್ಯಾಮೋಹ. ಹೊಚ್ಚ ಹೊಸತಾಗಿ ಕೊಂಡ ಬಂಗಲೆಯಲ್ಲಿ ಸಕಲ ಐಷಾರಾಮ ಅನುಭವಿಸುತ್ತಿದ್ದರೂ, ಮನಸ್ಸು ನೆನೆಯುತ್ತಾ ಪರಿತಾಪ ಪಡುವುದು ಎಂದೋ ದುಡ್ಡಿನ ಮುಗ್ಗಟ್ಟಿನಿಂದಾಗಿ ಮಾರಿ ಕಳೆದುಕೊಂಡ ಪಿತ್ರಾರ್ಜಿತ ತುಂಡು ಭೂಮಿಯನ್ನೇ! ಸುಖ ಬಂದ ಕಾಲದಲ್ಲಿ ಅಂತರಂಗ ಬಿಕ್ಕಳಿಸುವುದು, ಕಷ್ಟದ ದಿನಗಳಲ್ಲಿ ಕೈಹಿಡಿದು ನಡೆಸಿ, ಕಾಲದ ಕಡಲಲ್ಲಿ ಕಳೆದುಹೋದ ತನ್ನವರನ್ನು ನೆನೆದೇ!

ಯಾವುದಾದರೂ ವಸ್ತುಗಳನ್ನು ಅಲ್ಲಿಟ್ಟು, ಇಲ್ಲಿಟ್ಟು, ಎಲ್ಲಿಯಾದರೂ ಬಿಟ್ಟು ಕಳಕೊಂಡ ಅನುಭವ ಇಲ್ಲದವರು ಯಾರು? ಬಹುಶಃ ಸಾವಿಲ್ಲದ ಮನೆಯ ಸಾಸುವೆಯಾದರೂ ಸಿಕ್ಕೀತೇನೋ. ಎಂದೂ, ಎಲ್ಲೂ, ಏನೂ ಕಳೆದುಕೊಳ್ಳದ ಮನುಷ್ಯ ಮಾತ್ರರು ಸಿಗುವುದು ದುರ್ಲಭವೇ. ಆದರೆ, ಈ ರೀತಿಯ ಅನುಭವ ಕೆಲವರಿಗೆ ಅಪರೂಪಕ್ಕೆ ಆದರೆ, ನಮ್ಮನೆಯಲ್ಲಿ ಇದೊಂದು ತೀರಾ ಸಾಮಾನ್ಯವಾದ ಘಟನೆ. ನನ್ನ ಚಿಕ್ಕ ಅಣ್ಣನಂತೂ ಈ

ಕಳೆಯಲ್ಲಿ ನಿಸ್ಸೀಮ. ನಮ್ಮ ಮನೆಯಲ್ಲಿ ಈ ರೀತಿ ಮನೆಯ ವಸ್ತುಗಳನ್ನು ಕಳೆದು ಅರ್ಥಾತ್ ನೀಗಿಕೊಂಡು ಬರುವವರಿಗೆ ಮೀಸಲಾಗಿರುತ್ತಿದ್ದ 'ನೀಗು ರಾಜ', ಹೆಂಗಸರಾದರೆ 'ನೀಗು ರಾಣಿ' ಬಿರುದು ಬೇರೊಬ್ಬರ ಪಾಲಾಗಲು ಈ ಅಣ್ಣ ಬಿಟ್ಟವನೇ ಅಲ್ಲ; ಪ್ರತಿ ವರ್ಷವೂ ಯಾವುದಾದರೂ ಚಿತ್ರದ ಮೂಲಕ ರಾಷ್ಟ್ರಪ್ರಶಸ್ತಿ ದೋಚಿಕೊಳ್ಳುವ ನಿರ್ದೇಶಕ ಗಿರೀಶ್ ಕಾಸರವಳ್ಳಿಯವರ ತರಹ. ಪೆನ್ನು, ಪೆನ್ಸಿಲ್ಲು, ಟೋಪಿ, ಕರವಸ್ತ್ರಗಳಂತಹ ಜುಜುಬಿ ವಸ್ತುಗಳಾಗಲೀ ಉಂಗುರ, ಕೊರಳ ಚೈನುಗಳಂತಹ ಬೆಲೆಬಾಳುವ ವಸ್ತುಗಳಾಗಲೀ, ಅವನಿಗೆ ಎಲ್ಲದರ ಬಗ್ಗೆಯೂ ಒಂದೇ ನಿರ್ಲಿಪ್ತ ಭಾವ - ಅದು ಕಳೆಯುವ ವಿಷಯದಲ್ಲಿ ಮಾತ್ರ.

ಅಣ್ಣ ಸೈಕಲ್ ಕಲಿತ ಹೊಸದು. ಬೇಡವೆಂದರೂ ಹಟ ಮಾಡಿ, ಹಿಂದಿನ ದಿನವಷ್ಟೆ ಕೊಂಡಿದ್ದ ಸೈಕಲ್ ಹೊಡೆದುಕೊಂಡು ಶಾಲೆಗೆ ಹೋದ. ಮಧ್ಯಾಹ್ನ ಎಂದಿನಂತೆ ಊಟಕ್ಕೆ ಮನೆಗೇನೋ ಬಂದ; ಆದರೆ, ಹೋಗುವಾಗಿದ್ದ ಜೊತೆಗಾರನನ್ನು ಮರೆತು ಎಂದಿನ ಅಭ್ಯಾಸದಂತೆ ನಡೆದೇ ಮನೆಗೆ ಬಂದಿದ್ದ. ಮತ್ತೆ ಹೋಗಿ ನೋಡಿದರೆ ಅಲ್ಲಿದ್ದ ಸೈಕಲ್ ಅಲ್ಲೇ ಮಾಯ! ಇನ್ನೊಮ್ಮೆ, ಸಹಪಾಠಿಗಳೊಂದಿಗೆ ಶೈಕ್ಷಣಿಕ ಪ್ರವಾಸ ಹೋಗಿದ್ದಾಗ, ಅಕ್ಕ ತಂದೆಗೆಂದು ಪ್ರೀತಿಯಿಂದ ಹೆಣೆದುಕೊಟ್ಟ ಸ್ವೆಟರ್ ಬೇಕೇಬೇಕೆಂದು ಹಟ ಹಿಡಿದು ಕೊಂಡೊಯ್ದ. ವಾಪಸ್ ಬಂದಾಗ, ಉಳಿದೆಲ್ಲಾ ವಸ್ತುಗಳಿದ್ದರೂ ಹಸಿರು ಬಣ್ಣದ ಆ ಸುಂದರ ಸ್ವೆಟರ್ ನಾಪತ್ತೆ. ಎಂತೆಂಥ ಬೆಲೆಬಾಳುವ ವಸ್ತು ಕಳೆದಾಗಲೂ ತಲೆಕೆಡಿಸಿಕೊಳ್ಳದೆ ಸ್ಥಿತಪ್ರಜ್ಞತೆ ಮೆರೆದಿದ್ದ ನಾವು, ಅದೇಕೊ ಆ ಸ್ವೆಟರ್ ಕಳೆದಾಗ ಮಾತ್ರ ಬಹಳ ಶೋಕ ಪಟ್ಟಿದ್ದೆವು. 'ಎಷ್ಟು ಒಳ್ಳೆಯ ಬಣ್ಣದ ಸ್ವೆಟರ್ ಅದು... ಎಷ್ಟು ಚಂದದ ಡಿಸೈನ್ ಇತ್ತು, ಅಣ್ಣ ಹಾಕ್ಕೊಳ್ಳಿ ಅಂತ ಎಷ್ಟು ಪ್ರೀತಿಯಿಂದ ಹೆಣೆದಿದ್ದೆ... ಇನ್ನೂ ಒಂದು ಸಲವೂ ನೀರಿಗೆ ಹಾಕಿರಲಿಲ್ಲ...' ಈ ರೀತಿ ಕಳೆದುಹೋದ ಸ್ವೆಟರನ್ನು ನಾನಾ ಬಗೆಯಲ್ಲಿ ಗುಣಗಾನ ಮಾಡಲಾಯಿತು. ಸಂತಾಪಸೂಚಕಗಳ ವಿನಿಮಯವೂ ಆಯಿತು.

ಆದರೆ ಇಷ್ಟೆಲ್ಲ ಸೆಂಟಿಮೆಂಟಲ್ ಮೌಲ್ಯ ಹೊಂದಿದ್ದ ಸ್ವೆಟರನ್ನು ಕಳೆದುಬಂದಿದ್ದರೂ ಅಣ್ಣನಿಗೆ ಹೆಚ್ಚೇನೂ ಬೈಗಳು ಸಿಗದೆ ಸುಲಭವಾಗಿ ಪಾರಾದ. ಅದರ ಗುಟ್ಟೇನೆಂದರೆ, ನಮ್ಮ ಮನೆಯ ಸರ್ವಸದಸ್ಯರೂ ಕಳೆಯುವ ವಿಷಯದಲ್ಲಿ ಮಹಾನ್ ಅನುಭವಿಗಳೇ ಆಗಿದ್ದರಿಂದ, 'ಯಾವ ಪಾಪವನ್ನೂ ಮಾಡಿರದವರು ಮೊದಲ ಕಲ್ಲನ್ನು ಎಸೆಯಿರಿ' ಎಂಬ ಕ್ರಿಸ್ತನ ವಾಣಿಯನ್ನು ನೆನೆದು, ಅಣ್ಣನನ್ನು ಬೈಯಲು ಯಾರಿಗೂ ನೈತಿಕ ಹಕ್ಕಿಲ್ಲದೆ ಎಲ್ಲರೂ ಸುಮ್ಮನಾಗಿದ್ದೆವು. ಯಾರಾದರೂ ಬಾಯಿಬಿಟ್ಟರೆ, ಆಡಳಿತ ಪಕ್ಷದವರ ಅಕ್ರಮಗಳ ಬಗ್ಗೆ ಸೊಲ್ಲೆತ್ತುವ ವಿರೋಧ ಪಕ್ಷದವರ ಹಗರಣಗಳು ಒಂದೊಂದಾಗಿ ಹೊರಬರುವಂತೆ, ಕಾಲಗರ್ಭದಲ್ಲಿ ಅಡಗಿಹೋಗಿರುವ ತಮ್ಮ ಇತಿಹಾಸವೂ ಹೊರಬರುವ ಅಪಾಯದ ಅರಿವು ಎಲ್ಲರಿಗೂ ಇದ್ದೇ ಇತ್ತು. 'ಪಿಕ್ನಿಕ್‌ಗೆಂದು ಅಯ್ಯನಕೆರೆಗೆ ಹೋದಾಗ ನೀನು ನೀರಿನಲ್ಲಿ

ಉಂಗುರ ಕಳೆದುಕೊಂಡು ಬರಲಿಲ್ವಾ?', 'ಹೋಗದಿದ್ದರೂ ನಡೆಯುತ್ತಿದ್ದ ಅದ್ಯಾರೋ ದೂರದ ಬಳಗದವರ ಮದುವೆಗೆ ಹೋಗಿದ್ದಾಗ, ದೊಡ್ಡ ಅಂಚಿನ ರೇಷ್ಮೆ ಸೀರೆಯನ್ನು ಸೀಗಿದ್ದು ಯಾರೋ?', 'ಗುಡಿಗೆ ಹೋದಾಗ ಕಳೆದುಹೋದ ಮುಗುಟ', 'ಮುಂಜಿಯಲ್ಲಿ ಕಳೆದ ವಾಚು', 'ಸಂತೆಯಲ್ಲಿ ಕಳೆದ ಛತ್ರಿ', 'ಬಸ್ಸಿನಲ್ಲಿ ಪಿಕ್‌ಪಾಕೆಟ್ ಆದ ಪರ್ಸ್', ಹೀಗೆ ಸತ್ತ ಭೂತಗಳೆಲ್ಲಾ ಯಾವುದೋ ಒಂದು ಕಳೆದುಹೋದ ವಸ್ತುವಿನ ಹೆಸರಿನಲ್ಲಿ ಮೇಲೆದ್ದು ಬರುವ ಸಾಧ್ಯತೆಯನ್ನರಿತು, ಎಲ್ಲರ ಬಾಯಿಯೂ ಒಕ್ಕೊರಲಿನಿಂದ 'ಹೋಗಲಿ ಬಿಡು, ಅದೇನು ಮಹಾ?' ಎಂಬ ಪಲಾಯನ ಸೂತ್ರವನ್ನು ಪಠಿಸಿತ್ತು.

ಕಳೆಯುವುದು ಬೇರೆ, ಕಳವಾಗುವುದು ಬೇರೆ. ಇವೆರಡರಲ್ಲಿ ಏನೇ ಆದರೂ ನಮ್ಮ ಹತ್ತಿರವಿದ್ದ ವಸ್ತುವೊಂದು ನಮ್ಮಿಂದ ದೂರವಾಯಿತೆಂದೇ ಅರ್ಥ. ಕಳವು ಬೇರೊಬ್ಬರಿಂದ ಆಗಬಹುದಾದರೂ ಕಳೆಯುವುದು ಮಾತ್ರ ಸ್ವಯಂಕೃತ. ಕೆಲವು ಬಾರಿ ಅತಿ ಜಾಗರೂಕತೆಯಿಂದ ಬಹು ಮುಖ್ಯವಾದ ವಸ್ತುವನ್ನು ಜತನದಿಂದ ಎಲ್ಲೋ ಇಟ್ಟು ಮರೆಯುವುದುಂಟು. ಹೀಗೆ ಬಚ್ಚಿಟ್ಟಿದ್ದು ಪರಗಿರಲಿ, ತನಗೂ ಸಿಗದೆ ಹಾಗೆ ಎಲ್ಲೋ ನಿಗೂಢವಾಗಿ ಅವಿತುಕೊಂಡಿರುತ್ತದೆ. ಎಲ್ಲೇ ಇರಲಿ, ಒಟ್ಟಾರೆ ಅದು ನಮ್ಮ ಪಾಲಿಗೆ ಕಳೆದಂತೆಯೇ! ವಸ್ತುವಿನ ಆರ್ಥಿಕ ಮೌಲ್ಯಕ್ಕಿಂತ ಅದರೊಂದಿಗಿನ ಭಾವನಾತ್ಮಕ ಮೌಲ್ಯಕ್ಕೆ ಹೆಚ್ಚು ಮಹತ್ವ. ಅದನ್ನು ಮರಳಿ ಕೊಂಡುಕೊಡಲು ರಾಶಿರಾಶಿ ದುಡ್ಡಿಗೂ ಸಾಮರ್ಥ್ಯವಿಲ್ಲ. ಕೊನೆವರೆಗೆ ಆ ವಸ್ತುವಿನ ಜಾಗವನ್ನು ಮತ್ತಾವುದೂ ತುಂಬಲಾರದಂತೆ ಎದೆಯಲ್ಲೊಂದು ಶೂನ್ಯ ನಿರ್ಮಾಣವಾಗಿ ಬಿಡುತ್ತದೆ.

ಕಳೆಯುವುದರ ಬಗ್ಗೆ ಯೋಚಿಸುವಾಗೆಲ್ಲ ನನಗೆ ನನ್ನ ಚಿಕ್ಕಂದಿನ ಈ ಅನುಭವವೊಂದು ನೆನಪಾಗುತ್ತದೆ. ನಮ್ಮ ಮನೆಯಲ್ಲಿದ್ದ ಹಸು, ಎಮ್ಮೆಗಳು ಆಗಾಗ ಎಲ್ಲೋ ತಪ್ಪಿಸಿಕೊಳ್ಳುತ್ತಿದ್ದವು. ಮೇಯಲೆಂದು ಹೋದ ದನಕರುಗಳು ಸರಿಯಾದ ಸಮಯಕ್ಕೆ ಹಿಂತಿರುಗದಿದ್ದರೆ ಅವುಗಳನ್ನು ಹುಡುಕುವ ಕೆಲಸ ಶುರುವಾಗುತ್ತಿತ್ತು. ಆಗಲೂ ಸಿಕ್ಕದಿದ್ದರೆ, ನಮ್ಮ ತಂದೆ ಬಿಳಿ ಕಾಗದದ ಮೇಲೆ ಕೆಲವು ಸಾಲುಗಳನ್ನು ಬರೆದು ತಪ್ಪಿಸಿಕೊಂಡ ಹಸುವನ್ನು ಕಟ್ಟುತ್ತಿದ್ದ ಗೂಂತಿಗೆ ಕಟ್ಟಿ ಬರುತ್ತಿದ್ದರು. ಅದು 'ಕಾರ್ತವೀರ್ಯಾರ್ಜುನೋ ನಾಮ ರಾಜಾ ಬಾಹು ಸಹಸ್ರವಾನ್, ತಸ್ಯ ಸ್ಮರಣ ಮಾತ್ರೇಣ ಗತಂ ನಷ್ಟಂ ಚ ಲಭ್ಯತೇ' ಎನ್ನುವ ಮಂತ್ರ. ಆ ಮಂತ್ರವನ್ನು ಪಠಿಸಿದರೆ ಕಳೆದುಕೊಂಡ ಪದಾರ್ಥ ನಿಶ್ಚಿತವಾಗಿ ಅದರ ಮಾಲೀಕರಿದ್ದಲ್ಲಿಗೆ ಹಿಂತಿರುಗುತ್ತದೆ ಎಂಬುದು ಅವರ ನಂಬಿಕೆ. ಅದೇ ನಂಬಿಕೆ ತಮಗೂ ಇದೆಯೋ ಎಂಬಂತೆ ಕಳೆದುಹೋಗಿದ್ದ ದನಕರುಗಳು ಸಲೀಸಾಗಿ ಮನೆಗೆ ಹಿಂತಿರುಗುತ್ತಿದ್ದುದನ್ನು ಕಂಡು ನಮಗೆ ಎಲ್ಲಿಲ್ಲದ ಬೆರಗು. ಎಲ್ಲೋ ಇದ್ದ ಹಸುಗಳನ್ನು ಮನೆಗೆ ಬರುವಂತೆ ಮಾಡುವ ತಂದೆ ನಮ್ಮ ಪಾಲಿಗೆ ದೊಡ್ಡ ಜಾದೂಗಾರನಂತೆಯೇ ಕಂಡುಬರುತ್ತಿದ್ದರು. ಆದರೆ ಎಲ್ಲಾ ಸಲವೂ ತಂದೆಯ ಈ ಜಾದೂ ಕೆಲಸ ಮಾಡುತ್ತಿರಲಿಲ್ಲ. ಕೆಲವು ಬಾರಿ ಈ ಮಂತ್ರ ಪ್ರಭಾವಕ್ಕೆ ನಾವಿನ್ನು ತಲೆಬಾಗವು

ಎನ್ನುವಂತೆ ತುರುಕರುಗಳು ಮರಳುತ್ತಲೇ ಇರಲಿಲ್ಲ. ಯಾರದೋ ಹೊಲಗದ್ದೆಗಳಿಗೆ ನುಗ್ಗಿ, ತೊಂಡು ಮೇಯುತ್ತಿದ್ದ ಹಸುಗಳನ್ನು ಸಂಬಂಧಿಸಿದವರು ಹಿಡಿದು ದೊಡ್ಡಿಗೆ ಅಟ್ಟಿದ್ದರೆ ಅವು ಬರಬೇಕೆಂದರೂ ಬರಲಾದೀತು ಹೇಗೆ? ಆಗೆಲ್ಲಾ 'ಮಂತ್ರಕ್ಕೆ ಮಾವಿನಕಾಯಿ ಉದುರೀತೇ?' ಎಂದು ಗೊಣಗಿಕೊಂಡು, ದಂಡ ತೆತ್ತು ಹಸುಗಳನ್ನು ಬಿಡಿಸಿಕೊಂಡುಬರಲು ಯಾರೋ ದೊಡ್ಡಿಯತ್ತ ಓಡುತ್ತಿದ್ದರು.

ಕಳೆದುಹೋದ ಹಸುಗಳನ್ನು ಹುಡುಕಲು 'ಅಂಜನ ಹಾಕಿಸುವುದು' ಎಂಬ ಪದ್ಧತಿಯೊಂದು ನಮ್ಮೂರಿನ ಕಡೆ ಆಗ ಪ್ರಚಲಿತದಲ್ಲಿತ್ತು. ಪುಟ್ಟ ಕರಡಿಗೆಯಲ್ಲಿದ್ದ ಕಾಡಿಗೆಯಂತಹ ಪದಾರ್ಥವೇ 'ಅಂಜನ'. ಆ ವಿದ್ಯೆಯನ್ನು ಬಲ್ಲವರು ಆ ಕಾಡಿಗೆಯನ್ನು ಕಣ್ಣಿಗೆ ಹಚ್ಚಿಕೊಂಡರೆ ಕಳೆದ ವಸ್ತು, ವ್ಯಕ್ತಿ, ಪ್ರಾಣಿಗಳು ಎಲ್ಲೇ ಇರಲಿ, ಅವರಿಗೆ ಕಾಣಿಸುವುದಂತೆ! ಎಲ್ಲವನ್ನೂ ಬಲ್ಲ ಜ್ಞಾನಿಗಳಂತೆ ಪೋಸು ಕೊಡುತ್ತಿದ್ದ ಈ ಅಂಜನ ಹಾಕುವವರು ಎಂದೂ ಕಳೆದಿದ್ದರ ಬಗ್ಗೆ ನಿಖರವಾದ ಮಾಹಿತಿ ನೀಡಿದ ನೆನಪು ನನಗಿಲ್ಲ. 'ನಿಮ್ಮ ಹಸು ಉತ್ತರ ದಿಕ್ಕಿನ ಕಡೆಗೆ ಹೋಗುತ್ತಿದೆ, ದಕ್ಷಿಣ ದಿಕ್ಕಿನಿಂದ ಇನ್ನು ಮೂರು ದಿನದಲ್ಲಿ ವಾಪಸಾಗುತ್ತದೆ' ಎಂದೆಲ್ಲಾ ಬುರುಡೆ ಬಿಡುತ್ತಿದ್ದುದನ್ನೂ ನಾವೆಲ್ಲ ಅಮಾಯಕರಂತೆ ನಿಜವೆಂದೇ ನಂಬಿಕೊಂಡು ಕಾಯುತ್ತಿದ್ದೆವು. ಆದರೆ, ಎಷ್ಟೋ ಸಲ ಕಳೆದುಹೋಗಿರುತ್ತಿದ್ದ ನಮ್ಮ ಮನೆಯ ಪುಣ್ಯಕೋಟಿ ಅಷ್ಟದಿಕ್ಕುಗಳಲ್ಲೂ ಸಿಕ್ಕದೆ, ಹಸುಗಳನ್ನು ಕದ್ದು ಮಾರಾಟ ಮಾಡುವ ಜಾಲದ ಮೂಲಕ ಕಸಾಯಿಖಾನೆ ಸೇರಿ, ಕತ್ತಿ ಹಿರಿದು ನಿಂತ ಕಟುಕನ ಎದುರು 'ಖಂಡವಿದೆಕೊ ಮಾಂಸವಿದೆಕೊ, ಗುಂಡಿಗೆಯ ಬಿಸಿರಕ್ತವಿದೆಕೊ...' ಎನ್ನುತ್ತಾ ಬಲಿಯಾಗಿ ಹೋಗಿ, ನಮ್ಮೆದೆಗಳಲ್ಲಿ ಸಂಕಟ ಸುರಿಯುತ್ತಿತ್ತು. ಅದರೊಂದಿಗೆ ನಮ್ಮ ಮುಗ್ಧ ನಂಬಿಕೆಗಳೂ ನೆಲ ಕಚ್ಚಿದ್ದವು.

ಅದೇನೇ ಇರಲಿ, ನಮ್ಮ ತಂದೆ ಪ್ರೀತಿಯಿಂದ ಪೋಷಿಸಿಕೊಂಡು ಬಂದಿದ್ದ, ಪುರಾಣದ ಮಹಾರಾಜ ಕಾರ್ತ್ಯವೀರ್ಯಾರ್ಜುನ, ಗತ, ನಷ್ಟವಾದ ವಸ್ತುಗಳನ್ನು ಹುಡುಕಿಕೊಡುತ್ತೇನೆಂದು ಅದಾವ ಪರ್ವದ, ಅದಾವ ಪುಟದಲ್ಲಿ ಪ್ರಮಾಣ ಮಾಡಿದ್ದನೊ ನನಗಂತೂ ಗೊತ್ತಿಲ್ಲ; ಫೋಟೊ ತೆಗೆಯಲು ಹೋದ ಕಡೆಯೇ ಲೆನ್ಸ್ ಮರೆತು ಬರುವ ಗಂಡ, ಶಾಲೆಯ ಲಾಕರಿನಲ್ಲಿ ಐಫೋನ್ ಬಿಟ್ಟು ಬರುವ ಮಕ್ಕಳು, ಸದಾ ಯಾವುದಾದರೊಂದು ವಸ್ತುವನ್ನು ಎಲ್ಲೋ ಇಟ್ಟು ಇನ್ನೆಲ್ಲೋ ಹುಡುಕುವ ನನ್ನ ಮರೆವಿನ ಸ್ವಭಾವದಿಂದಾಗಿ, ಪಾಪ! ಆ ಕಾರ್ತ್ಯವೀರ್ಯಾರ್ಜುನನಿಗೆ ನಮ್ಮ ಮನೆಯಲ್ಲಂತೂ ಕಾಯಂ ಡ್ಯೂಟಿ ತಪ್ಪಿದ್ದೇ ಇಲ್ಲ!

ಕಳಕೊಂಡು ಕಸಿವಿಸಿ ಅನುಭವಿಸಲು ಭಾರಿ ದೊಡ್ಡ ವಸ್ತುಗಳೇ ಆಗಬೇಕೆಂದಿಲ್ಲ. ಒಮ್ಮೆ ನನ್ನ ಗೆಳತಿಯೊಬ್ಬಳ ಮನೆಗೆ ಹೋಗಿದ್ದಾಗ ಅವಳು ಏನನ್ನೋ ಹುಡುಕಿ, ಸುಸ್ತಾಗಿ, ಅದು ಸಿಗದೆ ಮಂಕಾಗಿ ಕುಳಿತಿದ್ದಳು. ನಾನು ಏನಾಗಿಹೋಗಿದೆಯೋ ಎಂದು ಗಾಬರಿಯಿಂದ ವಿಚಾರಿಸಿದಾಗ ಬಂದ ಉತ್ತರ ಕೇಳಿದಾಗ ನಗು ತಡೆಯಲಾಗಿರಲಿಲ್ಲ. ಅವಳು ಊರಿನಿಂದ

ತಂದಿದ್ದ ಬೂದುಗುಂಬಳಕಾಯಿಯೊಂದು ಎಲ್ಲೋ ಕಣ್ತಪ್ಪಿಸಿಕೊಂಡಿತ್ತು. ಮನೆಯೆಲ್ಲಾ ಹುಡುಕಿದರೂ ಸಿಕ್ಕಿರಲಿಲ್ಲವಂತೆ. ಕೆಲವು ದಿನಗಳ ನಂತರ, ಅವರ ಮನೆಯ ಮಂಚದ ಕೆಳಗೆ, ಕಪ್ಪಗೆ ಕೊಳೆತು, ವಿರೂಪಗೊಂಡಿರುವ ಏನೋ ವಿಚಿತ್ರದ ವಸ್ತುವೊಂದು ಪ್ರತ್ಯಕ್ಷವಾಗಿದೆಯೆಂದು ಮನೆಮಂದಿಯೆಲ್ಲಾ ಹೆದರಿ ಹೈರಾಣಾಗಿದ್ದರಂತೆ. ಪರಿಣತರು ಕೂಲಂಕಷವಾಗಿ ಪರಿಶೀಲಿಸಿ, ಆ ಕೊಳೆತು ನಾರುತ್ತಿದ್ದ ವಸ್ತು ಕಳೆದುಹೋಗಿದ್ದ ಕುಂಬಳಕಾಯಿಯ ರೂಪಾಂತರವೆಂದು ಪತ್ತೆ ಹಚ್ಚಿದ ವಿಷಯ ನನಗೆ ನಂತರ ತಿಳಿದುಬಂದಿತು.

ಕಳೆದುಕೊಳ್ಳುವುದಕ್ಕೂ ಮತ್ತು ಅಧ್ಯಾತ್ಮಕ್ಕೂ ಸ್ವಲ್ಪ ಹತ್ತಿರದ ನಂಟುಂಟು. ಹೇಗೆಂದಿರಾ? ಅದನ್ನು ಅಭಾವ ವೈರಾಗ್ಯ, ಸ್ಮಶಾನ ವೈರಾಗ್ಯ... ಮುಂತಾದ ವೈರಾಗ್ಯಗಳ ಮಾದರಿಯಲ್ಲಿ 'ಕಳವು ವೈರಾಗ್ಯ' ಎಂದು ಹೆಸರಿಸಬಹುದು. ಕಳೆದುಹೋದ ವಸ್ತು ಎಷ್ಟೇ ಬೆಲೆಬಾಳುವಂತಹದ್ದಾದರೂ, ಅದನ್ನು ಹುಡುಕುವ ಎಲ್ಲಾ ಪ್ರಯತ್ನಗಳನ್ನೂ ಮಾಡಿ ಅದು ಇನ್ನೂ ಸಿಗುವುದೇ ಇಲ್ಲವೆಂದಾದಾಗ ನಮ್ಮ ಮನಸ್ಸಿನಲ್ಲಿ ಶೂನ್ಯ ಭಾವದ ಮೋಡ ಕವಿದು, ಅದರ ನಡುವೆಯೇ ಅರಿವಿನ ಮಿಂಚೊಂದು ಹೊಳೆದು, ತಟ್ಟನೆ ಜ್ಞಾನೋದಯವಾದವರಂತೆ, ಹೊಳಪಿಲ್ಲದ ಮುಖದಲ್ಲಿ, ನೀರಸವಾದ ಧ್ವನಿಯಲ್ಲಿ, 'ಹೋದರೆ ಹೋಯಿತು ಬಿಡಿ. ನಮ್ಮದಾಗಿದ್ದರೆ ಸಿಕ್ಕಿರುತ್ತಿತ್ತು, ಅದರ ಋಣ ಇವತ್ತಿಗೆ ಮುಗಿಯಿತು ಅಂತ ಕಾಣುತ್ತದೆ, ಗ್ರಹಚಾರ ಕಳೆಯಿತು ಅಂತ ಅಂದುಕೊಂಡರಾಯಿತು.' ಎಂಬ ಅನಿವಾರ್ಯ ವೇದಾಂತಕ್ಕೆ ಶರಣು ಹೋಗುವುದುಂಟು. ಬೆಂಗಳೂರಿನಲ್ಲಿ, ದೇವಸ್ಥಾನಗಳಿಗೆ ಹೋದಾಗೆಲ್ಲ, ಹೊರಗೆ ಬಿಟ್ಟಿದ್ದ ಚಪ್ಪಲಿಗಳನ್ನು ಕಳೆದುಕೊಂಡ ಸಾಲುಸಾಲು ಅನುಭವಗಳುಳ್ಳ ನನಗೆ, 'ಚಪ್ಪಲಿ ಕಳೆದರೆ ಗಂಡಾಂತರ ಕಳೆದಂತೆ' ಎಂಬ ಮಾತು, ಅಚ್ಚುಮೆಚ್ಚಿನ ಚಪ್ಪಲಿಗಳನ್ನು ಕಳೆದುಕೊಂಡ ನಂತರದ ನನ್ನ ಹೊಟ್ಟೆಯ ಉರಿಯನ್ನು ಸ್ವಲ್ಪವಾದರೂ ತಣ್ಣಗಾಗಿಸಿರುವುದು ನಿಜ.

ಅರೆರೆ, ಕಳೆಯುವುದರ ಬಗ್ಗೆ ಇಷ್ಟೆಲ್ಲಾ ಹರಟುತ್ತಿರುವ ನಾನು 'ಶರಪಂಜರ'ದ ಕಾವೇರಿಯ 'ಕಳೆದೋಯ್ತು ಎಲ್ಲಾ ಕಳೆದೋಯ್ತು... ಹಾಗೆಲ್ಲ ದುಡ್ಡಿಗೆ ಸಿಗೋದಲ್ಲ ಅದು...' ಎಂಬ ಹೃದಯ ವಿದ್ರಾವಕ ಚೀತ್ಕಾರವನ್ನು ಮರೆತೇನಾದರೂ ಹೇಗೆ? ಪುಟ್ಟಣ್ಣ ಕಣಗಾಲರ 'ಶರಪಂಜರ'ವನ್ನು ಮೊದಲಬಾರಿ ನೋಡಿದಾಗ, ಕಥಾನಾಯಕಿ ಕಾವೇರಿ ಕಳೆದುಕೊಂಡಿದ್ದೇನು? ಎಂಬುದು ಅರ್ಥವಾಗುವ ವಯಸ್ಸಲ್ಲ ನನ್ನದು. 'ಕಾವೇರಿ'ಯ ಪಾತ್ರವನ್ನು ಮೈಮೇಲೆ ಆವಾಹಿಸಿಕೊಂಡಂತೆ ನಟಿ ಕಲ್ಪನಾ, ಶ್ರೀರಂಗಪಟ್ಟಣದ ಕಾವೇರಿ ತೀರದ ಮರಳನ್ನು ಬಗೆಬಗೆದು 'ಕಳ್ಕೊಂಡೆ... ನಾ ಇಲ್ಲೇ ಕಳ್ಕೊಂಡೆ' ಎಂದು ಹಿಸ್ಟೀರಿಕ್ ಆಗಿ ಚೀರುತ್ತಾ, ತೆರೆಯ ಮೇಲೆ ಅದ್ಭುತ ಅಭಿನಯವನ್ನು ಮೆರೆಯುತ್ತಿದ್ದರೆ, ನಾನು ಥರಥರ ನಡುಗುತ್ತಾ, 'ಮನೆಗೆ ಹೋಗೋಣ ಬಾ, ನನಗೆ ಬಹಳ ಹೆದರಿಕೆಯಾಗುತ್ತಿದೆ' ಎಂದು ಅಕ್ಕನನ್ನು ಪೀಡಿಸುತ್ತಿದ್ದೆ. ಅಕ್ಕ ಬರಬೇಡವೆಂದಿದ್ದರೂ ಬಲವಂತದಿಂದ ಬೆನ್ನುಹತ್ತಿದ್ದ ನನ್ನನ್ನು ಅಕ್ಕನ ಗೆಳತಿಯೊಬ್ಬಳು ಕೆಕ್ಕರಿಸಿ ನೋಡುತ್ತಾ, 'ಈ ಚಿಳ್ಳೆಪಿಳ್ಳೆಗಳನ್ನೆಲ್ಲ ಕರೆದುಕೊಂಡು ಬರಬೇಡ

ಅಂದರೆ ಕೇಳಿದೆಯಾ? ಈಗ ನಿನ್ನ ಕರ್ಮ, ಅನುಭವಿಸು.' ಎಂದು ಅಕ್ಕನ ಮೂತಿ ತಿವಿದಿದ್ದಳು. ನಂತರ ಅದೆಷ್ಟೋ ಬಾರಿ ಈ ಸಿನಿಮಾ ನೋಡಿದ್ದೇನೆ. ಪ್ರತಿಬಾರಿಯೂ ನನ್ನನ್ನು ಕಾಡುವ ಪ್ರಶ್ನೆಯೊಂದಿದೆ. ಶೀಲವೆಂಬ ಅಗೋಚರ, ಅವ್ಯಕ್ತ ವಸ್ತು ಹೆಣ್ಣು, ಗಂಡು ಇಬ್ಬರಿಗೂ ಸಮಾನವಾಗಿ ಅನ್ವಯಿಸಿದರೂ, ನಮ್ಮ ಸಮಾಜ ಆ ಭಾರವನ್ನು ಹೆಣ್ಣಿನ ಮೇಲೆಯೇ ಹೆಚ್ಚಾಗಿ ಹೊರಿಸಿರುವುದೇಕೆ? ಗಂಡಿಗೆ ಏನೂ ಅಲ್ಲದ ಈ ಶೀಲ ಹೆಣ್ಣಿಗೆ ಎಲ್ಲಾ! ಅದನ್ನು ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕು ಕಳೆದುಕೊಂಡ ಹೆಣ್ಣು 'ಕಳ್ಕೊಂಡೆ... ಕಳ್ಕೊಂಡೆ...' ಎಂದು ಬೊಬ್ಬಿರಿದು ರೋದಿಸಿದಾಗ, ಪಾಪಪ್ರಜ್ಞೆಯಿಂದ ನರಳಿ, ಬಳಲಿದಾಗ ಮಾತ್ರವೇ ನಮ್ಮ ಆರ್ಷೇಯ ಸಂಸ್ಕೃತಿಯ ದೀಪ ಉಜ್ವಲವಾಗಿ ಬೆಳಗುವುದೆಂದು ಪುಟ್ಟಣ್ಣನವರಂತಹ ಸ್ತ್ರೀಪರ ನಿರ್ದೇಶಕರು ಕೂಡ ಹೇಗಾದರೂ ಭಾವಿಸಿದರೋ?

ಕಳೆದುಕೊಳ್ಳುವುದಕ್ಕಿಂತ, ಕಳೆದುಕೊಳ್ಳುತ್ತೇವೆಂಬ ಭಯವೇ ಹೆಚ್ಚು ಅಪಾಯಕಾರಿ. ಇವತ್ತಿರುವ ಸಿರಿಸಂಪತ್ತು, ನೆಮ್ಮದಿಯ ಬದುಕು, ಆರೋಗ್ಯ ಭಾಗ್ಯ ನಾಳೆಗಿಲ್ಲವಾದರೆ? ಈ ಕಳೆದುಕೊಳ್ಳುವ ಭಯ ನಮ್ಮ ಮನಸ್ಸಿನ ಭದ್ರಕೋಟೆಯಲ್ಲಿ ಬಿರುಕು ಹುಟ್ಟಿಸಿ ತಲ್ಲಣ ಉಂಟುಮಾಡುತ್ತಲೇ ಇರುತ್ತದೆ. ನಮ್ಮ ಈ ಅಭದ್ರ ಭಾವನೆಯೇ ಎಲ್ಲಾ ವಿಮಾ ಕಂಪನಿಗಳ ಬಂಡವಾಳ! ಜಗತ್ತಿನ ಜನರೆಲ್ಲರೂ ತಮ್ಮಲ್ಲಿರುವ ಈ ಕಳಕೊಳ್ಳುವ ಭಯವನ್ನು ಎಂದಾದರೂ ಮೀರಬಲ್ಲರಾದರೆ, ಅಂದು ಎಲ್ಲಾ ಇನ್ಷೂರೆನ್ಸ್ ಕಂಪೆನಿಗಳ ಬಾಗಿಲಿಗೆ ಬೀಗ ಬಿದ್ದಿರುತ್ತದೆ. ಈಚೆಗೆ ಪತ್ರಿಕೆಯೊಂದರಲ್ಲಿ ಒಂದು ಲೇಖನ ಓದುತ್ತಿದ್ದೆ. ಅದರಲ್ಲಿದ್ದಂತೆ, ದೇವರನ್ನು ಅತಿಯಾಗಿ ನಂಬುವವರಲ್ಲಿ ಬಡವರಿಗಿಂತ ಶ್ರೀಮಂತರ ಸಂಖ್ಯೆಯೇ ಹೆಚ್ಚಂತೆ! ಉಳ್ಳವರಿಗೆ ತಮ್ಮಲ್ಲಿರುವುದನ್ನು ಕಳೆದುಕೊಳ್ಳುವ ಭಯ. ಹಾಗಾಗಿ ಆ ಭಯ ನಿವಾರಣೆಗಾಗಿ ಜಗದೀಶನಲ್ಲಿ ಅವರು ಮೊರೆಯಿಡುವುದು ಸಹಜವಾಗಿಯೇ ಇದೆ. ಕಳೆದುಕೊಳ್ಳಲು ಏನೂ ಇಲ್ಲದವರಿಗೆ ಇನ್ನೇತರ ಭಯ?

ಆದರೆ, ಕಳೆದಿದ್ದೆಲ್ಲವೂ ಕೆಟ್ಟದ್ದೇ ಆಗಬೇಕಾಗಿಲ್ಲ. ಕೆಲವನ್ನು ಕಳಕೊಳ್ಳುವುದರಿಂದ ಒಳಿತಾಗುವುದೂ ಇದೆ. ಮನಸ್ಸಿಗೆ ಬೇಡವೆಂದರೂ ಬಂದು ಅಂಟಿಕೊಳ್ಳುವ ನಕಾರಾತ್ಮಕ ಯೋಚನೆಗಳನು ಕಳೆದುಕೊಳ್ಳುವುದರಿಂದ ಯಾರಿಗೂ ಏನೂ ನಷ್ಟವಿಲ್ಲ. ಯಾವುದೇ ಕೆಲಸ ಮಾಡಬೇಕೆಂದರೂ ಅಡ್ಡಿಪಡಿಸುವ ನಮ್ಮಲ್ಲೇ ಬೇರುಬಿಟ್ಟಿರುವ ಸೋಮಾರಿತನದ ಭೂತವನ್ನು ಎಲ್ಲಾದರೂ ಬಿಟ್ಟು, ಕಳೆದುಕೊಳ್ಳುವಂತಿದ್ದರೆ ಚಂದವೇ ಅಲ್ಲವೇ? ಅವರಿವರನ್ನು ಕಂಡರೆ ಅಸೂಯೆಯಿಂದ ಕುದಿಯುವುದು, ಆಗದವರ ಬಗ್ಗೆ ಕುಹಕ, ಕೆಡುನುಡಿಗಳನ್ನಾಡುವ ದುರ್ಗುಣ ಕಳೆಯುತ್ತದೆಂದರೆ ಯಾರು ತಾನೇ ಬೇಡವೆಂದಾರು? ಅಯ್ಯೊ, ಮುಖ್ಯವಾದುದನ್ನೆ ಹೇಳಲು ಮರೆತೆ. ದಿನದಿನಕ್ಕೆ, ನಮ್ಮ ಅರಿವಿಲ್ಲದೆಯೇ ಏರಿಕೊಳ್ಳುವ- ಹಾಗೆನ್ನುವುದಕ್ಕಿಂತ ಹೇರಿಕೊಳ್ಳುವ ಅನ್ನುವುದೇ ಸರಿ- ಮೈತೂಕವನ್ನು ಕಳೆದುಕೊಂಡು ಹೂವಿನಂತೆ ಹಗುರವಾಗುವುದು ಅದೆಂಥ ಉಲ್ಲಾಸದ ಅನುಭವ! ಹತಾಶರಂತೆ ತೂಕದ ಯಂತ್ರವನ್ನು ನಿತ್ಯವೂ ದಿಟ್ಟಿಸುತ್ತ,

ಆದರ ಒಂದೇ ಗೆರೆ ಬರಲೋಬೇಡವೋ ಎನ್ನುವಂತೆ ಈಬದಿಗೆ ಬಂದಾಗ, ಕಳಕೊಂಡವರ ವದನ ಹಿಗ್ಗಿ ಹೂವಾಗುವ ಪರಿಯನ್ನು ನಾನೆಂತು ಬಣ್ಣಿಸಲಿ?

ಹುಟ್ಟಿದಾಗಿನಿಂದ ಒಂದೊಂದೇ ಕ್ಷಣ, ನಿಮಿಷ, ದಿನಗಳನ್ನು ನಮ್ಮ ಆಯುಷ್ಯದ ಮೊತ್ತದಿಂದ ಕಳೆದುಕೊಳ್ಳುತ್ತಾ ಹೋಗುವ ನಮಗೆ ಒಟ್ಟಿನಲ್ಲಿ, ಕಳೆದುಕೊಳ್ಳುವ ಈ ಅನಿವಾರ್ಯ ಕ್ರಿಯೆಯಿಂದ ಮುಕ್ತಿ ಇಲ್ಲ. ಆದರೆ ಅದಕ್ಕೆ ಬದಲಾಗಿ ಅನುಭವದ ಮೊತ್ತವನ್ನು ನಾವು ಏರಿಸಿಕೊಳ್ಳುತ್ತ ಹೋಗುತ್ತೇವೆ. ನಮ್ಮ ಜೀವಿತದ ಅವಧಿಯಲ್ಲಿ ನಾವು ಕಳೆದಿದ್ದೆಷ್ಟು, ಕೊನೆಗೆ ಉಳಿದಿದ್ದೆಷ್ಟು ಎಂದು ನಿರ್ಧರಿಸುವುದು ನಾವಿಲ್ಲವಾದ ನಂತರವೂ ಇರುವ ಜಗತ್ತು. ಹಾಗಾಗಿ, ಬಹುಪಾಲು ಜನ ತಮ್ಮ ಆಯುಷ್ಯ ತೀರಿದ ನಂತರ ಪ್ರಪಂಚದ ಪಾಲಿಗೆ ಇನ್ನಿಲ್ಲವಾಗಿ ಕಳೆದೇಹೋದರೆ, ಕೆಲವರು ಮಾತ್ರ ಅವರು ಇಲ್ಲದಾಗಲೂ ಉಳಿಯುತ್ತಾರೆ. ಅದು ನಾವೆಲ್ಲರೂ ಕಲಿಯಬೇಕಾದ ಲಾಭದಾಯಕ ಲೆಕ್ಕಾಚಾರ.

ಕಳೆಯುವ ವಿಷಯದ ಬಗ್ಗೆ ಯಾರೇನೇ ಹೇಳಲಿ, ಕೊನೆಗೂ ನಾವೆಲ್ಲ ಒಪ್ಪಿಕೊಳ್ಳಲೇಬೇಕಾದ ವಾಸ್ತವವೆಂದರೆ ಕಳೆದಿದ್ದು ಎಷ್ಟೇ ಅಮೂಲ್ಯವಾದರೂ ಅದು ಇನ್ನು ನಮ್ಮದಲ್ಲ! ಇದು ವಸ್ತುಗಳಿಗೆ ಮಾತ್ರವಲ್ಲದೆ ವ್ಯಕ್ತಿಗಳು, ಎಲ್ಲಾ ಬಗೆಯ ಸಂಬಂಧಗಳಿಗೂ ಅನ್ವಯಿಸುತ್ತದೆ. ಆ ವ್ಯಕ್ತಿಯಾಗಲೀ, ವಸ್ತುವಾಗಲೀ ನಮ್ಮೊಂದಿಗೆ ಇದ್ದಾಗ ನೀಡಿದ ಆನಂದದ ನೆನಪಷ್ಟೇ ಮಧುರ. ಆ ನೆನಪು ಇಡೀ ಬದುಕನ್ನು ಸಂಪನ್ನಗೊಳಿಸುವಷ್ಟು ಸಮೃದ್ಧ. ಕಳೆದುಕೊಂಡಿದ್ದನ್ನು ಮತ್ತೆ ಪಡೆಯಲಾಗದಿದ್ದರೂ ಅದಕ್ಕಿಂತ ಉತ್ತಮವಾದದ್ದನ್ನು, ಕಳೆದಿದ್ದರ ಹಲವಾರು ಪಟ್ಟು ಮೌಲ್ಯದ್ದನ್ನು ಪಡೆಯುವ ಆತ್ಮವಿಶ್ವಾಸದ ಒರತೆ ಮಾತ್ರ ನಮ್ಮಂತರಾಳದಿಂದಲೇ ಚಿಮ್ಮಿ ಬರಬೇಕು. ಏನೇ ಕಳೆದರೂ ಈ ಅದಮ್ಯ ಚೈತನ್ಯವನ್ನು ನಾವು ಕಳೆದುಕೊಳ್ಳದಿದ್ದರೆ ಸಾಕಲ್ಲವೇ?

●

ಹೇಳ್ಕೊಳ್ಳಕ್ ಒಂದೂರು

–ಎಂ.ಆರ್. ದತ್ತಾತ್ರಿ

'ಯಾವೂರಪ್ಪ ತಮ್ಮಾ ನಿಂದು?' ಎಂದು ದಪ್ಪ ಕನ್ನಡಕದ ಮತ್ತು ಬೋಳುತಲೆಯ ಹಿರಿಯರು ನನ್ನನ್ನು ಪ್ರಶ್ನಿಸಿದಾಗ ನಾನು ಬಹಳ ಗೊಂದಲಕ್ಕೆ ಬಿದ್ದುಬಿಟ್ಟೆ. ಕೇಳಿದವರಿಗೆ ಇದು ಅತಿ ಸರಳ ಪ್ರಶ್ನೆಯಾದರೂ, ಉತ್ತರ ಹೇಳುವ ನನಗೆ ಅಲ್ಲ. ಅವರೇನೋ ಹಿರಿಯರು, ದಾವಣಗೆರೆಯಿಂದ ಲಾಸ್ ಏಂಜಲಿಸ್‌ಗೆ ಮಗಳ ಮನೆಗೆ ಬಾಣಂತನಕ್ಕೆ ಬಂದವರು. ದಿನಪೂರ್ತಿ ಮನೆಯಲ್ಲೇ ಕೂತಿದ್ದು ಬೇಸರವಾಗಿ ಕನ್ನಡ ಕೂಟದ ಕಾರ್ಯಕ್ರಮಕ್ಕೆ ಬಂದು 'ನಗೆನಾಟಕ'ಕ್ಕೆ ಆಕಳಿಸಿ ಜೋಂಪು ಹತ್ತಿದಂತಾಗಿ, ಜಾಸ್ತಿ ಮಾತೇ ಆಡದ ಅಳಿಯನೊಂದಿಗೆ ಊಟದ ಸಾಲಿನಲ್ಲಿ ನಿಂತಾಗ ಮುಂದಿದ್ದ ನನ್ನನ್ನು ಕಂಡು ಅವರ ನಾಲಿಗೆ, 'ಇನ್ನು ತಡೀಲಾರೆ ನಮ್ಮಪ್ಪಾ' ಎಂದು ಮೌನವನ್ನು ಮುರಿದ ಬಗೆಯಿದು.

ನನ್ನ ಗಿರಕಿ ಪ್ರಾರಂಭವಾದದ್ದು ಯಾವೂರು ಎಂದು ಹೇಳುವುದು ಎನ್ನುವ ನನ್ನೊಳಗೇ ಮೂಡಿದ ಮರುಪ್ರಶ್ನೆಯಿಂದ. ಲಾಸ್ ಏಂಜಲಿಸ್ ಎಂದು ಹೇಳಿಕೊಳ್ಳಲು, ಇಲ್ಲಿ ನನ್ನ ಒಬ್ಬೇಒಬ್ಬ ನೆಂಟರಿಷ್ಟರಿಲ್ಲ; ಅಸಲಿಗೆ ಮನೆಯೇ ಇಲ್ಲ, ಬಾಡಿಗೆ ಮನೆಯಲ್ಲಿದ್ದೇನೆ. ಬೆಂಗಳೂರಿನಲ್ಲಿ ಮನೆ ಕಟ್ಟಿದ್ದೇನೆ, ಆದರೆ

ಅದನ್ನು ಬಾಡಿಗೆಗೆ ಕೊಟ್ಟಿದ್ದೇನೆ. ನಾನು ಬೆಳೆದ ಮತ್ತು ಅಪ್ಪ ಅಮ್ಮ ಈಗಲೂ ಇರುವ ಚಿಕ್ಕಮಗಳೂರು ಎನ್ನಲು ವರ್ಷಕ್ಕೊ ಎರಡು ವರ್ಷಕ್ಕೋ ವಾರವೋ ಹದಿನೈದು ದಿನಗಳೋ ಅಲ್ಲಿ ಕಳೆದರೆ ಹೆಚ್ಚು; ನಾನೇ ಇರದ ಊರು ಹೇಗೆ ನನ್ನದಾಗುತ್ತೆ? ಹೆಸರಿನ ಇನಿಷಿಯಲ್‌ನೊಳಗೆ ಸೇರಿ ಪಾಸ್‌ಪೋರ್ಟ್‌ನಲ್ಲಿ ಮಿಡ್ಲ್‌ನೇಮ್ ಎಂದು ಕರೆಸಿಕೊಳ್ಳುವ ಮಂಡಲಮನೆ ಎನ್ನುವ ಮಲೆನಾಡ ಗ್ರಾಮ ನನ್ನದು ಎನ್ನೋಣವೆಂದರೆ ನನ್ನ ತಂದೆಯ ಕಾಲಕ್ಕೇ ಅದನ್ನು ಬಿಟ್ಟುಬಂದಾಗಿದೆ; ಅಲ್ಲಿಯೇ ವ್ಯವಸಾಯ ಮಾಡುತ್ತಿದ್ದ ನನ್ನ ದೊಡ್ಡಪ್ಪನ ಮಗ ಕೂಡ ಇತ್ತೀಚೆಗೆ ಊರುಬಿಟ್ಟು ಚಿಕ್ಕಮಗಳೂರು ಪಟ್ಟಣವನ್ನು ಸೇರಿದ್ದಾನೆ. ಇನ್ನು ನಾನು ಹೇಗೆ ಆ ಊರಿನೊಂದಿಗೆ ಗುರುತಿಸಿಕೊಳ್ಳಲಿ?

ಪ್ರಶ್ನೆ ನನ್ನ ತಲೆಯಲ್ಲಿ ಬುಗುರಿಯಾಗಿ ಗಿರಗಿರನೆ ತಿರುಗುವಾಗ ಕಣ್ಣರಳಿಸಿ ಆಕಾಶದೆಡೆಗೆ ನೋಡುತ್ತ ಉತ್ತರದ ಸಾಕ್ಷಾತ್ಕಾರಕ್ಕಾಗಿ ಕಾದ ನನ್ನನ್ನು ಕಂಡು ಅವರಿಗೆ 'ಅಯ್ಯೋ ಶಿವನೇ, ಊಟಕ್ಕಾಗಿ ಕಾಯುತ್ತಿದ್ದ ಪಾಪದ ಮನುಷ್ಯನಿಗೆ ಎಂತಹಾ ಶಿಕ್ಷೆ ಕೊಟ್ಟೆ; ಪ್ರಶ್ನೆ ಕೇಳಿ ಪ್ರಜ್ಞೆ ತಪ್ಪಿಸಿಬಿಟ್ಟೆನಲ್ಲಾ!' ಎಂದು ಕನಿಕರವಾಗಿರಬೇಕು. ಮಾತೇ ಆಡದ ಅಳಿಯ ಮಾವನೆಡೆಗೆ ಬಾಗಿ ಗದರಿಸುವ ದನಿಯಲ್ಲಿ 'ನೀವ್ ಹಂಗೆಲ್ಲಾ ಪರ್ಸನಲ್ ಕ್ವೆಶ್ಚನ್ಸ್ ಕೇಳ್‌ಬಾರ್ದು.' ಎಂದು ಜೋರು ಮಾಡಿದ. ಒಮ್ಮೆ ನನ್ನೆಡೆಗೆ ಗಮನಿಸುವವನಂತೆ ನೋಡಿ ನಾನಿನ್ನೂ ಜ್ಞಾನೋದಯಕ್ಕಾಗಿ ಆಕಾಶದೆಡೆಗೆ ಮುಖ ಹಾಕಿರುವುದನ್ನು ಕಂಡು ಕನಿಕರದ ಧ್ವನಿಯಲ್ಲಿ ಮಾವನೊಂದಿಗೆ 'ಕನ್ನಡಕೂಟಕ್ಕೆ ಬಂದವ್ರೆಲ್ಲರಿಗೂ ಕನ್ನಡ ಬಂದೇಬರುತ್ತೆ ಅಂತ ಅಲ್ಲಾರೀ ಇಲ್ಲಿ' ಎಂದ. ಇವನು ಕನ್ನಡ ಕಾರ್ಯಕ್ರಮಕ್ಕಲ್ಲ, ಬರೀ ಊಟಕ್ಕೆ ಬಂದಿರುವವನು ಎನ್ನುವುದನ್ನು ಗೌರವದಿಂದಲೇ ಹೇಳಿದ್ದ.

ಅಷ್ಟು ಸರಳ ಪ್ರಶ್ನೆ ಏಕೆ ಹಾಗೆ ಸಂಕೀರ್ಣವಾಗಬೇಕು? ಯಾರಿಗೂ ಆಗದೇ ಇರುವಂಥದ್ದು ನನಗೇಕೆ ಆಗುತ್ತಿದೆ? ಯಾರು ಕೇಳುವುದಿಲ್ಲ ಈ ಪ್ರಶ್ನೆಯನ್ನು? ಕೆಂಪುಬಸ್ಸಿನಲ್ಲಿ ನಿಮ್ಮ ಮುಂದಿನ ಸಾಲಿನಲ್ಲಿ ಕುಳಿತ ಇಬ್ಬರು ಪ್ರಯಾಣಿಕರ ಸಂಭಾಷಣೆಯನ್ನು ಗಮನಿಸಿ:

'ಯಾವ ಕಡೆ ಆಯ್ತು ತಮ್ದು?'

'ಬಿಸಲೇಹಳ್ಳಿ.'

'ಓಹೋ. ಸಕ್ರೇಪಟ್ನದಿಂದ ಇತ್ಲಾಗೇ.'

'ಹೌದು. ತಮ್ದು?'

'ರಾಂಪುರ.'

'ಮೂಡ್ಗೆರೆ ರೋಡು.'

'ಹೌದು.'

ಎಷ್ಟು ಸರಳ. ನಿಮ್ಮದು ಯಾವೂರು ಎಂದರೆ ಯಾರೂ ಗಿರಕಿ ಹೊಡೆಯುವುದಿಲ್ಲ. ಯಾರೂ ಈ ಊರ್ ಹೇಳ್ಲೋ ಆ ಊರ್ ಹೇಳ್ಲೋ, ಈ ಊರ್ ಹೇಳ್ಲೋ ಆ ಊರ್

ಹೇಳ್ಲೋ ಎಂದು ಫ್ಯಾನಿನ ಪಕಳೆಗಳಂತೆ ಗಿರ್ರನೆ ತಿರುಗುವುದಿಲ್ಲ. ಅಲ್ಲಿದೆ ನಮ್ಮನೆ ಇಲ್ಲಿ ಬಂದೆ ಸುಮ್ಮನೆ ಎಂದು ಅಳುವುದಿಲ್ಲ. ಸರಳ-ನೇರ - ಒಂದೇ ಪದದ ಉತ್ತರ. 'ಪಾಸ್‌ಪೋರ್ಟ್‌ನಲ್ಲಿ ಹೇಗಿದೆಯೋ ಹಾಗೆಯೇ ಹೇಳತಕ್ಕದ್ದು' ಎನ್ನುವ ಯಾವ ಷರತ್ತಿನ ಕತ್ತಿಯೂ ಅವರ ತಲೆಯ ಮೇಲೆ ತೂಗುವುದಿಲ್ಲ. ಅವರಿಗೆ ಮರ್ಮಾಘಾತಕೊಡುವ ಪ್ರಶ್ನೆಗಳು ಬೇರೆ ಇರಬಹುದು, ಆದರೆ ಇದಲ್ಲ. ಯಕ್ಷಪ್ರಶ್ನೆಯನ್ನು ಕೇಳಿಸಿಕೊಂಡು, 'ಇಷ್ಟೆಯೇ ನಿನ್ನ ಪ್ರಶ್ನೆ' ಎಂದು ಚಕಚಕನೆ ಉತ್ತರಿಸುವ ಯುಧಿಷ್ಠಿರರು ಅವರು; 'ಎಂತಹಾ ಘನಪ್ರಶ್ನೆ!' ಎಂದು ಪೆದ್ದುಪೆದ್ದಾಗಿ ಶಬ್ದಗಳನ್ನು ಮಾಡಿ ಪ್ರಜ್ಞೆತಪ್ಪಿ ಬೀಳುವ ನಕುಲ ನಾನು.

ಹೀಗಿರಲಿಲ್ಲ ನನಗೂ. ನನ್ನ ಇಂಜಿನಿಯರಿಂಗ್ ಡಿಗ್ರಿಯ ತನಕವೂ ಮನೆಯಲ್ಲೇ ಇದ್ದುಕೊಂಡು ಓದಿದವನು ನಾನು. ಹೇಳಿಕೊಳ್ಳಲು ಒಂದೇ ಊರು ಮತ್ತು ಸ್ಥಿರವಾದ ಒಂದೇ ಅಡ್ರೆಸ್ ನನಗೂ ಇತ್ತು. ಆಗ ಅದರಿಂದ ಓಡಿ ಹೋಗಬೇಕಿತ್ತು. ಪಿಯುಸಿಯಲ್ಲಿ ಮತ್ತು ಸಿಇಟಿಯಲ್ಲಿ ಒಳ್ಳೆಯ ಅಂಕ ಬಂದಿದ್ದರಿಂದ ಮನೆ ಬಿಟ್ಟು ಹೊರಗಿದ್ದು ಓದುವ ಅವಕಾಶವನ್ನು ಸಾಧಿಸಿಕೊಳ್ಳಲು ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್ (ಎಸ್‌ಜೆಸಿಇ)ಅನ್ನು ನನ್ನ ಪ್ರಥಮ ಆದ್ಯತೆಯಾಗಿ ಕೇಳಿದ್ದೆ. ಆ ಕಾಲೇಜು ನನಗೆ ಸಿಗುತ್ತಿತ್ತು ಕೂಡ. ಆದರೆ ನನ್ನ ತಂದೆಯವರ ಇಚ್ಛೆ ಬೇರೆಯಾಗಿತ್ತು. 'ಇಂಜಿನಿಯರಿಂಗ್ ಓದುವುದಿದ್ದರೆ ಮನೆಯಲ್ಲಿದ್ದುಕೊಂಡೇ ಓದು; ಈ ಊರಿನಲ್ಲಿಯೇ ಓದು' ಎಂದು ಫಾರಂನಲ್ಲಿ ನನ್ನ ಮೊದಲ ಆದ್ಯತೆಯನ್ನು ಕಪ್ಪು ಇಂಕಿನಲ್ಲಿ ಹೊಡೆದು ಹಾಕಿಸಿಬಿಟ್ಟರು. ಸೂಕ್ಷ್ಮ ಆರೋಗ್ಯದವನಾಗಿದ್ದ ನಾನು ಮನೆಯಲ್ಲಿದ್ದುಕೊಂಡು ಓದುವುದೇ ಲೇಸು ಎಂದು ಅವರಿಗೆ ಬಲವಾಗಿ ಅನ್ನಿಸಿಬಿಟ್ಟಿತ್ತು. ಅಧ್ಯಕ್ಷರು ಸತ್ತು ಉಪಾಧ್ಯಕ್ಷರು ಅಧ್ಯಕ್ಷರಾಗುವಂತೆ ಎರಡನೇ ಸ್ಥಾನದಲ್ಲಿದ್ದ ನನ್ನೂರಿನ ಕಾಲೇಜು ತನಗರಿವಿಲ್ಲದಂತೆಯೇ ನನ್ನ ಫಾರಂನಲ್ಲಿ ಮೊದಲನೇ ಪಟ್ಟವನ್ನು ಪಡೆಯಿತು.

ದೂರದ ಕಾಲೇಜುಗಳಿಗೆ ಸೇರಿ ಹಾಸ್ಟೆಲ್‌ನಲ್ಲಿದ್ದುಕೊಂಡೋ ಎಲ್ಲಿಯೋ ಪೇಯಿಂಗ್‌ಗೆಸ್ಟ್ ಆಗಿದ್ದುಕೊಂಡೋ ಓದುತ್ತಿದ್ದ ಸ್ನೇಹಿತರು ಊರಿಗೆ ಬಂದರೆ ಅವರ ಬಣ್ಣಬಣ್ಣದ ಕಥೆಗಳಿಗೆ ನನ್ನ ಮನಸ್ಸು ಬಾಡುತ್ತಿತ್ತು. ನನ್ನ ಕಾಲೇಜಿನಲ್ಲಿಯೂ ಹೊರಗಿನಿಂದ ಬಂದು ರೂಮು ಮಾಡಿಕೊಂಡು ಓದುವ ಹುಡುಗರಿಗಿರುವಷ್ಟು ಪ್ರಬುದ್ಧತೆ ತಂದೆ-ತಾಯಿ-ಒಡಹುಟ್ಟಿದವರೊಂದಿಗೆ ಇದ್ದುಕೊಂಡು ಓದುವ ಹುಡುಗರಿಗಿಲ್ಲ ಎನ್ನುವ ಪ್ರತೀತಿ ಬಹಳ ಚಾಲ್ತಿಯಲ್ಲಿತ್ತು. ಈ 'ಮನೆ ಬಿಟ್ಟುಬಂದ' ವಿದ್ಯಾರ್ಥಿ ಮಿತ್ರರು ತಮ್ಮ ಗಟ್ಟಿತನವನ್ನು ತೋರಿಸಿಕೊಳ್ಳಲಿಕ್ಕಾಗಿಯೇ ಈ ಪ್ರತೀತಿಯನ್ನು ಮತ್ತೂ ಜತನಗೊಳಿಸುತ್ತಿದ್ದರು. 'ನಿಮಗಾದ್ರೆ ಬಿಡ್ರೋ ಯೋಚ್ನೆಯೇ ಇಲ್ಲ. ಕ್ಲಾಸು ಮುಗ್ಸಿ ಮನೆಗೆ ಹೋಗೋ ಹೊತ್ಗೆ ಬಿಸಿಬಿಸಿ ಅಡುಗೆ ರೆಡಿಯಾಗಿರುತ್ತೆ. ಕಾಚ ಬನಿಯನ್ನೂ ಕೂಡ ನೀವೇ ಒಗ್ಯಾಕಬೇಕಾಗಿಲ್ಲ. ನಾವಾದ್ರೆ ಎಲ್ಲಾ ಕೆಲ್ಸನೂ ಖುದ್ದು ಮಾಡ್ಕೊಬೇಕು.' ಎಂದು ಮಹಾತ್ಮ ಗಾಂಧೀಜಿಯಂತೆ ಪೋಸು ಕೊಟ್ಟು ಆಶ್ರಮಧರ್ಮವನ್ನು

ನಮಗೆ ಬೋಧಿಸುತ್ತಿದ್ದರು. ಅವರ ಈ ಉದ್ಧರಣಗಳಲ್ಲಿ ನಮ್ಮನ್ನು ಹಂಗಿಸುವುದಿತ್ತೋ, ಅಸೂಯೆಯಿತ್ತೋ, ಮನೆ ತೊರೆಯಲಾಗದವರು ಎನ್ನುವ ಟೀಕೆಗಳಿತ್ತೋ ನನಗೆ ಇವತ್ತಿಗೂ ಅರ್ಥವಾಗಿಲ್ಲ.

ನಾನಂತೂ ಮನೆ ಹೊರಗಿನ ಧೀರರನ್ನು ಕಂಡು ಅಸೂಯೆಪಟ್ಟಿದ್ದು ನಿಜ. ಅದಕ್ಕೆ ಬೇಕಾದಷ್ಟು ಅಂಶಗಳಿದ್ದವು. ಓದಿದೆಯೋ ಸಿನಿಮಾ ನೋಡಿದೆಯೋ ಎಂದು ಕೇಳುವವರು ಅವರಿಗಿರಲಿಲ್ಲ. 'ನಮ್ಮ ದತ್ತು ಜೊತೆ ಯಾವಾಗ್ಲೂ ಇರ್ತಾನಲ್ಲಾ ಸುದೇಶ, ಇವತ್ತು ಸರ್ಕಲ್ ಹತ್ರ ಸಿಗರೇಟು ಸೇದ್ತಾ ನಿಂತಿದ್ದ! ಎಂತೆಂಥಾ ಫ್ರೆಂಡ್ಸ್ ನೋಡು ಇವನಿಗೆ?' ಎಂದು ಮನೆಯಲ್ಲಿ ಜಾಡಿ ಚುಚ್ಚುವ ಅಕ್ಕಂದಿರು ಅವರಿಗೆ ಹತ್ತಿರವಿರಲಿಲ್ಲ. ಹೋಳಿಹಬ್ಬದ ದಿನ ಚಿತ್ರಲೇಖ ಎನ್ನುವ ಹುಡುಗಿಯ ಮುಖಕ್ಕೆ ಬಣ್ಣ ಹಚ್ಚಿದ ಸುದ್ದಿ ಅವರ ಮನೆಯ ತನಕ ತಲುಪುತ್ತಿರಲಿಲ್ಲ. ಗೆಳೆಯರೊಂದಿಗೆ ಟೌನ್ ಕ್ಯಾಂಟೀನಿನಲ್ಲಿ ಮಸಾಲೆದೋಸೆ ತಿನ್ನುತ್ತಿರುವಾಗ ಅಚಾನಕಾಗಿ ಚಿಕ್ಕಪ್ಪ ಎದುರಾಗಿ ಬರೀ ನನ್ನನ್ನಷ್ಟೇ ಅಲ್ಲ ಇಡೀ ಗ್ಯಾಂಗನ್ನೇ ಅನುಮಾನದಲ್ಲಿ ನೋಡುವಾಗ ಭೂಮಿ ಬಾಯ್ಬಿಡಬಾರದೇ ಎನ್ನುವಂತಹ ಪ್ರಸಂಗಗಳು ಅವರಿಗೆ ಎದುರಾಗುತ್ತಿರಲಿಲ್ಲ.

ಅವೆಲ್ಲಕ್ಕೂ ದೊಡ್ಡದಾಗಿ ಕಣ್ಣು ಕುಕ್ಕುತ್ತಿದ್ದುದು ಎಂದರೆ ಆ ಹುಡುಗರ ಕೈನಲ್ಲಿ ಹರಿದಾಡುತ್ತಿದ್ದ ಹಣಕಾಸು. ನಮ್ಮೆಲ್ಲಾ ಬೇಕು ಬೇಡಗಳನ್ನು ಮನೆಯ ಹಿರಿಯರೇ ನಿರ್ವಹಿಸುತ್ತಿದ್ದರಿಂದ ಸ್ವಂತ ಖರ್ಚಿಗೆ ಎಂದು ಹಣ ಹಿರಿಯುವ ಕಾರಣವೇ ತಿಳಿಯದಾಗಿ ನಾವು 'ಮನೆಯ ಮಕ್ಕಳು' ಬರೀ ಚಿಲ್ಲರೆಯವರಾಗಿದ್ದರೆ, ಈ ಮನೆ ಹೊರಗಿನ ಹುಡುಗರೋ, ಮೆಸ್ಸಿಗೆ ದುಡ್ಡು ಕಟ್ಟಬೇಕು, ಕಾಲೇಜಿಗೆ ಬ್ಯಾಂಕಿನಿಂದ ಡ್ರಾಫ್ಟ್ ತರಬೇಕು, ಡ್ರಾಯಿಂಗ್ ಬೋರ್ಡ್ ಮುರಿದು ಹೋಗಿದೆ, ಕ್ಯಾಲ್ಕುಲೇಟರ್ ಕಳೆದು ಹೋಯಿತು, ರೂಮಿನ ಬಾಡಿಗೆ ಕಟ್ಟಿಯೇ ಇಲ್ಲ ಮುದುಕ ಓನರ್ ಎರಡು ಸಲ ಬಂದು ಹೋದ, ಮುಂದಿನ ತಿಂಗಳಿನಿಂದ ನೂರು ರುಪಾಯಿ ಹೆಚ್ಚಿನ ಬಾಡಿಗೆಯಂತೆ... ಎಂದು ಮಹಾ ಪ್ರಬುದ್ಧತೆಯಲ್ಲಿ ಮಾತನಾಡುತ್ತ ಈ ಎಲ್ಲಾ ವ್ಯವಹಾರಗಳ ನಡುವೆಯೇ ಕುಶಲತೆಯಿಂದ ಹೆಚ್ಚಿನ ಹಣವನ್ನು ತರಿಸಿಕೊಂಡು ನಮಗಿಂತಾ ಸ್ಥಿತಿವಂತರಾಗಿ ಬಿಡುತ್ತಿದ್ದರು. ಮನೆಯಿಂದ ದೂರವಿದ್ದಾರಲ್ಲ ಎನ್ನುವ ಕಕ್ಕುಲತೆಗೋ ಏನೋ ಅವರ ಮನೆಯವರೂ ತೀರಾ ಪ್ರಶ್ನಿಸಿದೆ ಹಣ ಕಳುಹಿಸುತ್ತಿದ್ದರು. ಈ ಹುಡುಗರು ಹೀಗೆ ಹೆಚ್ಚಾಗಿ ತರಿಸಿಕೊಂಡ ದುಡ್ಡಿನಿಂದ ನಮ್ಮನ್ನು ಆಳುತ್ತ ತಮ್ಮ ಸಿರಿವಂತಿಕೆಯ ಮಾತುಗಳಲ್ಲಿ ಮನೆಯ ಹುಡುಗರನ್ನು ಭರ್ತ್ಸಿಸುತ್ತಿದ್ದರು. 'ಮಧ್ಯಾಹ್ನದ ಲ್ಯಾಬಿಗೆ ಚಕ್ಕರ್ ಹೊಡ್ದು ಗುರುನಾಥ ಥಿಯೇಟ್ರಲ್ಲಿ ಮಾಧುರಿ ದೀಕ್ಷಿತ್ ಸಿನಿಮಾಕ್ಕೆ ಹೋಗೋಣ ನಡೀರೋ. ದುಡ್ಡಿಲ್ದೇ ಇದ್ರೆ ಹೇಳಿ, ನಾನು ಹಾಕ್ತೀನಿ.'!

ಇಂಜಿನಿಯರಿಂಗ್ ಮುಗಿಸಿದ ಮೇಲೆ ಮನೆ ಬಿಟ್ಟು ಹೊರಗಿನ ಪ್ರಪಂಚಕ್ಕೆ ಬೀಳುವ ಅವಕಾಶ ನನಗೂ ಬಂತು. ಎಚ್‌ಎಂಟಿ, ಬಿಇಎಲ್, ಬಿಎಚ್‌ಇಎಲ್ ಅಂತೆಲ್ಲಾ ಪಬ್ಲಿಕ್

ಸೆಕ್ಟರ್ ಕಂಪನಿಗಳನ್ನು ಸೇರಿಕೊಳ್ಳುವ ಕ್ರೇಜ್ ಇದ್ದ ದಿನಗಳಲ್ಲಿ ನಾನೂ ಆಯ್ಕೆಯ ಪರೀಕ್ಷೆಗಳನ್ನು ತೆಗೆದುಕೊಂಡು ಬಿಇಎಂಎಲ್ (ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್) ಸಂಸ್ಥೆಗೆ ಆಯ್ಕೆಯಾಗಿ ಬಿಟ್ಟೆ. ಮೊದಲ ವರ್ಷ ಟ್ರೈನಿ ಇಂಜಿನಿಯರ್ ಆಗಿ ನನಗೆ ಸಿಗುತ್ತಿದ್ದ ಸ್ಟೈಪೆಂಡ್ ತಿಂಗಳಿಗೆ ಸಾವಿರ ರುಪಾಯಿಗಳು. ನನ್ನ ದೊಡ್ಡಪ್ಪನವರಿಗೆ ಸ್ನೇಹಿತರಾಗಿದ್ದ ನನ್ನ ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲರು 'ಅಷ್ಟು ಕಡಿಮೆ ಸಂಬಳಕ್ಕೆ ಊರು ಬಿಟ್ಟೇಕೆ ಹೋಗಬೇಕು? ನಮ್ಮ ಕಾಲೇಜಿಗೇ ಬಂದು ಲೆಕ್ಚರರ್ ಆಗಿ ಸೇರಿಕೊಳ್ಳಲಿ. ಎರಡು ಸಾವಿರಕ್ಕೂ ಮೀರಿ ಸಂಬಳವನ್ನು ಕೊಡುತ್ತೇವೆ. ನಮ್ಮ ಕಾಲೇಜಿನ ಸ್ಪಾನ್ಸರ್‌ಷಿಪ್ಪಿನಲ್ಲೇ ಎಂಟೆಕ್ ಮಾಡಿಸುತ್ತೇವೆ.' ಎಂದರಂತೆ. ನಮ್ಮ ತಂದೆಯವರಿಗೆ ಅದೇ ಆಕರ್ಷಕವಾಗಿ ಕಾಣತೊಡಗಿತು. ಮನೆಯಿಂದ ಆಚೆಗೆ ಹೋಗುವ ಅವಕಾಶಗಳು ಕಮರಿಹೋದಂತೆ ಕಂಡಿತು. ಆದರೆ ಈ ಬಾರಿ ಅಷ್ಟು ಸುಲಭವಾಗಿ ಬಿಟ್ಟುಕೊಡುವವನಾಗಿರಲಿಲ್ಲ ನಾನು. ಕೊನೆಗೆ ನಾನೇ ಗೆದ್ದೆ. ನಮ್ಮ ತಂದೆಯವರು ಪ್ರಿನ್ಸಿಪಾಲರ ಹತ್ತಿರ ಮಾತನಾಡುತ್ತಿರುವಾಗ ಅಲ್ಲಿಗೆ ಬಂದ ನಂದಕುಮಾರ್ ಎನ್ನುವ ನನ್ನ ಮೆಚ್ಚಿನ ಲೆಕ್ಚರರ್ ಒಬ್ಬರು 'ಸಂಬ್ಳ ಕಮ್ಮಿಯಾದ್ರೂ ಆ ಕೆಲಸಕ್ಕೇ ಸೇರ್ಕಳ್ರೀ. ಇಲ್ಲೇನಿದೆ ಮಣ್ಣು' ಎಂದು ಬೇರೆ ಯಾರಿಗೂ ಕೇಳದಂತೆ ನನ್ನ ಕಿವಿಯಲ್ಲಿ ಉಸುರಿ ಮರೆಯಾಗಿದ್ದನ್ನು ನನಗಿಂದಿಗೂ ಮರೆಯಲಾಗಿಲ್ಲ. ಬಿಇಎಂಎಲ್‌ನ ಕೆಜಿಎಫ್ ಘಟಕದ ರೀಸರ್ಚ್ ಅಂಡ್ ಡೆವಲಪ್‌ಮೆಂಟ್ ವಿಭಾಗಕ್ಕೆ ನಾನು ಸೇರಿ ಎಕ್ಸಿಕ್ಯುಟಿವ್ ಹಾಸ್ಟೆಲಿನಲ್ಲಿ ನನ್ನನ್ನು ಬಿಟ್ಟು ಹೊರಡುವಾಗ ಹೆಣ್ಣು ಮಕ್ಕಳನ್ನು ಸೇರುವ ಮನೆಗೆ ಬಿಡುವಂತೆ ನನ್ನ ತಂದೆಯ ಕಣ್ಣುಗಳು ತುಂಬಿದ್ದವು.

ನಮ್ಮ ತಂದೆಯವರನ್ನು ವಾಪಸ್ಸು ಊರಿಗೆ ನಾನ್‌ಸ್ಟಾಪ್ ಬಸ್ಸು ಹತ್ತಿಸಿ ಬಂದ ಮೇಲೆ ನನ್ನ ಜೀವನ ಸುಲಭವಾಗಿರಲಿಲ್ಲ. ತಂದೆ ತಾಯಿಯರ ಆರೈಕೆಯಲ್ಲಿ ಊರು ಮನೆಯಲ್ಲಿ ಬೆಳೆದಿದ್ದ ನಾನು ಹಾಸ್ಟೆಲ್ ಪರಿಸರದಲ್ಲಿ ನರಳಿಹೋದೆ. ಊರಿನಲ್ಲಿದ್ದಾಗ, ಅಮ್ಮ ಕೆಳಗೆ ಮೆಟ್ಟಿಲುಗಳ ಬಳಿ ನಿಂತು ಮಹಡಿಯ ಮೇಲಿದ್ದ ನನ್ನ ಕೋಣೆಗೆ ಕೇಳುವಂತೆ 'ಮಗೂ ಊಟಕ್ಕೆ ಬಾರೋ. ಬಡಿಸಿದ್ದು ಆರಿ ಹೋಗ್ತಾಇದೆ' ಎಂದು ಅಕ್ಕರೆಯಿಂದ (ಗೋಗರೆಯುತ್ತ) ಕರೆಯುತ್ತಿದ್ದುದಕ್ಕೂ ಇಲ್ಲಿ ಹಾಸ್ಟೆಲ್‌ನಲ್ಲಿ ಮಣಿ ಎನ್ನುವ ಇದ್ದಲುಬಣ್ಣದ ತಮಿಳು ಹುಡುಗ ಬಾಗಿಲು ತಟ್ಟಿ 'ಸಾಪಾಡು ರೆಡಿ ಸಾ. ಡೈನಿಂಗ್ ರೂಂಕು ವಾಂಗ' ಎಂದು ವಿಕಾರವಾಗಿ ಕೂಗುವುದಕ್ಕೂ ಆಕಾಶ ಭೂಮಿಯ ವ್ಯತ್ಯಾಸವಿತ್ತು. ಹಾಸ್ಟೆಲ್ ಸೇರಿದ ಮೊದಲವಾರದಲ್ಲಿ 'ಹೊರಗಿದ್ದೇನು ಸಾಧಿಸಬೇಕಾಗಿದೆ; ಊರಿಗೆ ವಾಪಸ್ಸು ಹೋಗಿಬಿಡೋಣ' ಎನ್ನುವ ಸೆಳೆತ ಎಷ್ಟಿತ್ತೆಂದರೆ ನನ್ನ ಸೂಟ್‌ಕೇಸನ್ನು ಅನ್‌ಲೋಡ್ ಮಾಡದೆ ಯಾವ ಕ್ಷಣದಲ್ಲಾದರೂ ಹೊರಡಲು ಸಿದ್ಧವಾಗಿಟ್ಟಿದ್ದೆ.

ಆದರೆ ಹೊರಗಿನ ಪ್ರಪಂಚ ನನ್ನನ್ನು ಅರಗಿಸಿಕೊಂಡಿತು. ಓಡಾಟ, ವೃತ್ತಿ ಮತ್ತು ಪ್ರವೃತ್ತಿಗಳು ನನ್ನದೇ ಆದ ಲೋಕವನ್ನು ಸೃಷ್ಟಿಸಿಕೊಟ್ಟವು. ಊರು ಕ್ರಮೇಣ ದೂರವಾಯಿತು.

ಭೌಗೋಳಿಕವಾಗಿಯೂ ದೂರದ ಊರುಗಳಿಗೆ ಪತ್ತಿದ ಮೇಲೆ ಊರು ಮನಸ್ಸಿನಲ್ಲಷ್ಟೇ ಉಳಿಯುವ ಮತ್ತು ಅಪ್ಪ ಅಮ್ಮನೊಂದಿಗೆ ನಂಟು ಹಾಕಿಕೊಂಡು ಹಿಂದಿನ ಬದುಕನ್ನು ನೆನಪಿಸಿ ಕೊಡುವ ಕನಸಿನ ಲೋಕವಾಯಿತು (ನನಗೆ ಕನಸಿನಲ್ಲಿ ಚಿಕ್ಕಮಗಳೂರು ಬಿಟ್ಟರೆ ಮತ್ತಾವ ಊರೂ ಕಾಣಿಸಿಕೊಳ್ಳುವುದಿಲ್ಲ). ಭೌತಿಕವಾಗಿ ದೂರವಾದರೂ ಮನಸ್ಸು ಊರಿಗಾಗಿ ಮಿಡಿಯುತ್ತಲೇ ಇರುತ್ತಿತ್ತು. ಒಮ್ಮೆ ಪುಣೆಯಿಂದ ಮುಂಬಯಿಗೆ ಹೋಗುವಾಗ ರೈಲು ನಿಲ್ದಾಣದಲ್ಲಿ ಕೊಂಡ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಚಿಕ್ಕಮಗಳೂರು ಮತ್ತು ಕಾಫಿಬೆಳೆಯ ಕುರಿತಾಗಿ ಒಂದು ವಿಶೇಷ ಲೇಖನವನ್ನು ಓದಿ ಮನಸ್ಸು ಅದೆಷ್ಟು ಹರ್ಷಗೊಂಡಿತ್ತೆಂದರೆ ಪತ್ರಿಕೆಯ ಆ ಪುಟ ದಶಕಗಳ ಕಾಲ ನನ್ನ ಬಳಿ ಇತ್ತು. ಆ ಲೇಖನದ ಯಾವ ವಿಷಯವೂ ನನಗೆ ತಿಳಿಯದಿದ್ದುದಲ್ಲ. ಆದರೆ ಮುಂಬಯಿಯಲ್ಲಿ ಕುಳಿತು ನಮ್ಮೂರಿನ ಬಗ್ಗೆ ಓದಿದ್ದು ವಿಶೇಷ. ಹಾಗೆಯೇ ದೂರದ ಊರುಗಳಲ್ಲಿ ನಮ್ಮೂರಿನವರನ್ನು ಕಂಡರೆ ಮಾತನಾಡಿಸಿದರೆ ಅದೆಂತದೋ ಬಗೆಯ ಸಂತಸ. ಬೇಸ್ತು ಬಿದ್ದದ್ದೂ ಇದೆ. ಒಮ್ಮೆ ದೂರದೂರಿನಲ್ಲಿ ಭೇಟಿಯಾದ ನನ್ನೂರಿನ ಬಾಲ್ಯ ಸ್ನೇಹಿತನೊಬ್ಬ ಯಾವುದೋ ತುರ್ತುಸ್ಥಿತಿಗೆ ಬಂದಿದ್ದೇನೆ ಎಂದು ನಂಬಿಸಿ ನನ್ನಿಂದ ಹತ್ತು ಸಾವಿರ ರುಪಾಯಿಗಳನ್ನು ಕಿತ್ತವನು ಆಮೇಲೆ ನಾಪತ್ತೆಯಾಗಿಬಿಟ್ಟ. ರಾತ್ರಿಯೆಲ್ಲಾ ಊರಿನ, ನಾವು ಓದಿದ ಶಾಲೆಯ, ಬಾಲ್ಯ ಸ್ನೇಹಿತರ, ಉಪಾಧ್ಯಾಯರುಗಳ ನೆನಪಿನಲ್ಲಿ ತೋಯುತ್ತ ಹರಟೆ ಹೊಡೆದಿದ್ದೆವು. ಬೆಳಗ್ಗೆ ಅವನು ಹಣ ಕೇಳಿದಾಗ ಇಲ್ಲ ಎಂದು ಹೇಗೆ ಹೇಳಲಿ? ಇವತ್ತಿಗೂ, ಅವನಿಗೆ ಹಣ ಕೊಟ್ಟು ಕಳೆದುಕೊಂಡಿದ್ದರ ಬಗ್ಗೆ ನನ್ನಲ್ಲಿ ವಿಷಾದವಿಲ್ಲ.

ವಿಷಾದವಾದದ್ದು ಮಾತ್ರ ಊರಿಗೆ ಭೇಟಿ ಕೊಟ್ಟಾಗ. ನಾನು ಊರನ್ನು ನಿಜಕ್ಕೂ ಕಳೆದುಕೊಂಡುಬಿಟ್ಟೆ ಎನ್ನುವ ಭಾವನೆಗಳು ಗಟ್ಟಿಯಾಗಿ ಎದೆಯನ್ನು ಕುಟ್ಟುತ್ತಿದ್ದುದು ಆಗ. ಅದೇ ಊರು, ಅದೇ ಬೀದಿ, ಅದೇ ಮನೆಯಾದರೂ ಏಕೋ ನಾನು ಬಿಟ್ಟು ಹೋದದ್ದು ಇದಲ್ಲ ಎಂದು ಪ್ರತಿಸಲವೂ ಅನ್ನಿಸುತ್ತದೆ. ಫೀಲಿಂಗ್ ಈಸ್ ಬಿಲೀವಿಂಗ್ ಅನ್ನುತ್ತಾರಲ್ಲ; ಊರಿನ ವಿಷಯದಲ್ಲಿ ಫೀಲಿಂಗನ್ನು ಕಳೆದುಕೊಂಡುಬಿಟ್ಟೆನೋ ಬಿಲೀವಿಂಗನ್ನೋ ತಿಳಿದಿಲ್ಲ. ಒಟ್ಟಿನಲ್ಲಿ, ಊರಿನ ಮೇಳದಲ್ಲಿ ನನ್ನ ಧ್ವನಿಯೇ ಇಲ್ಲ ಎಂದು ಅನ್ನಿಸಿಬಿಡುತ್ತದೆ. ಊರಿನಲ್ಲೇ ಉಳಿದ ಸ್ನೇಹಿತರು ಹಿಂದಿನ ಸ್ನೇಹಿತರಲ್ಲ. ಮನೆ, ಬೀದಿ, ಸರ್ಕಲ್, ಶಂಕರಮಠ, ರಾಮಮಂದಿರ ಹೇಗೆ ನನ್ನದಲ್ಲ ಎನ್ನಿಸಿಬಿಡುತ್ತವೋ ಹಾಗೆಯೇ ಈ ಸ್ನೇಹಿತರೂ ನನ್ನವರಲ್ಲ ಎನ್ನಿಸಿಕೊಂಡು ಬಿಡುತ್ತಾರೆ. ಹಿಂದೆ ಕುಳಿತಂತೆಯೇ ಕಾಲೇಜಿನ ಮುರುಕು ಕಾಂಪೌಂಡಿನ ಮೇಲೆ ಕುಳಿತು ಹರಟಿದರೂ ನನ್ನ ಮತ್ತು ಅವರ ವೇವ್‌ಲೆಂತ್‌ಗಳು ಇನ್ನು ಯಾವತ್ತೂ ಹೊಂದುವುದಿಲ್ಲ ಎಂದು ಅನ್ನಿಸತೊಡಗುತ್ತದೆ.

ಬಾಲ್ಯ ಸ್ನೇಹಿತನೊಬ್ಬನ ಫಾರ್ಮಸಿಯಲ್ಲಿ ಹರಟೆ ಹೊಡೆಯಲು ಕುಳಿತರೆ ಪದೇಪದೇ ಹೋಟೆಲಿನಿಂದ ತಿಂಡಿ ಕಾಫಿ ತರಿಸುತ್ತ ಮತ್ತೇನಾದರೂ ತರಿಸಲೇ ಎಂದು ವಿನೀತನಾಗಿ

ಕೇಳುವ ಮೂಲಕ ದೂರ ಸರಿಯುತ್ತಾನೆ. ಹಿಂದೆ ಪಿಯುಸಿ ಓದುವಾಗ ನಾನು ಅವನು ಇದೇ ಫಾರ್ಮಸಿಯ ಮೂಲೆಯಲ್ಲಿ ಸಣ್ಣ ಟ್ರಾನ್ಸಿಸ್ಟರ್ ರೇಡಿಯೋವನ್ನು ಅವಚಿಕೊಂಡು ಕ್ರಿಕೆಟ್ ಕಾಮೆಂಟರಿ ಕೇಳುತ್ತ ಕುಳಿತು ಅವನ ತಂದೆಯಿಂದ ಬೈಯ್ಯಿಸಿಕೊಳ್ಳುತ್ತಿದ್ದೆವು. ಈಗ ಫಾರ್ಮಸಿಗೆ ಇವನೇ ಒಡೆಯ. ನಾವು ಹರಟೆ ಹೊಡೆಯುತ್ತಿದ್ದ ಮೂಲೆ ಔಷಧಿಯ ಸ್ಟಾಕುಗಳಲ್ಲಿ ಮುಚ್ಚಿ ಹೋಗಿದೆ. ಅಲ್ಲಿಗೆ ಬಂದ ಮತ್ತೊಬ್ಬ ಬಾಲ್ಯ ಸ್ನೇಹಿತ ಅವನನ್ನು ಅದೇ ಹಿಂದಿನ ಕೀಟಲೆಯಲ್ಲಿಯೇ ಮಾತನಾಡಿಸಿದವ ನನ್ನ ಕೈಕುಲುಕಿ 'ಅಮೆರಿಕಾದಲ್ಲಿದ್ದೀರಂತೆ. ಹೇಗಿದ್ದೀರಿ?' ಎಂದು ಬಹುವಚನದಲ್ಲಿ ಮಾತನಾಡಿಸಿದಾಗ ಊರು ನನ್ನಿಂದ ಅನಂತ ದೂರಕ್ಕೆ ಸರಿದು ಆಕಾಶದಲ್ಲಿ ಸಣ್ಣಚುಕ್ಕೆಯಾದಂತೆ ಭಾಸವಾಗುತ್ತದೆ. ತನ್ನ ತಾಯಿಯಂತೆಯೇ ಕುಂಕುಮದ ವ್ಯಾಪಾರ ಮಾಡುವ ನನ್ನ ಹೈಸ್ಕೂಲು ಮಿತ್ರನೊಬ್ಬನನ್ನು ಮಾತನಾಡಿಸುತ್ತಿರುವಾಗ ಅರಿಶಿಣ ಮತ್ತು ಕುಂಕುಮದ ಗುಪ್ಪೆಯ ಮಧ್ಯೆ ಕೂತಿದ್ದ ಅವನ ಮಗ, ಎಣ್ಣೆಗೂದಲನ್ನು ಸಾಪಾಗಿ ಬಾಚಿಸಿಕೊಂಡ ದುಂಡನೆಯ ಮುಖದ ಅಗಲ ಕಣ್ಣುಗಳ ಹುಡುಗ, ನನ್ನೆಡೆಗೇ ಬೆರಗಿನಿಂದ ನೋಡುತ್ತ ಏನಾದರೂ ಕೇಳಲೇಬೇಕೆಂದು, 'ಅಮೆರ್ಕಾದಾಗೆ ಆಕಳ ಆಲು ಸಿಕ್ತಾದೇನ್ರೀ?' ಎಂದು ಕೇಳಿದಾಗ, ನನ್ನ ಸ್ನೇಹಿತ ಮಗನ ಮೇಲೆ ಯದ್ವಾತದ್ವಾ ಕೋಪಗೊಂಡು ಆ ಹುಡುಗನ ತಲೆಯ ಮೇಲೆ ಒಂದು ಕುಟ್ಟಿ, 'ಸಾರ್ ಅನ್ನೊ ಕತ್ತೇಭಡವಾ!' ಎಂದು ಬೈದು, ನನ್ನೆಡೆಗೆ ತಿರುಗಿ, 'ಏನೇನೋ ತಲೆಹರ್ಟೆ ಮಾತಾಡುತ್ತೆ. ಬ್ಯಾಸ್ರ ಮಾಡ್ಕಬ್ಯಾಡ್ರಿ' ಎಂದಾಗ ಅವನು ಮಗನ ತಲೆಯ ಮೇಲೆ ಕುಟ್ಟಿದಂತೆಯೇ ಊರು ಮತ್ತೆ ನನ್ನದಾಗಬೇಕೆಂಬ ನನ್ನ ಆಸೆಯ ತಲೆಯ ಮೇಲೂ ಕುಟ್ಟಿದ್ದ.

ಊರು ನನ್ನದಾಗಬೇಕಿದ್ದರೆ ಊರಿನೊಂದಿಗೇ ಇರಬೇಕು ಎನ್ನುವ ಕಠಿಣ ಸತ್ಯ ನನಗೆ ಅರಿವಾಗಿದೆ. ಪ್ರವಾಹದ ಭಾಗವಾಗಬೇಕಿದ್ದರೆ ಅದರೊಂದಿಗೇ ತೇಲುತ್ತಿರಬೇಕು. ಊರು ಕಳೆದು ಹೋಗುವುದು ಇರಲಿ ನಮಗೆ ನಾವೇ ಕಳೆದು ಹೋಗಿರುತ್ತೇವೆ. ಮಹಡಿಯ ಮೇಲಿನ ನನ್ನ ಕೋಣೆಗೆ ಹೋಗಿ ಕುಳಿತರೆ ಹಿಂದೆ ಆ ಕೋಣೆಯಲ್ಲಿರುತ್ತಿದ್ದ ಮನುಷ್ಯ ನಾನಲ್ಲ, ಅವನೇ ಬೇರೆ ನಾನೇ ಬೇರೆ ಎನ್ನಿಸುತ್ತದೆ. ವಿಲಿಯಮ್ ಸ್ಟಫರ್ಡ್‌ರ ಒಂದು ಕವಿತೆಯಲ್ಲಿ ಊರು ತೊರೆದು ಯುದ್ಧದಲ್ಲಿ ಭಾಗವಹಿಸಿ ಅನೇಕ ವರ್ಷಗಳ ನಂತರ ಮತ್ತೆ ತನ್ನ ಮನೆಗೆ ಭೇಟಿಕೊಟ್ಟ ಒಬ್ಬ ವ್ಯಕ್ತಿ (ಅದು ವಿಲಿಯಮ್ ಸ್ಟಫರ್ಡ್‌ರೇ. ವಿವರಗಳು ಅವರಿಗೆ ಅಷ್ಟು ಚೆನ್ನಾಗಿ ಹೊಂದುತ್ತವೆ), ಅಪ್ಪ ಬದುಕಿದ್ದಾಗ ಹಾಕಿಕೊಳ್ಳುತ್ತಿದ್ದ ಹ್ಯಾಟನ್ನು ಹುಡುಕಿ ತೆಗೆದು ಧೂಳು ಕೊಡವಿ ಚಂದದಿಂದ ಧರಿಸಿಕೊಂಡು ಊರ ತುಂಬಾ ಓಡಾಡುತ್ತಾನೆ. ಆದರೆ ಹ್ಯಾಟಿನ ಮೇಲೆ ಬಿದ್ದು ಅಪ್ಪನ ಮುಖಕ್ಕಿಳಿಯುತ್ತಿದ್ದ ಕಿರಣಗಳೆಲ್ಲಾ ಇವನು ಧರಿಸಿಕೊಂಡಾಗ ಒಳಕ್ಕಿಳಿಯದೆ ಚದುರಿಹೋಗಿ ಹತಾಶೆಯನ್ನು ಉಂಟುಮಾಡುತ್ತವೆ. ಊರಿನಲ್ಲಿ ನಾನೂ ಹಾಗೆಯೇ ಹತಾಶನಾದೆ. ಕಿರಣಗಳು ಒಳಕ್ಕಿಳಿಯುವ ಮತ್ತು ಚದುರುವ ಕ್ರಿಯೆಯಲ್ಲಿ ಪ್ರವಾಹದ ಒಳ ಮತ್ತು ಹೊರಗುಗಳು ಅಡಗಿವೆ. ಫೀಲಿಂಗ್ ಈಸ್ ಬಿಲೀವಿಂಗ್! ಎರಡರಲ್ಲಿ ಯಾವುದು ಕೈಕೊಟ್ಟರೂ ಮತ್ತೊಂದು ಇರುವುದಿಲ್ಲ.

ನನ್ನ ಪ್ರೈಮರಿ ಶಾಲೆಗೆ ಹೋದಾಗ ಮಾತ್ರ ಬೇರೆಯದೇ ಅನುಭವವಾಯಿತು. ಶಾಲೆ ಹಾಗೆಯೇ ಇದೆ. ಅದರ ಆಟದ ಬಯಲೂ ಹಾಗೆಯೇ ಇದೆ. ಆಟವ ಬಯಲಿನಲ್ಲಿದ್ದ ಚಿಗುರು ಹುಲ್ಲಿನಿಂದ ಆವೃತವಾದ ದಿಬ್ಬ ಕೂಡ ಹಾಗೆಯೇ ಇದೆ. ಆ ದಿಬ್ಬದಿಂದ ನಾವು ಹುಡುಗರು ಉರುಳುರುಳಿ ಬೀಳುತ್ತಿದ್ದೆವು. ನಾನಂದು ಅಲ್ಲಿ ನಿಂತಾಗ ಒಂದಿಷ್ಟು ಹುಡುಗರು ಕೇಕೆ ಹಾಕುತ್ತ ಮೂವತ್ತು ವರ್ಷಗಳ ಹಿಂದೆ ನಾವು ಉರುಳುತ್ತಿದ್ದ ರೀತಿಯಲ್ಲೇ ಅದೇ ದಿಬ್ಬದಿಂದ ಉರುಳಿದಾಗ ನನ್ನ ಮನಸ್ಸು ಸಂತೋಷದಿಂದ ತುಂಬಿ ಬಂತು. ಆ ಮಕ್ಕಳನ್ನು ಮಾತನಾಡಿಸಿದರೆಲ್ಲಿ ಆ ತಾದಾತ್ಮ್ಯಕ್ಕೆ ಭಂಗಬರುತ್ತದೋ ಎಂದು ದೂರದಲ್ಲಿ ಸುಮ್ಮನೆ ವೀಕ್ಷಕನಾಗಿ ನಿಂತಿದ್ದೆ.

*

ಈ ಲೇಖನವನ್ನು ಬರೆಯುವಾಗ ನನ್ನ ಇತ್ತೀಚಿನ ಕಾದಂಬರಿಯಲ್ಲಿ ನಾನು ಸೃಷ್ಟಿಸಿದ ಒಂದು ಸನ್ನಿವೇಶ ಪದೇಪದೇ ವಾಪಸ್ಸು ಬಂದು ನನ್ನನ್ನು ಕಾಡಿತು (ಕಾದಂಬರಿ ಬರವಣಿಗೆಯ (ವಿ)ಲಕ್ಷಣತೆಯೇ ಅದು. ವಾಸ್ತವವೋ ಕಲ್ಪನೆಯೋ ಎಂದು ಗೊಂದಲಗೊಳ್ಳುವಷ್ಟು ಪಾತ್ರಗಳು ಮತ್ತು ಸನ್ನಿವೇಶಗಳು ಕಾಡುತ್ತವೆ). ಆ ದೃಶ್ಯದಲ್ಲಿ ಮುಸ್ಸಂಜೆ ಹೊತ್ತಿನಲ್ಲಿ ಅಪ್ಪ ಮತ್ತು ಮಗ ಊರಿನ ಗುಡಿಯ ಮುಂದಿನ ಅಶ್ವತ್ಥಕಟ್ಟೆಯ ಮೇಲೆ ಕುಳಿತಿದ್ದಾರೆ. ಯಗಚಿ ನದಿಗೆ ಕಟ್ಟುವ ಅಣೆಕಟ್ಟಿನಿಂದಾಗಿ ಊರು ಮುಳುಗಿಹೋಗುತ್ತದೆ ಎನ್ನುವ ಸುದ್ದಿ ಇವರನ್ನು ಕಂಗೆಡಿಸಿದೆ. ಅದರಲ್ಲೂ ತಂದೆಗೆ ಗುಡಿಯನ್ನು ಹೇಗೆ ಉಳಿಸಿಕೊಳ್ಳಬೇಕೆಂಬ ಚಿಂತೆ. ಆಗ ಮಗನ ಸಂಭಾಷಣೆ ಹೀಗೆ ಸಾಗುತ್ತದೆ:

'ಕಲ್ಲು ಕಲ್ಲನ್ನು ಕಿತ್ತು ಹೊತ್ತು ಸಾಗಿಸಿ ಅಥವಾ ಸಿಮೆಂಟು ಇಟ್ಟಿಗೆಗಳಿಂದ ಹೊಸಗುಡಿಯನ್ನೇ ಕಟ್ಟಿ ಇಲ್ಲಿಯ ಶಿವಲಿಂಗವನ್ನು ಅಲ್ಲಿಗೆ ಸಾಗಿಸಿದರೆ ಶೆಟ್ಟಿಹಳ್ಳಿಗೋ ದೇವರಾಯನಗಡಿಗೋ ಗುಡಿ ಸ್ಥಳಾಂತರವಾಗುತ್ತದೆ. ಆದರೆ ಈ ಅರಳೀಮರ?'

ಊರು ಬಿಟ್ಟ ನನ್ನಂಥವರಿಗೂ ಈ ಮಾತು ಪ್ರತೀಕವಾಗಿ ಕಾಡುತ್ತದೆ ಎಂದು ನನಗೆ ಆಗ ಬರೆದಾಗ ಅನ್ನಿಸಿರಲಿಲ್ಲ. ಕಲ್ಲುಕಲ್ಲನ್ನು ದೇಶಾಂತರಗೊಳಿಸಿ ಮನೆ ಕಟ್ಟಿಕೊಂಡರೂ ಅರಳೀಮರ ಮಾತ್ರ ಊರಲ್ಲೇ ಉಳಿಯುತ್ತದೆ. ಪಾತಾಳಕ್ಕಿಳಿದ ಅದರ ಬೇರಿನ ಯಾವುದೋ ಗಂಟಿನಲ್ಲಿ ನಮ್ಮ ಅರ್ಧಜೀವವಿರುತ್ತದೆ. ಊರು ಉಳಿದರೆ ಅದೂ ಉಳಿಯುತ್ತದೆ; ಊರು ಮುಳುಗಿದರೆ ಅದೂ ಮುಳುಗುತ್ತದೆ.

●

ಬೆಳದಿಂಗಳ ಬುಟ್ಟಿ

-ಮಾಲಾ ರಾವ್

ಜೆನಿ ಚಂಗನೆ ಹಾರಿ ದಟ್ಟ ಮೆರೂನ್ ಬಣ್ಣದ ಚೆರ್ರಿ ಕಿತ್ತು ಚಪ್ಪರಿಸಿ 'ಓ ಹೆವನ್ಲೀ' ಅನ್ನುತ್ತಾ ಸೀದಾ ಸ್ವರ್ಗಕ್ಕೇ ಜಾರಿದಳು. ಬೆಚ್ಚಗಿನ ಬಂಗಾರದ ಬಿಸಿಲಲ್ಲಿ ಹರಡುತ್ತಿದ್ದ ಸುಮಧುರ ಹಣ್ಣಿನ ವಾಸನೆಯನ್ನು ದೀರ್ಘವಾಗಿ ಹೀರುತ್ತಾ ನಾನೊಂದು ದುಂಡಗಿನ ರಸಭರಿತವಾದ ಕಡುಗೆಂಪು ಚೆರ್ರಿಯೊಂದನ್ನು ಕಿತ್ತು ಬಾಯಿಗೆ ಹಾಕಿಕೊಂಡೆ. ತಂಪಾದ ಹುಳಿಸಿಹಿಯ ರಸದ ಸುಳಿಯಲ್ಲಿ ಸಿಲುಕಿ ಹಾಗೇ ಕಳೆದುಹೋದೆ. ಅದೂ ಎಷ್ಟೊಂದು ವಿಧದ ಚೆರ್ರಿಗಳು... ಕೆಂಪು-ಪಿಂಕ್ ಬಣ್ಣದ ರಸ ತುಂಬಿದ ತುಲಾರೆ ಚೆರ್ರಿಯು ಬಾಯಲ್ಲಿ ಸಿಹಿ ಕಾರಂಜಿ, ಮಹೋಗನಿ ಬಣ್ಣದ ದೊಡ್ಡಗಾತ್ರದ ಬಿಂಗ್ ಚೆರ್ರಿ, ಬಂಗಾರಹಳದಿಯ ನಸು ಕೆಂಪಗಿನ ಅತಿ ಸಿಹಿಯಾದ ರೇನರ್‌ಗಳು, ಹೃದಯಾಕಾರದ ಚೆಲನ್‌ಗಳು, ಕೆಂಪು ಗಾಜಿನ ಹಣ್ಣುಗಳಂತೆ ಕಾಣುವ ಗಾರ್ನೆಟ್‌ಗಳು...

ದುಂಬಿಗಳೂ, ಕೀಟಗಳೂ ಗುಂಯ್‌ಗುಡುತ್ತಾ ಹಣ್ಣಿನ ರಸ ಹೀರುತ್ತಿದ್ದವು. ಕೆಲವಂತೂ ರಸ ಹೀರಿ ಎಷ್ಟು ಮೈ ಭಾರವಾಗಿ ಒರಗಿರುತ್ತಿದ್ದವೆಂದರೆ ಅವಕ್ಕೆ ಹಾರಲೇ ಆಗದು! ಕಡ್ಡಿಯಿಂದ ನೂಕಿದರೆ ದೊಪ್ಪನೆ ಕೆಳಗೆ ಬೀಳುತ್ತಿದ್ದವು. ನಾವು ಚೆರ್ರಿ ಕಿತ್ತಿದ್ದೂ

ಕಿತ್ತಿದ್ದೇ... ಬುಟ್ಟಿ ಮಾತ್ರ ತುಂಬಲಿಲ್ಲ! ಕಿತ್ತಿದ್ದೆಲ್ಲಾ ಹೊಟ್ಟೆಗೇ ತುಂಬುತ್ತಿದ್ದೆವಲ್ಲಾ! ಬಟ್ಟೆಯೆಲ್ಲಾ ಬಣ್ಣ... ಒಬ್ಬೊಬ್ಬರ ಮುಖವೂ ಫೇಟ್ ಕಪಿಯಂತೆ...

ಅಲ್ಲಿದ್ದ ನೂರಾರು ಮರಗಳಲ್ಲಿ ಪ್ರತಿಯೊಂದರದ್ದೂ ಅದರದ್ದೇ ಆದ ವಿಶಿಷ್ಟ ರುಚಿ. ಎಲ್ಲದರ ರುಚಿ ನೋಡುತ್ತಾ ಸಾಗಿದೆವು. ಹೊಟ್ಟೆ ಬಿರಿಯುವಂತೆ ತಿಂದೆವು. ದವಡೆ ಉಬ್ಬುಬ್ಬಿ ರಸ ಸೋರುವಂತೆ ತಿಂದೆವು. ಕೊನೆಗೊಮ್ಮೆ ಸುಸ್ತಾಗಿ ಕುಕ್ಕರಿಸಿದೆವು. ನಮಗೂ ಆ ದೊಪ್ಪನೆ ಬೀಳುವ ದುಂಬಿಗಳಿಗೂ ಈಗ ಯಾವ ವ್ಯತ್ಯಾಸವೂ ಇರಲಿಲ್ಲ! ನಮ್ಮನ್ನು ಬಿಟ್ಟಿದ್ದರೆ ಹಾಗೇ ಬಿದ್ದಿರುತ್ತಿದ್ದೆವೇನೋ... ಜೆನಿ ನನ್ನನ್ನೂ ಸುಲಿಯನ್ನೂ ತಿವಿದು ಎಬ್ಬಿಸಿಕೊಂಡು ಹೊರಟಳು.

*

ಮೊನ್ನೆ ಸುಲಿ ದಡಬಡ ಅಂತ ನನ್ನ ಕ್ಯೂಬ್‌ಗೆ ಬಂದಾಗ 'ಏನು ಹುಲಿ ಅಟ್ಟಿಸಿಕೊಂಡು ಬಂತಾ?' ಅಂತ ಕೇಳಿದ್ದೆ. 'ಹುಲಿ ಆಗಿದ್ರೆ ಪರ್ವಾಗಿರ್ಲಿಲ್ಲಾ. ಬರ್ತಿರೋದು ಜೆನಿ' ಎಂದಿದ್ದಳು. ಅಸಲಿಗೆ ವಿಷ್ಯಾ ಏನೂಂತ ಅಂದ್ರೆ ಜೆನಿಗೆ ಮತ್ತೆ ಅವಳ ಅಜ್ಜನ ಮನೆಯ ಭೂತ ತಲೆಗೇರಿದೆಯಂತೆ. ನಮ್ಮಿಬ್ಬರನ್ನೂ ಅವಳ ಅಜ್ಜನ ಮನೆಗೆ ಕರ್ಕೊಂಡು ಹೋಗಿ ಬಲಿ ಕೊಡಬೇಕೆಂಬುದು ಜೆನಿಯ ಮಹದಾಸೆ. ಈಗೆರಡು ವರ್ಷದಿಂದ ನಮ್ಮ ಪ್ರತಿ ಪ್ರಾಜೆಕ್ಟ್ ಮುಗಿದು ಎಲ್ಲಾದ್ರೂ ತಿರುಗಾಡಲು ನಾವು ಪ್ಲಾನ್ ಹಾಕುವಾಗಲೆಲ್ಲಾ ತನ್ನ ಮಹದಾಸೆಯನ್ನು ರಿಪೀಟ್ ಮಾಡುತ್ತಿದ್ದಳು. ನಾನೂ, ಸುಲಿಯೂ ಅದು ಹೇಗೋ ಯಾಮಾರಿಸಿ ಅವಳನ್ನು ಡಿಸ್ನಿಲ್ಯಾಂಡ್ ದಿಕ್ಕಿಗೋ ನಾಪಾವ್ಯಾಲಿ ಕಡೆಗೋ ಎತ್ತಾಕಿಕೊಂಡು ಹೋಗಿ ಬಿಡುತ್ತಿದ್ದೆವು. ಈಗೇನಪ್ಪಾ ಮಾಡೋದೂ... ನಾನು ತಲೆ ಕೆರೆದುಕೊಂಡು ಯೋಚಿಸಲು ಶುರುಮಾಡಿದ್ದೆ...

*

ಜೆನಿ ಕೈಯಿಂದ ತಪ್ಪಿಸಿಕೊಳ್ಳುವ ನಮ್ಮ ಯಾವ ಉಪಾಯವೂ ಫಲಿಸದೆ, ಬಂಗಾರ ಸೂರ್ಯ ಅವನ ಹವಳದರಮನೆಗೆ ವಾಪಸ್ಸು ಹೋಗುವ ಹೊತ್ತಿಗೆ ಅವಳ ಅಜ್ಜನ ರಾಂಚಿಗೆ ಬಂದು ಸೇರಿದೆವು. 'ಮೂನ್‌ಲೈಟ್ ಬಾಸ್ಕೆಟ್' ಅಂತ ತೂಗು ಹಾಕಿದ್ದ ಬೋರ್ಡನ್ನು ಸುಲಿ ಜೋರಾಗಿ ಓದುವ ಹೊತ್ತಿಗೆ ಸರಿಯಾಗಿ ಜೆನಿ ಢಡ್ ಎಂದು ಕಾರು ನಿಲ್ಲಿಸಿದಳು. ಜೆನಿಯ ಅಜ್ಜ ಓಡಿ ಬಂದು 'ವೆಲ್ಕಂ ಹೋಮ್, ಹನಿ'... ಎನ್ನುತ್ತಾ ಅವಳನ್ನು ತಬ್ಬಿಕೊಂಡರು. ಅವಳ ಅಜ್ಜಿ, 'ವೆಲ್ಕಂ ಮಾಳಾ... ವೆಲ್ಕಂ ಸೂಳೀ...' ಅಂತ ದೊಡ್ಡನಗೆ ನಗುತ್ತಾ ಸ್ವಾಗತಿಸಿದರು ಮಾಳಾ! ಸೂಳೀ!! ನನ್ನ ತಲೆ ಗಿರ್ರ್ ಅಂದಿತು.

ಹತ್ತಿರದ ಲ್ಯಾವೆಂಡರ್ ಫೀಲ್ಡ್ ಮೇಲಿನಿಂದ ಬೀಸುತ್ತಿದ್ದ ಗಾಳಿ ಸವಿಯಾಗಿತ್ತು. ಮೆಲುದನಿಯಿಂದ ನಮ್ಮನ್ನು ಮಾತಾಡಿಸುತ್ತಾ ಜೆನಿಯ ಅಜ್ಜಿ ಲೀಸಾ ಕಾಲು ದಾರಿಯಲ್ಲಿ

ನಮ್ಮನ್ನು ಮನೆಗೆ ಕರಕೊಂಡು ಹೋದರು. ಜೆನಿಯ ಅಜ್ಜ ಜೇಮ್ಸ್ ದೊಡ್ಡ ದನಿಯ ನಗು ಹಕ್ಕಿಯ ಪುಕ್ಕದಂತೆ ನಮ್ಮನ್ನು ಸವರಿ ಕಚಗುಳಿ ಇಡುತ್ತಿತ್ತು. ಹಳೆಯ ಕಾಲದ ಗಟ್ಟಿಮುಟ್ಟಾದ ಮರದ ದಿಮ್ಮಿಗಳಿಂದ ಕಟ್ಟಿದ ಮನೆ. ಹಳದಿ ಬೆಳಕು ಬೀರುವ ದೀಪಗಳು. ಕವಿಯುತ್ತಿದ್ದ ಮಂದಗತ್ತಲೆ... ನಮಗೆ ಯಾವುದೋ ಲೋಕಕ್ಕೆ ಬಂದ ಹಾಗೆ. ಬೆಚ್ಚನೆ ಶಾಖ ಬೀರುತ್ತಿದ್ದ ಫೈರ್ ಪ್ಲೇಸ್ ಮುಂದೆ ಕೂತು ಲೀಸಾ ತಂದು ಕೊಟ್ಟ ಬಿಸಿ ಬಿಸಿ ಕಾಫಿ ಕುಡಿದ ಮೇಲೆ ಸ್ವಲ್ಪ ಹಾಯೆನಿಸಿತು. ಜೆನಿ ಎಂದಿನಂತೆ ಚಟಪಟಗುಟ್ಟುತ್ತಿದ್ದಳು. 'ಫೈರ್ ಲಾಗಿಗೂ ನಿನಗೂ ಕಾಂಪಿಟಿಶನ್ ಚೆನ್ನಾಗಿದೆ' ಅಂತ ಲೀಸಾ ನಗುತ್ತಿದ್ದರು. ದಾರಿಯಲ್ಲಿ ಬರುತ್ತಾ ಸಿಕ್ಕ ಹಾಳುಮೂಳನ್ನೆಲ್ಲಾ ತಿಂದಿದ್ದರಿಂದ ರಾತ್ರಿ ಡೈನಿಂಗ್ ಟೇಬಲ್ ಮೇಲಿದ್ದ ಯಾವ ಪದಾರ್ಥವೂ ಅಷ್ಟಾಗಿ ನನ್ನನ್ನು ಸೆಳೆಯಲಿಲ್ಲ. ಅತಿಥಿಗಳಿಗೆ ಸುಸ್ತಾಗಿರಬಹುದೆಂಬ ಲೀಸಾರ ಕಾಳಜಿಯಿಂದ ಹತ್ತು ಗಂಟೆಗೇ ದೀಪವಾರಿಸಿ ಮಲಗಿದ್ದಾಯ್ತು. ಕುರ್ ಕುಟರ್... ಕುರ್ ಕುರ್ ಕುಟರ್... ಸಿಕಡಾಗಳು ಕೂಗುತ್ತಿದ್ದವು. ದೂರದಲ್ಲೆಲ್ಲೋ ನೀರು ಹರಿಯುವ ನಾದ... ಗಲಗಲ ಎಂದು ಗಾಳಿಗೆ ಎಲೆ ಅಲುಗಿಸುತ್ತಿದ್ದ ವಿಲ್ಲೋ ಮರಗಳು... ಯಾವಾಗ ನಿದ್ದೆ ಬಂತೋ ಗೊತ್ತಾಗಲಿಲ್ಲ.

*

ಕಸೂತಿಯ ಅಂಚು ಕಟ್ಟಿದ ಬಿಳಿಪರದೆಗಳ ನಡುವಿಂದ ಬೆಚ್ಚಗಿನ ಚಿನ್ನದ ಕಿರಣಗಳು ಮುಖ ಸವರಿದಾಗಲೇ ನನಗೆ ಎಚ್ಚರವಾಗಿದ್ದು. ಹಮ್ಮಿಂಗ್ ಬರ್ಡ್‌ಗಳು, ಗೋಲ್ಡ್ ಫಿಂಚ್‌ಗಳು ಹಾಡುತ್ತಿದ್ದವು. ಹಾಡುತ್ತಿದ್ದವೋ ಮಾತಾಡುತ್ತಿದ್ದವೊ?

ಗೋಲ್ಡ್ ಫಿಂಚ್- ಚೀ...ಚಿ..ಚಿ..ಚಿ... ಚೀ...ಚಿ..ಚಿ..ಚಿ. (ಪ್ರಶ್ನೆಗೆ)

ಹಮ್ಮಿಂಗ್ ಬರ್ಡ್- ಚಿರ್ ಚಿರ್ ಚಿರ್ ಚೀ... ಚಿಕ್ ಚಿಕ್... (ಉತ್ತರ!)

ಮತ್ತೊಂದು ಪಕ್ಷಿ- ಟಿಟ್ಟಿರೀ...ಟಿಟ್ಟಿರೀ... ಓ...ಟಿಟ್ಟಿರೀ ಟಿಟ್... (ಇವಳಿನ್ನೂ ಎದ್ದಿಲ್ಲಾ, ಸೋಮಾರೀ...) ಎಂದು ನಗುತ್ತಾ ಛೇಡಿಸುತ್ತಿತ್ತು!

ಮುಖ ತೊಳೆದು ಕೆಳಗೆ ಬಂದಾಗ ಲೀಸಾ ಪ್ಯಾನ್ ಕೇಕ್ ಮಾಡುತ್ತಿದ್ದರು. ತುಮಕೂರಿನ ಅಡುಗೆ ಮನೆಯಲ್ಲಿ ಅಮ್ಮ ದೋಸೆ ಹುಯ್ಯುವ ಚಿತ್ರವೇ ಕಣ್ಮುಂದೆ ಬಂತು. ಸುಲಿ, ಜೆನಿ ಮಳೆಗಾಲದ ಕಪ್ಪೆಗಳಂತೆ ವಟಗುಟ್ಟುತ್ತಾ ಪ್ಯಾನ್ ಕೇಕ್‌ನ ಗುಡ್ಡಗಳನ್ನೇ ನುಂಗುತ್ತಿದ್ದರು. ಬಂಗಾರದ ಚಂದ್ರನಂತಿದ್ದ ಪ್ಯಾನ್ ಕೇಕ್‌ನ ಸುವಾಸನೆ ಕಾಫಿಯ ಘಮದೊಂದಿಗೆ ಬೆರೆತು ಸುತ್ತೆಲ್ಲಾ ಪಸರಿಸಿತ್ತು. ನಾಲ್ಕೈದು ಪ್ಯಾನ್ ಕೇಕ್‌ಗಳ ಪೇರಿಸಿ ಅದರ ಮೇಲೆ ಬೆಣ್ಣೆ ಚೂರನ್ನಿಟ್ಟು ಚಿನ್ನದ ಪಾಕದಂತಿದ್ದ ಮೇಪಲ್ ಸಿರಪ್ ಸುರಿದು ಲೀಸಾ ನನ್ನ ಕೈಗಿತ್ತ ತಟ್ಟೆ ಹಿಡಿದು ಕಿಟಕಿ ಕಡೆ ಬಂದೆ.

ವಿಶಾಲವಾಗಿ ತೆರೆದಿದ್ದ ಬೆಚ್ಚಗಿನ ಅಡುಗೆ ಕೋಣೆಯ ಕಿಟಕಿಗಳಿಂದ ಕಾಣುತ್ತಿದ್ದ ದೃಶ್ಯ ಚೇತೋಹಾರಿಯಾಗಿತ್ತು. ಬಹು ದೂರದವರೆಗೆ ಸಾಲು ಸಾಲುಗಳಲ್ಲಿ ನಿಂತು ಉಲ್ಲಾಸದಿಂದ ತಲೆ ಅಲ್ಲಾಡಿಸುತ್ತಿದ್ದ ಲ್ಯಾವೆಂಡರ್ ಕಾಲುವೆಯ ಮೇಲೆ ಹೂ ಬಿಸಿಲು ಮಿನುಗುತ್ತಿತ್ತು. ಪಕ್ಕಿಯ ಗರಿಯಷ್ಟು ಹಗುರವಾದ ತಿಳಿಬಣ್ಣದ ಪರದೆಗಳು ತಿಳಿಗೆಂಪು ಸ್ಯಾಟಿನ್‌ನ ಲೇಸು ಧರಿಸಿ ಕೊರಳು ಕೊಂಕಿಸಿ ಲಾಸ್ಯವಾಡುತ್ತಿದ್ದವು. ದೂರದಲ್ಲೆಲ್ಲೋ ಮೆಡೊ ಲಾರ್ಕ್‌ಗಳು ಹಾಡುತ್ತಾ ಹಾರಿ ಹೋಗುತ್ತಿದ್ದವು. ಮಂಜಿನಷ್ಟು ಬಿಳುಪಾದ ಟೇಬಲ್ ಹಾಸಿನ ಮೇಲಿಟ್ಟ ಗಾಜಿನ ಪಾತ್ರೆಯಲ್ಲಿ ಕೆಂಪು ಜೆರೇನಿಯಂ ಗುಚ್ಛಗಳು ಉಲ್ಲಾಸದ ಕಂಪು ಸೂಸುತ್ತಿದ್ದವು. ಮೃದುವಾದ ಸವಿಯಾದ ಪ್ಯಾನ್ ಕೇಕ್‌ಗಳು ನನ್ನ ಬಾಯಲ್ಲಿ ಕರಗಿ ಹೋಗುತ್ತಿದ್ದವು...

'ಹಿಯರ್ ಯು ಗೋ ಮಾಳಾ...' ಎಂದು ಲೀಸಾ ಇನ್ನೊಂದು ಪ್ಯಾನ್ ಕೇಕ್ ನನ್ನ ತಟ್ಟೆಗೆ ಹಾಕಿದಾಗ ನನ್ನ ಹೆಸರು ಮಾಳಾ ಅಲ್ಲ, ಮಾಲಾ ಎಂದು ತಿದ್ದಿದೆ. ಹಾಂ... ಎಂದ ಅವರಿಗೆ ಗಾಬರಿಯೋ ಗಾಬರಿ! ನಂತರ ಓ... ಜೇಮ್ಸ್... ಎಂದು ಉದ್ಗರಿಸಿ ನಕ್ಕುಬಿಟ್ಟರು. ನಗುವಿಗೆ ಕಾರಣ ಕೇಳಿದಾಗ... ನಾವು ಬರುವ ಮುನ್ನ ಜೆನಿ ಕಳಿಸಿದ ಇ-ಮೇಲ್‌ನಲ್ಲಿ ನನ್ನ, ಸುಲಿಯ ಹೆಸರು ಬರೆದಿದ್ದಳಂತೆ. ದಕ್ಷಿಣ ಭಾರತೀಯರು 'ಳ' ಉಚ್ಚಾರದ ಹೆಸರಿಟ್ಟುಕೊಳ್ಳುತ್ತಾರೆ. ಅವರ ಹೆಸರನ್ನು ನಾವು ತಪ್ಪು ಹೇಳಬಾರದು ಅಂತ ಜೇಮ್ಸ್ ಹೇಳಿದರಂತೆ. ಸೋ, ಇಬ್ಬರೂ ಕಳೆದೆರಡು ದಿನಗಳಿಂದ 'ಳ'ಕಾರ ಅಭ್ಯಾಸ ಮಾಡುತ್ತಿದ್ದರಂತೆ! 'ನಿನ್ನ ಹೆಸರಿನ ಅರ್ಥವೇನೂ' ಅಂತ ಜೇಮ್ಸ್ ಕೇಳಿದಾಗ ನಾನೇನೋ ಹೇಳಿ ಸುಲಭವಾಗಿ ಪಾರಾಗಿಬಿಟ್ಟೆ. ಸುಲಕ್ಷಣಾ ಎಂಬ ಲಕ್ಷಣವಾದ ಹೆಸರಿಟ್ಟುಕೊಂಡು ಬೀಗುತ್ತಿದ್ದ ಸುಲಿಯ ಅವಸ್ಥೆ ನೋಡಿ ನಾನೂ ಜೆನಿಯೂ ಹೊಟ್ಟೆ ಹುಣ್ಣಾಗುವಂತೆ ನಕ್ಕೆವು. ಅವರಿಗೆ ಅರ್ಥ ಆಗಲೊಲ್ಲದು, ಇವಳು ಬಿಡಲೊಲ್ಲಳು! ಅಂತೂ ತನಗೆ ಹೆಸರಿಟ್ಟ ಸೋದರತ್ತೆಗೆ ಸಹಸ್ರನಾಮಾರ್ಚನೆ ಮಾಡಿದಳು ಸುಲಿ. ನಾವಿನ್ನೂ ಲೀಸಾ ಜೊತೆ ಹರಟೆ ಹೊಡೆಯುತ್ತಾ ಕೂರುತ್ತಿದ್ದೇವೇನೋ... ಜೆನಿ ಬಿಡಬೇಕಲ್ಲಾ... ಹಾಗೆ ಜೆನಿ ನನ್ನನ್ನೂ ಸುಲಿಯನ್ನೂ ಕರ(ಎಳ)ಕೊಂಡು ಬಂದಿದ್ದು ಈ ಚೆರ್‍ರಿ ಆರ್ಚರ್ಡ್‌ಗೆ.

*

ಅರ್ಧ ಗಂಟೆ ಕಚ್ಚಾರಸ್ತೆಯಲ್ಲಿ ನಡೆದು 'ಉಶ್ಯಪ್ಪಾ ಇನ್ನು ನನ್ ಕೈಲಿ ನಡೆಯಕ್ಕೆ ಆಗಲ್ಲಪ್ಪ' ಅಂತ ನಾವಿಬ್ಬರೂ ಗೊಣಗುವ ಹೊತ್ತಿಗೆ ಇಳಿಜಾರಾದ ಕಾಲುದಾರಿ ತೋರಿಸಿ ಇಳಿಯಿರಿ ಅಂದಳು ಜೆನಿ. ನಾವು ಮೂರು ಅಂಟು ಮೂತಿಯ ಕೆಂಪು ಕಪಿಗಳೂ ಇಳಿದದ್ದು ಕ್ರಿಸ್ಟಲ್ ಕ್ರೀಕಿನ ಬಳಿ. ನೀರಿನ ಎರಡೂ ಬದಿಗಳಲ್ಲಿ ಸೈಕಮೋರ್, ಬರ್ಚ್ ಮತ್ತು ವಿಲ್ಲೊ ಮರಗಳು ದಟ್ಟವಾಗಿ ಬೆಳೆದಿದ್ದವು. ದೊಡ್ಡ ವಿಲ್ಲೋ ಮರದ ಕೆಳಗೆ ನೀರು ತನ್ನಷ್ಟಕ್ಕೆ ತಾನು ಹಾಡಿಕೊಳ್ಳುತ್ತಾ ಹರಿಯುತ್ತಿತ್ತು. ಸ್ವೋರ್ಡ್ ಫರ್ನ್‌ಗಳೂ, ಗೋಲ್ಡ್‌ಬ್ಯಾಕ್ ಫರ್ನ್‌ಗಳೂ

ಕ್ರೀಕಿಗೆ ಅಲಂಕಾರವಾಗಿದ್ದವು. ಅಂಚಿನಲ್ಲಿದ್ದ ವಿಲ್ಲೊ ಮರದ ಬಾಗಿದ ಕೊಂಬೆಗಳು ನೀರಿನೊಂದಿಗೆ ಪಿಸುಮಾತಾಡುತ್ತಿದ್ದವು. ನಿಧಾನವಾಗಿ ಹರಿಯುತ್ತಿದ್ದ ನೀರು ಕೊಂಬೆಗಳ ಚಿಗುರೆಲೆಗಳ ಮುಂಗುರುಳು ನೇವರಿಸಿ ಮುದ್ದಿಸುತ್ತಿತ್ತು.

ಮನೆಯಲ್ಲಿ ಸ್ನಾನ ಮಾಡಲು ಬಿಡದೆ ನಮ್ಮನ್ನು ಇಲ್ಲಿಗೆ ಎಳೆದುಕೊಂಡು ಬಂದ ಜೆನಿಯನ್ನು ಶಪಿಸುತ್ತಿದ್ದ ನಮ್ಮ ಸುಕುಮಾರಿ ಸುಲಿ ತನ್ನ ಮುಂಗಾಲನ್ನು ನೀರಿನಲ್ಲಿ ಅದ್ದಿ ನೋಡಿ ಬೆಚ್ಚಿ ಬಿದ್ದು 'ಹಾಂ... ಈ ನೀರಲ್ಲಿ ನಾನು ಇಳಿಯೋಲ್ಲಪ್ಪ... ದೇವರಾಣೆ... ನಂಗೆ ನ್ಯುಮೋನಿಯಾ ಬಂದ್ ಬಿಡುತ್ತೆ ಅಷ್ಟೇ' ಅಂದು ಬಿಟ್ಟಳು. ಬಂಡೆಯ ಹಿಂದೆ ಮಾಯವಾದ ಜೆನಿಯ ಪತ್ತೆಯೇ ಇಲ್ಲ... ಸ್ವಲ್ಪ ಮುಂದೆ ನಡೆದು ನೋಡಿದರೆ ನೀರಿನ ಹೊಡೆತಕ್ಕೆ ಬಾಣಲೆಯಂತೆ ರೂಪುಗೊಂಡ ನ್ಯಾಚುರಲ್ ಪೂಲ್‌ನಲ್ಲಿ ಹಾಯಾಗಿ ಕೂತಿದ್ದಾಳೆ ಮಹಾರಾಣಿ! 'ನೀನೂ ಬಾ' ಅಂತ ಕೈಬೀಸಿ ಕರೆದಳು. ಹತ್ತಿರ ಹೋಗಿ ನೋಡಿದರೆ ನೀರಿನಿಂದ ಸಣ್ಣಗೆ ಹಬೆ ಏಳುತ್ತಿದ್ದುದು ಕಾಣಿಸಿತು. ಇನ್ನು ತಡ ಏಕೆ ಅಂತ ಇಳಿದಿದ್ದೇ...

ಕ್ರೀಕಿನ ಒಂದು ಸೀಳಿನಿಂದ ಹರಿವ ತಣ್ಣೀರು ದಕ್ಷಿಣದ ದಿಕ್ಕಿನಲ್ಲಿದ್ದ ಬಿಸಿನೀರಿನ ಬುಗ್ಗೆಯಿಂದ ಹರಿದು ಬರುವ ಸುಡು ಸುಡು ಬಿಸಿನೀರು ಈ ನಿಸರ್ಗನಿರ್ಮಿತ ಕಲ್ಲಿನ ಪೂಲ್‌ನಲ್ಲಿ ಸೇರಿ ರಚಿಸಿರುವ ಈ 'ಬಿಗ್ ಬಾತ್ ಟಬ್' ಜೆನಿಗೆ ತುಂಬಾ ಪ್ರಿಯವಾದ ಜಾಗವಂತೆ. ಮೂವರೂ ಹದ ಬಿಸಿಯ ನೀರು ಎರೆಚಿಕೊಂಡು ಆಟ ಆಡಿದ್ದೂ ಆಡಿದ್ದೇ. ನೀಲಿ ಆಕಾಶದಲ್ಲಿ ತೇಲುವ ಮುತ್ತಿನ ಚಿಪ್ಪು ಮೋಡಗಳು, ಧೀರಗಂಭೀರವಾಗಿ ಕಾವಲು ನಿಂತ ಸೈಕಮೋರ್‌ಗಳು, ವಿಲ್ಲೊ ಮರದ ತೂಗುಬಿದ್ದ ಕೊಂಬೆ ತುಂಬಾ ಹಸಿರು ಪಾರಿವಾಳದಂಥ ಚಿತ್ತಾರದ ಎಲೆಗಳ ಕಲಕಲ... ಹಿತ ಬೆಚ್ಚಗಿನ ನೀರಲ್ಲಿ ಕೂತು ಸುತ್ತಲ ಚೆಲುವು ನೋಡುತ್ತಾ ಮಾತೇ ಬಾರದ ಮೂಕರಾಗಿ ಹೋದೆವು. ನಸು ಹಳದಿ ಬಣ್ಣದ ಗೋಲ್ಡ್ ಫಿಂಚ್ ಚೀ...ಚೀ... ಚೀ...ಚೀ...ಚೀ... ಅಂದಿತು. ಸುಲಿ ಬೆಚ್ಚಿ ಬಿದ್ದಳು. 'ಸುಲೀ... ನಿನಗ್ಗೊತ್ತಾ... ದೂರ ದೂರ ದೇಶಗಳ ಪ್ರಿನ್ಸ್‌ಗಳು ತಮಗೆ ತಕ್ಕನಾದ ಹುಡುಗಿ ಹುಡುಕಲು ಗೋಲ್ಡ್ ಫಿಂಚ್ ರೂಪದಲ್ಲಿ ಸುತ್ತಾಡುತ್ತಾರಂತೆ.' ಜೆನಿ ಕಣ್ಣು ಹೊಡೆಯುತ್ತಾ ಹೇಳಿದಾಗ ಸುಲಿ ಕೆಂಪುಕೆಂಪಾದಳು.

*

ಲೀಸಾ ನಮಗಾಗಿ ಕಳಿಸಿದ ಲಂಚ್ ಬಾಸ್ಕೆಟನ್ನು ಜೇಮ್ಸ್ ತಾವು ಕುದುರೆಲಾಯಕ್ಕೆ ಹೋಗುವಾಗ ಕ್ರೀಕ್ ದಡದ ಮರವೊಂದಕ್ಕೆ ಸಿಗಿಸಿ ಹೋಗಿದ್ದರು. ಬುಟ್ಟಿಯಲ್ಲಿ ಫ್ರೆಶ್ ಬ್ರೆಡ್‌ಗಳು, ಬೆಣ್ಣೆಹಣ್ಣಿನ ಗ್ವಾಕಮೋಲೆ, ಜಜ್ಜಿ ಬೇಯಿಸಿದ ಆಲೂಗೆಡ್ಡೆ ರೊಟ್ಟಿಗಳು, ಪೀಚ್ ಮತ್ತು ನೆಕ್ಟರಿನ್ ಹಣ್ಣುಗಳಿದ್ದವು. ಆದರೆ, ನನಗೆ ಇಷ್ಟವಾಗಿದ್ದು ಶುಂಠಿ ಹಾಕಿದ್ದ ಲೆಮನೇಡ್. ಬಿಸಿ ನೀರಿನಲ್ಲಿ ತುಂಬಾ ಹೊತ್ತು ಈ ಹುಡುಗಿಯರು ಕೂತಿರುತ್ತಾರೆಂದು ಸರಿಯಾಗೇ

ಊಟಿಸಿದ್ದ ಲೀಸಾ ದೊಡ್ಡ ದೊಡ್ಡ ಬಾಟಲ್‌ಗಳ ತುಂಬಾ ನಿಂಬೆ ಚೂರುಗಳು ತೇಲುತ್ತಿದ್ದ ಲೆಮನೇಡ್ ಕಳಿಸಿದ್ದರು. ಉಂಡು ಅಲ್ಲೇ ಇದ್ದ ಹ್ಯಾಮಕ್‌ಗಳಲ್ಲಿ ತೂಗಿಕೊಳ್ಳುತ್ತಾ ತೂಕಡಿಸಿದೆವು. ಮೆಡೋಲಾರ್ಕ್‌ಗಳು ಹಾಡುತ್ತಾ ಹಾರಿ ಹೋಗುತ್ತಿದ್ದವು. ಹಸಿರು ದೇಹದ ಹೊಳೆವ ನೀಲಿ ಬಾಲದ ಪಾಂಡ್ ಹಾಕ್ ಡ್ರ್ಯಾಗನ್ ಫ್ಲೈಗಳು ನೀರ ಬಳಿ ನರ್ತಿಸುತ್ತಾ ಜಿರ್ರೆಂದು ಹಾರುತ್ತಿದ್ದವು. ಪೊದೆಗಳಲ್ಲಿ ಒತ್ತೊತ್ತಾಗಿ ಅರಳಿದ್ದ ಕಾಡುಗುಲಾಬಿ ಹೂಗಳು ದಟ್ಟ ಕಂಪು ಸೂಸುತ್ತಿದ್ದವು. ಕಂದು ಹಸಿರಿನ ಬಣ್ಣದ ಕಪ್ಪೆಯೊಂದು ವಟಗುಟ್ಟುತ್ತಿತ್ತು. ಕಡು ನೀಲಿ ರಂಗಿನ ಬ್ಲೂಜೇಗಳು ಬಿಡುವೇ ಇಲ್ಲದೆ ಮಾತಾಡುತ್ತಿದ್ದವು. ಹುಲ್ಲು ತಲೆದೂಗುತ್ತಾ ಕೇಳಿಸಿಕೊಳ್ಳುತ್ತಿತ್ತು...

*

ಜೇಮ್ಸ್ ಲಾಯದ ಕೆಲಸ ಮುಗಿಸಿ ವಾಪಸ್ ಹೋಗುವಾಗ ಅವರ ಜೀಪ್‌ನಲ್ಲೇ ನಮ್ಮನ್ನು ಬ್ಲೂ ಗಾರ್ನೆಟ್ ಲೇಕ್ ಕಡೆಯಿಂದ ಕರೆದುಕೊಂಡು ಹೋದರು. ಜೇಮ್ಸ್ ಲೇಕ್‌ಗೆ ಬೇರೇನೋ ಹೆಸರು ಹೇಳಿದಾಗ ಜೆನಿ, 'ಈ ವರ್ಷ ಲೇಕ್‌ನ ಹೆಸರು ಬ್ಲೂ ಗಾರ್ನೆಟ್ ಲೇಕ್' ಎಂದು ಅವರನ್ನು ತಿದ್ದಿದಳು. 'ಈ ವರ್ಷ' ಅಂದರೇನೂ ಅಂತ ನಾನು ಕೇಳಿದಾಗ ಜೇಮ್ಸ್, 'ಓ ಮೈ ಗ್ರಾಂಡ್ ಚಿಲ್ಡ್ರನ್' ಅಂತ ನಕ್ಕರು. ಅಜ್ಜನ ಮೊಮ್ಮಕ್ಕಳಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ವರ್ಷ ಲೇಕ್‌ಗೆ ಹೆಸರಿಡುವ ಹಕ್ಕಂತೆ. ಇದರಂತೆ ಈ ವರ್ಷ ಜೆನಿಯ ತಂಗಿ 'ಬ್ಲೂ ಗಾರ್ನೆಟ್ ಲೇಕ್' ಅಂತ ಹೆಸರಿಟ್ಟಿದ್ದಳು. ಅಜ್ಜನಿಗೆ ಕಳೆದ ವರ್ಷದ ಹೆಸರೇ ಅಭ್ಯಾಸವಾಗಿ ಅದನ್ನೇ ಹೇಳಿದ್ದರು!

ಬ್ಲೂ ಗಾರ್ನೆಟ್ ಲೇಕ್ ತುಂಬಾ ಸುಂದರವಾಗಿತ್ತು. ದಡದ ಸುತ್ತಾ ಡಗ್ಲಾಸ್ ಫರ್ ಮರಗಳು ಒತ್ತೊತ್ತಾಗಿ ಬೆಳೆದಿದ್ದವು. ಚಾಪೆಯಂತೆ ಹೆಣೆದುಕೊಂಡಿದ್ದ ಹಸಿರು ಹುಲ್ಲಿನಿಂದಾಗಿ ದಡ ಗಟ್ಟಿಯಾಗಿ ದೃಢವಾಗಿತ್ತು. ತುಳುಕುತ್ತಿದ್ದ ನೀಲಿ-ಬೆಳ್ಳಿ ಅಲೆಗಳ ಅಂಚಿನಲ್ಲಿ ಹಸಿರು ದಡದ ಮೇಲೆ ನಾವು ನಡೆದು ಹೋದೆವು. ಬರಿಗಾಲ ಕೆಳಗೆ ಹಸಿರು ಹುಲ್ಲು ಬೆಚ್ಚಗೆ ಮೃದುವಾಗಿತ್ತು. ಪುಟ್ಟ ಪುಟ್ಟ ಬೆಳ್ಳಿ ಅಲೆಗಳು ನೀಲಿ ನೀರಿನಲ್ಲಿ ನಸುನಗುತ್ತಿದ್ದವು. ಚಂದ್ರನ ಚೂರುಗಳಂತಿದ್ದ ಪುಟ್ಟ ಮೀನುಗಳು ಸೂರ್ಯನ ಬೆಳಕಲ್ಲಿ ಹೊಳೆಯುತ್ತಾ ಕ್ಷಣಾರ್ಧದಲ್ಲಿ ಮಾಯವಾಗುತ್ತಿದ್ದವು. ಮಿನುಗುವ ಹಸಿರು ಕತ್ತಿನ ಮಲಾರ್ಡ್ ಬಾತೊಂದು ನಮ್ಮನ್ನು ನೋಡಿ ಹಗುರವಾಗಿ ಮೇಲಿದ್ದು ಹಾರಿತು. ಕಡುಗೆಂಪು ಟೈಗರ್ ಲಿಲಿ ಗೊಂಚಲುಗಳು ಗಾಳಿಗೆ ತಲೆ ಅಲುಗಿಸುತ್ತಿದ್ದವು. ದಟ್ಟ ನೇರಳೆ ಬಣ್ಣದ ಬ್ಲೂ ಫ್ಲ್ಯಾಗ್ ಹೂಗಳೂ ಒಂದು ಕೆನ್ನೆಗೆ ನಸುನೇರಳೆಯನ್ನೂ ಇನ್ನೊಂದು ಕೆನ್ನೆಗೆ ತಿಳಿಪಿಂಕ್ ಬಣ್ಣವನ್ನೂ ಬಳಿದುಕೊಂಡ ಬ್ಲೂ ಬಾನೆಟ್‌ಗಳೂ ತಮ್ಮಿಬ್ಬರಲ್ಲಿ ಯಾರು ಚೆಂದವೆಂದು ಕೇಳುತ್ತಿದ್ದವು. ಹೊಳೆಯುವ ಸೂರ್ಯನ ಚಿನ್ನದ ಕಾಂತಿಯಲ್ಲಿ ಇಡೀ ವಾತಾವರಣವೇ ಚಿನ್ನದ ನೀರಿನಲ್ಲಿ ಮಿಂದ ಹಾಗೆ ತೋರುತ್ತಿತ್ತು. ದೊಡ್ಡ ಗಾತ್ರದ ಕಂದು ಮೊಲವೊಂದು ಚಂಗನೆ ನೆಗೆದು ಮುಂಗಾಲುಗಳನ್ನು ಅರ್ಧ ಮಡಿಸಿ

ತನ್ನ ಹಿಂಗಾಲುಗಳ ಮೇಲೆ ನಿಂತು ಗೋಲಿ ಕಣ್ಣುಗಳಿಂದ ನಮ್ಮನ್ನೊಮ್ಮೆ ದಿಟ್ಟಿಸಿ ಮಾಯವಾಯಿತು.

ಜೇಮ್ಸ್ ನಮ್ಮನ್ನು ಅಲ್ಲೇ ಓಡಾಡಲು ಹೇಳಿ ಪಕ್ಕದಲ್ಲೇ ಇದ್ದ ಅವರ ಲಾಗ್ ಕ್ಯಾಬಿನ್ನಿನಲ್ಲಿ ಏನೋ ಕೆಲಸಕ್ಕಾಗಿ ಹೋದರು. ಕಡುಗೆಂಪುಬಣ್ಣದ ಕಪ್ಪುಚುಕ್ಕೆಗಳ ಕೀಟವೊಂದನ್ನು 'ಹೇ...ಲೇಡಿಬಗ್!' ಅನ್ನುತ್ತಾ ಎತ್ತಿ ಅಂಗೈಯಲ್ಲಿಟ್ಟುಕೊಂಡು ಜೆನಿ 'ವಾಂಟ್ ಟು ಮೇಕ್ ಅ ವಿಶ್' ಅಂತ ಕೇಳುತ್ತಾ ಏನನ್ನೋ ಪಿಸುಗುಟ್ಟಿ ಹಗುರವಾಗಿ ಉಫ್ ಎಂದು ತನ್ನ ಅಂಗೈನಿಂದ ಅದನ್ನು ಊದಿದಳು. 'ಈಗ ದೊಡ್ಡವಳಾದ ಮೇಲೆ ಇದರಲ್ಲೆಲ್ಲಾ ನಂಬಿಕೆ ಇಲ್ಲದಿದ್ದರೂ ಚಿಕ್ಕಂದಿನಲ್ಲಿ ಹೀಗೆ ಮಾಡುತ್ತಿದ್ದೆವೆಂಬ ನೆನಪು ಮತ್ತು ಆ ಬಾಲ್ಯದ ನೆನಪು ಕೊಡುವ ಸಂತೋಷವೇ ಸಾಕಲ್ಲವೇ?' ಎಂದು ಕೇಳಿದಳು. ನಾನೂ ಸುಲಿಯೂ ಒಂದೊಂದು ಲೇಡಿಬಗ್ ಊದಿ ಹಾರಿಸಿದೆವು. 'ನೀನೇನು ವಿಷ್ ಮಾಡಿಕೊಂಡೆ ಹೇಳೇ' ಅಂತ ಸುಲಿ ನನ್ನನ್ನು ಪೀಡಿಸಿದಾಗ 'ನಿನಗೊಬ್ಬ ರಾಜಕುಮಾರ ಬೇಗ ಬರಲೀ ಅಂತ ವಿಷ್ ಮಾಡಿಕೊಂಡೆ' ಎಂಬ ನನ್ನ ಉತ್ತರಕ್ಕೆ ಸುಲಿ ತುಟಿ ಕಚ್ಚಿಕೊಂಡು ದುರುದುರು ನೋಡಿದಳು. ಜೆನಿ ಕಣ್ಣು ಮಿಟುಕಿಸಿ ನಿಶ್ಶಬ್ದವಾಗಿ ನಕ್ಕು, ಹುಲ್ಲುಗಳ ನಡುವೆ ಮಾಯವಾದಳು. ಸುಲಿಯೂ ನಾನೂ ಸುತ್ತಮುತ್ತ ಸುತ್ತಾಡಿ ಸುಗಂಧ ಬೀರುತ್ತಿದ್ದ ವಯೋಲೆಟ್‌ಗಳನ್ನೂ, ತಿಳಿಹಳದಿ ಬಣ್ಣದ ಬಟರ್‌ಕಪ್‌ಗಳನ್ನೂ ಕಿತ್ತುಕೊಂಡೆವು.

ಅಷ್ಟರಲ್ಲಿ ಅಲ್ಲೆಲ್ಲಾ ಒಂದು ಸುತ್ತು ಹಾಕಿ ಬಂದ ಜೆನಿ, 'ಇದು ಶೀಪ್ ಸೋರೆಲ್... ರುಚಿ ನೋಡು.' ಎಂದು ಕೊಟ್ಟ ಎಲೆ ತಿಂದಾಗ ಬಾಯಿಗೆ ಹಿತವಾದ ಹುಳಿಹುಳಿ ರುಚಿ! ನನಗೆ ತುಂಬಾ ಪ್ರಿಯವಾಯಿತು. ಏಕೆಂದರೆ ಅದು ನಮ್ಮ ಪುಳ್ಳಂಪುರುಚಿಯನ್ನು ನೆನಪಿಸಿತು! ಚಿಕ್ಕಂದಿನಲ್ಲಿ ನಾನೂ ನನ್ನ ಗೆಳತಿ ಪಮ್ಮಿಯೂ ಪುಳ್ಳಂಪುರುಚಿ ಹುಡುಕುಡುಕಿ ತಿನ್ನುತ್ತಿದ್ದುದು ನೆನಪಾಯಿತು. ಪುಳ್ಳಂಪುರುಚಿಯನ್ನು ನಾನು 'ಮೂರು ಹೃದಯಾಕಾರದ ಎಲೆಯ, ಹಳದಿ ಹೂವಿನ..'ಎಂದು ಜೆನಿಗೆ ವರ್ಣಿಸಿದಾಗ 'ಓ... ಅದನ್ನು ನಾವು ವುಡ್ ಸೋರೆಲ್ ಅನ್ತೀವಿ. ಇರು ಬಂದೆ' ಎಂದು ಅವಳು ಎರಡು ನಿಮಿಷದಲ್ಲೇ ಪುಳ್ಳಂಪುರುಚಿ ಕೈಯಲ್ಲಿ ಹಿಡಿದು ಬಂದಳು. ನನಗಂತೂ ನನ್ನ ಚಿಕ್ಕಂದಿನ ಗೆಳತಿ ಪಮ್ಮಿಯೇ ಬಂದ ಹಾಗೆನ್ನಿಸಿತು! ಹುಳಿಎಲೆ ತಿಂದು ಸುಲಿ ಮುಖ ಕಿವಿಚಿ ಸ್ಟಿಲ್ ಪಿಕ್ಚರ್‌ನಂತೆ ಮುಖ ಮಾಡಿಕೊಂಡು ನಿಂತು ಬಿಟ್ಟಳು. ನಾವಿಬ್ಬರೂ, 'ಸುಲಿ, ನಿನ್ ಮುಖ ಪರ್ಮನೆಂಟಾಗಿ ಹಾಗೇ ಆಗೋಗುತ್ತೆ ಕಣೆ' ಎಂದು ಛೇಡಿಸಿದಾಗ ಗುರ್ ಗುರ್ ಅಂತ ನಮ್ಮನ್ನ ನೋಡಿ ಶೀಪ್ ಸೋರೆಲ್ ತಿನ್ನುವ ಕುರಿಗಳು ಅಂತ ನಾಲಿಗೆ ಚಾಚಿ ಅಣಗಿಸಿ ಮುಂದೆ ನಡೆದಳು.

ಸ್ವಲ್ಪ ದೂರದಲ್ಲಿ ಜಿಂಕೆಯೊಂದು ತನ್ನ ಮರಿಯ ಜೊತೆ ನೀರು ಕುಡಿಯಲು ಬಂದು ಅನುಮಾನಿಸುತ್ತಾ ಹಿಂದೆ ಮುಂದೆ ನೋಡುತ್ತಿತ್ತು. ಜೆನಿ ಯಾವುದೋ ಗಿಡ ಹುಡುಕಿಕೊಂಡು ಹೋದಳು. ಕಂದುಬಣ್ಣದ ಬಿಳಿಚುಕ್ಕೆಗಳ ಚಿಟ್ಟೆಗಳ ಹಿಂಡುಗಳು ರೆಕ್ಕೆ ಪಟಪಟಿಸುತ್ತಾ

ಹಾರುತ್ತಿದ್ದವು. ನಾನಲ್ಲೇ ಕೂತೆ. ಒಮ್ಮೆ ಕೈಲಿದ್ದ ವಯೋಲೆಟ್‌ಗಳಲ್ಲಿ ಮುಖವಿಟ್ಟು ಉಸಿರೆಳೆದುಕೊಂಡೆ. ವಯೋಲೆಟ್‌ಗಳ ಸುಮಧುರ ಸುಗಂಧವು ಜೇನಿನಂತೆ ಸವಿಯಾಗಿತ್ತು. ಕಪ್ಪು ಟೋಪಿ ತೊಟ್ಟಂತೆ ಕಾಣುತ್ತಿದ್ದ ಚಿಕಡಿ ಹಕ್ಕಿಯು ಸಂತೋಷದ ಸಿಳ್ಳು ಹಾಕುತ್ತಿತ್ತು. ದೊಡ್ಡ ಬಿಳಿಮೋಡಗಳು ಲೇಕ್‌ನ ಕನ್ನಡಿಯಲ್ಲಿ ಮುಖ ನೋಡಿಕೊಂಡು ನಗುತ್ತಿದ್ದವು. ಫಿಡಲ್ ನೆಕ್ ಹೂಗಳು ಪುಟಾಣಿ ಬಂಗಾರದ ಹೂ-ಸರ ತೊಟ್ಟು ನಗುತ್ತಾ ಬಾಗಿದ್ದವು. ಲೇಕ್‌ನಲ್ಲಿ ಅರಳಿದ್ದ ಹೊಂಬಣ್ಣದ ಕಮಲಗಳು ನೀಲಿ ನೀರಿಗೆ ಹೊಸ ಹೊಳಪು ಕೊಡುತ್ತಿದ್ದವು. ಚುರುಕಾದ ಕುಚ್ಚು ಬಾಲದ ಅಳಿಲುಗಳು ಏನೋ ಆಟ ನಡೆಸಿದ್ದವು. ಸುತ್ತಲೂ ತೂಗುತ್ತಿದ್ದ ಹುಲ್ಲಿನ ಮಧ್ಯೆ ಈ ಚೆಲುವನ್ನೆಲ್ಲಾ ಕಣ್ತುಂಬಿಕೊಳ್ಳುತ್ತಾ ಕೂರುವುದು ನಿಜಕ್ಕೂ ಆನಂದದಾಯಕವಾಗಿತ್ತು.

ಜೆನಿಯೂ ಸುಲಿಯೂ ಹಳದಿ ಕಮಲಗಳು ಬೇಕೆಂದು ಆಸೆ ಪಟ್ಟಾಗ ಜೇಮ್ಸ್ ಲಾಗ್ ಕ್ಯಾಬಿನ್ನಿನಿಂದ ತಮ್ಮ ನೀಳ ದೇಹದ ಚೂಪು ಮೂತಿಯ ದೋಣಿ ಆಚೆ ತೆಗೆದರು. ನಮ್ಮನ್ನು ಕೂರಿಸಿಕೊಂಡು ನಿಧಾನವಾಗಿ ಹುಟ್ಟು ಹಾಕುತ್ತಾ ಲೇಕ್ ಒಂದು ಸುತ್ತು ಹಾಕಿಸಿದರು. ಹಳದಿ ಕಮಲಗಳಿರುವಲ್ಲಿ ನಿಲ್ಲಿಸಿ 'ನಿಮಗೆಷ್ಟು ಬೇಕೋ ಕಿತ್ತುಕೊಳ್ಳಿ' ಎಂದಾಗ ಚಿಕ್ಕ ಮಕ್ಕಳಂತೆ ಸುಲಿ, ಜೆನಿ ಇಬ್ಬರೂ ಹೂಗಳನ್ನು ಕಿತ್ತು ಜೋಡಿಸಿಕೊಂಡರು. 'ನಿನಗೆ ಬೇಡವೇ, ಯಂಗ್ ಲೇಡಿ?' ಅನ್ನುತ್ತಾ ಒಂದು ದೊಡ್ಡ ಹೂವನ್ನು ಜೇಮ್ಸ್ ನನಗೆ ಕಿತ್ತು ಕೊಟ್ಟರು. ಅಕ್ಕಪಕ್ಕದಲ್ಲಿ ಕೂತು ಕೈತುಂಬಾ ಬಂಗಾರದ ಕಮಲಗಳನ್ನು ಜೋಡಿಸಿಕೊಳ್ಳುತ್ತಿದ್ದ ಸುಲಿ ಮತ್ತು ಜೆನಿಯರ ಮೇಲೆ ಓರೆಯಾಗಿ ಬೀಳುತ್ತಿದ್ದ ಚಿನ್ನದ ಬಿಸಿಲು ಹುಡಿ ಹುಡಿಯಾಗಿ ಹರಡಿ ಹೊಳೆಯುತ್ತಿತ್ತು.

ವಾಪಸು ಬರುವಾಗ ಹುಟ್ಟು ಹಾಕುತ್ತಾ ಜೇಮ್ಸ್ ತಮ್ಮ ರಾಂಚ್‌ಗೆ 'ಮೂನ್ ಲೈಟ್ ಬಾಸ್ಕೆಟ್' ಅಂತ ಹೆಸರಿಟ್ಟ ಹಿನ್ನೆಲೆ ಹೇಳಿದರು. ಹುಣ್ಣಿಮೆಯ ಆ ದಿನ ಮೊದಲ ಬಾರಿ ಈ ರಾಂಚನ್ನು ನೋಡಲು ಬಂದಾಗ ಲೀಸಾರಿಗೆ ತುಂಬು ಚಂದ್ರನ ಬೆಳದಿಂಗಳನ್ನು ಪ್ರತಿಫಲಿಸುತ್ತಿದ್ದ ಬ್ಲೂ ಗಾರ್ನೆಟ್ ಲೇಕ್ ಬೆಳದಿಂಗಳ ಬುಟ್ಟಿಯಂತೆ ಕಂಡಿತಂತೆ. ಲೇಕ್‌ನ ದಡದಲ್ಲಿ ನಿಂತು ಜೇಮ್ಸ್ ಬಳಿ ಪಿಸುಮಾತಿನಲ್ಲಿ ಆ ಚೆಲುವನ್ನು ಮೆಚ್ಚಿಕೊಂಡರಂತೆ. ಇಬ್ಬರೂ ಆ ಕ್ಷಣವೇ ಈ ಜಾಗವೇ ನಮ್ಮ ಮನೆ ಮತ್ತು ಇದಕ್ಕೆ 'ಬೆಳದಿಂಗಳ ಬುಟ್ಟಿ' ಎಂದು ಹೆಸರು ಅಂತ ನಿರ್ಧರಿಸಿದರಂತೆ... ಎಷ್ಟು ಚೆಂದ ಅನಿಸಿತು ನನಗೆ.

*

ವಾಪಸಾದಾಗ ಮನೆ ತುಂಬ ಹಣ್ಣಿನ ಸುವಾಸನೆಯೊಂದಿಗೆ ಬೆರೆತ ಘಮ. ಏಪ್ರನ್ ತೊಟ್ಟ ಲೀಸಾ 'ಬನ್ನಿ, ಬನ್ನಿ' ಅಂತ ಕರೆದು ಪಿಂಗಾಣಿ ತಟ್ಟೆ ಕೈಗಿಟ್ಟರು. ಚೆರ್ರಿ ಪೈ! ಒಂದು ಚೂರು ಕತ್ತರಿಸಿ ಬಾಯಿಗೆ ಹಾಕಿಕೊಂಡೆ. ಆಹಾ! ತಾಜಾ ಚೆರ್ರಿಯ ಸವಿಯೊಂದಿಗೆ ಗರಿಗರಿಯಾದ ಕ್ರಸ್ಟ್... ಆ ರುಚಿಯನ್ನು ಒಣ ಪದಗಳಲ್ಲಿ ಹೇಗೆ ಹೇಳುವುದೋ...

ಮಾತಾಡಿದರೆ ಎಲ್ಲಿ ಚೆರ್ರಿ ಪೈನ ರುಚಿ ಕಮ್ಮಿಯಾಗಿ ಬಿಡುತ್ತೋ ಎಂಬಂತೆ ಮಾತೊಂದೂ ಆಡದೆ ಸುಮ್ಮನೆ ತಿನ್ನುತ್ತಾ ಹೋದೆ...

ಹೊಸ ಬೆಣ್ಣೆಯ ಸುವಾಸನೆ ಸೂಸುತ್ತಾ ಸಿಹಿರಸ ತೊಟ್ಟಿಕ್ಕುತ್ತಿದ್ದ ಚೆರ್ರಿ ಪೈ ಪ್ರತಿ ಬಾರಿ ಕಚ್ಚಿದಾಗಲೂ ಹೊಸರುಚಿಯಲ್ಲಿ ನಾಲಿಗೆಯ ಮೇಲೆ ನಲಿಯುತ್ತಿತ್ತು. ಸುಲಿ ಅದೆಷ್ಟು ಬಾರಿ 'ಆಹಾ ಯಮ್ಮೀ...' ಅಂದಳೋ. ಜೆನಿ ಮಾತ್ರ ಅರ್ಧ ಕಣ್ಣು ಮುಚ್ಚಿಕೊಂಡು ತೂಗು ಕುರ್ಚಿಯಲ್ಲಿ ಕೂತು ತೂಗಿಕೊಳ್ಳುತ್ತಾ ನಿಧಾನವಾಗಿ ಪೈ ಮೆಲ್ಲುತ್ತಿದ್ದಳು. ಹೊರಗೆ ಮೆಲ್ಲಗೆ ಕತ್ತಲಾಗುತ್ತಿತ್ತು. ಸೂರ್ಯ ಬಂಗಾರ-ಹವಳದ ಉಯ್ಯಾಲೆ ಜೀಕುತ್ತಾ ಹೊಳೆವ ಮೋಡಗಳ ಹೊದ್ದು ನಿದ್ದೆಗೆ ಜಾರುತ್ತಿದ್ದ. ಊದಾ ಆಕಾಶದ ಕೆಳಗೆ ಕೆಂಪು ಕೊಕ್ಕಿನ ಬಿಳಿ ಬಿಳಿ ಎಲಿಗೆಂಟ್ ಟರ್ನ್‌ಗಳು 'ಟಿಟ್ಟಿರ್ ಟಿಟ್ಟಿರ್ ಟಿಟ್ಟಿರ್ ಟ್ರೀ ಟ್ರೀ ಟ್ರೀ...' ಎಂದು ಹಾಡುತ್ತಾ ಹಾರಿ ಹೋಗುತ್ತಿದ್ದವು. ಕಿಟಕಿಯ ಅಂಚಿನಲ್ಲಿಟ್ಟ ದೊಡ್ಡ ಹೂದಾನಿಯಲ್ಲಿ ನಾವು ಆಗಷ್ಟೇ ಕಿತ್ತು ತಂದ ಬಂಗಾರ ಹೊಳಪಿನ ಕಮಲಗಳು ಕಂಪು ಬೀರುತ್ತಿದ್ದವು. ದಳ ಮುಚ್ಚುತ್ತಿದ್ದ ಹೂಗಳು ತಲೆದೂಗುವ ಹುಲ್ಲುಗಳಿಗೆ 'ನಾಳೆ ತಪ್ಪದೆ ಬರುವೆ' ಎಂದು ಮಾತು ಕೊಡುತ್ತಾ ಪಿಸುಮಾತಿನ ವಿದಾಯ ಹೇಳುತ್ತಿದ್ದವು. ಮತ್ತು ನನ್ನ ಕೈಲಿದ್ದ ತಟ್ಟೆಯ ಪೈ ಖಾಲಿಯಾಗಿತ್ತು!

ಲೀಸಾ ಇನ್ನೂ ಕಿಚನ್ನಿನಲ್ಲಿ ಪೈ ಮಾಡುತ್ತಿದ್ದರು. ಚೆರ್ರಿ ಪೈ ನನ್ನನ್ನೆಷ್ಟು ಮರುಳು ಮಾಡಿತ್ತೆಂದರೆ ಪೈ ಮಾಡುವ ವಿಧಾನ ಕಲಿಯಬೇಕೆಂದು ಆಸೆಯಾಗಿ ಕಿಚನ್ನಿನೊಳಗೆ ನುಸುಳಿ ಲೀಸಾರನ್ನು ಗಮನಿಸತೊಡಗಿದೆ. ಮೊದಲಿಗೆ ಕಲೆಸಿದ ಹಿಟ್ಟಿನಲ್ಲಿ ಸುಮಾರು ೯ ಇಂಚು ಅಗಲದ ತುಸು ದಪ್ಪದ ಎರಡು ಚಪಾತಿಗಳನ್ನು ಒತ್ತಿಕೊಂಡರು ಲೀಸಾ. ಹೆಚ್ಚು ಆಳವಿಲ್ಲದ ಚಪ್ಪಟೆ ತಳದ ಪೈ ಬೋಗುಣಿಯಲ್ಲಿ ಒಂದು ಚಪಾತಿ ಹಾಸಿದರು. ಅದರ ಮೇಲ್ಭಾಗಕ್ಕೆ ಸುವಾಸನೆಯ ಹೊಸ ಬೆಣ್ಣೆ ಸವರಿದರು. ನಂತರ ಗಾಜಿನ ಪಾಕದಂತಿದ್ದ ದಟ್ಟ ಮೆರೂನ್ ಬಣ್ಣದ ಹೊಳೆವ ಚೆರ್ರಿ ಹೂರಣ (ಬೀಜ ತೆಗೆದ ತಾಜಾ ಚೆರ್ರಿಗಳನ್ನು ಸಕ್ಕರೆ ಮತ್ತು ಇತರ ಸ್ಪೈಸ್‌ಗಳೊಂದಿಗೆ ಕುದಿಸಿ ಮಾಡಿದ ಮಿಶ್ರಣ) ಸುರಿದರು. ನಂತರ ಹೂರಣದ ಮೇಲೆ ಬೆಣ್ಣೆ ಚೂರುಗಳನ್ನಿಟ್ಟು ಸಕ್ಕರೆ ಸಿಂಪಡಿಸಿದರು. ಕೊನೆಗೆ ಉಳಿದ ಇನ್ನೊಂದು ಚಪಾತಿಯಿಂದ ಮುಚ್ಚಿ ಅಂಚುಗಳಿಗೆ ಹಾಲು ಸವರಿ ನಾಜೂಕಾಗಿ ಮಡಿಸಿದರು. ಮತ್ತೊಮ್ಮೆ ಸಕ್ಕರೆ ಸಿಂಪಡಿಸಿ ಹುಶಾರಾಗಿ ಓವನ್‌ನಲ್ಲಿಟ್ಟರು. ನಂತರ ನನ್ನನ್ನು ನೋಡಿ ನಸು ನಕ್ಕು 'ನಾಳೆ ಇದನ್ನು ತಿನ್ನುವೆಯಂತೆ. ಈಗ ಬೇಗ ತಯಾರಾಗು ಹೊರಗೆ ಹೋಗಲಿದೆ.' ಅಂತ ಓಡಿಸಿದರು.

*

ನಾವೀಗ ಹೋಗುತ್ತಿರುವ ಜಾಗದ ಹೆಸರು 'ಏಂಜಲ್ಸ್ ಲ್ಯಾಂಡಿಂಗ್' ಅಂತೆ. ದೇವತೆಗಳು ಇಳಿವ ಆ ಜಾಗ ಹೇಗಿರಬಹುದೆಂದು ಯೋಚಿಸುತ್ತಿರುವಾಗಲೇ ಏಂಜಲ್ಸ್

ಲ್ಯಾಂಡಿಂಗ್ ಬಂದೇ ಬಿಟ್ಟಿತು. ಇದು ರಾಂಚ್‌ನ ಅತಿ ಎತ್ತರದ ಜಾಗ. ಅಲ್ಲೊಂದು 'A' ಆಕಾರದ ಪುಟಾಣಿ ಮನೆ. ಈ ಬೆಟ್ಟದ ಮೇಲಿಂದ ಇಡೀ ರಾಂಚನ್ನು ನೋಡಬಹುದೆಂದು ಜೇಮ್ಸ್ ಹೇಳಿದರು. 'ಈ ಹೆಸರೂ ನೀವುಗಳೇ ಇಟ್ಟಿದ್ದು ತಾನೇ' ಅಂತ ನಾನು ಜೆನಿಯನ್ನು ಕಿಚಾಯಿಸಿದಾಗ ಅವಳು ಇಲ್ಲಾಪಾ ಅಂತ ನುಣುಚಿಕೊಂಡಳು. 'ಇದು ಬಹಳ ಹಿಂದೆ ಸ್ಥಳೀಯರೇ ಇಟ್ಟ ಹೆಸರು.' ಅಂತ ಲೀಸಾ ಹೇಳಿದರು. ಬೇಸಿಗೆಯ ದಿನಗಳಲ್ಲಿ ಜೇಮ್ಸ್ ದಂಪತಿಗಳು ಇಲ್ಲಿ ಉಳಿಯುತ್ತಾರಂತೆ. ನಾನು ಹಾಗೇ ಒಂದು ಸುತ್ತು ಹೊಡೆಯುತ್ತೇನೆಂದಾಗ 'ಅಡುಗೆ ಬಿಸಿಯಾಗಿರುವಾಗಲೇ ಊಟ ಮುಗಿಸಿ ಆಮೇಲೆ ಎಲ್ಲಾರೂ ಆರಾಮವಾಗಿ ತಿರುಗಾಡೋಣ' ಎಂದು ಲೀಸಾ ಮನೆಯೊಳಗೆ ತಾವು ತಂದ ತಿಂಡಿ-ಹಣ್ಣಿನ ಬುಟ್ಟಿಗಳನ್ನು ಸಾಗಿಸುತ್ತಾ ಹೇಳಿದರು. ತಿಂದ ಚೆರ್ರಿ ಪೈ ಇಲ್ಲಿಗೆ ನಡೆದು ಬರುವಷ್ಟರಲ್ಲಿ ಕರಗಿ ಹೋಗಿತ್ತಲ್ಲಾ... ಹೊಟ್ಟೆ ಚುರುಗುಟ್ಟುತ್ತಿತ್ತು. ಗಡದ್ದಾಗಿ ಊಟ ಮಾಡಿ ಕಣ್ಣೆಳೆಯುತ್ತಿರುವಾಗ ಜೇಮ್ಸ್ ಹಿಂಬಾಗಿಲಿನಿಂದ ತಲೆ ಹಾಕಿ 'ಇಲ್ಲೇ ಕೂರಬಹುದಲ್ಲಾ' ಎಂದು ಕರೆದರು. ಒಲ್ಲದ ಮನಸ್ಸಿನಿಂದ ಹೊರ ಹೋದರೆ... ನನ್ನ ಕಣ್ಣಿಗೆ ಬಿದ್ದದ್ದು... ಒಂದು ಬೆಳದಿಂಗಳ ತೋಟ... ಕನಸಿನ ಉದ್ಯಾನ... ಬಿಳುಪು ಇಷ್ಟು ಸುಂದರವಾಗಿರಬಹುದೆ?

ಸುರಿವ ಆ ಬೆಳದಿಂಗಳಲ್ಲಿ ಬಿಳಿ ಲಿಲಿ ಹೂಗಳು ಹಂಸದ ಬಿಳಿ ರೆಕ್ಕೆಯಂಥ ವಿಶಾಲ ದಳಗಳನ್ನು ನಿಧಾನವಾಗಿ ತೆರೆಯುತ್ತಿದ್ದವು. ಬ್ರೈಡಲ್ ರೀತ್ ಪೊದೆಗಳು ಶ್ವೇತ ನಕ್ಷತ್ರಗಳ ಪರದೆ ಧರಿಸಿ ತಂಗಾಳಿಯಲ್ಲಿ ಓಲಾಡುತ್ತಿದ್ದವು. ಶುಭ್ರ ಕಾಸ್‌ಮಾಸ್‌ಗಳು ದೊಡ್ಡ ಬಿಳಿ ಚಿಟ್ಟೆಯಂತಿದ್ದವು. ಗಿಡ ಮರಗಳ ಮೇಲೆಲ್ಲಾ ಬೆಳದಿಂಗಳು ಸುರಿದು ಆ ಉದ್ಯಾನವೇ ಮಹಾಶ್ವೇತೆಯಾಗಿತ್ತು.

ಈ ರೀತಿಯ ಬಿಳಿ ಹೂಗಳ ಉದ್ಯಾನವನ್ನು 'ಮೂನ್ ಲೈಟ್ ಗಾರ್ಡನ್' ಅನ್ನುತ್ತಾರಂತೆ. ಬೆಳದಿಂಗಳ ಈ ತೋಟದಲ್ಲಿ ಬಿಳಿ ಹೂಗಳಿಗೆ ಮತ್ತು ಸುಗಂಧ ಸೂಸುವ ಪುಷ್ಪಗಳಿಗೆ ಮೊದಲ ಸ್ಥಾನ. ಬ್ರಿಟಿಶ್ ಸಾಮ್ರಾಜ್ಯದ ಉತ್ತುಂಗದ ಕಾಲದಲ್ಲಿ ಕುಲೀನ ಮನೆತನದ ಸುಕುಮಾರಿಯರಿಗಾಗಿ ಸೃಷ್ಟಿಯಾದ ಉದ್ಯಾನಗಳಂತೆ ಇವು. ಅಮೆರಿಕದಲ್ಲೂ ಜನಪ್ರಿಯವಾಗಿವೆ ಎಂದು ಲೀಸಾ ವಿವರಿಸಿದರು. 'ಸುಲಿ, ಈ ಬೆಳದಿಂಗಳ ತೋಟ ನಿನಗೆ ಸರಿಯಾಗಿದೆ' ಅಂತ ನಾನೂ ಜೆನಿಯೂ ನಮ್ಮ ರಾಜಕುಮಾರಿಯನ್ನು ಗೋಳು ಹೊಯ್ದುಕೊಳ್ಳದೇ ಬಿಡಲಿಲ್ಲ.

ವಿವಿಧ ಜಾತಿಯ ಮಲ್ಲಿಗೆಗಳು ಬೀರುತ್ತಿದ್ದ ಕಂಪನ್ನು ಉಸಿರಲ್ಲಿ ತುಂಬಿಕೊಳ್ಳುತ್ತಾ ಎಲ್ಲರೂ ಬೆಳದಿಂಗಳ ತೋಟದಲ್ಲಿ ಸುತ್ತಾಡಲು ಹೊರಟೆವು. ಪುಟಾಣಿ ಲಾಂದ್ರಗಳ ಗೋಪುರದಂತಿದ್ದ ಸ್ನಾಪ್ ಡ್ರಾಗನ್‌ಗಳು ಕೈ ಬೀಸಿ ಕರೆಯುತ್ತಿದ್ದವು. ನಾಜೂಕಾದ ಲಿಲಾಕ್ ಗುಚ್ಛಗಳು ಕೆನ್ನೆಗೆ ತಾಗುತ್ತಿದ್ದವು. ಶ್ವೇತ ಪಿಯೋನಿಗಳ ಗಿಡದ ಮೇಲೆ ಬಿಳಿ ಪಾರಿವಾಳ ಕೂತಂತೆ ಕಾಣುತ್ತಿತ್ತು. ಆ ನೆಳಲು ಬೆಳಕಿನ ತೋಟದಲ್ಲಿ ಲಾಸ್ಯವಾಡುತ್ತಿದ್ದ ಶ್ವೇತ

ಸುಂದರಿಯರು ಯಾವ ದೇವತೆಯರಿಗೂ ಕಡಿಮೆ ಇಲ್ಲದ ಲಾವಣ್ಯದಿಂದ ಮೆರೆಯುತ್ತಿದ್ದರು. ಏಂಜಲ್ಸ್ ಲ್ಯಾಂಡಿಂಗ್ ನಿಜವಾಗಿಯೂ ದೇವತೆಯರು ಇಳಿದು ನಲಿವ ತಾಣ ಎನ್ನಿಸಿತು.

ವಿಸ್ಟೇರಿಯಾ ಹೂ ಪುಂಜಗಳು ಬಿಲ್ಲಿನಾಕಾರದ ಕಮಾನುಗಳಲ್ಲಿ ತುಳುಕಿ ಸುವಾಸನೆ ಚಿಮುಕಿಸುತ್ತಿದ್ದವು. ಕ್ಲಮಂಟಿ ಹೂ ಲತೆಗಳೂ ಬಾಗಿ ಬಳುಕಿ ತಮ್ಮ ಬೆಳ್ಳಿಹೂಗಳನ್ನು ತೋರುತ್ತಿದ್ದವು. ಹನಿ ಸಕಲ್‌ಗಳು ತಮ್ಮ ಸುವಾಸಿತ ಮಧುಪಾತ್ರೆಗಳ ಚಾಚಿ ಕೀಟಗಳನ್ನು ಆಹ್ವಾನಿಸುತ್ತಿದ್ದವು. ಬಳ್ಳಿ ಗುಲಾಬಿಗಳು ಮೈತುಂಬಾ ಹೂ ಹೊತ್ತು ನಗುತ್ತಿದ್ದವು. ಕಣಿವೆ ಲಿಲಿಗಳು ಪುಟ್ಟ ಪುಟ್ಟ ಮುತ್ತಿನಂಥಾ ಹೂ ಪೋಣಿಸಿಕೊಂಡು ನಲಿಯುತ್ತಿದ್ದವು. ಆ ಇಡೀ ದೃಶ್ಯ ಮಕಮಲ್ಲಿನ ಬಿಳಿ ರೇಶ್ಮೆಯಂಥಾ ಹೂಗಳು ಚಂದ್ರನನ್ನು ತಮ್ಮ ಬೆರಗು ಕಣ್ಣುಗಳಿಂದ ಆರಾಧಿಸುತ್ತಾ ಅವನಿಗೆ ತಮ್ಮ ಸುಗಂಧವನ್ನು ಅರ್ಪಿಸುತ್ತಿರುವಂತೆ ತೋರಿತು.

ಉದ್ದುದ್ದ ಪಾತಿಗಳಲ್ಲಿ ದಟ್ಟವಾಗಿ ಹರಡಿದ್ದ ಅಲಿಸಿಯಂಗಳು ಪುಟ್ಟಪುಟ್ಟ ಕಣ್ಣು ಮಿಟುಕಿಸಿ ನಗುತ್ತಿದ್ದವು. ಬೊಗಸೆ ಗಾತ್ರದ ಗುಲಾಬಿಗಳು ಗಿಡದ ತುಂಬಾ ಅರಳಿದ್ದವು. ನಕ್ಷತ್ರಮಲ್ಲಿಗೆಗಳು ಆಕಾಶದ ನಕ್ಷತ್ರಗಳೊಂದಿಗೆ ಸ್ಪರ್ಧಿಸುತ್ತಿದ್ದವು. ಚಂದ್ರಬಳ್ಳಿಗಳ ತುಂಬಾ ನೂರಾರು ಚಂದ್ರರು... ಬಾನಿಗಾದರೋ ಒಂದೇ ಚಂದ್ರ! ಸುಗಂಧದ ಸುಳಿಯಂತೆ ಸುರುಳಿಸುರುಳಿಯಾಗಿ ಅರಳಿದ್ದ ಗಾರ್ಡೇನಿಯಾದ್ದು ಅಲೌಕಿಕ ಪರಿಮಳ. ಹೈಡ್ರಾಂಜಿಯಾದ ಬುಟ್ಟಿಗಾತ್ರದ ಕುಚ್ಚುಹೂಗಳು ನೂರಾರು ಪುಟ್ಟ ಬಿಳಿಬಿಳಿ ಚಿಟ್ಟೆಗಳ ಜಾತ್ರೆಯಂತಿತ್ತು. ಚಿತ್ತಾರದ ಲೇಸ್‌ನಂತಿದ್ದ ಎಲೆಗಳ ವಿಂಟರ್ ಜಾಸ್ಮೀನ್ ಕೆನ್ನೆ ನಸು ಕೆಂಪಾಗಿಸಿಕೊಂಡು ನಾಚಿಕೆಯ ಪರಿಮಳ ಬೀರುತ್ತಿತ್ತು. ನಾವು ನಿಧಾನವಾಗಿ ಮುಂದುವರಿದಂತೆಲ್ಲಾ ಸುವಾಸನೆ ನಮ್ಮನ್ನೇ ಹಿಂಬಾಲಿಸುತ್ತಿರುವಂತೆ ತೋರಿತು. ನಾವು ನಡೆಯುವಾಗ ನಮ್ಮ ಕೈ ಕಾಲುಗಳನ್ನು ಸವರುತ್ತಿದ್ದ ರೋಸ್ ಮೆರ್‍ರಿ, ಥೈಮ್ ಮುಂತಾದ ಹರ್ಬ್‌ಗಳು ಸ್ಪರ್ಶ ಮಾತ್ರಕ್ಕೇ ತಮ್ಮ ಸುವಾಸನೆಯನ್ನು ಹೊರಸೂಸುತ್ತಿದ್ದುದೇ ಅದಕ್ಕೆ ಕಾರಣ.

ನಿಧಾನವಾಗಿ ನೋಡಿದಾಗ ಕೇವಲ ಬಿಳಿಯಷ್ಟೇ ಅಲ್ಲದೆ ಹಲವು ತಿಳಿಬಣ್ಣದ ಹೂಗಿಡಗಳೂ ಗೋಚರಿಸಿದವು. ತಿಳಿ ಹಳದಿಯ ಯೆಲ್ಲೋ ಫ್ಲ್ಯಾಗ್ ಐರಿಸ್, ಸ್ನೋ ಬೆಲ್ಸ್, ಡ್ಯಾಫೋಡಿಲ್‌ಗಳು ಕಾಂತಿ ಬೀರುತ್ತಿದ್ದವು. ಹಾಗೇ ತಿಳಿ ಗುಲಾಬಿ ಬಣ್ಣದ ಪಿಟುನಿಯಾ, ಕ್ಯಾಂಡಿಟಫ್ಟ್, ಡಯಾಂಥಸ್‌ಗಳು ಬೆಳದಿಂಗಳ ತೋಟಕ್ಕೆ ವೈವಿಧ್ಯತೆ ನೀಡಿದ್ದವು. ಡಾಗ್ ವುಡ್, ಅಮುರ್ ಮೇಪಲ್, ಜಪಾನೀಸ್ ಏಪ್ರಿಕಾಟ್, ಯೆಲ್ಲೋ ವುಡ್ ಮರಗಳು ತಲೆ ತುಂಬಾ ಸವಿಯಾದ ಹೂ ಮುಡಿದು ಬೀಗುತ್ತಿದ್ದವು. ಬೊಗಸೆ ಬೊಗಸೆಯಾಗಿ ಆ ಸುವಾಸನೆಯನ್ನು ನಾವು ಮೊಗೆ ಮೊಗೆದು ಕುಡಿದೆವು.

ಅಗೋ... ದೂರದಲ್ಲಿ ಓಕ್ ಮರಗಳ ಸಾಲು. ಅದರ ಕೆಳಗೆ ಗಾಜು ಹಾಸಿದಂತೆ ಆಳವಿಲ್ಲದೆ ಪಸರಿಸಿಕೊಂಡ ತಿಳಿನೀರು... ನೀರಿನಲ್ಲಿ ಪ್ರತಿಫಲಿಸುತ್ತಿದ್ದ ಬೆಳ್ಳಿ ಚಂದ್ರ... ಮೋಡದಂಥಾ ಅಖೀಲಿಯಾ ರಾಶಿ, ಹಾಲಿನ ಜಲಪಾತದಂಥ ಬಿಳಿ ದೇಸಿ ಹೂಗಳು...

ಮಂಜಿನ ಬೆಟ್ಟಗಳಂತೆ ತೋರುವ ರೋಡೋಡೆಂಡ್ರಾನ್... ಆ ಸುಗಂಧ, ಆ ಬೆಳದಿಂಗಳು, ಆ ಬೆಳ್ಳಿಹೂಗಳ ಚೆಲುವು... ಇಂಪಾದ ಗೀತೆಯಂತೆ ಮನ ತುಂಬಿತು. ಹಿತವಾದ ಸಂಗೀತದ ಆಲಾಪದಂತೆ ನಮ್ಮನ್ನು ನವಿರಾಗಿ ಎತ್ತಿ ಯಾವುದೋ ಲೋಕದಲ್ಲಿ ತೇಲಿಸಿತು... ಬೆಟ್ಟದ ಮೇಲಿನ ಪುಟಾಣಿ ಮನೆಯಲ್ಲಿ ಗೆಳತಿಯರೊಂದಿಗೆ ಕಳೆದ ಆ ಬೆಳದಿಂಗಳ ರಾತ್ರಿ... ನಿದ್ದೆಯಲ್ಲೂ ನರ್ತಿಸುವ ಬೆಳದಿಂಗಳ ಅಪ್ಸರೆಯರ ಕನವರಿಕೆಗಳು... ಸುಗಂಧದ ಬೆಳದಿಂಗಳ ಅಲೆಯೊಂದು ತನ್ನ ತೋಳುಗಳಲ್ಲಿ ನನ್ನನ್ನು ಹಗುರವಾಗಿ ಎತ್ತಿ ಉಯ್ಯಾಲೆ ಆಡಿಸಿದಂಥ ಕನಸುಗಳು...

*

ಮರುದಿನ ಮಧ್ಯಾಹ್ನ ನಾವು ಹೊರಡುವುದಿತ್ತು. ಬೆಳಗ್ಗೆ ಲೀಸಾ ನಮ್ಮನ್ನು ಅವರ ಲ್ಯಾವೆಂಡರ್ ಫೀಲ್ಡ್‌ಗೆ ಕರೆದೊಯ್ದರು. ಆ ನೇರಳೆ ಬಣ್ಣದ ಹೊಲದಲ್ಲಿ ಲ್ಯಾವೆಂಡರ್ ಹೂತೆನೆಗಳು ಗಾಳಿಯಲ್ಲಿ ತಲೆ ಅಲುಗಿಸುತ್ತಾ ಕಂಪು ಬೀರುತ್ತಿದ್ದವು. ಹೂತೆನೆಗಳ ಮೇಲೆ ಕೂತು ಮಕರಂದ ಹೀರುತ್ತಿದ್ದ ಹಳದಿ ಜೇನುಗಳು ನೇರಳೆ ಹೂಗಳಿಗೆ ಚಿನ್ನದ ಗುಂಡುಗಳ ಅಲಂಕಾರದಂತಿತ್ತು. ಲ್ಯಾವೆಂಡರ್ ಹೊಲದ ಅಂಚಿನಲ್ಲೇ ಲೀಸಾ ಅವರ ಪುಟ್ಟ ಅಂಗಡಿ, 'ಲ್ಯಾವೆಂಡರ್ಸ್ ಅಂಡ್ ಲೈಲ್ಯಾಕ್ಸ್' ಇದೆ. ಲ್ಯಾವೆಂಡರ್‌ನ ಉತ್ಪನ್ನಗಳನ್ನೂ ಲೈಲ್ಯಾಕ್ ಹೂಗಳನ್ನೂ ಲೀಸಾ ಇಲ್ಲಿ ಮಾರುತ್ತಾರೆ. ನಿನ್ನೆ ಏಂಜಲ್ಸ್ ಲ್ಯಾಂಡಿಂಗ್‌ನಿಂದ ಕಿತ್ತು ತಂದ ಲೈಲ್ಯಾಕ್ ಹೂಗಳನ್ನು ದೊಡ್ಡ ದೊಡ್ಡ ಹೂದಾನಿಗಳಲ್ಲಿ ಜೋಡಿಸಿಟ್ಟು ಅಂಗಡಿಯಲ್ಲಿ ಲ್ಯಾವೆಂಡರ್ ಸೋಪುಗಳೂ ಬಾತ್ ಸಾಲ್ಟ್‌ಗಳೂ ಸಾಕಷ್ಟಿದ್ದಿದ್ದನ್ನು ಗಮನಿಸಿಕೊಂಡ ನಂತರ ಜೇಮ್ಸ್‌ಗೆ ಏನೋ ಸೂಚನೆ ಕೊಟ್ಟು, 'ಗರ್ಲ್ಸ್... ಐ ನೀಡ್ ಯುವರ್ ಹೆಲ್ಪ್' ಅನ್ನುತ್ತಾ ಲೀಸಾ ನಮ್ಮ ಕಡೆಗೆ ಬಂದರು.

ಕಣ್ಣಳತೆ ದೂರದ ಓಕ್ ಗ್ರೋವ್‌ನಲ್ಲಿ ಮದುವೆಯೊಂದು ನಡೆಯುತ್ತಿತ್ತು. ಚಿಕ್ಕ ದಿಬ್ಬಣದ ಚೊಕ್ಕ ಮದುವೆ. ಲೀಸಾ ರಾಂಚ್‌ನಲ್ಲಿ ಮದುವೆಗಳನ್ನು ಹೋಸ್ಟ್ ಮಾಡುತ್ತಾರೆ ಅಂತ ಜೆನಿಯಿಂದ ತಿಳಿಯಿತು. ನಮಗೆ ಕುತೂಹಲವಾದರೂ ಅವರಿಗೆ ತೊಂದರೆಯಾಗ ಬಾರದೆಂದು ನಾವು ದೂರದಿಂದಲೇ ವೀಕ್ಷಿಸಿದೆವು. ಅಳಿಲುಗಳು ಸರಭರ ಓಡಾಡುತ್ತಿದ್ದವು. ಹಳದಿ ವಾರ್ಬ್ಲರ್ ಹಕ್ಕಿಗಳು ಚಿಲಿಚಿಲಿಚಿಲಿ ಟಿವಿಟಿವಿಟಿವೀ ಎಂದು ಹಾಡುತ್ತಿದ್ದವು. ಬದಿಯ ಕ್ರೀಕ್‌ನ ಮೇಲೆ ಪುಟ್ಟ ಸೇತುವೆ ಬಿಸಿಲಿನಲ್ಲಿ ಬಂಗಾರವಾಗಿ ಹೊಳೆಯುತ್ತಿತ್ತು. ಪುಟಾಣಿ ಕಾಲುದಾರಿಯೊಂದು ತಪ್ಪು ಹೆಜ್ಜೆ ಹಾಕುತ್ತಾ ಎಲ್ಲೂ ನಿಲ್ಲದೆ ಓಡಿಬಿಡುವ ಮಗುವಿನಂತೆ ಮರಗಳ ಹಿಂದೆ ಓಡಿ ಮರೆಯಾಗಿತ್ತು. ಅಲ್ಲಲ್ಲಿ ಜೇಮ್ಸ್ ಅವರ ಜೇನುಪೆಟ್ಟಿಗೆಗಳು ಇದ್ದವು. ಅವುಗಳ ಹತ್ತಿರ ಹೋಗಬೇಡಿ ಎಂದು ಲೀಸಾ ಕೂಗಿ ನಮ್ಮನ್ನು ಎಚ್ಚರಿಸಿದರು. ಮರುದಿನ ನಿಗದಿಯಾಗಿದ್ದ ಮದುವೆಯ ವಧುವಿಗೆ ಹೂಗುಚ್ಛ ಮಾಡಲು ಲೀಸಾಗೆ ಲ್ಯಾವೆಂಡರ್ ತೆನೆಗಳನ್ನು ನಾವೆಲ್ಲಾ ಕಿತ್ತು ಕೊಟ್ಟೆವು.

ಸವಿಯಾದ ಗಾಳಿಯು ನಮ್ಮಲ್ಲಿ ಏನೋ ಒಂದು ರೀತಿಯ ಹೊಸ ಉಲ್ಲಾಸ ತುಂಬುತ್ತಿತ್ತು. ಎಳೆ ಕರುವಿನಂತೆ ಜಿಗಿದು ಹೂ ಹುಲ್ಲಿನ ಮೇಲೆ ಬಿದ್ದು ಉರುಳಾಡಿದೆವು. ತಿಳಿ ನೀಲಿ ಆಕಾಶ... ಅಲ್ಲಲ್ಲಿ ಮುತ್ತಿನ ಗುಪ್ಪೆಗಳಂತಿದ್ದ ಮೋಡಗಳು... ಕಣ್ಣು ಹಾಯಿಸಿದಷ್ಟೂ ದೂರ ನೇರಳೆ ಹೂವಿನ ಸಾಲು... ಪುಟ್ಟ ಪುಟ್ಟ ಪೊದೆಗಳಾಗಿ ಬೆಳೆದಿದ್ದ ಜೇಬಿ ಬ್ಲೂ ಐಸ್ ಗಿಡಗಳಲ್ಲಿ ನಸು ನೀಲಿ ಬಣ್ಣದ ಹೂಗಳು ಗುಂಪು ಗುಂಪಾಗಿ ಅರಳಿದ್ದವು. ಬದುವಿನ ಹಸಿರು ಹುಲ್ಲಿನ ಮೇಲೆ ಕಾಲಿಟ್ಟಾಗ ಅದುವರೆಗೂ ಕಣ್ಣಿಗೆ ಬೀಳದ ಹಸಿರು ಮಿಡತೆಗಳು ಚಟಮ್ಮೆಂದು ಕುಪ್ಪಳಿಸುತ್ತಿದ್ದವು. ಹವಳ ಕತ್ತಿನ ಹಮ್ಮಿಂಗ್ ಬರ್ಡ್ ಜೋಡಿಯೊಂದು ಚಿಕ್ ಚಿಕಿ ಚಿಕಿ ಚಿಕ್ ಚಿಕ್... ಎಂದು ಸರಸವಾಗಿ ಸಂಭಾಷಿಸುತ್ತಿದ್ದವು. ವುಡ್ ಲ್ಯಾಂಡ್ ಸ್ಟಾರ್ ಬಿಳಿ ನಕ್ಷತ್ರದ ಹೂ ತೊಟ್ಟು ಹಗಲಲ್ಲೂ ಮಿನುಗುತ್ತಿತ್ತು.

ಮೈಯೆಲ್ಲಾ ಲ್ಯಾವೆಂಡರ್ ಹೂಗಳ ಸುವಾಸನೆಯೊಂದಿಗೆ ನಾವು ಮನೆಗೆ ವಾಪಸಾಗಲು ಹೊರಟಾಗ, 'ಅರೆ, ನನ್ನ ಜೇನು ರುಚಿ ನೋಡದೆ ಹೇಗೆ ಹೋಗುತ್ತೀರಾ?' ಎಂದು ಜೇಮ್ಸ್ ಒಳಗೆ ಕರೆದರು. ನಾನೇನೋ ಒಂದು ಚಮಚ ಜೇನು ನೆಕ್ಕಿ ಮನೆಗೆ ಓಡುವುದೆಂದುಕೊಂಡಿದ್ದೆ. ಒಳಗೆ ಹೋದಾಗ 'ಹನಿ ಟೇಸ್ಟಿಂಗ್' ಅನ್ನುವುದು ಒಂದು ಆಸಕ್ತಿದಾಯಕ ಕಾರ್ಯಕ್ರಮ ಎಂದು ಗೊತ್ತಾಯಿತು!

ಜೇನಿನಲ್ಲೂ ವೈವಿಧ್ಯ ಇರುತ್ತದೆಯೇ ಎಂಬ ನಮ್ಮ ಪ್ರಶ್ನೆಗೆ ಜೇಮ್ಸ್ ಹೇಳಿದ ಉತ್ತರ ಸ್ವಾರಸ್ಯಕರವಾಗಿತ್ತು. ಜೇನಿನ ರುಚಿ ಜೇನು ಹುಳುಗಳು ಯಾವ ಪ್ರದೇಶದ ಯಾವ ಹೂವಿನಿಂದ ಮಧು ಸಂಗ್ರಹಿಸುತ್ತವೆಂಬುದರ ಮೇಲೆ ಅವಲಂಬಿತವಾಗಿರುವುದಂತೆ. ಟುಲಿಪ್ ಪೋಪ್ಲಾರ್ ಮರದ ಜೇನು ಗಾಢವಾಗಿದ್ದರೆ ಕಿತ್ತಳೆ ಮರದ ಜೇನು ತೆಳುವಾಗಿರುತ್ತದಂತೆ. ಪಂಪ್ಕಿನ್ ಬ್ಲಾಸಮ್ ಹನಿಯನ್ನು ಫಾಲ್‌ನಲ್ಲಿ ಮಾತ್ರ ಸಂಗ್ರಹಿಸಲು ಆಗುವುದಂತೆ. ಒಂದೇ ಜಾಗದಿಂದ ಬೇರೆ ಬೇರೆ ರುಚಿಯ ಜೇನು ಹೇಗೆ ಬರುತ್ತದೆಂದು ನಾವು ಕೇಳಿದಾಗ 'ಆಯಾ ಕಾಲದಲ್ಲಿ ಜೇನು ಪೆಟ್ಟಿಗೆಯ ಸುತ್ತಮುತ್ತ ಯಾವ ಜಾತಿಯ ಹೂ ಬಿಟ್ಟಿದೆಯೋ ಆ ರುಚಿಯ ಸುವಾಸನೆಯ ಜೇನು ಸಂಗ್ರಹ ಆಗುತ್ತದೆ.' ಎಂಬ ಉತ್ತರ ಬಂತು. ಅಂದರೆ 'ಅ ಗುಡ್ ಬೀಕೀಪರ್ ಶುಡ್ ಆಲ್ವೇಸ್ ಕೀಪ್ ಗುಡ್ ಟೈಮಿಂಗ್!' ಜೇನು ಇಳಿಸಲು ಸೋಮಾರಿತನ ಮಾಡಿದರೆ ಎರಡು ರುಚಿಯ ಜೇನು ಬೆರಕೆಯಾಗಿ ಬಿಡುತ್ತದೆ ಅನ್ನುತ್ತಾ ಜೇಮ್ಸ್ ನಕ್ಕರು.

ಚಿಕ್ಕ ಚಿಕ್ಕ ಪೇಪರ್ ಕಪ್‌ಗಳಲ್ಲಿ ಜೇನುಗಳ ಜೊತೆಗೆ ಬ್ರೆಡ್ ಪೀಸುಗಳೂ, ಚೀಸೂ ಬಂದವು. ಒಂದಕ್ಕಿಂತ ಒಂದು ವಿಶಿಷ್ಟ ರುಚಿಯ ಜೇನುಗಳು! ಗೋಲ್ಡನ್ ರಾಡ್ ಹನಿಗೆ ಪರಾಗದ ಪರಿಮಳ ಬೇಸಿಗೆಯ ಸೂರ್ಯನನ್ನು ನೆನಪಿಸುವ ರುಚಿ, ಬ್ಲೂಬೆರಿ ಬ್ಲಾಸಮ್ ಹನಿಯದ್ದು ಹಿತವೆನಿಸುವ ಹುಳಿ ರುಚಿ, ವೈಲ್ಡ್ ರಾಸ್ಪ್‌ಬೆರ್ರಿಯದ್ದು ಮರಳುಮರಳಾದ ಕಲ್ಲುಸಕ್ಕರೆಯಂತೆ, ಡ್ಯಾಂಡಿಲಿಯನ್ ಹನಿ ಖರ್ಜೂರ ನೆನಪಿಸುವ ಸ್ವಾದ, ಜ್ಯಾಮ್‌ನಂತೆ

ಗಾಢವಾಗಿ ಮೃದುವಾದ ಏಪ್ರಿಕಾಟ್ ಜೇನು, ಕಿತ್ತಳೆ ರುಚಿಯ ಆರೆಂಜ್ ಬ್ಲಾಸಂ ಹನಿ, ಚೆಸ್ಟ್‌ನಟ್ ಹನಿಯ ನಟ್ಟಿ ಫ್ಲೇವರ್, ವೈಲ್ಡ್ ಫ್ಲವರ್ ಹನಿಯ ಹರ್ಬಲ್ ರುಚಿ... ಬಣ್ಣಗಳಲ್ಲೂ ವೈವಿಧ್ಯ! ಕೆಲವು ಬಂಗಾರ ಬಣ್ಣ ಹೊಂದಿ ನೀರು ನೀರಾಗಿದ್ದರೆ ಇನ್ನು ಕೆಲವದ್ದು ತಿಳಿಗೆಂಪು ಬಣ್ಣ, ಕೆಲವು ಮಂದವಾದ ಕಂದು, ಕೆಲವು ಪಾರದರ್ಶಕ...

ಜೇನಿನ ಹೊಳೆಯಲ್ಲಿ ತೇಲಿ ಮುಳುಗಿ ಮತ್ತಿನಿಂದ ಮರುಳಾಗಿ ಮನೆಗೆ ಬಂದಾಗ ನೆನಪಾಗಿದ್ದು ಪ್ಯಾಕಿಂಗ್ ಚೂರೂ ಮಾಡಿಲ್ಲಾ ಅಂತ!

*

ಜೆನಿ ಮೆಲುವಾಗಿ ಹಾಡುತ್ತಾ ಕಾರು ಓಡಿಸುತ್ತಿದ್ದಳು. ನಾವು ನಮ್ಮೂರಿಗೆ ವಾಪಸಾಗುತ್ತಿದ್ದೆವು. ನನಗೇನೋ ಎಲ್ಲಾ ಕನಸಿನಂತೆ ಭಾಸವಾಗುತ್ತಿತ್ತು. ಆದರೆ ನನ್ನ ತೊಡೆ ಮೇಲೆ ಇಟ್ಟುಕೊಂಡಿದ್ದ ಲೀಸಾ ಕೊಟ್ಟ ಚೆರ್ರಿ ಪೈ ಬಾಕ್ಸನ್ನು ಹುಷಾರಾಗಿ ಕಾಪಾಡುವಾಗ ಇದು ಕನಸಲ್ಲಾ ಅಂತ ಗೊತ್ತಾಗುತ್ತಿತ್ತು. ಜೊತೆಗೆ ಸುಲಿ ಪಕ್ಕದಲ್ಲಿದ್ದ ಬುಟ್ಟಿಯಲ್ಲಿ ಚೆರ್ರಿ ಹಣ್ಣುಗಳೂ ಜೇನಿನ ಬಾಟಲುಗಳೂ ತುಂಬಿ ತುಳುಕುತ್ತಿದ್ದವು. ಸೀಟಿಗೊರಗಿ ಹಾಗೇ ಕಣ್ಣು ಮುಚ್ಚಿದೆ. ಲೀಸಾ-ಜೇಮ್ಸ್ ದಂಪತಿಗಳು ನಮಗೆ ನೀಡಿದ ಆದರದ ಆತಿಥ್ಯ, ತೋರಿದ ಪ್ರೀತಿ ನೆನೆದು ಹೃದಯ ತುಂಬಿ ಬಂತು...

ಜೇಮ್ಸ್ ತಮ್ಮ ಮನೆಯಲ್ಲಿ ಸ್ವತಃ ತಾವೇ ಕೈಯಿಂದ ಮಾಡಿದ್ದ ಓಕ್ ಫಲಕದ ಮೇಲಿನ ಮಾತುಗಳು ನೆನಪಿಗೆ ಬಂದವು. ಅದು ನ್ಯೂಯಾರ್ಕ್‌ನ ಪ್ರಖ್ಯಾತ 'ಯಾದ್ದೋ ಹೂತೋಟ'ದ ಸೂರ್ಯ ಫಲಕದ ಮೇಲಿನ ಬರಹವಂತೆ, ಲೀಸಾ ಅದನ್ನು ಬಹುವಾಗಿ ಮೆಚ್ಚಿದ್ದರಿಂದ ಜೇಮ್ಸ್ ತಮ್ಮ ಮನೆಯಲ್ಲೂ ಅದನ್ನು ಓಕ್ ಫಲಕದಲ್ಲಿ ಕೊರೆದು ತೂಗುಹಾಕಿದರಂತೆ. ಹಾಗೆಂದು ಅವರೇ ಹೇಳಿದ್ದು ನೆನಪಾಯಿತು:

'Hours fly,
Flowers die,
New days,
New ways,
Pass by;
Love stays...'

ಹೌದು, ಕಾಲ ಬದಲಾಗುತ್ತದೆ. ಹೂಗಳು ಬಾಡಿ ಹೋಗುತ್ತವೆ. ಜೀವನದ ರೀತಿ ನೀತಿಗಳು, ನಂಬಿಕೆಗಳು, ಮೌಲ್ಯಗಳು ಬದಲಾಗುತ್ತವೆ. ಆದರೆ ಕೊನೆಗೆ ಉಳಿವುದೊಂದೇ ಪ್ರೀತಿ. ಎಂದೂ ಬಾಡದ, ಸದಾ ಅರಳಿ ಬೆಳಗುವ, ಬೆಳಗಿಸುವ ಪ್ರೀತಿ... ಆ ಘಳಿಗೆ ನಾನು ಪ್ರಾಂಜಲ ಮನದಿಂದ ಆಶಿಸಿದೆ... ಕಾಲ ಬದಲಾದರೂ ಆ ಪ್ರೀತಿಯ, ವಿಶ್ವಾಸದ, ಸಹೃದಯತೆಯ, ವಾತ್ಸಲ್ಯದ ಬೆಳಕು ಎಂದೂ ಆರದಿರಲಿ... ●

ಬರೆಯುವುದನ್ನು ಕಲಿಯಿರಿ!

–ಮೀರ ಪಿ. ಆರ್.

'ಬರೆಯಲು ನಿಮಗೆ ಆಸೆಯೆ? ಬರಹಗಾರರಾಗಬೇಕೆಂದಿದ್ದೀರೇನು? ನಮ್ಮ ಬರಹದ ತರಗತಿಗೆ ಇಂದೇ ಸೇರಿಕೊಳ್ಳಿ, ೫ ತಿಂಗಳ ಒಳಗೆ ನಿಮ್ಮದೇ ಸ್ವಂತ ಪುಸ್ತಕವೊಂದನ್ನು ಪ್ರಕಟಿಸಿ!'

ಕೈಲಿ ಹಿಡಿದಿದ್ದ ಈ ನೀಲಿ ಬಣ್ಣದ ಕರಪತ್ರವನ್ನು ಅದೆಷ್ಟನೆಯ ಬಾರಿಗೋ ಮತ್ತೆ ಓದಿದ್ದೆ. ಹೇಳಿ ಕೇಳಿ ನೀಲಿ ಬಣ್ಣ ಅಂದರೆ ನನಗಿಷ್ಟ. ಮುದ್ರಿಸಿದ್ದ ಕಾಗದವಂತೂ ಅದರಲ್ಲೇ ಮುಖ ನೋಡಿಕೊಳ್ಳುವಷ್ಟು ಹೊಳಪಾಗಿತ್ತು. ಅಕ್ಷರಗಳ ವಿನ್ಯಾಸ ಬಣ್ಣ ಎಲ್ಲವೂ ಸೊಗಸಾಗಿತ್ತು. ಪ್ರತಿ ಬಾರಿ ಓದಿದಾಗಲೂ ಕಣ್ಣಲ್ಲಿ ಕನಸು ತುಂಬಿಸುತ್ತಿದ್ದ ಈ ಸಾಲುಗಳಿಗೆ ಸೋತು ಹೋಗಿ ಕಡೆಗೂ ಈ 'ಬರೆಯುವುದನ್ನು ಕಲಿಸುವ' ಕ್ಲಾಸಿಗೆ ಸೇರಿಯೇ ಬಿಡುವುದೆಂದು ನಿರ್ಧರಿಸಿದೆ. ಹಾಗಂತ ನನಗೆ ಬರೆಯುವುದಕ್ಕೆ ಬರುವುದೇ ಇಲ್ಲ ಅಂದುಕೊಳ್ಳಬೇಡಿ. ನನ್ನ ಅಪ್ಪ-ಅಮ್ಮನ ಮಾತನ್ನು ನೀವು ನಂಬುವುದಾದರೆ(!), ನಾನು ಮಾತನಾಡುವುದಕ್ಕೆ ಮುಂಚೆ ಹಾಡುವುದನ್ನು, ನಡೆಯುವುದಕ್ಕೆ ಮುಂಚೆ ಓಡುವುದನ್ನು, ಅಗಿಯುವುದಕ್ಕೆ ಮುಂಚೆ ನುಂಗುವುದನ್ನು... ಹಾಗೆಯೇ ಓದುವುದಕ್ಕೆ ಮುಂಚೆಯೇ ಬರೆಯುವುದನ್ನು ಕಲಿತವಳು. ಶುದ್ಧ ಉಲ್ಟಾ

ಗಿರಾಕಿ... ಅದಕ್ಕೇ ಹೀಗೆ! ಆದರೆ, ಏನಾದರೂ ಬರೆಯಬೇಕೆಂದು ಆವಡುಗಚ್ಚಿ ಕೂತಾಗಲೆಲ್ಲ ಎರಡು ರೀತಿಯ ವಿಪರೀತಗಳಾಗುತ್ತಿದ್ದವು. ಮೊದಲನೆಯದು, ನಾನು ಬೇರೇನೋ ಕೆಲಸದಲ್ಲಿ ತೊಡಗಿದ್ದಾಗ ಗರಿಬಿಚ್ಚಿ ಹಾರುತ್ತ, ತೇಲುತ್ತಾ ತೇಲಿಸುತ್ತಾ, ಮೊದಲು ಕೊನೆಯಿಲ್ಲದೆ ವಿಹರಿಸುತ್ತಿದ್ದ ನನ್ನ ಕಲ್ಪನಾಕುದುರೆ ಪೆನ್ನು ಪೇಪರ್ರು ಕಂಡಿದ್ದೇ ಗಕ್ಕೆಂದು ನಿಂತು ಬಿಡುತ್ತಿತ್ತು. ಎರಡನೆಯದು, ಬರೆಯಲು ಹೊರಟಾಗ ನಾನಾಗಲೇ ಬರೆದು ಮುಗಿಸಿ, ಅದನ್ನು ಪುಸ್ತಕವಾಗಿ ಪ್ರಕಟಿಸಿ, ಆ ಪುಸ್ತಕಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ, ಕೇಂದ್ರ ಸಾಹಿತ್ಯ ಅಕಾಡೆಮಿ, ಕಡೆಗೊಂದು ಜ್ಞಾನಪೀಠ... ಹೀಗೆಲ್ಲ ಪ್ರಶಸ್ತಿಗಳು ಬಂದು, ಕಡೆಗೆ ನನ್ನ ಮನೆಗೆ ಬಂದವರನ್ನೆಲ್ಲ ನಾನು ಆ ಪೀಠದ ಮೇಲೇ ಕೂರಿಸಿ, ಕಾಫಿ ಕೊಟ್ಟು, ನಂತರ ಅವರಿಗೆ ಹೀಗೆಲ್ಲ ಲೋಕ ವಿಖ್ಯಾತವಾದ ನನ್ನ ಪುಸ್ತಕದ ಕಾಪಿಯನ್ನೂ ಕೊಟ್ಟು ಕಳಿಸುವವರೆಗೂ ಕನಸು ಕಾಣಲು ಸಾಧ್ಯವಾಗುತ್ತಿತ್ತಾದರೂ ಮುಂದಿಟ್ಟುಕೊಂಡು ಕೂತ ಹಾಳೆಯ ಮೇಲೆ ಒಂದೇ ಒಂದು ಅಕ್ಷರವನ್ನೂ ಮೂಡಿಸಲಾಗುತ್ತಿರಲಿಲ್ಲ. ಬರೆಯಬೇಕೆನ್ನುವ ಆಸೆ ಮಾತ್ರ ದಿನದಿಂದ ದಿನಕ್ಕೆ ಬೆಳೆಯುತ್ತಾ ಬೆಟ್ಟವಾಗುತ್ತಿತ್ತು.

ಹೀಗೆ ಹಾಳೆಯ ಮೇಲೆ ಅಕ್ಷರ ಮೂಡದೆ ಇರುವುದಕ್ಕೆ, ನನ್ನ ಬಾಲ್ಯ ಕಾಲದಲ್ಲಿ ನನ್ನ ಮನಸ್ಸಿನ ಮೇಲೆ ಸಿಕ್ಕಾಪಟ್ಟೆ ಪರಿಣಾಮ ಬೀರಿ, ನನ್ನ ಬರೆಯುವ ಸಾಮರ್ಥ್ಯವನ್ನೇ ಕುಂದಿಸಿಬಿಟ್ಟಿರಬಹುದಾದ ಘಟನೆಯೊಂದು ಕಾರಣವಾಗಿರಬೇಕೆಂದು ನನಗೆ ಅನುಮಾನ ಶುರುವಾಯಿತು. ಮೊದಲು ಈ ಸಮಸ್ಯೆಯ ಹಿಂದಿನ ಕಾರಣ ತಿಳಿದುಕೊಂಡು ನಂತರ ಅದನ್ನು ಪರಿಹರಿಸಿಕೊಂಡಲ್ಲಿ ಬರೆಯುವುದು ಸಾಧ್ಯವಾಗಿಯೇ ತೀರುತ್ತದೆ ಎಂಬ ನಂಬಿಕೆಯಲ್ಲಿ ನಾನು ಮನೋಚಿಕಿತ್ಸಕರೊಬ್ಬರನ್ನು ಭೇಟಿಯಾದೆ. ವಾರಕ್ಕೊಂದರಂತೆ ಒಂದೂವರೆ ವರ್ಷಗಳಷ್ಟು ಕಾಲ ಒಮ್ಮೆಯೂ ಬಿಡದಂತೆ ಪ್ರತಿ ವಾರವೂ ದುಡ್ಡುಕೊಟ್ಟು ಅವರೊಂದಿಗೆ ನಡೆಸಿದ ಆಪ್ತ ಸಮಾಲೋಚನೆಯಲ್ಲಿ ಕಡೆಗೂ ನನ್ನ ಸಮಸ್ಯೆ ಏನೆಂದು ಗೊತ್ತಾಯಿತು. ಮುಂದಿಟ್ಟುಕೊಂಡ ಖಾಲಿ ಹಾಳೆಯನ್ನು ಕಂಡಾಗಲೆಲ್ಲ ಹುಲಿಯನ್ನು ಕಂಡ ಹುಲ್ಲೆಯಂತೆ, ಲಾರಿಯನ್ನು ಕಂಡ ಸ್ಕೂಟರ್‌ನಂತೆ ನನ್ನ ಕೈಕಾಲುಗಳು ಸೆಟೆದುಕೊಳ್ಳುತ್ತಿದ್ದುದಕ್ಕೆ, ಚಿಕ್ಕ ವಯಸ್ಸಿನಲ್ಲಿ ಪರೀಕ್ಷೆಗಳ ಕುರಿತು ನನಗಿದ್ದ ಭಯವೇ ಕಾರಣವಾಗಿತ್ತು. ಟೆಸ್ಟು, ಪರೀಕ್ಷೆಗಳಿಗೆ ಎಂದು ರಾತ್ರಿಯೆಲ್ಲ ನಿದ್ದೆಗೆಟ್ಟು ಓದಿ, ಪ್ರಶ್ನೆ ಪತ್ರಿಕೆಯಲ್ಲಿ ನನಗೆ ಉತ್ತರ ಗೊತ್ತಿದ್ದ ಯಾವ ಪ್ರಶ್ನೆಗಳೂ ಕಾಣಿಸದೆ ಹೋದಾಗ ಕಂಗೆಟ್ಟು ಕೂರುತ್ತಿದ್ದ ದಿನಗಳ ಕರಾಳ ನೆನಪು ನನ್ನನ್ನು ಹೀಗೆ ಬರೆಯಲಾರದವಳನ್ನಾಗಿ ಮಾಡಿತ್ತು.

ಸಮಸ್ಯೆ ಏನೆಂದು ತಿಳಿದ ಮೇಲೆ ಅರ್ಧ ಗೆಲವು ಸಿಕ್ಕಂತೆಯೇ. ಇನ್ನರ್ಧ ಗೆಲುವು ಪಡೆಯಲು ನಾನು ಇನ್ನು ಒಂದೂವರೆ ವರ್ಷಗಳಷ್ಟು ಕಾಲ ಮಾತ್ರ ಆಪ್ತ ಸಮಾಲೋಚನೆಗೆ ದುಡ್ಡು ಕೊಟ್ಟಿದ್ದರೆ ಸಾಕಾಗಿಬಿಡುತ್ತಿತ್ತು. ಆದರೆ ನನಗೆ ಬರುತ್ತಿದ್ದ ಸಂಬಳದ ದುಡ್ಡೆಲ್ಲ ಹೀಗೆ ಯಾರೋ ತಲೆಕೆಟ್ಟವರೊಂದಿಗೆ (ಅಮ್ಮನ ಪ್ರಕಾರ) ಕುಳಿತು ಒಂದೆರಡು ಗಂಟೆ

ಮಾತನಾಡುವುದಕ್ಕೆ ವ್ಯಯಿಸುತ್ತಿದ್ದ ನನ್ನ ವರ್ತನೆ ಚೂರೂ ಚೆನ್ನಾಗಿಲ್ಲವೆಂದೂ ಜೊತೆಗೆ ಹೀಗೆಲ್ಲ ಮನೋಚಿಕಿತ್ಸೆಗೆ ಅಂತ ನಾನು ಅಲೆಯುತ್ತಿದ್ದರೆ ನನ್ನಪ್ಪ ನನಗಾಗಿ ಗಂಡು ಹುಡುಕುತ್ತಾ ಎಷ್ಟು ಅಲೆದರೂ ನನ್ನನ್ನು ಮದುವೆಯಾಗಲು ಗಂಡುಗಳ್ಯಾವುದೂ ಸಿಕ್ಕುವುದಿಲ್ಲವೆಂದೂ ನಮ್ಮಮ್ಮ ಅತ್ತೂ ಕರೆದೂ ರಂಪ ಮಾಡುವುದು ಹೆಚ್ಚಾದ ಮೇಲೆ, ನನ್ನಪ್ಪನೂ 'ನಿನ್ನದ್ಯಾಕೋ ಅತಿಯಾಯಿತು... ಸಮಸ್ಯೆ ಏನೆಂದು ಗೊತ್ತಾಯಿತಲ್ಲ ಅಷ್ಟು ಸಾಕು, ಇನ್ನು ಪರಿಹಾರಕ್ಕೆ ಅಂತ ಅಲ್ಲಿ ಹೋಗಿ ಕೂತು ಮಾತಾಡುವುದೇನಿದೆ? ನಮ್ಮ ಎಲ್ಲ ಸಮಸ್ಯೆಗಳಿಗೂ ಪರಿಹಾರ ನಮ್ಮ ಕೈಯಲ್ಲೇ ಇರುತ್ತೆ' ಎಂದು ತಾವೇ ನಂಬದ ತಮ್ಮ ಸಿದ್ಧಾಂತಗಳನ್ನೆಲ್ಲ ನನಗೆ ಹೇಳಲು ಶುರುಮಾಡಿದರು. ಇವರಿಬ್ಬರೂ ಹೀಗೆ ಬುದ್ಧಿ ಹೇಳಿದ್ದರಿಂದ ಮತ್ತು ನನ್ನ ಆಪ್ತ ಸಮಾಲೋಚನೆಗೆಂದು ನಾನು ಖರ್ಚು ಮಾಡುತ್ತಿದ್ದ ದುಡ್ಡಿನಲ್ಲಿ ತಿಂಗಳಿಗೆ ಇನ್ನೊಂದೆರಡು ಸಿನಿಮಾ ನೋಡಬಹುದಾದ ಸಂಭಾವ್ಯತೆ ಇದ್ದಿದ್ದರಿಂದ ನಾನು ಆಪ್ತ ಸಮಾಲೋಚನೆಗೆ ಹೋಗುವುದನ್ನು ಬಿಟ್ಟಿದ್ದಾಯ್ತು. ಹಾಗಂತ ನನ್ನ ಸಮಸ್ಯೆ ಪರಿಹರಿಸಿಕೊಳ್ಳಲು ನಾನು ಯಾವ ಪ್ರಯತ್ನವನ್ನೂ ಮಾಡಲಿಲ್ಲ ಅಂದುಕೊಳ್ಳಬೇಡಿ.

ನನ್ನ ಅಕ್ಷರಗಳಿಗೆ ಇದ್ದ ಭಯ ಖಾಲಿ ಹಾಳೆಯದ್ದು. ಸರಿ, ಬರೆಯುವುದನ್ನು ಕಾಗದದ ಹಾಳೆಯ ಮೇಲೆಯೇ ಬರೆಯಬೇಕಂತ ಏನಿದೆ? ಕಂಪ್ಯೂಟರ್‌ನಲ್ಲಿ ಬರೆಯಬಹುದಲ್ಲ! ನನ್ನ ಬುದ್ಧಿವಂತಿಕೆಗೆ ನಾನೇ ಹಿಗ್ಗಿ ಇನ್ನು ಮುಂದೆ ಕಂಪ್ಯೂಟರ್‌ನಲ್ಲೇ ಬರೆಯುವುದು ಎಂದು ತೀರ್ಮಾನಿಸಿದೆ. ಇದಕ್ಕಾಗಿ ನಾನು ಮೊದಲಿಗೆ ಕಂಪ್ಯೂಟರ್ ಕ್ಲಾಸಿಗೆ ಸೇರಿ ಕಂಪ್ಯೂಟರ್ ಕುರಿತ ಸಾಮಾನ್ಯ ಜ್ಞಾನದ ಪರಿಚಯ ಮಾಡಿಕೊಳ್ಳಬೇಕಿತ್ತು. ಆಪ್ತಸಮಾಲೋಚನೆಗಿಂತ ಹೆಚ್ಚು ದುಡ್ಡು ಕಂಪ್ಯೂಟರ್ ಕ್ಲಾಸಿಗೆ ಕೊಡಬೇಕಿದ್ದಿದ್ದರಿಂದ ನನ್ನ ಸಿನಿಮಾದ ಕನಸು ಹಾಗೇ ಉಳಿಯಿತು. ನನ್ನಮ್ಮನ ಪ್ರಕಾರ ನಾನು ಆಪ್ತ ಸಮಾಲೋಚನೆಗೆ ಹೋಗುವುದನ್ನು ಬಿಟ್ಟು ಕಂಪ್ಯೂಟರ್ ಕ್ಲಾಸಿಗೆ ಸೇರಿದ ಪರಿಣಾಮ ಮದುವೆ ಮಾರುಕಟ್ಟೆಯಲ್ಲಿ ನನ್ನ ವ್ಯಾಲ್ಯೂ ಒಂದಿಷ್ಟು ಜಾಸ್ತಿಯಾಗಿ ನನಗೊಂದು ಗಂಡೂ ಸಿಕ್ಕಿತು. ಒಟ್ಟಿನಲ್ಲಿ ಇವನಿಗೆ ನಾನೂ ನನಗೆ ಇವನೂ ಸಿಕ್ಕಿ, ನಮ್ಮಿಬ್ಬರ ಅಪ್ಪ-ಅಮ್ಮಂದಿರಿಗೆ ಮದುವೆ ಮಾಡಲಿಕ್ಕೊಂದು ದಿನ, ಛತ್ರ, ಶಾಸ್ತ್ರಿಗಳು, ಅಡಿಗೆಯವರು, ವಾಲಗದವರು... ಇವರೆಲ್ಲ ಸಿಕ್ಕಿ, ನನ್ನ ಮದುವೆಯೂ ಆಗಿ ಹೋಯ್ತು.

ಮದುವೆಯ ನಂತರ ನಾನು ಬೂದುಗುಂಬಳಕಾಯಿ ಮಜ್ಜಿಗೆ ಹುಳಿ, ಹೀರೇಕಾಯಿ ಸಿಪ್ಪೆಯ ಚಟ್ನಿ, ಅದಕ್ಕೆ ಇಂಗು-ಸಾಸಿವೆ ಒಗ್ಗರಣೆ ಇತ್ಯಾದಿ ಇತ್ಯಾದಿಗಳನ್ನೆಲ್ಲ ಕಲಿಯಬೇಕಾದ ಕಾರಣ ಅದುವರೆಗೆ ಅಷ್ಟಿಷ್ಟು ಕಲಿತಿದ್ದ ಕಂಪ್ಯೂಟರ್ರು ಮರೆಯಲು ಶುರುವಾಯಿತು. ಅಂತೂ ಮದುವೆಯಾಗಿ ಹಲವು ವರ್ಷಗಳು ಉರುಳಿದ ಬಳಿಕ, ನಾವಿಬ್ಬರೂ ಅಡುಗೆ ಮಾಡುವುದನ್ನೂ ಜೊತೆಗೆ ಪರಸ್ಪರ ಮಾಡಿದ ಅಡುಗೆಯನ್ನು ಕೊಂಕಿಲ್ಲದೆ ಊಟ ಮಾಡುವುದನ್ನೂ ಕಲಿತು, ಸುಖವಾಗಿ ಸಂಸಾರ ನಡೆಸುತ್ತಿರುವಾಗ, ಮರೆತೇ ಹೋಗಿದ್ದ ನನ್ನ ಬರೆಯಬೇಕೆನ್ನುವ ಕನಸು

ಮತ್ತೆ ನೆನಪಾಗತೊಡಗಿತು. ಮರೆತಿದ್ದ ನನ್ನ ಕಂಪ್ಯೂಟರ್ ಜ್ಞಾನವನ್ನು ಮತ್ತೆ ನೆನಪಿಸಿಕೊಂಡು ಬರಹ, ನುಡಿ ಅಂತಲ್ಲ ಕಂಪ್ಯೂಟರ್ನಲ್ಲಿ ಕನ್ನಡ ಮೂಡಿಸಲು ಬೇಕಾದ ಒಂದೆರಡು ಕನ್ನಡದ ಸಾಫ್ಟ್ವೇರ್‌ಗಳ ಪರಿಚಯ ಮಾಡಿಕೊಂಡು, ಬರಹದ ಪ್ಯಾಡಿನಲ್ಲಿ ನುಡಿಯ ಸೂತ್ರಗಳನ್ನು ಉಪಯೋಗಿಸಿ, ನುಡಿಯಲ್ಲಿ ಬರೆಯುವಾಗ ಬರಹ ಪ್ರಯೋಗಿಸಿ, ನಾನು 'ಬೊಂಬು' ಎಂದು ಬರೆದಾಗ ಅದು 'ಚೊಂಬು' ಆಗುವುದನ್ನೂ 'ಗೊಂಬೆ' 'ಕೊಂಬೆ' ಆಗುವುದನ್ನೂ ಸಾಧಾರಣ 'ನೀರು' ಕೂಡ 'ಬೀರು' ಆಗುವುದನ್ನೂ ಕಂಡು ಹೌಹಾರಿ ಸ್ವಲ್ಪ ದಿನ ಕಂಪ್ಯೂಟರ್ ಕನ್ನಡದಿಂದ ದೂರ ಉಳಿದಿದ್ದಾಯ್ತು. ಬರಹ, ನುಡಿ ಎಂದೆಲ್ಲ ಉತ್ಸಾಹದಲ್ಲಿ ಎರಡೆರಡು ತಂತ್ರಾಂಶಗಳನ್ನು ಕಲಿತಿದ್ದ ನಾನು ಈಗ ಇವೆರಡರಲ್ಲಿ ಒಂದನ್ನು ಸಂಪೂರ್ಣ ಮರೆತು ಇನ್ನೊಂದನ್ನು ಮಾತ್ರ ನೆನಪಿಡುವುದು ಅವಶ್ಯವಾಗಿತ್ತು. ಇದಂತೂ ತೀರ ಕಷ್ಟದ ಕೆಲಸವಾದ್ದರಿಂದ ಕೊನೆಗೆ ಕೆಲವು ವರ್ಷಗಳ ಕಾಲಾವಕಾಶ ತೆಗೆದುಕೊಂಡು, ಮೊದಲು ಎರಡನ್ನೂ ಮರೆತು ನಂತರ ಮತ್ತೆ ಮೊದಲಿಂದ ಪ್ರಾರಂಭಿಸಿ ಕನ್ನಡದ ಒಂದೇ ಒಂದು ತಂತ್ರಾಂಶವನ್ನು ಕಲಿತು ಅದನ್ನೇ ಗಟ್ಟಿಯಾಗಿ ಹಿಡಿದುಕೊಂಡು ಬರೆಯಲು ಕುಳಿತಿದ್ದಾಯ್ತು.

ಕಾಗದದ ಹಾಳೆಯ ಹಾಗಲ್ಲದೆ ನನ್ನ ಕಂಪ್ಯೂಟರ್ ಮಾನಿಟರ್‌ನಲ್ಲಿ ಅಕ್ಷರಗಳೇನೋ ಧಾರಾಳವಾಗಿ ಬರಲು ಮೊದಲಿಟ್ಟವು. ಆದರೆ ನನ್ನ ಕಂಪ್ಯೂಟರ್‌ನಲ್ಲಿ ಮೂಡುತ್ತಿದ್ದ ಬರಹಗಳಿಗೂ ಸಾಹಿತ್ಯಕ್ಕೂ ಯಾವ ಸಂಬಂಧವೂ ಇರಲಿಲ್ಲ. ಮನೆಯ ತಿಂಗಳ ಖರ್ಚು-ವೆಚ್ಚದ ಲಿಸ್ಟು, ನನ್ನಿಷ್ಟದ ಅಡುಗೆ ರೆಸಿಪಿ, ಯಾರ್ಯಾರದ್ದೋ ವಿಳಾಸ, ಅವರ ಹುಟ್ಟಿದ ಹಬ್ಬ, ಅವರ ಜೀವನದ ವಿಶೇಷ ದಿನಗಳು ಮತ್ತು ಅವುಗಳ ವಿವರ... ಹೀಗೆ ಸಾಹಿತ್ಯಿಕವಲ್ಲದ ಆದರೆ ತುಂಬಾ ಉಪಯುಕ್ತವಾದ ಎಲ್ಲಾ ಮಾಹಿತಿಗಳನ್ನೂ ನಾನು ಬರಹದಲ್ಲೇ ಬರೆದು ವರ್ಡ್ ಡಾಕ್ಯುಮೆಂಟಿನಲ್ಲೋ, ಎಕ್ಸೆಲ್ ಶೀಟಿನಲ್ಲೋ ಹಾಕಿ, ನನ್ನ ಕಂಪ್ಯೂಟರ್‌ನ ವರ್ಡ್ ಪ್ರಾಸೆಸರ್‌ನ ತುಂಬ ಕನ್ನಡ ಅಕ್ಷರಗಳಲ್ಲೂ ಅಂಕಿಗಳಲ್ಲೂ ಕಾಣುತ್ತಿದ್ದ ಕಡತಗಳನ್ನು ನೋಡಿ ಪುಳಕಿತಳಾಗುತ್ತಿದ್ದೆ.

ಹೀಗೆ ನನ್ನ ಪಾಡಿಗೆ ನಾನು ಆರಾಮವಾಗಿಯೇ ಇದ್ದ ಕಾಲದಲ್ಲಿ ಇದ್ದಕ್ಕಿದ್ದಂತೆ ನನಗೆ ಸಿಕ್ಕ, ನಾನು ಈ ಬರಹದ ಮೊದಲಲ್ಲಿ ತಿಳಿಸಿದ್ದ ಈ ನೀಲಿ ಕಾಗದದಿಂದ ಮತ್ತೆ ನನ್ನ ಬರೆಯುವ ಕನಸು 'ನಾನಿನ್ನೂ ಇಲ್ಲೇ ಇದ್ದೇನೆ' ಎಂದು ನೆನಪಿಸಿತು. 'ಸಾಹಿತ್ಯ ರಚನೆ ಎನ್ನುವುದು ಹೀಗೆ ಕ್ಲಾಸಿಗೆ ಹೋಗಿ ಕಲಿಯುವ ವಿಷಯವೆ?' ಎಂದು ನೀವೆಲ್ಲ ಮೂಗು ಮುರಿಯಬಲ್ಲವರು ಎಂಬ ಕಾರಣಕ್ಕೇ ನನ್ನ ಮತ್ತು ನಾನು ಸಾಹಿತ್ಯ ರಚನೆಗಾಗಿ ಈ ತನಕ ಪಟ್ಟ ಪಾಡಿನ ಕಥೆಯನ್ನೆಲ್ಲ ನಿಮಗೆ ಹೇಳಬೇಕಾಯಿತು. ಇನ್ನು ಮುಂದೆ ನನ್ನ ಈ ಸಾಹಿತ್ಯ ರಚನೆ ತರಗತಿಗಳ ಕಥೆ...

ಈ ತರಗತಿಗಳಲ್ಲಿ ಮೊಟ್ಟ ಮೊದಲಿಗೆ ನಮಗೆ ಕಲಿಸಿದ್ದು ಗಣಿತ! ಈ ತರಗತಿಗಳಿಗೆ ನಾವು ನೀಡಿದ ಶುಲ್ಕಕ್ಕೂ ನಂತರ ನಾವು ಬರೆದು 'ದೊಡ್ಡ' ಲೇಖಕರಾಗಿ ಪುಸ್ತಕ ಗಿಸ್ತಕ

ಪ್ರಕಟಿಸಿ ಅದು ಮಾರುಕಟ್ಟೆಯಲ್ಲಿ ಬಿಸಿ ಬಿಸಿ ದೋಸೆಯಂತೆ ಖರ್ಚಾಗುವಾಗ ನಮ್ಮ ಪರ್ಸು ತುಂಬಬಹುದಾದ ಅಂಕಿ-ಸಂಖ್ಯೆಗಳ ನಡುವಿಗೂ ಇದ್ದ ಅಂತರವನ್ನು ಬಿಳಿಯ ಬೋರ್ಡಿನ ತುಂಬಾ ಬಣ್ಣ ಬಣ್ಣದ ಫೆಲ್ಟ್ ಮಾರ್ಕರ್ಗಳಲ್ಲಿ ಬರೆದ ದಪ್ಪ ಸಂಖ್ಯೆಗಳು ತೋರಿಸಿದವು. ತುಂಬಾ ತುಂಬಾ ಪ್ರೀತಿಯಿದ್ದರೂ ಹತ್ತಿರ ಬರದೆ ದೂರವೇ ಉಳಿದು ಸತಾಯಿಸುವ ಪ್ರೇಮಿಯ ಹಾಗೆ ನನಗೂ ಗಣಿತಕ್ಕೂ ಸಂಬಂಧವಿರುವ ಕಾರಣ ಇದರ ಬಗ್ಗೆ ನಾನು ಸದ್ಯಕ್ಕೆ ಹೆಚ್ಚು ತಲೆ ಕೆಡಿಸಿಕೊಳ್ಳದೆ ಒಂದು ನಿಟ್ಟುಸಿರು ಬಿಟ್ಟು ಆ ಎಲ್ಲ ಬಣ್ಣಗಳನ್ನೂ ಕಣ್ ತುಂಬಿಸಿಕೊಂಡೆ. ನಂತರ ನಮಗೆ ಯಾವಾಗ ಬರೆಯಬೇಕನ್ನಿಸುತ್ತದೆ ಆವಾಗ ಕೈಗೆ ಸಿಕ್ಕ ಪೆನ್ನು, ಪೇಪರ್ ಹಿಡಿದು ಗೀಚಿಯೋ, ಪುಟ್ಟ ರೆಕಾರ್ಡರ್ನಲ್ಲಿ ರೆಕಾರ್ಡ್ ಮಾಡಿಯೋ ಕಿವಿಯಲ್ಲಿ ಗಾಳಿ ಹೊಕ್ಕ ಕರುವಿನ ಹಾಗೆ ದಿಕ್ಕಾಪಾಲಾಗಿ ಓಡುವ ನಮ್ಮ ಯೋಚನೆ, ಭಾವನೆ, ಕಲ್ಪನೆಗಳಿಗೆ ಮೂಗುದಾರ ಜಡಿದು ಅವುಗಳನ್ನ ಕೊಟ್ಟಿಗೆಯಲ್ಲಿ ಕಟ್ಟಿ ಹಾಕುವ ವಿವಿಧ ಉಪಾಯಗಳನ್ನು ಹೇಳಿಕೊಟ್ಟರು. ನಂತರದ ಮಜಲು ಪತ್ರಿಕೆಗಳಲ್ಲಿ ನಮ್ಮ ಬರಹ ಪ್ರಕಟಿಸುವುದು. ಅದರ ನಂತರದ್ದು ಹಾಗೂ ಕಡೆಯದು, ಪುಸ್ತಕ ಪ್ರಕಟಿಸುವುದು! ಒಟ್ಟಿನಲ್ಲಿ ಈ ಕ್ಲಾಸಿನಲ್ಲಿ ಕಲಿಸಿದ ಎಲ್ಲವನ್ನೂ ಮಾಡಿಯೂ ನಮ್ಮಿಂದ ಪುಸ್ತಕ ಪ್ರಕಟಿಸುವುದು ಸಾಧ್ಯವಾಗದೆ ಹೋದರೆ ಅವರದ್ದೇ ಪ್ರಕಾಶನದಲ್ಲಿ ನಮ್ಮ ಪುಸ್ತಕವನ್ನು ಪ್ರಕಟಿಸುವ ಭರವಸೆ!

ಎಲ್ಲಕ್ಕಿಂತ ಮೊದಲಿಗೆ ನಾನು ನನ್ನ ಕಲ್ಪನಾ ಲಹರಿ ಉಕ್ಕಿ ಹರಿಯುವಾಗೆಲ್ಲ ಅದನ್ನು ಹಾಗೇ ಹರಿದು ಹೋಗಲು ಬಿಡದೆ ತಕ್ಷಣವೇ ಅದನ್ನು ಅಕ್ಷರಗಳಾಗಿಸಿ ಹಿಡಿದಿಡಬೇಕಿತ್ತು. ಸರಿ, ನಮ್ಮ ಮನೆಯಲ್ಲಿ ಸಾರಿಗೆ ಒಗ್ಗರಣೆ ಸೀದು ಹೋಗಿದ್ದು, ನನ್ನ ಮಗನ ಚಡ್ಡಿಯ ಗುಂಡಿಗಳು ಮುಂದಿರಬೇಕಾದದ್ದು ಹಿಂದೆ ಹೋಗಿ ಅವನಿಗೆ ಸೂಸು ಬಂದಾಗ ತೆಗೆಯಲಾರದೆ ಒದ್ದೆ ಮಾಡಿಕೊಂಡು ಅತ್ತಿದ್ದು, ಸ್ಪೀಡ್ ವಯೋಲೇಷನ್‌ಗೆ, ರಾಂಗ್ ಪಾರ್ಕಿಂಗ್‌ಗೆ ಅಂತೆಲ್ಲ ನಾನು ಟಿಕೆಟ್ ಪಡೆದಿದ್ದು ನನ್ನ ಕಲ್ಪನಾ ಲಹರಿಯನ್ನು ಹಿಡಿದಿಡುವ ಈ ಮೊದಲ ಹಂತದಲ್ಲಿದ್ದಾಗಲೇ. ಅಂತೂ ಈ ಮೊದಲ ಹಂತದಲ್ಲಿ ನಾನು ಕೈಗೆ ಸಿಕ್ಕ ಕಾಗದದ ಚೂರುಗಳಲ್ಲಿ (ಕಾಗದದ ದೊಡ್ಡ ಹಾಳೆ ಅಲ್ಲ!) ಬರೆದ ತುಂಡು ತುಂಡು ಪದ್ಯಗಳು, ಕಥೆಯ ಸಾಲುಗಳು, ಪ್ರಬಂಧದ ಸಾಲುಗಳು ಎಲ್ಲವನ್ನೂ ವಿಂಗಡಿಸಿ, ಎಲ್ಲಕ್ಕೂ ಸೀರಿಯಲ್ ಸಂಖ್ಯೆ ಕೊಟ್ಟು ಆದಷ್ಟೂ ಅವುಗಳನ್ನೆಲ್ಲ ಒಂದು ತಲೆ, ನಡು, ಬಾಲ ಎಲ್ಲ ಇರುವ ಆಕಾರಕ್ಕೆ ತಂದು ಕಡೆಗೆ ಎಲ್ಲಕ್ಕೂ ಒಂದೊಂದು ಹೆಸರಿಟ್ಟಿದ್ದೂ ಆಯಿತು. ನಾನೇ ಕೆತ್ತಿದ ಈ ಚಿತ್ರ ವಿಚಿತ್ರ ಶಿಲ್ಪಗಳೆಲ್ಲ ಒಮ್ಮೊಮ್ಮೆ ಕನಸಿನಲ್ಲೂ ಬಂದು ಹೆದರಿಕೆ ಹುಟ್ಟಿಸಿ ಕಾಡತೊಡಗಿದಾಗ ಇನ್ನು ಸುಮ್ಮನಿರಬಾರದೆಂದು ಯೋಚಿಸಿ, ಇವಕ್ಕೆಲ್ಲ ಒಂದು ಗತಿ ಕಾಣಿಸಲು ಮುಂದಿನ ಹಂತವಾದ ಪ್ರಕಟಣೆಯ ಬಗ್ಗೆ ತಲೆ ಕೆಡಿಸಿಕೊಳ್ಳಲಾರಂಭಿಸಿದೆ.

ಈ ಹಂತ ಅತ್ಯಂತ ಕ್ರಿಟಿಕಲ್ ಆದ ಹಂತ. ಗೋಡೆಗೆ ಹೊಡೆದ ಚೆಂಡಿನ ಹಾಗೆ ನಾನು ಪತ್ರಿಕೆಗಳಿಗೆ ಕಳಿಸುತ್ತಿದ್ದ ನನ್ನ ಬರಹಗಳೆಲ್ಲ ಎಲ್ಲೂ ತಪ್ಪಿಸಿಕೊಳ್ಳದೆ ನನ್ನ ಮನೆಯ

ವಿಳಾಸಕ್ಕೇ ನನಗೆ ವಾಪಸ್ ಬರುತ್ತಿದ್ದರೂ 'ಮರಳಿ ಯತ್ನವ ಮಾಡು' ಮಂತ್ರವನ್ನು ಪುನರುಚ್ಚರಿಸುತ್ತಾ ನಾನು ಮತ್ತೆ ಮತ್ತೆ ತೊಟ್ಟ ಬಾಣಗಳನ್ನೇ ತೊಟ್ಟು ಗುರಿಯನ್ನು ಮಾತ್ರ ಬದಲಿಸಿ ಇನ್ನೊಂದು ಪತ್ರಿಕೆಗೆ ಬಿಡುತ್ತಿದ್ದೆ. ಜೊತೆಗೆ ಗುಟ್ಟಾಗಿ ನಾನು ನಂಬಿದ, ನಂಬದ ದೈವಗಳಿಗೆಲ್ಲ ಹರಕೆಯನ್ನೂ ಹೊತ್ತಿದ್ದೆ. ರತ್ನದ ಕಿರೀಟ, ಬೆಳ್ಳಿಯ ಗದೆ, ಮುತ್ತಿನ ಹಾರ ಅಂತೆಲ್ಲ ತನ್ನ ಸಿರಿವಂತ ಭಕ್ತಾದಿಗಳಿಂದ ಕೋಟಿ ಕೋಟಿಗಳಲ್ಲೇ ಹರಕೆ ಸ್ವೀಕರಿಸುವ ದೇವರಿಗೆ ನಾನು ಹೊತ್ತ ತೆಂಗಿನಕಾಯಿ, ಬಾಳೆ ಹಣ್ಣುಗಳ ಯಃಕಶ್ಚಿತ್ ಹರಕೆಯ ಮೇಲೆ ಯಾವ ಆದರವೂ ಮೂಡಲಿಲ್ಲ, ನನ್ನ ಬರಹಗಳ್ಯಾವುವೂ ಪ್ರಕಟವಾಗಲಿಲ್ಲ. ನನ್ನ ಬರಹವೇನಾದರೂ ಕನ್ನಡ ಪತ್ರಿಕೆಯೊಂದರಲ್ಲಿ ಪ್ರಕಟವಾಗಿ, ಆಕಸ್ಮಾತ್ ಅದಕ್ಕೆ ಸಂಭಾವನೆಯ ರೂಪದಲ್ಲಿ ಒಂದಿಷ್ಟು ಹಣವೇನಾದರೂ ಬಂದಲ್ಲಿ ಅದು ಈ ನನ್ನ ತೆಂಗಿನ ಕಾಯಿ-ಬಾಳೆ ಹಣ್ಣಿಗಾಗುವಷ್ಟು ಮಾತ್ರ ಇರುವ ಸಾಧ್ಯತೆ ಇದ್ದಿದ್ದರಿಂದ, ಯಾವ ದೇವರಿಗೂ ಇದಕ್ಕೂ ಹೆಚ್ಚಿನ ಹರಕೆಯ ಮಾತು ಕೊಡಲಾರದೆ ನಾನೂ ಸುಮ್ಮನುಳಿದೆ.

ಕನ್ನಡದ ಯಾವ ಪತ್ರಿಕೆಯೂ ನನ್ನ ಬರಹವನ್ನು ಪ್ರಕಟಿಸುವಷ್ಟು ಪ್ರಬುದ್ಧವಾಗಿಲ್ಲವೆಂದೂ ಮುಂದೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಮರವಾಗಿ ಉಳಿಯುವ 'ನಾನು' ಬರೆದ ಮೊಟ್ಟ ಮೊದಲ ಬರಹವೊಂದನ್ನು ಮೊಟ್ಟ ಮೊದಲಿಗೆ ಪ್ರಕಟಿಸಿದವರು ಎಂದು ಹೆಸರಾಗುವ ಅದೃಷ್ಟ ಇದುವರೆಗೆ ನಾನು ಬರಹ ಕಳಿಸಿದ್ದ ಯಾವ ಪತ್ರಿಕೆಯ ಸಂಪಾದಕರಿಗೂ ಇಲ್ಲವೆಂದೂ ಅಂದುಕೊಳ್ಳುತ್ತಾ ನನ್ನನ್ನು ನಾನೇ ಸಮಾಧಾನಪಡಿಸಿಕೊಂಡೆ. ಇದು ಬರೀ ಬರೆಯುವವರ ಹಣೆಬರಹವಷ್ಟೇ ಅಲ್ಲ ಪ್ರಕಟಿಸುವವರಿಗೂ ಅದೃಷ್ಟವಿರಬೇಕಲ್ಲ! ಒಟ್ಟಿನಲ್ಲಿ ಯಾವ ಯೋಗಾಯೋಗಗಳೂ ಕೂಡದೆ, ನನ್ನ ಯಾವ ಬರಹವೂ ಪ್ರಕಟವಾಗಲಿಲ್ಲ.

ಹೀಗೆ ಪತ್ರಿಕೆಗಳಿಗೆ ಕಳಿಸುವುದನ್ನು ಬಿಟ್ಟು ಇಲ್ಲಿಯವರೆಗೆ ಬರೆದ ನನ್ನ ಬರಹಗಳನ್ನೆಲ್ಲ ನನ್ನದೆ ಒಂದು ಬ್ಲಾಗ್ ಮಾಡಿ ಹಾಕುವುದನ್ನಾದರೂ ಪ್ರಯತ್ನಿಸಬೇಕೆನ್ನಿಸಿತು. ಕಾರಣ, ನನ್ನ ಪರಿಚಿತರಲ್ಲಿ ಕೆಲವರು ಈಗಾಗಲೇ ಹೀಗೆ ತಮ್ಮದೇ ಬ್ಲಾಗುಗಳಲ್ಲಿ ತಮ್ಮ ತಮ್ಮ ಬರಹಗಳನ್ನು ಬರೆದುಕೊಂಡು ದಿನವೂ ತಮ್ಮ ಬ್ಲಾಗಿಗೆ ಬರುವವರ ಸಂಖ್ಯೆಯ ಗುಣಾಕಾರ, ಭಾಗಾಕಾರ ಮಾಡಲು ಒಂದು ಹಿಟ್ ಕೌಂಟಿಂಗನ್ನೂ ಬ್ಲಾಗಿನಲ್ಲಿಟ್ಟು ದಿನವೂ ಆ ಹಿಟ್ಟುಗಳನ್ನೆಣಿಸುತ್ತಾ ಆನಂದವಾಗಿ ಕಾಲ ಕಳೆಯುತ್ತಿದ್ದರು. ಇನ್ನು ಕೆಲವರಂತೂ ತಾವೇ ಸ್ವಂತ ಬರೆದ, ತಮ್ಮದೇ ಸ್ವಂತ ಬ್ಲಾಗಲ್ಲಿ ಪ್ರಕಟವಾದ ಲೇಖನಗಳನ್ನು ತಮ್ಮದೇ ಸ್ವಂತ ದುಡ್ಡಿನಲ್ಲಿ ಪುಸ್ತಕವಾಗಿ ಪ್ರಕಟಿಸಿದ್ದರು. ಇದಾದ ನಂತರ ಯಾವ ಭೇದವನ್ನೂ ಮಾಡದೆ ಸಮಾನವಾಗಿ, ತಮಗೆ ಗೊತ್ತಿರುವವರಿಗೂ ಗೊತ್ತಿಲ್ಲದವರಿಗೂ ಈ ಪುಸ್ತಕವನ್ನು ಕೊಟ್ಟು ತಮ್ಮ ಈ ಸಾಹಿತ್ಯ ಸೇವೆಯಿಂದ ತೃಪ್ತರಾಗುತ್ತಿದ್ದರು.

ಸರಿ, ನಾನೂ ಒಂದು ಬ್ಲಾಗಿನ ಬಾಗಿಲು ತೆರೆಯಬೇಕು ಎಂದುಕೊಳ್ಳುತ್ತಿರುವಾಗಲೆ, ಯಾವುದೋ ವಾರಪತ್ರಿಕೆಯ ಸಂಪಾದಕರಿಂದ ನನಗೆ ಒಂದು ಪತ್ರ ಬಂತು. 'ನಿಮ್ಮ

ಲೇಖನ ಸ್ವೀಕೃತವಾಗಿದೆ, ನಮ್ಮ ಮುಂದಿನ ಸಂಚಿಕೆಯಲ್ಲಿ ನಾವು ಅದನ್ನು ಪ್ರಕಟಿಸುತ್ತಿದ್ದೇವೆ' ಎಂಬ ಈ ಎರಡು ಸಾಲು ನೋಡಿದ್ದೇ ನಾನು ಗಡಬಡಿಸಿ, ಇದ್ಯಾವ ಪತ್ರಿಕೆ, ನಾನು ಇದಕ್ಕೆ ಲೇಖನ ಕಳುಹಿಸಿದ್ದು ಯಾವಾಗ? ಯಾವ ಕುರಿತಾದ ಲೇಖನ? ಇತ್ಯಾದಿ ಇತ್ಯಾದಿ ವಿವರಗಳನ್ನೆಲ್ಲ ನೆನೆನೆನೆದು ಖುಷಿಯಾಗತೊಡಗಿದೆ, ಸುಮ್ಮನಿರಲಾರದೆ ನನ್ನ ಪರಿಚಿತರಿಗೆಲ್ಲಾ ಈ ಕುರಿತು ಹೇಳುತ್ತಾ ಬಂದೆ. ಅಂತೂ ನಾನು ಕಾಯುತ್ತಿದ್ದ ಆ ದಿನ ಕಡೆಗೂ ಬಂದು ಪತ್ರಿಕೆ ನನ್ನ ಕೈಗೆ ಸಿಕ್ಕ ಕೂಡಲೇ ನಾನು ಪಸೆ ಆರಿದ ಬಾಯಿ, ನಡುಗುವ ಕೈ, ಹಾರಿ ಬೀಳುತ್ತಿರುವ ಎದೆ ಎಲ್ಲಕ್ಕೂ ಸಾಂತ್ವನ ಹೇಳುತ್ತಾ ಪರಿವಿಡಿಯಲ್ಲಿ ನನ್ನ ಹೆಸರನ್ನು ನೋಡಿ ಉದ್ವೇಗದಿಂದ ಪತ್ರಿಕೆ ಕೆಳಗೆ ಬೀಳಿಸಿ ಮತ್ತೆ ಮೇಲೆತ್ತಿಕೊಂಡು ಈ ಬಾರಿ ಸರಿಯಾಗಿ ಪುಟ ಸಂಖ್ಯೆ ನೋಡಿ ನನ್ನ ಲೇಖನದ ಪುಟಕ್ಕೆ ಬಂದು ತಲುಪಿದೆ.

ಮೊದಲಿಗೆ ನನ್ನ ಲೇಖನದ ಶೀರ್ಷಿಕೆ ಬದಲಾಗಿತ್ತು. ನಾನು ಕೊಟ್ಟಿದ್ದ ಆ ಶೀರ್ಷಿಕೆಯೇ ನನ್ನ ಬರಹದ ಉದ್ದೇಶ, ವ್ಯಾಪ್ತಿ ಎಲ್ಲವನ್ನೂ ಓದುಗರಿಗೆ ಪರಿಚಯಿಸಿಬಿಡುತ್ತದೆ ಎಂದು ನಾನಿಟ್ಟ ಹೆಸರಿನ ಮೇಲೆ ಒಂದು ರೀತಿಯ ಮೋಹವಿಟ್ಟುಕೊಂಡಿದ್ದ ನನಗೆ ಇದು ಮೊದಲ ಆಘಾತ. ಆ ಸಂಪಾದಕ ಮಹಾಶಯರು ಕೊಟ್ಟಿದ್ದ ಶೀರ್ಷಿಕೆಯಂತೂ ತೀರ ಮೀಡಿಯೋಕರ್ ಆಗಿದೆ, ನನ್ನ ಇಡೀ ಬರಹದ ಇಮೇಜೇ ಇದರಿಂದ ಹಾಳಾಗಿಹೋಗಿದೆ ಎಂದೆಲ್ಲ ಹಾರಾಡತೊಡಗಿದೆ. ನಿನ್ನ ಬರಹದ ಕಥೆ ಏನಾಗಿದೆ ನೋಡು ಎಂದು ಇವನು ಎಚ್ಚರಿಸಿದಾಗ ಮತ್ತೆ ಸಾವರಿಸಿಕೊಂಡು ನನ್ನ ಬರಹದ ಮೇಲೆ ಕಣ್ಣಾಡಿಸಿದೆ. ನೂರು ಸಾಲುಗಳಲ್ಲಿ ನಾನು ಬರೆದಿದ್ದ ಬರಹ ಆರೇ ಸಾಲಿಗೆ ಇಳಿದಿತ್ತು. ಆ ಆರು ಸಾಲಿಗೂ ಯಾರೋ ಅಜ್ಞಾತ ಕಲಾವಿದನೊಬ್ಬ ಬರೆದ ನನಗರ್ಥವೇ ಆಗದ ಆರು ಅಮೂರ್ತ ಚಿತ್ರಗಳಿದ್ದವು. ವಿಧ ವಿಧ ಅಳತೆಗಳಲ್ಲೂ ವಿನ್ಯಾಸಗಳಲ್ಲೂ ಕಂಗೊಳಿಸುತ್ತಾ ಮೂರು ಪುಟಗಳನ್ನು ಅಲಂಕರಿಸಿದ್ದ ಆ ಆರೂ ಚಿತ್ರಗಳ ಕೆಳಗಿನ ಅಡಿ ಬರಹವಾಗಿ ನನ್ನ ಆರು ಸಾಲುಗಳು ಕಿತ್ತು ಎಸೆದ ಕೋಳಿಪುಕ್ಕಗಳ ಹಾಗೆ ಬಿದ್ದಿದ್ದವು. ಆ ಚಿತ್ರಗಳಿಗೂ ಅದರ ಕೆಳಗಿದ್ದ ನನ್ನ ಸಾಲುಗಳಿಗೂ ಯಾವ ಸಂಬಂಧವಿದೆ ತಿಳಿಯದೆ ತಬ್ಬಿಬ್ಬಾಗುತ್ತಾ ಎಲ್ಲೋ ಏನೋ ತಪ್ಪಾಗಿದೆ ಅಂದುಕೊಳ್ಳುತ್ತಾ ಪುಟ ತಿರುಗಿಸಿದಾಗ ಆ ಉದಯೋನ್ಮುಖ ಕಲಾವಿದನ ಪರಿಚಯ, ಅಪರೂಪದ ಅವನ ಕೃತಿಗಳನ್ನು ಕುರಿತಂತೆ ಕಲಾವಿಮರ್ಶಕರಿಂದ ಬಂದಿರುವ ಅಭಿಪ್ರಾಯಗಳು, ಅವನಿಗೆ ಸಿಕ್ಕಿರುವ(!) ಪ್ರಶಸ್ತಿಗಳು ಕೊನೆಗೆ ಮುಂದಿನ ತಿಂಗಳು ಬೆಂಗಳೂರಿನ ಇಂತಲ್ಲಿ ನಡೆಯಲಿರುವ ಅವನ ಕಲಾಕೃತಿಗಳ ಪ್ರದರ್ಶನ ಇದೆಲ್ಲದರ ಕುರಿತು ಒಂದು ಲೇಖನವಿತ್ತು. 'ಉದಯೋನ್ಮುಖ ಬರಹಗಾರ್ತಿಯಾದ ...ಇವರ ಸಾಲುಗಳು ಈ ಕಲಾವಿದನ ಈ ಅಪರೂಪದ ಚಿತ್ರಗಳ ಒಳಾರ್ಥವನ್ನು ಅನನ್ಯ ಬಗೆಯಲ್ಲಿ ಬಿಡಿಸಿ ತೋರಿಸುತ್ತಿವೆ' ಎಂದೂ ಕಡೆಯ ಸಾಲಿನಲ್ಲಿ ಬರೆದಿದ್ದರು. 'ಉದಯೋನ್ಮುಖ ಬರಹಗಾರ್ತಿ' ಎಂದು ನನ್ನ ಹೆಸರಿನ ಹಿಂದೆ ಸಂಪಾದಕರು ಹಚ್ಚಿರುವ ವಿಶೇಷಣ ಅಳುವ ಮಕ್ಕಳಿಗೆ ಕೊಡುವ ಲಾಲಿಪಪ್‌ನ ಹಾಗೆ ಕಾಣಿಸಿ ನನ್ನ ಸಿಟ್ಟು ಇನ್ನೂ ಹೆಚ್ಚಾಯ್ತು.

ಈ ಇಡೀ ಲೇಖನ ತಮ್ಮ ಕಡೆಯವರ್ಯಾರೋ ಆಗಿರುವ ಈ ಕಲಾವಿದನನ್ನು ಸುಮ್ಮ ಸುಮ್ಮನೆ ಅಟ್ಟಕ್ಕೇರಿಸಲು ರೂಪಿಸಿದ ಸಂಚಿನ ಹಾಗೆ ಕಾಣಿಸಿ, ಅರಿವಿಲ್ಲದೆ ಜೇಡರ ಬಲೆಗೆ ಬಂದು ಬಿದ್ದ ನೊಣದ ಗತಿ ನನಗೆ ಬಂದಂತಾಗಿ ನನ್ನ ಮೇಲೇ ನನಗೆ ಪಾಪ ಅನ್ನಿಸಲಾರಂಭಿಸಿತು. ಮತ್ತೆ ಭಗೀರಥ ಪ್ರಯತ್ನ ಮಾಡಿ ಆ ಸಂಪಾದಕರನ್ನು ಫೋನ್‌ನಲ್ಲಿ ಹಿಡಿದು ಹೀಗ್ಯಾಕೆ ಮಾಡಿದಿರೆಂದು ಕೇಳಿದಾಗ, ನನ್ನ ಆರು ಸಾಲುಗಳನ್ನಾದರೂ ಪ್ರಕಟಿಸಿ ನನಗೆ ಬರಹ ಲೋಕಕ್ಕೆ ಹೀಗೊಂದು ಪ್ರವೇಶ ಒದಗಿಸಿಕೊಟ್ಟಿದ್ದನ್ನು ಅವರು ಮತ್ತೆ ಮತ್ತೆ ಹಲವಾರು ಬಗೆಯಲ್ಲಿ ನೆನಪಿಸಿದರು. ಪತ್ರಿಕೆಯ ಸಂಪಾದಕರಾಗಿ ಓದುಗರ ನಾಡಿ ಮಿಡಿತವನ್ನು ಅರಿಯಬಲ್ಲ ತಮ್ಮ ಸಾಮರ್ಥ್ಯವನ್ನು ಕೊಚ್ಚಿಕೊಳ್ಳುತ್ತಾ, ತಮ್ಮ ಪತ್ರಿಕೆಯ ಪುಟಗಳ ಮಿತಿಯಲ್ಲಿ ಲೇಖನಗಳನ್ನು ಹಿಗ್ಗಿಸಿ ಕುಗ್ಗಿಸಿ ಪ್ರಕಟಿಸಬೇಕಾದ ತಮ್ಮ ಅನಿವಾರ್ಯಗಳನ್ನು ಹೇಳಿಕೊಂಡರು. ಯಾವುದಕ್ಕೂ ಸೊಪ್ಪು ಹಾಕದ ನನಗೆ, 'ಬಂದ ಲೇಖನಗಳನ್ನೆಲ್ಲ ಬಂದ ಹಾಗೇ ಪ್ರಕಟಿಸಿದರೆ ಸಂಪಾದಕನಾಗಿ ನನ್ನ ಕೆಲಸವೇನು?' ಎಂಬ ಪ್ರಶ್ನೆ ಎಸೆದರು. ಕೊನೆಗೆ ಬರೆಯುವುದನ್ನು ಬಿಡಬಾರದೆಂದು ಬುದ್ಧಿ ಹೇಳಿದರು. ಇದಾದ ಬಳಿಕ ಬೇರೆ ಯಾವುದೇ ಪತ್ರಿಕೆಗೂ ಮತ್ತೆ ನನ್ನ ಬರಹಗಳನ್ನು ಕಳಿಸಲು ನನಗೆ ಧೈರ್ಯವಾಗಲಿಲ್ಲ.

ಇನ್ನು ಉಳಿದಿದ್ದ ಒಂದೇ ದಾರಿಯೆಂದರೆ ಪತ್ರಿಕೆಗೋ ಇನ್ನೆಲ್ಲಿಗೋ ಬರಹಗಳನ್ನು ಕಳುಹಿಸದೆ ನೇರ ಒಂದು ಪುಸ್ತಕವನ್ನೇ ಪ್ರಕಟಿಸಿಬಿಡುವುದು. ಹತ್ತಾದರೂ ಬರಹಗಳು ಪತ್ರಿಕೆಗಳಲ್ಲೋ ಅಂತರ್ಜಾಲದ ಪೋರ್ಟಲ್‌ಗಳಲ್ಲೋ ಪ್ರಕಟವಾದಲ್ಲಿ ಮಾತ್ರ ತಾವು ಕೊಟ್ಟ ಭರವಸೆಯಂತೆ ತಮ್ಮದೇ ಪ್ರಕಾಶನದಲ್ಲಿ ಪುಸ್ತಕ ಪ್ರಕಟಿಸುವ ಷರತ್ತು ಈ ಬರಹ ಕಲಿಕಾ ತರಗತಿಗಳವರು ವಿಧಿಸಿದ್ದಾದ್ದರಿಂದ ಪುಸ್ತಕ, ಗಿಸ್ತಕ ಎಂದು ಅವರನ್ನು ನಾನು ಕೇಳುವ ಹಾಗಿರಲಿಲ್ಲ. ಇನ್ನು ಕನ್ನಡದ ಹೆಸರಾಂತ ಪ್ರಕಾಶನಗಳನ್ನು, ಪುಸ್ತಕ ಪ್ರಕಾಶಕರು ಎಂಬ ಹೆಸರಿಗೇ ಘನತೆ ತರುವಂತಿರುವ ಕೆಲವು ಪ್ರಕಾಶಕರನ್ನೂ ಸಾಹಿತ್ಯ ಲೋಕದಲ್ಲಿ ಸರಿಯಾಗಿ ಇನ್ನೂ ಹೆಜ್ಜೆಯನ್ನೇ ಇಟ್ಟಿಲ್ಲದ ನಾನು ಸದ್ಯಕ್ಕೆ ಸಮೀಪಿಸುವ ಧೈರ್ಯವಾಗಲಿಲ್ಲ. ಆದರೆ ಇವೆಲ್ಲಕ್ಕೂ ಸಂಬಂಧವಿಲ್ಲದ ಇನ್ನೊಂದು ಬಗೆಯ ಪುಸ್ತಕ ವ್ಯಾಪಾರವನ್ನು ಸ್ವಲ್ಪ ಕುತೂಹಲದಲ್ಲಿ ಗಮನಿಸತೊಡಗಿದೆ. ಎಲ್ಲೂ ಏನೂ ಬರೆಯದೆ, ಅಥವಾ ಹೆಸರಿಗಷ್ಟೇ ಒಂದೋ ಎರಡೋ ಕಥೆಯನ್ನೋ ಕವನವನ್ನೋ ಬರೆದವರು ಇದ್ದಕ್ಕಿದ್ದಂತೆ ತಮ್ಮ ಸಂಕಲನಗಳನ್ನೇ ಪ್ರಕಟಿಸಿ, ಆ ಪುಸ್ತಕಗಳ ಬಿಡುಗಡೆಯ ಕಾರ್ಯಕ್ರಮಗಳನ್ನೂ ಏರ್ಪಡಿಸಿ, ಅದಕ್ಕೆ ಧಾರಾಳ ಪ್ರೆಸ್ ಕವರೇಜನ್ನೂ ಒದಗಿಸುವ ಪವಾಡಗಳನ್ನು ನಾನು ಕಣ್ಣು ಕಣ್ಣು ಬಿಟ್ಟುಕೊಂಡು ನೋಡುತ್ತಿದ್ದೆ. ಈ ಕಣ್ಕಟ್ಟಿನ ಹಿಂದಿನ ಗುಟ್ಟುಗಳನ್ನು ಬಲ್ಲವರಿಂದ ಅಷ್ಟೋ ಇಷ್ಟೋ ತಿಳಿದ ಮೇಲೆ ಈ ಬರೆಯುವ ಆಸೆಯೋ ಅಹಂಕಾರವೋ ಏನೆಲ್ಲ ಅನಾಹುತಗಳಿಗೆ ಕಾರಣವಾಗಬಲ್ಲದು ಎಂದು ತಿಳಿದು ಗಾಬರಿಯಾಯಿತು. ಇಂಥಾ ಈ ಪುಸ್ತಕ ಪ್ರಕಟಣೆಗಳ ಹಿಂದಿನ ಸಂಚುಗಳೂ ಆ ಸಂಚುಗಳನ್ನು ರೂಪಿಸುವುದನ್ನೇ ಕಸುಬಾಗಿಸಿಕೊಂಡ ಒಂದಿಷ್ಟು ಪ್ರಕಾಶಕರೂ, ಪುಸ್ತಕವೊಂದನ್ನು ಹೊರತರಲೇಬೇಕೆಂಬ ಆಸೆಯೋ, ಅಮಲೋ, ಧಾರ್ಷ್ಟ್ಯವೋ,

ಪೆದ್ದುತನವೋ ಇರುವ ಬರಹಗಾರರೂ ಇವರೆಲ್ಲ ಸೇರಿ ಕನ್ನಡ ಪುಸ್ತಕ ಲೋಕದಲ್ಲಿ ಮಾಡುತ್ತಿರುವ ಅಕ್ಷರ ಮಾಲಿನ್ಯವೂ ಗೋಚರಿಸತೊಡಗಿತು. ಪುಸ್ತಕ ಪ್ರಕಟಿಸಲು ಸರ್ಕಾರದಿಂದ ಸಿಗುವ ಸಬ್ಸಿಡಿ ದುಡ್ಡು, ಹೇಗಾದರೂ ತನ್ನನ್ನು ಸಾಹಿತಿಯೆಂದು ಬಲ್ಲವರು ಗುರುತಿಸಬೇಕೆಂಬ ಹಟದಲ್ಲಿರುವ ಬರಹಗಾರರು ತಾವೇ ತಮ್ಮ ಪುಸ್ತಕದ ಪ್ರಕಟಣೆಗೆ- ಬಿಡುಗಡೆಗೆ ಅಂತೆಲ್ಲ ಕೊಡುವ ದುಡ್ಡು, ಪ್ರಕಟವಾದ ಪುಸ್ತಕಗಳನ್ನು ಯಾವ್ಯಾವುದೋ ಯೋಜನೆ, ಸವಲತ್ತು ಇವುಗಳಡಿಯಲ್ಲಿ ಲೈಬ್ರರಿಗಳಿಗೋ ಪುಸ್ತಕಮೇಳಗಳಿಗೋ ತಳ್ಳಿ ಕೈತೊಳೆದುಕೊಳ್ಳುತ್ತಲೇ ಗಂಟು ಮಾಡುವ ಪ್ರಕಾಶಕರೆಂಬ ಹೆಸರಿನ ಈ ಪವಾಡ ಪುರುಷರು... ಇವರೆಲ್ಲರ ವ್ಯವಹಾರದ ಕಥೆಗಳನ್ನು ಕೇಳಿ ಬೆಚ್ಚಿ ಅದೊಂದು ತರಹದ ಶೂನ್ಯ ಕವಿದು ಮತ್ತೆ ಏನನ್ನೂ ಬರೆಯುವುದು ಸಾಧ್ಯವಾಗಲಿಲ್ಲ.

ಇದರಿಂದ ನನಗಂತೂ ಒಳ್ಳೆಯದೇ ಆಯಿತು. ಇದುವರೆಗೂ ಬರೆಯಲು, ಬರೆದದ್ದನ್ನು ಪ್ರಕಟಿಸಲು ಹೀಗೆಲ್ಲ ಸರ್ಕಸ್ ಮಾಡುತ್ತಾ ಉಳಿದಿದ್ದ ನಾನು ಈವರೆಗೆ ಓದದೇ ಉಳಿದಿದ್ದ ಎಷ್ಟೊಂದು ಪುಸ್ತಕಗಳು ಸಾಲುಗಟ್ಟಿ ನಿಂತಿದ್ದವು. ಹತ್ತೋ ಇಪ್ಪತ್ತೋ ವರುಷಗಳ ಹಿಂದೆ ಓದಿದ್ದ ಪುಸ್ತಕಗಳನ್ನು ಈಗ ಇನ್ನೊಮ್ಮೆ ಓದಬೇಕೆನ್ನಿಸತೊಡಗಿತು. ಓದುತ್ತ ಹೋದಂತೆ ನಾನು ಮೆಚ್ಚಿಕೊಂಡ ಲೇಖಕರ ಜೀವನಾನುಭವಗಳು, ಅವರದನ್ನು ಅಕ್ಷರವಾಗಿಸಿರುವ ಬಗೆ, ಈ ಓದಿನ ಮೂಲಕವೇ ತೆರೆದುಕೊಳ್ಳತೊಡಗಿದ ನನ್ನ ಒಳ-ಹೊರ ಲೋಕಗಳ ನೋಟಗಳು ಹೊಸ ಬಗೆಯಲ್ಲಿ ಗೋಚರಿಸತೊಡಗಿದವು. ನಂಬದ, ನಂಬಿದ ಅಕ್ಷರಗಳೂ, ನನ್ನ ಇದುವರೆಗಿನ ನೋಟಕ್ಕೆ ಅವು ಒದಗಿಸಿದ ಕಾಣ್ಕೆಗಳೂ ಮತ್ತೆ ಹೊಳೆಯತೊಡಗಿದವು. ಅದರೊಂದಿಗೇ ನನ್ನ ಮುಂದಿನ ಬರಹಕ್ಕೆ ಒಂದು ವಸ್ತುವೂ ಅದಕ್ಕೊಂದು ಶೀರ್ಷಿಕೆಯೂ ಗೋಚರಿಸಿತು. 'ನಾನೇಕೆ ಬರೆಯಬೇಕು' ಎಂಬ ಹೆಸರಿನಲ್ಲಿ ನಾನು ಬರೆಯಬಹುದಾದ ಲೇಖನದಲ್ಲಿ ನಾನು ಅಥವಾ ಯಾರೂ ಯಾಕೆ ತಾನೆ ಬರೆಯಬೇಕು? ಎಂಬ ಪ್ರಶ್ನೆ ಕೇಳಿಕೊಳ್ಳುತ್ತಾ ಅದಕ್ಕೆ ಅತ್ಯಂತ ಪ್ರಾಮಾಣಿಕ ಉತ್ತರವನ್ನು ಹುಡುಕಿಕೊಳ್ಳುವುದು. ಆದರೆ, ಇದುವರೆಗೂ ಅದ್ಯಾಕೋ ಈ ಬರಹವನ್ನು ಬರೆಯಲು ಶುರು ಮಾಡುವುದಕ್ಕೇ ಸಾಧ್ಯವಾಗಿಲ್ಲ. ಓದುತ್ತಾ ಹೋದಷ್ಟೂ ಈ ಬರೆಯುವ ಹಂಬಲವೋ ವ್ಯಸನವೋ ಕಡಿಮೆಯಾಗುತ್ತಲೇ ಉಳಿದಿದೆ. ಇದು ಬರೆಯುವ ನನ್ನನ್ನೂ ಹಾಗೆ ಬರೆದಿದ್ದನ್ನು ಅಪ್ಪಿತಪ್ಪಿ ಓದಬಹುದಾದ ನಿಮ್ಮನ್ನೂ ಕಾಪಾಡಿದೆ ಎಂದೇ ನಾನು ತಿಳಿದಿದ್ದೇನೆ.

ಆದರೆ, ನಿಮ್ಮಲ್ಲಿ ಯಾರಾದರೂ ಉದಯೋನ್ಮುಖ ಬರಹಗಾರರಿದ್ದಲ್ಲಿ ದಯಮಾಡಿ ನನ್ನ ಈ ಸದರಿ ಲೇಖನವನ್ನು ಓದಬಾರದೆಂದು ವಿನಂತಿಸಿಕೊಳ್ಳುತ್ತೇನೆ. ನಾನು ಬರೆದ ಈ ಲೇಖನ ನಿಮ್ಮ ಬರವಣಿಗೆಯ ಮೇಲೆ ಪರಿಣಾಮ ಬೀರಿ ನಿಮಗೂ 'ನಾನ್ಯಾಕೆ ಬರೆಯಬೇಕು?' ಅನ್ನಿಸಿ ಬರೆಯುವ ವಿಷಯದಲ್ಲಿ ವೈರಾಗ್ಯ ಬಂದಲ್ಲಿ ಅದಕ್ಕೆ ನಾನು ಹೊಣೆಯಾಗುವುದಿಲ್ಲವೆಂದು ಈಗಲೇ ಹೇಳಿಬಿಡುತ್ತೇನೆ.

●

ಅಜ್ಜಯ್ಯನೊಡನೆ ಒಂದು ಸಂಜೆ

–ವಿಮಲ ರಾಜಗೋಪಾಲ್

ಭಾರತದ ಸ್ವಾತಂತ್ರ್ಯಪೂರ್ವದ ಆ ದಿನಗಳಲ್ಲಿ ಮನೆಯಲ್ಲಿ ನಾವು ಮಕ್ಕಳು ತೀರಾ ಎಳೆಯರು. ಸ್ವಾತಂತ್ರ್ಯ ಚಳವಳಿ, ಸತ್ಯಾಗ್ರಹ, ಗಾಂಧಿ-ನೆಹ್ರೂ ಈ ವಿಚಾರಗಳ ಬಗ್ಗೆ ಅಜ್ಜಯ್ಯ, ಅಣ್ಣ ಇವರುಗಳ ಮಧ್ಯೆ ಅನೇಕ ಬಾರಿ ಚರ್ಚೆಗಳು ನಡೆಯುತ್ತಿದ್ದವು. ಅವರ ಈ ಚರ್ಚೆಗಳು ನಮಗೆ ಎಂದಿಗೂ ಬಗೆಹರಿಯದ ಉಗ್ರ ವಾಗ್ಯುದ್ಧಗಳಂತೆಯೇ ಕೇಳುತ್ತಿದ್ದವು. ಅವರಿಬ್ಬರ ಈ ವಾಗ್ವಾದದ ಮಧ್ಯದಲ್ಲಿ ಅಣ್ಣ (ನಮ್ಮ ತಂದೆ ಶ್ರೀ ಎಲ್. ಗುಂಡಪ್ಪನವರು) ಸಹನೆಯಿಂದ, 'ನಿಂಗಣ್ಣೀ (ತಮ್ಮ ತಂದೆ ಲಿಂಗಣ್ಣಯ್ಯನವರನ್ನು ನಮ್ಮ ತಂದೆ ನಿಂಗಣ್ಣೀ ಎಂದೇ ಕರೆಯುತ್ತಿದ್ದುದು), ಅದು ಹಾಗಲ್ಲ ನೋಡು...' ಎಂದು ಪ್ರಾರಂಭಿಸಿ ತಮ್ಮ ತಂದೆಗೆ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಾಂಧಿ, ನೆಹ್ರೂ ಮುಂತಾದ ದೇಶನಾಯಕರು ಮಾಡುತ್ತಿದ್ದ ಕೆಲಸಗಳನ್ನು ಸಾವಧಾನವಾಗಿ ವಿವರವಾಗಿ ಬಣ್ಣಿಸಿ ಹೇಳುತ್ತಿದ್ದರು.

ಅಜ್ಜಯ್ಯನ ಪಾಲಿಗೆ ಸ್ವಾತಂತ್ರ್ಯ ಸಂಗ್ರಾಮ, ಇಂಡಿಯಕ್ಕೆ ಸ್ವಾತಂತ್ರ್ಯ ಬರುವ ವಿಚಾರ, ಈ ದಿಕ್ಕಿನಲ್ಲಿ ಗಾಂಧಿ-ನೆಹ್ರೂ ಮುಂತಾದವರು ನಡೆಸುತ್ತಿದ್ದ ಹೋರಾಟ - ಇವೆಲ್ಲ ಅತ್ಯಂತ

ವಿವಾದಾಸ್ಪದ ವಿಚಾರಗಳಾಗಿದ್ದವು. ಚಿಕ್ಕವರಿಗೂ ಅರ್ಥವಾಗುವಂತಿದ್ದ ಈ ವಿಚಾರಗಳು ಈ ಅಜ್ಜಯ್ಯನಿಗೇಕೆ ಅರ್ಥವಾಗುತ್ತಿಲ್ಲ ಎಂದು ನಮಗೆಲ್ಲಾ ತುಂಬಾ ಆಶ್ಚರ್ಯವಾಗುತ್ತಿತ್ತು.

ಆದರೆ, ಈಗ ಅದನ್ನು ನೆನೆಸಿಕೊಂಡರೆ ಬೇರೊಂದು ವಿಚಾರ ಮನವರಿಕೆಯಾಗುತ್ತದೆ. ಅಜ್ಜಯ್ಯ ಹುಟ್ಟಿದ್ದು ೧೮೫೭ ಅಥವಾ ೧೮೫೮ರ ಸುಮಾರಿನಲ್ಲಿ. ಸಿಪಾಯಿ ದಂಗೆಯ ಕಾರಣವಾಗಿ ಬ್ರಿಟಿಷರ ಅಮಾನುಷ ದೌರ್ಜನ್ಯ ಕ್ರೌರ್ಯಗಳಿಗೊಳಗಾದ ಅಸಂಖ್ಯಾತ ಜನಸಾಮಾನ್ಯರ ದಾರುಣ ಕಥೆಗಳನ್ನು ಕೇಳಿ ಕೇಳಿ ಆಂಗ್ಲ ಸರ್ಕಾರದ ಬಗ್ಗೆ ಅತೀವ ಭಯ, ಆತಂಕಗಳನ್ನು ತಮ್ಮ ಜೀವನದ ಉದ್ದಕ್ಕೂ ಅಜ್ಜಯ್ಯ ಬೆಳೆಸಿಕೊಂಡಿದ್ದರು. ಅದು ಆಗಿನ ಕಾಲಕ್ಕೆ ಅತಿ ಸಹಜವೇ ಆಗಿತ್ತು ಎಂದು ಈಗ ಅನಿಸುತ್ತದೆ.

ಪಕ್ಕಾ ಗಾಂಧಿಭಕ್ತರೂ ದೇಶಪ್ರೇಮಿಗಳೂ, ಭಾರತದ ಚರಿತ್ರೆಯ ಆಳವಾದ ಜ್ಞಾನವುಳ್ಳವರೂ ಆಗಿದ್ದ ಅಣ್ಣ ಸಮಯ ಸಿಕ್ಕಾಗಲೆಲ್ಲ ದೇಶನಾಯಕರು ಕೈಗೊಂಡಿರುವ ಅಹಿಂಸಾ ಚಳುವಳಿ, ಸಾಮೂಹಿಕ ಸತ್ಯಾಗ್ರಹಗಳ ಬಗ್ಗೆ ಅನೇಕ ಘಟನೆಗಳನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾ ಅಜ್ಜಯ್ಯನ ಮನವೊಲಿಸಲು ಶತಪ್ರಯತ್ನ ಮಾಡುತ್ತಿದ್ದರು. ಕೇಳುವಷ್ಟು ಕೇಳಿ ಅಜ್ಜಯ್ಯ ಅಣ್ಣನ ಗಾಂಧೀಪರ ವಾದಗಳೆಲ್ಲವನ್ನೂ ಪೂರ್ತಿ ಕೆಳಗುರುಳಿಸುವ ಕಟ್ಟಕಡೆಯ ಅಸ್ತ್ರವೆಂಬಂತೆ ಭಾರಿ ಸವಾಲೆಸೆಯುತ್ತಿದ್ದರು: 'ಓಹೊ, ಹಾಗಾದರೆ ಈ ಗಾಂಧಿ ನೆಹರೂ ಅವರುಗಳು ಟಂಕಸಾಲೆ ಹಿಡಿಯಬಲ್ಲರೋ?' ಅಣ್ಣ ನಕ್ಕು, 'ಟಂಕಸಾಲೆ ಒಂದೇ ಏನು, ನಿಂಗಣ್ಣೋ, ಇಡೀ ಭಾರತ ಸ್ವತಂತ್ರವಾಗಿ ಸರ್ಕಾರ ಪೂರ್ತಿ ನಮ್ಮದಾಗುತ್ತೆ. ಬ್ರಿಟಿಷರು ಸಂಪೂರ್ಣವಾಗಿ ಇಲ್ಲಿಂದ ಕಾಲುಕೀಳದೆ ವಿಧಿಯಿಲ್ಲ, ತಿಳುಕೋ' ಎನ್ನುತ್ತಿದ್ದರು. ಅಜ್ಜಯ್ಯ ಬ್ರಿಟಿಷರ ವಿರುದ್ಧ ಏನೂ ಹೇಳದೆ ಸುಮ್ಮನೆ ಮೌನ ವಹಿಸಿ ತಲೆ ಅಲ್ಲಾಡಿಸುತ್ತಿದ್ದರು. ಈ ವಾಗ್ವಾದ, ಚರ್ಚೆ ಬಹಳ ಕಾಲ ನಡೆಯುತ್ತಲೇ ಬಂತು...

*

ಕಾಲ ಸರಿಯಿತು. ಈ ಮಧ್ಯೆ ದೇಶಕ್ಕೆ ಸ್ವಾತಂತ್ರ್ಯ ಬಂದು ನಾಡಿನಾದ್ಯಂತ ಜನರ ನರನಾಡಿಗಳಲ್ಲಿ ಸ್ವಾತಂತ್ರ್ಯದ ಹಿಗ್ಗಿನ ಹೊನಲು ಹರಿಯುತ್ತಿತ್ತು. ೧೯೫೦-೫೧ರ ಇಸವಿ ಇರಬೇಕು. ಆಗ ಅಜ್ಜಯ್ಯನಿಗೆ ಸುಮಾರು ೯೩ ವರ್ಷದ ತುಂಬು ವಯಸ್ಸು. ಮತಿಘಟ್ಟದಿಂದ ಬೆಂಗಳೂರಲ್ಲಿದ್ದ ನಮ್ಮ ಮನೆಗೆ ಬಂದಿದ್ದರು. ಒಂದು ದಿನ ಅಜ್ಜಯ್ಯ ಮೆಲ್ಲನೆ ನನ್ನನ್ನು ಹತ್ತಿರಕ್ಕೆ ಕರೆದರು. 'ಏನಜ್ಜಯ್ಯ?' ಅಂದೆ. ಅವರ ಮಾಮೂಲು ಅಭ್ಯಾಸದಂತೆ ಅಂದಿನ ದಿನಪತ್ರಿಕೆ ಓದಿದ್ದರು. ಸೆಂಟ್ರಲ್ ಕಾಲೇಜ್ ಕ್ರಿಕೆಟ್ ಮೈದಾನದಲ್ಲಿ ನೆಹ್ರೂ ಬಂದು ಸಾರ್ವಜನಿಕ ಭಾಷಣ ಮಾಡಲಿರುವರೆಂಬ ಸುದ್ದಿ ಅಂದಿನ ಪತ್ರಿಕೆಯಲ್ಲಿ ಪ್ರಮುಖವಾಗಿ ಪ್ರಕಟವಾಗಿತ್ತು. ಅಜ್ಜಯ್ಯ ಮೆಲ್ಲನೆ ನುಡಿದರು: 'ಮನೆಯಲ್ಲಿ ಎಲ್ಲರೊಡನೆ ಪಂಚಾಯ್ತಿ ಮಾಡಬೇಡ. ನೆಹ್ರೂ ಬರುತ್ತಾರೆಂದು ಪೇಪರಲ್ಲಿ ಬರೆದಿದೆ. ಅವರನ್ನು ನೋಡಲು ನನ್ನನ್ನು

ಕರಕೊಂಡು ಹೋಗುತ್ತೀಯಾ? ಹೆಚ್ಚು ಗಲಾಟೆ ಬೇಡ ಈ ವಿಚಾರ, ಆ?' ನನಗೆ ಪರಮಾನಂದ. ನೆಹ್ರೂ ನೋಡಲು ನಾವು ಮಕ್ಕಳು ಹೋಗುವುದೆಂದು ಆಗಲೇ ತೀರ್ಮಾನವಾಗಿತ್ತು. ನಾವು ಮಕ್ಕಳೇ ಏನು, ಇಡೀ ಬೆಂಗಳೂರಿಗೆ ಬೆಂಗಳೂರೇ ಉತ್ಸಾಹದಿಂದ ಕುಣಿಯುತ್ತಿತ್ತು ಅವರನ್ನು ನೋಡಲು.

ಅಮ್ಮನೊಡನೆ ಅಜ್ಜಯ್ಯ ಹೇಳಿದ ವಿಚಾರ, ಮೆಲ್ಲಗೆ, ತೀರಾ ಮೆಲ್ಲಗೆ (ಅಜ್ಜಯ್ಯನ ಕೋರಿಕೆ ಪ್ರಕಾರ) ಪ್ರಸ್ತಾಪಿಸಿದೆ. ಅಮ್ಮ ನಸುನಕ್ಕಳು. ನನ್ನ ಸೋದರಮಾವ ಜಗದು, ನಾನು ಮತ್ತು ನನ್ನ ತಂಗಿ ಕಮಲ ಅಜ್ಜಯ್ಯನನ್ನು ಕುದುರೆ ಗಾಡಿಯಲ್ಲಿ ಅಲ್ಲಿಗೆ ಕರೆದೊಯ್ಯುವುದೆಂದು ತೀರ್ಮಾನವಾಯಿತು. ಜಟಕಾ ಹೊಡೆಯುವವನೂ ನಮಗೆ ತಿಳಿದವನೇ. ಜೋಪಾನವಾಗಿ ಅಜ್ಜಯ್ಯನನ್ನು ಕರೆದೊಯ್ಯಲು ಸಂತೋಷವಾಗಿ ಒಪ್ಪಿಕೊಂಡ. ಈ ರೀತಿಯ ವಿಶೇಷ ಪ್ರಯಾಣಗಳ ಪೂರ್ವ ಸಿದ್ಧತೆಯಲ್ಲಿ ಅಮ್ಮ ಕಟ್ಟಿಕೊಡುತ್ತಿದ್ದ ತಿಂಡಿತೀರ್ಥಗಳಲ್ಲಿ ಅವನಿಗೂ ಒಂದು ದೊಡ್ಡ ಪಾಲು ಸಿಗುತ್ತಿದ್ದುದರಿಂದ ಈ ವಿಚಾರದಲ್ಲಿ ಅವನಿಗೂ ಉತ್ಸಾಹ. ಅಜ್ಜಯ್ಯನನ್ನು ಜೋಪಾನವಾಗಿ ಅಲ್ಲಿ ಕರೆದುಕೊಂಡು ಹೋಗುವುದಾಗಿ ಅಮ್ಮನಿಗೆ ಆಶ್ವಾಸನೆ ಕೊಟ್ಟ. ಬೆಂಗಳೂರಿನ ಮುಖ್ಯ ಮಾರ್ಗಗಳಲ್ಲಿ ನೆಹ್ರೂ ಬರುವ ಸಮಯದಲ್ಲಿ ವಾಹನ ಸಂಚಾರಗಳನ್ನು ರದ್ದು ಮಾಡುವುದು ಖಂಡಿತವಾದ್ದರಿಂದ ನಮ್ಮ ಜಟಕಾ ಸಾರಥಿ ಬೆಂಗಳೂರಿನ ಸಂದುಗೊಂದಿನ ಅಮುಖ್ಯ ರಸ್ತೆಗಳಲ್ಲಿ ಗಾಡಿ ಹೊಡೆದುಕೊಂಡು ನಮ್ಮನ್ನು ಕ್ರಿಕೆಟ್ ಮೈದಾನದ ಬಳಿಗೆ ತಲುಪಿಸಿದ.

ದೂರದಲ್ಲಿ ಸಾಗರದಂತೆ ಮೊರೆಯುತ್ತಿದ್ದ ಭಾರಿ ಜನಸ್ತೋಮದೆಡೆ ನಾವು ಕಾತರ ಕೌತುಕ ಬೆರೆತ ನಿರೀಕ್ಷೆಯ ನಡಿಗೆಯಲ್ಲಿ ಅಜ್ಜಯ್ಯನೊಡನೆ ಹೊರಟೆವು. ಮೊಳಕಾಲಿಂದ ಮೇಲಕ್ಕೆತ್ತಿ ಕಟ್ಟಿದ್ದ ಬಿಳಿ ಪಂಚೆ, ಹಳ್ಳಿ ಕಡೆಯಲ್ಲೇ ಸರಳವಾಗಿ ಹೊಲಿಸಿದ್ದ ಮಾಸಲು ಬಿಳುಪು ಜುಬ್ಬ, ಅದರ ಮೇಲೆ ಬಿಳಿಯ ಉತ್ತರೀಯ, ಕಾಲಿನಲ್ಲಿ ಚಪ್ಪಲಿ ಧರಿಸಿದ್ದ ಅಜ್ಜಯ್ಯ ಕೋಲೂರಿಕೊಂಡು ಮೆಲ್ಲನೆ ನಡೆಯುತ್ತಿದ್ದರೆ ಗಾಂಧಿ ತಾತನಂತೆಯೇ ಕಾಣುತ್ತಿದ್ದರು.

ನಾನೂ ಕಮಲ ಉತ್ಸಾಹದಿಂದ ಮುಂದೆ ಮುಂದೆ ಓಡುತ್ತಿದ್ದೆವು. ಅಷ್ಟರಲ್ಲಿ ಸ್ನೇಹಪೂರಿತ ದನಿಯೊಂದು ನಮ್ಮನ್ನು ಕರೆದು ನಿಲ್ಲಿಸಿತು. 'ಏನಮ್ಮ ವಿಮಲಾ, ನಿನ್ನದೇನಾ ಈವತ್ತು ಪ್ರಾರ್ಥನೆ?' ಎಂದು ಕೇಳಿ ಮಾತಾಡಿಸಿದವರು ಅಂದಿನ ದಿನಗಳಲ್ಲಿ ಕಾಂಗ್ರೆಸ್/ಸತ್ಯಾಗ್ರಹಗಳ ಮೂಲಕ ಸಾರ್ವಜನಿಕರಿಗೆ ಸುಪರಿಚಿತರಾಗಿದ್ದ ಶ್ರೀ ಎಚ್.ಎಸ್. ದೊರೆಸ್ವಾಮಿಯವರು. ಆ ವೇಳೆಗಾಗಲೇ ಅಕ್ಕ ಸುಮಿತ್ರ ಮತ್ತು ನಾನು ಆಕಾಶವಾಣಿಯಲ್ಲಿ ಜಾನಪದ ಗೀತೆಗಳ ಹಾಡಿಕೆಯಿಂದಲೂ, ಅನೇಕ ಸಾರ್ವಜನಿಕ ಸಮಾರಂಭಗಳಲ್ಲಿ ಪ್ರಾರ್ಥನಾ ಗೀತೆಗಳ ಹಾಡಿಕೆಯಿಂದಲೂ ಜನರಿಗೆ ಸಾಕಷ್ಟು ಪರಿಚಿತರಾಗಿದ್ದೆವು. ಆದರೆ ಅಂದು ನನ್ನನ್ನು ಹಾಡಲು ಯಾರೂ ಕೇಳಿರಲಿಲ್ಲ. ಆದರೂ ಅನಿರೀಕ್ಷಿತವಾಗಿ ಬಂದ ಈ ಪ್ರಶ್ನೆಯಿಂದ ಏನೆನ್ನಿಸಿತೋ, 'ಓಹೋ, ಆಗಲಿ!' ಎನ್ನುತ್ತಾ ಶ್ರೀ ದೊರೆಸ್ವಾಮಿಯವರು ನಿಂತಿದ್ದ, ನೆಹ್ರೂ ಭಾಷಣಕ್ಕಾಗಿಯೇ ನಿರ್ಮಿತವಾಗಿದ್ದ ವೇದಿಕೆಯೆಡೆ ಧಾವಿಸಿದೆ.

ಶ್ರೀ ದೊರೆಸ್ವಾಮಿಯವರು ನಮ್ಮೆಡೆ ಮುಗುಳ್ನಗೆಯಿಂದ ನೋಡುತ್ತಾ ಅಂದರು: 'ತಾತನ್ನ ಜೇರೆ ಕರಕೊಂಡು ಬಂದಿದ್ದೀಯ, ಅಷ್ಟು ವಯಸ್ಸಾದ ಅವರನ್ನ ಈ ಭಾರಿ ಜನಜಂಗುಳಿಯಲ್ಲಿ ಕ್ಷೇಮವಾಗಿ ನಿಭಾಯಿಸುವುದು ತುಂಬ ಕಷ್ಟ. ನಾ ಹೇಳಿದ ಹಾಗೆ ಮಾಡು, ಇಲ್ಲಿ ಕರಕೊಂಡು ಬಾ,' ಎನ್ನುತ್ತಾ ತಾವೇ ಮುಂದೆ ಬಂದು ಅಜ್ಜಯ್ಯನ ಕೈ ಹಿಡಿದು ವೇದಿಕೆಯ ಮೇಲಕ್ಕೆ ಕರೆತಂದರು. ಅಲ್ಲೇ ಮೆಟ್ಟಿಲು ಪಕ್ಕದಲ್ಲಿ ಮೂಲೆಯಲ್ಲಿ ಸಣ್ಣ ಜಾಗವೊಂದು ತೆರವಾಗಿತ್ತು. ದೊರೆಸ್ವಾಮಿಯವರು ಅಲ್ಲೇ ಒಂದು ಕುರ್ಚಿ ಹಾಕಿ ಅಜ್ಜಯ್ಯನನ್ನು ಕೂರಿಸಿದರು. 'ನೆಹ್ರೂ ಅವರು ಬರುವುದೂ ಹೋಗುವುದೂ ಈ ದಾರಿಯಿಂದಲೇ. ಅಜ್ಜಯ್ಯ ಅವರನ್ನು ತೀರ ಹತ್ತಿರದಿಂದಲೇ ಚೆನ್ನಾಗಿ ನೋಡಬಹುದು. ಜೊತೆಗೆ ಜನಗಳ ನೂಕುನುಗ್ಗಲಿಲ್ಲದೆ ಅಜ್ಜಯ್ಯನಿಗೆ ಕುಳಿತುಕೊಳ್ಳಲು ಈ ಜಾಗ ಸುರಕ್ಷಿತವಾಗಿರುತ್ತದೆ' ಎಂದರು.

ಅನಿರೀಕ್ಷಿತವಾಗಿ ಒದಗಿಬಂದ ಈ ಮಹದವಕಾಶಕ್ಕೆ ನನ್ನ ಬಾಯಿ ಕಟ್ಟಿಹೋಯಿತು. ಸಂತೋಷದಿಂದ ಕುಣಿಯುತ್ತಾ ಅಜ್ಜಯ್ಯನನ್ನು ಗಟ್ಟಿಯಾಗಿ ತಬ್ಬಿಕೊಂಡು ಹೇಳಿದೆ: 'ಅಜ್ಜಯ್ಯ, ನೀವು ಈ ಕುರ್ಚಿಯಿಂದಲೇ ನೆಹ್ರೂ ಬರುವಾಗ ಹೋಗುವಾಗ ಎರಡು ಸಲ ಅವರನ್ನು ನೋಡಬಹುದು. ನಾನು ಕಮಲ ಇಲ್ಲೇ ಸ್ವಲ್ಪ ಮುಂದೆ ಹೋಗಿರುತ್ತೇವೆ' ಅಂದೆ. ಅಜ್ಜಯ್ಯ ಅವರ ಎಂದಿನ ಶಾಂತ ಮುಖಭಾವದಿಂದ, 'ಆಯ್ತು, ನೀವು ಹೋಗಿ. ನಾನು ಇಲ್ಲಿರುತ್ತೇನೆ' ಎಂದು ಆಶ್ವಾಸನೆ ನೀಡುವಂತೆ ತಲೆ ಆಡಿಸಿದರು. 'ಅಜ್ಜಯ್ಯ, ಜೋಪಾನ' ಎನ್ನುತ್ತಾ ಜಗದು ಜನಸ್ತೋಮದೆಡೆಗೆ ನಡೆದ.

ನಾನೂ ಕಮಲ ವೇದಿಕೆಯ ಮೇಲೆ ಆನಂದೋತ್ಸಾಹಗಳಿಂದ ನೆಗೆಯುತ್ತ ಚಿಮ್ಮುತ್ತ ಓಡಾಡಿದೆವು. ವೇದಿಕೆಯ ಮುಂದಿನ ಮೈದಾನ ಕಣ್ಣು ಕಾಣುವಷ್ಟು ದೂರವೂ ಅತ್ತಿಂದಿತ್ತ ತುಯ್ಯುತ್ತಿದ್ದ ಜನರಿಂದ ತುಂಬಿ ತುಳುಕುತ್ತಿತ್ತು. ದೂರ ದಿಗಂತದಲ್ಲಿ ವರ್ಣರಂಜಿತ ಮೋಡಗಳ ಮಧ್ಯದಿಂದ ಸೂರ್ಯನ ಕಿರಣಗಳು ಥಳಗುಟ್ಟುತ್ತಾ ಹೊರಬರಲು ಪ್ರಯತ್ನಿಸುತ್ತಿದ್ದವು. ದೂರದ ಮೋಡದ ಮಧ್ಯೆ ಸಣ್ಣಗೆ ಗುಡುಗುತ್ತಾ ತುಂತುರು ಮಳೆ ಬೀಳಲು ಶುರುವಾಯಿತು. ಕಾಲು ಮುಚ್ಚುವ ಬಿಳಿ ಹೂವಿನ ವಾಯಿಲ್ ಲಂಗ ಅದರ ಮೇಲೆ ಬಿಳಿಚುಕ್ಕಿಯ ಹಸಿರು ಸಿಲ್ಕ್ ಜಂಪರ್ ತೊಟ್ಟು, ಹೊಳೆಯುವಂತೆ ಚೆನ್ನಾಗಿ ಬಾಚಿ ಅಮ್ಮ ಅಚ್ಚುಕಟ್ಟಾಗಿ ಹಾಕಿದ್ದ ಎರಡು ಜಡೆಯ ಕೆಂಪು ರಿಬ್ಬನ್ ಹಾರಾಡುತ್ತಿದ್ದಂತೆ ಬೆಚ್ಚಗಿನ ಮಳೆಯ ನೀರು ಮುಖವನ್ನು ತೋಯಿಸುತ್ತಿದ್ದಂತೆ ಉತ್ಸಾಹ ತಡೆಯಲಾರದೆ ಅತ್ತಿಂದಿತ್ತ ಓಡಾಡಿದೆ. ನನ್ನನ್ನೇ ನಾನು ಯಾವುದೋ ಸುಂದರ ಮಾಯಾನಗರಿಯ ರಾಜಕುಮಾರಿಯಂತೆ ಭಾವಿಸಿಕೊಂಡು ಮೈಮರೆತು ವೇದಿಕೆಯ ಉದ್ದಗಲಕ್ಕೆ ಓಡಾಡಿದೆ. ಎಲ್ಲಿಯದೋ ದಿವ್ಯ ಸ್ವಪ್ನದರಿವಿನಲ್ಲಿ ಹೀಗೆ ಮುಳುಗಿರುವಾಗ ದೇವಲೋಕದಿಂದಲೋ ಎಂಬಂತೆ ಸುಮಧುರ ದಿವ್ಯ ಗಾನ ಮೊದಲಾದಂತೆ ಅನ್ನಿಸಿತು...

ಇದಕ್ಕಿದ್ದಂತೆ ಎಲ್ಲ ಸ್ತಬ್ಧವಾಯಿತು... ಯಾರೋ ನನ್ನ ಎರಡೂ ಭುಜಗಳನ್ನೊತ್ತಿ ನಿಲ್ಲಿಸಿ 'ಶ್,ಶ್,ಶ್' ಎನ್ನುತ್ತಿದ್ದರು. ಜರ್ರನೆ ಭೂಮಿಗಿಳಿದು ಹಿಂದಿರುಗಿ ತಲೆಯೆತ್ತಿ ನೋಡಿದೆ. ನನ್ನ ಕಣ್ಣುಗಳನ್ನು ನಾನೇ ನಂಬದಾದೆ! ಸ್ವಯಂ ನೆಹ್ರೂ ಅವರೇ ನನ್ನನ್ನು ಗಟ್ಟಿಯಾಗಿ ಹಿಡಿದು ನಿಲ್ಲಿಸಿ ತಮ್ಮ ಬಾಯ ಮೇಲೆ ಬೆರಳಿಟ್ಟು ಪೂರ್ತಿ ನಿಶ್ಶಬ್ದವಾಗಿರುವಂತೆ ಮಾತಿಲ್ಲದೆ ಆಜ್ಞಾಪಿಸುತ್ತಿದ್ದಾರೆ! ನಾನು ಉಸಿರಾಡುವುದನ್ನೂ ನಿಲ್ಲಿಸಿಬಿಟ್ಟೆ ಎಂದು ಕಾಣುತ್ತದೆ. ಕನಸಿನಲ್ಲಿದ್ದೇನೇನೋ ಎಂದುಕೊಂಡು ಉಸಿರು ಬಿಗಿಹಿಡಿದುಕೊಂಡು ನಿಂತೆ. 'Do you hear the national anthem? Stay still' ಎನ್ನುತ್ತ ನೆಹ್ರೂ ನನ್ನನ್ನು ಹಿಡಿದು ನಿಲ್ಲಿಸಿದ್ದರು. ಮಿಲಿಟರಿ ಬ್ಯಾಂಡ್ ನುಡಿಸಿದ 'ಜನಗಣಮನ' ನಿಂತೊಡನೆ ಸರ್ರನೆ ನೆಹ್ರೂ ಮುಂದೆ ಸಾರಿ 'ಜೈ ಹಿಂದ್' ಎಂದು ಮೂರು ಬಾರಿ ಘೋಷಿಸಿದಾಗ ಆ ಭಾರಿ ಜನಸ್ತೋಮ ದಶದಿಕ್ಕುಗಳೂ ಮೊಳಗುವಂತೆ 'ಜೈ ಹಿಂದ್' ಎಂದು ಮಾರ್ದನಿ ಇತ್ತಿತು.

'Don't you move, sit right here' ಎನ್ನುತ್ತ ನೆಹ್ರೂ ಅವರ ಕುರ್ಚಿ ಬಳಿ ಅವುಕಿ ಕೂರಿಸಿದರು. ನಾನು ಮಂತ್ರಮುಗ್ಧ ಬೊಂಬೆಯಂತೆ ಅಲ್ಲಿ ಕೂತೆ. ಆದರೆ ನನ್ನ ಎಳೆಯ ಹೃದಯ ಆನಂದಾತಿಶಯದಿಂದ, ಸಂತೋಷೋದ್ವೇಗಗಳಿಂದ ತುಂಬಿ ಮೂಕವಿಸ್ಮಿತವಾಗಿತ್ತು. ಅಲ್ಲೇ ಸ್ವಲ್ಪ ದೂರದಲ್ಲಿದ್ದ ಕಮಲಳನ್ನು ಹತ್ತಿರಕ್ಕೆ ಬರುವಂತ ಕಣ್ಸನ್ನೆಯಿಂದ ಕರೆದೆ. ಅವಳು ಮೆಲ್ಲನೆ ಜರುಗಿಕೊಂಡು ನನ್ನ ಪಕ್ಕ ಬಂದು ಕುಳಿತಳು.

ನೆಹ್ರೂ ಆ ವೇಳೆಗೆ ಭಾರಿ ಉದ್ವೇಗದಿಂದ ಪ್ರಾರಂಭಿಸಿದ್ದ ಇಂಗ್ಲಿಷ್ ಭಾಷಣದ ಬಹು ಭಾಗ ನನಗೆ ಅರ್ಥವಾಗಲಿಲ್ಲ. ಭಾಷಣದ ವಿಷಯ ನನ್ನ ಅಂದಿನ ತಿಳಿವಳಿಕೆಗೆ ಮೀರಿದ್ದಾಗಿತ್ತು. ಅಲ್ಲದೆ ಆ ರೀತಿಯ ಉನ್ನತ ಮಟ್ಟದ ಉದ್ದ ಭಾಷಣವನ್ನು ಸಾವಧಾನವಾಗಿ ಕೇಳಿಸಿಕೊಳ್ಳುವಷ್ಟು ಏಕಾಗ್ರತೆಯಾಗಲೀ ಇಂಗ್ಲಿಷ್ ಭಾಷಾಪ್ರಬುದ್ಧತೆಯಾಗಲೀ ನನಗಿನ್ನೂ ಬಂದಿರಲಿಲ್ಲ. ಆದರೆ ಆ ಭಾಷಣ ಅಮೋಘವಾಗಿತ್ತು ಅನ್ನುವುದಕ್ಕೆ ಯಾವ ಸಂಶಯವೂ ಇರಲಿಲ್ಲ. ಅಲ್ಲಿ ನೆರೆದಿದ್ದ ಲಕ್ಷೋಪಲಕ್ಷ ಜನಸ್ತೋಮ ಒಂದಾಗಿ ನೆಹ್ರೂರವರ ಪ್ರಚಂಡ ವಾಗ್ಝರಿಗೆ ಸ್ಪಂದಿಸುತ್ತಿತ್ತು. ಆವೇಗದಿಂದ ಭಾವುಕತೆಯಿಂದ ನೆಹ್ರೂ ಮುಖ ಕೆಂಪಾಗಿ ಜ್ವಾಜ್ವಲ್ಯಮಾನವಾಗಿತ್ತು.

ವೇದಿಕೆಯ ಮೇಲೆ ಕುಳಿತು ಅವರ ಭಾಷಣವನ್ನು ತದೇಕಚಿತ್ತದಿಂದ ಕೇಳುತ್ತಿದ್ದ ಎಲ್ಲರನ್ನೂ ನಾನೊಮ್ಮೆ ಮೌನವಾಗಿ ವೀಕ್ಷಿಸಿದೆ. ಅಲ್ಲೇ ನೆಹ್ರೂ ಭಾಷಣ ಮಾಡುತ್ತಿದ್ದ ಕುರ್ಚಿಯ ಹಿಂಭಾಗದ ಸಾಲಲ್ಲಿ ಜೋಡಿಸಿದ್ದ ಕುರ್ಚಿಗಳಲ್ಲಿ ಕಂಡ ಮುಖಗಳು ಕಲ್ಲಿನಲ್ಲಿ ಕಡೆದ ಶಿಲ್ಪಗಳಂತೆ ಕಂಡುಬಂದವು. ಆಗ ಮುಖ್ಯಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯನವರು, ವಿದ್ಯಾ ಮಂತ್ರಿಗಳಾಗಿದ್ದ ಎ. ಜಿ. ರಾಮಚಂದ್ರರಾಯರು, ದೇವಲೋಕದ ಅಪ್ಸರೆಯಂತೆ ಬೆಳಗುತ್ತಿದ್ದ ನೆಹ್ರೂ ಮಗಳು ಇಂದಿರಾ ಗಾಂಧಿ, ಆಕೆಯ ಪಕ್ಕದಲ್ಲಿ ಸ್ಫುರದ್ರೂಪಿಯಾಗಿ ಕಾಣುತ್ತಿದ್ದ ಕಾಶ್ಮೀರದ ಪ್ರಧಾನಿ ಶೇಕ್ ಅಬ್ದುಲ್ಲ – ಇವರೆಲ್ಲಾ ಅಲ್ಲಿ ಗಂಭೀರ ವದನರಾಗಿ ಮಂಡಿಸಿದ್ದರು.

ಭಾರಿ ಜೈ ಹಿಂದ್ ಘೋಷಣೆಯೊಡನೆ ನೆಹ್ರೂ ಭಾಷಣ ಮುಗಿದೊಡನೆ ಅಲ್ಲೇ ಇದ್ದ ಯಾರೋ ಥರ್ಮಸ್‌ನಿಂದ ಹಬೆಯಾಡುವ ಟೀ ಬಗ್ಗಿಸಿಕೊಟ್ಟರು. ಒಂದೇ ಗುಟುಕಿಗೆ ಟೀ ಮುಗಿಸಿದ ನೆಹ್ರೂ ಕಣ್ಣಿಗೆ ಅಲ್ಲೇ ಅವರ ಮುಖದ ಬಳಿಗೇ ಕೈಚಾಚುತ್ತಿದ್ದ ಎಳೆಯ ಮಗುವೊಂದು ಕಾಣಿಸಿತು. ಆ ಕ್ಷಣದಲ್ಲಿ ನೆಹ್ರೂ ಮುಖ ಆರ್ದ್ರವಾಯಿತು. ಪ್ರೀತಿ ಮಾರ್ದವತೆಯಿಂದ ಅವರ ಮುಖದಲ್ಲಿ ಸ್ನೇಹಮಯ ಬೆಳದಿಂಗಳು ಹರಡಿತು. ಮಗುವನ್ನು ಬಾಚಿ ಮುದ್ದಿಸಿದರು. ಅದೇ ಸಮಯಕ್ಕೆ ಅಲ್ಲೇ ಅವರ ಬಳಿ ನಿಂತಿದ್ದ ನನ್ನ ಕಡೆಗೆ ಅವರ ಗಮನ ಹರಿಯಿತು. ಆ ಘಳಿಗೆಯನ್ನೇ ಎದುರುನೋಡುತ್ತಿದ್ದ ನಾನು ನನ್ನ ಬಳಿ ಇದ್ದ ನರಪೇತಲಾಗಿ ಕರುಣೆ ಹುಟ್ಟಿಸುವಂತಿದ್ದ ಒಂದು ಪುಟಾಣಿ ಆಟೊಗ್ರಾಫ್ ಪುಸ್ತಕವೊಂದನ್ನು ಕೈಲಿ ಹಿಡಿದು, ಆತಂಕ ನಿರೀಕ್ಷೆಗಳಿಂದ ಕಂಪಿಸುವ ಸ್ವರದಲ್ಲಿ ಅವರನ್ನು ಕೇಳಿದೆ: 'Nehruji, can I please have your autograph?' ನೆಹ್ರೂ ಥಟ್ಟನೆ ಉತ್ತರಿಸಿದರು: 'Don't you know, dear, that I don't give autographs in public meetings?' ಮತ್ತೇನಾದರೂ ಅವರೊಡನೆ ಮಾತಾಡಬೇಕೆಂಬ ನನ್ನ ಆಸೆ, ಚಪಲತೆ ತಡೆಯಲಾರದೆ, ನಾನೆಂದೆ: 'Are you angry with me for asking you for your autograph?' ತಕ್ಷಣ ನೆಹ್ರೂ ಅವರು ಎರಡು ಕೈಗಳನ್ನು ನನ್ನ ಭುಜದ ಮೇಲಿಟ್ಟು ಸ್ನೇಹಪೂರಿತವಾಗಿ ನನ್ನ ಭುಜವನ್ನು ಅಲ್ಲಾಡಿಸುತ್ತ ಕೇಳಿದರು: 'Why would I be angry with you, my silly child?' ಆ ವೇಳೆಗೆ ಪಕ್ಕದಲ್ಲೇ ನಿಂತಿದ್ದ ಕಮಲ ನನ್ನನ್ನು ತಿವಿಯುತ್ತ ಅಜ್ಜಯ್ಯನ ವಿಚಾರ ಹೇಳು ಎಂದು ಪಿಸುಮಾತಿನಲ್ಲಿ ಜ್ಞಾಪಿಸಿದಳು. ನಾನು ಥಟ್ಟನೆ ಅವಾಂತರ ಆಶಾಪೂರಿತ ಧ್ವನಿಯೊಡನೆ 'My 94-year old grandfather is here to see you. He is too old to walk up this way. Can you please see him now?' ಎಂದೆ. ಈಗ ನೆಹ್ರೂ ಮುಖಭಾವ ಪೂರ್ತಿ ಬದಲಾಯಿಸಿತು. ಅವಾಂತರಪಡಿಸುವ ಒತ್ತಾಯದ ಧ್ವನಿಯಲ್ಲಿ ನನ್ನ ಬೆನ್ನ ಹಿಂದೆ ಕೈಯಿಟ್ಟು 'Why didn't you say that before? Let's go see him now' ಎನ್ನುತ್ತ ನಾ ಕೈತೋರಿದೆಡೆ ಅಜ್ಜಯ್ಯ ಕುಳಿತಿದ್ದ ಕುರ್ಚಿಯ ಕಡೆಗೆ ಸರಸರ ನಡೆದರು.

ಸುತ್ತಲ ಜನ, ಅಧಿಕಾರಿಗಳು ಎಲ್ಲರೂ ಮಾಯವಾಗಿ ಆ ಕ್ಷಣದಲ್ಲಿ ಈ ಲೋಕದಲ್ಲಿ ನೆಹ್ರೂ, ಅಜ್ಜಯ್ಯ, ನಾನು - ಮೂವರು ಮಾತ್ರ ಉಳಿದೆವು. ಅಜ್ಜಯ್ಯನ ಬಳಿಗೋಡಿ 'ಅಜ್ಜಯ್ಯ, ನಿನ್ನನ್ನು ನೋಡಲು ನೆಹ್ರೂ ಬಂದಿದ್ದಾರೆ, ನೋಡು' ಎನ್ನುತ್ತ ಅಜ್ಜಯ್ಯನ ಕೈ ಹಿಡಿದು ಎಬ್ಬಿಸಿದೆ. ಆ ಕ್ಷಣದಲ್ಲಿ ಮಂತ್ರಮುಗ್ಧರಂತೆ ಅಜ್ಜಯ್ಯ ಎದ್ದು ನಿಂತರು. ಅಜ್ಜಯ್ಯನ ಎರಡು ಕೈಗಳನ್ನೂ ನೆಹ್ರೂ ತಮ್ಮ ವಿಶಾಲವಾದ ಕೆಂಪು ಕೈಗಳಲ್ಲಿ ಮೃದುವಾಗಿ ಹಿಡಿದು ಮುಗುಳ್ನಗುತ್ತಾ ಅಜ್ಜಯ್ಯನ ಕಡೆ ನೋಡಿದರು. ನೆಹ್ರೂ ಹಿಡಿದ ಕೈಯಲ್ಲಿ ಅಜ್ಜಯ್ಯ ಕಂಪಿಸುತ್ತಿದ್ದರು. ಮಗುವಿನಂತೆ ಬಿಕ್ಕಿ ಅಳುತ್ತಿದ್ದ ಅಜ್ಜಯ್ಯನ ಕಣ್ಣಿನಿಂದ ದಳದಳನೆ ನೀರಿಳಿಯುತ್ತಿತ್ತು. ಎಲ್ಲಾ ಒಂದೇ ಕ್ಷಣ. ಸುತ್ತಲಿದ್ದ ಮಾಯಾಜಗತ್ತು ಸರ್ರನೆ ಕರಗಿತು.

ಧೂಳೆಬ್ಬಿಸುತ್ತ ಅಸಂಖ್ಯಾತ ಮಿಲಿಟರಿ ವಾಹನಗಳು, ಮೋಟರ್ ಬೈಕುಗಳೂ ಹೊರಟ ಶಬ್ದ ಒಂದೆರಡು ಕ್ಷಣ ಕಿವಿಯನ್ನು ಗಡಚಿಕ್ಕಿತು. ಆ ಕ್ಷಣದಲ್ಲಿ ನೆಹ್ರೂ, ಮಿಲಿಟರಿ, ಪೋಲೀಸ್ ಅಧಿಕಾರಿಗಳು ಎಲ್ಲರೂ ಕರಗಿಹೋದರು... ಇದಾದ ಬಹಳ ದಿನಗಳವರೆಗೆ ಈ ಮಾಯಾಮಂಪರಿನಿಂದ ನಾನು ಎಚ್ಚೆತ್ತಿರಲಿಲ್ಲ. ಅಜ್ಜಯ್ಯನ ಹೃದಯದಲ್ಲೂ ಈ ಭೇಟಿ ಒಂದು ಅತ್ಯಂತ ಮಧುರ ಸ್ಮೃತಿಯಾಗಿ ಉಳಿದಿತ್ತು. ತಮಗೆ ಬೇಕಾದವರೊಡನೆ ಮಾತಾಡುವಾಗ ತಮ್ಮ ತುಂಬು ಬಾಳಿನ ಈ ಮಹತ್ತರ ಘಳಿಗೆಯನ್ನು ಕುರಿತು ಅಜ್ಜಯ್ಯ ಭಾವಾತ್ಮಕವಾಗಿ ಮಾತಾಡುತ್ತಿದ್ದರು.

ಇದಾದ ಸುಮಾರು ಎರಡು ವರ್ಷಗಳವರೆಗೆ ಅಜ್ಜಯ್ಯ ಬದುಕಿದ್ದರು. ನೆಹ್ರೂರವರನ್ನು ಆಗಾಗ ನೆನೆಸಿಕೊಳ್ಳುತ್ತಿದ್ದರು. ಆದರೆ ಅವರು ವಿಶೇಷವಾಗಿ ನೆನೆಯುತ್ತಿದ್ದುದು ನೆಹ್ರೂ ಅವರ ಆಕೃತಿ ರೂಪಗಳನ್ನಲ್ಲ, ಹೇಗೆ ಅವರ ಕೈಗಳು ತಮ್ಮ ಊರು ಮತಿಘಟ್ಟದ ಬಳಿಯ ಹಳ್ಳಿಯೊಂದರಲ್ಲಿ (ಅದರ ಹೆಸರು ಮರೆತಿದ್ದೇನೆ) ಬೆಳೆಯುತ್ತಿದ್ದ ಒಂದು ಅತ್ಯಂತ ನವುರಾದ ಅಪರೂಪದ ಹತ್ತಿಯಷ್ಟು ಮೃದುವಾಗಿದ್ದವು ಎಂಬುದನ್ನು. ಅಂದು ಆ ದಿವ್ಯಸಂಜೆ ನೆಹ್ರೂ ಅಜ್ಜಯ್ಯನ ಅಂತಃಕರಣವನ್ನೇ ಮುಟ್ಟಿದ್ದರು.

●

ಖಾಲಿಗೂಡಿನ ತುಂಬ ಬೆಚ್ಚನೆ ನೆನಪು

–ಶಶಿಕಲಾ ಚಂದ್ರಶೇಖರ್

ಇತ್ತೀಚೆಗೆ ಸಂತೋಷಕೂಟಗಳಲ್ಲಿ, ಸಂಗೀತ ಸಂಜೆಗಳಲ್ಲಿ, ನಾಟಕ ಪ್ರದರ್ಶನಗಳಲ್ಲಿ ಹೀಗೇ ಇತರೇ ಸ್ಥಳಗಳಲ್ಲಿ ನಮ್ಮಿಬ್ಬರನ್ನು ಕಂಡವರು 'ನಮಸ್ಕಾರ. ಚೆನ್ನಾಗಿದ್ದೀರಾ?' ಎಂದು ಔಪಚಾರಿಕವಾಗಿ, ಹಿತವಾಗಿ ಮಾತನಾಡಿಸಿ ನಮ್ಮ ಅಕ್ಕಪಕ್ಕ ಸುತ್ತಮುತ್ತ, ಮಕ್ಕಳಿಲ್ಲದ್ದನ್ನು ಕಂಡು, ತೆಳು ನಗು ಬಿರಿದ ತುಟಿ ಅರಳಿಸಿ 'Empty nesters?' ಅಂದಾಗ, ನಾನೂ ಅವರಂತೆಯೇ ಹಿತವಾಗಿ ನಸು ನಕ್ಕು 'ಹೌದೌದು' ಎನ್ನುವೆ. ಬದುಕಿನ ಮಧ್ಯಾಹ್ನ ಮತ್ತು ಸಂಜೆಯ ನಡುವೆ ನಿಂತ ನನಗೆ ಎರಡು ಲೇಬಲ್ಲುಗಳಿವೆ, ಒಂದು 'ಎನ್‌ಆರ್‌ಐ', ಇನ್ನೊಂದು ಇತ್ತೀಚೆಗೆ ಅಂಟಿಸಲ್ಪಟ್ಟ 'Empty nester'.

ಎಂಭತ್ತರ ದಶಕ ಅಂಚಿನವರಗೆ 'ಎನ್‌ಆರ್‌ಐ' ಪದದ ಪರಿಚಯವೇ ನನಗಿರಲಿಲ್ಲ. ನನ್ನನ್ನಾಗಲಿ ನನ್ನ ಪರಿಚಿತರನ್ನಾಗಲೀ ಯಾರೂ 'ಎನ್‌ಆರ್‌ಐ' ಎಂದು ಸಂಬೋಧಿಸಿದ ನೆನಪಿಲ್ಲ. ತೊಂಭತ್ತರ ದಶಕದ ವೇಳೆಗೆ, ಪ್ರವಾಸಿಗರು, ಹಾಡುವವರು, ನರ್ತಿಸುವವರು, ಬರೆಯುವವರು, ಬೋಧಿಸುವವರು... ಹೀಗೆ ಬಹಳಷ್ಟು ಮಂದಿ ಇಲ್ಲಿಗೆ, ಬೆಂಗಳೂರು ತುಮಕೂರಿಗೆ

ಹೋಗಿಬಂದಷ್ಟೇ ಸಲೀಸಾಗಿ ಪದೇ ಪದೇ ಬಂದು ಹೋಗಲು ಶುರುಮಾಡಿದಂದಿನಿಂದ, ಅವರೆಲ್ಲಾ ನನ್ನಂತಹ ಸಾಮಾನ್ಯರನ್ನು 'ಎನ್‌ಆರ್‌ಐ' ಎಂದೇ ಸರಾಗವಾಗಿ ಸಂಬೋಧಿಸಲಾರಂಭಿಸಿದರು. ನನಗೆ ಊರಲ್ಲಿ ಬ್ಯಾಂಕ್ ಖಾತೆ ಇರಲಿಲ್ಲ. ಹಾಗೇ ಅಲ್ಲಿ ವ್ಯವಹಾರವಾಗಲಿ ವಹಿವಾಟಾಗಲೀ ಇರಲಿಲ್ಲ. ಆ ಸ್ತರಗಳಲ್ಲಿ ಬಳಕೆಯಾಗುತ್ತಿದ್ದ 'ಎನ್‌ಆರ್‌ಐ' ಲೇಬಲ್ ನನ್ನ ದೈನಂದಿನ ಬದುಕಿನ ಹೊಸ್ತಿಲು ಮುಟ್ಟಿರಲಿಲ್ಲ.

ಡಿಸೆಂಬರ್ ರಜೆಯ ಒಂದು ದಿನ; ಹಲವಾರು ವರ್ಷ ಇಲ್ಲೇ ಇದ್ದು, ಇತ್ತೀಚೆಗೆ ಊರಿಗೆ ಮರಳಿರುವ ಗೆಳತಿಗೆ ಅತ್ಯುತ್ಸಾಹದಿಂದ ಕರೆ ಮಾಡಿದ್ದೆ. ಏಪ್ರಿಲ್ ತಿಂಗಳಲ್ಲಿ ಊರಿಗೆ ಬರಲಿರುವೆ ಎಂದು ಸುದ್ದಿ ಸಾರಲು. 'ಏಪ್ರಿಲ್ ಬರಲು ಇನ್ನೂ ನಾಲ್ಕು ತಿಂಗಳಿವೆ, ನಾಳೆಯೇ ಬರುವವಳ ಹಾಗೆ ಹಾರಾಡ್ತಿದ್ದೀಯಲ್ಲಾ. ಓಹ್! ಟಿಪಿಕಲ್ 'ಎನ್‌ಆರ್‌ಐ' ಬುದ್ಧಿ...' ಎಂದಳು. ಮತ್ತೊಂದು ಸಂದರ್ಭದಲ್ಲಿ ಪರಿಚಿತರೊಡನೆ ಮಾತನಾಡುವಾಗ 'ಟಿಪಿಕಲ್ ಎನ್‌ಆರ್‌ಐ ವೀಕ್ ಎಂಡ್ ಎಮೋಷನ್ಸ್. ರವಿ ಪ್ರತೀ ವೀಕ್ ಎಂಡ್ ಕಾಲ್ ಮಾಡ್ತಾನೆ ಇರ್ತಾನೆ...' ಎಂದರು, ಇಲ್ಲಿಯ ತಮ್ಮ ಗೆಳೆಯನನ್ನು ಕುರಿತು ಮಾತನಾಡುತ್ತಾ. ಈ ಸಲ ಅವರಾರೆಂದು ಹೇಳೋಲ್ಲಾ ನೀವೇ ಊಹಿಸಿ. ದೇಶದಿಂದಾಚೆ ಇರುವ ನಮ್ಮನ್ನು 'ಎನ್‌ಆರ್‌ಐ' ಎನ್ನುವುದು ವಾಚ್ಯಾರ್ಥದಲ್ಲಿ ಸರಿ ಇರಬಹುದು. ಆದರೆ ಭಾವಾರ್ಥದಲ್ಲಿ ಸರಿಯೇ? ನಾನು ಊರಿನೊಳಗಿಲ್ಲದಿರುವುದು ನಿಜವಾದರೂ ನನ್ನೊಳಗೆ ಊರಿಲ್ಲದಿರುವ ಘಳಿಗೆಗಳುಂಟೇ? ಮನದಲ್ಲಿ ಮನೆಮಾಡಿರುವ ಊರಲ್ಲಿ ಇರುವ ನನ್ನ ಅಸ್ತಿತ್ವ ದಿಟವಲ್ಲವೇ? ಹಾಗಿದ್ದರೆ ನಾನು ನಿಜದಲ್ಲಿ ನಾನ್ ರೆಸಿಡೆಂಟ್ ಹೌದಾ? ಅತೀ ಭಾವುಕಳಾದ ನನಗೆ 'ಎನ್‌ಆರ್‌ಐ' ಹಣೆ ಪಟ್ಟಿ 'ಸ್ಮಗ್ಲರ್' 'ಗ್ಯಾಂಗ್‌ಸ್ಟರ್' ಎಂಬ ಪಟ್ಟಿಗೆ ಸಮೀಕರಿಸಿದಂತೆನಿಸುವುದು. ಮೊದಲ ಲೇಬಲ್ ಜೊತೆಗೆ 'Empty nester' ಎಂಬ ಲೇಬಲ್ ಬೇರೆ. ಇವೆರಡನ್ನೂ ಹಚ್ಚಿಕೊಂಡ ನಾನು '೩೦% ಆಫ್' ಎಂದು ಲೇಬಲ್ ಹಚ್ಚಿಕೊಂಡ ಶಾಪಿಂಗ್ ಮಾಲ್ ರಾಕ್ ಮೇಲೆ ನೇತಾಡುವ ದಿರಿಸೇನೋ ಅನ್ನಿಸುತ್ತೆ. ಮುಂದಿನ ವರ್ಷಗಳಲ್ಲಿ ನನಗೆ ಅಂಟಿಸಲ್ಪಡುವ ಲೇಬಲ್ ಬಗ್ಗೆ ಏನೆನಿಸಬಹುದು ಎಂದು ಯೋಚಿಸಿದಾಗ ತಮಾಷೆ ಎನಿಸಿತು. 'ಫಾರ್ ಇಮ್ಮಿಡಿಯೇಟ್ ಸೇಲ್' ಎನ್ನುವ ಲೇಬಲ್ ತಗುಲಿಸಿಕೊಂಡು ಅಂಗಡಿ ಗೂಡಲ್ಲಿ ಇರುಕಿರುವ ಅಳಿದುಳಿದ ಪದಾರ್ಥಗಳಂತೆ ಎನಿಸಬಹುದು. ಊಹಿಸಬಲ್ಲಿರಾ ಆ ಲೇಬಲನ್ನು?

ಕಳೆದ ರಾತ್ರಿ ಪರಿಚಿತರೊಬ್ಬರ ಮಗಳ ರಂಗಪ್ರವೇಶ (ಬುದ್ಧದೇವನೇನಾದರೂ ಇಂದಿದ್ದು, ಕಿಸಾಗೌತಮಿಗೆ ಮಕ್ಕಳು ಭರತನಾಟ್ಯ ಕಲಿಯದೇ ಇರುವ ಸೌತ್ ಇಂಡಿಯನ್ ಮನೆಯ ಸಾಸುವೆ ತಾರಮ್ಮಾ ಎಂದಿದ್ದರೆ, ಪಾಪ! ಕಿಸಾಗೌತಮಿ ಇಂದೂ ಬರಿಗೈಯಲ್ಲೇ ಹಿಂತಿರುಗುತ್ತಿದ್ದಳೇನೋ?) ಕಾರ್ಯಕ್ರಮದಿಂದ ತಡವಾಗಿ ಬಂದ ಕಾರಣ ಏಳುವುದೂ ತಡವಾಗಿತ್ತು. ಎದುರು ಗೋಡೆಯ ಮೇಲಿದ್ದ ಗಡಿಯಾರ, ಬಲಪಕ್ಕದಲ್ಲಿದ್ದ ಕಿಟಕಿಯ

ಪರದೆಯನ್ನು ಭೇದಿಸಿ ಕೋಣೆ ತುಂಬಿದ್ದ ಸೂರ್ಯನ ಬೆಳಕೂ ಅದನ್ನೇ ಹೇಳಿತ್ತು. ಅಲಾರಾಂ ಬಾಜಾಬಜಂತ್ರಿಯ ಸದ್ದಿಗೆ ಏಳದೇ ಇದ್ದ ದಿನ, ಅದು ವಾರಾಂತ್ಯವಿರಬೇಕೆಂಬ ಪ್ರಜ್ಞೆ ಎಚ್ಚೆತ್ತು– ಚಿನ್ಮಯ ಮಿಷನ್? ಗರ್ಲ್ ಸ್ಕೌಟ್ ಕ್ಯಾಂಪ್? ಬಾಸ್ಕೆಟ್ ಬಾಲ್ ಗೇಮ್? ಸ್ವಿಮ್ಮಿಂಗ್ ಟೈಮ್ ಟ್ರೈಲ್? ಭರತ ನಾಟ್ಯ ಕ್ಲಾಸ್? ಹಾರ್ಸ್ ಬ್ಯಾಕ್ ರೈಡಿಂಗ್ ಸೆಷನ್? ಪೋಷಕರ ಪರವಾಗಿ ಯಾವ ವಾಲಂಟರಿ ಸೇವೆಗೆ ಒಪ್ಪಿಕೊಂಡಿರುವೆ? ಇವತ್ತಿನ ಚಟುವಟಿಕೆ ಯಾವುದಿರಬಹುದು ಎಂದು ಯೋಚಿಸುತ್ತಾ ಹಾಸಿಗೆಯಲ್ಲಿ ಕುಳಿತಾಗ ನಿಧಾನವಾಗಿ ಮೆದುಳಿಗೆ ಹೊಳೆದದ್ದು, ಅದ್ಯಾವುದೂ ಈಗ ನನ್ನ ದೈನಂದಿನ ಕೆಲಸಗಳ ಸಾಲಿನಲ್ಲಿಲ್ಲ ಎಂದು. ಮಕ್ಕಳನ್ನು ಎಲ್ಲೂ ಕರೆದೊಯ್ಯಬೇಕಿಲ್ಲ. ನಾನೀಗ 'ಎಂಟಿ ನೆಸ್ಟರ್'. ಮರಿಹಕ್ಕಿಗಳು ಹಾರಿಹೋಗಿವೆ. ಹಕ್ಕಿ ಮರಿಗಳಿಲ್ಲದ ಗೂಡಿದು. ಆಗಲೇ ಗ್ಯಾಬಿಯ ಮುಖ ಕಣ್ಮುಂದೆ ಹಾದು ಬಂದಿದ್ದು.

ಇಪ್ಪತ್ತು ವರ್ಷದ ನಂತರ ನೆನಪಾದ ಅವಳೂ ನನ್ನಂತೆ ಒಂದು ಮುಂಜಾನೆ ಧಿಗ್ಗನೆದ್ದು ಹಾಸಿಗೆಯಲ್ಲಿ ಕೂತು ನನ್ನ ಹಾಗೇ ಯೋಚಿಸಿರಬಹುದಾ? ನಮ್ಮಿಬ್ಬರ ಅನಿಸಿಕೆ ಒಂದೇ ಆಗಿರಬಹುದಾ? ಎಂದೋ ಕೇಳಿದ ನಗೆಚಾಟಿಕೆಯೊಂದು ಮಸುಕು ಮಸುಕಾಗಿ ನೆನಪಾಯಿತು. ಲಾಯರ್, ಪ್ರೀಸ್ಟ್ ಹಾಗೂ ರಾಬ್ಬೈ ನಡುವೆ ನಡೆಯುತ್ತಿದ್ದ ಸಂಭಾಷಣೆಯ ಮಧ್ಯೆ 'ಜೀವ ಶುರುವಾಗುವುದು ಯಾವಾಗ?' ಎಂಬ ಪ್ರಶ್ನೆ ಬಂತಂತೆ. 'ಮಗು ಜನ್ಮ ತಾಳಿದ ಘಳಿಗೆಯಿಂದ' ಎಂದ ಲಾಯರ್. 'ಕನ್ಸಪ್ಷನ್ ಆದ ಘಳಿಗೆ' ಎಂದ ಪ್ರೀಸ್ಟ್. 'ಕಡೆಯ ಮಗು ಹೈಸ್ಕೂಲ್ ಮುಗಿಸಿ ಮನೆ ಬಿಟ್ಟು ಕಾಲೇಜ್ ಡಾರ್ಮ್‌ಗೆ ಹೋದ ದಿನ' ಎಂದನಂತೆ ರಾಬ್ಬೈ. ಎಲ್ಲರೂ ನಕ್ಕು ಒಪ್ಪಿದರಂತೆ ಅವನ ಉತ್ತರವನ್ನು. ಅವಳೂ ಒಪ್ಪಿರಬಹುದಾ ಈ ಉತ್ತರವನ್ನು?

ನನ್ನ ಮುಂಗೈ ಮೇಲೆ ಬಿದ್ದ ಮೊದಲ ಹಿಮದ ಚಿತ್ತಾರದ ದಳಗಳು ನೆನಪಿದ್ದಷ್ಟೇ ಸ್ಪಷ್ಟವಾಗಿ, ನಮ್ಮ ಮೊದಲ ಮನೆಯ ಹುಡುಕಾಟದ ದಿನಗಳು ನೆನಪಿವೆ. ಹಾಗೇ ನಾನೇ ತಯಾರಿಸಿ ರಿಯಲ್ ಎಸ್ಟೇಟ್ ಏಜಂಟಿಣೆಯ ಮುಂದಿಟ್ಟ ಪಟ್ಟಿ ಕೂಡ. ಆ ಪಟ್ಟಿಯನ್ನು ನನ್ನ ಆರನೇ ಕ್ಲಾಸಿನಲ್ಲಿ ಗೃಹ ವಿಜ್ಞಾನದ ಸೌಭಾಗ್ಯ ಟೀಚರ್ ಹೇಳಿಕೊಟ್ಟ ಪಾಠಗಳನ್ನು ತಲೆಯಲ್ಲಿಟ್ಟುಕೊಂಡೇ ತಯಾರಿಸಿದ್ದೆ.

ಇರಲೇಬೇಕಾದ ಅಂಶ

೧. ನಿವೇಶನ ಪೂರ್ವ ಪಶ್ಚಿಮ ದಿಕ್ಕಿಗಿರಬೇಕು.

೨. ನಿವೇಶನದ ಸುತ್ತ ಹೂಗಿಡ-ಮರ-ಬಳ್ಳಿ ಬೆಳೆಸಲು ಸಾಕಷ್ಟು ಜಾಗವಿರಬೇಕು.

೩. ಮನೆಯ ಮುಂದೆ ೫೦ ಅಡಿ ದೂರದಲ್ಲಿ ಬೇರಾವ ಮನೆ ಇರಬಾರದು.

೪. ಕಡೇ ಪಕ್ಷ ಮೂರು ದಿಕ್ಕಿಗೂ ಕಿಟಕಿಗಳಿರಬೇಕು.

೫. ಮನೆ ಎತ್ತರದ ನಿವೇಶನದಲ್ಲಿರಬೇಕು.

ಇದ್ದರೆ ಚೆನ್ನಿತ್ತು ಎಂಬ ಅಂಶ

೧. ಸಾಧ್ಯವಾದಲ್ಲಿ ನಾಲ್ಕಾರು ಮರಗಳಿರಬೇಕು (ಜಪನೀಸ್ ಮೇಪಲ್, ಶುಗರ್ ಮೇಪಲ್, ಆಪಲ್, ಚೆರ್ರಿ...).

೨. ಮನೆಯ ಹಿಂಬದಿಯಲ್ಲಿ ಪುಟ್ಟ ತೊರೆ ಇರಬೇಕು.

ಏಜಂಟಿಣಿ ನನ್ನ ಪಟ್ಟಿಗೆ ಅತೀ ಮುಖ್ಯವಾದ ಮತ್ತೊಂದಂಶವನ್ನು ಸೇರಿಸಲು ಸೂಚಿಸಿದಳು. 'ನೋಡು, ಈ ದೇಶದಲ್ಲಿ ಮಕ್ಕಳು ಕೌಂಟಿ ಸರ್ಕಾರ ನಿಗದಿಪಡಿಸಿದ ಸರಹದ್ದಿಗೆ ಒಳಪಟ್ಟ ನಿಯೋಜಿತ ಶಾಲೆಗೆ ಮಾತ್ರವೇ ಹೋಗಬೇಕು. ಸಾರ್ವಜನಿಕ ಶಾಲೆಗೆ ಮಕ್ಕಳನ್ನು ಕಳುಹಿಸಲು ಇಷ್ಟಪಡದವರು ಖಾಸಗಿ ಶಾಲೆಗೆ ಕಳುಹಿಸಬಹುದು. ಆದರೆ ಖಾಸಗೀ ಶಾಲೆಯ ಫೀಸು ವಿಪರೀತ. ಶೇಕಡಾ ೮೫ಕ್ಕೂ ಹೆಚ್ಚು ಜನ ತಮ್ಮ ಮಕ್ಕಳನ್ನು ಸಾರ್ವಜನಿಕ ಶಾಲೆಗೇ ಕಳುಹಿಸುತ್ತಾರೆ. ಆಸ್ತಿಯ ಮೌಲ್ಯ ಮನೆ ಇರುವ ಶಾಲಾ ಸರಹದ್ದಿಗೆ ತಕ್ಕಂತೆ ಏರಿ, ಇಳಿಯುತ್ತದೆ. ಉತ್ತಮ ಕೌಂಟಿಯಲ್ಲಿ ಆಸ್ತಿ ತೆರಿಗೆ ಜಾಸ್ತಿ, ಹಾಗೇ ಸೌಕರ್ಯಗಳೂ ಹೆಚ್ಚು. ಶಾಲೆ, ಲೈಬ್ರರಿ, ರೆಕ್ರಿಯೇಷನ್ ಫೆಸಿಲಿಟಿ, ಟೆನ್ನಿಸ್/ಸಾಕರ್ ಮೈದಾನಗಳು, ಒಳಾಂಗಣ ಈಜುಗೊಳಗಳು, ಹೀಗೇ...' ಅವಳು ಇಷ್ಟೆಲ್ಲಾ ಹೇಳಿದ ಮೇಲೆ, ಮನೆ ಪ್ರಮುಖ/ಅತ್ಯುತ್ತಮ ಶಾಲಾ ಸರಹದ್ದಿನಲ್ಲಿರಬೇಕು ಎಂದು ಬರೆದು, ಅದನ್ನು ನಂಬರ್ ಒಂದನೇ ಸ್ಥಾನಕ್ಕೆ ಹಾಕಿ ಮಿಕ್ಕವನ್ನು ಕೆಳಗೆ ತಳ್ಳಿದೆ.

ಒಂದೆರಡು ಮನೆ ನೋಡುವಷ್ಟರಲ್ಲಿ ಪಟ್ಟಿಯ ಹೊರತಾದ ಮತ್ತೊಂದು ಅಂಶ ಹೊಳೆಯಿತು. ಉತ್ತಮ ನೆರೆಹೊರೆಯೂ ಮುಖ್ಯವಲ್ಲವೇ? ಎಣ್ಣೆಗೆಂಪು ಬಣ್ಣದವರಾದ ನಮ್ಮೊಂದಿಗೆ ಹೊಂದಿಕೊಂಡು ಹೋಗುವ ಮಂದಿ ಮುಖ್ಯರಲ್ಲ ಎಂದು ಹೇಳುವುದು ಹೇಗೆ? ಸಮಯ ಸಂದರ್ಭ ಎಂದರೆ ಉಪ್ಪು, ಈರುಳ್ಳಿ, ಬೆಣ್ಣೆ, ಚೀಸ್ ಕೊಡುಕೊಳ್ಳುವಷ್ಟು ಸ್ನೇಹ ತೋರುವವರಿರಬೇಕಲ್ಲಾ! ಹಾಗೆ ನೋಡಿದರೆ ಈ ದೇಶದಲ್ಲಿ ಮೂಲದವರೆಷ್ಟು ಮಂದಿ ಇದ್ದಾರು? ಹೆಚ್ಚಿನವರು ನಮ್ಮಂತೆಯೇ ವಲಸೆ ಬಂದವರು ತಾನೆ? ಈಗ ಉಸಿರಾಡುತ್ತಿರುವವರಲ್ಲದಿದ್ದರೂ, ಉಸಿರು ನಿಲ್ಲಿಸಿದ ಮುತ್ತಾತನೋ ಅವನ ತಾತನೋ ದೂರದೂರಿಂದ ಬುತ್ತಿ ಗಂಟು ಹೊತ್ತು ಸ್ವಾತಂತ್ರ್ಯದೇವಿಯ ನೆರಳಲ್ಲಿ ಹಾದು ಬಂದವರಲ್ಲವೇ? ಆದರೂ, ಆತಂಕದ ವಿಷಯವೇ ಅಲ್ಲವೇ? ಈ ವಿಷಯವನ್ನು ಸೂಕ್ಷ್ಮವಾಗಿ ವಿವರಿಸಿದಾಗ, ಏಜಂಟಿಣಿ ಅರ್ಥಮಾಡಿಕೊಂಡಳು. 'ಬ್ಲೆಸ್ ಹರ್ ಹಾರ್ಟ್' ಎಂದು ನಾನು ಹೊಸದಾಗಿ ಕಲಿತಿದ್ದ ಹಾರೈಕೆ ಶಬ್ದದೊಂದಿಗೆ ಅವಳನ್ನು ಲಗುಬಗೆಯಿಂದ ಹರಸಿಯೇ ಬಿಟ್ಟೆ. ಅವಳು

ನಮಗೆ ಎಷ್ಟು ಹತ್ತಿರದವಳಾದಳೆಂದರೆ ನಮ್ಮ ಜೊತೆಯಲ್ಲಿ ಕುಳಿತು ಅನ್ನ ಸಾರನ್ನು ಬರಿಗೈಯಲ್ಲಿ ಉಣ್ಣುವಷ್ಟು! ಸ್ವತಃ ತಾನೇ ಚಿತ್ರಾನ್ನ, ಆಲೂಗಡ್ಡೆ ಪಲ್ಯ, ಉಪ್ಪಿಟ್ಟು ಮಾಡುವಷ್ಟು!

ಅವಳು ನಮ್ಮಿಬ್ಬರ ಸಂಬಳ ಕೇಳಿ ತಿಳಿದುಕೊಂಡು, ಆ ಸಂಖ್ಯೆಯನ್ನು ಸೂತ್ರಕ್ಕೊಡ್ಡಿ, ಎಷ್ಟು ಬೆಲೆ ಬಾಳುವ ಮನೆ ತೆಗೆದುಕೊಳ್ಳಲು ನಾವು ಅರ್ಹರು ಎಂದು ವಿವರಿಸಿದಳು. ಆಗಲೇ ಗೊತ್ತಾಗಿದ್ದು ನನ್ನ ಇರಲೇಬೇಕಾದ ಅಂಶಗಳ ಪಟ್ಟಿ ನಮ್ಮಂತಹವರಿಗೆ ದಕ್ಕುವಂತಹದ್ದಲ್ಲ ಎಂದು. ನಮ್ಮ ಉಳಿತಾಯಕ್ಕೆ ಅನುಸಾರವಾಗಿ ಮನೆಯ ಒಟ್ಟು ಬೆಲೆಯ ೧೦% ಅಥವಾ ೨೦% ಹಣ ಕೊಟ್ಟಲ್ಲಿ ಮಿಕ್ಕಿದ್ದನ್ನು ಬ್ಯಾಂಕ್ ಸಾಲವಾಗಿ ಕೊಡುವುದೆಂದೂ, ೧೫, ೨೦, ೩೦ ವರ್ಷಕ್ಕೆ ಸಾಲ ಪಡೆಯಬಹುದೆಂದೂ ವಿವರಿಸಿದಳು. ನನ್ನ ತಲೆಗಂತೂ ಹತ್ತಲೇ ಇಲ್ಲಾ. ಮೊದಲಿಂದಲೂ ಅಂಕಿ ಸಂಖ್ಯೆಗಳೊಡನೆ ನನಗೆಂದೂ ಸಖ್ಯ ಬೆಸೆಯಲೇ ಇಲ್ಲ. 'Charles Schwab Financial'ನ Consultant ಮುಂದೆ 'Barter Economy' ಎಷ್ಟು ಸರಳ ಮತ್ತು ನ್ಯಾಯವಾದ ವ್ಯವಸ್ಥೆ ಎಂದು ಸಮರ್ಥವಾಗಿ ವಾದಿಸಿ, ಅವನ ನೀಲಿ ಕಣ್ಣು ಬಿಳಿಗುಡ್ಡೆಯಲ್ಲಿ ತೇಲಿ, ಹೊಂಗೂದಲಿನ ತಲೆ ತೂಗುವಂತೆ ಮಾಡಿದ ಹೆಗ್ಗಳಿಕೆ ನನ್ನದು. (ಈ ಬಾರ್ಟರ್ ಅರ್ಥ ವ್ಯವಸ್ಥೆಯಡಿಯಲ್ಲಿ ಎರಡು ದೇಶಗಳ ನಡುವೆ ವ್ಯಾಪಾರ ಹೇಗಿದ್ದೀತು? ಅಮೆರಿಕನ್ ವ್ಯಾಪಾರಿಗಳು, ಅರಬರ ಹತ್ತಿರ, ಒಂದು ಲಾರಿ ಶಸ್ತ್ರಾಸ್ತ್ರ ಕೊಡುತ್ತೇವೆ; ಎರಡು ಟ್ಯಾಂಕ್ ಕಚ್ಚಾ ಎಣ್ಣೆ ಕೊಡಿರಪ್ಪಾ ಎನ್ನಬಹುದೇ? ಒಂದು ಮಂಕರಿ ಯುರೇನಿಯಂ ಕೊಡ್ತೇವೆ, ನಾಲ್ಕು ಮಂಕರಿ ಸಾಫ್ಟ್‌ವೇರ್ ಕೋಡ್ ಕೊಡ್ತೀರಾ? ಎಂದು ನಾರಾಯಣಮೂರ್ತಿಯವರ ಜೊತೆ ವ್ಯವಹಾರ ಕುದುರಿಸಬಹುದೇ? ಚೀನಿಗಳ ಜೊತೆ?... ನೆನೆದಾಗ ನಗು ಬಂತು)

ಇಪ್ಪತ್ತಕ್ಕಿಂತಲೂ ಹೆಚ್ಚಿನ ಮೌಲ್ಯದ ಡಾಲರ್ ಬಿಲ್‌ನ ಮುಖವನ್ನು ನನ್ನ ಪರ್ಸ್ ಕಂಡಿದ್ದೇ ಇಲ್ಲ. ಮನೆ ಖರೀದಿಗೆ ಅಂಟಿದ ಡೌನ್ ಪೇಮೆಂಟ್, ಕ್ಲೋಸಿಂಗ್ ಕಾಸ್ಟ್, ಪ್ರಾಪರ್ಟಿ ಟ್ಯಾಕ್ಸ್, ಅಡ್‌ಮಿನಿಸ್ಟ್ರೇಟಿವ್ ಫೀ, ಎಲ್ಲವನ್ನೂ ಪಕ್ಕಕ್ಕೆ ಸರಿಸಿ, ಮನೆಗಳನ್ನು, ಮನೆ ಜನಗಳನ್ನು, ಆ ಜನರ ಜೀವನ ಕ್ರಮವನ್ನು ಬೆರಗುಗಣ್ಣಿಂದ ನೋಡುತ್ತಾ ಹೋದೆ. ಪುಟ್ಟ ಮನೆ ಬಿಟ್ಟು ಚಿಕ್ಕ ಮನೆ ತೆಗೆದುಕೊಳ್ಳುವವರು- ಚಿಕ್ಕ ಮನೆ ಮಾರಿ ದೊಡ್ಡ ಮನೆ ಕೊಳ್ಳುವವರು- ದೊಡ್ಡಮನೆ ಬಿಟ್ಟು ಮತ್ತೂ ದೊಡ್ಡ ಮನೆಗೆ ಹೊರಟವರು- ಆ ದೊಡ್ಡ ಮನೆಯನ್ನು ಖಾಲಿ ಮಾಡಿ ಮತ್ತೆ ಪುಟ್ಟ ಮನೆಗೆ ಹಿಂತಿರುಗುವವರು- ಎಲ್ಲರೂ ನೋಡಲು ಸಿಕ್ಕಿದ್ದರು. ನೋಡನೋಡುತ್ತಾ ಹೋದಂತೆ ಚಲಿಸುವ ಬಿಂದುವೊಂದು ಮೂಲ ಸ್ಥಾನದಿಂದ ಹೊರಟು ಮತ್ತೆ ಸ್ವಸ್ಥಾನ ಸೇರಿ ವೃತ್ತವೊಂದು ನಿರ್ಮಾಣ ಮಾಡಿದಂತೆನಿಸಿತು. ಕಣ್ಣು ಕಂಡಿದ್ದನ್ನು ಮನ ಉಪಸಂಹಾರ ಮಾಡಿದ್ದು ಹೀಗೆ: ಕಾಲೇಜು ಕಲಿಯುವ ಹೊತ್ತಿಗೆ ಅಪಾರ್ಟ್‌ಮೆಂಟಿನಿಂದ ಜೀವನ ಶುರುಮಾಡಿ, ಕೆಲಸ, ಮದುವೆ ಎಂದು ಜೀವನ ಭದ್ರತ

ಕಾಣುವ ವೇಳೆಗೆ ಕಾಂಡೊಮೇನಿಯಂ ಕೊಳ್ಳುವರು. ಮಕ್ಕಳಾಗುವ ವೇಳೆಗೆ ಟೌನ್ ಹೋಂ, ಮಕ್ಕಳು ಬೆಳೆಯುತ್ತಿದ್ದಂತೆ ಒಂಟಿ ಮನೆ (ಸಿಂಗಲ್ ಫ್ಯಾಮಿಲಿ), ಮಕ್ಕಳೆಲ್ಲಾ ಬೆಳೆದು ಕಾಲೇಜಿಗೆ ಹೋದ ನಂತರ ವಾಪಸ್ಸು ಕಾಂಡೋ/ ಅಪಾರ್ಟ್‌ಮೆಂಟ್! ಅದೇ ಘಳಿಗೆ ವಿನಾಕಾರಣವಾಗಿ ನೆನಪಾದದ್ದು, ವಿಜ್ಞಾನ ತರಗತಿಯಲ್ಲಿ ಕೃಷ್ಣವೇಣಿ ಟೀಚರ್, ಹಲಗೆಯ ಮೇಲೆ ನೇತು ಹಾಕಿದ್ದ ಪಟ- ಕಪ್ಪೆಯ ಜೀವನ ಚರಿತ್ರೆ. ವೃತ್ತಾಕಾರದಲ್ಲಿ ಡೊಂಕು ಬಾಣದ ಚಿತ್ರದೊಂದಿಗೆ ಮುದ್ರಿಸಲ್ಪಟ್ಟ ಚಿತ್ರ: egg mass-->tadpole-->tadpole with legs-->young frog-->adult frog.

ಕಲೋನಿಯಲ್, ವಿಕ್ಟೋರಿಯನ್, ರ್‍ಯಾಂಚ್, ಡುಪ್ಲೆಕ್ಸ್, ಸ್ಪ್ಲಿಟ್ ಲೆವೆಲ್... ಎಂತೆಂತಹದೋ ಶೈಲಿಯ ಮನೆಗಳು. ಕಡೆಕಡೆಗೆ ಎಲ್ಲಾ ಕಲಸು ಮೇಲೋಗರವಾಗಿ, ಆ ಮನೆಯ ಬಾಗಿಲು ಈ ಮನೆಯದಾಗಿ, ಈ ಮನೆಯ ಕಿಟಕಿ ಇನ್ನೊಂದರದಾಗಿ, ಇದರ ಮಲಗು ಮನೆ ಮತ್ತೊಂದರಂತೆ ಅನಿಸಿ, ಮನೆಗಳೆಲ್ಲಾ ಮಿದುಳಲ್ಲಿ ಮಿದ್ದಂತಾದವು. ಆದರೆ, ಎಂದೂ ಮರೆಯಲಾರದ ಒಂದು ಮನೆ ಎಂದರೆ, ನೇಪರ್‌ವಿಲ್ಲಿನ ಗ್ಯಾಬ್ರಿಯಲ್ ಮತ್ತು ಟಾಮ್ ಮನೆ. ಚಿಕಾಗೋ ನಗರ ವ್ಯಾಪ್ತಿಯ ಆಚೆಗಿದ್ದ ನೇಪರ್‌ವಿಲ್ ಆಗಷ್ಟೇ ಹೊಸದಾಗಿ ಬೆಳೆಯುತ್ತಿದ್ದ ನಗರ. ಮನೆ ವಿವರವಿದ್ದ ಫ್ಲೈಯರ್ ನೋಡಿಯೇ ನಾವಿಬ್ಬರೂ ಆ ಮನೆಯನ್ನು ಇಷ್ಟಪಟ್ಟೆವು. ಆ ಮುದ್ರಿತ ಪುಟದಲ್ಲಿ ಮನೆಯ ಪ್ರತಿ ವಿವರಗಳೂ ಇದ್ದವು. ಮನೆಯಲ್ಲಿ ನಾಲ್ಕು ಮಲಗುವ ಕೋಣೆಗಳಿದ್ದವು, ಜೊತೆಗೆ ೩ ಬಾತ್ ರೂಂಗಳು. ಮೊದಲ ಮಜಲಿನಲ್ಲಿ ಪೌಡರ್ ರೂಂ (ಅಂದರೆ, ಕಮೋಡ್+ಸಿಂಕ್. ಶವರ್ ಇಲ್ಲ). ಮನೆಯ ಜೊತೆಯಲ್ಲಿ ಬರುವ ಸಾಮಾನಿನ ಪಟ್ಟಿಯಲ್ಲಿ, ವಾಶಿಂಗ್ ಮೆಷಿನ್, ಡ್ರೈಯರ್, ಫ್ರಿಡ್ಜ್ ಇತ್ತು. ಇಡೀ ಮನೆಗೆ ಹೊಸದಾಗಿ ಕಾರ್ಪೆಟ್ ಹಾಕಲಾಗಿದೆ ಎಂದೂ ನಮೂದಿಸಿದ್ದರು. ಈ ಎಲ್ಲಾ ವಿವರಗಳೇ ನಾವು ಈ ಮನೆ ನೋಡಲು ಬರುವಂತೆ ಮಾಡಿದ್ದು.

ಆ ಮನೆ ನೋಡಲು ಬಂದಾಗ, ಗ್ಯಾಬಿ ಹೊರ ಹೊರಟಿದ್ದಳು. ಸಾಮಾನ್ಯವಾಗಿ ಮನೆ ಮಾಲೀಕರು, ಮನೆ ಕೊಳ್ಳುವವರು ನೋಡಬಂದಾಗ ಮನೆಯಲ್ಲಿರುವುದಿಲ್ಲ. ಗ್ಯಾಬಿ 'ಹಲೋ' ಹೇಳಿ ತುರ್ತಾಗಿ ಹೊರಟುಬಿಟ್ಟಳು. ಇದು ಸಾಮಾನ್ಯ ರೂಢಿಯಂತೆ. ಮನೆ ಕೊಳ್ಳುವವರು ಯಾವ ಸಂಕೋಚವೂ ಇಲ್ಲದೇ ಮನೆ ನೋಡಲಿ ಎಂದು ಮಾಲೀಕರು ಹೊರ ಹೋಗಿರುತ್ತಾರೆ. ಮನೆ ಸ್ವಚ್ಛವಾಗಿತ್ತು. ಒಳಗಡಿ ಇಡುತ್ತಿದ್ದಂತೆ ಪುಟ್ಟ ವರಾಂಡ. ಎಡಕ್ಕೆ ಲಿವಿಂಗ್ ರೂಂ, ಬಲಕ್ಕೆ ಫಾರ್ಮಲ್ ಡೈನಿಂಗ್ ರೂಂ. ವರಾಂಡಾದ ನೇರಕ್ಕೆ ಫ್ಯಾಮಿಲಿ ರೂಂ. ಅದರ ಬಲಕ್ಕೆ ಅಡುಗೆ ಮನೆ. ಲಿವಿಂಗ್ ರೂಂನಲ್ಲಿದ್ದ ಮಹಾಗನಿ ಮರದ ಪೀಠೋಪಕರಣ, ಕಿಟಕಿ ಪರದೆ ಗೋಡೆಯ ಮೇಲಿದ್ದ ಸುಂದರವಾದ ವರ್ಣಚಿತ್ರಗಳು ಆಕರ್ಷಕವಾಗಿದ್ದವು. ಅಲ್ಲಿದ್ದ ಗ್ರ್ಯಾಂಡ್ ಪಿಯಾನೋ ರೂಮಿಗೊಂದು ಕಳೆ ಕೊಟ್ಟಿತ್ತು. ಅಡುಗೆಮನೆ ಮತ್ತು ಊಟದ ಮನೆಯ ನಡುವೆ ಇದ್ದ ಕಿರು ಓಣಿಯ ಗೋಡೆಯ ಮೇಲೆ

ಮೇಟಿ ಬಟ್ಟೆಯಲ್ಲಿ ಕಸೂತಿ ಮಾಡಿದ ದೊಡ್ಡ ಚಿತ್ರವೊಂದಿತ್ತು. ಹಸಿರು ನೆಲ, ಬೆಟ್ಟ, ಆಕಾಶ, ಮೋಡ, ಮರ, ಗಿಡ, ಬಳ್ಳಿ, ಹೂ ಇರುವ ಇಷ್ಟು ನಾಜೂಕಾದ ಕಸೂತಿ ಚಿತ್ರ ಹೆಣೆಯಲು ಗ್ಯಾಬಿಗೆ ವರ್ಷವೇ ಹಿಡಿದಿರಬೇಕು ಅಂದುಕೊಂಡೆ. ನಮ್ಮ ಹೊಲಿಗೆ ಶಾರದಮ್ಮ ಮೇಡಂ ಗ್ಯಾಬಿ ಹೆಣೆದ ಚಿತ್ರ ನೋಡಿದ್ದಿದ್ದರೆ, ನಿಂತ ನಿಲುವಿಗೇ ನನ್ನ ಕಿವಿ ಹಿಂಡಿ, ನೀನೂ ಇದ್ದೀಯಾ ನೋಡು, ನಾಲ್ಕು ಸಾಲು ನೇರವಾದ ಹೆಣಿಗೆ ಹಾಕಲು ಒದ್ದಾಡುತ್ತೀ ಎಂದು ಬೆಂಚಿನ ಮೇಲೆ ನಿಲ್ಲಿಸಿಬಿಡುತ್ತಿದ್ದರೋ ಏನೋ.

ಗ್ಯಾಬಿ ಒಳ್ಳೆಯ ಗೃಹಿಣಿ ಎಂದು ಸಾರುವಂತಿತ್ತು ಆ ಮನೆಯ ಚಹರೆ. ಮಕ್ಕಳ ಕೋಣೆಯೊಳಗಿನ ಚಿತ್ರಗಳು, ಪ್ರಶಸ್ತಿ ಪತ್ರಗಳು, ಮೆಡಲುಗಳು, ಪಾರಿತೋಷಕಗಳು ಕೂಡಾ ಅದನ್ನೇ ಸಾರುವಂತಿದ್ದವು. ಬೇಸ್‌ಮೆಂಟಿನಲ್ಲಿ ಪೂಲ್ ಟೇಬಲ್ ಇತ್ತು. ಹೋಮ್ ಜಿಮ್ ಇತ್ತು. ಗೋಡೆಯ ಮೇಲೆ ಮಕ್ಕಳ ಚಟುವಟಿಕೆ ತೋರುವ, ಕುಟುಂಬದವರ ಪ್ರವಾಸದ, ಹಾಗೂ ಮಕ್ಕಳ ಶಾಲಾ, ಕಾಲೇಜ್ ಗ್ರಾಜುಯೇಷನ್‌ನ ವಿವಿಧ ಚಿತ್ರಪಟಗಳಿದ್ದವು. ಒಂದು ಚಿತ್ರದಲ್ಲಿ ಪುಟ್ಟ ಹುಡುಗ ಕಾಲಿಗೆ ಪ್ಲಾಸ್ಟರ್ ಹಾಕಿಕೊಂಡು, ಕ್ಲಚಸ್ ಸಹಾಯದಿಂದ ನಿಂತಿದ್ದ. ಮೂವರು ಹುಡುಗರಲ್ಲಿ ಯಾರಿರಬಹುದೋ ಗೊತ್ತಾಗಲಿಲ್ಲ. ದೊಡ್ಡ ಜಾರು ಬಾಗಿಲನ್ನು ಪಕ್ಕಕ್ಕೆ ಸರಿಸಿ ಹೊರಗೆ ಹೋಗಬಹುದಿತ್ತು. ಹೊರಗೆ ಟೊಮೇಟೋ, ಚಪ್ಪರದವರೆ, ಸೊಪ್ಪು, ಕುಂಬಳ, ಸೌತೆ ಬೆಳೆದಿದ್ದ ಕೈತೋಟ ಕಾಣುತ್ತಿತ್ತು. ತನ್ನ ಮನೆಯೊಡೆಯರ ಕಥೆಯನ್ನು ನಿಶ್ಶಬ್ದವಾಗಿ ಹೇಳುವ ಮನೆಯ ಶಬ್ದ ಕೇಳಿ ಏನೋ ವಿಚಿತ್ರ ಪುಳಕವೆನ್ನಿಸಿತು. ಮನೆಯ ಗೋಡೆಯ ಮೇಲೆ ನೆನಪುಗಳಿವೆ, ನೆಲದ ಮೇಲೆ ಅವರ ಹೆಜ್ಜೆಗಳಿವೆ. ಒಳವಲಯದಲ್ಲಿ ಅವರ ಬದುಕಿನ ಸುಖದ ಕೇಕೆ, ದುಃಖದ ಬಿಕ್ಕು, ಶಾಂತಿಯ ಭಾವ ಎಲ್ಲಾ ಆವರಿಸಿದೆಯಲ್ಲಾ ಎನ್ನಿಸಿತು. ಅಡುಗೆಮನೆಯಲ್ಲಿ ಕಟ್ಟೆಯ ಮೇಲೆ ಇಟ್ಟಿದ್ದ ಮೇಲು ಕುಡಿಕೆಯಲ್ಲಿ ಪಾಟ್‌ಪ್ಯೂರಿ ಬಿಸಿ ನೀರಿನಲ್ಲಿ ಮಿಂದು ಹಿತವಾದ ಘಮ ಸೂಸುತ್ತಿತ್ತು. ಕುಡಿಕೆಯ ತಳದಲ್ಲಿ ಮೇಣದ ದೀಪವೊಂದು ಶಾಂತವಾಗಿ ಉರಿಯುತ್ತಿತ್ತು. ಮನೆ ನೋಡಿ ಹೊರಬರುವಾಗ ಕಣ್ಣು ತುಂಬಿದ ಚಿತ್ರವೆಂದರೆ, ಮನೆಯವರೆಲ್ಲಾ ಕ್ರಿಸ್ಮಸ್ ಮರದ ಹಿನ್ನೆಲೆಯಲ್ಲಿ ತೆಗೆಸಿಕೊಂಡಿದ್ದ ಭಾವಚಿತ್ರ. 'ಗ್ಯಾಬಿ ಮತ್ತು ಟಾಮ್ ಮನೆಯನ್ನು ಮಾರಿ ಈ ಚಳಿ ಊರು ಬಿಟ್ಟು, ಬೆಚ್ಚಗಿರುವ ಫ್ಲೋರಿಡಾದಲ್ಲಿ ಸೀನಿಯರ್ಸ್ ಹೌಸಿಂಗ್ ಟೌನ್‌ನಲ್ಲಿ ವಾಸಿಸಲು ಹೋಗುತ್ತಿದ್ದಾರಂತೆ' ಎಂದು ಏಜಂಟಿಣಿ ಹೇಳಿದಳು. ಗ್ಯಾಬಿಯನ್ನು ಅಗಲಲಿರುವ ಮನೆಯನ್ನು ಆಲಂಗಿಸಬೇಕೋ ಅಥವಾ ಬದುಕಿನ ಎಲ್ಲಾ ಸುಖದ ನೆನಪನ್ನು ಅಗಲಿ ಹೊರಟ ಗ್ಯಾಬಿಯನ್ನೋ? ತಿಳಿಯಲಿಲ್ಲ.

ಇಪ್ಪತ್ತು ವರ್ಷಗಳ ನಂತರ ಗ್ಯಾಬಿ, ಈ ಬೆಳಗು ನೆನಪಾಗಿದ್ದು ಮನದಲ್ಲೊಂದು ನವಿರಾದ ಕಂಪನ ತರಿಸಿತು. ಅಂದು ಅವಳು ನಿಂತ ಸ್ಥಾನದಲ್ಲಿ ನಾನು ನಿಂತಿದ್ದೇನಾ? ಅವಳೆಲ್ಲಿರಬಹುದು? ಟಾಮ್ ಹೇಗಿದ್ದಾನು? ಮಕ್ಕಳು ಅವಳನ್ನು ಬಂದು ನೋಡುತ್ತಾರೋ

ಇಲ್ಲವೋ? ಅವಳ ಈಚಿನ ಕ್ರಿಸ್ಮಸ್ ಮರದ ಹಿನ್ನಲೆಯಲ್ಲಿ ತೆಗೆದ ಫೋಟೋಗಳಲ್ಲಿ, ಅವಳ ಸೊಸೆ, ಅಳಿಯ, ಮಕ್ಕಳು ಮೊಮ್ಮಕ್ಕಳು ಇರಬಹುದಾ? ಖಂಡಿತಾ ಸುಖವಾಗಿರಬಹುದು ಎಂಬ ಭಾವ ಬಲಿತು, ಮನಸ್ಸಿಗೆ ನೆಮ್ಮದಿ ಎನ್ನಿಸಿತು. ಯಾಕೋ ಅವಳು ಒಂಟಿ ಎಂದು ಕಲ್ಪಿಸಿಕೊಳ್ಳಲು ಮನ ಬರಲಿಲ್ಲ.

ನನ್ನ ಪಟ್ಟಿಯ, ಇರಲೇಬೇಕಾದ ಅಂಶ ತಲೆಬರಹವಡಿಯಲ್ಲಿದ್ದ ಅಂಶಗಳೆಲ್ಲವೂ ಈ ಮನೆಯಲ್ಲಿವೆ. ಎತ್ತರದ ಸೂರಿಗಂಟಿದ ಕಿಟಕಿಯಿಂದ ನೀಲಿ ಆಕಾಶ, ಬಿಳೀ ಮೋಡ, ಸೂರ್ಯ, ಚಂದ್ರ ಎಲ್ಲರೂ ಇಣುಕು ಹಾಕುತ್ತಾರೆ. ಮನೆಯ ಹಿಂದೆ ತೊರೆ ಇಲ್ಲದಿದ್ದರೂ ಕಾಲ್ನಡುಗೆಯ ಅಂತರದಲ್ಲಿ ಹಸಿರಾದ ಹುಲ್ಲುಗಾವಲು ಹಾಗೂ ಪುಟ್ಟ ಕೊಳವೂ ಇದೆ. ಕಣ್ಣಿಗೆ ಕಾಣುವ ಅಂತರದಲ್ಲಿ ಕಣಿವೆ ಇದೆ, ಬೆಟ್ಟವಿದೆ. ಆದರೆ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ದೂರದಲ್ಲಿದ್ದಾರೆ, ಒಡಹುಟ್ಟಿದವರು ಮತ್ತು ಹೆತ್ತವರು ಇನ್ನೂ ದೂರದಲ್ಲಿದ್ದಾರೆ. ಇದನ್ನೆಲ್ಲಾ ನೆನೆಯುತ್ತಾ ಮನೆಯನ್ನು ಮೊದಲ ಬಾರಿ ನೋಡುವಂತೆ ಪ್ರತೀ ಕೋಣೆಗಳ ಒಳ ಹೊರಗೆಲ್ಲಾ ಸುತ್ತಾಡಿದೆ. ಮಕ್ಕಳಿಬ್ಬರ ಕೋಣೆಗಳೂ ನನ್ನಂತೆಯೇ ಅವರಿಗಾಗಿ ಶಿಸ್ತಾಗಿ ಕಾಯುತ್ತಿವೆ ಎನ್ನಿಸಿತು. ಊರಲ್ಲೂ ಹೀಗೆ ಅಮ್ಮ ನನ್ನ ಕೋಣೆಯನ್ನು ಕಾಯ್ದಿಟ್ಟಿದ್ದರು- ನನ್ನ ಬಟ್ಟೆ, ಪುಸ್ತಕ, ಫೋಟೋ, ನಾನು ಸಂಗ್ರಹಿಸಿದ್ದ ಚಿತ್ರ, ಪ್ರಶಸ್ತಿ ಪತ್ರ, ಪಾರಿತೋಷಕ, ಸುದ್ದಿ ಚಿತ್ರದ ಪತ್ರಿಕೆಗಳ ತುಣುಕು... ಅಂದು ಅಮ್ಮ, ಅಪ್ಪಾಜಿಯ ಕಣ್ಣಲ್ಲಿ ತುಂಬಿದ್ದ ನೀರು ಇಂದು ನನ್ನ ಕೆನ್ನೆಯನ್ನು ಒದ್ದೆ ಮಾಡಿತ್ತು.

ಮನದೊಳಗೆ ಸುಳಿದಾಡುವ ಮಕ್ಕಳ ಇರವು ಅವರ ಒಡನಾಟದ ನೆನಪುಗಳನ್ನು ಮನೆಯಲ್ಲೆಲ್ಲಾ ಚೆಲ್ಲಾಡಿತು. ಮಳೆಯಲ್ಲಿ ನೆಂದು ಹುಲ್ಲಿನ ಮೇಲೆ ಹೊರಳಾಡಿದ ದಿನಗಳು, ಹತ್ತಿರದ ಗುಡ್ಡಕ್ಕೋಡಿ ಸ್ನೋ ಸ್ಲೈಡಿನಲ್ಲಿ ಜಾರಿದ ಘಳಿಗೆಗಳು, ದೊಡ್ಡ ಸ್ನೋ ಮ್ಯಾನ್ ಮಾಡಿದ ಚಳಿಗಾಲ, ಗರ್ಲ್ ಸ್ಕೌಟ್ ಕ್ಯಾಂಪಿಂಗ್ ವಾರಗಳು, 'ಸ್ಲೀಪ್ ಓವರ್' ಹುಟ್ಟುಹಬ್ಬದ ಪಾರ್ಟಿಗಳು, ಫೇಸ್ ಪೈಂಟಿಂಗ್, ಡ್ರೆಸ್ ಅಪ್ ರಾತ್ರಿ ವಿನೋದಗಳು, ಶ್ಯಾನಂಡೋವಾ ನದಿಯ ಮೇಲಿನ ರ್‍ಯಾಫ್ಟಿಂಗ್ ಸಾಹಸ, ಸ್ಕೂಲ್ ಪ್ರಾಜಕ್ಟ್‌ಗಳು, ಶಾಲೆಗೆ ಹಣ ಸಂಗ್ರಹಿಸಲು ಮಾಡಿದ ಕಾರ್ ವಾಷ್‌ಗಳು, ಪಿಯಾನೋ ರೆಸೈಟಲ್‌ಗಳೂ... ಹೇಳಿದಷ್ಟೂ ಮುಗಿಯದೇ ಉಳಿದು ಬಿಡುವ ನೆನಪುಗಳ ಪಟ್ಟಿ.

ವಿಚಿತ್ರ ಅನಿಸುತ್ತದೆ. ಮಾನಸಿಕವಾಗಿ ಊರಲ್ಲಿದ್ದೇನೆ ಎಂದು ನನ್ನ 'ಎನ್‌ಆರ್‌ಐ' ಲೇಬಲ್ಲನ್ನು ನಿರಾಕರಿಸುತ್ತೇನೆ. ದಿನಕ್ಕೆ ಹಲವಾರು ಬಾರಿ ಫೋನ್ ಮಾಡುವ ಮಕ್ಕಳು, ಮೇಲಿಂದ ಮೇಲೆ ಬಂದು ಹೋಗುವ ಬಂಧು ಬಳಗ. ಈ ಎಲ್ಲದರ ಮಧ್ಯೆ ನಾನು ಒಂಟಿಯಾಗಿರುವ ಹೊತ್ತೇ ಇಲ್ಲದ್ದಿದ್ದರೂ 'ಎಂಟಿ ನೆಸ್ಟರ್' ಲೇಬಲ್ಲನ್ನು ನಿರಾಕರಿಸಲಾಗದೆ ನಿಸ್ಸಹಾಯಕಳಾಗಿ ನಿಲ್ಲುವೆ ಮಕ್ಕಳನ್ನು ನೆನೆದು.

●

ಅಮ್ಮ ಎಂದರೆ ತುಂಬಿದ ಕರಡಿಗೆ

-ಶಾಂತಲಾ ಭಂಡಿ

ಅಮ್ಮನಿಗೆ ತನ್ನ ಮನೆಯ ಅಡುಗೆಮನೆಯೆಂದರೆ ಅರಮನೆ. ಅದರ ಆಚೆಗಿನದೆಲ್ಲ ಬಿಡುವಿನ ವೇಳೆ. ಹಾಗಂತ ಅಮ್ಮ ಅಡುಗೆಮನೆಯಲ್ಲಿಯೇ ಇರುತ್ತಾಳೆ ಅಂತಲ್ಲ. ಮನೆಯ ಎಲ್ಲೆಡೆ ಅಮ್ಮ ಇರುತ್ತಾಳೆ. ಊರಿಗೆ ಹೋದರೆ ಅಮ್ಮ ಒಂದಿಷ್ಟು ಸಿಹಿ-ಖಾರದ ತಿಂಡಿ, ತಿನಿಸು, ಉಪ್ಪಿನಕಾಯಿ, ಹಪ್ಪಳ, ಸಂಡಿಗೆ, ಸಾಂಬಾರದ ಪುಡಿ, ಮಾವಿನಕಾಯಿಯದೋ ಅಥವಾ ಹಣಸೇ ಕಾಯಿಯದೋ ತೊಕ್ಕು, ಪುಳಿಯೋಗರೆ ಗೊಜ್ಜು ಮುಂತಾದವು ಗಳನ್ನು ಕೊಡದೇ ಕಳುಹಿಸುವುದೇ ಇಲ್ಲ (ಎಲ್ಲ ಅಮ್ಮಂದಿರ ಹಾಗೆಯೇ ನನ್ನಮ್ಮ ಕೂಡ). ಇಷ್ಟೆಲ್ಲ ಕೊಟ್ಟಾದರೂ ಹೊರಟು ನಿಂತ ಗಳಿಗೆಯಲ್ಲಿ ಅಮ್ಮ, 'ಹಿತ್ತಲಲ್ಲಿ ಹಣಸೆಗಿಡದ ತುಂಬ ಹೂವಿದ್ದು, ಇನ್ನು ಹದಿನೈದ್ದಿನ ನೀ ಉಳ್ದಿದ್ರೆ ಎಳೇ ಹಣ್ಸೇಕಾಯಿ ಕೊಯ್ದು ಚಟ್ನಿ ಮಾಡಿಕೊಡ್ತಿದ್ದೆ' ಅಂತಲೋ, 'ಮಾವಿನ್ ಗಿಡದಲ್ಲಿ ಈ ಸಲ ಸುಮಾರಿನಂಗೆ ಕಸ್ತ ಬಂದಿತ್ತು, ಸ್ವಲ್ಪ ದಿನಕ್ಕೆ ಕಾಯಾಗ್ತಿತ್ತು, ಮತ್ತೊಂದು ಸ್ವಲ್ಪ ದಿನಕ್ಕೆ ಹಣ್ಣೂ ಆಗ್ತು, ತಿಂಬವ್ವು ಮಾತ್ರ ಯಾರೂ ಇರದಿಲ್ಲೆ ಆವಾಗ' ಅಂತಲೋ ಕಣ್ಣುತುಂಬಿ ಹೇಳಿದರೆ ತಿಂಗಳುಗಳ ಹಿಂದೆಯೇ ಬುಕ್ ಆದ ವಿಮಾನದ

ಟಿಕೆಟನ್ನು ಪರಪರ ಪರಿಮುಹಾಕಿಬಿಡಬೇಕು ಅನ್ನಿಸುವಂಥ ಊರಿನ ವ್ಯಾಮೋಹ ಕಾಡುವುದಿದೆ. ವರ್ಷಕ್ಕೊಂದೇ ಬಾರಿ ಎರಡು ತಿಂಗಳು ರಜ ಕೊಡುವ ಮಗನ ಶಾಲೆ ಮಗನಿಗಿಂತ ನನಗೇ ಜಾಸ್ತಿ ಬೋರೆನಿಸುತ್ತದೆ.

ದೂರದ ಈ ಊರಿನಿಂದ ಅಮ್ಮನಿಗೆ ಫೋನಾಯಿಸಿ, 'ಅಮ್ಮಾ ಇಲ್ಲಿಂದ ನನ್ನ ಫ್ರೆಂಡ್ ಒಬ್ರು ಊರಿಗೆ ಬರಪ್ರಿದ್ರು, ನಿಂಗೆ ಎಂತ ಕಳಿಸ್ಲಿ?' ಅಂತ ಅಮ್ಮನನ್ನು ಕೇಳಿದರೆ ಅಮ್ಮ ಹೇಳುವುದಿಷ್ಟೇ... 'ನೀ ಹೋಪಕಾದ್ರೆ ಡಬ್ಬಿ ಕಳ್ಸಿದಿದ್ಹಲೆ ಪುಟ್ಟಾ... ಅದು ಖಾಲಿ ಆದ್ರೆ ಕಳ್ಸಿಕೊಡ್ತ್ಯಾ?' ಅಂತ ಮುಗ್ಧಳಂತೆ ಕೇಳುವ ಅಮ್ಮನನ್ನು ಕಂಡು ಬೇಸರವಾದರೂ ಅಮ್ಮನ ಡಬ್ಬಿಯ ಮೋಹಕ್ಕೆ ಮನಸ್ಸು ತುಂಬಿ ಬರುತ್ತದೆ. ಇಷ್ಟು ದೂರದಿಂದ ಇಷ್ಟು ದೊಡ್ಡ ಬ್ಯಾಗಿನಲ್ಲಿ ಇಷ್ಟೇ ತೂಕ ತೆಗೆದುಕೊಂಡು ಹೋಗಬೇಕಾಗುತ್ತದೆ. ತಾನು ತುಂಬಿಸಿಕೊಟ್ಟ ಡಬ್ಬಿಗಳನ್ನ ಖಾಲಿ ಮಾಡಿ ಹಾಗೆಲ್ಲ ಕಳುಹಿಸುವುದು ಸಾಧ್ಯವಿಲ್ಲದ್ದು ಅಂತ ಗೊತ್ತಿರುವ ಅಮ್ಮ ಹೀಗೆ ಹೇಳುವ ಕಾರಣವಿಷ್ಟೇ- ತಾನು ಕಳುಹಿಸಿದ ಡಬ್ಬಿಯನ್ನೊಮ್ಮೆ ಹೀಗೆ ನೆನಪಿಸಿಕೊಂಡು ಸಂಭ್ರಮಿಸುತ್ತಾಳಿರಬೇಕು ಅಂತ ನಾನು ಖಚಿತವಾಗಿ ನಂಬಿದ್ದೇನೆ. ಹೀಗೆ ಹೀಗೆಲ್ಲಾ ಅಮ್ಮನ ಕರಡಿಗೆಯ ಮೇಲಿನ ಪ್ರೀತಿ. ಡಬ್ಬಿಗಳು ಅಮ್ಮನ ದತ್ತು ಮಕ್ಕಳು. ಅದೇ ಕಾರಣಕ್ಕೆ ಅಮ್ಮನಿಗೆ ಕರಡಿಗೆಯ ಮೇಲಿನ ಪ್ರೀತಿ ಮಾತ್ರ ಕಡಿಮೆಯಾಗುವುದೇ ಇಲ್ಲ.

ಒಂದೊಂದು ಸಲ ಮಾತನಾಡುವಾಗ ಅಮ್ಮ ಹೀಗೆ ಕೇಳಿದ್ದಿದೆ, 'ಪುಟ್ಟಾ... ಊರಿಗೆ ಯಾವಾಗ ಬರ್ತ್ರೆ?'. ಪಾಪ ಅಮ್ಮಂಗೆ ನನ್ನ ಕಾಣದೇ ಜಾಸ್ತೀನೇ ಬೇಜಾರು ಬಂದಿರಬೇಕು, ಅದಕ್ಕೆ ಇಷ್ಟು ಬೇಗ ಮತ್ತೆ ಈ ಪ್ರಶ್ನೆ ಕೇಳ್ತಿದ್ದಾಳೆ ಅಂತ ನಾನು ನೊಂದುಕೊಂಡು 'ವರ್ಷವೇ ಆಗ್ಬಹುದು ಮತ್ತೆ ಬರೋಕೆ' ಅಂದಾಗ... 'ಹಂಗಾದ್ರೆ ಕರಡಿಗೆ ಹ್ಯಾಂಗೆ ಕಳಸ್ತೆ ಮಗಾ?' ಅಂತ ಅಮ್ಮ ಪ್ರಶ್ನಿಸಿ, ಅಮ್ಮನ ಈ ಪ್ರಶ್ನೆಗೆ ನಾನು ಬೆರಗಾಗಿದ್ದೂ ಇದೆ. ಇದೇ ಕಾರಣಕ್ಕೆ ಕೆಲವೊಮ್ಮೆ ನನಗೆ ಅನ್ನಿಸುತ್ತದೆ ಏನೆಂದರೆ ಅಮ್ಮ ಅಂದರೆ ನನಗೆ ತುಂಬಿದ ಡಬ್ಬಿ. ನಾನೆಂದರೆ ಅಮ್ಮನ ಖಾಲಿ ಕರಡಿಗೆ ಅಂತ.

ಅಮ್ಮನಿಗೆ ಈ ಸ್ಟೀಲು ಡಬ್ಬಿಗಳ ಕ್ವಾಲಿಟಿಯ ಬಗ್ಗೆ ನನಗಿಂತ ಹೆಚ್ಚು ಗೊತ್ತಿದೆ ಅನ್ನಿಸುವಾಗಲೆಲ್ಲಾ ಅಮ್ಮ ನನಗಿಂತ ಹೆಚ್ಚು ಬುದ್ಧಿವಂತಳು ಅನ್ನಿಸುತ್ತಾಳೆ. ಇದಲ್ಲದೇ ಉಳಿದ ಡಬ್ಬಿಗಳ ಬಗ್ಗೆಯೂ ಅಮ್ಮನಲ್ಲಿ ಮಾಹಿತಿ ಸಿಗುತ್ತದೆ. ಅಮ್ಮನಿಗೆ ಗೊತ್ತಿದೆ ಯಾವ ಡಬ್ಬಿ ಫ್ರಿಜ್ಜಿಗೆ ಸೇಫು, ಹುಳಿ ಅಥವಾ ಹುಣಸೇ ಹಣ್ಣು ತುಂಬಿಡುವುದಕ್ಕೆ ಯಾವ ಡಬ್ಬಿ ಲೇಸು, ಬೆಲ್ಲಕ್ಕೆ ಇಂಥದೇ ಕರಡಿಗೆಯಾದರೆ ಒಳಿತು, ಎಂಬುದು. ಸಕ್ಕರೆ ಹಾಕಿಟ್ಟು ಅಮ್ಮನ ಹಳೇ ಸ್ಟೀಲು ಡಬ್ಬಿ ಒಡೆದು ಹೋದಾದ ಮೇಲೆ ಅಮ್ಮ ಎರಡು ದಿನ ಮೌನವಾಗಿ ರೋದಿಸಿದ್ದನ್ನು ನಾನು ಕಂಡಿದ್ದೇನೆ. ಅಪ್ಪನ ಚಹಕ್ಕೋ, ಅಮ್ಮನ ಕಾಫಿಗೋ, ನನ್ನ ಹಾಲಿಗೋ ಸಕ್ಕರೆ ಹಾಕುವಾಗ ಅಮ್ಮ ಕರಡಿಗೆಯ ಬಗೆಗೆ ಅಪಾರ ಸಂತಾಪ ಸೂಚಿಸಿ ಮಾತನಾಡಿದ್ದನ್ನು ಕಂಡು ಆಗ ನನಗೂ, ಕರಡಿಗೆಯ ಉಪಯೋಗವೇ ತಿಳಿದಿರದ ಆ ಪುಟ್ಟ ವಯಸ್ಸಿನಲ್ಲೂ, ಬೇಸರವಾಗಿತ್ತು.

ಕೆಲ ವರ್ಷಗಳ ಹಿಂದಿನ ಡಬ್ಬಿ ಕಥೆ ನೆನಪಾಗ್ತಿದೆ. ಏನೆಂದರೆ ಅಮ್ಮ ಯಾರಿಗೋ ಏನೋ ತಿಂಡಿ ತುಂಬಿಕೊಟ್ಟಿದ್ದ ಕರಡಿಗೆಯೊಂದು ವಾಪಸ್ಸು ಬಾರದೇ ದಿನಾ ವಾರ್ತಾ ಪ್ರಸಾರ ಮುಗಿದ ನಂತರ ನಾನು ಅಪ್ಪ ಅಮ್ಮ ಊಟಕ್ಕೆ ಕುಳಿತ ಮೇಲೆಯೂ ನಾನು ಮತ್ತು ಅಪ್ಪ ಅಮ್ಮನ ಕಳೆದುಹೋದ ಕರಡಿಗೆಯ ಬಗೆಗಿನ ಮರುಪ್ರಸಾರವನ್ನು ಆ ಕರಡಿಗೆ ಸಿಗುವ ತನಕವೂ ಆಲಿಸಬೇಕಾದ ಪರಿಸ್ಥಿತಿ ಬಂದೊದಗಿ ನಾನು ಮತ್ತು ಅಪ್ಪ ಮುಖ ಮುಖ ನೋಡಿಕೊಂಡು ನಗಲೂ ಆಗದೇ ಸುಮ್ಮನಿರಲೂ ಆಗದೇ ಚಡಪಡಿಸುತ್ತಿದ್ದ ಗಳಿಗೆ ಹಳೆಯ ದಿನಚರಿ ಪಟ್ಟಿಯಲ್ಲಿ ದಾಖಲಾಗಿದೆ.

ನಾನಾಗ ಚಿಕ್ಕವಳಿದ್ದೆ. ಅಮ್ಮ ತೊಳೆಯಲಿಕ್ಕಾಗಿ ಕೆಲಸದವಳಿಗೆ ಕರಡಿಗೆಯೊಂದನ್ನು ಕೊಟ್ಟಿದ್ದಳು. ಅದು ಹೇಗೋ ಆ ಕರಡಿಗೆ ಕಾಣೆಯಾಗಿತ್ತು. ಆ ಕರಡಿಗೆ ಅದೇ ದಿನವೇ ಕಾಣೆಯಾಗಿತ್ತು ಅನ್ನುವುದಕ್ಕಾಗಲೀ ಅಥವಾ ಕೆಲಸದವಳೇ ಅದನ್ನು ತೆಗೆದುಕೊಂಡಿದ್ದಳು ಅನ್ನುವುದಕ್ಕಾಗಲೀ ಯಾವುದೇ ಸಮಂಜಸವಾದ ಪುರಾವೆ ಇರಲಿಲ್ಲ. ಅದೇ ಸಮಯಕ್ಕೆ ರಾಜೀವ್ ಗಾಂಧಿಯವರ ಹತ್ಯೆ ನಡೆದಿದ್ದು ಆ ದಿನದ ಸುದ್ದಿಯಾಗಿತ್ತು. ಕರಡಿಗೆ ಪ್ರಿಯ ಅಮ್ಮನ ಕರಡಿಗೆ ಪ್ರಿಯ ಗೆಳತಿಯರೂ ಸಹ ರಾಜೀವ ಗಾಂಧಿಯವರ ಹತ್ಯೆಯ ವಿಚಾರದ ಸುತ್ತಲೇ ಮಗ್ನರಾಗಿದ್ದರಿಂದ ಅಮ್ಮನ ಕಾಣೆಯಾದ ಕರಡಿಗೆಯ ವಿಷಯ ಯಾರಿಗೂ ಅಷ್ಟು ವಿಚಾರಿಸುವಂಥ ವಿಷಯವಾಗಿ ಅನ್ನಿಸಲೇ ಇಲ್ಲವಿರಬೇಕು. ಅಮ್ಮ ಮಾತ್ರ ರಾಜೀವ್ ಗಾಂಧಿಯವರ ಬಗ್ಗೆಯೂ ಮರುಗುತ್ತ ಕಾಣೆಯಾದ ಕರಡಿಗೆಯ ಬಗ್ಗೆಯೂ ಚಿಂತಿಸುತ್ತ, ಮನೆಯ ಕಪಾಟು, ನಾಗಂತಿಗೆ, ಮಾಡಗುಣಿ, ಕಲ್ಬಿಗಳನ್ನೆಲ್ಲ ಇನ್ನೊಮ್ಮೆ ಕೂಲಂಕಷವಾಗಿ ಹುಡುಕಾಡುತ್ತ ಮತ್ತಷ್ಟು ಬಿಜಿಯಾದ ಹಾಗೆ ಅನ್ನಿಸಿತ್ತು. ಟೀವಿಯಲ್ಲಿ ಕೊಲೆಗಾರರನ್ನು ಪತ್ತೆ ಹಚ್ಚಿದ್ದಲ್ಲದೇ, 'ಈಕೆ ಶುಭಾ, ಮತ್ತು ಈತ ಶಿವರಸನ್' ಅಂತ ಅವರ ಫೋಟೋ ಸಮೇತ ಅವರ ವಯಸ್ಸು ಮತ್ತು ಚಹರೆಗಳನ್ನು ವಿವರಿಸುತ್ತಿದ್ದರು. ಅದು ಮುಗಿದ ತಕ್ಷಣವೇ ಅಮ್ಮನಿಗೆ ತನ್ನ ಕಳೆದು ಹೋದ ಕರಡಿಗೆಯ ನೆನಪು ಮತ್ತೆ ಕಾಡುತ್ತಿತ್ತು. 'ಎಷ್ಟು ಘನಾ ಕರಡಿಗೆ, ಊರೂಟಗೆ ಉದ್ದ ಶೇಪಿನ ಕರಡಿಗೆ, ಅದಕ್ಕೆ ಗುಬುಟೆ ಇದ್ದಿದ್ದ ಸೇಬುಹಣ್ಣಿನ್ ಆಕಾರದ್ ಮುಚುಕುಲು, ಘನಾ ಕರಡಿಗೆ ಆಗಿತ್ತು, ರಾಜೀವ್ ಗಾಂಧಿ ಕೊಲೆ ಮಾಡಿದವ್ವು ಸಿಕ್ಕಿದ್ರೂ ಯನ್ನ ಕರಡಿಗೆ ಶಿಗದ್ ಸುಳ್ಳು. ಕೆಲಸದವ್ರ ಹತ್ರ ಮಾತ್ರ ಘನಾ ಪಾತ್ರೆ ಎಂತುದೂ ತೊಳೆಯಲ್ಲೆ ಕೊಡಲ್ಲಾಗ' ಇವಿಷ್ಟನ್ನೂ ಹೇಳಿಯೇ ಅಮ್ಮ ತನ್ನ ಜಾಹೀರಾತನ್ನು ಮುಗಿಸುತ್ತಿದ್ದಳು.

ಅಮ್ಮನ ಸೀರೆಗಳು ಅವಳ ಗೋಡ್ರೇಜ್ ಕಪಾಟಿನಲ್ಲಿ ಕೆಲವಷ್ಟು ಹ್ಯಾಂಗರಿನಲ್ಲಿರುತ್ತಿದ್ದವು. ಕೆಲವನ್ನು ಅಮ್ಮ ಹೊಸಾಬಟ್ಟೆ ತಂದ ಗಜಾನನ, ಗಂಧರ್ವ, ಡ್ರೆಸ್ ಲ್ಯಾಂಡ್, ಇನ್ನೂ ಮುಂತಾದ ಲೇಬಲ್ಲುಗಳಿರುವ ಕವರಿನಲ್ಲಿ ಮಡಚಿಟ್ಟಿರುತ್ತಿದ್ದಳು. ಇದರಿಂದಾಗಿ ನಾವು ತಿಳಿಯಬಹುದಾದ ಅಂಶವೆಂದರೆ ಅಮ್ಮನ ಪ್ರೀತಿ ಡಬ್ಬಿಗಳಿಗೆ ಮಾತ್ರ ಸೀಮಿತವಾಗಿರದೇ

ಕವರಿನ ಪರಿಧಿಯೊಳಗೂ ಇತ್ತು ಎನ್ನುವುದು. ತಿರುಗಾಟಕ್ಕೆ ಹೋಗಬೇಕಾದಾಗ ಅಮ್ಮ ಕಪಾಟಿನ ಎರಡೂ ಬಾಗಿಲುಗಳನ್ನು ತೆರೆದಿಟ್ಟುಕೊಂಡು ಯಾವ ದಿನ ಯಾವ ಸೀರೆ ಉಡುವುದು ಎಂಬ ಗೊಂದಲದಲ್ಲಿ ತನ್ನ ಉದ್ದನೆಯ ಜಡೆ ಹೊತ್ತ ಪುಟ್ಟ ತಲೆಯನ್ನು ಸುಮ್ಮಸುಮ್ಮನೆ ಒಂದೇ ಬೆರಳಿನಲ್ಲಿ ಕೆರೆದೂ ಕೆರೆಯದ ಹಾಗೆ ಕೆರೆದುಕೊಳ್ಳುತ್ತಿದ್ದಳು. ಆಗ ಅಮ್ಮ ಈ ಲೋಕದ ಪರಿವೆಯಲ್ಲಿ ಅಷ್ಟಾಗಿ ಇರುತ್ತಿರಲಿಲ್ಲ ಎಂಬುದಕ್ಕೆ ಸಾಕ್ಷಿಯೆಂದರೆ ನಾನೇನೇ ಮಾಡಿದರೂ ಅಮ್ಮನಿಗೆ ಆ ಹೊತ್ತಿನಲ್ಲಿ ಲಕ್ಷ್ಯವಿರುತ್ತಿರಲಿಲ್ಲ. ಇಂಥ ವಿಶೇಷ ದಿನಗಳಲ್ಲಿ ಮಾತ್ರ ಅಮ್ಮನ ಕಪಾಟೆಂಬ ಗರ್ಭಗುಡಿಯ ಬಾಗಿಲು ಹೀಗೆ ನನ್ನಂಥ ಭಕ್ತರಿಗಾಗಿ ತೆರೆದುಕೊಳ್ಳುತ್ತಿತ್ತು. ನಾನು ಅಮ್ಮನ ಕಪಾಟಿನಿಂದ ದೂರವೇ ಕುಳಿತು ಅಮ್ಮನೆಂಬ ಅರ್ಚಕನ ಈ ಪೂಜೆಯನ್ನು ವೀಕ್ಷಿಸುವ ಅವಕಾಶವಿರುತ್ತಿತ್ತು. ಇದನ್ನಲ್ಲದೇ ಕಪಾಟಿನ ಹತ್ತಿರ ಹೋಗಿ ಕಪಾಟಿನಲ್ಲಿರುವ ಯಾವುದಾದರೂ ವಸ್ತುವಿಗೆ (ಅಮ್ಮನ ಆಸ್ತಿ ಅಂತಲೇ ಹೇಳುವುದು ಸಮಂಜಸ) ಕೈ ಹಾಕಿದೆನೋ ಪೂಜೆ ಮುಗಿಯದೆಯೇ ಮಂತ್ರಾಕ್ಷತೆ ಮತ್ತು ಪ್ರಸಾದಗಳೆರಡೂ ನನಗೆ ಪ್ರಾಪ್ತವಾಗುತ್ತಿದ್ದವು.

ಇನ್ನೊಂದು ವಿಷಯ ನಾನು ಗಮನಿಸಿದ್ದೆಂದರೆ ಅಮ್ಮ ಕೆಲವು ಸೀರೆಗಳನ್ನು ಹ್ಯಾಂಗರಿನಲ್ಲಿಯೂ, ಇನ್ನು ಕೆಲವನ್ನು ಕವರಿನಲ್ಲಿಯೂ ಮತ್ತು ಕೆಲವನ್ನು ಮೆತ್ತನೆಯ ಬಿಳಿಯ ತೆಳ್ಳನೆಯ ಪಂಚೆಯಲ್ಲಿಯೋ ಅಥವಾ ಬಟ್ಟೆಯಲ್ಲಿಯೋ ಸುತ್ತಿಟ್ಟಿರುತ್ತಿದ್ದಳು. ನನಗೆ ಇದ್ಯಾಕೆ ಹೀಗೆ ಎನ್ನುವುದು ಗೊತ್ತಾಗದೇ ಒಮ್ಮೆ ಅಪ್ಪನನ್ನು ಈ ವಿಚಾರವಾಗಿ ಕೇಳಿದಾಗ ಅಪ್ಪ ಹೀಗೆ ಹೇಳಿದ್ದರು: ಕೆಲವು ಸೀರೆಗಳು ಅರ್ಜೆಂಟಾಗಿ ಇಲ್ಲೇ ಎಲ್ಲಿಯೋ ಹೋಗಬೇಕಾದ ಪ್ರಸಂಗಕ್ಕೋ, ಮನೆಗೆ ನೆಂಟರು ಬರುತ್ತಿರುವ ಸಮಯಕ್ಕೋ ಸುತ್ತಿಕೊಳ್ಳುವುದಕ್ಕೆ ಅಂತ (ಅಮ್ಮನ ಭಾಷೆಯಲ್ಲಿದು 'ಅರೆ ಹೋಪಲ್ಲಿದು' ಅಂದರೆ ಅರೆಬರೆ ಹಳೆತಾದ ಅತ್ತ ಹೊಸತೂ ಅಲ್ಲದ ಹಳೆಯವೂ ಅಲ್ಲದ ಸೀರೆಗಳವು), ಮತ್ತೆ ರೇಷ್ಮೆ ಸೀರೆಗಳನ್ನು ಹಾಳಾಗಬಾರದು ಅಂತ ಬಟ್ಟೆಯಲ್ಲಿ ಸುತ್ತಿಡುತ್ತಾಳಿರಬೇಕು ಎಂಬುದನ್ನು ಅಪ್ಪ ತಮಗೆ ತಿಳಿದ ಮಾಹಿತಿಯ ಪ್ರಕಾರ ನನಗೆ ಹೇಳಿದ್ದರು. ಹಾಗಾದರೆ ಈ ಕವರಿನಲ್ಲಿಟ್ಟ ಸೀರೆಗಳು ಯಾವ ಗುಂಪಿಗೆ ಸೇರ್ತಾವೆ ಅಂತ ಅಪ್ಪನನ್ನು ನಾನು ಕೇಳುತ್ತಿರುವ ಹೊತ್ತಿಗಾಗಲೇ ಅಮ್ಮ ಕಪಾಟಿನ ಬಾಗಿಲನ್ನ ತೆರೆದುಕೊಂಡು ತಲೆಕೆರೆದುಕೊಳ್ಳುತ್ತಿರುವ ಹೊತ್ತಿಗೆ ನನ್ನ ಕೈ ಸೇರಿದ್ದ ಅತ್ತರ್ ಬಾಟ್ಲಿಯ ಮುಚ್ಚಳ ತೆಗೆದಾಗಿ ಅತ್ತರ್ ಬಾಟ್ಲಿ ನನ್ನ ಆ ಕೈಯಲ್ಲಿ ಮುಚ್ಚಳ ಈ ಕೈಯಲ್ಲಿ ಬಂದಾಗಿತ್ತು.

ಅಪ್ಪ ಅಡಿಕೆ ಆರಿಸುತ್ತ ಒಳಕಟ್ಟೆಯಲ್ಲಿದ್ದರು. ನಾನು ಅಲ್ಲೇ ಸುಳಿದಾಡುತ್ತಿದ್ದೆ. ಅಮ್ಮ ತಮ್ಮ ರೂಮಿನಲ್ಲಿ ಇನ್ನೂ ಕಪಾಟಿನೆದುರು ತಲೆಕೆರೆದುಕೊಳ್ಳುತ್ತಲೇ ಇದ್ದರೋ ಗೊತ್ತಿಲ್ಲ. ಅಪ್ಪ ಮುಂದುವರೆಸಿದರು: 'ಕೆಲವು ಸೀರೆಗಳನ್ನ ನಿಮ್ಮಮ್ಮ ಪ್ಲಾಸ್ಟಿಕ್ ಕವರಿನಲ್ಲಿಯೇ ಇಡುವುದು ಯಾಕೆಂದರೆ ಕೆಲವೊಮ್ಮೆ ಮಧ್ಯಾಹ್ನ ಊಟದ ನಂತರ ನಾನು ಒಂದು ಸಣ್ಣ

ನಿದ್ರೆ ಮಾಡುವ ಹೊತ್ತಿಗೆ ಈ ಸೀರೆಗಳ ಹುಡುಕಾಟದ ಭರದಲ್ಲಿ ಜರಬರ ಜರಬರ ಸದ್ದು ಮಾಡಿ ನನ್ನ ನಿದ್ರೆ ಹಾಳುಮಾಡುವುದಕ್ಕೆ ಅಂತ ಅಂದುಕೊಂಡಿದ್ದೇನೆ' ಅಂತ ಅಪ್ಪ ಹೇಳಿ ಮುಗಿಸುವಷ್ಟರಲ್ಲಿ ಕಟ್ಟೆಯ ನೆಲವೆಲ್ಲ ಅತ್ತರ್‌ನ ಘಮದಿಂದ ಪಾವನವಾಗಿತ್ತು. ಎಷ್ಟೇ ಯೋಚನೆಯಲ್ಲಿದ್ದರೂ ಅಮ್ಮನಿಗೆ ತನ್ನ ಅತ್ತರಿನ ಸುವಾಸನೆ ಬೇಗನೆ ಮೂಗಿಗೆ ತಗಲುತ್ತದೆ. ಎಲ್ಲಿದ್ದರೋ ಅಮ್ಮ ಬಂದು... (ಮುಂದಿನ ಘಟನೆ ನಿಮ್ಮ ನಿಮ್ಮ ಅನುಭವಕ್ಕನುಗುಣವಾಗಿ ನಿಮ್ಮ ಊಹೆಗೆ ಬಿಟ್ಟಿದ್ದು). ಮುಂದೊಂದು ದಿನ ಇದೇ ಅಮ್ಮ ಆ ಕಪಾಟಿನ ಕೀಲಿಕೈ ನನ್ನ ಕೈಗೆ ಕೊಟ್ಟು ನನಗೆ ಬೇಕಾದ ವಸ್ತುವೇನನ್ನೋ ನಾನೇ ಕಪಾಟಿನ ಬಾಗಿಲು ತೆರೆದು ತೆಗೆದುಕೊಳ್ಳುವ ಅವಕಾಶ ಕೊಟ್ಟಾಗ ನಾನು ಬೆಳೆದು ಅಮ್ಮನಾದಂತೆ ಖುಷಿಯಾಗಿ ಬೀಗಿದ್ದು ಬೇರೆಯದ್ದೇ ವಿಷಯ.

ಇತ್ತೀಚೆಗಿನ ಒಂದು ಸಂದರ್ಭ ನೆನಪಾಗ್ತಿದೆ. ಅಮ್ಮನಿಗೆ ಅಮೆರಿಕೆಯ ವೀಸಾ ಸಿಕ್ಕ ಸಂದರ್ಭ. ನಾನು, ಮಗ, ನಮ್ಮ ಮನೆಯವರು ಮತ್ತು ಅಪ್ಪ, ಅಮ್ಮ ವೀಸಾ ಸಲುವಾಗಿ ಚೆನ್ನೈಗೆ ಹೋಗಿದ್ದೆವು. ನಮಗೆ ಬೆಳಿಗ್ಗೆ ಎಂಟುವರೆಗೇ ಅಪಾಯಿಂಟ್‌ಮೆಂಟ್ ಇತ್ತು. ಅಮ್ಮನಿಗೆ ಹತ್ತುವರೆಗೆ. ಹಾಗಾಗಿ ಯು.ಎಸ್. ಕಾನ್ಸಲೇಟಿನಲ್ಲಿ ನಮಗೆ ಮತ್ತು ಅಮ್ಮನಿಗೆ ಭೇಟಿಯಾಗುವ ಯಾವುದೇ ಅವಕಾಶವಿರಲಿಲ್ಲ. ಅಮ್ಮನಿಗೆ ಅಲ್ಲಿ ಏನೇನು ಪ್ರಶ್ನೆ ಕೇಳಬಹುದು ಮತ್ತು ಅದಕ್ಕೆ ಉತ್ತರ ಎಲ್ಲವನ್ನು ಹಿಂದಿನ ದಿನ ಮಾಹಿತಿ ಒದಗಿಸಿಯಾಗಿತ್ತು. ಅಲ್ಲಿ ಅವಶ್ಯವಿರುವ ಕಾಗದಪತ್ರಗಳಿರುವ ಒಂದು ಫೈಲನ್ನು ಬಿಟ್ಟರೆ ಬ್ಯಾಗು ಗೀಗು ಏನೂ ತೆಗೆದುಕೊಂಡು ಹೋಗಬಾರದು ಅಂತಲೂ ಅಮ್ಮನಿಗೆ ಹೇಳಿದ್ದೆವು. ಇಷ್ಟು ಹೇಳಿದ ಮೇಲೂ ಅರ್ಥವಾಗದೇ ಇರಲಾಗದಷ್ಟು ದಡ್ಡಿಯೇನಲ್ಲ ಅಮ್ಮ. ಕೈಯಲ್ಲಿ ಪರ್ಸ್ ಮಾತ್ರ ಇಟ್ಟುಕೊಂಡುಹೋಗಿದ್ದಳು. ವೀಸಾ ಇಂಟರ್ವ್ಯೂ ಮುಗಿಸಿಕೊಂಡ ನಾವು ಅಲ್ಲಿ ನಿಲ್ಲಲು ಅವಕಾಶವಿರದ ಕಾರಣ ನಾವಿಳಿದುಕೊಂಡಿದ್ದ ಹೊಟೇಲ್‌ಗೆ ಮರಳಿಬಂದಿದ್ದೆವು. ಅಮ್ಮನಿಗೆ ವೀಸಾ ಸಿಗುತ್ತದೆಯೋ ಇಲ್ಲವೋ ಎಂಬ ಆತಂಕ, ಕುತೂಹಲಗಳಿಂದ ಅಮ್ಮನ ವಾಪಸ್ಸು ಬರುವಿಕೆಗಾಗಿ ಕಾಯುತ್ತಲಿದ್ದೆವು. ಒಂಥರಾ ಲೇಬರ್ ವಾರ್ಡಿನ ಹೊರಗೆ ನಿಂತು ಕಾಯುತ್ತಿರುವವರ ಆತಂಕದಷ್ಟಲ್ಲದಿದ್ದರೂ ಒಂಥರಾ ಅಂಥದೇ ಆತಂಕ ಎನ್ನಬಹುದು.

ಸುಮಾರು ಹೊತ್ತಿನ ಮೇಲೆ ಅಪ್ಪ ನಮಗೆ ಕಾಲ್ ಮಾಡಿ ಅಮ್ಮನಿಗೆ ವೀಸಾ ಅಪ್ರೂವ್ ಆಗಿದೆ ಎಂಬ ವಿಷಯ ಹೇಳಿದಾಗ ನಾವು ಖುಷಿಯಾದೆವು. ಅದಾಗಲೇ ಊಟದ ಸಮಯವಾಗಿತ್ತಾದ್ದರಿಂದ ನಾವು ಇಳಕೊಂಡಿದ್ದ ಹೊಟೇಲ್ಲಿನ ರೆಸ್ಟೋರೆಂಟ್ ಒಂದರಲ್ಲಿ ಇರುತ್ತೇವೆ, ಅಲ್ಲಿಗೇ ಬನ್ನಿ, ಊಟ ಮಾಡೋಣ ಅಂತ ತಂದೆಯವರಿಗೆ ತಿಳಿಸಿದ್ದೆವು. ಯು.ಎಸ್.ಕಾನ್ಸಲೇಟಿನಿಂದ ನೇರ ರೆಸ್ಟೋರೆಂಟಿಗೆ ಬಂದಿದ್ದ ಅಮ್ಮನ ಮುಖದಲ್ಲಿ ವೀಸಾ ಸಿಕ್ಕ ಖುಷಿ ಎಳ್ಳಷ್ಟೂ ಇರಲಿಲ್ಲ. ಅಮ್ಮ ಸಿಕ್ಕಾಪಟ್ಟೆ ಬೇಜಾರಿನಲ್ಲಿದ್ದಳು. ಎಷ್ಟೇ ವಿಚಾರಿಸಿದರೂ ಅಮ್ಮ ಯಾಕೋ ಸುಮ್ಮನೇ ಇದ್ದಳು. ಅಮ್ಮನಿಗೆ ವೀಸಾಕ್ಕೆ ಬರುವುದಕ್ಕೇ ಮೊದಲಾಗಿ ಇಷ್ಟವಿರಲಿಲ್ಲ. ಈಗ ವೀಸಾ ಸಿಕ್ಕಿತು ಅಂತ ಬೇಸರವಿರಬೇಕು ಅಂತ ನಾನು

ಮತ್ತಷ್ಟು ಅಮ್ಮನನ್ನು ಸಮಾಧಾನ ಮಾಡಿದೆ, 'ನೋಡು, ವೀಸಾ ಸಿಕ್ಕಿದ ಮಾತ್ರಕ್ಕೆ ನೀನೆಂತ ಅಲ್ಲಿಗೆ ಈಗುಂದ್ರೆ ಈಗಲೇ ಬರ್ಲೇಬೇಕು ಅಂತಿಲ್ಲೆ, ನಿನಗೆ ಬರವ್ವು ಅನ್ನಿಸ್ದಾಗ ಮಾತ್ರ ಬರ್ಲಕ್ಕು', ಅಂತೆಲ್ಲ ಸಮಾಧಾನ ಮಾಡಿದರೂ ಅಮ್ಮನ ಬೇಸರ ಹೆಚ್ಚಾಗುತ್ತಲೇ ಇತ್ತು ವಿನಾ ಕಮ್ಮಿಯಾದಂತೆ ಕಾಣಲಿಲ್ಲ. ಸುಮಾರು ಹೊತ್ತಿನ ಮೇಲೆ ನಿಧಾನಕ್ಕೆ ವಿಚಾರಿಸಲಾಗಿ ಅಮ್ಮನ ಬೇಸರದ ಗುಟ್ಟು ಹೊರಬಿತ್ತು. ಅಲ್ಲಿ ಸೆಕ್ಯುರಿಟಿ ಗೇಟಿನಲ್ಲಿ ಅಮ್ಮನ ಪರ್ಸ್ ಚೆಕ್ ಮಾಡಲಾಗಿ ಅದರೊಳಗಿದ್ದ ಮೊನ್ನೆಯಷ್ಟೇ ನಾನು ಅಮೆರಿಕೆಯಿಂದ ತೆಗೆದುಕೊಂಡು ಹೋಗಿ ಕೊಟ್ಟಿದ್ದ ಅತ್ತರಿನ ಬಾಟ್ಲಿಯನ್ನು ಟ್ರ್ಯಾಶ್ ಮಾಡಲಾಗಿತ್ತು. 'ಗನಾ ಅತ್ರದ್ ಬಾಟ್ಲಿ ಆಗಿತ್ತು. ಇನ್ನು ಒಂದಿವಸನೂ ಹಚ್ಕ್ಯಂಡಿರ್ಲೆ. ಎನ್ ಚೆಂದ ಡಿಜೈನಿತ್ತು ಆ ಅತ್ರದ್ ಬಾಟ್ಲಿ ಮೇಲೆ ಮಾಡಿದ್ದೆ. ರಾಶೀನೇ ಚೊಲೋ ಇತ್ತು. ಅಪ್ಪು ವೀಸಾ ಕೊಡ್ದೋರು ಅಡ್ಡಿಲ್ಯಾಗಿತ್ತು, ಅತ್ರದ್ ಬಾಟ್ಲಿ ಒಗೆಯದ್ ಬ್ಯಾಡ್ದಾಗಿತ್ತು' ಅಂತ ಅಮ್ಮ ಊಟ ಮುಗಿಯುವುದರೊಳಗ ಎರಡೆರಡು ಬಾರಿ ಹೇಳಿ ಅಪ್ಪನ ಪತ್ತಿರ ಬೈಸಿಕೊಂಡಿದ್ದಳು.

ಬೆಂಗಳೂರಿನಲ್ಲಿದ್ದಾಗ ಒಮ್ಮೆ ಮನೆ ಬದಲಾಯಿಸುವ ಸಂದರ್ಭದಲ್ಲಿ ನಮ್ಮ ಸಹಾಯಕ್ಕೆ ಅಮ್ಮ ಬಂದಿದ್ದರು. ಅಮ್ಮ ಬಹಳ ಚುರುಕು ಮತ್ತು ನೀಟು ಸಹ. ಬಟ್ಟೆ ಬರೆ ಪಾತ್ರೆಪಗಡಿಗಳನ್ನು ತುಂಬ ನೀಟಾಗಿ ಪ್ಯಾಕ್ ಮಾಡಿಕೊಟ್ಟರು. ದಿನಸಿ ಸಾಮಾನುಗಳನ್ನು ತಂದ ಒಂದಿಷ್ಟು ಪ್ಲಾಸ್ಟಿಕ್ ಕವರುಗಳನ್ನು ಡಸ್ಟ್‌ಬಿನ್ನಿನೊಳಗೆ ಹಾಸಲಿಕ್ಕೆ ಅಂತ ನಾನು ಇಟ್ಟುಕೊಂಡಿರುತ್ತಿದ್ದೆ. ಅವು ಹೇಗೂ ಮತ್ತೆ ದಿನಸಿ ಸಾಮಾನುಗಳ ಜೊತೆ ಸಿಗುತ್ತವೆಯಾದ್ದರಿಂದ ಅವನ್ನೆಲ್ಲ ಮನೆ ಬದಲಾಯಿಸುವ ಈ ಹೊತ್ತಲ್ಲಿ ಬಿಸಾಡೋಣ ಅಂತ ನಾನು ಎಲ್ಲವನ್ನೂ ಎತ್ತಿಹಾಕುವುದರಲ್ಲಿದ್ದರೆ ಅಮ್ಮ ನನಗೆ ಅದಕ್ಕೆ ಅವಕಾಶವನ್ನೇ ಕೊಡದೇ ಅವನ್ನೆಲ್ಲ ಅಚ್ಚುಕಟ್ಟಾಗಿ ಮಡಚಿ ತಮ್ಮ ಬ್ಯಾಗಿಗೆ ಸೇರಿಸಿಕೊಂಡರು. ಒಳ್ಳೊಳ್ಳೆ ಕವರುಗಳೇ ಅಂಗಡಿಯಲ್ಲಿ ಸಿಗುತ್ತವೆ, ಒಂದು ಪ್ಯಾಕನ್ನೇ ಕೊಡಿಸ್ತೇನೆ ಅಂತ ಎಷ್ಟು ಗೋಗರೆದರೂ ಕೇಳದ ಅಮ್ಮ ಅವನ್ನೆಲ್ಲ ತನ್ನ ಬ್ಯಾಗಿಗೆ ಸೇರಿಸಿಯೇ ಬಿಟ್ಟಳು. 'ಗನಾ ಪ್ಲಾಸ್ಟಿಕ್ ಕೊಟ್ಟೆ, ಅರ್ಜೆಂಟಿಗೆ ಎಂತಕ್ಕಾರೂ ಬೇಕು ಅಂದ್ರೂ ಯಂಗಕ್ಕೆ ಅಲ್ಲಿ ಶಿಗದಿಲ್ಲೆ ಇದು. ಯಾರಿಗಾರೂ ಎಂತಾರೂ ಹಾಕ್ಕೊಡಲ್ ಬತ್ತು, ಮಡ್ಲಿಗೆ, ಮಕ್ಕಳ ಕೈಗೆ ತುಂಬಿ ಕಳ್ಸಲೂ ಲಾಯ್ಕೇ ಇದ್ದು, ಒಂದ್ರಲ್ಲಿ ಒಂದು ಹಾಕಿ ದಪ್ಪ ಮಾಡಿರೆ ಶ್ಯಾಂವಂತ್ಗೆ ಗಿಡ ನೆಡಲ್ಲೂ ತೊಂದ್ರಿಲ್ಲೆ. ಅಷ್ಟು ಚೊಲೋ ಇದ್ದು, ಸುಮ್ನೆ ಒಗೆದು ಹಾಳ್ ಮಾಡ್ತಿ ನಿಂಗ', ಅಂತ ನನಗೆ ಬುದ್ಧಿ ಹೇಳುತ್ತ ಅವನ್ನೆಲ್ಲ ತನ್ನ ವಶ ಮಾಡಿಕೊಂಡಳು.

ಇದೇ ಕಾರಣಕ್ಕೆ ಪ್ರತೀಸಲ ೨೦ ಪೌಂಡ್ ಅಕ್ಕಿ ಖಾಲಿಯಾದಾಗ ದಪ್ಪನೆಯ ಅದರ ಬ್ಯಾಗನ್ನು ಬಿಸಾಕುವಾಗ ಅಮ್ಮನ ನೆನಪಾಗಿ ಬಿಸಾಕಲಾರದೇ ಹಾಗೆಯೇ ಇಟ್ಟುಕೊಳ್ಳುತ್ತೇನೆ. ಊರಿಗೆ ಹೋಗುವಾಗ ದೊಡ್ಡ ಬ್ಯಾಗಿನ ಮೂಲೆಯ ಸೈಡ್ ಪಾಕೆಟ್ಟಿನೊಳಗೆ ಈ ಚೀಲವನ್ನು ಇಟ್ಟುಕೊಂಡು ಹೋಗಿ ಊರಲ್ಲಿ ಅಮ್ಮನಿಗೆ ಕೊಟ್ಟಾಗ ಅಮೆರಿಕೆಯಿಂದ ತೆಗೆದುಕೊಂಡುಹೋದ ಯಾವುದೇ ಗಿಫ್ಟಿಗಿಂತ ಅಮ್ಮನಿಗೆ ಈ ಗಿಫ್ಟು ನೆಚ್ಚಾಗಿ ಅಮ್ಮ ಆ ಬ್ಯಾಗನ್ನು ಸವರಿ ಸವರಿ,

'ಅಯ್ಯ್... ಇಷ್ಟು ಘನಾ ಬ್ಯಾಗಲ್ಲಿ ಅಕ್ಕಿ ಸಿಗ್ತಾ ನಿಂಗಕ್ಕೆ ಅಲ್ಲೀ? ಎಷ್ಟು ಘನಾ ಚೀಲಾ... ದಪ್ಪಗಿದ್ದು. ವಿಶ್ವಣ್ಣನ್ ಅಂಗಡಿಂದ ಕಿರಾಣಿ ತಪ್ಪಲ್ಲೂ ಸಾಕು ಈ ಚೀಲ ಅಷ್ಟು ಜೋಲೋ ಇದ್ದು' ಎನ್ನುತ್ತ ಸಂಭ್ರಮ ಪಡುವ ಅಮ್ಮನನ್ನು ಕಂಡಾಗ ಅಮ್ಮನನ್ನು ಇಷ್ಟು ಖುಷಿಪಡಿಸಿ ಸಂಭ್ರಮಪಡುವಂತೆ ಮಾಡಿದ ಸಾವಿರಾರು ಮೈಲಿ ದೂರದಿಂದ ಸಮುದ್ರದಾಟಿ ಬಂದ ಖಾಲಿ ಸೋನಾಮಸ್ಸೂರಿ ಅಕ್ಕಿಚೀಲ ನನಗೂ ಇಷ್ಟವಾಗುತ್ತದೆ. ಅಮ್ಮ ಆ ಖಾಲಿ ಅಕ್ಕಿಯ ಚೀಲವನ್ನು ಮಾಳಿಗೆಯ ಗಿಳಿಗೂಟಕ್ಕೆ ತೂಗಿಬಿಡುತ್ತ 'ಎರಡೇ ಚೀಲ ಇದ್ದು, ಇನ್ನೊಂದೆರಡು ಇದ್ದಿದ್ರೆ ಅಜ್ಜನ್ ಮನೆಗೂ ಕಳ್ಸಲ್ಲಾಗ್ತಿತ್ತು' ಅಂತ ಹೇಳುವಾಗ ನಾನು ಕೊಟ್ಟ ಖಾಲಿ ಅಕ್ಕಿಚೀಲ ಅಮ್ಮನಿಗೆ ತನ್ನ ತವರನ್ನೂ ನೆನಪಿಸಿದ್ದಕ್ಕೆ ನನ್ನ ಕಣ್ಣಲ್ಲೂರಿದ ನೀರನ್ನು ಅಮ್ಮನಿಗೆ ಕಾಣುವುದರೊಳಗೆ ಒರೆಸಿಕೊಂಡುಬಿಟ್ಟಿರುತ್ತೇನೆ. ಅಲ್ಲದೇ 'ನಿನಗಂತೂ ಖಾಲಿ ಚೀಲ, ಕವರು ಅಂದ್ರೆ ಎಂತಾ ಆ ನಮ್ನಿ ವ್ಯಾಮೋಹನೇನ...' ಅಂತ ಸುಮ್ಮನೆ ಅಮ್ಮನನ್ನು ಅಂದಹಾಗೆ ರಾಗವೆಳೆಯುತ್ತೇನೆ. ಮರಳಿ ಬಂದ ಮೇಲೆ ಖಾಲಿಯಾದ ಅಕ್ಕಿಚೀಲವನ್ನು ಬಿಸಾಕಲಾರದೇ ಮತ್ತೆ ಇಟ್ಟುಕೊಳ್ಳುತ್ತೇನೆ. ಯಾಕೆಂದರೆ ಈ ಸಲ ಇನ್ನೊಂದೆರಡು ಹೆಚ್ಚು ಚೀಲ ತಗೊಂಡು ಹೋದರೆ ಅಜ್ಜನಮನೆಗೂ ಎರಡು ಚೀಲ ಕೊಡುವ ಅಮ್ಮನ ಕನಸನ್ನು ನನಸಾಗಿಸಬೇಕಲ್ಲ, ಅದಕ್ಕಾಗಿ.

ಒಂದು ಸಲ ಅಜ್ಜಿಗೂ ಮೊಮ್ಮಗನಿಗೂ ಫೋನಲ್ಲಿ ಮಾತುಕತೆಯಾಗುತ್ತಿತ್ತು. ಅಂದರೆ ನನ್ನ ಮಗ ಮತ್ತು ನಮ್ಮಮ್ಮ ಇಬ್ಬರೂ ಫೋನಿನಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಆಗ ಮೊಮ್ಮಗ ಕೇಳಿದ, 'ಅಜ್ಜಿ ನೀ ಇಲ್ಲಿಗೆ ಯಾವಾಗ ಬರ್ತೆ?'. ಅಜ್ಜಿ, 'ನೀ ಯಾವಾಗ ಬಾ ಹೇಳ್ತೆ ಆವಾಗ ಬರ್ತಿ.' ಅಂತ ಹೇಳಿದರು. ನಾವೇನಾದರೂ ಈ ಪ್ರಶ್ನೆ ಕೇಳಿದ್ದರೆ ಅಮ್ಮ ಖಂಡಿತ, 'ಅಲ್ಲಿಗೆಲ್ಲ ಬರಕಾಗದಿಲ್ಯೆ ಮಗಾ ಸದ್ಯಕ್ಕೆ.' ಅಂದುಬಿಡುತ್ತಿದ್ದರು. ಮೊಮ್ಮಗ ಆ ಪ್ರಶ್ನೆ ಕೇಳಿದ್ದಕ್ಕಾಗಿ ನೀನು ಯಾವಾಗ ಕರೆಸಿಕೊಂಡರೆ ಆವಾಗ ಬರುತ್ತೇನೆ ಎಂಬ ಉತ್ತರ ದೊರಕಿತ್ತು. ಹ್ಞಾ... ಅಜ್ಜಿ ಬರುತ್ತಾರೆಂದ ಮೇಲೆ ಮೊಮ್ಮಗನದು ಅಲ್ಲಿಂದ ತರಬೇಕಾದ ಲಿಸ್ಟು ಶುರುವಾಯ್ತು. ಆ ಲಿಸ್ಟಿನಲ್ಲಿ ತೊಳೆಯಲಿಕ್ಕಿರುವ ಪಾತ್ರೆಗಳೂ ಇದ್ದವು. ಮೊಮ್ಮಗ ಅಜ್ಜಿಗೆ ಹೇಳಿದ, 'ಅಜ್ಜಿ, ನಿಮ್ಮನೆಯಲ್ಲಿ ಯಾವುದಾದರೂ ತೊಳೆಯಲಿಕ್ಕಿರುವ ಪಾತ್ರೆಗಳಿದ್ದರೆ ಅವನ್ನೆಲ್ಲ ಇಲ್ಲಿಗೆ ತಂದುಬಿಡು, ಇಲ್ಲಿ ಡಿಷ್ ವಾಷರ್ ಇದೆ' ಅಂತ ಹೇಳಿದಾಗ ಅಮ್ಮನಿಗೆ ಫೋನಲ್ಲಿ ಕಾಣದ ಮೊಮ್ಮಗನ ಮೇಲೆ ಮುದ್ದೋ ಮುದ್ದು. ಅಮ್ಮಂದಿರ ಈ ಖಾಲಿ ಕರಡಿಗೆ, ಪಾತ್ರೆ, ಖಾಲಿ ಕವರು, ಚೀಲಗಳ ಬಗ್ಗೆ ಮಕ್ಕಳಿಗಿಂತಲೂ ಮೊಮ್ಮಕ್ಕಳು ಹೆಚ್ಚಾಗಿ ಸ್ಪಂದಿಸುತ್ತಾರಾದ ಕಾರಣ ಅಜ್ಜಿಯರಿಗೆ ಮೊಮ್ಮಕ್ಕಳು ಮುದ್ದಾಗುತ್ತಾರೆ ಅಂತ ನನಗೆ ಆ ಕ್ಷಣಕ್ಕೆ ಅನ್ನಿಸಿತ್ತು.

ಒಮ್ಮೆ ಉಗ್ಗಾಪಾತ್ರೆ (ಕೈತೊಟ್ಟಿರುವ ಕರಡಿಗೆ/ಡಬ್ಬಿ)ಯೊಂದರಲ್ಲಿ ಅಮ್ಮ ಯಾರದೋ ಮನೆಗೆ ಏನನ್ನೋ ಕೊಟ್ಟುಬರುವಂತೆ ಕಳಿಸಿದ್ದರು. ಉಗ್ಗಾಪಾತ್ರೆಗೆ ಕೈತೊಟ್ಟಿರುವುದರಿಂದ ಉಯ್ಯಾಲೆಯ ಹಾಗೆ ಅದನ್ನು ತೂಗಾಡಿಸುತ್ತ ಆಡಿಸುತ್ತ ತೆಗೆದುಕೊಂಡು ಹೋಗುವಾಗ

ಕೈತೊಟ್ಟು ಕಳಚಿ ಪಾತ್ರೆ, ಸಿನೇಮಾ ಹಾಡಿನಲ್ಲಿ ಹಿರೋಯಿನ್ ನೆಲಕ್ಕೆ ಉರುಳಾಡುವಂತೆ, ನೆಲವಲ್ಲಿ ಬಿದ್ದು ಉರುಳಾಡತೊಡಗಿತ್ತು. ಉಗ್ಗಾಪಾತ್ರೆಯ ಕೈತೊಟ್ಟು ಬೇರೆ ಪಾತ್ರೆ ಬೇರೆ ಆಗಿ ಹಾಗೆಯೇ ಮನೆಗೆ ಮರಳಿ ಬಂದಾಗ ಅಮ್ಮ ಆ ಪಾತ್ರೆಯನ್ನು ನೋಡಿ ಹೇಗೆ ನಿಂತಿದ್ದರೋ ಹಾಗೆಯೇ ಗೋಡೆಗಾನಿ ಕುಳಿತುಬಿಟ್ಟರು. 'ಇಷ್ಟು ಚೊಲೋ ಪಾತ್ರೆ ಈಗೆಲ್ಲ ಅಂಗಡಿಯಲ್ಲಿ ಹುಡುಕಿದ್ರೂ ಸಿಗದಿಲ್ಲೆ. ಅದ್ರ ತೊಟ್ಟೇ ಮುರುದ್ಬಿಟ್ಯಾ? ಥೋ...' ಅಂತ ನನ್ನ ದುರುಗುಟ್ಟಿಕೊಂಡು ನೋಡಿದ್ದಲ್ಲದೇ ಕೈತೊಟ್ಟನ್ನು ಪಾತ್ರೆಗೇ ಮರಳಿ ಅಂಟಿಸು ಅಂತ ಅಮ್ಮ ನನ್ನ ಅಡುಗೆಮನೆಯಲ್ಲಿ ಕೂರಿಸಿದ್ದರು. ಅಪ್ಪ ಬರುವ ತನಕವೂ ನಾನು ಅಂಟಿಕೊಳ್ಳದ ಆ ಕೈತೊಟ್ಟನ್ನು ಪಾತ್ರೆಗೆ ಅಂಟಿಕೊಂಡೇ ಇರುವಂತೆ ಕೈಯ್ಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡು ಬಾಗಿಲ ಬಳಿ ನೋಡುತ್ತ ಅಪ್ಪನ ಬರುವಿಗಾಗಿ ಕಾಯುತ್ತ ಕೂರಬೇಕಾಗಿ ಬಂದಿತ್ತು. ಇದೇ ಕಾರಣಕ್ಕಿರಬೇಕು ಆ ನಂತರದಲ್ಲಿ ನನಗೆ ಉಗ್ಗಾಪಾತ್ರೆಯೆಂದರೆ ಇಷ್ಟವಾಗುತ್ತಿರಲಿಲ್ಲ. ಅದರಲ್ಲಿ ಯಾರಾದರೂ ಏನಾದರೂ ತಿಂಡಿ ಕಳುಹಿಸಿದರೆ ಆ ತಿಂಡಿ ನನಗೆ ರುಚಿಸುತ್ತಿರಲಿಲ್ಲ.

ಇಲ್ಲೇ ಹತ್ತಿರವಿರುವ ಗೆಳತಿಯರಿಗೆ ಬಿಸಿಬಿಸಿ ಪಾಯಸ ಕಳುಹಿಸುವುದಕ್ಕೆ ಉಗ್ಗಾಪಾತ್ರೆಗಿಂತ ಚೆಂದದ ಡಬ್ಬಿ ಬೇರೊಂದಿಲ್ಲ ಅಂತ ಇತ್ತೀಚೆಗೆ ಅರಿವಾಗಿ ನನ್ನ ನಾಡಿನಿಂದಲೇ ತರಬೇಕಾದ ವಸ್ತುಗಳ ಲಿಸ್ಟಿನಲ್ಲಿ ಉಗ್ಗಾಪಾತ್ರೆಯನ್ನೂ ಸೇರಿಸಿಕೊಳ್ಳುವಾಗ ಕೈತೊಟ್ಟು ಕಳಚಿಹೋದ ಪಾತ್ರೆಯನ್ನು ಕಂಡಾಗ ಅಮ್ಮ ಅಷ್ಟು ನೊಂದಿದ್ಯಾಕೆ ಅಂತಲೂ ಅರಿವಾಗಿ ಒಂದೊಳ್ಳೆಯ ಕರಡಿಗೆಯು ಸದ್ಬಳಕೆಗೆ ಬಾರದಂತೆ ಮಾಡಿದ ಮೇಲೂ ಅಮ್ಮ ನನ್ನನ್ನು ಶಿಕ್ಷಿಸಲೇ ಇಲ್ಲ ಅನ್ನಿಸಿ ಅಮ್ಮ ಇನ್ನಷ್ಟು ಪ್ರೀತಿಯೆನ್ನಿಸುತ್ತಾಳೆ.

ಈ ಕರಡಿಗೆ, ಡಬ್ಬಿ, ಪಾತ್ರೆ, ಕವರುಗಳ ಮೇಲಿನ ಪ್ರೀತಿ ಒಂದು ತಲೆಮಾರಿಗೆ ಮುಗಿದುಹೋಗುವಂಥದ್ದಲ್ಲ. ತಾಯಿಯಿಂದ ಸಂಸಾರಸ್ಥೆಯಾಗುವ ಮಗಳಿಗೆ ಹರಿದು ಬಂದು ಮುಂದುವರೆಯುವಂಥ ಚೆಂದದೊಂದು ಸಂಸಾರಕ್ಕೆ ಅವಶ್ಯವಾಗಿ ಇರಲೇಬೇಕಾದ ಅತ್ಯಂತ ಅವಶ್ಯ ಪ್ರೀತಿಯಿದು ಅಂತ ನನಗೆ ಈಗೀಗ ಕೆಲವೊಮ್ಮೆ ಅನ್ನಿಸುತ್ತದೆ. ಮಗ ತನ್ನ ತಿಂಡಿಯ ಡಬ್ಬವನ್ನು ಶಾಲೆಯಲ್ಲಿಯೇ ಬಿಟ್ಟು ಬಂದಾಗ ಮರುದಿನ ಶಾಲೆಗೆ ಕಳಿಸಬಹುದಾದ ಸರಿಯಾದ ಸೈಜಿನ ಡಬ್ಬವೊಂದನ್ನು ಬೆಳಬೆಳಗ್ಗೆ ಹುಡುಕುವಾಗ ಡಬ್ಬವನ್ನು ಶಾಲೆಯಲ್ಲೇ ಬಿಟ್ಟುಬಂದ ಮಗನ ಮೇಲೆ ಕೋಪ ಬರುವಾಗೆಲ್ಲ ಅಮ್ಮ ಕರಡಿಗೆಯನ್ನು ಯಾಕೆ ಪ್ರೀತಿಸುತ್ತಾರೆ ಅಂತ ಅರಿವಾಗುತ್ತದೆ. ಈ ಸಲ ಊರಿಗೆ ಹೋದರೆ ನಾನು ಸ್ಟೀಲ್ ಡಬ್ಬಗಳನ್ನು ಕೊಳ್ಳುವಾಗ ಅಮ್ಮನಿಗೂ ಒಂದಿಷ್ಟು ಡಬ್ಬ ಕೊಡಿಸಿ ಅಮ್ಮನನ್ನು ಮತ್ತಷ್ಟು ಖುಷಿಪಡಿಸಬೇಕು ಅಂದುಕೊಳ್ಳುತ್ತೇನೆ. ಫೋನು ಮಾಡಿದಾಗ ಅಮ್ಮನ ಯಾವುದಾದರೂ ಕರಡಿಗೆ ಕಳೆದುಹೋಗಿದ್ದರೆ ಅಮ್ಮನ ನೋವನ್ನು ನಾನು ಸಮಭಾಗಿಯಾಗಿ ಹಂಚಿಕೊಳ್ಳುವಷ್ಟು ಪ್ರೀತಿ ನನಗೂ ಈಗೀಗ ಡಬ್ಬಿಗಳ ಮೇಲೆ.

ಕಾಣೆಯಾದ ಕರಡಿಗೆಗಾಗಿ ಕೊರಗುವ ಅಮ್ಮಂದಿರೇ ನನಗೂ ಕರಡಿಗೆಯೆಂದರೆ ಪ್ರೀತಿ. ●

ಹರಟೆ ಕಟ್ಟೆ

ಗ್ಯಾಡ್ಜೆಟ್ಸ್ ಗಮ್ಮತ್ತು

-ಅಲಮೇಲು ಅಯ್ಯಂಗಾರ್

ನೀವೇನೇ ಹೇಳಿ, ಈ ಆಧುನಿಕ ಯುಗದಲ್ಲಿ ಗ್ಯಾಡ್ಜೆಟ್ಟುಗಳ ಪಟ್ಟಿಗೆ ಸಿಲುಕದ ಮಾನವನೇ ಇಲ್ಲ ಅನ್ನಿಸುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ನಿಘಂಟಿನಲ್ಲಿ 'ಗ್ಯಾಡ್ಜೆಟ್' ಎನ್ನುವ ಪದಕ್ಕೆ ಸಲಕರಣೆ, ಚಿಕ್ಕ ಯಂತ್ರ ಮುಂತಾದ ಅರ್ಥಗಳಿದ್ದರೂ ಗ್ಯಾಡ್ಜೆಟ್ ಎನ್ನುವ ಪದದ ಗಮ್ಮತ್ತು ಇರಲಿಲ್ಲವೆನಿಸಿ ಈ ಪ್ರಬಂಧದ ಉದ್ದಕ್ಕೂ ಅದೇ ಪದವನ್ನೇ ಬಳಸಿದ್ದೇನೆ. ಅದೂ ಅಲ್ಲದೆ, ಇತರ ಭಾಷೆಗಳಿಂದ ಅನೇಕ ಪದಗಳನ್ನು ಧಾರಾಳವಾಗಿ ತೆಗೆದುಕೊಂಡು, ಕನ್ನಡ ಪ್ರತ್ಯಯಗಳನ್ನು ಸೇರಿಸಿ ನಮ್ಮದಾಗಿಸಿಕೊಂಡು, ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿಲ್ಲವೇ? ಹಾಗೆಯೇ ಈ ಪದಕ್ಕೂ 'ಗಳು' ಪ್ರತ್ಯಯವನ್ನು ಸೇರಿಸಿ 'ಗ್ಯಾಡ್ಜೆಟ್‌ಗಳು' ಎಂದುಬಿಟ್ಟರೆ ಪದ ನಮ್ಮದೇ ಆಯಿತಲ್ಲ?

ದಿನದ ಇಪ್ಪತ್ತನಾಲ್ಕು ಗಂಟೆಗಳ ಕಾಲವೂ ಒಂದಲ್ಲ ಒಂದು ಗ್ಯಾಡ್ಜೆಟ್ ಕುಣಿಕೆಗೆ ಕತ್ತೊಡ್ಡಿ ನರಳುತ್ತೇವೆ ನಾವು. ಆದರೆ ಇದು ಯಾರೋ ಬಲವಂತವಾಗಿ ನಮ್ಮ ಕೊರಳಿಗೆ ಕಟ್ಟಿದ ಕುಣಿಕೆಯಲ್ಲ. ನಾವೇ ಸಾಕಷ್ಟು ದುಡ್ಡು ಸುರಿದು ಕೊಂಡುಕೊಂಡಿರುವ ಸಂಕಷ್ಟಗಳ ಸರಮಾಲೆ. ಮೊದಲೇ 'ಬಿಡುವಿಲ್ಲದ ಜೀವನ' ಎಂದು ಒಳಗೊಳಗೆ

ಕೊರಗುತ್ತಿದ್ದರೂ ಮೇಲೆ ಮಾತ್ರ ಗತ್ತಿನಿಂದ 'ತುಂಬಾ ಬಿಝಿ' ಎಂದು ಸ್ವಲ್ಪ ಪುರುಸೊತ್ತಾಗಿರುವವರ ಬಳಿ ಹೇಳಿಕೊಂಡು, 'ನಿಮಗಿಂತ ಉತ್ತಮ ಜೀವನ ನನ್ನದು' ಎಂಬಂತೆ ತಿರುಗುವ ಕೆಲವು ಮಾನವ ಶ್ರೇಷ್ಠರಿಗೆ ಈ ಗ್ಯಾಡ್ಜೆಟ್‌ಗಳು ಪ್ರಬಲವಾದ ಅಸ್ತ್ರಗಳಿದ್ದಂತೆ. ಈಗಂತೂ ನಾವು ಎಲ್ಲೇ ಇರಲಿ, ಬಚ್ಚಲು ಮನೆಯಿಂದ ಹಿಡಿದು ದೇವಸ್ಥಾನದವರೆಗೂ ಹಲವು ಆಧುನಿಕ ಸಲಕರಣೆಗಳು ನಮಗೆ ಅಂಟಿಕೊಂಡಿರುತ್ತವೆ. ಒಬ್ಬರಿಗಿಂತ ಇನ್ನೊಬ್ಬರು ಮೇಲೆಂದು ತೋರಿಸಿಕೊಳ್ಳುವುದು ಮಾನವರ ಸಹಜ ಗುಣ. ಈ ಗುಣ(?)ದ ಉಪಯೋಗ ಪಡೆದುಕೊಂಡು ಸಲಕರಣಾ ತಯಾರಕರು ಮತ್ತು ಅದನ್ನು ಮಾರಾಟ ಮಾಡುವವರೂ ಲಾಭ ಪಡೆಯುತ್ತಿದ್ದಾರೆ. ಅವರು ನಮ್ಮ ಮೇಲೆ ಬಿಡುತ್ತಿರುವ ಗ್ಯಾಡ್ಜೆಟ್ ಬ್ರಹ್ಮಾಸ್ತ್ರಗಳು ಒಂದೇ... ಎರಡೇ? ದಿನಕ್ಕೊಂದು ಹೊಸ ಬಗೆಯ ಯಂತ್ರಗಳು ಸೃಷ್ಟಿಗೊಳ್ಳುತ್ತಿವೆ. ಸ್ಮಾರ್ಟ್ ಫೋನುಗಳು, ವಿವಿಧ ಐಪಾಡ್‌ಗಳು, ಐ ಪ್ಯಾಡ್‌ಗಳು... ಅಬ್ಬಬ್ಬಬ್ಬ... ಎಲ್ಲಾದರೂ ಓಡಿಹೋಗಿ ಅವಿತುಕೊಳ್ಳೋಣ ಎನ್ನಿಸುವಷ್ಟು ನಮ್ಮನ್ನು ಚಿಟ್ಟು ಹಿಡಿಸುತ್ತವೆ. ಆದರೆ ಓಡುವುದಾದರೂ ಎಲ್ಲಿಗೆ? ಹಿಂದೆ, ಹೊರಲು ಸ್ವಲ್ಪ ಕಷ್ಟ ಎನ್ನುವಂತೆ ಇದ್ದ ವಸ್ತುಗಳೆಲ್ಲ ಈಗ ಅಂಗೈಯಲ್ಲಿ ಹಿಡಿಯುವಷ್ಟು ಸಣ್ಣದಾಗಿಬಿಟ್ಟಿವೆ. ಈ ಚಲನ (Mobile) ಯಂತ್ರಗಳು ಬಂದ ಮೇಲೆ ಕೈಲಾಸಕ್ಕೆ ಹೋದರೂ ಶನಿಕಾಟ ತಪ್ಪಲಿಲ್ಲ ಎನ್ನುವಂತಾಗಿದೆ.

ಈಗ ಎರಡು ವರ್ಷಗಳ ಕೆಳಗೆ ಕೆಲವು ಸ್ನೇಹಿತರೊಡನೆ ಮಾನಸ ಸರೋವರ ಮತ್ತು ಕೈಲಾಸ ಪರ್ವತದ ಪರಿಕ್ರಮಕ್ಕೆ ಹೋದಾಗ, ಹಿಮಾಲಯ ಪರ್ವತದ ರುದ್ರ ರಮಣೀಯ ಹಾದಿಗಳಲ್ಲಿ ಸ್ಟೀವ್ ಜಾಬ್ ಸೃಷ್ಟಿಸಿದ ಆಪಲ್ ಕಂಪನಿಯ ಐಪಾಡ್‌ನಿಂದ ಶಿವಸ್ತುತಿಯನ್ನು ಜೋರಾಗಿ ಹಾಕಿಕೊಂಡು ಎಕ್ಸ್‌ಟ್ರಾ ಪುಣ್ಯ ಸಂಪಾದಿಸಲು ಪ್ರಯತ್ನಿಸುತ್ತಿದ್ದರು ಒಬ್ಬ ಸಹ ಪ್ರಯಾಣಿಕರು. ನಾವು ಕೆಲವರು ನೀರವತೆಗೆ ಹಾತೊರೆಯುತ್ತಿದ್ದರೂ, ಉಸಿರಾಡಲೂ ಕಷ್ಟವಾಗುತ್ತಿರುವ ಆ ಪರ್ವತಶ್ರೇಣಿಯ ೧೮೦೦೦ ಅಡಿಗಳ ಎತ್ತರದಲ್ಲಿ ಸುಶ್ರಾವ್ಯವಾಗಿ ಹಾಡುತ್ತಿದ್ದ ಎಮ್.ಎಸ್. ಸುಬ್ಬಲಕ್ಷ್ಮಿಯ ಕಂಠಶ್ರೀಗೆ ಮಣಿಯುವುದೋ, ಇಲ್ಲ ಆ ಎತ್ತರದಲ್ಲಿ ಇದನ್ನು ಸಾಧ್ಯವಾಗಿಸಿದ ಆ ಐಪಾಡ್ ಯಂತ್ರಕ್ಕೆ ಮಣಿಯುವುದೋ ಗೊತ್ತಾಗದೆ ದಂಗಾಗಿದ್ದೆವು. ಪರಿಕ್ರಮವನ್ನು ಮುಗಿಸಿ ಹಿಂದಕ್ಕೆ ಬರುತ್ತಿರುವಾಗ ಸದ್ದಿಲ್ಲದೆ ಬರುತ್ತಿದ್ದ ಆ ಪ್ರಯಾಣಿಕರನ್ನು 'ಯಾಕ್ರಿ ಶಿವಸ್ತುತಿ ನಿಲ್ಲಿಸಿ ಬಿಟ್ರಿ, ಪುಣ್ಯ ಸಿಕ್ಕಿಬಿಡ್ತೂ ಅಂತಾನ?' ಎಂದು ಕೀಟಲೆ ಮಾಡಿದಾಗ ಅವರು ಬೇಸರದ ದನಿಯಲ್ಲಿ 'ಇಲ್ಲ ಮೇಡಮ್, ಬ್ಯಾಟರಿ ಮುಗಿದು ಹೋಯ್ತು, ಎಕ್ಸ್‌ಟ್ರಾ ಬ್ಯಾಟರಿ ತರಲು ಮರೆತು ಹೋಯ್ತು.' ಎಂದರು. ಅವರಿಗೆ ಮರೆವನ್ನು ಕೊಟ್ಟ ಆ ಸದಾಶಿವನಿಗೆ ನಾನು ಮನಸಾರ ವಂದನೆಯನ್ನು ಸಲ್ಲಿಸಿದೆ. ಹಾಗಂತ ನನಗೆ ಐಪಾಡ್‌ನ ಮೇಲೆ ಮೋಹ ಇಲ್ಲ ಎಂದುಕೊಳ್ಳಬೇಡಿ. ನನ್ನ ಬಳಿಯೂ ಒಂದಿದೆ. ಆದರೆ ಹಿಮಾಲಯಕ್ಕೂ ತೆಗೆದುಕೊಂಡು ಹೋಗುವಷ್ಟು ಹುಚ್ಚಿಲ್ಲ ಅಷ್ಟೆ.

ನಮ್ಮ ಜೀವನವನ್ನೇ ಅಲ್ಲೋಲಕಲ್ಲೋಲ ಮಾಡಿರುವ ಮತ್ತೊಂದು ಯಂತ್ರ ಸೆಲ್ ಫೋನು. ಎಷ್ಟೋ ಜನರ ಮನೆಯಲ್ಲಿ ಟೆಲಿಫೋನನ್ನು ಮೂಲೋತ್ಪಾಟನ ಮಾಡಿರುವ ಹೆಗ್ಗಳಿಕೆ ಸೆಲ್ ಫೋನಿಗಿದೆ. ಪ್ರಪಂಚದಾದ್ಯಂತ ೫ ಶತಕೋಟಿ ಸೆಲ್ ಫೋನ್ ಚಂದಾದಾರರಿದ್ದಾರಂತೆ! ಪ್ರಪಂಚದ ಜನಸಂಖ್ಯೆ ೭ ಶತಕೋಟಿಗಿಂತ ಸ್ವಲ್ಪ ಕಮ್ಮಿ, ಅಂದರೆ ಪ್ರಪಂಚದ ಜನತೆಯಲ್ಲಿ ಶೇಕಡಾ ೭೨ರಷ್ಟು ಜನ ಸೆಲ್ ಫೋನ್ ಬಳಸುತ್ತಾರೆ ಎಂದಾಯಿತು! ಎಂತಹ ಸೋಜಿಗದ ಸಂಗತಿ ಇದು! ಈ ಶತಮಾನದ ಮಹತ್ತರ ಕ್ರಾಂತಿಕಾರಕ ಸಲಕರಣೆ ಇದು. ಪ್ರಪಂಚದಲ್ಲಿ ಮತ್ತಾವ ಸಲಕರಣೆಗೂ ಇಲ್ಲದ ಮನ್ನಣೆ ಮಹತ್ವ ಸೆಲ್ ಫೋನಿಗೇಕಿದೆ ಎಂದು ಯೋಚಿಸಿದ್ದೀರಾ? ಉತ್ತರ ಬಹಳ ಸರಳವಾದದ್ದು. ಮನುಷ್ಯರಿಗೆ ಮಾತಾಡುವ ಚಪಲ ಬಹಳ ಸ್ವಾಮಿ. ಯಾರನ್ನು, ಯಾವಾಗ ಬೇಕಾದರೂ, ಎಲ್ಲಿ ಬೇಕಾದರೂ ಸಂಪರ್ಕಿಸಬಹುದಾದಂತಹ ಸಲಕರಣೆಯೊಂದು ದೊರಕಿದರೆ ಜನ ಸುಮ್ಮನೆ ಬಿಟ್ಟಾರೆಯೇ? ಎದುರಿಗಿದ್ದು ಮಾತಾಡುವಾಗ ನಮ್ಮ ಮಾತು ಕೇಳುಗರ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತಿದೆ ಎನ್ನುವ ಅಳುಕಾದರೂ ಕಾಡಿಸುತ್ತದೆ. ಸೆಲ್ ಫೋನಿನಲ್ಲಿ ಆ ಯೋಚನೆಯೂ ಇಲ್ಲವೋ? ಸರಿ, ಜನ ಕೊರೆದದ್ದೂ ಕೊರೆದದ್ದೇ. ನಿಮಿಷಕ್ಕೆ ಇಷ್ಟು ಎಂದು ಹಣ ಕೊಡಬೇಕಾಗಿದ್ದರೂ ಹೊಟ್ಟೆ ಬಟ್ಟೆ ಕಟ್ಟಿಯಾದರೂ ಜನ ಮಾತಿನ ಚಪಲ ತೀರಿಸಿಕೊಳ್ಳುತ್ತಾರೆ. ಕಾಲ ದೇಶಗಳ ಪರಿಧಿ ಇಲ್ಲದೆ ಬೆಳೆದುನಿಂತಿರುವ ಈ ಸೆಲ್ ಫೋನ್ ತ್ರಿವಿಕ್ರಮನಿಗೆ ಸರಿಸಮಾನದ ಮತ್ತೊಂದು ಚಲನ ಸಲಕರಣೆ ಬರುವವರೆಗೂ ಅದನ್ನು ಹಿಡಿಯುವವರೇ ಇಲ್ಲ. ಅದಕ್ಕೆ ದೊರಕಿರುವ ಜನಾದರಣೆಯನ್ನು ನೋಡಿ ಅದನ್ನು ಮತ್ತೂ ಆಕರ್ಷಣೀಯವಾಗಿ ಮಾಡಲು ತಯಾರಕರೂ ಸದಾ ಶ್ರಮಿಸುತ್ತಿದ್ದಾರೆ. ವಿಧವಿಧ ಬಣ್ಣದ, ವಿಧವಿಧ ಗಾತ್ರದ, ವಿಧವಿಧ ವೈಲಕ್ಷಣ್ಯಗಳನ್ನು ಹೊಂದಿರುವ ಸೆಲ್ ಫೋನ್‌ಗಳು ಪ್ರತಿ ವಾರವೂ ಬಿಡುಗಡೆಗೊಳ್ಳುತ್ತಿರುತ್ತವೆ. ಇಂದು ಕೊಂಡದ್ದು ನಾಳೆಗಾಗಲೇ ಹಳೆಯದಾಗಿ ಬಿಡುತ್ತೆ. ಒಬ್ಬರಿಗಿಂತ ಒಬ್ಬರು ಮಿಗಿಲಾಗುವ 'ಇಲಿ ಪಂದ್ಯದಲ್ಲಿ' ತಯಾರಕರಿಗೆ ಹಣದ ಸುಗ್ಗಿಯೋ ಸುಗ್ಗಿ!

ಕೂತಾಗ, ನಿಂತಾಗ, ನಡೆಯುವಾಗ, ಓಡುವಾಗ, ಮಲಗಿದಾಗ, ಕಾರ್ ನಡೆಸುವಾಗ, ಸಂಗೀತ ಸಭೆಗಳಲ್ಲಿ, ರಂಗಮಂದಿರಗಳಲ್ಲಿ, ಸಿನಿಮಾ ಥಿಯೇಟರ್‌ಗಳಲ್ಲಿ ಎಲ್ಲೆಂದರಲ್ಲಿ ಜನರನ್ನು ಮಾತಿನಲ್ಲಿ ತೊಡಗಿಸುವ ಈ ಸಲಕರಣೆ ವರವೋ, ಇಲ್ಲ ಶಾಪವೋ ಎಂದು ನಾನು ಅನೇಕ ಬಾರಿ ಯೋಚಿಸಿದ್ದೇನೆ. ಬಂಧು ಬಳಗದೊಡನೆ, ಆಪ್ತರಾದ ಹಾಗೂ ಅಷ್ಟೊಂದು ಆಪ್ತರಲ್ಲದ ಮಿತ್ರರೊಡನೆ, ತುರ್ತು ಪರಿಸ್ಥಿತಿಗಳಲ್ಲಿ ಅಥವಾ ಸುಮ್ಮನೆ 'ಟೈಂ ಪಾಸ್' ಮಾಡಲು ಯಾರೊಡನೆ, ಎಲ್ಲಿಂದ ಬೇಕಾದರೂ ಮಾತಾಡುವ ಅವಕಾಶ ಕಲ್ಪಿಸುವ ಈ ಸಾಧನ ಶಾಪ ಹೇಗಾದೀತು? ಹಾಗೆ ನೋಡಿದರೆ ಮಾನವ ಕುಲಕ್ಕೆ ವಿಜ್ಞಾನವಿತ್ತಿರುವ ಮಹತ್ತರ ಕೊಡುಗೆ ಇದು ಎನ್ನಬಹುದು. ಈಗಂತು ಬೇಡಿಕೆ - ಪೂರೈಕೆ (Demand and Supply) ನ್ಯಾಯದಂತೆ ಬೆಲೆಗಳು ಬಹಳಷ್ಟು ಕಡಿಮೆಯಾಗಿವೆ. ಹೀಗಿರುವಾಗ ಅದು

ವರಪ್ರಸಾದವೇ ತಾನೆ? ಕಾಡುಮೇಡುಗಳಲ್ಲಿ ತಪ್ಪಿಸಿಕೊಂಡಿರುವ ಎಷ್ಟೋ ಜನರ ಆಪತ್ತಿಗೆ ಒದಗಿರುವ ನೆಂಟ ಈ ಮೊಬೈಲ್ ಫೋನು. ಕಳ್ಳಕಾಕರನ್ನು ಹಿಡಿಯಲೂ ಸಹ ಇದರ ಸಹಾಯ ಒದಗಿರುವ ನಿದರ್ಶನಗಳುಂಟು. ಅದೂ ಅಲ್ಲದೆ ದಿನನಿತ್ಯದ ಬದುಕಿನಲ್ಲಿ ಅನೇಕ ರಸ ಕ್ಷಣಗಳನ್ನು ಒದಗಿಸುವ ಸಾಧನವಾಗಿದೆ ಇದು. ಕಿವಿಗೆ ಬ್ಲೂ ಟೂತ್ ಸಿಕ್ಕಿಸಿಕೊಂಡು, ಕೈಗಳನ್ನು ರಭಸವಾಗಿ ತಿರುಗುಸುತ್ತ ತಮ್ಮ ಪಾಡಿಗೆ ತಾವು ಮಾತಾಡುವಂತೆ ತೋರುವ ಎಷ್ಟು ಜನರನ್ನು ನಾವು ಹುಚ್ಚರೂ ಎಂದುಕೊಂಡು ಹುಸಿನಗೆ ಬೀರಿಲ್ಲ? ಸಭೆ ಸಮಾರಂಭಗಳಲ್ಲಿ ಫೋನ್ ರಿಂಗಣಿಸಿದೊಡನೆ ತಮ್ಮದೇ ಇರಬೇಕೆಂದು ಭ್ರಮಿಸಿ, ಜೇಬು ತಡಕುವ ಗಂಡಸರೂ ಕೈಚೀಲಗಳನ್ನು ಕಿವಿಗೊಡ್ಡಿ ಕೇಳುವ ಮಹಿಳಾಮಣಿಗಳೂ ನಗೆಬುಗ್ಗೆ ಚಿಮ್ಮಿಸುವುದಿಲ್ಲವೇ?

ಸಂಕಟದಲ್ಲಿರುವವರ ವೆಂಕಟರಮಣ ಇದು ಎನ್ನುವುದಕ್ಕೆ ನಿದರ್ಶನ ಹೀಗೊಂದು ಘಟನೆ. ಮೊನ್ನೆ ನಮ್ಮ ಸ್ನೇಹಿತರೊಬ್ಬರ ಮನೆಯಲ್ಲಿ ಒಂದು ಸಂತೋಷಕೂಟಕ್ಕೆ ಹೋಗಿದ್ದೆವು. ಅರಮನೆಯಂತಹ ೩ ಮಹಡಿಗಳ ಮನೆ. ಸುಮಾರು ೩೦-೩೫ ಜನ ಅತಿಥಿಗಳಿದ್ದಿರಬೇಕು. ನಮ್ಮ ಮತ್ತೊಬ್ಬ ಗೆಳೆಯ ಶ್ರೀಹರಿ ಅವರು ನನ್ನ ಬಳಿ ಕುಳಿತು ಮಾತನಾಡುತ್ತಿದ್ದವರು ಯಾಕೋ ಎದ್ದು ಕೆಳಗಡೆಗೆ ಹೋದರು. ಒಂದೆರಡು ಘಂಟೆಗಳಾದ ಮೇಲೆ ಎಲ್ಲರೂ ಊಟಕ್ಕೆ ಅಣಿಯಾಗುತ್ತಿದ್ದಾಗ ಆ ಮನೆಯ ಟೆಲಿಫೋನು ರಿಂಗಣಿಸಿತು. ಕರೆದವರು ಶ್ರೀಹರಿ ಎಂದು ತಿಳಿದಾಗ ಎಲ್ಲರೂ 'ಅರೆ ಅವರು ಇಲ್ಲೇ ಇದ್ದರಲ್ಲ... ಎಲ್ಲಿಂದ ಕರೆಯುತ್ತಿದ್ದಾರೆ?' ಎಂದು ಆಶ್ಚರ್ಯಗೊಂಡೆವು. ಮನೆಯ ಯಜಮಾನರು 'ಅಯ್ಯಯ್ಯೋ ಸಾರಿ, ಸಾರಿ... ಬಂದೆ, ಈಗ ಬಂದೆ.' ಎಂದು ದಡಬಡಿಸಿಕೊಂಡು ಕೆಳಗಡೆ ಓಡಿಹೋದುದನ್ನು ನೋಡಿ ನಮಗೆ ಇನ್ನೂ ಕುತೂಹಲ ಮೂಡಿತು. ಸ್ವಲ್ಪ ಹೊತ್ತಿನಲ್ಲೇ ಕೆಂಪುಮೊಗದ ಶ್ರೀಹರಿಯೊಡನೆ ಅವರು ಮೇಲಕ್ಕೆ ಬಂದು ನಡೆದದ್ದನ್ನು ಹೇಳಿದಾಗ ನಗೆಯ ಕಾರಂಜಿ ಪುಟಿದೆದ್ದು ಕುಣಿಯಿತು. ಕೆಳಗಡೆಯ ಬಚ್ಚಲು ಮನೆಗೆ ಹೋದ ಶ್ರೀಹರಿ, ಕೆಲಸ ಮುಗಿಸಿ ಬಾಗಿಲು ತೆಗೆಯಲು ಪ್ರಯತ್ನಿಸಿದರೆ ಏನೇ ಮಾಡಿದರೂ ತೆಗೆಯಲಾಗಲಿಲ್ಲವಂತೆ. ಬಾಗಿಲನ್ನು ದಬದಬ ಬಡಿದು, ಗಂಟಲು ಬಿರಿಯುವವರೆಗೂ ಕೂಗಿಕೊಂಡರೂ ಒಬ್ಬರೂ ಅವರ ಸಹಾಯಕ್ಕೆ ಬರಲಿಲ್ಲವಂತೆ. ಮುವ್ವತ್ತು ಜನರ ಮಾತುಕಥೆಗಳ ಗಲಾಟೆಯಲ್ಲಿ ಇವರ ಕೂಗು ಯಾರಿಗೆ ಕೇಳೀತು? ಏನು ಮಾಡಲೂ ತೋಚದೆ ಅಕಸ್ಮಾತ್ ಜೋಬಿಗೆ ಕೈಹಾಕಿದಾಗ ಸೆಲ್ ಫೋನ್ ಕೈಗೆ ಸಿಕ್ಕಿ ಅವರಿಗೆ ದೇವರೇ ಪ್ರತ್ಯಕ್ಷವಾದಷ್ಟು ಸಂತೋಷವಾಯಿತಂತೆ. ಮನೆಯೊಡೆಯರ ಫೋನ್ ನಂಬರ್ ಇಲ್ಲದಿದ್ದರೂ ವಿಚಾರಣಾ ಕೇಂದ್ರದಿಂದ ನಂಬರ್ ಪಡೆದುಕೊಂಡು ಕರೆದರಂತೆ. ಅವರ ಜೋಬಿನಲ್ಲಿ ಸೆಲ್ ಫೋನ್ ಇಲ್ಲದಿದ್ದಿದ್ದರೆ ಇನ್ನೆಷ್ಟು ಹೊತ್ತು ಅವರು ಆ ಬಚ್ಚಲುಮನೆಯಲ್ಲಿ ಕೊಳೆಯಬೇಕಾಗುತ್ತಿತ್ತೋ ಎಂದು ನಾವೆಲ್ಲ ಯೋಚಿಸಿಯೇ ಸುಸ್ತಾದೆವು. ಈಗ ಯಾರ ಮನೆಯ ಪಾರ್ಟಿಯಲ್ಲಿ ಬಚ್ಚಲಿಗೆ

ಹೋಗಬೇಕಾದರೂ 'ಸೆಲ್ ಫೋನ್ ಇದೆ ತಾನೆ?' ಎಂದು ನಾವು ಸ್ನೇಹಿತರನ್ನು ಗೇಲಿಮಾಡುತ್ತೇವೆ.

ಸೆಲ್ ಫೋನು, ಟೆಲಿಫೋನುಗಳ ಜೊತೆ 'ಅಳಿಯನ ಜೊತೆ ಗೆಳೆಯ' ಅನ್ನುವಂತೆ ವಾಯ್ಸ್ ಮೈಯ್ಲ್‌ನ ಹಾವಳಿ ಬೇರೆ. ಕರೆದಾಗ ಸಿಕ್ಕಲಿಲ್ಲವಲ್ಲ ಹೋಗ್ಕೊಳ್ಳಲಿ ಎಂದು ಸುಮ್ಮನೆ ಬಿಡ್ತಾರೆಯೇ? ಇಲ್ಲ ಸಂದೇಶ ಬಿಡುತ್ತಾರೆ. ದಯವಿಟ್ಟು ವಾಪಸ್ ಕರೀರಿ ಅಂತ. ನಾವು ವಾಪಸ್ ಕರೆದಿದ್ದೆವು ಎಂದು ಸುಳ್ಳುಹೇಳಿ ತಪ್ಪಿಸಿಕೊಳ್ಳುವುದಕ್ಕೂ ಆಗುವುದಿಲ್ಲ. 'ಎಲ್ಲಿ? ಮಿಸ್ಸ್ಡ್ ಕಾಲ್ನಲ್ಲಿ ಕಾಣಿಸಲಿಲ್ಲವಲ್ಲಾ?' ಎನ್ನುತ್ತಾರೆ. ಸುಮ್ಮಸುಮ್ಮನೆ ನಮ್ಮನ್ನು ಇಕ್ಕಟ್ಟಿಗೆ ಸಿಲುಕಿಸುವ ಈ ಸಲಕರಣೆ ನಮಗೆ ಬೇಕಾಗಿತ್ತೆ? ಆದರೆ ವಾಯ್ಸ್ ಮೈಯ್ಲ್ ಎಷ್ಟೋ ಬಾರಿ ಉಪಕಾರವನ್ನೂ ಮಾಡಿದೆ ಎಂದಿಟ್ಟುಕೊಳ್ಳಿ. ನಾನು ಹಿಂದೆ ಸಂಗೀತ ಕಲಿಯುತ್ತಿದ್ದಾಗ ವಿಜಯದಶಮಿಗೆ ಗುರುದಕ್ಷಿಣೆಯಾಗಿ ಒಂದು ವಾಯ್ಸ್ ಮೈಯ್ಲ್ ರೆಕಾರ್ಡರ್ ಕೊಟ್ಟಿದ್ದೆ. ಹೊಸ ಪಾಠ ಅಭ್ಯಾಸ ಮಾಡಲು ಆಗದಿದ್ದಾಗಲೆಲ್ಲ, ಗುರುಗಳು ಕ್ಲಾಸಿನಲ್ಲಿರುವ ಸಮಯ ನೋಡಿಕೊಂಡು, ಬರಲಾಗುತ್ತಿಲ್ಲ ಎಂಬ ಸಂದೇಶ ಬಿಟ್ಟು ನುಣುಚಿಕೊಳ್ಳುತ್ತಿದ್ದ ಸಂದರ್ಭ ಈಗ ಮಧುರ ನೆನಪಾಗಿ ಉಳಿದಿದೆ.

ನಮ್ಮ ಕುತ್ತಿಗೆಗೆ ಗಂಟುಬಿದ್ದಿರುವ ಮತ್ತೊಂದು ಗ್ಯಾಡ್ಜೆಟ್ಟು ಜಿಪಿಎಸ್ (Global Positioning System). ಯಾವ ಮಹನೀಯ ಇದನ್ನು ಸೃಷ್ಟಿಸಿದನೋ ಅವನಿಗೆ ಪ್ರಪಂಚದ ಎಲ್ಲ ಮಹಿಳೆಯರೂ ಸಾವಿರ ವಂದನೆಗಳನ್ನು ಸಲ್ಲಿಸುತ್ತಾರೆ. ದಿಕ್ಕುದೆಸೆಗಳ ಬಗ್ಗೆ ಹೆಂಗಸರಿಗಿರುವ ನ್ಯೂನತೆಗಳನ್ನು ಹೀಯಾಳಿಸುವ ಗಂಡಸರ ಹಂಗಿಲ್ಲದೆ ತಮಗೆ ಬೇಕಾದಲ್ಲಿಗೆ ಹೋಗುವ ಸ್ವಾತಂತ್ರ್ಯವನ್ನು ಒದಗಿಸಿರುವ ವರದೇವತೆ ಈ ಜಿಪಿಎಸ್. ಎಲ್ಲಿಗೆ ಹೋಗಬೇಕೋ ಆ ವಿಳಾಸವನ್ನು ಹಾಕಿ, ಅತೀ ತ್ವರಿತ ಮಾರ್ಗದಲ್ಲಿ ಕರೆದುಕೊಂಡು ಹೋಗು ಎಂದು ಹೇಳಿಬಿಟ್ಟರೆ ಸಾಕು, ಕೋಮಲ ಕಂಠದ ನಾರಿಯೊಬ್ಬಳು ಪ್ರತಿಯೊಂದು ತಿರುವಿನಲ್ಲೂ ಸೂಚನೆಗಳನ್ನು ಕೊಟ್ಟು ಗುರಿ ಮುಟ್ಟಿಸುತ್ತಾಳೆ. ನಮ್ಮ ಸ್ನೇಹಿತ ಮಹನೀಯರೊಬ್ಬರು ಅದನ್ನು ಸುತರಾಂ ಉಪಯೋಗಿಸುವುದಿಲ್ಲ 'ಯಾಕೆ?' ಎಂದು ಕೇಳಿದರೆ 'ನನಗೆ ಹೆಂಗಸರ ಬಳಿ ಮಾರ್ಗದರ್ಶನ ಮಾಡಿಸಿಕೊಳ್ಳಲು ಇಷ್ಟವಿಲ್ಲ' ಎಂದರು! ಪಾಪ! ಇನ್ನು ಮದುವೆಯಾಗಿಲ್ಲ ಬಿಡಿ. ಆದಮೇಲೆ ನಿಜ ಗೊತ್ತಾದೀತು. ಹೆಂಗಸರ ಮಾರ್ಗದರ್ಶನವಿಲ್ಲದಿದ್ದರೆ ದಾರಿ ತಪ್ಪುವುದಿರಲಿ, ದಿಕ್ಕೂ ತಪ್ಪಿಹೋದೀತೂ ಅಂತ. ಅದಿರಲಿ ಈ ಜಿಪಿಎಸ್ ರಾಣಿಯ ಮೊರೆಹೊಕ್ಕರೆ ನೀವು ಗುರಿ ತಲುಪುವವರೆಗೂ ಜಪ್ಪಯ್ಯಾ ಅಂದರೂ ನಿಮ್ಮನ್ನು ಆಕೆ ಕೈ ಬಿಡುವುದಿಲ್ಲ. ಆದರೆ ಮೋಡಗೀಡ ಅಡ್ಡ ಬಂದು ಬಿಟ್ಟರೆ ಆಯಿತು ನಮ್ಮ ಗತಿ. 'ಉಪಗ್ರಹದೊಡನೆ ಸಂಪರ್ಕ ಕಡಿದು ಹೋಯಿತು' ಎಂದು ದಿಢೀರನೆ ನಿಮ್ಮ ಕೈ ಬಿಟ್ಟುಬಿಡುತ್ತಾಳೆ. ಆದ್ದರಿಂದ ಹೊರಡುವ ಮೊದಲು ಭೂಪಟ ನೋಡಿಕೊಂಡು ನಮ್ಮ ಬುದ್ಧಿ ನಮ್ಮ ಕೈಯ್ಯಲ್ಲಿ ಇಟ್ಟುಕೊಂಡರೆ ಒಳಿತು.

ಇದುವರೆಗೂ ಮೂಲದೇವರಂತೆ ಸ್ಥಾಯಿಯಾಗಿದ್ದ ಗ್ಯಾಡ್ಜೆಟ್‌ಗಳು ಉತ್ಸವ ಮೂರ್ತಿಗಳಂತೆ ಜಂಗಮರಾಗಿ ನಮ್ಮ ನಿತ್ಯ ಜೀವನದ ಹಲವಾರು ಕೆಲಸಗಳನ್ನು ತಮ್ಮ ಪತ್ತೋಟಿಗೆ ತೆಗೆದುಕೊಂಡಿರುವುದನ್ನು ನೋಡಿದರೆ ಅವುಗಳಿಗೆ ಶರಣಾಗಿ, ಹಿತಮಿತವಾಗಿ ನಮಗೆ ಲಾಭದಾಯಕವಾಗುವಂತೆ ಬಳಸಿಕೊಳ್ಳುವುದು ಒಳಿತು ಎನ್ನಿಸುತ್ತದೆ. ಆಗ 'ನಾವೂ ಆಧುನಿಕರು' ಎಂಬ ಗತ್ತಿನಿಂದ ತಲೆಯೆತ್ತಿ ತಿರುಗಬಹುದು.

●

ಊಟೋಪನಿಷತ್ತು

-ನಳಿನಿ ಮೈಯ

ರೀ, ನಿಮ್ಮನ್ನ ಒಂದು ಪ್ರಶ್ನೆ ಕೇಳ್ತೀನಿ. ಅದಕ್ಕೆ ನಿಮ್ಮ ಮನಸಾಕ್ಷಿಯಾಗಿ ಉತ್ತರ ಕೊಡ್ತೀರಾ? ಏನಿಲ್ಲ, ಹೆದರಿಕೊಳ್ಬೇಡಿ. ನಿಮ್ಮ ಹೆಂಡತಿಯ ಹತ್ತಿರ 'ಆಫೀಸಿನಲ್ಲಿ ಲೇಟಾಗಿ ಕೆಲಸದಲ್ಲಿದ್ದೆ' ಅಂತ ಹೇಳಿದಾಗ ನಿಜವಾಗ್ಲೂ ಎಲ್ಲಿದ್ದಿರಿ? ಅಂತ ಕೇಳೋದಿಲ್ಲ. ನಾನು ಕೇಳಬೇಕಂತ ಇರೋ ಪ್ರಶ್ನೆ ಇಷ್ಟೆ: 'ನೀವು ತಿನ್ನೋಕೋಸ್ಕರ ಬದುಕ್ತೀರಾ ಅಥವಾ ಬದುಕೋದಕ್ಕೆ ತಿಂತೀರಾ?'

ನೋಡಿದ್ರಾ? ನಂಗೊತ್ತಿತ್ತು ನೀವು 'ಬದುಕೋದಕ್ಕೆ ತಿಂತೀನಿ' ಅಂತಲೇ ಹೇಳ್ತೀರಾ ಅಂತ. ಅಲ್ಲ, ನಿಮ್ಮ ತೂಕ ಇತ್ತೀಚೆಗೆ ನೋಡ್ಕೊಂಡಿದ್ದೀರಾ? ಅದು ನಿಜ ಹೇಳುತ್ತೆ. ಒಪ್ಪಿಕೊಂಡುಬಿಡಿ. 'ನಂಗೆ ತಿನ್ನೋದು ತುಂಬ ಇಷ್ಟ. ನಾನು ತಿನ್ನೋಕ್ಕೋಸ್ಕರಾನೂ ಬದುಕ್ತೀನಿ' ಅಂತ.

ನನ್ನ ಮಟ್ಟಿಗೆ ಹೇಳೋದಾದ್ರೆ, 'ನಾನು ತಿನ್ನೋಕೋಸ್ಕರ ಬದುಕೋದು' ಅಂತ ಕ್ಷಣಮಾತ್ರದಲ್ಲಿ ಒಪ್ಪಿಕೋತೀನಿ. ಜೀವನದಲ್ಲಿ ನಾವು ಏನೇನು ಮಾಡುವಾಗ ಸಂತೋಷ, ತೃಪ್ತಿ ಅನುಭವಿಸುತ್ತೀವೋ ಅವೆಲ್ಲ ನಮ್ಮ ಬದುಕಿನಲ್ಲಿ ಸಾರ್ಥಕ ಕ್ಷಣಗಳು. ಅಂತಹ ಕ್ಷಣಗಳಿಗಾಗಿಯೇ ನಾವು ಬದುಕುತ್ತೀವಿ. ಒಂದು ಸುಂದರ

ಪೂದೋಟದಲ್ಲಿ ವಿಹರಿಸುವುದಾಗಿರಬಹುದು, ಸಂಗೀತದಲ್ಲಿ ಮೈಮರೆಯುವುದಾಗಿರಬಹುದು, ನಿಮ್ಮ ಪುಟ್ಟ ಕಂದಮ್ಮನ ಜೊತೆ ಆಟವಾಡುತ್ತಾ ನಕ್ಕು ನಲಿಯುವುದಾಗಿರಬಹುದು ಅಥವಾ... ಹೌದು, ಊಟ ಕೂಡಾ ಆಗಿರಬಹುದು!

ದೇವರು ನಮ್ಮ ಆರೋಗ್ಯ, ಆನಂದಕ್ಕಾಗಿ ವಿಧವಿಧವಾದ ಆಹಾರ ಪದಾರ್ಥಗಳನ್ನು ನಮಗೆ ದಯಪಾಲಿಸಿರುವಾಗ ಅವನ್ನು ಬೇಡ ಅಂತ ಹೇಳೋದಾಗಲಿ ಅಥವಾ 'ನಾನು ಬದುಕುವುದಕ್ಕೋಸ್ಕರ ತಿನ್ನೋದು' ಅಂತ ಏನೋ ಧೋರಣೆ ಮಾಡುವುದಾಗಲಿ ಎಷ್ಟು ಸಮಂಜಸ? ನಿಮ್ಮ ಮನೆಗೆ ಯಾರೋ ನೆಂಟರು ಬಂದಿದ್ದಾರೆ ಅಂತ ಇಟ್ಟುಕೊಳ್ಳಿ. ಅವರಿಗೆ ನೀವು, ಅಲ್ಲ ನಿಮ್ಮ ಹೆಂಡತಿ, ಪುಳಿಯೋಗರೆ, ಕೇಸರಿಭಾತ್, ಕೋಸಂಬರಿ, ಪಾಯಸ ಅಂತ ಬಗೆಬಗೆಯ ಭಕ್ಷ್ಯ, ಭೋಜ್ಯಗಳನ್ನು ತಯಾರಿಸಿ ಬಡಿಸಿದರು ಅಂತ ಇಟ್ಟುಕೊಳ್ಳಿ. ಆ ಅತಿಥಿ ಮಹಾಶಯ 'ಇಲ್ಲ, ಇಲ್ಲ. ನನಗೆ ತಿನ್ನೋಕೋಸ್ಕರ ಬದುಕೋದು ಇಷ್ಟವಿಲ್ಲ. ಹಸಿವಿನಿಂದ ಸತ್ತು ಹೋಗದೆ ಇರುವ ಮಟ್ಟಿಗೆ ಇಷ್ಟು ತಿಂದರೆ ಸಾಕು' ಅಂತ ಹೇಳಿ ಒಂದಿಷ್ಟು ಮೊಸರನ್ನ ಮಾತ್ರ ತಿಂದು ಎದ್ದುಬಿಟ್ಟರೆ ನಿಮಗೆ ಬೇಜಾರಾಗಲ್ವಾ? ಹಾಗೇ ನೀವು ಜಾಸ್ತಿ ತಿನ್ನದೆ ಮೊಂಡಾಟ ಮಾಡಿದರೆ ದೇವರಿಗೆ ಬೇಜಾರಾಗಬಹುದು ಎಂಬ ಸಾಧ್ಯತೆಯ ಬಗ್ಗೆ ಎಂದಾದರೂ ಯೋಚಿಸಿದ್ದೀರಾ? ಇರಲಿ ಬಿಡಿ. ನೀವು ಈ ನಿಟ್ಟಿನಲ್ಲಿ ಯೋಚಿಸಿಯೇ ಇಲ್ಲ ಅಂತ ನನಗೂ ಗೊತ್ತು. ಅದಕ್ಕೇ ನಿಮ್ಮ ಹಿತೈಷಿಯಾಗಿ ಈ ಬಿಟ್ಟಿ ಬುದ್ಧಿವಾದವನ್ನು ನಿಮಗೆ ಕೊಡುತ್ತಾ ಇದ್ದೀನಿ. ಬೇಕಾದ ಹಾಗೆ ತಿನ್ನಿ. ನಾನು ತಿನ್ನೋಕೋಸ್ಕರ ಬದುಕೋದು ಅಂತ ಘಂಟಾಘೋಷವಾಗಿ ಸಾರಿ ತಿನ್ನಿ. ಆಗ ನಿಮಗೂ ಸಂತೋಷ, ದೇವರಿಗೂ ಸಂತೋಷ.

ನಾವಂತೂ ಉಡುಪಿ ಬ್ರಾಹ್ಮಣರು. 'ಭಾಗ್ಯದ ಲಕ್ಷ್ಮಿ ಬಾರಮ್ಮಾ' ಅಂತ ಹೋಟಲು ಉದ್ಯಮವನ್ನೇ ಗಟ್ಟಿಯಾಗಿ ತಬ್ಬಿಕೊಂಡವರು. ವಿಶ್ವದ ಎಲ್ಲೆಡೆ ನಮ್ಮ ಊಟ, ತಿಂಡಿಯ ಧ್ವಜ ಹಾರಿಸಿದವರು, ಅಲ್ಲ ತೇಗು ಬರಿಸಿದವರು. ನಮಗೂ ಊಟ, ತಿಂಡಿಗೂ ಬಾದರಾಯಣ ಸಂಬಂಧ. ನನ್ನ ತಂದೆಯವರೂ ಹೋಟಲು ಮಾಲಿಕರು, ಮದುವೆಯಾದ ಮೇಲೆ ಅತ್ತೆ-ಮಾವನ ಮನೆಯವರದ್ದೂ ಹೋಟಲು ಕಾರುಭಾರು. ಚಿಕ್ಕಂದಿನಲ್ಲಿ ನಾವು ನಮ್ಮ ತಂದೆಯ ಹೋಟಲಿನಲ್ಲಿ ಎಲ್ಲಾ ಕಡೆ ಓಡಾಡಿಕೊಂಡಿರುತ್ತಿದ್ದರಿಂದ ಅಲ್ಲಿ ನಡೆಯುವ ವಿದ್ಯಮಾನವೆಲ್ಲ ನಮಗೆ ಒಂದಲ್ಲ ಒಂದು ರೀತಿಯಲ್ಲಿ ತಿಳಿಯುತ್ತಿತ್ತು. ಆಗಲೇ ಈ 'ಹೋಟಲಿಗರ ನಾಮಕರಣ' ಎಂಬ ಹೋಟಲ್ ಉದ್ಯಮದ ಹೊಸ ಆಯಾಮ ನನ್ನ ಗಮನಕ್ಕೆ ಬಂದಿದ್ದು. ನಮ್ಮ ಹೋಟಲಿಗೆ ಬರುವ ಖಾಯಂ ಗಿರಾಕಿಗಳಲ್ಲಿ ಒಬ್ಬೊಬ್ಬರಿಗೆ ಒಂದೊಂದು ತಿಂಡಿ ಇಷ್ಟ. ಹಾಗಾಗಿ ಹೊರಗಡೆ ಅವರನ್ನು 'ಬನ್ನಿ ಯಜಮಾನರೆ. ಹೇಗಿದ್ದೀರಾ?' ಅಂತ ವಿಶ್ವಾಸದಿಂದ ಕರೆದು ಮಾತನಾಡಿಸಿದರೂ ಒಳಗೆ 'ಕೇಸರಿಭಾತ್ ಕೇಶವ ರಾಯರು ಬಂದಿದ್ದಾರೆ. ಬೇಗ ಸರ್ವ್ ಮಾಡಿ' ಅಂತ ಹೇಳ್ತಿದ್ದರು! ಹಾಗೇ ಜಿಲೇಬಿ ಜಗನ್ನಾಥ ಭಟ್ಟರು, ರವೆ ಇಡ್ಲಿ ರಾಜೀವ, ಚಿರೋಟಿ ಚಕ್ರಪಾಣಿ, ಪಕೋಡ ಪದ್ಮನಾಭ

ಅಂತ ದೊಡ್ಡ ಬಳಗವೇ ಹೊಸದಾಗಿ ನಾಮಕರಣ ಮಾಡಿಸಿಕೊಂಡಿತ್ತು. ಇನ್ನು ನಮ್ಮ ಮಾವನ ಹೋಟಲಿನಲ್ಲಿ ಇನ್ನೊಂದು ಕಥೆ. ನಮಗೆ ಗುರುತಿದ್ದವರು, ಎಲ್ಲೋ ನೋಡಿದ ಹಾಗೆ ಇದ್ದವರು ಎಲ್ಲರೂ ನಾವು ಸುಬ್ರಾಯ ಮೈಯರ ಬೆಸ್ಟ್ ಫ್ರೆಂಡು ಅಂತ ಹೇಳಿ ಕ್ಯೂನಲ್ಲಿಯೂ ನಿಲ್ಲದೆ ಬಿಟ್ಟಿ ತಿಂಡಿ ತಿಂದು ಹೋಗುತ್ತಿದ್ದರು!

ಇವೆಲ್ಲ ನಡೆದದ್ದು ಹಲವು ದಶಕಗಳ ಹಿಂದೆ. ಈಗ ಕಾಲ ಬದಲಾಗಿದೆ. ಈಗಿನ ಕಾಲದಲ್ಲಿ ಜನರಿಗೆ ಅಡಿಗೆ ಮಾಡೋಕೂ ಟೈಮಿಲ್ಲ, ಊಟ ಮಾಡೋಕೂ ಟೈಮಿಲ್ಲ! ಇನ್‌ಸ್ಟೆಂಟ್ ಕಾಫಿ, ಧಿಡೀರ್ ರಸಂ ಮಿಕ್ಸ್, ಇಡ್ಲಿ ಮಿಕ್ಸ್, ದೋಸೆ ಮಿಕ್ಸ್‌ಗಳ ಕಾಲದಲ್ಲಿ ಅಡಿಗೆ ಮನೆಯಲ್ಲಿ ಗೃಹಿಣಿ ಅಬ್ಬಬ್ಬಾ ಅಂದರೆ ಅರ್ಧ ಗಂಟೆ ಕಳೆದಾಳು. ಊಟ ಮಾಡೋರಿಗೋ ಇನ್ನೂ ಆತುರ. ಧಿಡೀರ್ ಊಟ ಮಾಡಿ ಓಡೋದೇ ಬಾಳಿನ ಗೋಳಾಗಿಬಿಟ್ಟಿದೆ. ಮುಂಚಿನ ಕಾಲದಲ್ಲಿ ಗೃಹಿಣಿ ಯಾವ ಮೆಷೀನಿನ ಸಹಾಯವಿಲ್ಲದೆ ಅರೆಯುವುದು, ಕುಟ್ಟುವುದು ಎಲ್ಲಾ ತಾನೇ ಮಾಡಿ ಅಡಿಗೆ ಮಾಡುತ್ತಿದ್ದಳು. ಆಮೇಲೆ ಊಟದ ಸಮಯಕ್ಕೆ ಎಲ್ಲರೂ ತಮ್ಮ ತಮ್ಮ ದೊಡ್ಡ ತಟ್ಟೆಗಳನ್ನು ಸಾಲಾಗಿ ಇಟ್ಟು ಕುಳಿತುಕೊಳ್ಳುವುದೇನು! ಮನೆಯಾಕೆ ಬಂದು ಉಪಚಾರ ಮಾಡಿ ಬಡಿಸುವುದೇನು! ಊಟದ ವೇಳೆಯಲ್ಲಿ ನಗುನಗುತ್ತಾ ಮಾತನಾಡಿಕೊಳ್ಳುವುದೇನು! ಅತಿಥಿಗಳಿದ್ದರೆ ಅವರಿಗೆ ಪ್ರತ್ಯೇಕವಾಗಿ ಬಾಳೆ ಎಲೆಯಲ್ಲಿ ಊಟ ಬಡಿಸಲಾಗುತ್ತಿತ್ತು (ನಾನು ಚಿಕ್ಕವಳಿದ್ದಾಗ ಇಂತಹ 'ಸಹನೌಭುನಕ್ತು' ಗಳಿಗೆಯಲ್ಲೇ ಗಮನಿಸಿದ್ದು ಒಂದೊಂದು ಆಹಾರ ಪದಾರ್ಥಕ್ಕೂ ಅದರದೇ ಆದ ನಾದ ವಿಶೇಷವಿದೆ ಅಂತ; ಪಾಯಸಕ್ಕೆ ಸೊರ್ ಸೊರ್ ಅಂತ, ಚಕ್ಕುಲಿಗೆ ಕಟುಂ ಕುಟುಂ ಅಂತ, ಪಾನಕಕ್ಕೆ ಗಟಗಟ ಅಂತ, ಇತ್ಯಾದಿ, ಇತ್ಯಾದಿ). ಎಲ್ಲರೂ ಹೊಟ್ಟೆ ತುಂಬುವಷ್ಟು ಊಟ ಮಾಡಿದರು ಎಂದು ಖಚಿತವಾದ ಮೇಲೇ ಗೃಹಿಣಿ ಊಟಕ್ಕೆ ಕುಳಿತುಕೊಳ್ಳುತ್ತಿದ್ದದ್ದು.

ಈಗ ಹಾಗಲ್ಲ. ಸುಂದರವಾದ ಡೈನಿಂಗ್ ಟೇಬಲ್ ಸುತ್ತ ಎಲ್ಲರೂ ಊಟಕ್ಕೆ ಕುಳಿತುಕೊಳ್ಳುತ್ತಾರೆ, ಗೃಹಿಣಿ ಕೂಡಾ. ಪುಟ್ಟ ಪುಟ್ಟ ಪಾತ್ರೆಗಳಲ್ಲಿ ಇಷ್ಟಿಷ್ಟು ಅಡಿಗೆ ಇರುತ್ತದೆ (ಅದೇ, ಇನ್‌ಸ್ಟೆಂಟ್ ಮಿಕ್ಸ್‌ಗಳಿಂದ ತಯಾರಿಸಿದ್ದು). ಅವನ್ನೆಲ್ಲ ಪಾಸ್ ಮಾಡಿಕೊಂಡು ಎಲ್ಲ ತಮ್ಮ ತಟ್ಟೆಗೆ ತಾವೇ ಸುರಿದುಕೊಳ್ಳುತ್ತಾರೆ. ಎಷ್ಟು ತಗೊಂಡರೋ, ಬಿಟ್ಟರೋ ಯಾರಿಗೂ ಪರಿವೆ ಇಲ್ಲ. ಇನ್ನು ಕೆಲವರ ಮನೆಯಲ್ಲಿ ಎಲ್ಲರಿಗೂ ಸಾಕಾಗುವಷ್ಟು ಅಡಿಗೆ ಇರುವುದೇ ಇಲ್ಲ. ಇರುವ ಇಷ್ಟೇ ಇಷ್ಟು ಪದಾರ್ಥದಲ್ಲಿ ತಮ್ಮ ತಟ್ಟೆಗೇ ಹೆಚ್ಚು ಸುರಿದುಕೊಳ್ಳೋಕೆ ಪ್ರತಿಯೊಬ್ಬರಿಗೂ ಏನೋ ಸಂಕೋಚ. ಏನೋ ಕಾಟಾಚಾರಕ್ಕೆ ಒಂಚೂರು ತಗೊಂಡ ಹಾಗೆ ಮಾಡಿ ಪಾಸ್ ಮಾಡುತ್ತಾರೆ. ಕೊನೆಯಲ್ಲಿ ತಳಕ್ಕೆ ಅಂಟಿಕೊಂಡ ಅಡಿಗೆಯನ್ನು ನೋಡಿ ಮನೆಯ ಯಜಮಾನ 'ಅಯ್ಯೋ, ಇನ್ನೂ ಎಷ್ಟು ಮಿಕ್ಕಿಬಿಟ್ಟಿದೆ! ತಗೊಳ್ಳಿ' ಅಂತ ಎಲ್ಲರ ಮುಖದ ಎದುರು ಪಾತ್ರೆ ಹಿಡಿದ ಶಾಸ್ತ್ರ ಮಾಡಿ ಎಲ್ಲರೂ ಸಾಕು ಎಂಬಂತೆ ತಲೆಯಾಡಿಸಿದ ಮೇಲೆ ತನ್ನ ತಟ್ಟೆಗೆ ಸುರಿದುಕೊಳ್ಳುತ್ತಾನೆ! ಅವನಿಗಂತೂ ಹೊಟ್ಟೆ ತುಂಬಿತಲ್ಲ ಅನ್ನೋದೇ ಉಳಿದವರಿಗೆ ಸಿಕ್ಕ ತೃಪ್ತಿ!

ಈಗಲೂ ಬಡವರ ಮನೆಗಳಲ್ಲಿ, ಮಧ್ಯಮ ವರ್ಗದ ಕುಟುಂಬಗಳಲ್ಲಿ ಹಳೆಯ ಕ್ರಮ ಇನ್ನೂ ಮುಂದುವರಿದುಕೊಂಡು ಹೋಗುತ್ತಿದೆ. ಅತಿಥಿ ಅಭ್ಯಾಗತರಿಗೆ ಹೊಟ್ಟೆ ತುಂಬ ಊಟ ಹಾಕುವ ಸೌಜನ್ಯ ಕಾಣುವುದು ಅಂತಹ ಮನೆಗಳಲ್ಲೇ. ಅದಕ್ಕೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಗಾದೆ ಇದೆ- ದೊಡ್ಡವ್ರ ಮನಿ ಕಾಂಬುಕ್ ಹೋಯ್ಕು, ಬಡವ್ರ ಮನಿಗ್ ಉಂಬುಕೆ ಹೋಯ್ಕು (ದೊಡ್ಡವರ ಮನೆ ನೋಡೋಕೆ ಮಾತ್ರ ಹೋಗ್ಬೇಕು, ಬಡವರ ಮನೆಗೆ ಊಟಕ್ಕೆ ಹೋಗಬೇಕು) ಅಂತ. ಅಲ್ವೆ ಮತ್ತೆ? ಮನಸ್ಸಿಗೆ ಹಿತ ಇದ್ದು ಪರಸ್ಪರ ಪ್ರೀತಿ, ವಿಶ್ವಾಸ ಇದ್ದ ಕಡೆ ಮಾತ್ರ ಹೊಟ್ಟೆಯೂ ತುಂಬುತ್ತದೆ, ಮನಸ್ಸೂ ತುಂಬುತ್ತದೆ.

ಬಂದವರಿಗೆ ಒಳ್ಳೆಯ ಊಟ ನೀಡುವುದರ ಹಿಂದೆ ಅತಿಥಿಗಳ ಮೇಲಿನ ಪ್ರೀತಿ, ಆದರ ಮಾತ್ರವಲ್ಲದೆ ಇತರ ಕಾರಣಗಳೂ ಇರುತ್ತವೆ. ಎಷ್ಟೋ ಜನ ಬಡವರ ಮನೆಗಳಲ್ಲಿ ಸಾಲಸೋಲ ಮಾಡಿಯಾದರೂ ತಮಗಿಲ್ಲದ ಹಾಲು, ತುಪ್ಪವನ್ನು ಅತಿಥಿಗಳಿಗೆ ಬಡಿಸಿ ತಾವು ಉಳ್ಳವರೆಂದು ತೋರಿಸಿಕೊಳ್ಳಬೇಕೆಂಬ ಹಂಬಲ. ಸ್ವಲ್ಪ ಇನ್‌ಫ್ಲುಯನ್ಸ್ ಇರುವವರು ಬಂದರೆ ಈಗ ಅವರಿಗೆ ಮಾಡಿ ಬಡಿಸಿದ್ದರ ಫಲ ಮುಂದೆ ಜಾಬ್ ಪ್ರೊಮೋಶನ್‌ನಲ್ಲಿ ಅಥವಾ ಸರಕಾರದ ಕೆಲಸ ಮಾಡಿಸಿಕೊಳ್ಳುವುದರಲ್ಲಿ ಅಥವಾ ಮಗನಿಗೆ ಒಳ್ಳೆ ಕಾಲೇಜಿನಲ್ಲಿ ಸೀಟು ಸಿಕ್ಕುವುದರಲ್ಲಾಗಲಿ ದಕ್ಕೀತೆಂಬ ಆಸೆ. ಹೀಗೇ...

ಇನ್ನು ಮದುವೆ, ಮುಂಜಿ ಮುಂತಾದ ವಿಶೇಷ ಸಂದರ್ಭಗಳಲ್ಲಿ ಕುತ್ತಿಗೆಯವರೆಗೂ ತಿಂದು ಆಮೇಲೆ 'ಲಾಡಿಗೆ ಲವಂಗವೇ ಹಾಕಿರಲಿಲ್ಲ' ಅಂತ ದೂರು ಹೇಳೋರನ್ನು ನಾವೆಲ್ಲ ನೋಡಿದ್ದೀವಿ. ಮುಂಚೆ ಹಳ್ಳಿಗಳಲ್ಲಿ ಒಂದು ಮನೆಯಲ್ಲಿ ಚಕ್ಕುಲಿಯೋ ಏನಾದರೂ ಅಪರೂಪದ ತಿಂಡಿ ಮಾಡಿದರೆ ಅಕ್ಕಪಕ್ಕದ ಮನೆಯವರಿಗೆಲ್ಲ ಹಂಚುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಹಳ್ಳಿಯೊಂದರಲ್ಲಿ ಬಾಳಿ ಬದುಕಿದ ನಮ್ಮ ಅತ್ತೆಯವರು ಅಮೆರಿಕಕ್ಕೆ ಬಂದಿದ್ದಾಗ ನನ್ನ ಹತ್ತಿರ 'ಇವತ್ತು ಚಕ್ಕುಲಿ ಮಾಡೋಣ್ವಾ?' ಅಂದರು. ನಾನು 'ಆಗಲಿ, ಅದಕ್ಕೇನಂತೆ.' ಅಂದೆ. ಮುಂದಿನ ಕೆಲವೇ ನಿಮಿಷಗಳಲ್ಲಿ ನನ್ನೆದುರು ಧುತ್ತೆಂದು ನಿಂತ ಮಂದರ ಪರ್ವತದಷ್ಟು ಎತ್ತರವಾದ ಕಲಸಿದ ಚಕ್ಕುಲಿ ಹಿಟ್ಟನ್ನು ನೋಡಿ ನನ್ನ ಎದೆ ಧಸಕ್ಕೆಂದಿತು! 'ಇದು ತುಂಬ ಜಾಸ್ತಿ ಆಗಲಿಲ್ವಾ?' ಅಂತ ಕೇಳಿದ್ದಕ್ಕೆ ಅತ್ತೆಯವರು, 'ಆಗಲಿ ಬಿಡು. ನಾವೂ ತಿಂದು ಮನೆಗೆ ಬಂದವರಿಗೆಲ್ಲ ಕೊಡುವುದಕ್ಕೂ ಆಗುತ್ತೆ.' ಅಂದರು. ಅವರದು ದೊಡ್ಡ ಕೈ, ದೊಡ್ಡ ಮನಸ್ಸು. ಮೈ ಬಗ್ಗಿಸಿ ದುಡಿಯುವ ಜಾಯಮಾನ. ಯಾವಾಗಲೂ ಅರ್ಧ ಗಂಟೆಯಲ್ಲಿ ಮುಗಿಯುವ ಚಕ್ಕುಲಿ ಮಾಡುವ ಯೋಜನೆ ಆ ದಿನ ಗಂಟೆಗಟ್ಟಲೆ ನಡೆಯಿತು. ನನಗೆ ಮಾರನೆಯ ದಿನ ಮೈ ಕೈ ನೋವು! ಆದರೂ, ಬಂದವರಿಗೆಲ್ಲ ಚಕ್ಕುಲಿ ತಿನ್ನಲು ಕೊಟ್ಟು ಮನೆಗೂ ಕಟ್ಟಿಕೊಡುವ ಅತ್ತೆಯವರ ಸಂಭ್ರಮ ನೋಡಿದಾಗ ಎಲ್ಲ ನೋವೂ ಮರೆತು ಹೋಗಿತ್ತು. ಅವರು ಬಾಳಿ ಬದುಕಿದ ರೀತಿ ರಿವಾಜು ನಮ್ಮದಕ್ಕಿಂತ ಎಷ್ಟು ಭಿನ್ನ ಅಂತ ಆಶ್ಚರ್ಯದ ಜೊತೆಗೇ ಅಂದಿನ ಹಂಚಿ ತಿನ್ನುವ ಸಂಪ್ರದಾಯದ ಬಗ್ಗೆ ಗೌರವವೂ ಮನದಲ್ಲಿ ತುಂಬಿ ಬಂದಿತ್ತು.

ಪಾಕಶಾಸ್ತ್ರ ಪ್ರವೀಣರಾದ ಉಡುಪಿ ಕಡೆಯವರ ನಾಲಿಗೆ ಬಹಳ ಸೂಕ್ಷ್ಮ! ಊಟ-ತಿಂಡಿಯ ರುಚಿಯಲ್ಲಿ ಸ್ವಲ್ಪವೇ ವ್ಯತ್ಯಾಸವಾದರೂ, ಗುಣಮಟ್ಟ ಸ್ವಲ್ಪವೇ ಕುಸಿದರೂ ಅವರಿಗೆ ಬೇಗ ಗೊತ್ತಾಗಿಬಿಡುತ್ತದೆ. ಅದಕ್ಕಾಗಿಯೇ ರುಚಿಕರವಾಗಿಲ್ಲದ ಪದಾರ್ಥಗಳನ್ನು ಅವರು ವಿಶೇಷವಾದ ನುಡಿಗಟ್ಟುಗಳನ್ನು ಬಳಸಿ ವರ್ಣಿಸುತ್ತಾರೆ. ಈಗ ನಿಮಗೆ ಒಂದು ಟೆಸ್ಟ್. 'ಅವರ ಮನಿ ಚಟ್ನಿ ಮಿಂದ್ಕಂಡ್ ಬಂದಿತ್ ಮಾರಾಯ್ತಿ!' ಅಂದರೆ ಏನಿರಬಹುದು ಅಂತ ಊಹಿಸಿ ನೋಡೋಣ. 'ಮಿಂದ್ಕಂಡ್ ಬಂದಿತ್' ಅಂದರೆ ಮಿಂದುಕೊಂಡು ಬಂದಿತ್ತು ಅಥವಾ ಸ್ನಾನ ಮಾಡಿಕೊಂಡು ಬಂದಿತ್ತು ಅಂತ. ಅರ್ಥಾತ್ ಆ ಚಟ್ನಿಯಲ್ಲಿನ ಉಪ್ಪು ಖಾರ ಎಲ್ಲ ಆ 'ವಿಶೇಷ ಸ್ನಾನ'ದಲ್ಲಿ ಕೊಚ್ಚಿ ಹೋಗಿ ಅದು ತುಂಬ ಸಪ್ಪೆಯಾಗಿತ್ತು ಅಂತ! ಇನ್ನೊಂದು ನುಡಿಗಟ್ಟು: 'ಆ ಕಾಪಿ ಕುಡ್ದೆ. ಒಳ್ಳೆ ಕುದ್ರೆ ಉಚ್ಚೆ ಕುಡಿದ್ ಹಾಂಗಿತ್ತು.' ಇದು ಹೆಚ್ಚಿನ ವ್ಯಾಖ್ಯಾನವನ್ನು ಬೇಡುವುದಿಲ್ಲ. ನಿಮಗೇ ಅರ್ಥವಾಗಿರುತ್ತದೆ. ಆದರೆ ಒಂದೇ ಒಂದು ಪ್ರಶ್ನೆ. ಅವರಿಗೆ ಮುಂಚೆಯೇ ಕುದುರೆ ಉಚ್ಚೆಯನ್ನು ಕುಡಿದು ರುಚಿ ನೋಡಿದ ಅನುಭವವಿದೆಯೆ? ಅದರಿಂದಲೇ ಈ ಹೋಲಿಕೆ ಮಾಡುವುದು ಸಾಧ್ಯವಾಯಿತೆ?

ಊಟ-ತಿಂಡಿಗೂ ಎದೆಯ ಭಾವನೆಗಳಿಗೂ ಎಂತಹ ಗಂಟು ಅಲ್ವಾ? ಚಿಕ್ಕಂದಿನಲ್ಲಿ ಅಮ್ಮ ಊಟ ಮಾಡಿಸಿದ್ದ ಸುಖದ ಕ್ಷಣಗಳನ್ನು ಬಹುಶಃ ಯಾರೂ ಮರೆಯಲಾರರು. ನಾನು ಸುಮಾರು ಹನ್ನೆರಡು ವರ್ಷದವಳಿದ್ದಾಗ ಪ್ರೈವೇಟ್ ಆಗಿ ಹಿಂದಿ ಕಲಿಯುತ್ತಿದ್ದೆ. ಅದರಲ್ಲಿ 'ಪ್ರವೇಶಿಕಾ' ಅಂತ ಒಂದು ಪರೀಕ್ಷೆ ತೆಗೆದುಕೊಳ್ಳೋಕೆ ನಾವಿದ್ದ ಹುಣಸೂರು ಎಂಬ ಚಿಕ್ಕ ಊರಿನಿಂದ ನನ್ನ ತಂದೆ ಬೆಂಗಳೂರಿಗೆ ಕಾರಿನಲ್ಲಿ ಕರೆದುಕೊಂಡು ಹೋಗಿದ್ದರು. ಹೆಣ್ಣು ಮಗಳ ವಿದ್ಯೆಗೆ ಅಷ್ಟು ಶ್ರಮ ಯಾಕೆ? ಎಂಬ ಆ ಕಾಲದ ಧೋರಣೆಯನ್ನು ಅವರು ದೂರವಿಟ್ಟಿದ್ದರು. ಅವರು ನನ್ನ ಬಗ್ಗೆ ಹೊಂದಿದ್ದ ಮಹತ್ವಾಕಾಂಕ್ಷೆಗಳ ಒಂದು ಅಭಿವ್ಯಕ್ತಿಯಾಗಿತ್ತು ಈ ಬೆಂಗಳೂರು ಪ್ರಯಾಣ. ಅಲ್ಲಿ ಪರೀಕ್ಷೆ ಮುಗಿಯುತ್ತಲೇ ಅವರು ಯಾವುದೋ ಹೋಟಲಿನಿಂದ ತಂದ ಒಂದು ಮೊಸರನ್ನದ ಪ್ಯಾಕೆಟ್ ನನ್ನ ಕೈಯಲ್ಲಿಟ್ಟರು. ದ್ರಾಕ್ಷಿ ಹಣ್ಣು, ದಾಳಿಂಬೆ ಬೀಜಗಳನ್ನು ಹೊಂದಿದ್ದ ಅಷ್ಟು ರುಚಿಕರವಾದ ಮೊಸರನ್ನ ನಾನು ಜೀವನದಲ್ಲಿ ಇನ್ನೂ ಇದುವರೆಗೂ ಮತ್ತೆ ಉಂಡೇ ಇಲ್ಲ. ನನ್ನ ತಂದೆಯವರು ಹೋಗಿ ಅದೆಷ್ಟೋ ವರ್ಷಗಳಾದವು. ಆ ಹೋಟಲು ಕೂಡಾ ಈಗ ಇರಲಾರದು. ಆದರೆ ನನ್ನ ಮನಃಪಟಲದಲ್ಲಿ ಒತ್ತಿದ ಆ ಮೊಸರನ್ನದ ರುಚಿ, ಅದರಲ್ಲಿ ಮಿಳಿತವಾಗಿದ್ದ ಅಣ್ಣನ ಪ್ರೀತಿಯ ರುಚಿ ಮಾತ್ರ ಎಂದಿಗೂ ಮರೆಯಾಗದು.

ನಾವು ಪ್ರತಿ ಸಾರಿ ಅಮೆರಿಕಕ್ಕೆ ಬರುವಾಗಲೂ ಸೂಟ್‌ಕೇಸಿನಲ್ಲಿ ಒಂದು ದೊಡ್ಡ ಗೋಡಂಬಿ ಉಂಡೆಯ ಪ್ಯಾಕೆಟ್ ಇರುತ್ತಿತ್ತು. ನಮ್ಮ ಅತ್ತೆಯವರ ಕೊಡುಗೆ ಅದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೋಡಂಬಿ ಯಥೇಚ್ಛವಾಗಿ ಸಿಕ್ಕುತ್ತಿತ್ತು. ಮನೆಯಲ್ಲೇ ಗೋಡಂಬಿ ಹುರಿದು ಬೆಲ್ಲದ ಪಾಕದಲ್ಲಿ ಕಟ್ಟಿದ ಆ ಉಂಡೆಯ ರುಚಿ ಬಲ್ಲವನೇ ಬಲ್ಲ. ಆ ಉರಿಯುವ ಸೆಖೆಯಲ್ಲಿ

ಧಗಧಗ ಬೆಂಕಿಯ ಹಳೆಯ ಕಾಲದ ಒಲೆಯ ಮುಂದೆ ಕುಳಿತು ಸುರಿಯುವ ಬೆವರನ್ನು ಒರೆಸಿಕೊಳ್ಳುತ್ತಾ ಉಂಡೆ ಕಟ್ಟುವಾಗ ಒಂದೊಂದು ಉಂಡೆಯಲ್ಲೂ ಇಷ್ಟಿಷ್ಟು ಪ್ರೀತಿ ಒಸರಿತ್ತು. ಈಗ? ಆತ್ತೆಯಂತೂ ಇಲ್ಲ. ಗೋಡಂಬಿಯಲ್ಲಿ ಕ್ಯಾಲರಿ ಜಾಸ್ತಿ ಅಂತ ಬಾಯಿಗಿಡುವುದಕ್ಕೂ ಭಯ! ಇಲ್ಲ, ಆ ಗೋಡಂಬಿ ಉಂಡೆಯನ್ನು ನಾನು ಖಂಡಿತ ಮಿಸ್ ಮಾಡಿಕೊಳ್ಳುತ್ತಿಲ್ಲ. ಮಿಸ್ ಆಗುವುದು ಆ ಮಹಾ ತಾಯಿಯ ಪ್ರೀತಿ ಮಾತ್ರ. ನಮ್ಮನ್ನು ಕಳಿಸಿಕೊಡುವಾಗ ಮನೆಯ ಬಾಗಿಲಲ್ಲಿ ನಿಂತು ತುಂಬಿದ ಕಣ್ಣುಗಳಿಂದ ಮರೆಯಾಗುವವರೆಗೂ ನಮ್ಮನ್ನು ಕಾಣುತ್ತಿದ್ದ ಆ ನೋಟ ಇನ್ನೂ ಹಿಂಬಾಲಿಸುತ್ತಿದೆಯೋ ಏನೋ ಅನ್ನಿಸಿ ಹಿಂದೆ ತಿರುಗಿ ನೋಡುವಂತಾಗುತ್ತದೆ.

ಸುಧಾಮನ ಮುಂದೆ ಅವಲಕ್ಕಿಗಾಗಿ ಕೈಯೊಡ್ಡಿದ ಕೃಷ್ಣ, ಶಬರಿ ಕೊಟ್ಟ ಎಂಜಲು ಹಣ್ಣುಗಳನ್ನು ತಿಂದ ರಾಮ... ಹೀಗೆ ನಮ್ಮ ಪುರಾಣಗಳಲ್ಲಿ ತಿಂಡಿ, ತಿನಿಸಿನ ಮೂಲಕ ಹರಿದು ಬಂದ ಹೃದಯದ ಬಾಂಧವ್ಯಕ್ಕೆ ದೇವರು ಕೂಡಾ ಸೋತ ಕಥೆಗಳು ಯಥೇಚ್ಛವಾಗಿವೆ. ಹೀಗಿರುತ್ತಾ ನಮ್ಮ ಪಾಡೂ ಹಾಗಾಗಿರುವುದರಲ್ಲಿ ಆಶ್ಚರ್ಯವೇನು? ಇನ್ನು ಹಬ್ಬ, ಹರಿದಿನಗಳು ಬಂತೆಂದರೆ ಸಂಕ್ರಾಂತಿಗೆ ಬೀರುವ ಎಳ್ಳಿನಿಂದ ಹಿಡಿದು, ರಾಮ ನವಮಿಯ ಕೋಸಂಬರಿ, ನೀರು ಮಜ್ಜಿಗೆ ದಾಟಿ ಗಣೇಶನ ಹಬ್ಬದ ಕಡುಬು, ಮೋದಕದವರೆಗೆ ನಮ್ಮಲ್ಲಿ ಪ್ರತಿಯೊಂದು ಹಬ್ಬಕ್ಕೂ ಅದರದೇ ವಿಶಿಷ್ಟ ಊಟ-ತಿಂಡಿಗಳಿವೆ. ಒಂದೊಂದು ತಿಂಡಿಯ ಜೊತೆಗೂ ಒಂದೊಂದು ಹಬ್ಬದ ಜೊತೆಗೂ ಸಾವಿರ ನೆನಪುಗಳು ತಳುಕು ಹಾಕಿಕೊಂಡಿವೆ.

ನಮ್ಮ ಅಮೆರಿಕದಲ್ಲಿ 'ಕನ್ನಡ ಕೂಟ' ಅಂತ ಹೇಳುವ ಬದಲು 'ಕನ್ನಡ ಊಟ' ಅಂತ ಹೇಳಿದರೆ ಸರಿ ಹೋಗುತ್ತೆ ಅಂತ ನಾವೆಲ್ಲ ಹೇಳಿಕೊಳ್ಳುವುದು ತುಂಬ ಹಳೆಯ ಜೋಕು. ಸಮಾರಂಭದ ಶುರುವಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಭೆಯಲ್ಲಿ ಜನರೇ ಇಲ್ಲ ಅಂತ ಅನ್ನಿಸಿದರೂ ಕಡೆಗೆ ಊಟದ ಸಮಯಕ್ಕೆ ಸಭಾಂಗಣದಲ್ಲಿ ಜನ ಕಿಕ್ಕಿರಿದು ತುಂಬುತ್ತಾರೆ! ಈಗೀಗ ಐನೂರು, ಆರುನೂರು ಜನ ಫಂಕ್ಷನ್ನಿಗೆ ಬರೋದರಿಂದ ಹೊರಗಡೆ ಹೋಟಲು ಅಥವಾ ಅಡಿಗೆಯವರಿಗೆ ಹೇಳಿ ಊಟ ತರಿಸುತ್ತಾರೆ. ಮುಂಚೆ ನೂರೈವತ್ತು, ಇನ್ನೂರು ಜನ ಸೇರುವ ಕಾಲದಲ್ಲಿ ಕಮಿಟಿ ಮೆಂಬರುಗಳೇ ಮನೆಯಲ್ಲಿ ದೊಡ್ಡ ಕೊಳದಪ್ಪಲೆಗಳಲ್ಲಿ ಅಡಿಗೆ ಮಾಡಿ ತಗೊಂಡು ಹೋಗ್ತಾ ಇದ್ದರು. ಆಗ ಚಿತ್ರಾನ್ನ, ಪುಳಿಯೋಗರೆ ಮುಂತಾದುವನ್ನು ಒಂದು ತುತ್ತು ಬಾಯಿಗಿಟ್ಟ ಕೂಡಲೆ ಅದನ್ನು ಮಾಡಿದ್ದು ಯಾರು? ಅಂತ ಹಲವರಿಗೆ ತಿಳಿದು ಹೋಗುತ್ತಿತ್ತು! ಅಷ್ಟೊಂದು ಹತ್ತಿರವಾದ ಪರಸ್ಪರ ಸಂಬಂಧವಿತ್ತು ಕನ್ನಡ ಕೂಟಗಳಲ್ಲಿ- ಒಂದು ದೊಡ್ಡ ಅವಿಭಕ್ತ ಕುಟುಂಬದ ಹಾಗೆ.

ಈ ಬಗೆಯ ಬಾಂಧವ್ಯವನ್ನು ಗುರುತಿಸಿಯೇ ನಮ್ಮ ಭಾಷೆಯಲ್ಲಿ 'ಉಪ್ಪು ತಿಂದ ಮನೆಗೆ ಎರಡು ಬಗೆಯಬಾರದು', 'ಅನ್ನದ ಋಣ' ಮುಂತಾದ ಪದಗುಚ್ಛಗಳು ಹುಟ್ಟಿಕೊಂಡವು. ಆದರೆ ಗಾಂಧೀಜಿ ಅವರು ತಮ್ಮ ಉಪ್ಪಿನ ಸತ್ಯಾಗ್ರಹದ ಮೂಲಕ

'ಉಪ್ಪಿನ ಋಣ' ಎಂಬ ಪದಕ್ಕೆ ಬೇರೊಂದೇ ಆಯಾಮವನ್ನು ಕಲ್ಪಿಸಿಕೊಟ್ಟರು! ಬ್ರಿಟಿಷರ ಅನ್ಯಾಯದ ಉಪ್ಪಿನ ತೆರಿಗೆಯನ್ನು ವಿರೋಧಿಸಿ ಸ್ವಾಭಿಮಾನದಿಂದ ಎದ್ದು ನಿಲ್ಲಲು ಕೊಟ್ಟ ಅವರ ಕರೆ ದೇಶದ ಮೂಲೆಮೂಲೆಗಳಲ್ಲಿ ಮಾರ್ದನಿಸಿತ್ತು! ವಿಶ್ವವೇ ಆ ಕರೆಯನ್ನು ಕೇಳಿ ಎಚ್ಚತ್ತು ಗಮನ ನೀಡಿತ್ತು. ಉಪ್ಪಿನ ಹೆಸರಿನಲ್ಲಿ ಭಾರತ ತನ್ನ ಮೂಲಭೂತವಾದ ಹಕ್ಕಿಗಾಗಿ ಸಾತ್ವಿಕ ರೋಷವನ್ನು ಮೆರೆದಿತ್ತು! ಆ 'ಉಪ್ಪಿನ ಋಣ'ವನ್ನು ನಮ್ಮ ದೇಶ ಎಂದಾದರೂ ಮರೆಯಲಾದೀತೆ?

ನಮ್ಮ ಹೃದಯಕ್ಕೆ ಹೊಟ್ಟೆಯ ಮೂಲಕವೇ ದಾರಿ ಅಂತ ಕಂಡುಹಿಡಿದ ದಾಸರು ಆ ದಿವ್ಯ ಜ್ಞಾನವನ್ನು ತಮ್ಮ ಗೀತೆಗಳಲ್ಲಿ ಚೆನ್ನಾಗಿ ಬಳಸಿಕೊಂಡಿದ್ದಾರೆ. 'ರಾಮನಾಮ ಪಾಯಸಕ್ಕೆ ಕೃಷ್ಣ ನಾಮ ಸಕ್ಕರೆ, ವಿಠಲ ನಾಮ ತುಪ್ಪವ ಬೆರೆಸಿ ಬಾಯಿ ಚಪ್ಪರಿಸಿರೋ' ಅಂತ ಅವರು ಹಾಡುತ್ತಿದ್ದರೆ ಉಪ್ಪು, ಖಾರ ತಿಂದ ಯಾವ ಹುಲುಮಾನವ ತಾನೆ ಅದಕ್ಕೆ ಮರುಳಾಗದೆ ಇದ್ದಾನು? ಅದನ್ನು ಅರಿತೇ ದಾಸರು ಹಾಡಿದ್ದು 'ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ' ಅಂತ. ನಾವು 'ಎಲ್ಲಾರು ಮಾಡುವುದು ಹೊಟ್ಟೆಗಾಗಿ' ಎಂಬ ಮಾತನ್ನೇನೋ ಜೀವನದಲ್ಲಿ ರೂಢಿಸಿಕೊಂಡಿದ್ದೀವಿ. ಆದರೆ 'ಗೇಣು ಬಟ್ಟೆಗಾಗಿ' ಎಂಬ ಮಾತನ್ನು ಅಕ್ಷರಶಃ ಪಾಲಿಸಿದವರು ಕೌಪೀನಧಾರಿ ಸನ್ಯಾಸಿಗಳು ಮಾತ್ರ! ಅವರನ್ನು ಬಿಟ್ಟರೆ (ದಾಸರ ಪದಗಳನ್ನು ಕೇಳೇ ಇಲ್ಲದ) ಪಾಶ್ಚಾತ್ಯ ದೇಶಗಳ ಮಹಿಳೆಯರು ಬಿಕಿನಿ ಧರಿಸುವುದರ ಮೂಲಕ ದಾಸರನ್ನು ಗೌರವಿಸುತ್ತಿದ್ದಾರೆ! 'ಗೇಣು ಬಟ್ಟೆಗಾಗಿ' ಎಂಬ ನಮ್ಮ ಕರ್ನಾಟಕದ ದಾಸರ ಮಾತನ್ನು ನಿಜವಾಗಿಸಿದ ಈ ಮಹಿಳೆಯರನ್ನು ನೋಡುವಾಗ 'ಎತ್ತಣ ಮಾಮರ, ಎತ್ತಣ ಕೋಗಿಲೆ' ಅಂತ ಹೆಮ್ಮೆಯಾಗುತ್ತದೆ!

ಇನ್ನು ಸರ್ವಜ್ಞನೋ ನಾವು ಉಣ್ಣುವ ಆಹಾರ ಪದಾರ್ಥಗಳ ಮೇಲೆ ನಮ್ಮ ಆಕಾರವನ್ನು ಅಳೆಯಬಹುದು ಅಂತ ಸಾರಿಬಿಟ್ಟ. 'ಅಕ್ಕಿಯನು ತಿಂದವನು ಹಕ್ಕಿಯಂತಾಗುವನು, ಜೋಳವನು ತಿಂದವನು ತೋಳನಂತಾಗುವನು' ಎಂಬ ಸರ್ವಜ್ಞನ ಪದವನ್ನು ನೆನೆಸಿಕೊಂಡಾಗ ಇಲ್ಲಿ ಪ್ರಾಸಕ್ಕೆ ಹೆಚ್ಚು ಒತ್ತು ಕೊಟ್ಟಿದ್ದು ಗಮನಕ್ಕೆ ಬರುತ್ತದೆ. ಹಾಗೇ ಸರ್ವಜ್ಞನನ್ನು ಅನುಕರಿಸಿ ನಾವೂ 'ಮಾಂಸವನು ತಿಂದವನು ಹಂಸನಂತಾಗುವನು, ಬೀಫನ್ನು ತಿಂದವನು ಬೇಕೂಫನಾಗುವನು' ಅಂತ ಹಾಡಿದರೆ ಹೇಗೆ?

ವಿಸೀ ಅವರಿಗೆ ಮಸಾಲೆ ದೋಸೆ ಅಂದರೆ ತುಂಬ ಇಷ್ಟವಂತೆ. ಅವರು ಮಸಾಲೆ ದೋಸೆಯ ಬಗ್ಗೆ ಒಂದು ದೊಡ್ಡ ಕವನವನ್ನೇ ಬರೆದಿದ್ದಾರೆ. ಅವರ ಪ್ರಕಾರ ಮಸಾಲೆ ದೋಸೆ ಡಿಪ್ಲೊಮಸಿ ಮಾಡಿದರೆ ಈ ಪ್ರಪಂಚದಲ್ಲಿ ಯಾವ ಯುದ್ಧವೂ ಆಗುವುದಿಲ್ಲ. ಇಲ್ಲಿ ನೋಡಿ:

ಇದ್ದು ಬಿದ್ದ ಬುದ್ಧಿ ಎಲ್ಲ
ನೇರ ಹೊಟ್ಟೆಗಿಳಿದರೆ
ಯಾವ ಸ್ವರ್ಗ ಯಾವ ನರಕ
ಬೇಸರಗಳು ಜೀವಕೆ?

ಮಸ್ಸು ಗುಂಡು ಬಾಂಬು ಸಿಡಿತ
ವ್ಯರ್ಥವೆಸ್ನಿಸುತ್ತಿದೆ
ಎರಡು ಸ್ಪೆಷಲ್ ಊಡಿಸಿದರೆ
ಕುಸಿವುದು ಪಗೆ ಸೈನ್ಯವೇ

ಎರೆ ಉಂಡಿಪ ನಾಗವೆಂತು
ಕರಂ ಸಾಧುವಾಗುವುದೊ
ಗರಂ ಮಸಾಲೆ ದೋಸೆ ಅಂತು
ಡಿವಿಷನುಗಳ ಸದೆವುದು.

ಊಟ-ತಿಂಡಿಯ ವಿಷಯ ಎಷ್ಟೇ ಹಾಡಿ ಹೊಗಳಿದರೂ ಯಾವುದಕ್ಕೂ ಒಂದು ಮಿತಿ ಬೇಕು ಅಂತ ನಾನು ಒಪ್ಪಿಕೋತೀನಿ. ಮಿತಿಮೀರಿ ತಿಂದು ಒಬೀಸಿಟಿಗೆ ತುತ್ತಾದ ಜನ ನಮ್ಮ ಕಣ್ಮುಂದೆ ಇರುವಾಗ ಈ ಮಾತನ್ನು ಅಲ್ಲಗಳೆಯುವುದು ಹೇಗೆ? ಡಿವಿಜಿ ಅವರು ತಿನ್ನುವ ವಿಷಯದಲ್ಲೂ ಬ್ಯಾಲೆನ್ಸ್ ಇರಬೇಕು ಎಂಬ ಮಾತನ್ನು ಎಷ್ಟು ಚೆನ್ನಾಗಿ ಹೇಳಿದ್ದಾರೆ ನೋಡಿ:

ಉದರ ದೈವಕೆ ಜಗದೊಳೆದುರು ದೈವವದೆಲ್ಲಿ?
ಮೊದಲದರ ಪೂಜೆ; ಮಿಕ್ಕೆಲ್ಲವದರಿಂದ
ಮದಿಸುವುದದಾದರಿಸೆ, ಕುದಿವುದು ನಿರಾಕರಿಸೆ
ಹದದೊಳಿರಿಸುವುದೆಂತೊ? –ಮಂಕುತಿಮ್ಮ

ಹೊಟ್ಟೆಗೆ ಉಪಚಾರ ಮಾಡಿದ್ದು ಹೆಚ್ಚಾದರೆ ಮದಿಸುತ್ತಂತೆ, ನಿರಾಕರಿಸಿದರೆ ಕುದಿಯುತ್ತಂತೆ. ಹದವಲ್ಲಿ ಇಡೋದು ಹೇಗೊ? ಅಂತ ಅವರಿಗೂ ಚಿಂತೆ! ಆದರೆ ಏನೇ ಆದರೂ ಕದ್ದು ತಿನ್ನುವ ಪಂಚ ಭಕ್ಷ್ಯ ಪರಮಾನ್ನಕ್ಕಿಂತ ಸ್ವಾಭಿಮಾನದಿಂದ ರಾಗಿ ಮುದ್ದೆ ತಿನ್ನುವುದೇ ಮೇಲು ಅಂತ ಅರ್ಥ ಬರುವ ಈ ಕೆಳಗಿನ ಕಗ್ಗ ಓದಿ:

ರಾಗಿ ಮುದ್ದೆಯ ನುಂಗಿ ನಲಿದು ಬಾಳ್ವಾತಂಗೆ
ಕಾಗೆ ಕದ್ದುಣುವ ಭಕ್ಷ್ಯವ ಕಂಡು ಕರುಬೆ?
ನೀಗುವುದು ಹಸಿವನ್ ಉಣಿಸೆಂತಪ್ಪುದಾದೊಡಂ
ಬಾಗಿಸದಿರಾತ್ಮವನು –ಮಂಕುತಿಮ್ಮ

ನಾವು 'ಅನ್ನದಾತಾ ಸುಖೀಭವ' ಅಂತ ಹೇಳೋದು ವಾಡಿಕೆ. ಆದರೆ ನಿಜವಾದ ಅನ್ನದಾತ ಯಾರು? ಅಂಗಡಿಯಿಂದ ಅಕ್ಕಿ ತಂದು ಅನ್ನ ಮಾಡಿದವನೆ? ಇನ್ನೂ ಆಳವಾದ ಅರ್ಥದಲ್ಲಿ ಭತ್ತದ ಬೀಜ ಬೀಜಗಳಲ್ಲಿ ಹೊಚ್ಚಹೊಸ ಪೈರನ್ನು ಹುಲುಸಾಗಿ ಬೆಳೆದು ನಮಗೆಲ್ಲ

ನೀಡಿದ ರೈತನೇ ನಿಜವಾದ ಅನ್ನದಾತನಲ್ಲವೆ? ಆದರೆ ಅವನೆಂದಾದರೂ ತನ್ನ ಕೈಂಕರ್ಯದ ಬಗ್ಗೆ ಡಂಬತನದಿಂದ ನಗಾರಿ ಬಾರಿಸಿದ್ದುಂಟೆ?

ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ
ಫಲ ಮಾಗುವಂದು ತುತ್ತೂರಿ ದನಿಯಿಲ್ಲ
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ
ಹೊಲಿ ನಿನ್ನ ತುಟಿಗಳನು, ಮಂಕುತಿಮ್ಮ

ತುಟಿ ಎರಡು ಮಾಡದೆ ಇಳೆಯಿಂದ ಮೊಳಕೆಯೊಗೆಯುವುದಕ್ಕೆ ಪೂರಕವಾಗಿ ತನ್ನ ಮೈ ಮುರಿದು ದುಡಿಯುವ ಆ ನೇಗಿಲ ಯೋಗಿಯನ್ನು ಇಂದು ನಾವು ಹೇಗೆ ನೋಡಿಕೊಳ್ಳುತ್ತಿದ್ದೀವಿ? ದಿನಬೆಳಗಾದರೆ ಪೇಪರಿನಲ್ಲಿ ರೈತರ ಆತ್ಮಹತ್ಯೆಯ ಕಥೆಯೇ ಇರುತ್ತದೆ! ಕೈತುಂಬ ಸಂಬಳ ಬರುವ ಐಟಿ ಉದ್ಯಮಿಗಳಿಗೆ ಕರೆದು ಸಾಲ ಕೊಡುವ ಬ್ಯಾಂಕುಗಳು ರೈತರಿಗೆ ಸಾಲ ಕೊಡುವುದಕ್ಕೆ ಹಿಂದೆಮುಂದೆ ನೋಡುತ್ತವೆ. ಆತ್ಮಹತ್ಯೆಗೆ ಶರಣು ಹೋಗಬೇಕಾದರೆ ಅವನಿಗೆ ಬದುಕು ಎಷ್ಟು ಅಸಹನೀಯವಾಗಿದ್ದಿರಬೇಕು!

ಅನ್ನದಾತ ರೈತನಿಗೆ ಕೊಡುವ ಗೌರವ ಕಡಿಮೆಯಾದ ಹಾಗೆ ನಾವು ಅನ್ನಕ್ಕೆ ಕೊಡುವ ಗೌರವವೂ ಕಡಿಮೆಯಾಗಿದೆ. ಕಾರಿಗೆ ಪೆಟ್ರೋಲು ತುಂಬಿದಷ್ಟೇ ನಿರ್ಲಕ್ಷ್ಯದಿಂದ ಹೊಟ್ಟೆಗೆ ಅನ್ನ ತುರುಕಲಾದೀತೆ? ಮುಂಚೆ ಊಟದ ಹೊತ್ತಿನಲ್ಲಿ ನೆಲದ ಮೇಲೆ ಚಟ್ಟಮುಟ್ಟ ಹಾಕಿ ಕುಳಿತು ತಟ್ಟೆ ಅಥವಾ ಎಲೆಗೆ ನೀರಿನಲ್ಲಿ ಸುತ್ತು ಕಟ್ಟಿ ಊಟ ಶುರು ಮಾಡುತ್ತಿದ್ದರು. ವಿಶೇಷ ಸಮಾರಂಭಗಳಲ್ಲಿ ಎಲೆಗೆ ಉಪ್ಪು, ಉಪ್ಪಿನಕಾಯಿ, ಚೂರು ಪಾಯಸ, ಚಿತ್ರಾನ್ನ, ಕೋಸಂಬರಿ, ಪಲ್ಯ, ಅನ್ನ ಎಲ್ಲ ಬಡಿಸಿಯಾದ ಮೇಲೆ 'ಗೋವಿಂದಾ, ಗೋವಿಂದ' ಅಂತ ಹೇಳಿ ಆಮೇಲೆ ಊಟ ಶುರು ಮಾಡುತ್ತಿದ್ದರು. ಈಗ? 'ಈಟ್ ಆನ್ ದಿ ರನ್' ಎಂಬ ಇಂಗ್ಲಿಷ್ ಹೇಳಿಕೆಯನ್ನು ಅವರಿಗಿಂತ ನಾವೇ ಚೆನ್ನಾಗಿ ಸಾರ್ಥಕಗೊಳಿಸಿದ್ದೀವಿ. ಇತ್ತೀಚೆಗೆ ಹುಟ್ಟಿಕೊಂಡ ದರ್ಶಿನಿ ಹೋಟಲುಗಳಲ್ಲಿ ನಿಂತು ತಿನ್ನುವುದೇ ಫ್ಯಾಷನ್. ಬೀದಿ ಬದಿಯ ಕಾರ್ನರ್ ಹೋಟಲುಗಳ ಮುಂದೆ ಬೀದಿಯಲ್ಲೇ ನಿಂತು ದೋಸೆ, ಪೂರಿ, ವಡೆ ಎಲ್ಲವನ್ನೂ ಕಬಳಿಸಲಾಗುತ್ತದೆ. ಅಷ್ಟೇಕೆ? ನಾಮಕರಣ, ಶಾಂತಿ ಮುಂತಾದ ಚಿಕ್ಕಪುಟ್ಟ ಸಮಾರಂಭಗಳಲ್ಲಿಯೂ ಅತಿಥಿ ಅಭ್ಯಾಗತರಿಗೆ ಊಟಕ್ಕಾಗಿ ಕುಳಿತುಕೊಳ್ಳುವ ವ್ಯವಸ್ಥೆ ಇರುವುದಿಲ್ಲ ಕೆಲವೊಮ್ಮೆ! ನಾರ್ತ್ ಇಂಡಿಯನ್, ಸೌತ್ ಇಂಡಿಯನ್ ಮಾದರಿಯ ಸಕಲ ಭಕ್ಷ್ಯ, ಭೋಜ್ಯಗಳನ್ನೂ ಬಂದವರು ನಿಂತಲ್ಲೇ ಸ್ವಾಹಾ ಮಾಡಿ ಹೋಗುತ್ತಾರೆ! ಅಂದರೆ ಊಟದ ವಿಷಯದಲ್ಲಿ ಕ್ವಾಂಟಿಟಿ ಹೆಚ್ಚಾಗಿದೆ, ಕ್ವಾಲಿಟಿ ಕಡಿಮೆಯಾಗಿದೆ. ಇಲ್ಲಿ ಕ್ವಾಲಿಟಿ ಅಂದರೆ ನಾನು ಹೇಳುವುದು ಊಟದ ರುಚಿ, ಶುಚಿಯ ಬಗ್ಗೆ ಅಲ್ಲ. ಊಟದ ವಿಷಯಕ್ಕೆ ಅತಿಥಿಗಳಾಗಲಿ, ಆತಿಥೇಯರಾಗಲಿ ಇಟ್ಟಿರುವ ಗೌರವದ ಬಗ್ಗೆ, ಕೊಡುವ ಪುರಸ್ಕಾರದ ಬಗ್ಗೆ.

ಒಂದು ತುತ್ತು ಅನ್ನವನ್ನೇ ತಿಂದರೂ ಆ ಅನ್ನದ ಬಗ್ಗೆ ಗೌರವ ಭಾವನೆ ಇದ್ದು, ಅದನ್ನು ನೀಡಿದ ದಿವ್ಯ ಶಕ್ತಿಯ ಬಗ್ಗೆ ಧನ್ಯತೆ ಇದ್ದರೆ ಎಷ್ಟು ಚೆನ್ನ! ಕ್ರಿಶ್ಚಿಯನ್ನರಲ್ಲೂ ಉಣ್ಣುವುದಕ್ಕೆ ಮುಂಚೆ ದೇವರನ್ನು ವಂದಿಸುವ ಸಂಪ್ರದಾಯ ಇದೆ! ನಮ್ಮ ಮುಂದೆ ತಟ್ಟೆಯಲ್ಲಿ ಇರುವ ಅನ್ನ ಒಂದು ದಿವ್ಯ ಶಕ್ತಿಯ ಮೂರ್ತ ರೂಪ. ಆ ಅನ್ನ ನಮ್ಮ ಒಡಲನ್ನು ಸೇರಿದೊಡನೆ ಪಚನ ಕ್ರಿಯೆ ಪ್ರಾರಂಭವಾಗುತ್ತದೆ. ಆಯಾ ಆಹಾರ ಜೀರ್ಣವಾಗುವುದಕ್ಕೆ ಬೇಕಾದ ರಸಗಳು, ಎನ್‌ಜೈಮುಗಳು ತಕ್ಕ ಪ್ರಮಾಣದಲ್ಲಿ ಬಿಡುಗಡೆಯಾಗಿ ಆಹಾರ ಜೀರ್ಣವಾಗುತ್ತದೆ. ಅನ್ನದಲ್ಲಿ ಅಡಕವಾದ ಆ ಶಕ್ತಿ ದೇಹವನ್ನೆಲ್ಲ ವ್ಯಾಪಿಸಿ ನಮ್ಮ ಎಲ್ಲ ಕಾರ್ಯಕಲಾಪಗಳಿಗೆ, ವ್ಯವಹಾರಗಳಿಗೆ ಹಿಂದೆ ಶ್ರೀರಕ್ಷೆಯಾಗಿ ನಿಂತು ಕೆಲಸ ಮಾಡುತ್ತದೆ! ನಿಶ್ಶಬ್ದವಾಗಿ ಸೂತ್ರ ಹಿಡಿದು ಇಡೀ ಪ್ರಪಂಚವನ್ನೇ ನಡೆಸುತ್ತಿರುವ ಆ ಅನ್ನ ಬ್ರಹ್ಮನಿಗೆ ನಮೋನಮಃ (ಇದನ್ನು ನಿಮ್ಮ ನಿಮ್ಮ ಆಹಾರಕ್ಕನುಗುಣವಾಗಿ ಬ್ರೆಡ್ಡು ಬ್ರಹ್ಮನಿಗೆ ನಮೋನಮಃ ಅಥವಾ ರಾಗಿ ಮುದ್ದೆ ಬ್ರಹ್ಮನಿಗೆ ನಮೋನಮಃ ಅಂತ ಬದಲಾಯಿಸಿಕೊಳ್ಳ ಬಹುದು). ಈ ಮಾತನ್ನು ಸರ್ವಜ್ಞ ಬಹಳ ಚೆನ್ನಾಗಿ ಹೇಳಿದ್ದಾನೆ:

ಅನ್ನ ದೈವದ ಮುಂದೆ ಇನ್ನು ದೈವವು ಉಂಟೆ?
ಅನ್ನವಿರುವನಕ ಪ್ರಾಣವು; ಜಗದೊಳ-
ಗನ್ನವೇ ದೈವ! ಸರ್ವಜ್ಞ

'ಅನ್ನ ದೈವದ ಮುಂದೆ ಇನ್ನು ದೈವವು ಉಂಟೆ?' ಎಂಬ ಆ ಸಾಲು ನಮ್ಮಲ್ಲಿ ಕೆಲವರ ಪಾಲಿಗೆ ಸರ್ವಜ್ಞನ ಒಂದು ವಚನ ಮಾತ್ರವಾದರೆ ಇನ್ನು ಹಲವು ನತದೃಷ್ಟರ ಪಾಲಿಗೆ ಈ ಮಾತು ಅವರ ಬದುಕಿನ ದಾರುಣ ಸತ್ಯ! ದಿನದಿನದ ಘೋರ ವಾಸ್ತವಿಕತೆ! ಊಟ ತಿಂಡಿಯ ಬಗ್ಗೆ ನಾವು ಹಾಸ್ಯವಾಗಿ ಮಾತುಕತೆಯಾಡುತ್ತಿರುವಾಗಲೇ ಜಗತ್ತಿನ ಮೂಲೆಮೂಲೆಗಳಲ್ಲಿ ಅನ್ನಕ್ಕಾಗಿ ಕಣ್ಣೀರಿಡುತ್ತಿರುವ ಕೋಟಿ ಕೋಟಿ ಜನ ಇದ್ದಾರೆಂಬ ಕಟು ಸಂಗತಿಯನ್ನು ಹೇಗೆ ತಾನೆ ಮರೆಯಲಾದೀತು? ಅವರೆಲ್ಲರನ್ನು ನೆನೆಯುತ್ತಾ ನಮ್ಮ ಸಹಮಾನವರು ಹಸಿದ ಹೊಟ್ಟೆಯಲ್ಲಿ ಗೋಳಿಡುವ ದಿನಗಳ ಅಂತ್ಯವನ್ನು ಹಾರೈಸುತ್ತಾ ನನ್ನ ಲೇಖನವನ್ನು ಮುಗಿಸುತ್ತೇನೆ. ಹೋಗುವುದಕ್ಕೆ ಮುಂಚೆ ಒಂದು ಮಾತು: ಜೀವನದಲ್ಲಿ ಟೆನ್ಷನ್ ಮಾಡಿಕೊಂಡು ಊಟಕ್ಕೆ ಅಟೆನ್ಷನ್ ಕೊಡದೆ ಇರಬೇಡಿ. ಚೆನ್ನಾಗಿ ತಿಂದುಂಡು ಸುಖವಾಗಿರಿ.

●

ನಾವು ಜಿ. ಪಿ. ಎಸ್. ಆಗಿದ್ದು!

–ಮೀನಾ ಸುಬ್ಬರಾವ್

ಸುಮಾರು ೩೫ ವರುಷಗಳ ಹಿಂದಿನ ಘಟನೆಯಿದು. ಜಿ.ಪಿ.ಎಸ್, ಮೊಬೈಲ್ ಫೋನ್, ಇಮೈಲ್ ಇಲ್ಲದ ಕಾಲ. ಬೇಸಿಗೆಯ ರಜಾದಿನಗಳಲ್ಲೊಂದು ದಿನ. ಬಿಸಿಲಿನ ಝಳ ಸ್ವಲ್ಪ ಸ್ವಲ್ಪವಾಗೇ ಕಡಿಮೆಯಾಗುತ್ತಿತ್ತು. ಸಂಜೆಯು ನಿಧಾನವಾಗಿ ಆವರಿಸುತ್ತಿತ್ತು. ಶಾಲೆಗೆ ಬೇಸಿಗೆ ರಜವಾದ್ದರಿಂದ ಓದುವ ಕೆಲಸಕ್ಕೆ ಬಿಡುವು ದೊರೆತು ಆಟವಾಡುವ ಹುಮ್ಮಸ್ಸಿನಿಂದ ಸಂಜೆಯಾಗುತ್ತಲೇ ಹೊರಗೆ ಹೊರಟೆವು ಒಂದು ದೊಡ್ಡ ಹಿಂಡು- ಗೆಳೆಯರು, ಗೆಳತಿಯರು, ಅಕ್ಕತಂಗಿಯರು, ಎಲ್ಲರೂ ಒಡಗೂಡಿ. ಊರಿನಲ್ಲಿ ಇದ್ದ ಒಂದೇ ಉದ್ಯಾನವನ ಮತ್ತು ಅದರ ಸಮೀಪದಲ್ಲೇ ಇದ್ದ ಪ್ರವಾಸಿ ಬಂಗಲೆ ಎರಡೂ ಆಕರ್ಷಕವಾಗಿದ್ದು, ಅಲ್ಲಿಗೆ ಹೋಗಿ ಆಟವಾಡಿ ಬರುವುದು ಎಂದು ನಿಶ್ಚಯಿಸಿ, ಸವಾರಿ ಶುರುಮಾಡಿದೆವು. ನಮ್ಮ ಮೆದುಳಿನ ಜಿ.ಪಿ.ಎಸ್. ಸಿಸ್ಟಮ್‌ನಲ್ಲಿ ಡೆಸ್ಟಿನೇಶನ್ ಎಂಟರ್ ಮಾಡಿ, ಮಾರ್ಗ– 'ಬಸ್ ನಿಲ್ದಾಣ ಮುಖಾಂತರ' ಎಂದು ಆಯ್ದೆವು.

ಊರಿನ. ಪ್ರಮುಖ ಬಸ್ ನಿಲ್ದಾಣದ ಮೂಲಕ ಹಾದು ಹೋಗುತ್ತಿದ್ದಾಗ... ಇದೊಂದು ರಸಿಕರ ರಾಜ್ಯವೇ ಸರಿ!

ಕುರ್ರೋ-ಬರ್ರೋ ಬಸ್ಸಿನ ಶಬ್ದಗಳು, ಚರ್-ಚರ್ ಬಸ್ಸಿನ ಬಾಗಿಲುಗಳು ತೆರೆದು ಹಾಕಿ ಮಾಡುತ್ತಿದ್ದ ಗದ್ದಲ, 'ಯಾರ್ರೀ, ಯಾರ್ರೀ, ಅರಸಿಕೆರೆ, ತಿಪ್ಟೂರ್, ತುಮ್ಕೂರ್, ಬೆಂಗಳೂರ್- ನಾನ್ ಸ್ಟಾಪ್' ಅಂತ ಕೂಗುವ ಕಂಡಕ್ಟರ್‌ಗಳು, 'ಬಾಣಾವರ ಸ್ಟಾಪ್ ಇಲ್ಲರೀ' ಅನ್ನುತ್ತಿದ್ದ ಚಾಲಕರ ಕೂಗಾಟ, 'ಕಡ್ಲೆ ಕಾಯ್, ಖಾರಾಪುರಿ, ಕಿತ್ತಳೆ ಹಣ್ಣು, ಕಡ್ಲೇ ಗಿಡ- ಒಂದೇ ಒಂದು ತಗಳ್ಳವ್ವ, ಬೋಣಿಗೆ ಕಣವ್ವಾ' ಅಂತ ಬೇಡುತ್ತಿರುವ ನಮ್ಮ ವಯಸ್ಸಿನ ಹುಡುಗ, ಹುಡುಗಿಯರು, ಅವರದೇ ಬಸ್ ನಿಲ್ದಾಣ ಅನ್ನೋ ತರಹ ಎಲೆ-ಅಡಿಕೆ ಜಗಿದು, ಅಲ್ಲಲ್ಲಿ ಉಗಿಯುತ್ತಿರುವವರು ಕೆಲವರಾದರೆ, ಬಾಳೆಹಣ್ಣು ತಿಂದು, ಸಿಪ್ಪೆಯನ್ನು ಅಲ್ಲೇ ಎಸೆದು ಜಾರಿ ಬೀಳುವವರಿಗೆ ಅಣಿಮಾಡಿಕೊಟ್ಟವರು ಮತ್ತಿತರರು. ಕಾಲೇಜ್ ಕಿಶೋರಿಯರು 'ತಾವು ಈ ಗ್ರಹಕ್ಕೆ ಸೇರಿದವರಲ್ಲ' ಎಂದು ಹೇಳುತ್ತಾ, ಕೈಯಲ್ಲೊಂದು ಇಂಗ್ಲಿಷ್ ಪುಸ್ತಕ ಅಥವಾ ಫಿಲ್ಮ್-ಫೇರ್ ಮಾಸಿಕವನ್ನು ಓದುತ್ತಿರುವಂತೆ ನಟಿಸುತ್ತಿದ್ದರೆ, ಇವರಿಗೆ ಲೈನ್ ಹೊಡೆಯುವುದಕ್ಕೇ ಬಂದ ಯುವಕರು, ಅಲ್ಲಿ-ಇಲ್ಲಿ ನೋಡುತ್ತಾ ಅವರ ಹಿಂದೆ-ಮುಂದೆ ನಿಂತು ಬಸ್ಸಿಗೆ ಕಾಯುವಂತೆ ವರ್ತಿಸುತ್ತಿದ್ದವರು ಕೆಲವರು.

ಗಂಡು-ಹೆಣ್ಣು ಹುಡುಕಿಕೊಂಡು ಸುಸ್ತಾದ ಮಧ್ಯವಯಸ್ಕ ಗಂಡಸರು, ವಯಸ್ಸಾದ ಗಂಡಸರು ಸಂಭಾಷಣೆ ನಡೆಸುತ್ತಾ: 'ಏನಂದ್ರೀ, ಜಾತಕ ಆಗುಲ್ವೇ? ನಮ್ ಹುಡುಗೀದು? ನಕ್ಷತ್ರ ಆಗುತ್ತಲ್ಲ... ಮಖಾ ನಕ್ಷತ್ರ, ಎಲ್ಲ ನಕ್ಷತ್ರಕ್ಕೂ ಹೊಂದುತ್ತೆ ಅಲ್ವೇ?'. ತಾತಂದಿರು ನಸ್ಯವನ್ನು ಮೂಗಿಗೆ ತೂರಿಸಿಕೊಂಡು ಒಂದು ದೊಡ್ಡ ಸೀನು ಸೀನಿ, ಒಂಟಿ ಸೀನಿನ ಘಳಿಗೆ ಸರಿ ಇಲ್ಲ ಎಂದು ತೋರಿಸುತ್ತಾ, 'ನೋಡೋಣ ಬಿಡೀ, ಇನ್ನೂ ಹುಡುಗರಿದ್ದಾರೆ ನಮ್ಮ ಕಡೆ. ಬರೊ ಭಾನುವಾರ ಮೇಟಿಕುರ್ಕೆಗೆ ಹೋಗ್ತಾ ಇದೀನಿ, ಆಷಾಢ ಮುಗಿದ ಮೇಲೆ ಚರ್ಚಿಸೋಣ' ಅಂತ ಸಮಾಧಾನ ಹೇಳಿ, 'ಬಸ್ ಬಂತು' ಅಂತ ತಪ್ಪಿಸಿಕೊಂಡ ಪುಣ್ಯಾತ್ಮರೂ ಇದ್ದರು.

ಇದನ್ನೆಲ್ಲಾ ಕಣ್ತುಂಬ ನೋಡಿ ಆನಂದಿಸುತ್ತಾ, ಕಡ್ಲೇ ಕಾಯಿ, ಖಾರದಪುರಿ ಕಟ್ಟಿಸಿಕೊಂಡು, ಖರೀದಿ ಮಾಡುತ್ತಿರುವಾಗ, ನಿಂತ ಬಸ್ಸೊಂದರಿಂದ ಒಬ್ಬರು ಅಜ್ಜಿ, ಯುವತಿ, ಟ್ರಂಕು ಮತ್ತು ಚೀಲದೊಂದಿಗೆ ಕೆಳಗಿಳಿದರು. ಇಬ್ಬರ ಮುಖದಲ್ಲೂ ಸ್ವಲ್ಪ ಆತಂಕವಿತ್ತು. ಅವರ ನಡುವೆ ಸಂಭಾಷಣೆ ಹೀಗೆ ಸಾಗಿತ್ತು-

ಅಜ್ಜಿ : (ನಮ್ಮನ್ನೆಲ್ಲಾ ನೋಡುತ್ತಾ) 'ನೋಡೇ ಶಾಂಭವಿ, ಈ ಹುಡುಗರನ್ನ ಕೇಳೇ, ನಮ್ಮ ಶ್ರೀಧರನ ಮನೆ ಎಲ್ಲಿ ಈ ಊರಲ್ಲಿ? ಅಂತ.'

ಶಾಂಭವಿ: 'ಅಜ್ಜಿ, ಈ ಹುಡುಗರು ಕಡ್ಲೇಪುರಿ ತಗೊಂಡು ಎಲ್ಲಿಗೋ ಹೋಗ್ತಿವೆ. ಅಷ್ಟಕ್ಕೂ ಇವುಕ್ಕೇನು ಗೊತ್ತಿರತ್ತೆ ನಮ್ಮ ಶ್ರೀಧರ ಮಾಮನ ಮನೆ?'

ಅಜ್ಜಿ: 'ಕೇಳೋದ್ ಕೇಳು, ನೋಡೋಣ.'

ಶಾಂಭವಿ: (ನಮ್ಮನುದ್ದೇಶಿಸಿ) 'ನಮ್ಮ ನೆಂಟರೊಬ್ಬರು ಈ ಊರಿನ 'ಕೋಟೆ'ಯಲ್ಲಿದ್ದಾರೆ, ಹೆಸರು ಶ್ರೀಧರ್ ಅಂತ. ಅವರಿಗೆ ನಾವು ಬರೋದು ತಿಳಿದಿಲ್ಲ. ಹಾಗೇ ದಾರೀಲಿ ಇಳಿದು ನೋಡಿಕೊಂಡು ಹೋಗೋಣ ಅಂತ ಬಂದ್ವಿ. ನಿಮಗೇನಾದರೂ ಅವರ ಮನೆ ಗೊತ್ತಾ?'

ನಾವೆಲ್ಲ: 'ಶ್ರೀಧರ್ ಅನ್ನೋವರು ತುಂಬಾ ಜನ ಇದ್ದಾರೆ ಕೋಟೇಲಿ, ಅವರು ನೋಡಕ್ಕೆ ಹೇಗಿದಾರೆ ಅಂತ ಹೇಳಿ?'

ಶಾಂಭವಿ: 'ಎತ್ತರಕ್ಕೆ, ಬೆಳ್ಳಗೆ ಇದ್ದಾರೆ. ಮಧ್ಯ ವಯಸ್ಕರು, ಕನ್ನಡಕ ಇಲ್ಲ, ತಲೆಯಲ್ಲಿ ಸ್ವಲ್ಪ ಸೆಂಟ್ರಲ್ ಬಾಲ್ಡ್ ನೆಸ್, ತೆಳ್ಳಗೂ ಇಲ್ಲ, ದಪ್ಪಗೂ ಇಲ್ಲ.'

ನಾವು: 'ಅವರು ಕೆ.ಇ.ಬಿ.ನಲ್ಲಿ ಕೆಲಸ ಮಾಡ್ತಾರಾ? ಎರಡು ಸಣ್ಣ ಹೆಣ್ಣು ಮಕ್ಕಳು ಅವರಿಗೆ ಅಲ್ವಾ?'

ಅಜ್ಜಿ: 'ಹೌದು ಕಣೇ ಶಾಂಭವಿ, ಶ್ರೀಧರ ಕೆ.ಇ.ಬಿ.ನಲ್ಲೇ ಕೆಲಸ ಮಾಡೋದು, ಅವನಿಗೆ ಎರಡು ಹೆಣ್ಣು ಮಕ್ಕಳು.'

ನಾವು: 'ಅವರನ್ನ ಕೋಟೇಲಿ ನೋಡಿದೀವಿ, ಅವರ ಮನೆ ಗೊತ್ತಿಲ್ಲ ಕೋಟೇಲಿ ಎಲ್ಲಿ ಅಂತಾ. ಹೇಗಿದ್ರೂ ನಾವೆಲ್ಲ ಪ್ರವಾಸಿ ಮಂದಿರದ ಹತ್ತಿರ ಉದ್ಯಾನವನಕ್ಕೆ ಹೊರಟಿದ್ದೇವೆ, ಅಲ್ಲೇ ಹತ್ತಿರ ಕೆ.ಇ.ಬಿ. ಕಚೇರಿನೂ ಇದೆ. ನಿಮ್ಮನ್ನು ಅಲ್ಲಿಗೆ ಬಿಡುತ್ತೇವೆ' ಎಂದು ನಮ್ಮ ಜಿ.ಪಿ.ಎಸ್.ನಲ್ಲಿ ಮೊದಲನೇ ಡೆಸ್ಟಿನೇಶನ್- ಕೆ.ಇ.ಬಿ. ಕಚೇರಿ, ಎರಡನೇ ಡೆಸ್ಟಿನೇಶನ್- ಉದ್ಯಾನವನ, ಮೂರನೇ ಡೆಸ್ಟಿನೇಶನ್- ಪ್ರವಾಸಿ ಮಂದಿರ ಅಂತ ಎಂಟ್ರೀ ಹಾಕಿ. ಅಜ್ಜಿ, ಶಾಂಭವಿ ಅವರನ್ನು ಹೊರಡಿಸಿ, ಕೂಲಿ ಹುಡುಗನ ತಲೆಯ ಮೇಲೆ ಅಜ್ಜಿಯ ಟ್ರಂಕ್ ಹೊರಿಸಿ, ಕಡೆಗೂ ಒಂದ್ ಸಲ ಬಸ್ ನಿಲ್ದಾಣದಿಂದ ಹೊರ ಹೊರಟೆವು. ನಮ್ಮ ಹಿಂದೆ ಶಾಂಭವಿ, ಅಜ್ಜಿ, ಅಜ್ಜಿ ಹಿಂದೆ ಕೂಲಿ ಹುಡುಗ ಟ್ರಂಕಿನೊಡನೆ, ಮೆರವಣಿಗೆಯಂತಿತ್ತು ನಮ್ಮ ಸವಾರಿ. ಅದಕ್ಕೇ ಹೇಳೋದು 'ಎಲ್ಲಾದರೂ ಹೊರಟಾಗ ಮಧ್ಯೆ ನಿಲ್ಲಿಸಬಾರದು' ಅಂತ. ಅದರಲ್ಲೂ ಬಸ್ ನಿಲ್ದಾಣದಲ್ಲಿ ಜಾಸ್ತಿ ಹೊತ್ತು ಇದ್ದರೆ, ಈ ತರಹ ಏನಾದರೂ ಬಂದು ಒಕ್ಕರಿಸುತ್ತೆ. ನಮ್ಮ ಜಿ.ಪಿ.ಎಸ್. ಕೂಡಾ ಒಂದು ವಾರ್ನಿಂಗ್ ಕೊಟ್ಟಿತ್ತು ನಾವು ಬಸ್ ನಿಲ್ದಾಣದಲ್ಲಿ ಪ್ರಯಾಣ ನಿಲ್ಲಿಸಿದಾಗ- 'ರೀ ರೌಟಿಂಗ್, ಕ್ಯಾಲಿಕ್ಯುಲೇಟಿಂಗ್ ದ ರೌಟ್' ಅಂತ.

ಅಜ್ಜಿ 'ಉಸ್ಸಪ್ಪಾ-ಉಸ್ಸಪ್ಪ' ಅಂತಲೇ ಬಿರುಸಾಗಿ ನಡೆದಿತ್ತು. ನಾವು ಐದು ಗಂಟೆಯೊಳಗೆ ಕೆ.ಇ.ಬಿ. ಕಚೇರಿ ತಲುಪಬೇಕಿತ್ತು, ೧೦ ನಿಮಿಷಗಳ ಅವಧಿಯಷ್ಟೇ ಇತ್ತು. ಎಷ್ಟು ವೇಗವಾಗಿ ನಡೆಯಬೇಕು ಅಂತ ಲೆಕ್ಕಾಚಾರ ಹಾಕಲು ಸಮಯವಿರಲಿಲ್ಲ. ನಮ್ಮ ನಮ್ಮಲ್ಲೇ ಮಾತಾಡಿಕೊಂಡ್ವಿ 'ಬೇಗ ಇವರನ್ನ ಕೆ.ಇ.ಬಿ. ಕಚೇರಿಯಲ್ಲಿ ಸಾಗುಹಾಕಿ ನಾವು ಉದ್ಯಾನವನ ತಲುಪೋದು' ಅಂತ. ಕೂಲಿ ಹುಡುಗ ಕೊಂಕು ಶುರು ಮಾಡ್ದ 'ಇನ್ನೂ

ಎಷ್ಟು ದೂರ ಐತೆ? ಎಂಟಾಣೆ ಕಮ್ಮಿಯಾಯ್ತು'. ಇದೆಲ್ಲಿ ಗ್ರಹಚಾರ ನಮ್ಮದು? ಫ್ರೀ ಜಿ.ಪಿ.ಎಸ್, ಫ್ರೀ ಡೈರಕ್ಷನ್ಸ್, ಫ್ರೀ ಪಬ್ಲಿಕ್ ಸರ್ವೀಸ್. ಇಷ್ಟಾದ್ರೂ ಹೊಸ ಸಮಸ್ಯೆ. ಅವನಿಗೆ ಇನ್ನೇನ್ ಸಿಕ್ತು ಅಂತ ಸಮಾಧಾನ ಹೇಳಿ ಹಾಗೂ ಹೀಗೂ ಕೆ.ಇ.ಬಿ. ಕಚೇರಿ ತಲುಪಿ, ಅಲ್ಲೇ ಹೊರಗೆ ಬರುತ್ತಿದ್ದ ಕೆಲಸಗಾರರನ್ನು ಕೇಳಿದ್ವಿ 'ಶ್ರೀಧರ್ ಎಲ್ಲಿ ಸಿಕ್ತಾರೆ?' ಅಂತ.

ಅವರಲ್ಲೊಬ್ರು 'ಇದೇನ್ ಈಗ್ ಬಂದ್ ಕೇಳ್ತಿದ್ದೀರಾ? ಅವರ ಮನೆ ದೂರಾ ಅಂತ ಅವರು, ಮುಂಚಿನೇ ಮನೆಗೆ ಹೋಗ್ತಾರೆ ಸಾಮಾನ್ಯವಾಗಿ. ಇದ್ದರೆ, ಆ ಕೊನೇ ಕೋಣೇಲಿ ನೋಡಿ' ಅಂತ ಹೇಳಿ ನಮ್ಮಿಂದ ತಪ್ಪಿಸಿಕೊಂಡರು. ಎಲ್ಲರೂ ಹೇಗೋ ತಪ್ಪಿಸಿಕೊಳ್ತಾರೆ, ಆದರೆ ನಮಗ್ಯಾಕೋ ಇವತ್ತು ಈ ಅಜ್ಜಿ, ಶಾಂಭವಿಯಿಂದ ಬಿಡುಗಡೆ ಕಾಣೆಸಲಿಲ್ಲ. ಇನ್ನು, ಶ್ರೀಧರ್ ಅವರು ಮನೆಗೆ ಹೊರಟಿದ್ದರೆ, ನಾವೇ ಇವರನ್ನು ಕೋಟೇವರೆಗೂ ಕರೆದುಕೊಂಡು ಹೋಗ್ಬೇಕಾಗಬಹುದು ಅಂತ ಯೋಚಿಸಿ, ತಕ್ಷಣ ಓಡಿ ಕಡೇ ಕೋಣೆಯೊಳಗೆ ನುಗ್ಗಿ ಶ್ರೀಧರ್ ಅವರನ್ನು ಕಂಡು ಮಾತಾಡಿದ್ವಿ: 'ನಿಮ್ಮ ನೆಂಟರು ಒಬ್ಬರು ಬಸ್ನಿಂದ ಇಳಿದು, ನಮ್ಮ ಸಹಾಯ ಕೇಳಿದ್ರು, ಇಲ್ಲಿಗೆ ಕರಕೊಂಡು ಬಂದ್ವಿ'. ಅಷ್ಟೊತ್ತಿಗೆ, ಅಜ್ಜಿ (ಉಸ್ಸಪ್ಪಾ-ಉಸ್ಸಪ್ಪ ಅನ್ನುತ್ತಾ), ಶಾಂಭವಿ ಮತ್ತು ಕೂಲಿ ಹುಡುಗ ಎಲ್ಲರೂ ಅಲ್ಲಿಗೆ ಬಂದರು.

ಶ್ರೀಧರ್ ಅವರು ನಮಗೆ ವಂದನೆ ಹೇಳುವ ಬದಲು, ಸುಸ್ತಾಗಿದ್ದ ಅಜ್ಜಿನ ನೋಡಿ, ನಮ್ಮನ್ನುದ್ದೇಶಿಸಿ ಉವಾಚ: 'ಅಯ್ಯೋ, ಬಸ್ ನಿಲ್ದಾಣದಿಂದ ಕೋಟೆಯಲ್ಲಿರೋ ನಮ್ಮ ಮನೆಗೆ ಸೀದಾ ಕರಕೊಂಡು ಹೋಗೊದ್ ಬಿಟ್ಟು, ಇಷ್ಟು ದೂರ ಈ ಅಜ್ಜಿನ ನಡೆಸ್ಕೊಂಡು ಬಂದಿದೀರಲ್ಲ. ನಿಮಗೇನಾದ್ರೂ ಬುದ್ಧಿ ಇದೆಯೇ? ದಿನಾ ಅಲ್ಲೇ ಚಿನ್ನಿ-ದಾಂಡು, ಕುಂಟಬಿಲ್ಲೆ ಆಡ್ತಿರ್ತೀರ? ನಮ್ಮನೆ ಗೊತ್ತಿಲ್ವೇ?' ಇನ್ನೂ ಏನೇನ್ ಬೈತಿದ್ದರೋ ಏನೋ, ಕೂಲಿ ಹುಡುಗ ಗಲಾಟೆ ಮಾಡ್ದೇ ಇದ್ದಿದ್ರೆ.

'ಸಾರ್, ಈ ಟ್ರಂಕ್ ತುಂಬಾ ಭಾರ, ಇಲ್ಲೇ ಇಳಿಸೋದಾ? ಕಾಸ್ ಕೊಡಿ ಸಾರ್, ನಾನು ವಾಪಸ್ ಹೋಗಿ ಬೇರೆ ಗಿರಾಕಿನ ಹುಡುಕ್ ಬೇಕು' ಎಂದು ಟ್ರಂಕ್ ಇಳಿಸೇ ಬಿಟ್ಟ. ಶ್ರೀಧರ್ ಇನ್ನೊಂದ್ ಸಲ ಟ್ರಂಕನ್ನು ಸರಿಯಾಗಿ ನೋಡಿ, 'ಇದನ್ನ ಮನೇ ತನಕ ನನ್ನ ಕೈಯಲ್ಲಿ ಎತ್ತಕ್ಕಾಗಲ್ಲ, ನೀನೇ ಮನೆವರೆಗೂ ತಗೊಂಡ್ಬಾ, ಮನೆ ಹತ್ರ ದುಡ್ಕೊಡ್ತೀನಿ' ಅಂದರು. ಅಜ್ಜಿ ಸ್ವಲ್ಪ ಸುಧಾರಿಸಿಕೊಂಡು 'ಶ್ರೀಧರ, ಈ ಮಕ್ಕಳಿಗೇನಾದ್ರೂ ಕೊಡೋ, ಅಷ್ಟು ದೂರದಿಂದ ನಮಗೆ ದಾರಿ ತೋರಿಸಿವೆ' ಅಂತು.

ಶ್ರೀಧರ್ ಅವರು 'ನನಗೆ ಇನ್ನೂ ಸ್ವಲ್ಪ ಕೆಲಸ ಇದೆ, ನೀವೆಲ್ಲ ಕೂಲಿ ಜೊತೆ ಇವರನ್ನು ಮನೆಗೆ ಬಿಟ್ಬಿಡಿ. ನಮ್ಮನೆ ಅದೇ ಕತ್ತಿ ಮರದ ಮುಂದೆ ಇರುವ ವಠಾರದಲ್ಲಿದೆ' ಎಂದು ಸ್ವಲ್ಪ ನಿಧಾನವಾಗಿ ಆಜ್ಞೆ ಮಾಡಿದರು. ನಾವೆಲ್ಲ ಒಕ್ಕೊರಲಿನಿಂದ 'ಸಾಯಂಕಾಲ ಆಗಿದೆ, ಕತ್ತಲಾಗುವ ಒಳಗೆ ನಾವು ಉದ್ಯಾನವನದಲ್ಲಿ, ಪ್ರವಾಸಿಮಂದಿರದಲ್ಲಿ ಆಡಿ ಮನೆ

ಸೇರಬೇಕು. ನಮಗೇನೂ ಬೇಡ. ಕಡ್ಲೇ, ಪುರಿ ಎಲ್ಲ ಇದೆ' ಎಂದು ಅಲ್ಲಿಂದ ಓಟಕಿತ್ತಿ (ಅದನ್ನ ಕಟ್ಟಿಸಿಕೊಳ್ಳೋ ಗಲಾಟೆಯಲ್ಲೇ ಇಷ್ಟೆಲ್ಲಾ ಅವಾಂತರ ಆಯಿತು ಅಂತ ಮನಸ್ಸಿಗೆ ಬರದೇ ಇರಲಿಲ್ಲ). ಹಿಂದಿನಿಂದ ಶಾಂಭವಿ ಚೀಲದಿಂದ ಕೋಡುಬಳೆ, ಚಕ್ಕುಲಿ, ಹುರಿಗಾಳು ತೆಗೆದು ನಮಗೆಲ್ಲ ಕೊಟ್ಟಳು.

ಕಡೆ ಸಾರಿ ನಮ್ಮ ಜಿ.ಪಿ.ಎಸ್. ಅಪ್ಡೇಟ್ ಮಾಡಕ್ಕೆ ಹೋದಾಗ, ಜಿ.ಪಿ.ಎಸ್.ಗೂ ಕನ್ಫ್ಯೂಸ್ ಆಗಿ, 'ಡು ಯು ವಾಂಟ್ ರೌಟ್ ಟು ಹೋಮ್?' ಅಂತ ಕೇಳ್ತು. ನಮಗನಿಸಿದ್ದು 'ಎಲಾ ಇವನಾ'!

ಎರಡು ದಿನಗಳ ನಂತರ ಮನೆಯ ಮುಂದೆ ಆಟವಾಡುತ್ತಿದ್ದಾಗ...

ಅಜ್ಜಿ, ಶಾಂಭವಿ ಊರಿಗೆ ಹೊರಟಿದ್ದರು. ಅದೇ ಕೂಲಿ ಹುಡುಗ ಅಜ್ಜಿ ಟ್ರಂಕ್ ಹೊತ್ಕೊಂಡು ಹಿಂದೆ ನಡೆಯುತ್ತಿದ್ದ. ಅಜ್ಜಿ ನಗುತ್ತಾ 'ನಿಮ್ಗಳ ಮನೆ ಇಲ್ಲೇನಾ? ಅದಕ್ಕೇ ನಮ್ ಶ್ರೀಧರ ಹಾಗ್ ಕೂಗಾಡ್ದ ಅವತ್ತು. ಶಾಂಭವಿ, ನಿಂಗ್ ದಾರಿ ಗೊತ್ತೇನೇ ನಿಲ್ದಾಣಕ್ಕೆ? ನೋಡು, ಅದೇ ಹುಡುಗ್ರನ್ನು ಇವತ್ತೂ ನಮಗೆ ದಾರಿ ತೋರಿಸಕ್ಕೆ ಕರೆದ್ಕೊಂಡ್ ಹೋಗ್ಬಹುದು' ಅಂತು. ಶ್ರೀಧರ್ ಮಾಮ ಪತ್ತೇನೇ ಇರಲಿಲ್ಲ ಇವತ್ತು. ಕೂಲಿ ಹುಡುಗ ಖುಷಿಯಿಂದ ನಮ್ಮನ್ನೆಲ್ಲಾ ನೋಡಿ, 'ಬಸ್ ಸ್ಟಾಪ್ ನನಗೆ ಚೆನ್ನಾಗಿ ಗೊತ್ತೈತೆ, ನೀವೇನ್ ಬರೋದ್ ಬ್ಯಾಡ' ಅಂದ. ನಾವೆಲ್ಲ ನಕ್ಕು 'ನಮ್ಮ ಜಿ.ಪಿ.ಎಸ್. ಔಟ್ ಆಫ್ ಆರ್ಡರ್ ಇವತ್ತು' ಅಂತ ಹೇಳಿ, ಅಜ್ಜಿ ಮತ್ತು ಶಾಂಭವಿಗೆ ಟಾಟಾ ಮಾಡಿದ್ವಿ! ೩೫ ವರುಷಗಳ ಹಿಂದೆ ನಾವು 'ಜಿ.ಪಿ.ಎಸ್.' ಆಗಿದ್ದು ಹೀಗೆ! ಇನ್ನೂ ಚೆನ್ನಾಗಿ ನಡೀತಿದೆ.

●

ಸೋಲೂರು ಕ್ಲಬ್ಬಿನ ಗೆಳೆಯರು -ರಾಡ್ನಿ, ಜಿಗ್ಗಿ ಮತ್ತು ನಾನು

- ಎಚ್.ವೈ. ರಾಜಗೋಪಾಲ್

ಎಷ್ಟೋ ವರ್ಷಗಳ ಹಿಂದೆ ನಾನು ಒಂದು ಸಲ ಪರಿಚಯದವರೊಬ್ಬರ ಮದುವೆಗೆಂದು ಚೆನ್ನರಾಯಪಟ್ಟಣಕ್ಕೆ ಹೋಗುವುದಿತ್ತು. ಬೆಂಗಳೂರಿನಿಂದ ಬೆಳಿಗ್ಗೆ ಅಲ್ಲಿ ಹೋಗಿ ಅದೇ ಮಧ್ಯಾಹ್ನ ಅಲ್ಲಿಂದ ಬಸ್ಸು ಹಿಡಿದು ರಾತ್ರಿಗೆ ಬೆಂಗಳೂರಿಗೆ ಬಂದು ಅದೇ ರಾತ್ರಿ ಮೈಸೂರು ರೈಲು ಹತ್ತುವ ಮಹತ್ವಾಕಾಂಕ್ಷೆಯ ಕಾರ್ಯಕ್ರಮ ಹಾಕಿಕೊಂಡಿದ್ದೆ. ಚೆನ್ನರಾಯಪಟ್ಟಣದಲ್ಲೇ ಬಸ್ಸು ಬರುವುದು ತಡವಾಯಿತು. ಇಲ್ಲೇ ಇಷ್ಟು ತಡವಾದರೆ ಮುಂದೆ ಎಲ್ಲೆಲ್ಲೂ ತಡವೇ ಎಂದು ಮುಂದಿನ ತಡಗಳನ್ನೆಲ್ಲ ಅಂದಾಜು ಮಾಡಿ ನನಗೆ ಆ ರಾತ್ರಿ ಮೈಸೂರು ರೈಲು ಸಿಕ್ಕುವುದಿಲ್ಲ ಎಂಬ ನಿರ್ಧಾರಕ್ಕೆ ಬಂದು ಒಂದು ರೀತಿ ಸುಖವಾಗಿದ್ದೆ. ಕಡೆಗೂ ಬೆಂಗಳೂರಿನ ಬಸ್ಸು ಬಂತು. 'ಯಾರ್ರೀ ಬೆಂಗಳೂರು'ಗಳಲ್ಲಿ ಒಬ್ಬನಾಗಿ ಆ ಕುರಿಮಂದೆಯಲ್ಲಿ ನಾನೂ ನುಸುಳಿ ಬಸ್ಸು ಹತ್ತಿದೆ. ಆ ಬಸ್ಸು ಇನ್ನೆಲ್ಲಿಂದಲೋ ಬಂದದ್ದು (ಎಲ್ಲಿಂದ ಬಂತು, ಎಲ್ಲಿಗೆ ಹೋಗುತ್ತದೆ –ಇವೆಲ್ಲ ಯಾರಿಗೆ ಗೊತ್ತು? ಆ ಕಾಲದ ನಮ್ಮ ಬಸ್ಸುಗಳಲ್ಲಿ ಓಡಾಡಬೇಕಾದರೆ ಒಂದು ಬಗೆಯ ನಿರ್ಲಿಪ್ತತೆ– philosophical detachment –ಬೇಕಿತ್ತು). ಅದರಲ್ಲಿ ಆಗಲೇ ಎಲ್ಲ ಸೀಟುಗಳೂ

ಭರ್ತಿಯಾಗಿದ್ದುದರಿಂದ ನಾನು ಒಬ್ಬ (೯) standing passenger ಆಗಿಯೇ ಬೆಂಗಳೂರುವರೆಗೆ ಹೋಗಬೇಕಾಯಿತು.

ಚೆನ್ನರಾಯಪಟ್ಟಣದಿಂದ ಹೊರಟ ಬಸ್ಸು ಸ್ವಲ್ಪವೇ ಹೊತ್ತಿನ ಮೇಲೆ ಇನ್ನೊಂದು ಊರಲ್ಲಿ ನಿಂತು ಮೊದಲೇ ಭರ್ತಿಯಾಗಿದ್ದ ಬಸ್ಸಿನಲ್ಲಿ ಇನ್ನಷ್ಟು (೯) standing passenger ಗಳನ್ನು ತುಂಬಿಸಿಕೊಳ್ಳುವ ಯೋಜನೆ ಮಾಡಿತು. ಪಾಪ, ಆ ಊರಿನಲ್ಲಿ ಕಾದು ಕಾದು ಬಸವಳಿದಿದ್ದ ಜನಕ್ಕೆ ಇಷ್ಟಾದರೂ ಸೇವೆ ಮಾಡಬೇಕಲ್ಲವೆ? ಅಂತೂ ಬಸ್ಸು ಅಲ್ಲಿ ನಿಂತಾಗ ಅನೇಕ ತರಹದ 'ಯಾರ್ರೀ ಬೆಂಗಳೂರು'ಗಳು ಹತ್ತಿದರು. ಅವರಲ್ಲಿ ಒಬ್ಬಾತ ಸುಮಾರಾಗಿ ಸ್ಥೂಲ ಎನ್ನಿಸುವ ಕಾಯದವನು. ಸುಮಾರು ೩೦ರ ಹರೆಯ. ತಲೆಕೂದಲು ತೆಳ್ಳಗಾಗಿ ಸ್ವಲ್ಪ ಬೊಕ್ಕ ತಲೆ ಕಾಣಿಸಲು ಶುರುವಾಗಿತ್ತು. ಅವನ ಮಾವ ಅನುಕೂಲಸ್ಥನಿರಬೇಕು, ಇವ ಅಂದಿನ ಬಿಸಿಲಿನಲ್ಲೂ ಒಳ್ಳೆ ವುಲನ್ ಸೂಟು ಧರಿಸಿದ್ದ. ನೀಲಿಯ ಮೇಲೆ ಸುಮಾರು ಒಂದೂವರೆ ಇಂಚು ಅಂತರಕ್ಕೆ ಒಂದು ಸಣ್ಣ ಬಿಳಿ ಗೆರೆ ಇರುವ double-breasted ಸೂಟು. ಆತನ ಸೂಟು ನೋಡಿದರೇನೇ ನನಗೆ ಇನ್ನಷ್ಟು ಸೆಕೆಯಾಗುತ್ತಿತ್ತು. ಬಸ್ಸಿನ ಹಿಂಭಾಗದಲ್ಲಿ ಸ್ವಲ್ಪ ಸ್ಥಳ ಮಾಡಿಕೊಂಡು ನಿಂತ. ಅವರೆಲ್ಲ ತುಂಬಿದ ಮೇಲೆ ಇನ್ನೇನು ಬಸ್ಸು ಹೊರಡುತ್ತದೆ ಎಂದು ನಾವೆಲ್ಲ ಅಂದುಕೊಂಡಿದ್ದೆವು, ಆದರೆ ಡ್ರೈವರ್ ಮತ್ತು ಕಂಡಕ್ಟರ್ ಮಹಾಶಯರ ಆಲೋಚನೆಯೇ ಬೇರೆಯಾಗಿದ್ದಂತಿತ್ತು. ಆ ಅವರ ಅನಿಶ್ಚಯ, ಆ ಸೆಕೆ, ಧೂಳು, ಬೆವರಿನ ಕಮಟು ಎಲ್ಲ ಸೇರಿ ನಮ್ಮ ಸೂಟುಧಾರಿಗೆ ಈ ಬಸ್ಸು, ರಸ್ತೆ ಸಾರಿಗೆ ಸಂಸ್ಥೆ, ಆ ಖಾತೆಯ ಸಚಿವರು, ಮುಖ್ಯಮಂತ್ರಿಗಳು, ಕಾಂಗ್ರೆಸ್ ಪಾರ್ಟಿ, ಸರ್ಕಾರ, ದೇಶ, ದೇವರು- ಎಲ್ಲದರ ಮೇಲೂ ಒಂದು ಬಗೆಯ ಜಿಗುಪ್ಸೆ ತುಂಬಿದ ಆಕ್ರೋಶ ಬಂತು. ಕಡೆಗೆ ಆ ಆಕ್ರೋಶವನ್ನು ತನ್ನ ಮೇಲೆಯೆ ತಿರುಗಿಸಿಕೊಂಡ. ಆತ ಸೋಲೂರಿನಿಂದ ಬಂದವನಂತೆ. ಅಲ್ಲಿಂದ ಬೇರೆ ಮಾರ್ಗವಾಗಿ ಬೆಂಗಳೂರಿಗೆ ಹೋಗಬಹುದಾಗಿದ್ದರೂ ತಾನು ಅದನ್ನು ಬಿಟ್ಟು ಈ ಮಾರ್ಗವಾಗಿ ಬಂದು ಈ ಬವಣೆಗೆ ಸಿಕ್ಕಿಕೊಂಡದ್ದಕ್ಕಾಗಿ ತನ್ನ ಮೇಲೆ ತನಗೇ ತುಂಬ ಕೋಪಬಂದಿತ್ತು. "ನಾನು ಸೋಲೂರಿನಿಂದ ಬಂದಿದ್ದೀನ್ರೀ... Tell me, which fool will do it, I say? Which fool will do it, I say?' ಎಂದು ಸುತ್ತಮುತ್ತಿನವರನ್ನು ಪದೇಪದೇ ಕೇಳುತ್ತಿದ್ದ. ನನಗೆ, 'ನೀವೆ ಸಾರ್!' ಎಂದುಬಿಡೋಣ ಅಂತ ಬಾಯಿತುದಿವರೆಗೆ ಬಂದಿದ್ದರೂ, rhetorical ಪ್ರಶ್ನೆಗಳ ಬಗ್ಗೆ ನಮ್ಮ ಹೈಸ್ಕೂಲು ಇಂಗ್ಲಿಷ್ ಮೇಷ್ಟರು ಹೇಳಿದ್ದ ಮಾತು ನೆನಪಿಗೆ ಬಂದು ಸುಮ್ಮನಿದ್ದೆ....

ಸೋಲೂರು! ನನಗೆ ಅಂಥ ಹೆಸರಿನ ಒಂದು ಊರು ಇರಬಹುದೆಂಬ ಕಲ್ಪನೆಯೇ ಇರಲಿಲ್ಲ. ನಾನಾಗ ಇನ್ನೂ ಹರೆಯದಲ್ಲಿದ್ದವನು. ಮದುವೆಯಾಗಿರಲಿಲ್ಲ. ನನ್ನ ಕಿವಿ ವಿಜಯನಗರ ಮುಂತಾದ ಹೆಸರುಗಳನ್ನು ಕೇಳಿಸಿಕೊಳ್ಳುತ್ತಿತ್ತೇ ಹೊರತು ಸೋಲೂರಿನಂಥ ಹೆಸರುಗಳನ್ನಲ್ಲ. ನಮ್ಮ ಸೂಟುಧಾರಿಯ ಮಾತು ಕೇಳಿ ಆ ಊರು ಹೇಗಿರಬಹುದು ಎಂದು

ಊಹಿಸಿಕೊಳ್ಳಲು ಪ್ರಯತ್ನಿಸಿದೆ. ಆ ಊರಿನವರೆಲ್ಲ ಈತನ ಹಾಗೇ ಸೆಕೆಯಲ್ಲಿ ಸೊಂದು ಬೆಂದವರೇ ಆಗಿರಬಹುದೇ ಎನ್ನಿಸಿತು ಅಥವಾ ಎಲ್ಲರೂ ಈತ ಹೇಳುವಂಥ fools ಆಗಿರಬಹುದೆ? ಆ ಊರಿನಲ್ಲಿ ಯಾರೂ ನಗುವುದೆ ಇಲ್ಲವೆ? ಅಲ್ಲೇನಾದರೂ ಚುನಾವಣೆ ಆದರೆ ಏನು ಗತಿ? ಎಲ್ಲರೂ ಸೋತುಹೋದರೆ ಚುನಾವಣೆಗೆ ಏನರ್ಥ? ಹೀಗೇ ಏನೇನೋ ಯೋಚನೆಗಳು! ಕಡೆಗೂ ಬೆಂಗಳೂರು ತಲುಪಿದೆವು, ನಮ್ಮ ನಮ್ಮ ದಾರಿ ಹಿಡಿದೆವು.

ಅಲ್ಲಿಂದ ಮುಂದೆ ನನ್ನ ಮದುವೆಯಾಯಿತು. ಸಂಸಾರ ಬೆಳೆಯಿತು. ಹೆಚ್ಚಿನ ಓದಿಗೆಂದು ಅಮೆರಿಕಕ್ಕೆ ತೆರಳಿ ಅಲ್ಲೇ ಉಳಿದುಕೊಂಡೆ. ಅಮೆರಿಕದಲ್ಲಿ ಯಾರು ಬೇಕಾದರೂ ತಮ್ಮ ಕನಸುಗಳನ್ನು ನನಸಾಗಿಸಿಕೊಳ್ಳಬಹುದು ಎನ್ನುತ್ತಾರೆ. ಇಲ್ಲಿರುವಷ್ಟು ಸಮೃದ್ಧ ಅವಕಾಶಗಳು ಪ್ರಪಂಚದಲ್ಲಿ ಇನ್ನೆಲ್ಲೂ ಇಲ್ಲ, ಇದು ಗೆಲುವಿನ ದೇಶ, ಇಲ್ಲಿ ಯಾರು ಏನು ಬೇಕಾದರೂ ಸಾಧಿಸಬಹುದು ಎನ್ನುತ್ತಾರೆ. ಎಲ್ಲರಿಗೂ ಒಂದು American dream ಇರಬೇಕು. ಅದನ್ನು ಕುರಿತು ಯೋಚಿಸಿದಾಗೆಲ್ಲ ನನಗೆ ನಮ್ಮ ಸೋಲೂರಿನ ಸೂಟುಧಾರಿ ಜ್ಞಾಪಕಕ್ಕೆ ಬರುತ್ತಾನೆ. ಇಲ್ಲಿ ಯಾರೂ ಸೋಲುವುದೆ ಇಲ್ಲವೆ? ಇಲ್ಲಿನವರಿಗೆ ಸೋಲೂರಿನ ಪರಿಚಯವೆ ಇಲ್ಲವೆ? ಈ ವಿಜಯ ಭೂಮಿಯಲ್ಲಿ ದಿನ, ವರ್ಷ ಕಳೆಯುತ್ತ ಬಂದಂತೆ ನನ್ನ ಪ್ರಶ್ನೆಗೆ ಉತ್ತರ ದೊರೆಯುತ್ತಿದೆ. ಏನು ಉತ್ತರ ಎಂದು ನೀವು ಕೇಳುತ್ತೀರೇನೋ. ನನ್ನ ಗೆಳೆಯರನ್ನು ಪರಿಚಯ ಮಾಡಿಸುತ್ತೇನೆ, ಆಗ ನಿಮಗೆ ತಿಳಿಯುತ್ತದೆ. ಈ ಗೆಳೆಯರೂ ನಾನೂ ಸೇರಿ ಒಂದು ಕ್ಲಬ್ ಮಾಡಿಕೊಂಡಿದ್ದೇವೆ. ಅದಕ್ಕೆ ನಮ್ಮ ಸೋಲೂರಿನ ಸೂಟುಧಾರಿಯೇ ಸ್ಫೂರ್ತಿ. ಅವನನ್ನು ಆ ದಿನ ಬಸ್ಸಿನಲ್ಲಿ ನೋಡಿದ ಮೇಲೆ ಮತ್ತೆ ಕಂಡೇ ಇಲ್ಲ. ಇನ್ನು ಕಾಣುವ ಸಂಭವವೂ ಇಲ್ಲ. ಆದರೆ, ಆತನ ನೆನಪಾಗಿ ನಮ್ಮ ಕ್ಲಬ್ಬಿಗೆ ಸೋಲೂರ್ ಕ್ಲಬ್ ಎಂದೇ ನಾಮಕರಣ ಮಾಡಿದ್ದೇನೆ.

*

ನಮ್ಮ ಸೋಲೂರ್ ಕ್ಲಬ್ಬಿನ ಗೆಳೆಯರಲ್ಲಿ ನಮ್ಮೆಲ್ಲರಿಗೂ ಹಿರಿಯ ಎಂದರೆ ನಮ್ಮ ರಾಡ್ನಿ. ಪಾಪ, ಈಚೆಗೆ ಹೋಗಿಬಿಟ್ಟ. ಅದೇ ತಾನೆ ಅಂತಿಮ ಸೋಲು! ಆಗಿನಿಂದ ನಮ್ಮ ಕ್ಲಬ್ಬಿನ ಚಹರೆಯೇ ಏನೋ ಒಂದು ಬೇರೆ ಥರಾ ಆಗಿದೆ... ಅದಿರಲಿ. ನಮ್ಮ ರಾಡ್ನಿಗೆ ಯಾವಾಗಲೂ ಒಂದು ವಿಷಯದಲ್ಲಿ ತುಂಬಾ ಅಸಮಾಧಾನ. He carries a chip on his shoulder ಎನ್ನುತ್ತಾರಲ್ಲ, ಹಾಗೆ. ಏನು ಆ ಅಸಮಾಧಾನಕ್ಕೆ ಕಾರಣ ಅಂದರೆ ತನಗೆ ಯಾರೂ ಸಾಕಷ್ಟು ಮರ್ಯಾದೆ ತೋರಿಸುವುದಿಲ್ಲ ಎಂದು. ಮೂರು ಹೊತ್ತೂ You get no respect at all ಎಂದು complain ಮಾಡುತ್ತಿರುತ್ತಾನೆ. ನಿಜವೆ ಪಾಪ. ಒಂದು ಸಲ ಏನೋ ಬೇಸರ ಕಳೆಯಲು ಅವನೊಂದು ಬಾರ್‌ಗೆ ಹೋದ. ಆ ಬಾರಿನ ಯಜಮಾನ ಇವನನ್ನು ನೋಡಿ, 'ನಿನಗಿಲ್ಲಿ ಪ್ರವೇಶವಿಲ್ಲ. ನಾವಿಲ್ಲಿ ಈವೊತ್ತು Happy Hour ಇಟ್ಟುಕೊಂಡಿದ್ದೇವೆ' ಅಂದಿದ್ದ.

ತಾನು ಚಿಕ್ಕಂದಿನಲ್ಲಿ ಎಷ್ಟು ಕಷ್ಟಪಟ್ಟೆ ಎಂಬುದನ್ನೆಲ್ಲ ಆಗಾಗ ರಾಡ್ನಿ ಹೇಳಿಕೊಳ್ಳುತ್ತಿದ್ದ. ತುಂಬ ಬಡತನದಲ್ಲಿ ಬೆಳೆದನಂತೆ. 'ನಮ್ಮ ಕೇರಿಯಲ್ಲಿ ಎಷ್ಟು ಬಡತನ ಇತ್ತು ಅಂದರೆ, ಅಲ್ಲಿ ಕಾಮನಬಿಲ್ಲು ಬಂದರೆ ಅದರಲ್ಲಿ ಕಪ್ಪು ಬಿಳಿ ಮಾತ್ರ ಇರುತ್ತಿತ್ತು' ಅಂತ ಹೇಳಿದ್ದ ಒಂದು ಸಲ. ಅವನು ಚಿಕ್ಕವನಾಗಿದ್ದಾಗಲೇ ಅವನ ಅಪ್ಪ ಅಮ್ಮ ವಿವಾಹ ವಿಚ್ಛೇದ ಮಾಡಿಕೊಂಡರಂತೆ. ಸರಿ ಹುಡುಗನನ್ನು ಯಾರ ವಶಕ್ಕೆ ಕೊಡಬೇಕು ಎಂದು ದೊಡ್ಡ ಹಗರಣವಾಯಿತಂತೆ. ಕಾರಣ, ತಂದೆ ತಾಯಿ ಇಬ್ಬರೂ ಆ ದಿನ ಕೋರ್ಟಿಗೆ ಬಂದೇ ಇರಲಿಲ್ಲವಂತೆ! ಎಲ್ಲೂ ನನಗೆ ಮರ್ಯಾದೆ ಸಿಕ್ಕುತ್ತಿರಲಿಲ್ಲ ಎಂದು ಗೊಣಗುತ್ತಾನೆ ರಾಡ್ನಿ. ಅವನು ಚಿಕ್ಕ ಹುಡುಗನಾಗಿದ್ದಾಗ ಯೋಯೋ ಆಡಿಸಿದರೆ ಅದು ಮತ್ತೆ ಅವನ ಕಡೆಗೆ ಬರುತ್ತಲೇ ಇರಲಿಲ್ಲವಂತೆ!

ಮದುವೆಯಾದಮೇಲೂ ಪರಿಸ್ಥಿತಿ ಏನೂ ಬದಲಾಗಲಿಲ್ಲ. 'ಒಂದು ದಿನ ಮಲಗಿದ್ದೆ. ಎಚ್ಚರವಾದಾಗ ನೋಡಿದರೆ ಕೈಯಲ್ಲಿ ಸುಡುತ್ತಿದ್ದ ಸಿಗರೇಟು ಇತ್ತು. ನನ್ನ ಹೆಂಡತಿಯೇ ಹಚ್ಚಿಟ್ಟಿದ್ದಳು! ನನ್ನ ಬಗ್ಗೆ ಒಂದಿಷ್ಟೂ ಗೌರವ ಇಲ್ಲ!' ಎಂದು ಹೇಳಿದ್ದ. 'ಅವಳ ಅಡುಗೆ ತಿಂದಮೇಲೆ, ನಾನು ಹಲ್ಲುಜ್ಜಿಕೊಳ್ಳುವುದಷ್ಟೇ ಅಲ್ಲ, ಹಲ್ಲು ಎಣಿಸಿಕೊಳ್ಳುತ್ತೇನೆ ಕೂಡ. ಎಲ್ಲರ ಮನೆಯಲ್ಲೂ ಊಟಕ್ಕೆ ಮುಂಚೆ ಪ್ರಾರ್ಥನೆ ಮಾಡಿದರೆ. ನಮ್ಮ ಮನೆಯಲ್ಲಿ ಊಟ ಆದಮೇಲೆ ಪ್ರಾರ್ಥನೆ ಮಾಡುತ್ತೇವೆ,' ಎನ್ನುತ್ತಾನೆ.

ರಾಡ್ನಿ ಒಂದು ರೀತಿಯಲ್ಲಿ ಅಮಾಯಕ. ಅವನ ಪರಿಚಯದವನೊಬ್ಬ ಅವನನ್ನು ಒಂದು ಸಾವಿರ ಡಾಲರ್ ಸಾಲ ಕೊಡು, ನಾನು plastic surgery ಮಾಡಿಸಿಕೊಳ್ಳಬೇಕು ಎಂದು ಕೇಳಿದನಂತೆ. ಸರಿ ಇವನು ಕೊಟ್ಟ. ಈಗ ಅವನನ್ನು ಪತ್ತೆ ಹಚ್ಚುವುದಕ್ಕೇ ಆಗುತ್ತಿಲ್ಲ ಎಂದು ಒದ್ದಾಡುತ್ತಿದ್ದಾನೆ.

ಒಂದು ಸಲ ರಾಡ್ನಿಗೆ ಏನೋ ಕಾಯಿಲೆ ಆಗಿ ಕೆಲವು ದಿನ ಮಲಗಬೇಕಾಯಿತು. ಯಾರೋ ಅವನಿಗೊಂದು Get well card ಕಳಿಸಿದ್ದರು. ರಾಡ್ನಿ ಅದನ್ನು ತೆಗೆಯುವಾಗ ಆ ಲಕೋಟೆಯ ಹರಿತವಾದ ಅಂಚು ಅವನ ಕೈಗೆ ತಗುಲಿ, ಚರ್ಮ ಕತ್ತರಿಸಿ, ರಕ್ತ ಬಂದು ಆ ಕಾರ್ಡೆಲ್ಲ ರಕ್ತದ ಕಲೆಯಾಗಿ ಒಂದು ಅವತಾರವೇ ಆಯಿತು! 'ಮೊನ್ನೆ ತುಂಬಾ... ಬೇಜಾರಾಗಿತ್ತು, suicide hot line ಕರೆದರೆ, ಸ್ವಲ್ಪ ತಾಳು ಅಂತ ಹದಿನೈದು ನಿಮಿಷ ನನ್ನ ಕಾಯಿಸಿದರು... ಒಬ್ಬರಿಗೂ ನನ್ನ ಬಗ್ಗೆ ಗೌರವವೇ ಇಲ್ಲ' ಎಂದ.

ಆದರೆ ನಮ್ಮ ಕ್ಲಬ್ಬಿನ ಜಿಗ್ಗಿಗೆ ಮಾತ್ರ ರಾಡ್ನಿ ಅಂದರೆ ಮಹಾಗೌರವ. ಅದು ರಾಡ್ನಿಗೂ ಗೊತ್ತು. ಅದರಿಂದ ಅವನಿಗೆ ಸ್ವಲ್ಪ ಸಮಾಧಾನ. ನಮ್ಮ ಜಿಗ್ಗಿ ನಿಮ್ಮ ಕಣ್ಣಿಗೆ ಬೀಳುವುದು ಕಷ್ಟ. ಏಕೆಂದರೆ ನೆಲಮಟ್ಟಕ್ಕೂ ಅವನ ತಲೆಮಟ್ಟಕ್ಕೂ ಹೆಚ್ಚು ಅಂತರವಿಲ್ಲ! ಆದರೂ ಹೇಗೋ ಜಿಗ್ಗಿ ದಿನಾ ಅಲ್ಲಿ ಇಲ್ಲಿ ನುಸುಳಿಕೊಂಡು ಕಾಣಿಸುತ್ತಲೇ ಇರುತ್ತಾನೆ. ರಾಡ್ನಿ ಇತರ ಕುಳ್ಳರನ್ನು ಗೇಲಿ ಮಾಡಿದಂತೆಯೇ ಇವನನ್ನೂ ಗೇಲಿ ಮಾಡುತ್ತಾನೆ- ಮಳೆ ಬಂದರೆ ನಿನಗೇ ಎಲ್ಲರಿಗಿಂತ

ಕಡೆಯಲ್ಲಿ ತಿಳಿಯುವುದು ಎಂದು. ಆಗ ಜಿಗ್ಗಿ ಅನ್ನುತ್ತಾನೆ, 'ಸುಳ್ಳು. ಈಗ ನೋಡು, ನಿನಗೆ ತಲೆ ತುಂಬ ಕೂದಲಿದೆ, ಮಳೆ ಹನಿ ಬಿದ್ದರೂ ನಿನಗೆ ತಿಳಿಯುವುದೇ ಇಲ್ಲ. ಆದರೆ ನನ್ನದು ಬೊಕ್ಕ ತಲೆ, ಒಂದು ಸಣ್ಣ ಹನಿ ಬಿದ್ದರೂ ಕೂಡಲೆ ತಿಳಿಯುತ್ತೆ!' ಎಂದು. ಅವರಿಬ್ಬರ ವಾಗ್ವಾದ ಕೇಳಲು ಬಲು ಚೆಂದ. ರಾಡ್ನಿ ಸ್ವಲ್ಪ ಒರಟಾಗಿ- ಒಂದೊಂದು ಸಲ ಅಶ್ಲೀಲ, ಅಸಭ್ಯ ಎನ್ನಿಸುವಂತೆಯೂ - ಮಾತನಾಡುತ್ತಾನೆ. ಆದರೆ ನಮ್ಮ ಜಿಗ್ಗಿ ಹಾಗಲ್ಲ; ಅವನು ತುಂಬಾ ಸಭ್ಯ, ಅವನ ಮಾತು ತುಂಬಾ ನಯ.

ಜಿಗ್ಗಿ ಒಂಟಿಗ. ಅವನ ಸಂಸಾರವೆಲ್ಲ, ಅವನ ನಾಯಿ, ಚಿಕ್ಕ fish bowl ನಲ್ಲಿರುವ ಒಂಟಿ ಮೀನು, ಪಂಜರದ ಗಿಣಿ ಮತ್ತು ತಾನು. ಒಂದೆರಡು ಗಿಡಗಳು, ಅಷ್ಟೆ. ಅವರದೊಂದು ಪ್ರೀತಿಯ ಸಂಸಾರ. ರಾಡ್ನಿಯ ಸಂಸಾರದಂತಲ್ಲ. ನೀವೆಲ್ಲ ಹೇಗೆ ಸಿಕ್ಕಿದಿರಿ ಒಬ್ಬರಿಗೊಬ್ಬರು ಎಂದು ಕೇಳಿದರೆ ತುಂಬ philosophical ಆಗಿ ಅದು ಹೇಗೋ ಏನೋ, ಯಾವ ಋಣಾನುಬಂಧವೋ ಎನ್ನುತ್ತಾನೆ. ಅವರವರಲ್ಲಿ ತುಂಬಾ ಮಾತುಕತೆ ನಡೆಯುತ್ತದೆ. ಆ ಗಿಣಿ ಏನು ಸಾಮಾನ್ಯವಲ್ಲ. ಜಿಗ್ಗಿಯನ್ನು ಆಗಾಗ ತರಾಟೆಗೆ ತೆಗೆದುಕೊಳ್ಳುತ್ತದೆ. ಮೊನ್ನೆ ಅವನ ಮನೆಗೆ ಹೋಗಿದ್ದಾಗ ನಾನೇ ಕಂಡೆ. ಜಿಗ್ಗಿ ಗಿಣಿಯ ಪಂಜರದ ತಳಕ್ಕೆ ಒಂದು ವೃತ್ತಪತ್ರಿಕೆಯ ಹಾಳೆ ಹಾಕಿದ್ದ. 'ಈ ಹಾಳೆಯಲ್ಲಿದ್ದ crossword puzzle ನೆಲ್ಲ ನೀನು ಈಗಾಗಲೇ ಮುಗಿಸಿಬಿಟ್ಟಿದ್ದೀಯ, ನನಗೆ ಹೇಗೆ ಹೊತ್ತುಹೋಗಬೇಕು?' ಅಂತ ಅವನನ್ನು ಛೇಡಿಸುತ್ತಿತ್ತು! ಅವನ ಬಳಿ ಒಂದೆರಡು ಗಿಡಗಳಿವೆ ಎಂದೆನಲ್ಲವೆ? ಅವನು ದಿನವೂ ಅವುಗಳೊಂದಿಗೆ ಪ್ರೀತಿಯಿಂದ ಮಾತಾಡಿ ಅವನ್ನು ರಮಿಸುತ್ತಾನೆ. ಒಂದು ದಿನ ಕಿಟಕಿಯ ಬಳಿ ಇದ್ದ ಬಳ್ಳಿ ಕಿಟಕಿಯಿಂದ ಹೊರಗೆ ಹೋಗಲು ಪ್ರಯತ್ನಿಸುತ್ತಿದ್ದುದನ್ನು ನೋಡಿ ಜಿಗ್ಗಿಗೆ ಪಾಪ ತುಂಬ ಮನ ನೊಂದಿತು. ಅದಕ್ಕೆ ತನ್ನ ಮಾತು ಇಷ್ಟವಾಗಲಿಲ್ಲವೇನೋ, ಇನ್ನಾರಿಗಾದರೂ ಹೇಳಿ ಅದರ ಕೈಲಿ ನಾಲ್ಕು ಮಾತಾಡಿ ಎನ್ನಬೇಕೇನೋ ಅಂದುಕೊಳ್ಳುತ್ತಿದ್ದ!

ಜಿಗ್ಗಿ ಮೊನ್ನೆ ಯಾವುದೋ ಗುಂಪಿನವರ ಜೊತೆ ನಮ್ಮೂರಿನ ಸಮೀಪ ಇರುವ ಒಂದು ದೊಡ್ಡ ಪಾರ್ಕಿಗೆ ಹೋಗಿದ್ದ. ಜಿಗ್ಗಿಯ ಕಣ್ಣ ಮಟ್ಟಕ್ಕೆ ಕಾಣುವಷ್ಟು ವಿವರಗಳು ಇತರರಿಗೆ ಕಾಣವು. ಅವರೆಲ್ಲ ಮೇಲೆಮೇಲೆ ನೋಡಿಕೊಂಡು ಮುಂದೆ ಹೋದರು. ಜಿಗ್ಗಿ ಹಿಂದುಳಿದ. ಅಲ್ಲೇ ಒಂದು ಬೋರ್ಡು ಕಾಣಿಸಿತು. ಅದರಲ್ಲಿ You are here ಎಂದು ಅವನಿದ್ದ ಜಾಗವನ್ನು ಸೂಚಿಸಿದ್ದೇ ಅಲ್ಲದೆ They are there! ಎಂದೂ ತೋರಿಸಿ, ನೋಡು ಅವರೆಲ್ಲ ನಿನಗಿಂತ ಎಷ್ಟು ಮುಂದೆ ಹೋಗಿದ್ದಾರೆ ಎಂದು ಅಣಕಿಸಿತ್ತು!

ಜಿಗ್ಗಿ ತನ್ನ ಮನಸ್ಸಿನ ತೊಳಲಾಟಗಳನ್ನು ಕುರಿತು ಆಗಾಗ ಒಬ್ಬ ಮನಶ್ಶಾಸ್ತ್ರಜ್ಞನ ಬಳಿ ಹೋಗುವುದುಂಟು. ಒಂದು ಸಲ ಹಾಗೆ ಹೋದಾಗ ಆ ವೈದ್ಯ 'ಹೌದು, ನಿನಗೆ ಸ್ವಲ್ಪ ಕೀಳರಿಮೆ ಇದೆ, ಆದರೆ ಅದನ್ನೆಲ್ಲ ಮಾತಾಡುವುದರಿಂದ ಏನಾಗಬೇಕಾಗಿದೆ!' ಎಂದು ಅದನ್ನು ತಳ್ಳಿಹಾಕಿದನಂತೆ. ಜಿಗ್ಗಿಗೆ ಗೊತ್ತು- ಈ ಪೈಪೋಟಿ ಪ್ರಪಂಚದಲ್ಲಿ ತನ್ನ ಸ್ಥಾನ ಎಲ್ಲಿ ಅಂತ.

ಆದರೂ ಅವನು ಪೂರ್ತಿ ನಂಬಿಕೆ ಕಳೆದುಕೊಂಡಿಲ್ಲ. 'ನಾನೇನು ಶುದ್ಧ ಸೋಲುಬುರುಕ ಅನ್ನಿಸುವುದಿಲ್ಲ, ಆದರೆ ನಾನು ಗೆಲ್ಲುವುದು ಇತರರು ಯಾರಿಗೂ ಬೇಡದ ವಿಷಯಗಳಲ್ಲಿ' ಅನ್ನುತ್ತಾನೆ.

ಈ ಸೋಲೂರು ಕ್ಲಬ್ಬಿನ ಸದಸ್ಯನಾಗಲು ನನಗೂ ಸಾಕಷ್ಟು ಅರ್ಹತೆ ಇದೆ. ಡ್ರೈವ್ ಮಾಡಿಕೊಂಡು ಹೋಗುವಾಗ ನಾನಿರುವ ಲೇನ್ ಮಾತ್ರ ಯಾಕೆ ಯಾವಾಗಲೂ ನಿಧಾನವಾಗುತ್ತದೆ? ಪಕ್ಕದ ಲೇನಿನವರು ಯಾವಾಗಲೂ ನನಗಿಂತ ಮುಂದೆ ಮುಂದೆ ಹೋಗುತ್ತಾರೆ. ಹಾಗೆಂದು ಕಷ್ಟಪಟ್ಟು ಆ ಪಕ್ಕದ ಲೇನಿಗೆ ಹೋದರೆ ಅದೂ ನಿಧಾನವಾಗುತ್ತದೆ, ಇಲ್ಲ ನಿಂತೇ ಹೋಗುತ್ತದೆ! ಒಂದು ಸಲವಂತೂ ನಾನು ಹಾಗೆ ಲೇನ್ ಬದಲಿಸಿದ ಮೇಲೆ ಸ್ವಲ್ಪ ದೂರ ಹೋದರೆ, This lane must exit ಎಂಬ ಬೋರ್ಡು ಕಾಣಿಸಿತು. ಹೇಗೋ ಮೆಲ್ಲಗೆ ಪಕ್ಕದ ಲೇನಿಗೆ ಹೋಗೋಣ ಅಂದುಕೊಂಡರೆ ಅಲ್ಲಿ ಸೊಂಟದ ಹಿಂಭಾಗದಲ್ಲಿ ಎರಡು ರಿವಾಲ್ವರ್ ಧರಿಸಿದ ದಢೂತಿ ಪೊಲೀಸ್‌ಮನ್ ನಿಂತಿದ್ದ...

ನನಗೆ ಇಂಥ ಅನುಭವ ಹೈವೇಗಳಲ್ಲಿ ಮಾತ್ರವೇ ಅಲ್ಲ, ಸೂಪರ್‌ಮಾರ್ಕೆಟ್ಟುಗಳಲ್ಲೂ ಆಗುತ್ತದೆ. ಬೇಕಾದ ಪದಾರ್ಥ ಎಲ್ಲ ಆರಿಸಿಕೊಂಡು ಅದಕ್ಕೆ ದುಡ್ಡು ಪಾವತಿ ಮಾಡಲು ಒಂದು ಸಾಲಿನಲ್ಲಿ ನಿಲ್ಲುತ್ತೇನೆ ಎನ್ನಿ. ನಾನಿರುವ ಸಾಲಿನಲ್ಲಿ ಯಾವಾಗಲೂ ತೊಂದರೆ. ಆ ಸ್ಟೋರ್ ಕ್ಲರ್ಕಿನ ಅಚಾತುರ್ಯದಿಂದ ಆ cash register ನಿಂತೇಹೋಗುತ್ತದೆ. ತನ್ನ ಲೇನಿನ ಮಿಣುಕು ದೀಪ ಹೊತ್ತಿಸಿ, ಸೂಪರ್‌ವೈಸರ್‌ರಿಗೆ ಫೋನ್ ಮಾಡಿ ಅವನು ಬಂದು ಮತ್ತೆ ರೆಜಿಸ್ಟರು ಚಲಾವಣೆ ಮಾಡುವವರೆಗೂ ಕಾಯುತ್ತ ನಿಲ್ಲುತ್ತಾಳೆ ಆ ಕ್ಲರ್ಕಿಣಿ... ಇನ್ನೂ ಒಂದು ವಿಷಯ, ಎಷ್ಟೋ ಸಲ ಗಮನಿಸಿದ್ದೇನೆ- ನಾನು ಯಾವ ಲೈನಿನಲ್ಲಿ ನಿಂತರೂ ಯಾಕೆ ನನ್ನ ಹಿಂದೆ ಯಾರೂ ಇರುವುದೇ ಇಲ್ಲ, ನಾನೇ ಯಾಕೆ ಕಡೆಯವನಾಗಿರುತ್ತೇನೆ? ಇದನ್ನು ಎಷ್ಟೋ ಸಲ ಸೂಕ್ಷ್ಮವಾಗಿ ಹಿಂದೆ ನೋಡಿ ಖಚಿತಪಡಿಸಿಕೊಂಡಿದ್ದೇನೆ (ಪೂರ್ತಿ ಹಿಂತಿರುಗಿ ನೋಡಿದರೆ ಇಲ್ಲಿನವರು rude ಎಂದುಕೊಳ್ಳುತ್ತಾರೆ ಎಂಬ ಕಾರಣದಿಂದ).

ಒಂದೆರಡು ಸಲ self-chekoutಗೆ ಹೋದೆ. ಆ ರೆಜಿಸ್ಟರಿನಿಂದ ಹೊರಡುತ್ತಿದ್ದ ದನಿ ಕೇಳಿಯೆ ನನಗೆ ಹೆದರಿಕೆಯಾಗುತ್ತಿತ್ತು. ಒಂದು ಸಲವಂತೂ ಅದು 'Unauthorized object in bagging area' ಅಂದಾಗ ನಾನು ಏನೋ ದೊಡ್ಡ ತಪ್ಪು ಮಾಡಿಬಿಟ್ಟೆ, ಇನ್ನೇನು ಆ ಸ್ಟೋರ್ ಮ್ಯಾನೇಜರ್, ಸೆಕ್ಯೂರಿಟಿಯವರು ಎಲ್ಲಾ ಬಂದು ನನ್ನನ್ನು ಕರೆದುಕೊಂಡು ಹೋಗುತ್ತಾರೆ, ನಾಳೆ ಪೇಪರಿನಲ್ಲಿ headline ಬರುತ್ತದೆ- Ethnic Indian Caught Cheating at Supermarket - ಎಂಬೆಲ್ಲ ಚಿತ್ರಗಳು ಕಣ್ಣ ಮುಂದೆ ಹಾದುಹೋದವು. ಅಯ್ಯೋ, ನಾನು ಬರುವಾಗ ಗಣಪತಿ ಪೂಜೆ ಮಾಡಿಬರಬೇಕಿತ್ತು ಅನ್ನಿಸಿತು. ಅಂದಿನಿಂದ ಎಷ್ಟೇ ನಿಧಾನವಾದರೂ ಯಾರಾದರೂ ಕ್ಲರ್ಕ್ ಇರುವ ಲೈನಿಗೇ ಹೋಗುತ್ತೇನೆ.

ಗಣಪತಿ ಮಾತು ಬಂದಾಗ ಹೇಳಬೇಕು ನಿಮಗೆ. ಒಂದು ಸಲ ಏನೋ ಒಂದು ತುಂಬ ಮುಖ್ಯವಾದ ಕೆಲಸ ಮಾಡಬೇಕಿತ್ತು. ಅದರಲ್ಲಿ ಏನೂ ವಿಘ್ನ ಬಾರದಿರಲಿ ಎಂದು ಮೊದಲು ಗಣಪತಿ ಸ್ತೋತ್ರ ಮಾಡೋಣ ಎಂದು 'ಸುಮುಖಶ್ಚೈವ ದಂತಶ್ಚ...' ಶುರು ಮಾಡಿದರೆ ಅದು ಅರ್ಧಕ್ಕೇ ಮರೆತುಹೋಯಿತು. ಏನು ಮಾಡಿದರೂ ಪೂರ್ತಿ ಜ್ಞಾಪಕಕ್ಕೆ ಬರಲೇ ಇಲ್ಲ.

ನನ್ನ ಪ್ರೈವೇ ಡ್ರೈವಿಂಗ್ ಬಗ್ಗೆ ಇನ್ನೂ ಸ್ವಲ್ಪ ಹೇಳಬೇಕು. ನಾನು ಡ್ರೈವ್ ಮಾಡುವಾಗ ಯಾರು ಎಲ್ಲಿ ಹಾಂಕ್ (honk) ಮಾಡಿದರೂ ನನಗೆ ಅಳುಕು! ಸದಾ ಎಚ್ಚರವಾಗಿದ್ದರೂ ಏನು ತಪ್ಪು ಮಾಡಿದೆ, ಹೀಗೇಕೆ ಆಗುತ್ತಿದೆ ಎಂದುಕೊಳ್ಳುತ್ತೇನೆ. ಪಕ್ಕದಲ್ಲಿ ನಮ್ಮಾಕೆ ಕುಳಿತಿದ್ದರಂತೂ ಆ ಭಾವ ಇನ್ನಷ್ಟು ತೀವ್ರವಾಗಿ ತಿವಿಯುತ್ತದೆ. ಅವಳ ಅಭಿಪ್ರಾಯದಲ್ಲಿ ಪ್ರಪಂಚದಲ್ಲಿರುವ ಎಲ್ಲ ಹಾಂಕುಗಳೂ ನನಗೇ ಸೇರಿದವು, ನನ್ನನ್ನೇ ಕುರಿತಾದವು... ಎಲ್ಲಾದರೂ ಪೊಲೀಸ್ ಕಾರು ಕಂಡರೆ ತಕ್ಷಣ ಬ್ರೇಕ್ ಒತ್ತಿ, ನನ್ನ Speedometer ನೋಡಿ, ನನ್ನ ನಿರಪರಾಧಿ ಮುಖವಾಡ ಹಾಕಿಕೊಳ್ಳುತ್ತೇನೆ. 'NO U TURN' ಎಂಬ ಬೋರ್ಡು ನೋಡಿದರೆ ಅಲ್ಲಿನ ದೊಡ್ಡ U ನನ್ನನ್ನೇ ಕುರಿತು ಹೇಳುತ್ತಿದೆಯೇನೋ, Don't you dare turn! ಅಂತ ಬೆದರಿಸುತ್ತಿದೆಯೇನೋ ಎನ್ನಿಸುತ್ತದೆ. ನಮ್ಮ ಜಿಗ್ಗಿಗೂ ಹಾಗೇ ಅಂತೆ, ಒಂದು ಸಲ ಅವನೇ ಹೇಳಿದ್ದ.

ಯಾವುದೋ ಆಫೀಸಿಗೆ ಫೋನ್ ಮಾಡುತ್ತೇನೆ. 'All our representatives are assisting other customers, your call will be answered in the order it was received....' ಎಂಬ ಒಂದು ಕಂಪ್ಯೂಟರ್ ಸಂದೇಶ ಬರುತ್ತದೆ. ಆದರೆ ನನಗೆ ಅದರಲ್ಲಿ ಪೂರ್ಣ ನಂಬಿಕೆ ಇಲ್ಲ. ಅದರಲ್ಲಿನ other customers ಎಂಬ ಭಾಗ ನನಗೆ other more important customers ಎಂದೇ ಕೇಳಿಸುತ್ತದೆ.

ಒಂದು ಸಲ ಮನಸ್ಸಿಗೆ ಏನೋ ಕಷ್ಟವಾಗಿತ್ತು. ನಮ್ಮೂರ ಹತ್ತಿರದಲ್ಲಿ New Hope ಎಂಬ ಊರಿದೆ. ಸುಂದರವಾಗಿದೆ. ಅನೇಕ ಕಲಾವಿದರು ಅಲ್ಲಿ ಸೇರುತ್ತಾರೆ. ಅಲ್ಲಿಗೆ ಹೋಗೋಣ ಎನ್ನಿಸಿತು. ೩೦ ಮೈಲಿ ಡ್ರೈವ್ ಮಾಡಿಕೊಂಡು ಹೋಗಿ ಆ ಊರ ಹತ್ತಿರಕ್ಕೆ ಹೋದರೆ, Road Closed ಎಂಬ ಬೋರ್ಡು ಕಾಣಿಸಿತು. ಪೆಚ್ಚು ಮೂತಿ ಹಾಕಿಕೊಂಡು ಹಿಂತಿರುಗಿದೆ!

ಒಂದು ಸಲ ನಮ್ಮ ಪರಿಚಯದ ಒಬ್ಬರಿಗೆ ನಮ್ಮ ಸೋಲೂರ್ ಕ್ಲಬ್ಬಿನ ವಿಷಯ ಹೇಳಿದೆ. ಅವರು ಇದನ್ನು ಬರೆದು ನಮ್ಮ web siteಗೆ ಏಕೆ ಕಳಿಸಬಾರದು? ಎಂದರು. ಅವರು ಹೇಳಿದಂತೆ ಬರೆದು ಕಳಿಸಿದೆ. ಅದು ಪ್ರಕಟವಾಗುವ ಮುಂಚೆಯೇ ಅವರ web site ನಿಂತುಹೋಯಿತು.

ನಮ್ಮ ಪ್ರಿಯ ಕವಿ ಕೆ.ಎಸ್. ನರಸಿಂಹಸ್ವಾಮಿ ಒಂದು ಕವಿತೆಯಲ್ಲಿ ಹೇಳುತ್ತಾರೆ:

‘ಹಿಂದಿನ ಸಾಲಿನ ಹುಡುಗರು’ ಎಂದರೆ
ನಮಗೇನೇನೂ ಭಯವಿಲ್ಲ!
ನಮ್ಮಿಂದಾಗದು ಶಾಲೆಗೆ ತೊಂದರೆ;
ನಮಗೆಂದೆಂದೂ ಜಯವಿಲ್ಲ!

ಈ ಪೈಪೋಟಿ ಜಗತ್ತಿನಲ್ಲಿ, ಹೌದು, ನಾವು ಹಿಂದಿನ ಸಾಲಿನ ಹುಡುಗರೇ. ನಾವು ಸೋಲೂರಿನ ಗೆಳೆಯರು. ಸೋಲೂರು ಎಲ್ಲೆಲ್ಲೂ ಇದೆ. ಸೋಲಿದ್ದರೆ ತಾನೆ ಗೆಲುವು?

*

(ಇಲ್ಲಿ ಕಾಣುವ ರಾಡ್ನಿ ಅಮೆರಿಕದ ಹೆಸರಾಂತ stand-up comedian ಆಗಿದ್ದ Rodney Dangerfiled. ಜಿಗ್ಗಿ ಅಮೆರಿಕದ ನೂರಾರು ಪತ್ರಿಕೆಗಳಲ್ಲಿ ದಿನ ನಿತ್ಯ ಕಾಣುವ ಒಬ್ಬ ಕಾರ್ಟೂನ್ ವ್ಯಕ್ತಿ Ziggy. ರಾಡ್ನಿಯ ಮಾತುಗಳನ್ನು ಅವನ TV showಗಳು ಮತ್ತು ಪುಸ್ತಕದಿಂದಲೂ, ಜಿಗ್ಗಿಯ ಮಾತುಗಳನ್ನು ವೃತ್ತಪತ್ರಿಕೆಗಳಲ್ಲಿ ಬರುವ ವ್ಯಂಗ್ಯಚಿತ್ರಗಳು ಮತ್ತು ಅವುಗಳ ಸಂಕಲನಗಳಿಂದಲೂ ಆರಿಸಿಕೊಂಡಿದ್ದೇನೆ. ನಾನು ‘ಎಂದಿಗೂ ನಿಮ್ಮವನೇ ಆದ’ವನು.)

●

ದೇಸೀ ಕನ್ಸಲ್ಟೆಂಟ್

–ವಲ್ಲೀಶ ಶಾಸ್ತ್ರಿ

ಗಗನಸಖಿ ನಗುಮುಖದಿಂದ ವಲಸೆ ಪತ್ರವನ್ನು ವೆಂಕಿ ಕೈಲಿ ಕೊಟ್ಟಾಗ ನೆತ್ತರು ನೆತ್ತಿಗೇರಿದಂತಾಗಿ ದಿಗ್ಭ್ರಾಂತನಾದ. ಕಡೆಗೂ ವೆಂಕಿಗೆ ಕನಸು ನನಸಾಗುವ ಕಾಲ ಬಂದಿತ್ತು. ಚಿಕ್ಕವನಾಗಿದ್ದಾಗ ರಜೆಯಲ್ಲಿ ಒಂದೆರಡು ಬಾರಿ ಅಮೆರಿಕೆಯಿಂದ ಬಂದಿದ್ದ ತನ್ನ ದೊಡ್ಡಪ್ಪನ ಮಗ ಶ್ರೀನಿಯನ್ನು ನೋಡಿದಾಗಿನಿಂದ ಹಾಗೂ ಇಂಡಿಯಾದಿಂದ ಅಮೆರಿಕೆಯ ಕನಸು ಕಂಡು ಅಮೆರಿಕೆಗೆ ಹೋಗಿ ನೆಲೆಸಿರುವವರ ಕಥೆಗಳನ್ನು ಕೇಳಿದಾಗಿನಿಂದ ಅವನಿಗಿದ್ದಿದ್ದು ಒಂದೇ ಗುರಿ–ಅಮೆರಿಕ. ಅಮೆರಿಕೆಯ ನೀರಿನಲ್ಲಿ ಮೀಯಬೇಕು, ಅಮೆರಿಕೆಯ ಊಟ ಮಾಡಬೇಕು, ಅಮೆರಿಕೆಯ ಹಾಲನ್ನು ಕುಡಿಯಬೇಕು... ಅಮೆರಿಕೆಯಲ್ಲಿ ಕೆಲಸ ಮಾಡಬೇಕು.

ಬೆಂಗಳೂರಿನ ಒಂದು ಅಗ್ರ ಕನ್ಸಲ್ಟಿಂಗ್ ಕಂಪನಿಯಲ್ಲಿ ಒಂದು ಒಳ್ಳೆ ಬಡ್ತಿ ಸಿಕ್ಕಿದ್ದನ್ನು ಬಿಟ್ಟು ಹೊರಟಿದ್ದ ವೆಂಕಿ. ಮಾತೃದೇಶದಲ್ಲಿ ಸಿಕ್ಕ ಒಳ್ಳೆ ಅವಕಾಶವನ್ನು ಸ್ವತಃ ತಳ್ಳಿದ್ದ ಅವನಿಗೆ ಇದ್ದಿದ್ದು ಒಂದೇ ದಾರಿ–ಅಮೆರಿಕ. ವೆಂಕಿಗೆ 'ಎಚ್ ವನ್' ವೀಸಾ (ಅಮೆರಿಕದಲ್ಲಿ ಕೆಲಸ ಮಾಡಲು ಪರವಾನಗಿ) ತೆಗಿಸಿಕೊಡುವ ಒಬ್ಬ ದಲ್ಲಾಳಿ ಸಿಕ್ಕಿದ್ದ. ಒಂದು ಸಾರಿ ಅದು ಸುಸೂತ್ರವಾಗಿ ಸಿಕ್ಕಿದ

ನಂತರ ಅಮೆರಿಕೆಗೆ ಹೋಗುವುದು, ಸೌಭಾಗ್ಯ (Fortune) ೫೦೦ ಕಂಪನಿಯೊಂದಕ್ಕೆ ಗುತ್ತಿಗೆದಾರನಾಗಿಯಾದರೂ ಕೆಲಸ ಮಾಡುವುದು. ಕನಿಷ್ಟ ಏನಿಲ್ಲಾ ಅಂದರೂ ಗಂಟೆಗೆ ನಲವತ್ತು ಡಾಲರುಗಳ ಸಂಬಳದ ವಾಗ್ದಾನ. ನಂಬಲಿಕ್ಕೇ ಸಾಧ್ಯವಾಗದಂತಹ ಸತ್ಯ. ವೀಸಾ ಅರ್ಜಿ ದಾಖಲಿಸುವುದಕ್ಕೆ ಎರಡು ಲಕ್ಷ ರುಪಾಯಿಗಳನ್ನು ಕೊಟ್ಟಿದ್ದ. ಪ್ರತಿಷ್ಠಿತ ಅಮೆರಿಕೆಯ ತೀರಕ್ಕೆ ಇಳಿದಾಗ ಬೀದಿ ಪಾಲಾಗದಿರಲಿ ಎಂದು ಎರಡು ಸಾವಿರ ಡಾಲರುಗಳನ್ನು ಮುಂಗಡವಾಗಿ ದಲ್ಲಾಳಿಗೆ ಕೊಟ್ಟಿದ್ದ.

ವೆಂಕಿಗೆ ಅದೃಷ್ಟ ಖುಲಾಯಿಸಿತ್ತು. ವೀಸಾ ಸಿಕ್ಕಿತ್ತು. ರೂಢಿಯಿಲ್ಲದ ಬೂಟಾಟಿಕೆಯಿಂದ ಸ್ನೇಹಿತರ ಜೊತೆಯಲ್ಲೆಲ್ಲಾ ತನ್ನ ಅಮೆರಿಕೆಯ ಕನಸು ನನಸಾಗಿದ್ದನ್ನು ಜಂಭದಿಂದ ಕೊಚ್ಚಿಕೊಂಡಿದ್ದ. ತನ್ನ ಸಹೋದ್ಯೋಗಿಗಳೊಂದಿಗೆ ಅಮೆರಿಕೆ ತಲುಪಿದ ಮೇಲೆ ಮುಂದಿನ ಯೋಜನೆಗಳನ್ನೆಲ್ಲಾ ಹೇಳಿದ್ದ. ತನ್ನ ಮ್ಯಾನೇಜರ್ ಮೇಲೆ ಉಗಿದು ಕೆಲಸಕ್ಕೆ ರಾಜಿನಾಮೆ ಕೊಟ್ಟಿದ್ದ. ಇಷ್ಟು ದಿವಸ ಅನ್ನ ಕೊಟ್ಟಿದ್ದ ಕಂಪನಿಯ ಜೊತೆ ಸಂಬಂಧ ಕಡಿದುಕೊಳ್ಳುವಾಗ ತಿರುಗಮುರುಗ ನೋಡಲೇ ಇಲ್ಲ. ಕಾರಣ, ವಾಪಸ್ ಬರುವ ಪ್ರಶ್ನೆಯೇ ಇರಲಿಲ್ಲ. 'ಏಯ್, ನೀವು ಮತ್ತು ನಿಮ್ಮ ಗುಗ್ಗು ದೇಸಿ ಕನ್ಸಲ್ಟಿಂಗ್ ವ್ಯಾಪಾರ ಸಾಕು. ನಾನು ಈಗ ಒಬ್ಬ ದೊಡ್ಡ ಕನ್ಸಲ್ಟೆಂಟ್. ನಿಮ್ಮಂಥ ಪೆದ್ದರ ಜೊತೆ ಸಾಕಷ್ಟು ಕಾಲ ವ್ಯರ್ಥ ಮಾಡಿದ್ದೇನೆ. ಈಗ ಸಿಕ್ಕಿರೋದು ನನ್ನ ಜೀವನದ ದೊಡ್ಡ ತಿರುವು, ನನಗೆ ಇದು ಬೇಕಿದೆ, ಮತ್ತೆ ಅದಕ್ಕೆ ಅರ್ಹ ನಾನು. ಇದು ಕಣ್ರಯ್ಯಾ ಜೀವನಾ.' ಹೀಗೆಲ್ಲಾ ಕೊಚ್ಚಿ ಬಂದಿದ್ದ.

ಇನ್ನು ಕೆಲವೇ ವರ್ಷಗಳಲ್ಲಿ ಕೈತುಂಬ ಹಣ ಮಾಡ್ಕೊಂಡು, ಒಂದು ಸಾರಿ ತೃಪ್ತಿಯಾಗುವಷ್ಟು (ಅಂದರೆ ಎಷ್ಟು ಅಂತ ಮನಸ್ಸಲ್ಲಿ ಸ್ಪಷ್ಟವಾಗಿಲ್ಲ) ಹಣ ಸಂಪಾದಿಸ್ಕೊಂಡು, ಒಳ್ಳೆ ಕನ್ನಡದ ನಾರೀನ ನೋಡಿ ಮದುವೆ ಮಾಡ್ಕೊಂಡು, ಆದಷ್ಟು ಬೇಗ ಒಂದು ಮನೆ ಕೊಂಡ್ಕೊಂಡು, ಬ್ಯಾಂಕ್ ಬ್ಯಾಲೆನ್ಸ್ ಚೆನ್ನಾಗಿ ಇಟ್ಕೊಳ್ಳೋದು, ಒಂದೆರಡು ಮಕ್ಕಳ ಮಾಡ್ಕೊಳ್ಳೋದು, ಅಪ್ಪ ಅಮ್ಮನ್ನ ಅಮೆರಿಕೆಗೆ ಕರ್ಸ್ಕೊಳ್ಳೋದು, ಒಂದೆರಡು ಕಾರ್ ಕೊಂಡ್ಕೊಳ್ಳೋದು... ಇವೆಲ್ಲಾ ಅವನ ಯೋಜನೆ. ಸುಖಕರವಾದ ಜೀವನದ ಕನಸು. ಆಯ್ತು, ಬೈ ಬೈ ಇಂಡಿಯಾ... ವೆಂಕಿ ನವ್ಯ ಜೀವನಕ್ಕೆ ಕಾಲಿಡಲು ತುದಿಗಾಲಲ್ಲಿ ನಿಂತಿದ್ದ. ಧನಿಕನಾಗಲಿಕ್ಕೆ ಸಿದ್ಧನಿದ್ದ. ಅಮೆರಿಕದಲ್ಲಿ ತನ್ನ ಜಂಡಾ ಹೂಡಲು ತಯಾರಿದ್ದ.

ವಿಮಾನ ನ್ಯೂಯಾರ್ಕ್ ಜೆ.ಎಫ್.ಕೆ. ನಿಲ್ದಾಣದಲ್ಲಿ ಭೂಸ್ಪರ್ಶ ಮಾಡಿತ್ತು. ಅವನ ಕುರುಚಲು ಗಡ್ಡದ ಮುಖದ ಮೇಲೆ ಅಮೆರಿಕದ ಪ್ರಥಮ ಹೊಯ್ಗಾಳಿ ಇಂದ್ರಜಾಲದಂತೆ ತಟ್ಟಿತ್ತು. ಇಮಿಗ್ರೇಶನ್, ಕಸ್ಟಮ್ಸ್, ಬೃಹತ್ ವಿಮಾನ ನಿಲ್ದಾಣ ಇದನ್ನೆಲ್ಲಾ ನೋಡಿ, ವೆಂಕಿಗೆ ಅಮೆರಿಕೆಯ ಮೇಲೆ ಆಗಲೇ ಪ್ರೀತಿ ಹೆಚ್ಚಿತ್ತು. ನಾಲ್ಕು ಗಂಟೆಗಳ ನಂತರ ದಲ್ಲಾಳಿ ಕೊಟ್ಟಿದ್ದ ವಿಳಾಸಕ್ಕೆ ಬಂದು ತಲಪಿದ. ಕ್ಯಾಬಿನಿಂದ ಇಳಿದಿದ್ದು ಕಲಾಸಿಪಾಳ್ಯದಂತಹ ಬಡಾವಣೆಯ ಜೆರ್ಸಿ ನಗರದಲ್ಲಿ. ಆಗಲೇ ವೆಂಕಿಗೆ ಅಪಶಕುನದ ದಟ್ಟವಾದ ವಾಸನೆ ತಗುಲಿತ್ತು.

ಸಿನಿಮಾದಲ್ಲಿ ತೋರಿಸುವ ಅಮೆರಿಕೆಗೂ ಇದಕ್ಕೂ ಯಾವುದೇ ಸಂಬಂಧವಿರಲಿಲ್ಲ. ಬೆಂಗಳೂರಿನ ಕಲಾಸಿಪಾಳ್ಯದ ಸಿಟಿ ಮಾರ್ಕೆಟ್ಟಂತಿತ್ತು. ಒಂದು ಅಪಾರ್ಟ್ಮೆಂಟ್, ಎರಡು ಬಾತ್ ರೂಮು, ಆದರೆ ಅದರಲ್ಲಿ ವೆಂಕಿಯಂತಹ ಆರು ಜನ ಕನ್ಸಲ್ಟೆಂಟ್‌ಗಳ ವಾಸ. ಚಿಕ್ಕ ಮನೆಯಲ್ಲಿ ಆರು ಜನ. ಉಸಿರುಕಟ್ಟಿದ ವಾತಾವರಣ. ನರಕಯಾತನೆ. 'ಎಲ್ಲೋ ಕನ್ಸಲ್ಟೆಂಟ್‌ಗಳು ಬರುವ ಕಾಲ ಇರಬೇಕು. ಈ ರೀತಿಯ ವಸತಿ ವ್ಯವಸ್ಥೆ ತಾತ್ಕಾಲಿಕವಿರಬೇಕು' ಎಂದು ಮನಸ್ಸಿನಲ್ಲಿ ಅಂದುಕೊಂಡಿದ್ದ ವೆಂಕಿ. ಆದರೆ ಈ ತಾತ್ಕಾಲಿಕ ಸ್ಥಿತಿ ತಾತ್ಕಾಲಿಕವಾಗಿ ಏನೂ ಉಳಿಯಲಿಲ್ಲ. ತಿಂಗಳು ಕಳೆಯಿತು. ಈಗೀಗ ಅರಿವಾಗಿತ್ತು ತಾನು ತನ್ನ ಕನಸಿನ ಸ್ವರ್ಣರಾಜ್ಯಕ್ಕೇನು ಬಂದಿಲ್ಲವೆಂಬುದು. ಈ ಬಾಡಿ ಶಾಪರ್‌ಗಳು (ಬಾಶಾಗಳು) ಪ್ರತಿವರ್ಷ ವೆಂಕಿಯಂತಹ ಸಾವಿರಾರು ದೇಸಿ ಕನ್ಸಲ್ಟೆಂಟ್‌ಗಳನ್ನು ಇಂತಹ ಸೆರೆಮನೆಗಳಿಗೆ ತಳ್ಳುತ್ತಾರೆ, ಈ ಕನ್ಸಲ್ಟೆಂಟ್‌ಗಳಿಗೆ ಹಣ ತರುವ ಯಂತ್ರ ಆಗುವ ತನಕ ಇಲ್ಲಿಂದ ಮುಕ್ತಿ ಇಲ್ಲ.

ಇದೊಂದು ದೊಡ್ಡ ಉದ್ದಿಮೆ. ಈ ಉದ್ದಿಮೆಯಲ್ಲಿ ಸಾವಿರಾರು ಕಂಪನಿಗಳಿಗೆ ತಮ್ಮ ತಾತ್ಕಾಲಿಕ ಕೆಲಸಗಳನ್ನು ಗುತ್ತಿಗೆ ಕೊಡುವ ಅಗತ್ಯವಿರುತ್ತದೆ. ಅದಕ್ಕಾಗಿ ಅವರ ಬಳಿ ಅರ್ಹ ಕೆಲಸಗಾರರನ್ನು ಒದಗಿಸಲು ಅವರ ಆದ್ಯ ಸರಕುದಾರರಿರುತ್ತಾರೆ. ಈ ಆದ್ಯ ಸರಕುದಾರರು ಎರಡನೇ ಹಂತದ ಸರಕುದಾರರನ್ನು ಸಂಪರ್ಕಿಸುತ್ತಾರೆ. ಅವರು ಸಣ್ಣ ಸಣ್ಣ ಸರಕುದಾರರನ್ನು ಕನ್ಸಲ್ಟೆಂಟ್‌ಗಳಿಗಾಗಿ ಸಂಪರ್ಕಿಸುತ್ತಾರೆ. ಹೀಗೆ ಏಣಿ ಮೆಟ್ಟಲು ಕೆಳಗಿಳಿಯುತ್ತಾ ಹೋಗುತ್ತದೆ. ಇದೊಂದು ಕಲಸು ಮೇಲೋಗರವಾಗಿರುವ ಉದ್ದಿಮೆ. ವೆಂಕಿ ಈ ಬಾವಿಯ ತಳದಲ್ಲಿದ್ದಾನೆ. ಈ ದುಸ್ಥಿತಿಯಲ್ಲಿರುವ ಆರ್ಥಿಕ ಸ್ಥಿತಿಯಲ್ಲಿ, ಕಠಿಣ ಪೈಪೋಟಿ ಹಾಗೂ ಪ್ರಾಜೆಕ್ಟ್‌ಗಳು ಸಿಗುವುದೇ ಕ್ಲಿಷ್ಟವಾಗಿರುವಾಗ, ಅವನಿಗೆ ಒಂದು ಕಕ್ಷಿದಾರನ ಪ್ರಾಜೆಕ್ಟ್ ಸಿಗುವವರೆಗೆ ಯಾವುದೇ ಉಪಯೋಗಕ್ಕಿಲ್ಲ. ಅವನ ಅಮೆರಿಕೆಯ ಕನಸಿಗೆ ಗೌರವ ಉಳಿದಂತಿಲ್ಲ. ಎಲ್ಲಿಯವರೆಗೆ ಕಕ್ಷಿದಾರನ ಪ್ರಾಜೆಕ್ಟ್ ಸಿಗುವುದಿಲ್ಲವೋ ಅಲ್ಲಿಯವರೆಗೆ ಈ ಆರು ಜನ ದೇಸಿ ಕನ್ಸಲ್ಟೆಂಟ್‌ಗಳ ಜೊತೆಯಲ್ಲಿ ಎರಡು ರೂಮಿನ ಮನೆಯಲ್ಲೇ ಹಾಗೂ ಬಂಕ್ ಬೆಡ್‌ಗಳ ಮೇಲೇ ಇವನ ಜೀವನ. ಅದೂ ಅಲ್ಲದೆ ಹೆಚ್ಚಿನ ಭದ್ರತೆಗೆ ಇವನ ಮೂಲಪ್ರತಿಗಳು, ಪಾಸ್‌ಪೋರ್ಟ್‌ಗಳು ಬಾಶಾಗಳ ಹತ್ತಿರವೇ ಉಳಿದಿರುವಾಗ, ಬಾಶಾಗಳ ಕೃಪಾಕಟಾಕ್ಷದಲ್ಲೇ ಬದುಕಬೇಕಲ್ಲವೇ? ಈ ಬಾಶಾಗಳಿಗೆ ತಮ್ಮ ಆಟ ಚೆನ್ನಾಗಿ ಗೊತ್ತು. ಇದರಲ್ಲಿ ವೆಂಕಿ ಮೊದಲಿಗನೇನಲ್ಲ.

ದೇಸಿ ಎಂದರೆ ಭಾರತದಲ್ಲಿ ಹುಟ್ಟಿ ಬೆಳೆದು ಅಮೆರಿಕೆಯಲ್ಲಿ ಕೆಲಸಕ್ಕಾಗಿ ಬಂದವರು. ಅವರಲ್ಲಿ ಎರಡು ತರಹದ ದೇಸಿಗಳಿದ್ದಾರೆ. ಒಂದು ಗುಂಪು ವಿದ್ಯಾಭ್ಯಾಸಕ್ಕೋಸ್ಕರ ಎಫ್ ವನ್ ವೀಸಾಗಳಲ್ಲಿ ಓದಿ, ಕೆಲಸಕ್ಕೆ ಸೇರಿಕೊಂಡು, ಮದುವೆ ಆಗಿ, ಮಕ್ಕಳಾಗಿ ಸುಖವಾದ ಜೀವನ ನಡೆಸುತ್ತಿರುವವರು. ಇನ್ನೊಂದು ಗುಂಪು ಎರಡು ಸಾವಿರದ ಇಸವಿಯ ಆಸುಪಾಸಿನ ಆರ್ಥಿಕ ಉಬ್ಬಾಯ ಸ್ಥಿತಿಯಲ್ಲಿ ನೇರವಾಗಿ ಕೆಲಸಕ್ಕೆ ಬಂದ ವೆಂಕಿಯಂತಹ ಕನ್ಸಲ್ಟೆಂಟ್‌ಗಳು.

ಅವರು ಸ್ವಲ್ಪ ದಿನದ ನರಕ ಯಾತನೆ ಆದ ಮೇಲೆ ಮದುವೆ ಆಗಿ, ಮಕ್ಕಳಾಗಿ ಸುಖವಾದ ಜೀವನ ನಡೆಸುತ್ತಿರುವವರೂ ಇದ್ದಾರೆ. ಇನ್ನೂ ಒಂದು ತರಹ ದೇಸಿ ಕನ್ಸಲ್ಟೆಂಟ್‌ಗಳು ಸಿಗುತ್ತಾರೆ. ಅವರಿಗೆ ಲ್ಯಾಂಡೆಡ್ ರೀಸೋರ್ಸ್ಸ್ ಅಂತ ಕರೀತಾರೆ. ಅವರುಗಳು ಬರೋದು 'ಎಲ್ ವನ್' ವೀಸಾದಲ್ಲಿ. ಅವರುಗಳದ್ದೇ ಒಂದು ತರಹ ಜೀವನ. 'ಮನೆಗೂ ಸಲ್ಲದ, ಬೀದೀಗೂ ಸಲ್ಲದ' ಜೀವನ ಅವರದ್ದು. ಇಲ್ಲಿ ಬೇರೆ ಕೆಲಸಕ್ಕೂ ಸೇರ್ಕೊಳ್ಳೋಕ್ಕಾಗಲ್ಲ ಅಥವಾ ಬೇಡ ಅಂತ ಊರಿಗೂ ಹೋಗೋಕ್ಕಾಗಲ್ಲ. ಇವರುಗಳು ಇತ್ತೀಚಿನ ದೇಸಿಗಳು. ಯಾವಾಗ ಹೊರಗುತ್ತಿಗೆ (outsourcing) ಅಂತ ಶುರುವಾಯ್ತೋ ಆವಾಗಲಿಂದ ಅಮೆರಿಕ ಸರ್ಕಾರದೋರು ದೊಡ್ಡ ದೊಡ್ಡ ಕಂಪನಿಗಳಿಗೆ ಸಹಾಯ ಆಗಲಿ ಅಂತ ಇಂಡಿಯಾ ಕಂಪನಿಯಿಂದ ಅಮೆರಿಕದ ತಮ್ಮ ಶಾಖೆಗೆ ತಮ್ಮ ನೌಕರರನ್ನು ವರ್ಗಾವಣೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರು. ಅದರ ಪ್ರಕಾರ ದೊಡ್ಡ ದೊಡ್ಡ ಕಂಪನಿಗಳು ತಮ್ಮ ತಮ್ಮ ನೌಕರರನ್ನು 'ಎಲ್ ವನ್' ವೀಸಾ ಮೇಲೆ ಕರೆಸ್ಕೊಳ್ಳುತ್ತಾರೆ ಇಲ್ಲಿ ಪ್ರಾಜೆಕ್ಟ್‌ಗಳಲ್ಲಿ ಕೆಲಸಕ್ಕೆ ಇಡುತ್ತಾರೆ. ದೇಸಿ ಸಂಬಳ (ಸ್ವಲ್ಪ ಅದಕ್ಕಿಂತ ಹೆಚ್ಚಿರಬಹುದು), ಅಮೆರಿಕ ಕೆಲಸ.

ನಾನು ಅಮೆರಿಕೆಗೆ ಬಂದ ಹೊಸದರಲ್ಲಿ, ನಮ್ಮ ಮನೆಯಲ್ಲಿ, ಬಹುಶಃ ತಿಂಗಳಿಗೊಮ್ಮೆಯಾದರೂ, ನಾನು ಕೆಲಸದಿಂದ ಸಂಜೆ ಮನೆಗೆ ಬಂದರೆ ನನ್ನ ಹೆಂಡತಿ ಕೇಳುತ್ತಾ ಇದ್ದಿದ್ದು ಈ ತರಹದ ಪ್ರಶ್ನೆಗಳೇ! 'ರೀ, ಎದರು ಮನೆ ಹುಡುಗಿದು ಮೂರು ವರ್ಷದ ಡಿಗ್ರಿ ಅಂತೆ, ಅದ್ರ ಮೇಲೆ ಎಚ್ ಫೋರ್ ವೀಸಾದಲ್ಲಿದ್ಲಂತೆ (ಎಚ್ ವನ್ ವೀಸಾದಲ್ಲಿ ಬರುವವರ ಸಂಗಾತಿಗೆ ಕೊಡುವ ವೀಸಾ)! ಅಂತೋಳ್ಗೇ ಸಾಫ್ಟ್‌ವೇರ್ ಕೆಲಸ ಕೊಡಿಸಿ ಎಚ್ ವನ್ ಮಾಡ್ಸಿದ್ದಾನಂತೆ ದೇಸಿ ಬಾಶಾ. ನಾನೂ ಕೇಳ್ಲಾ?' ಈ ದೇಸಿ ಬಾಶಾಗೆ ಚೆನ್ನಾಗಿ ಗೊತ್ತು ನನ್ನ ಹೆಂಡ್ತಿ ಐಟಿಯಲ್ಲಿ ಏನೂ ಮಾಡಿಲ್ಲ ಅಂತ, ಆದರೂ ನನ್ನ ಹೆಂಡ್ತೀಗೆ ಎಚ್ ವನ್ ಕೊಡಿಸ್ತೀನಿ ಅಂತಾನೆ, ಅವರಿಗೆ ಬೇಕಾಗಿದ್ದು ಜೀವಿತ ಒಂದು ದೇಹ ಅಷ್ಟೆ, ಆ ದೇಹದ ಹೆಸರಲ್ಲಿ ಒಂದು 'ಎಚ್ ವನ್' ವೀಸಾ ಅರ್ಜಿ ಸಲ್ಲಿಸೋಕ್ಕೆ. ಒಂದು ಪಕ್ಷ ಸಿಕ್ಕರೆ ತಿಂಗಳಿಗೆ ಮೂರು ಸಾವಿರದಿಂದ ನಾಲ್ಕು ಸಾವಿರದಷ್ಟು ಡಾಲರ್ ಮೊಟ್ಟೆ ಇಡೋ ಕೋಳಿ ಸಿಕ್ಕ ಹಾಗೆ. ಈ ಬಾಶಾಗಳು ನಕಲಿ ಅನುಭವಗಳನ್ನು ತುಂಬಿ ಒಂದು ನಕಲಿ ರೆಸ್ಯೂಮೆ ಮಾಡಿ ಎಚ್ ವನ್‌ಗೆ ಅರ್ಜಿ ಹಾಕ್ತಾರೆ. ಈ ಅರ್ಜೀಲಿರೋರ ಹೆಸರು ಬಿಟ್ಟು ಅವರ ಬಗ್ಗೆ ಈ ಬಾಶಾಗಳಿಗೆ ಏನೇನು ಗೊತ್ತಿರೋಲ್ಲ. ಅಮೆರಿಕ ಸರ್ಕಾರದ ಕಣ್ಣಿಗೆ ಮಣ್ಣೆರಚಿ ನಕಲಿ ಬಯೋಡೇಟಾ ತಯಾರಿಸಿ ಎಚ್ ವನ್ ವೀಸಾ ಅಂತ ಕೊಡಿಸ್ತಾರೆ. ಉದ್ಯೋಗಿಯಿಂದ ಈ ಅರ್ಜಿಗೆ ಹಣ ವಸೂಲಿ ಮಾಡೋದು ಕಾನೂನುಬಾಹಿರ. ಆದರೂ ಈ ಬಾಶಾಗಳು ಉದ್ಯೋಗಾಸಕ್ತರಿಂದಲೇ ಹಣ ಕಸಿದುಕೊಳ್ಳುತ್ತಾರೆ. ಈ ದೇಸಿ ಬಾಶಾಗಳಿಗೆ ತಮ್ಮದೇ ಆದ ಕಾನೂನುಗಳಿವೆ. ಅವರುಗಳು ಶಿಕ್ಷಿತ ಜನರನ್ನೂ ವಂಚಿಸುತ್ತಾರೆ. ದುಃಖದ ಸಂಗತಿ ಎಂದರೆ ಈ ಡಾಲರ್ ಹಣದ ದುರಾಸೆಯಿಂದ ಈ ವೆಂಕಿ ಅಂತಹ ಶಿಕ್ಷಿತರೂ ಮೋಸ ಹೋಗುತ್ತಾರೆ.

ದೇಸಿ ಕನ್ಸಲ್ಟೆಂಟ್‌ಗಳ ಕಥೆಗಳು ಸ್ವಾರಸ್ಯಕರವಾಗಿರುತ್ತೆ. ಒಂದು ಸಾರಿ ಹೀಗಾಗಿತ್ತು. ನಾನು ಆಗ AT&Tನಲ್ಲಿ ಗಣಕ ವಿಭಾಗದಲ್ಲಿ ಕನ್ಸಲ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದೆ. ನಾನು ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದೆ. ನನ್ನ ಜೊತೆಯಲ್ಲಿ ಬಹಳಷ್ಟು ದೇಸಿ ಕನ್ಸಲ್ಟೆಂಟ್‌ಗಳು ಕೆಲಸ ಮಾಡುತ್ತಿದ್ದರು. ಅದೂ ಅಲ್ಲದೇ ದೇಸಿ ಬಾಶಾಗಳಿಂದ ಬಂದವರಿದ್ದರು. ಪ್ರತಿ ತಿಂಗಳು ಹೊಸ ಹೊಸ ಕನ್ಸಲ್ಟೆಂಟ್‌ಗಳು ಬರುತ್ತಾ ಇದ್ದರು. ಹಳಬರಲ್ಲಿ ಸ್ವಲ್ಪ ಜನ ಹೋಗುತ್ತಾ ಇದ್ದರು. ಒಂದು ಸಾರಿ ಒಬ್ಬ ಹುಡುಗ ಬಂದ. ಅಂದಿನ ಬೆಳಿಗ್ಗೆ ತಾನೆ ಬೆಂಗಳೂರಿನಿಂದ ಬಂದು ಇಳಿದಿದ್ದ ಆ ಕನ್ಸಲ್ಟೆಂಟ್, ತನ್ನ ಕಂಪನಿಯ ಗೆಸ್ಟ್ ಹೌಸ್ನಿಂದ ನೇರವಾಗಿ ಆಫೀಸಿಗೆ ಬಂದಿದ್ದ. ಬಹಳ ಸಪ್ಪೆ ಮುಖ ಹಾಕಿಕೊಂಡು ಇದ್ದ. ಎಲ್ಲೋ ಜೆಟ್ ಲ್ಯಾಗ್ ಇರಬೇಕು ಅಂದುಕೊಂಡಿದ್ದೆ ನಾನು. 'ಏನಪ್ಪಾ ಆಯ್ತು?' ಅಂತ ಕೇಳ್ದೆ. ತನ್ನ ಕಷ್ಟದ ಕೋಡಿಯನ್ನೇ ಹರಿಸಲು ಶುರುಮಾಡಿದ. ನಾನೂ ಸಮಾಧಾನವಾಗೇ ಕೇಳುತ್ತಾ ಕೂತೆ. 'ಸಾರ್ ಮೊನ್ನೆ ಮದುವೆ ಆಯ್ತು ಸಾರ್' ಅಂತ ಶುರುಮಾಡಿದ, 'ಮದುವೆ ಆದ ರಾತ್ರೀನೆ ಅಲ್ಲಿಂದ ಹೊರಟು ಬಂದೆ. ಸೋಬನಾನೇ ಆಗಿಲ್ಲ ಸಾರ್. ಒಂದು ವಾರ ಬಿಟ್ಟು ಬರ್ತೀನಿ ಅಂದ್ರೂ ಕೇಳ್ಲಿಲ್ಲ ನಮ್ಮ ಕಂಪನಿಯೋರು. ತಕ್ಷಣ ಬರಬೇಕು, ಇಲ್ಲ ಅಂದರೆ ಕೆಲಸ ಗ್ಯಾರಂಟಿ ಇಲ್ಲ ಅಂತ ಹೇಳಿದ್ರು. ಇಲ್ಲಿಗೆ ಬಂದ್ರೆ ಕಂಪನಿ ಗೆಸ್ಟ್ ಹೌಸ್ನಲ್ಲಿ ಇಟ್ಟಿದಾರೆ. ಗಂಡಸರನೆಲ್ಲಾ ಒಂದು ಮನೇಲಿ ಹಾಕಿದಾರೆ, ಹೆಂಗಸರಿಗೆಲ್ಲಾ ಒಂದು ಮನೆ ಮಾಡಿದಾರೆ. ನನ್ನ ಹೆಂಡತೀನ ಹೆಂಗಸರ ಗೆಸ್ಟ್ ಹೌಸ್ನಲ್ಲಿ ಇಟ್ಟಿದಾರೆ, ನನ್ನ ಗಂಡಸರ ಗೆಸ್ಟ್ ಹೌಸ್ನಲ್ಲಿ ಹಾಕಿದಾರೆ. ಒಂದೊಂದು ರೂಮಲ್ಲಿ ಇಬ್ಬಿಬ್ರು ಅಂತ ಬಂಕ್ ಬೆಡ್ ಹಾಕಿದಾರೆ. ನನ್ನ ಹೆಂಡತೀಗೆ ಇಂಗ್ಲಿಷ್ ಸರಿಯಾಗಿ ಬರೋಲ್ಲ ಸಾರ್. ಏನ್ ಮಾಡ್ಲಿ ಸಾರ್' ಅಂದ. ಪಾಪ ಅನ್ನಿಸ್ತು. ಆದರೆ ನನ್ನ ಕೈಯಲ್ಲಿ ಏನು ಮಾಡೋಕ್ಕು ಸಾಧ್ಯ ಇರ್ಲಿಲ್ಲ. ಈ ಕಂಪನಿಯೋರು ಸೋಬನಕ್ಕೂ ಅವಕಾಶ ಕೊಡ್ದೇ ಎಂಥ ಘೋರ ಪಾಪ ಮಾಡಿದಾರೆ ಅನ್ನಿಸ್ತು.

ಬ್ರಹ್ಮಚಾರಿ ಆಗಿದ್ದಾಗ, ಯುವಕರಾಗಿದ್ದಾಗ ಈ ಕನ್ಸಲ್ಟೆಂಟ್ ಜೀವನ ಒಂದು ರೀತಿ ಮಜ ಇರುತ್ತೆ. ಬರ ಬರ್ತಾ ಬೋರ್ ಹೊಡೆಯುತ್ತೆ. ಮದುವೆ ಆಗಿ ಮಕ್ಕಳಾದ ಮೇಲೆ ಈ ಜೀವನ ಕಷ್ಟ. ಮಕ್ಕಳ ಸ್ಕೂಲು, ಪ್ರತಿ ಆರು ತಿಂಗಳ್ಗೋ, ವರ್ಷಕ್ಕೋ ಊರು ಬದಲಾಯ್ಸೋದು ಆಗದ ಕೆಲಸ. ಹೆಂಡ್ತಿ ಮಕ್ಕಳು ಬರೋ ಹೊತ್ತಿಗೆ ಒಂದು ಕಾಯಂ ಕೆಲಸ ಹುಡ್ಕೊಂಡಿರ್ಬೇಕು. ಈ ಬಾಶಾಗಳಿಂದ ಗ್ರೀನ್‌ಕಾರ್ಡ್ (ವೀಸಾದ ನಿರ್ಬಂಧವಿಲ್ಲದೆ ಕೆಲಸ ಮಾಡಲು ಅಮೆರಿಕದಲ್ಲಿರಲು ಪರವಾನಗಿ) ತಗೊಂಡು, ಅವ್ರ ಕೈಯಿಂದ ತಪ್ಪಿಸ್ಕೊಂಡು ಹೊರಕ್ಕೆ ಬರೋ ಹೊತ್ತಿಗೆ ಆರೇಳು ವರ್ಷಗಳು ಆಗಿ ಹೋಗತ್ತೆ. ಇಷ್ಟು ವರ್ಷಗಳ ನಂತರ ಕಾಯಂ ಕೆಲಸ ಹುಡುಕಬೇಕು. ಅಂದರೆ ಎರಡು ತರಹದ ಕಷ್ಟಗಳು ಬರುತ್ವೆ. ಒಂದು, ಇಷ್ಟು ವರ್ಷ ಕನ್ಸಲ್ಟೆಂಟ್ ಆಗಿ ಕೆಲಸ ಮಾಡಿ, ಈಗ ಕಾಯಂ ಕೆಲಸ ಮಾಡೋದು ಕಷ್ಟ. ಇನ್ನೊಂದು ಕಾಯಂ ಕೆಲಸ ಕೇಳಿದ್ರೆ, ಕಾಯಂ ಕೆಲಸದ ಅನುಭವ ಕಮ್ಮಿ ಅಂತ ಹೇಳಿ ಕಾಯಂ ಕೆಲಸ ಸಿಗೋದು ಕಷ್ಟ. ಹಾಗಾಗಿ ಮತ್ತೆ ಕನ್ಸಲ್ಟೆಂಟ್ ಕೆಲಸಕ್ಕೇ ಹೋಗಬೇಕಾಗುತ್ತೆ.

ಗ್ರೀನ್‌ಕಾರ್ಡ್ ಬಂದಿದೆ ಅಂದ್ಮೇಲೆ ಸ್ವತಂತ್ರವಾಗಿ ಕೆಲಸ ಯಾಕೆ ಮಾಡ್ಬಾರ್ದು ಅಂತ ತಲೆ ಒಳಗೆ ಹೊಕ್ಕರೆ ಮುಗೀತು, ಕಾಯಂ ಕನ್ಸಲ್ಟೆಂಟ್ (ಸ್ವತಂತ್ರವಾಗಿ ಕೆಲಸ ಮಾಡುವುದು ಎಂದರೆ ನಮ್ಮ ಕಂಪನಿಯನ್ನು ಪ್ರಾರಂಭಿಸಿ ಅದರ ಮುಖಾಂತರ ಮತ್ತದೇ ಕನ್ಸಲ್ಟಿಂಗ್ ಮಾಡುವುದು. ಒಂದು ರೀತಿಯಲ್ಲಿ ನಮಗೆ ನಾವೇ ಬಾಶಾಗಳು).

ನಾನೂ ಒಬ್ಬ ಸ್ವತಂತ್ರ ಕನ್ಸಲ್ಟೆಂಟ್. ನನ್ನಂತೋರ ಕಥೆ ಕೇಳಿ. ಈ ರೀತಿ ಕನ್ಸಲ್ಟೆಂಟ್‌ಗಳು ಸಾಮಾನ್ಯವಾಗಿ ಸೋಮವಾರ ವಿಮಾನ ಹತ್ತಿ ಕೆಲಸಕ್ಕೆ ಹೋದರೆ, ಗುರುವಾರ ರಾತ್ರಿ ವಾಪಸ್. ನಾಲ್ಕು ದಿವಸ ಮನೆಯಿಂದ ಹೊರಗೆ ಜೀವನ. ವಾರಾಂತ್ಯದಲ್ಲಿ ಮನೆ. ಅದಕ್ಕೆ ನನ್ನಂತೋರ್ಗೆ ವೀಕ್‌ಎಂಡ್ ಗಂಡ ಅಂತಾನೇ ಕರೆಯೋದು. ವಾರದಲ್ಲಿ ಮೂರ್ನಾಲ್ಕು ದಿನಗಳು ಊಟ ತಿಂಡಿ 'ಹೊಟೇಲ್ ಮಾವನ' ಮನೇಲಿ. ದಿನಕ್ಕೊಂದು ಮಾವನ ಮನೇಲಿ ಊಟ, ಮದ್ಯಪಾನ ಹೀಗೆ ಸ್ವಲ್ಪ ದಿನ ಮಜ ಇರುತ್ತೆ. ಆಮೇಲಾಮೇಲೆ, ಯಾವಾಗ ದೇಹದ ತೂಕ ಏರ್ತಾ ಹೋಗುತ್ತೋ, ಆಗ ಶುರುವಾಗೋದು ಸಲಾಡ್ ರೆಸ್ಟೋರೆಂಟ್‌ಗಳು ಎಲ್ಲಿವೆ ಅಂತ ಹುಡ್ಕುಕ್ಕೆ. ಅದು ಹೋಗ್ಲಿ ಸೋಮವಾರದಿಂದ ಗುರುವಾರದವರೆಗೆ ಹೆಂಡ್ತಿ ಮಕ್ಕಳನ್ನು ಬಿಟ್ಟು, ಹೊರಗಡೆ ಊಟ ತಿಂಡಿ ಮಾಡ್ಕೊಂಡು ಮನೇಗೆ ಬಂದು ಮನೆ ಊಟ ಮಾಡೋಣ ಅಂತಂದ್ರೆ, ಮನೇಲಿ ಹೆಂಡ್ತಿ, 'ನಾಳೆ ಹೊರಗೆ ಊಟ ಮಾಡೋಣ, ವಾರವೆಲ್ಲಾ ಮನೇಲಿ ಅಡುಗೆ ಮಾಡಿ ಬೇಜಾರಾಗಿದೆ' ಅನ್ಬೇಕೆ?

ದೇಸಿ ಕನ್ಸಲ್ಟೆಂಟ್‌ಗಳ ಗೋಳು ಇನ್ನೂ ಕೇಳ್ಬೇಕೇ? ಕೇಳಿ. ಊರು, ಅಪ್ಪ, ಅಮ್ಮ, ಸ್ನೇಹಿತರು ಎಲ್ಲರನ್ನೂ ಬಿಟ್ಟು ನೌಕರಿಗೋಸ್ಕರ ಬರೋ ಈ ದೇಸಿ ಕನ್ಸಲ್ಟೆಂಟ್ ಬಂದ ಹೊಸದರಲ್ಲಿ ಎರಡೋ, ಮೂರೋ ವರ್ಷಕ್ಕೆ ಒಮ್ಮೆ ಇಂಡಿಯಾ ಭೇಟಿ. ಕೆಲವರಂತೂ ಏಳು ಎಂಟು ವರ್ಷ ಆದರೂ ಇಂಡಿಯಾಗೆ ಹೋಗೇ ಇಲ್ಲ. ಕಾರ್ಯ ನಿಮಿತ್ತ ಕಾರಣಗಳೇ ಜಾಸ್ತಿ. ಹೀಗಾಗುತ್ತೆ ನೋಡಿ. ಈ ದೇಸಿ ಕನ್ಸಲ್ಟೆಂಟ್‌ಗಳು ಕೆಲಸ ಮಾಡೋದೆ ಬಾಶಾಗಳ ಹತ್ತಿರ. ಚಿನ್ನದ ಮೊಟ್ಟೆ ಕೊಡ್ತಿರೋ ಕೋಳಿ ಬಿಡಕ್ಕಾಗುತ್ತಾ? ಯಾವುದಾದರೂ ಒಂದು ಪ್ರಾಜೆಕ್ಟಲ್ಲಿ ಇದ್ದರೆ ಕಕ್ಷಿದಾರ ರಜಾ ಕೊಡೋದೆ ಕಷ್ಟ. ಆಯ್ತು ಅದೇ ಕಾರಣ ಸಾಕು ಈ ಬಾಶಾಗಳಿಗೆ. ಪ್ರಾಜೆಕ್ಟ್ ಮುಗಿಯೋ ತನಕ ರಜೆಗೆ ಖೋತ. ಇನ್ನು ಪ್ರಾಜೆಕ್ಟ್ ಆದ ಮೇಲೆ ಸಿಗುತ್ತಾ ಅಂದರೆ, ಇನ್ನು ಮುಂದಿನ ಪ್ರಾಜೆಕ್ಟ್ ಹುಡ್ಕೋ ತವಕ. ಆಗಲೂ ರಜೆ ಇಲ್ಲ. ಅದೃಷ್ಟ ಚೆನ್ನಾಗಿದ್ರೆ ಒಂದು ದೊಡ್ಡ ಪ್ರಾಜೆಕ್ಟ್ ಏನಾದರೂ ಸಿಕ್ಕಿದರೆ ಎಲ್ಲೋ ಒಂದು ಹದಿನೈದು ದಿವಸ ರಜ ಸಿಗಬಹುದು. ಹೀಗಾಗಿ ಅಪ್ಪ ಅಮ್ಮನ ದರ್ಶನ ಹಲವು ವರ್ಷಗಳಾದ ಮೇಲೆ.

ಇದೇ ದೇಸಿ ಕನ್ಸಲ್ಟೆಂಟ್‌ಗಳಿಂದ ಹುಟ್ಟಿಕೊಳ್ಳೋದು ದೇಸಿ ಬಾಶಾಗಳು. ಕೆಲವು ದೇಸಿ ಕನ್ಸಲ್ಟೆಂಟ್‌ಗಳ ತಲೆ ಜೋರಾಗಿರುತ್ತೆ. ತಾವು ಕೆಲಸ ಮಾಡ್ತಿರೋ ಕಂಪನಿಗಳಲ್ಲಿ ಮ್ಯಾನೇಜರ್‌ಗಳ ಹತ್ತಿರ ಚೆನ್ನಾಗಿ ಬೆಣ್ಣೆ ಹೊಡೆದು, ಕೈಗೆ ಒಂದು ಗ್ರೀನ್ ಕಾರ್ಡ್ ಬರೋದೇ

ತಡ, ಒಂದು ಬಾಶಾ ಕಂಪನಿ ತೆರೆದು, ತಾನು ಕೆಲಸ ಮಾಡ್ತಿದ್ದ ಕಂಪನಿಯಲ್ಲೇ ಮ್ಯಾನೇಜರ್‌ಗೆ ಪ್ರತಿ ತಿಂಗಳೂ ಒಂದೊಂದು ಕನ್ಸಲ್ಟೆಂಟ್‌ಗೂ ಇಷ್ಟು ಅಂತ ಕೈ ಬೆಚ್ಚಗೆ ಮಾಡಿ ಸಣ್ಣಕ್ಕೆ ಶುರುಮಾಡ್ತಾನೆ ತನ್ನ ಬಾಶಾ ಕೆಲಸ. ಹೀಗೆ ಶುರುವಾಗೋ ಬಾಶಾ ಕೆಲಸ ಮೆಲ್ಲಗೆ ಬೇರೆ ಕಂಪನಿಗಳಿಗೂ ಹಬ್ಬಿಕೊಳ್ಳುತ್ತೆ. ಹೀಗೆ ದೇಸಿ ಬಾಶಾಗಳೂ ಜಾಸ್ತಿ ಆದ್ರು, ಹಾಗೇ ದೇಸಿ ಬಾಶಾಗಳ ಮಧ್ಯೆ ಪೈಪೋಟಿನೂ ಶುರುವಾಯ್ತು; ಕಡೆಗೆ ಗುತ್ತಿಗೆ ಹಣ ಕಮ್ಮಿ ಆಗ್ತಾ ಹೋಯ್ತು. ಕಳೆದ ಹತ್ತು ವರ್ಷಗಳಲ್ಲಿ ಈ ರೀತಿ ದೇಸಿ ಬಾಶಾಗಳು ಹಾಗೂ ಕನ್ಸಲ್ಟೆಂಟ್‌ಗಳು ಅಣಬೆ ತರಹ ಬೆಳ್ಕೊಂಡು ಬಿಟ್ಟಿವೆ. ಇತ್ತೀಚಿನ ಆರ್ಥಿಕ ವ್ಯವಸ್ಥೆಯಲ್ಲಿ ಕುಸಿತ ಇಂತಹ ಬಾಶಾಗಳಿಗೆ, ಕನ್ಸಲ್ಟೆಂಟ್‌ಗಳಿಗೆ ಬಹಳಷ್ಟು ಪೆಟ್ಟುಕೊಟ್ಟಿದೆ. ಆರ್ಥಿಕ ವ್ಯವಸ್ಥೆಯ ಕುಸಿತದಿಂದ ಅಮೆರಿಕೆಯ ಹಲವಾರು ಕಂಪನಿಗಳು ಗಣಕ ಕೆಲಸಗಳಿಗಾಗಿ ಹಣ ಖರ್ಚು ಮಾಡುತ್ತಿಲ್ಲ. ಪ್ರಾಜೆಕ್ಟ್‌ಗಳು ನಿಂತು ಹೋಗುತ್ತಾ ಇವೆ. ದೇಸಿ ಕನ್ಸಲ್ಟೆಂಟ್‌ಗಳಿಗೆ ಕೆಲಸ ಕಮ್ಮಿಯಾಗುತ್ತಾ ಬಂದಿದೆ. ಕೆಲವರಂತೂ ಸಾಲದ ಮನೆ, ಕಾರು ಎಲ್ಲಾ ಬಿಟ್ಟು ಭಾರತಕ್ಕೆ ಮರಳಿದ್ದಾರೆ. ನನಗೇ ಗೊತ್ತಿರುವ ಹಾಗೆ ಹತ್ತೋ ಹದಿನೈದೋ ಸ್ನೇಹಿತರು ಅಮೆರಿಕ ಬಿಟ್ಟು ಭಾರತಕ್ಕೆ ಮರಳಿದ್ದಾರೆ.

ಹಾಗೆ ಮರಳಿದವರಲ್ಲಿ ಆಂಧ್ರಪ್ರದೇಶದ ಹೈದರಾಬಾದಿನ ಯುವಕನ ಕಥೆ ಹೀಗಿದೆ. ಅವನು ಬಂದಾಗ ಇನ್ನೂ ಮದುವೆಯಾಗಿರಲಿಲ್ಲ. ಬಂದ ಒಂದು ವರ್ಷಕ್ಕೆ ಮದುವೆಯಾದ. ಅಮೆರಿಕೆಯಲ್ಲಿ ಕೆಲಸ ಅಂದರೆ ಕೇಳಬೇಕೆ? ಅದರಲ್ಲೂ ಆಂಧ್ರದವ. ತೂಕವಾಗೇ ವರದಕ್ಷಿಣೆ ತೆಗೆದುಕೊಂಡ, ಹೆಂಡತಿಯನ್ನು ಕರೆದುಕೊಂಡು ಬಂದ. ಒಂದು BMW ಕಾರನ್ನು ಸಾಲದಲ್ಲಿ ತೆಗೆದುಕೊಂಡ, ಒಂದು ಹೊಸ ಮನೆಯನ್ನೂ ತೆಗೆದುಕೊಂಡ. ಮನೆಯಲ್ಲಿ ಹೊಸ ಟಿವಿ, ಸೋಫಾ ಸೆಟ್... ಎಲ್ಲಾ ನವೀನ. ಕೆಲವು ವರ್ಷಗಳ ಹಿಂದೆ ಕೆಲಸ ಹೋಯ್ತು. ಮನೆಯಲ್ಲಿ ಇದ್ದ ಸಾಮಾನುಗಳೆಲ್ಲಾ ಸಾಲದ್ದೇ. ಕಾರು, ಮನೆ ಸಹ ಸಾಲದ್ದೇ. ಸ್ವಲ್ಪ ದಿವಸ ನೋಡಿದ. ಕೆಲಸ ಸಿಗಲಿಲ್ಲ. ಒಂದು ದಿವಸ ಸೂಟ್‌ಕೇಸ್ ಎಲ್ಲಾದನ್ನು ಪ್ಯಾಕ್ ಮಾಡ್ಕೊಂಡ, ಮನೆಗೆ ಬೀಗ ಹಾಕಿದ, ಹೆಂಡತಿಯನ್ನು ಕರ್ಕೊಂಡು. ಕಾರನ್ನು ವಿಮಾನ ನಿಲ್ದಾಣದ ಪಾರ್ಕಿಂಗ್ನಲ್ಲಿ ನಿಲ್ಲಿಸಿ ಭಾರತದ ವಿಮಾನ ಹತ್ತಿದ. ಇಂತಹ ಪ್ರಸಂಗಗಳು ಬಹಳಷ್ಟು ಆಗಿವೆ.

ಹೆಚ್ಚಿನ ಭಾಗದ ಯುವ ಜನಾಂಗ ಅಮೆರಿಕೆಗೆ ಬಂದಿರೋದೆ ಗಣಕ ಕೆಲಸಕ್ಕೆ. ಅದರಲ್ಲೂ ಆರ್ಥಿಕ ಉಚ್ಛ್ರಾಯ ಕಾಲದಲ್ಲಿ (Boom Period) - ಸುಮಾರು ೧೯೯೮ರಿಂದ ೨೦೦೨ರವರೆಗೆ. ನಾನೂ ಅದೇ ಸಮಯದಲ್ಲಿ ಒಬ್ಬ ಗಣಕ ಸಲಹೆಗಾರನಾಗೇ ಬಂದೋನು. ಆದರೂ ನಮಗಿಂತ ಹಿಂದೆ ಬಂದವರು ಹೇಳೋದು 'ನೀವಂತು ಅದೃಷ್ಟವಂತರು, ಕೆಲಸಕ್ಕೇ ಅಂತ ನೇರವಾಗಿ ಬಂದು ಸೇರ್ಕೊಂಡ್ರಿ, ನಾವು ಕೆಲಸಕ್ಕೆ ಸೇರ್ಕೊಳ್ಳೊ ಹೊತ್ತಿಗೆ ಎಷ್ಟು ಕಷ್ಟಪಟ್ಟಿದೀವಿ ನಿಮಗೇನು ಗೊತ್ತು?' ಅಂತ. ಒಪ್ಕೊಳ್ಳಬೇಕಾದ ಮಾತೇ ಅದು. ಇಂಡಿಯಾಗೆ ಹೋಲಿಸಿ ನೋಡಿದರೆ ಇಂಡಿಯಾಗಿಂತ ಅಮೆರಿಕದಲ್ಲಿ ಒಂದು

ಪದವಿ ತಗೊಳ್ಳೋದು ಎಷ್ಟು ಕಷ್ಟ ಅಂತ ಎಲ್ಲರಿಗೂ ಗೊತ್ತು. ಅಮೆರಿಕೆಯಲ್ಲಿ ಒಂದು ಪದವಿ ತೆಗೆದುಕೊಂಡಿದಾರೆ ಅಂದ್ರೆ, ಅವರಿಗೆ ಅವರ ಕ್ಷೇತ್ರದಲ್ಲಿನ ಇತ್ತೀಚಿನ ತಂತ್ರಜ್ಞಾನದ ಅಭ್ಯಾಸವಾಗಿರುತ್ತದೆ. ಇಂಡಿಯಾದಲ್ಲಿ ಇನ್ನೂ ಸಮಯಬಾಹ್ಯ ಪಠ್ಯಕ್ರಮ (IIT)ಗಳನ್ನು ಬಿಟ್ಟರೆ) ಇನ್ನೂ ಜಾರಿಯಲ್ಲಿದೆ. ಪಾಪ ಕಷ್ಟಪಟ್ಟು ಸಾಲ ಸೋಲ ಮಾಡಿ ಕನಿಷ್ಟ ಏನಿಲ್ಲಾ ಅಂದ್ರು ೨-೩ ವರ್ಷ ವಿದ್ಯಾರ್ಥಿ ಜೀವನ ಕಳೆದು ಕೆಲಸ ಸಿಕ್ಕಿ ಈಗ ಸುಖ ಜೀವನ ಮಾಡ್ತಿರೋರ್ಗೆ, ಸುಮ್ಮನೆ ಒಂದು ಗಣಕದ ಬಗ್ಗೆ ಒಂದು ಕೋರ್ಸ್ ಮಾಡಿ, ಎಚ್ ವನ್ ವೀಸಾದಲ್ಲಿ ಬಂದು ೬೦-೧೦೦ ಸಾವಿರದಷ್ಟು ವರ್ಷದ ಸಂಬಳ ತಗೊಳ್ಳೋದು ಕಂಡ್ರೆ ಕೈಯೆಲ್ಲಾ ಹಿಚಕ್ಕೊಳ್ಳೋ ಹಾಗೆ ಆಗುಲ್ವೇ. ಅದು ಸ್ವಾಭಾವಿಕ. ಹಾಗಂತ ಈ ದೇಸಿ ಕನ್ಸಲ್ಟೆಂಟ್‌ಗಳ ಜೀವನ ಸುಖವಾಗಿದೆಯೇ?

ಆ ರೀತಿ ಬಂದೋರಲ್ಲಿ ಎಷ್ಟೋ ಜನ ಮೋಸ ಹೋದ ಪ್ರಸಂಗಗಳೂ ಇವೆ. ಬಂದವರೆಲ್ಲಾ ಏನು ೬೦-೧೦೦ ಸಾವಿರ ವರ್ಷದ ಸಂಬಳ ತಗೊಳ್ತಿರ್ಲಿಲ್ಲ. ಅದ್ರ ವ್ಯವಸ್ಥೆ ಹೀಗಿರ್ತಾ ಇತ್ತು. ದೇಸಿ ಬಾಶಾಗಳು ಕನ್ಸಲ್ಟೆಂಟ್‌ಗಳನ್ನು ಎರಡು ತರಹ ಸಂಬಳದಲ್ಲಿ ಇಡ್ತಾ ಇದ್ರು. ಒಂದು ಆನ್-ಪ್ರಾಜೆಕ್ಟ್ ಮತ್ತು ಇನ್ನೊಂದು ಬೆಂಚ್ ಅಂತ. ಅಂದರೆ ಯಾವುದಾದರು ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡ್ತಾ ಇದಾರೆ ಅಂದ್ರೆ ಆನ್-ಪ್ರಾಜೆಕ್ಟ್ ಸಂಬಳ. ಇಲ್ಲಾ ಅಂದ್ರೆ ಬೆಂಚ್ ಸಂಬಳ. ಕೆಲಸಗಳೆಲ್ಲಾ ತಾತ್ಕಾಲಿಕ ಕೆಲಸಗಳೇ. ಅಲ್ಲಿ ಇಲ್ಲಿ ಅಂತಿಲ್ಲಾ. ಅಮೆರಿಕಾದ ಯಾವುದೇ ಮೂಲೆಗಾದ್ರೂ ಹೋಗ್ಬೇಕು. ಹೊಸ ಜಾಗ, ಹೊಸ ವಾತಾವರಣಕ್ಕೆ ಹೊಂದ್ಕೋಬೇಕು. ಹೋದ ದಿವಸದಿಂದಾನೆ ಕೆಲಸ ಶುರು. ಕೆಲವು ಬಾಶಾಗಳು ಪ್ರಯಾಣ ಮಾಡೋಕ್ಕೆ ಅವಕಾಶ ಕೊಡ್ತಾರೆ. ಈ ದೇಸಿ ಬಾಶಾಗಳಾದ್ರೆ ಅವೆಲ್ಲಾ ಏನೂ ಇಲ್ಲ. ಎಲ್ಲಿ ಕೆಲಸವೋ ಅಲ್ಲೀಗೆ ಗಂಟು ಮೂಟೆ ಕಟ್ಕೊಂಡು ಹೋಗ್ಬೇಕು. ಚಿಕ್ಕ ಮನೆ ಹುಡ್ಕೋಬೇಕು. ಸಂಸಾರ ಶುರು ಮಾಡ್ಬೇಕು. ಅದಕ್ಕೆ ದೇಸಿ ಕನ್ಸಲ್ಟಂಟ್ಗಳಿಗೆ 'ಪೋಸ್ಟಲ್ ಕೋಡ್ (ಜಿಪ್ ಕೋಡ್) ಹೇಳಿ, ಅವರು ಯಾವ ಊರು ಅಂತ ಹೇಳ್ತಾರೆ' ಅನ್ನುವ ಮಾತು ಸತ್ಯಕ್ಕೆ ದೂರವೇನು ಅಲ್ಲ ಅನ್ನಿಸುತ್ತೆ.

ಇದು ದೇಸಿಗಳ ಜೀವನ, ಆದರೆ ಅವರು ಹೊಸ ಸಂಸ್ಕೃತಿಗೆ ಹೇಗೆ ಹೊಂದಿಕೊಂಡಿದ್ದಾರೆ? ಅಮೆರಿಕ ಒಂದು ಮಹಾನ್ ದೇಶ, ತನ್ನ ಬೃಹತ್ ಆರ್ಥಿಕ ಏಳಿಗೆಗೊಂದೇ ಅಲ್ಲ, ಬಹುಮುಖ ಸಂಸ್ಕೃತಿಗಳಿಗೆ ಸ್ಥಳ ಮಾಡಿಕೊಡುವುದರಿಂದ. ದೇಶ ಪ್ರಾರಂಭವಾಗಿದ್ದು ಯೂರೋಪ್, ಆಫ್ರಿಕಾ ಹಾಗೂ ಚೀನೀಯರಿಂದ. ಪ್ರಾಥಮಿಕವಾಗಿ ಯೂರೋಪಿಯನ್ ಸಂಸ್ಕೃತಿಯನ್ನು ಅಳವಡಿಸಿಕೊಡಿದ್ದರೂ ಆಫ್ರಿಕಾ ಹಾಗೂ ಚೈನಾ ಸಂಸ್ಕೃತಿಗಳ ಛಾಯೆ ಅದರ ಮೇಲಿದೆ. ಈ ದೇಶ ಜಗತ್ತಿನ ಮಾನವನ ಕನಸಿಗೂ ಮೀರಿ ಅತಿ ಹೆಚ್ಚು ದೇಶಗಳ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ವಿಶ್ವವ್ಯಾಪಿ ಜನ ಗುರುತ್ವಾಕರ್ಷಣೆಯ ರೂಪದಲ್ಲಿ ಆಕರ್ಷಿತರಾಗುವುದು, ಈ ದೇಶದ ಪ್ರಗತಿಪರ ಸಾಮಾಜಿಕ ಹಾಗೂ ಆರ್ಥಿಕ ನೀತಿಗಾಗಿ.

ಉದ್ಯೋಗಾರ್ಥಿಗಳಾಗಿ ಬಂದ ದೇಸಿಗಳು ಈ ಪಾಶ್ಚಿಮಾತ್ಯ ಸಂಸ್ಕೃತಿಗಳನ್ನ ಪಾಲಿಸಬೇಕೋ ಬೇಡವೋ?

ನಮ್ಮ ಸಂಸ್ಕೃತಿ, ಸಾಮಾಜಿಕ ಜೀವನ ವಿಧಾನ, ಪರಂಪರೆಯ ಚಿಂತನಾ ಸಾಮರ್ಥ್ಯ ಇವುಗಳು ಪ್ರಾಚೀನವಾದದ್ದು ಹಾಗೂ ನಮ್ಮ ಹೆಮ್ಮೆಯ ವಿಚಾರ. ಇವುಗಳ ಬಗ್ಗೆ ನಮಗೆ ಪೂರ್ಣ ಜ್ಞಾನವಿಲ್ಲದಿದ್ದರೂ, ಅದರ ಬಗ್ಗೆ ನಾವು ಬಹಳ ಗರ್ವದಿಂದ ಹೇಳಿಕೊಳ್ಳುತ್ತೇವೆ. ಅಗಾಧವಾದ ಧಾರ್ಮಿಕ ಜ್ಞಾನದ ಹಿನ್ನೆಲೆಯಲ್ಲಿಯೇ ಎಲ್ಲರೂ ಬೆಳೆದರೂ, ಕೆಲವರಿಗೆ ಮಾತ್ರ ಅದರ ಬಗ್ಗೆ ನಿಜವಾದ ತಿಳಿವಳಿಕೆ ಇದೆ. ಭೂತ, ಪ್ರೇತಗಳ ಅಸ್ತಿತ್ವವೇ ಆಧ್ಯಾತ್ಮಿಕ ಎಂದು ನಂಬುವವರೂ ಇದ್ದಾರೆ.

ಸಾಂಪ್ರದಾಯಿಕ ಜೀವನ ವಿಧಾನದಿಂದ, ವ್ಯಾಕುಲ ಮುಕ್ತ, ಪ್ರಗತಿಪರ, ಹಾಗೂ ಮುಕ್ತ ಬಾಳಿಗೆ ರೂಪಾಂತರಗೊಳ್ಳುವುದು ತುಸು ಹೆಚ್ಚಿನ ಕಾಲವೇ ಹಿಡಿಯಬಹುದು. ಒಬ್ಬ ಅಮೆರಿಕನ್ ತನ್ನ ಅಮ್ಮನ ಮದುವೆಗೆ ಹೋಗುತ್ತಿದ್ದೇನೆ ಎನ್ನುವುದು ವಾಸ್ತವಿಕಕ್ಕೆ ದೂರವೆನ್ನಿಸುತ್ತದೆ. ಅಮ್ಮನ ಗಂಡ, ಅಮ್ಮನ ಬಾಯ್‌ಫ್ರೆಂಡ್, ಅಪ್ಪನ ಹೆಂಡತಿ, ಅಪ್ಪನ ಗರ್ಲ್‌ಫ್ರೆಂಡ್... ಇಂತಹ ಸಂಬಂಧಗಳು ದೇಸಿಯ ಮನಸ್ಸಿಗೆ ವಿಚಿತ್ರವೆನಿಸುತ್ತವೆ. ಅಮೆರಿಕನ್ ಒಬ್ಬ ನನಗೆ ೨ ಮಕ್ಕಳು, ನನ್ನ ಹೆಂಡತಿಗೆ ೨ ಮಕ್ಕಳು ಎನ್ನುವ ಮಾತುಗಳು ಸತ್ಯವಾದರೂ ನಮಗೆ ಒಪ್ಪಿಗೆಯಾಗದವು. ಕೆಲವು ಅಮೆರಿಕನ್ನರು ತಮ್ಮ ತಂದೆಯ ಶೋಧನೆಯಲ್ಲಿರುವುದನ್ನು ನೋಡಿದ್ದೇನೆ. ಆದಾಗ್ಯೂ ಇಲ್ಲಿಯ ಜನ ಮದುವೆಗೆ ಪ್ರಾಧಾನ್ಯ ಕೊಡುತ್ತಾರೆ.

ಭಾರತದಲ್ಲಿ ಹುಟ್ಟಿ ಬೆಳೆದ ದೇಸಿಗೆ ಮನಸ್ಸಿನಲ್ಲಿ ಒಂದು ಮಾದರಿಯ ನಿರ್ದಿಷ್ಟ ಸ್ವಭಾವ ಆವರಿಸಿರುತ್ತದೆ. ನಾವು ಏನೇ ಮಾಡಿದರೂ ನಮ್ಮ ಸಂಸಾರ, ಮನೆ, ನಮ್ಮ ನೆಂಟರು ಇವರನ್ನೇ ಒಳಗೊಂಡಿರುತ್ತೆ. ಈ ವೃತ್ತಕ್ಕೆ ಒಪ್ಪದ ಯಾವುದೇ ಬದಲಾವಣೆಗೆ ಒಪ್ಪುವುದೇ ಇಲ್ಲ. ಅದರ ಪರಿಣಾಮದ ಬಗ್ಗೆಯೂ ಯೋಚಿಸುವುದಿಲ್ಲ. ಅದನ್ನೇ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಎಲ್ಲಿಯವರೆಗೆ ನಮ್ಮ ಸಂಸಾರ, ಮನೆ ಹಾಗೂ ಭಾಷೆಗಳ ಹಿತಾಸಕ್ತಿಗೆ ಧಕ್ಕೆ ಬರುವುದಿಲ್ಲವೋ ಅಲ್ಲಿಯ ತನಕ ನಾವು ಏನು ಮಾಡುವುದಕ್ಕೂ ತಯಾರಿರುತ್ತೇವೆ. ಇಲ್ಲಿ ಯಾವುದು ಒಳ್ಳೆಯದು, ಯಾವುದು ಕೆಟ್ಟದು ಅನ್ನುವದು ಪ್ರಶ್ನೆ ಅಲ್ಲ, ವಿಷಯ ವಿಶ್ಲೇಷಣೆ ಅಷ್ಟೆ.

ಈ ಪರಿಮಿತಿಯಿಂದ ಸೀಮಿತಗೊಂಡ ಚಿಂತನಾ ಸಾಮರ್ಥ್ಯದಿಂದ, ನಾವು ನಮ್ಮ ವೃತ್ತಿಯನ್ನು ಪ್ರಾರಂಭಿಸುತ್ತೇವೆ ಹಾಗೂ ಪ್ರಪಂಚವನ್ನು ಗೆಲ್ಲಲು ಕನಸು ಕಟ್ಟುತ್ತೇವೆ. ಕೆಲವು ದೇಸಿಗಳು ಯಶಸ್ವಿಯಾದರೂ, ಅದಕ್ಕಾಗಿ ಸಪ್ತ ಸಾಗರಗಳನ್ನೇ ದಾಟಿ ತಮ್ಮ ಭವಿಷ್ಯ ಬೀಜವನ್ನು ಬಿತ್ತುತ್ತಾರೆ. ಭಾಗಶಃ ಕೆಲವರು ಚಿಕ್ಕ ವಯಸ್ಸಿನಲ್ಲೇ ಬಂದವರಿದ್ದಾರೆ. ಕೆಲವರು ತಮ್ಮ ಆಯಸ್ಸಿನ ಬಹುಭಾಗ ಒಳ್ಳೆಯ ದಿನಗಳನ್ನು ಭಾರತದಲ್ಲಿ ಕಳೆದು ಬಂದವರಿದ್ದಾರೆ.

ನಾವೆಲ್ಲಾ ಈಗಲೂ ನೆನೆಸಿಕೊಳ್ಳುವುದು ನಮ್ಮನೆ, ಅಮ್ಮ ಬಡಿಸಿದ ಊಟ, ಹಬ್ಬ ಹರಿದಿನಗಳು, ಪೂಜೆಗಳು, ಜಾತ್ರೆಗಳು... ಅದಕ್ಕಿಂತಲೂ ಹೆಚ್ಚು ಸಾರ್ವಜನಿಕ ಕಾರ್ಯಕ್ರಮಗಳು ನಮ್ಮ ಮನಸ್ಸಿನಿಂದ ತೆಗೆದು ಹಾಕಲು ಸಾಧ್ಯವೇ ಇಲ್ಲ. ಯುವಕರು, ಯುವತಿಯರು ಒಬ್ಬರನ್ನು ಒಬ್ಬರು ಮೆಚ್ಚಿಸಲು ನಡೆಸುತ್ತಿದ್ದ ಶೋಕಿ, ಇವೆಲ್ಲಾ ಅಳಿಸಲಾಗದ ಅನಿಸಿಕೆಗಳು. ಇವುಗಳಲ್ಲಿ ದೇಸಿ ಮನಸ್ಸಿನಲ್ಲಿ ಒಂದು ಬಚ್ಚಿಟ್ಟ ಮೋಹಕ ಸ್ವಾದವಿತ್ತು.

ಈ ಸಂಯುಕ್ತ ಸಾಂಸ್ಕೃತಿಕ ನಾಡಿಗೆ ಭೂಸ್ಪರ್ಶ ಮಾಡಿದ ದೇಸಿಗೆ ಮೊದಲ ಹೊಡೆತವೆಂದರೆ, ಹವಾಗುಣ ಮತ್ತು ಸಂಸ್ಕೃತಿಯ ಬದಲಾವಣೆ. ಮುಖ್ಯವಾಗಿ ರಸ್ತೆ ಬಲಭಾಗದಲ್ಲಿ ಕಾರು ಚಲಿಸುವುದು. ನಮಗೆಲ್ಲಾ ಓದಿ ತಿಳಿದಿದ್ದರೂ, ಪ್ರತ್ಯಕ್ಷ ನೋಡಿರಲಿಲ್ಲ. ಈಗ ಇಲ್ಲಿ ಎಲ್ಲರೂ ನಿಮ್ಮನ್ನ ನಿಮ್ಮ ಹೆಸರಲ್ಲೇ ಕರೆಯುತ್ತಾರೆ, ಸಾರ್ ಅನ್ನುವವರಿಲ್ಲ, ಸಾಹೇಬ್ ಅನ್ನುವವರಿಲ್ಲ, ಬಾಬು ಅನ್ನುವವರಿಲ್ಲ, ಜೀ ಅನ್ನುವವರಿಲ್ಲ. ನಿಮ್ಮ ಮಕ್ಕಳನ್ನು ಬಿಟ್ಟರೆ ಬಹುಶಃ ಬೇರೆ ಮಕ್ಕಳೂ ಸಹ ನಿಮ್ಮನ್ನು ಹೆಸರಲ್ಲೇ ಕರೆಯುತ್ತಾರೆ. ಮತ್ತೊಂದು ಗಮನಾರ್ಹ ವ್ಯತ್ಯಾಸವೆಂದರೆ, ದೇಸಿಯಲ್ಲದ ನಾರಿಯನ್ನ ಸೀರೆಯಲ್ಲಿ ನೋಡುವುದಿಲ್ಲ. ನಿಧಾನವಾಗಿ ಇದಕ್ಕೆಲ್ಲಾ ಹೊಂದಿಕೊಳ್ಳುತ್ತೇವೆ. ನಮ್ಮ ದೇಸಿ ಹೆಂಗಸರನ್ನೂ ಸಹ ಪ್ಯಾಂಟ್ ಶರ್ಟ್‌ಗಳಲ್ಲಿ ನೋಡುವುದಕ್ಕೆ ಹೊಂದಿಕೊಳ್ಳುತ್ತೇವೆ. ಇಂತಹ ಬದಲಾವಣೆಗೆ ನಾವು ಬಹು ಬೇಗ ಹೊಂದಿಕೊಳ್ಳುತ್ತೇವೆ. ಈ ದೇಶದ ಊಟ, ತಿಂಡಿ, ಹವಾಗುಣ, ಅದಿರಲಿ ಮಾತನಾಡುವ ಶೈಲಿಗೂ ಹೊಂದಿಕೊಳ್ಳುತ್ತೇವೆ. ಕೆಲ ಯುವಕರು ತಮ್ಮ ಚಿಗುರು ಮೀಸೆಯನ್ನೂ ಕಿತ್ತು ಮುಖಾಲಂಕಾರ ಮಾಡಿಕೊಳ್ಳುತ್ತಾರೆ. ಅಲ್ಲಗಳೆಯಲಾಗದ ವಿಷಯವೆಂದರೆ ನಮ್ಮ ಹತ್ತಿರದ ಬಂಧುಗಳು, ಊರಿನ ಸ್ನೇಹಿತರು, ಮನೆ, ಮತ್ತು ಭಾಷೆ ಇವುಗಳನ್ನು ನೆನೆಸಿಕೊಳ್ಳುತ್ತೇವೆ. ಈ ಶೂನ್ಯವನ್ನು ತುಂಬಲು ದೂರವಾಣಿಯಲ್ಲಿ ಹಣ ಸುರಿಯುತ್ತೇವೆ. ಊರಿನಲ್ಲಿ ನಮ್ಮ ಬಂಧುಗಳು, ಸ್ನೇಹಿತರೂ ಸಹ ನಮ್ಮನ್ನ ನೆನೆಸಿಕೊಳ್ಳುತ್ತಿರುತ್ತಾರೆ, ಆದರೆ ಅವರಲ್ಲಿ ಒಂದೇ ಸಮಾಧಾನದ ಅಂಶ, ಕಡೇ ಪಕ್ಷ ತಮ್ಮಲ್ಲಿ ಒಬ್ಬನಾದರೂ ಸುಯೋಗಕ್ಕೋಸ್ಕರ ಪಾರಾಗಿ ಹೋಗಿದ್ದಾನಲ್ಲ ಎಂದು.

ಒಂದು ವರ್ಷದಲ್ಲಿ ದೇಸಿಯಲ್ಲಿ ಮಾರ್ಪಾಟುಗಳನ್ನು ಕಾಣಬಹುದು. ವ್ಯಕ್ತಿ ಚಿತ್ರದಲ್ಲಿ ಸುಧಾರಣೆ, ಎದುರು ಕಂಡವರಿಗೆ ನಗೆಮುಖ ತೋರಿಸುವುದು, ಹಾಯ್ ಹೇಳುವುದು, ರೋಟಿ-ಸಬ್ಜಿ ಅಥವಾ ಅನ್ನ-ಸಾಂಬಾರ್ ಇಲ್ಲದೇ ಊಟ ಮಾಡುವುದು, ಕೋಕ್, ಪೆಪ್ಸಿ, ಬರ್ಗರ್, ಪೀಟ್ಜಾಗಳಿಗೆ ಹೊಂದಿಕೊಳ್ಳುವುದು... ಹೀಗೆ ಹಲವಾರು ಬದಲಾವಣೆಗಳನ್ನು ನೋಡಬಹುದು. ಕೆಲವು ವೇಳೆ ಭಾಷೆ ಹಾಗೂ ಉಚ್ಚಾರಣೆಗೆ ಹೊಂದಿಕೊಳ್ಳುವುದು ಸ್ವಲ್ಪ ಹೆಚ್ಚಿನ ವೇಳೆಯೇ ಹಿಡಿಯಬಹುದು. ಅಮೆರಿಕದ ಎಲ್ಲಾ ಪ್ರಾಂತ್ಯಗಳಲ್ಲಿ ತಮ್ಮದೇ ಆಂಗ್ಲ ಭಾಷೆಯನ್ನು ಮಾತನಾಡುತ್ತಾರೆ. ಉಚ್ಚಾರಣೆ, ಮಾತನಾಡುವ ಶೈಲಿ, ಆಡುಭಾಷೆ ಒಂದೊಂದು ಪ್ರಾಂತ್ಯಕ್ಕೂ ಒಂದೊಂದು ರೀತಿ ಇದೆ. ನಾವು ಆಂಗ್ಲ ಭಾಷೆಯಲ್ಲೇ

ವಿದ್ಯಾಭ್ಯಾಸ ಮಾಡಿದ್ದರೂ, ಇಲ್ಲಿಗೆ ಬರುವವರೆಗೂ ಇಲ್ಲಿಯ ಶೈಲಿ, ಆಡುಭಾಷೆ ಬಗ್ಗೆ ಏನೂ ತಿಳಿದಿರಲಿಲ್ಲ. 'ರಬ್ಬರ್'ಗೆ ಕಾಂಡೋಂ ಅನ್ನುತ್ತಾರೆ ಎನ್ನುವುದು ಅರಿವಾಗಿದ್ದು ಇಲ್ಲಿಗೆ ಬಂದು ಎಷ್ಟೋ ದಿವಸದ ಮೇಲೆ. ನಮ್ಮ ಬಾತ್ ರೂಮುಗಳಿಗೆ ರೆಸ್ಟ್ ರೂಮ್ ಅನ್ನುವುದು ಎಲ್ಲಾ ಹೊಸದಾಗಿ ಕಾಣುತ್ತದೆ. ಈಗೀಗ ಭಾರತದಲ್ಲೂ ಜಾಗತೀಕರಣದಿಂದ ಈ ಪದಗಳ ಪರಿಚಯವಾಗುತ್ತಿದೆ. ಆದ್ದರಿಂದ ತೊಂಭತ್ತರ ದಶಕದಲ್ಲಿ ಬಂದ ದೇಸಿಗಳಿಗಿಂತ ಇತ್ತೀಚಿನ ಯುವ ಜನಾಂಗಕ್ಕೆ ಅಷ್ಟಾಗಿ ವ್ಯತ್ಯಾಸ ಕಾಣ ಬರುವುದಿಲ್ಲ. ಈಗ ಕೋಕೋ ಕೋಲಾ, ಪೆಪ್ಸಿ, ಬರ್ಗರ್, ಪೀಟ್ಜಾಗಳಂತು ಭಾರತದ ಪಟ್ಟಣಗಳಲ್ಲಿ ಸರ್ವೇ ಸಾಮಾನ್ಯವಾಗಿವೆ. ಈ ದೇಶದ ಪೌರತ್ವ ತೆಗೆದುಕೊಂಡು, ಗಣನೀಯ ಕಾಲ ಈ ದೇಶದಲ್ಲಿ ಜೀವಿಸಿದ್ದರೂ, ಮೊದಲನೆ ತಲೆಮಾರಿನ ದೇಸಿಯ ಮನಸ್ಸಿನಲ್ಲಿ ತಾನು ಇನ್ನೂ ವಲಸೆಗಾರನೆಂಬುದೇ. ಇಂಥ ದೇಸಿಗಳಲ್ಲಿ ಕಾಣಬರುವ ಕೆಲ ಲಕ್ಷಣಗಳು- ಅಮೆರಿಕನ್ ಉಚ್ಚಾರಣೆಗೆ ಯತ್ನಿಸಿ ವಿಚಿತ್ರವಾದ ಧ್ವನಿಯಲ್ಲಿ ಮಾತನಾಡುವುದು, ಅಮೆರಿಕನ್ ರೀತಿ ಕಪ್ಪು ಕಾಫಿ ಕುಡಿಯಲು ಪ್ರಯತ್ನಿಸುವುದು, ಭಾರತದ ದಿನಸಿ ಅಂಗಡಿ ಮತ್ತು ಫಲಾಹಾರ ಮಂದಿರಗಳಿಗೆ ಭೇಟಿ ನೀಡುತ್ತಾ ಅಮೆರಿಕನ್ ರೀತಿ ತಿನ್ನಲು ಪ್ರಯತ್ನಿಸುವುದು, ಅಮೆರಿಕನ್ ರೀತಿ ರಜಾದಿನಗಳ ಏರ್ಪಾಡು ಮಾಡುವುದು ಆದರೆ ಮಾತ್ರ ಗುಂಪಿನಲ್ಲಿ ಹೋಗುವುದು, ಐವತ್ತು ಡಾಲರಿಗಿಂತ ಹೆಚ್ಚು ಖರ್ಚು ಮಾಡಬೇಕಾದರೆ ನೂರೆಂಟು ಸಾರಿ ಯೋಚಿಸುವುದು... ಹೀಗೆ ಹಲವಾರು.

ಕೆಲವರಿಗಂತೂ, ಅದರಲ್ಲೂ ಎಚ್ ವನ್ ವೀಸಾಗಳಲ್ಲಿ ನೇರವಾಗಿ ನೌಕರರಾಗಿ ಬಂದವರಿಗಂತೂ, ತಾವು ಬೇರೆ ದೇಶಕ್ಕೆ ಬಂದಿದ್ದೇವೆ, ಅದಕ್ಕೊಂದು ಬೇರೆ ಸಂಸ್ಕೃತಿ ಇದೆ ಎನ್ನುವುದರ ಅರಿವೇ ಇರುವುದಿಲ್ಲ. ವಿಲಕ್ಷಣತೆಯಲ್ಲಿ (Mannerism) ಬದಲಾಗದೆ, ಅದೇ ದೇಸಿ ಸಂಪ್ರದಾಯಗಳಿಗೆ ಅಂಟಿಕೊಂಡಿರುತ್ತಾರೆ. ಉದಾಹರಣೆಗೆ ಸಾರ್ವಜನಿಕವಾಗಿ ಜೋರಾಗಿ ತೇಗುವುದು, ಪರಿಮಳದ್ರವ್ಯವನ್ನು ಉಪಯೋಗಿಸದಿರುವುದು... ಹೀಗೆ ಹಲವಾರು ಸಂಗತಿಗಳನ್ನು ಕೇಳಿರುತ್ತೇವೆ.

ನನ್ನ ಅನಿಸಿಕೆ ಪ್ರಕಾರ, ನಾವು ಏನೇ ಅನುಕರಣೆ ಮಾಡಿದರೂ, ನಮ್ಮ ನಡತೆಯಿಂದ ನಮ್ಮನ್ನು ದೇಸಿ ಎಂತಲೇ ಗುರುತಿಸುತ್ತಾರೆ. ನಮ್ಮ ಮಾತನಾಡುವ ಶೈಲಿಯಲ್ಲಿ, ನಮ್ಮ ವಾಸನೆಯಲ್ಲಿ, ನಾವು ತಿನ್ನುವ ರೀತಿಯಲ್ಲಿ ಹಾಗೂ ನಮ್ಮ ಅನ್ಯರ ಜೊತೆಗಿನ ವ್ಯಾವಹಾರಿಕತೆಯಲ್ಲಿ ದೇಸಿ ಗುಣದ ಸ್ಪರ್ಶವಿರುತ್ತದೆ. ಹಾಗಾದರೆ ದೇಸಿಯಾಗಿರುವುದು ತಪ್ಪೇ? ಖಂಡಿತಾ ಇಲ್ಲ. ನಾವಿರುವುದೇ ಹೀಗೆ. ನಮ್ಮ ಸೃಷ್ಟಿಯೇ ಅದು, ನಮ್ಮ ಬಾಳ ರೀತಿಯೇ ಅದು. ನಾವೇನು ಅದನ್ನು ಕೀಳುಮಟ್ಟದಲ್ಲಿ ನೋಡಬೇಕಾಗಿಲ್ಲ, ನಮ್ಮಲ್ಲಿ ದೇಸಿ ಎಂಬುದರ ಬಗ್ಗೆ ಆತ್ಮಗೌರವವಿರಬೇಕು. ವಿಶ್ವದ ಯಾರಿಗೂ ಇಲ್ಲದ ಗುಣ ದೇಸಿಗಳಿಗಿದೆ, ಅದೇ ಕೋಮಲ ಚಿತ್ತ. ಕೆಲವರು ಇದನ್ನು ಗುರುತಿಸಿ ಮನ್ನಿಸುತ್ತಾರೆ. ಆದರೆ ಕೆಲವರು

ಅನ್ಯಥಾ ಪಾಶ್ಚಿಮಾತ್ಯಕ್ಕೆ ಮಾರು ಹೋಗಿ, ನಕಲಿಸಲು ಪ್ರಯತ್ನಿಸುತ್ತಾರೆ. ಕಡೆಗೆ ನಗೆಪಾಟಲಿಗೆ ಗುರಿಯಾಗುತ್ತಾರೆ.

ನಿಜವಾಗಲೂ ಪಾಶ್ಚಿಮಾತ್ಯರನ್ನು ಅನುಕರಿಸಬೇಕೆಂದರೆ, ಒಳ್ಳೆಯ ವಿಷಯಗಳಿಗೆ ಅನುಕರಿಸಿ. ನಮ್ಮಲ್ಲಿ ಎಷ್ಟು ದೇಸಿ ಪತಿ ಪತ್ನಿಯರು ಕೈಹಿಡಿದು ರಸ್ತೆಯಲ್ಲಿ ಓಡಾಡುತ್ತಾರೆ? ಎಷ್ಟು ದೇಸಿ ಪತಿ ಪತ್ನಿಯರು ಸಾರ್ವಜನಿಕವಾಗಿ ಅಪ್ಪಿಕೊಳ್ಳುತ್ತಾರೆ, ಎಷ್ಟು ಪತಿ ಪತ್ನಿಯರು ಮುಖಾ-ಮುಖಿ ಕೂತು ಮಾತನಾಡುತ್ತಾರೆ, ನಮ್ಮಲ್ಲಿ ಎಷ್ಟು ಜನ ಫೋನಿನಲ್ಲಿ ಮಾತನಾಡಿ ಫೋನ್ ಇಡುವಾಗ 'I love you honey' ಹೇಳುತ್ತೇವೆ? ನಮ್ಮಲ್ಲಿ ಎಷ್ಟು ಜನ ಮದುವೆಯ ಭಾವುಕ ಸಂಬಂಧವನ್ನು ಅರ್ಥಮಾಡಿಕೊಂಡು ಅರ್ಧಾಂಗಿಗೆ ಅವಕಾಶ ಕೊಡುತ್ತೇವೆ? ಮದುವೆ, ಅದರ ಭಾವುಕ ಸಂಬಂಧದ, ಪ್ರೇಮ, ಪ್ರೀತಿಯ ಬಗ್ಗೆ ವೇದ ಪುರಾಣಗಳಲ್ಲಿ ನಮ್ಮದೇ ಆದ ವ್ಯಾಖ್ಯಾನವಿದೆ. ಆದರೆ ಇದರ ಬಗ್ಗೆ ನಮಗೆ ಅಷ್ಟಾಗಿ ಪರಿಜ್ಞಾನವಿಲ್ಲ. ತಲೆಮಾರುಗಳಿಂದ ನಮಗೆ ಹೊಂದಿಕೊಳ್ಳುವಂತೆ ಸರಿಪಡಿಸಿಕೊಂಡಿದ್ದೇವೆ, ನಮ್ಮ ಪೂರ್ವಿಕರು ಹಾಕಿದ ಗೆರೆ ದಾಟದೇ, ಅವರು ಹೇಳಿದ್ದನ್ನು ಕಣ್ಮುಚ್ಚಿ ಅನುಸರಿಸಿ, ನಮ್ಮ ಸಾಂಪ್ರದಾಯಿಕ ಚಿಂತನಾ ಕ್ರಿಯೆಗೆ ಆದ್ಯತೆ ನೀಡುತ್ತೇವೆ. ನಮ್ಮಲ್ಲಿನ ಹುಟ್ಟುಗುಣ ಸ್ವಾತಂತ್ರ್ಯವನ್ನು ಅನುಭವಿಸಲು ಅಡ್ಡಿಬರುತ್ತದೆ, ಸ್ವತಂತ್ರ ಮನುಷ್ಯನಾಗಿ ವರ್ತಿಸಲೂ ಓಂಜರಿಯುತ್ತದೆ.

ನಿಮ್ಮ ಬಾಳರೀತಿಯನ್ನು ಪರಿಷ್ಕರಿಸಲು ಅವಕಾಶವಿದೆ. ನೀವಲ್ಲದೇ ಬೇರೆ ಯಾರೂ ನಿಮ್ಮ ಪರಿವರ್ತನೆಗೆ ನಿರ್ಬಂಧಿಸಲಾರರು. ಆದ್ದರಿಂದ ನಿಮ್ಮ ಮೂಲ ಹುಟ್ಟುಗುಣವನ್ನು ಯೋಗ್ಯ ಗುಣಗಳಿಗೆ ಬದಲಾಯಿಸಿಕೊಳ್ಳಿ, ಇನ್ನು ಮಿಕ್ಕೆಲ್ಲ ಪರಿವರ್ತನೆಗಳು ತನ್ನಷ್ಟಕ್ಕೆ ತಾನೇ ಹಿಂಬಾಲಿಸುತ್ತವೆ.

●

ಲಕ್ಕಿದ್ದರೆ ದಕ್ಕೀತು

-ಶ್ರೀಕಾಂತ ಬಾಬು

ನಮ್ಮ ಜೀವನದಲ್ಲಿ ಘಟಿಸುವ ಕೆಲವು ಘಟನೆಗಳಿಂದ ಅವು ಯಾಕೆ ನಡೆಯುತ್ತವೆ, ಹೇಗೆ ನಡೆಯುತ್ತವೆ ಎನ್ನುವ ಪ್ರಶ್ನೆಗಳು ನಮ್ಮನ್ನು ಸದಾ ಕಾಡುತ್ತವೆ. ವಿಜ್ಞಾನಿಗಳು ಇವನ್ನು ಆಕಸ್ಮಿಕವೆಂದು ಕರೆದರೆ ಆಸ್ತಿಕ ಮಹಾಶಯರು ಇವು (ದೇವರ) ವಿಧಿಯಾಟ, ಪೂರ್ವ ಜನ್ಮದ ಕರ್ಮಫಲ, ಗ್ರಹಚಾರ ಎನ್ನುತ್ತಾರೆ. ಎಲ್ಲಿಯವರೆಗೆ ವಿಜ್ಞಾನಿಗಳ ಮತ್ತು ದೇವರ ಮಿಲನವಾಗುವುದಿಲ್ಲವೋ ಅಲ್ಲಿಯವರೆಗೆ ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವಿರುವುದಿಲ್ಲ. ನಾನೀಗ ನನ್ನ ಜೀವನದಲ್ಲಿ ನಡೆದ ಒಂದು ಘಟನೆಯನ್ನು ನಿಮ್ಮ ಅವಗಾಹನೆಗೆ ತರಬಯಸುತ್ತೇನೆ.

*

ನನ್ನ ಹೆಸರು ಶ್ರೀಕಾಂತ ಬಾಬು ಮತ್ತು ನನ್ನ ಹೆಂಡತಿಯ ಹೆಸರು ಭಾನುಶ್ರೀ. ನಾವಿಬ್ಬರೇ ಇದರ ಪ್ರಮುಖ ಪಾತ್ರಧಾರಿಗಳು. ಈಗ ೧೦ ವರ್ಷಗಳ ಹಿಂದೆ ನಡೆದ ಒಂದು ಘಟನೆ. ಇಸವಿ ೨೦೦೦, ಜುಲೈ ತಿಂಗಳು.

ನಾವು ಅಮೆರಿಕಗೆ ಬಂದು ಆಗಲೇ ೧೦ ವರ್ಷಗಳಾಗಿತ್ತು.

ನಾವು ಹ್ಯೂಸ್ಟನ್‌ನಲ್ಲಿ ನಡೆಯಲಿರುವ ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ ಬಹಳ ಕೇಳುತ್ತಿದ್ದೆವು. ಇದುವರೆವಿಗೆ ನಾವು ಯಾವ ಸಮ್ಮೇಳನವನ್ನೂ ನೋಡಿರಲಿಲ್ಲ. ನಮ್ಮ ಅನುಭವವೆಲ್ಲಾ ಸ್ಥಳೀಯ ಕನ್ನಡ ಕೂಟಗಳಲ್ಲಾಗಿತ್ತು. ನಾವು ಮೊದಲೇ ಕನ್ನಡ ಭಾಷಾಭಿಮಾನಿಗಳು. ಅತಿಥಿಗಳ ಪಟ್ಟಿ, ಕಾರ್ಯಕ್ರಮಗಳ ವಿವರಗಳನ್ನು ನೋಡುತ್ತಿದ್ದಂತೆ ನಮ್ಮ ಕುತೂಹಲ ದಿನದಿನಕ್ಕೂ ಇಮ್ಮಡಿಸುತ್ತಿತ್ತು. ಕೊನೆಗೆ, ನಾವೂ ಸಮ್ಮೇಳನಕ್ಕೆ ಹೋಗುವುದೆಂದು ತೀರ್ಮಾನಿಸಿದೆವು. ಮಕ್ಕಳನ್ನು ನೋಡಿಕೊಳ್ಳಲು ಹೇಗೂ ಅಮ್ಮ, ಅಪ್ಪ ಇದ್ದರು. ಅಂತೂ ನಮ್ಮ ಹೆಸರುಗಳನ್ನು ಸಮ್ಮೇಳನಕ್ಕೆ ನೋಂದಾಯಿಸಿದೆವು. ನಂತರ ಏರ್-ಲೈನ್ಸ್, ಕಾರು ಮತ್ತು ಹೊಟೇಲ್‌ಗಳನ್ನೂ ರಿಸರ್ವ್ ಮಾಡಿದ್ದಾಯಿತು. ಅಲ್ಲಿಂದ ನಮಗೆ ದಿನಾಲು ಸಮ್ಮೇಳನದ ಸುದ್ದಿಗಳನ್ನು ಓದುವುದೇ ಆಗಿತ್ತು.

ಹೊರಡುವ ದಿನ ಹತ್ತಿರ ಬಂದಂತೆ ನಮ್ಮ ಪ್ಯಾಕಿಂಗ್ ಶುರುವಾಯಿತು. ಭಾನು ತನ್ನ ಬೆಲೆ ಬಾಳುವ ಸೀರೆಗಳನ್ನೂ, ವಜ್ರದ ನೆಕ್‌ಲೇಸ್, ಬಳೆ, ಉಂಗುರ, ಇತ್ಯಾದಿಗಳನ್ನು ತರಬೇಕೆಂದು ಇಷ್ಟಪಟ್ಟಳು. ಸಾವಿರಾರು ಜನ ಸೇರುವ ಈ ಅವಕಾಶವನ್ನು ಬಿಡಲಿಕ್ಕಾಗುತ್ತದೆಯೆ? ಸರಿ, ತೆಗೆದುಕೊಂಡು ಹೋಗುವುದೆಂದು ನಿರ್ಧರಿಸಿ ಎಲ್ಲವನ್ನೂ ಜೋಡಿಸಿ ಎತ್ತಿಟ್ಟುಕೊಂಡಾಯಿತು. ಮುಂದಿನ ಮುಖ್ಯ ಪ್ರಶ್ನೆ, ಎಲ್ಲವನ್ನೂ ಹೇಗೆ ಪ್ಯಾಕ್ ಮಾಡುವುದೆಂದು! ದೀರ್ಘವಾಗಿ ಆಲೋಚಿಸಿ, ಬೆಲೆ ಬಾಳುವ ಒಡವೆ, ವಸ್ತ್ರಗಳನ್ನು, ನಾವು ಚೆಕ್-ಇನ್ ಮಾಡುವ ಹಸಿರು ಸೂಟ್‌ಕೇಸ್‌ನಲ್ಲಿ ಇತರ ಬಟ್ಟೆಗಳ (ನನ್ನ?) ನಡುವೆ ಹುದುಗಿಸಿ ಪ್ಯಾಕ್ ಮಾಡಿಟ್ಟೆವು. ಟಾಯಲೆಟ್ರೀಸ್ ಮತ್ತು ಕೆಲವು ಸಣ್ಣ ಪುಟ್ಟ ಸಾಮಾನುಗಳನ್ನು ನಮ್ಮ ಕ್ಯಾರಿ-ಆನ್ ಬ್ಯಾಗ್‌ನಲ್ಲಿ ಇಟ್ಟುಕೊಂಡೆವು.

ಸೆಪ್ಟೆಂಬರ್ ೧, ೨೦೦೦ ಶುಕ್ರವಾರವಾಗಿತ್ತು. ಆ ದಿನ ವರಸಿದ್ಧಿ ವಿನಾಯಕನ ವ್ರತ. ನಮ್ಮ ಫ್ಲೈಟ್ ೮:೦೦ ಘಂಟೆಗೆ ಇತ್ತು. ಬೆಳಿಗ್ಗೆ ೪:೦೦ ಘಂಟೆಗೇ ಎದ್ದು ಸ್ನಾನ ಮತ್ತು ಗಣಪತಿ ಪೂಜೆಗಳನ್ನು ಮಾಡಿ ಪ್ರಸಾದ ತೆಗೆದುಕೊಂಡು ೬:೦೦ ಘಂಟೆಗೆ ಮನೆಯಿಂದ ಹೊರಟೆವು. ನಮ್ಮಣ್ಣ ಜಯಂತ ಬಾಬು ಏರ್‌ಪೋರ್ಟ್‌ಗೆ ನಮ್ಮನ್ನು ತಲುಪಿಸಿದರು. ಅಲ್ಲಿ ನಮ್ಮ ಸೂಟ್‌ಕೇಸನ್ನು ಚೆಕ್-ಇನ್ ಮಾಡಿ ಬೋರ್ಡಿಂಗ್ ಪಾಸ್ ತೆಗೆದುಕೊಂಡು ಹ್ಯೂಸ್ಟನ್ನಿಗೆ ಹೋಗುವ ವಿಮಾನವನ್ನೇರಿದೆವು. ಪ್ರಯಾಣ ಬಹಳ ಸುಖದಾಯಕವಾಗಿತ್ತು. ಒಂದು ಪುಟ್ಟ ನಿದ್ದೆಯೂ ಆಯಿತು. ೧೦:೩೦ಕ್ಕೆ ಹ್ಯೂಸ್ಟನ್ ತಲುಪಿದೆವು. ವಿಮಾನದಿಂದಿಳಿದು ನಮ್ಮ ಕ್ಯಾರಿ-ಆನ್ ಬ್ಯಾಗ್‌ನೊಂದಿಗೆ ಬ್ಯಾಗೇಜ್ ಕಲೆಕ್ಷನ್ ಏರಿಯಾಗೆ ಹೋಗಿ ನಮ್ಮ ಹಸಿರು ಸೂಟ್‌ಕೇಸನ್ನು ತೆಗೆದುಕೊಂಡು ಕಾರ್ ರೆಂಟಲ್‌ಗೆ ಹೋಗಿ ಕಾರನ್ನು ತೆಗೆದುಕೊಂಡು ನಮ್ಮ ಹೋಟೆಲ್ಲಿನ ಕಡೆಗೆ ಹೊರಟೆವು. ಏರ್‌ಪೋರ್ಟ್‌ನಿಂದ ಹೋಟೆಲ್‌ಗೆ ಸುಮಾರು ೪೫ ನಿಮಿಷಗಳ ಪ್ರಯಾಣ. ಹೋಟೆಲ್ಲಿಗೆ ಹೋಗಿ, ಬೀಗದ ಕೈ ತೆಗೆದುಕೊಂಡು ಸ್ಯಾಂಡ್‌ವಿಚ್ ತಿಂದು, ನಮ್ಮ ರೂಂಗೆ ಹೋದಾಗ

೨:೦೦ ಘಂಟೆ ಆಗಿತ್ತು. ಒಂದರ್ಧ ಘಂಟೆ ವಿಶ್ರಾಂತಿ ತೆಗೆದುಕೊಂಡು ರೆಡಿಯಾಗಲು ತೀರ್ಮಾನಿಸಿದೆವು.

ಸುಮಾರು ೨:೪೫ಕ್ಕೆ ನಾನು ಬಾತ್‌ರೂಮ್‌ನಲ್ಲಿದ್ದೆ. ಇದ್ದಕ್ಕಿದ್ದಂತೆ ಭಾನು ಕಿರುಚಿದ ಶಬ್ದ ಕೇಳಿಸಿತು. ತಕ್ಷಣ ಹೊರಗೆ ಬಂದು ನೋಡುತ್ತೇನೆ. ಭಾನು ಸೂಟ್‌ಕೇಸನ್ನು ನೋಡುತ್ತಿದ್ದಾಳೆ. ಏನಾಯಿತೆಂದು ಕೇಳಲು, ಅದು ನಮ್ಮ ಸೂಟ್‌ಕೇಸ್ ಅಲ್ಲವೆಂದೂ, ಬೇರೆ ಯಾರದ್ದೋ ಸೂಟ್‌ಕೇಸನ್ನು ನಮ್ಮದೆಂದು ಭಾವಿಸಿ ತಂದುಬಿಟ್ಟಿದ್ದೇವೆಂದು ಅರಿವಾಯಿತು. ಭಾನುಗೆ ಬಹಳ ದುಃಖವಾಗಿತ್ತು. ಬೆಲೆ ಬಾಳುವ ವಸ್ತುಗಳಿದ್ದ ನಮ್ಮ ಸೂಟ್‌ಕೇಸನ್ನು ಕಳೆದುಕೊಂಡಿದ್ದೆವು. ನಮಗೆ ಹಾಕಿಕೊಳ್ಳಲು ಬೇರೆ ಬಟ್ಟೆಗಳಿರಲಿಲ್ಲ. ನಾವು ತಪ್ಪಾಗಿ ತಂದಿದ್ದ ಸೂಟ್‌ಕೇಸಿನಲ್ಲಿ ಕೇವಲ ಒಂದೆರಡು ಜೊತೆ ಪ್ಯಾಂಟು, ಶರ್ಟ್‌ಗಳಿದ್ದವು. ನಮಗೆ ಯೋಚಿಸಲು ಹೆಚ್ಚು ಸಮಯವಿರಲಿಲ್ಲ. ಆ ಸೂಟ್‌ಕೇಸನ್ನು ತೆಗೆದುಕೊಂಡು ಮತ್ತೆ ಏರ್‌ಪೋರ್ಟಿಗೆ ಹೊರಟೆವು.

ಏರ್‌ಪೋರ್ಟ್‌ನಲ್ಲಿ ಸೀದಾ ಬ್ಯಾಗೇಜ್-ಕ್ಲೈಮ್ ಏರಿಯಾಗೆ ಹೋಗಿ ನಾವಿಬ್ಬರೂ ನಮ್ಮ ಸೂಟ್‌ಕೇಸನ್ನು ಮೈಯೆಲ್ಲಾ ಕಣ್ಣಾಗಿಸಿಕೊಂಡು ಹುಡುಕಲಾರಂಭಿಸಿದೆವು. ಅಲ್ಲಿ ಒಂದು ಗೋಡೆಯ ಪಕ್ಕ ನಿಲ್ಲಿಸಿದ್ದ ಒಂದು ಹಸಿರು ಸೂಟ್‌ಕೇಸ್ ಬಹಳ ದೂರದಿಂದಲೇ ನಮ್ಮ ಕಣ್ಣಿಗೆ ಕಾಣಿಸಿತು. ಹತ್ತಿರ ಹೋದಂತೆ ಅದು ನಮ್ಮದೇ ಎಂದು ಖಚಿತವಾಯಿತು. ನಮ್ಮ ಹೃದಯ ಢವ-ಢವ ಎನ್ನುತ್ತಿತ್ತು. ಹತ್ತಿರ ಹೋಗಿ ನೋಡಿದಾಗ ಅದು ನಮ್ಮದೇ ಆಗಿತ್ತು. ಅದನ್ನು ತೆಗೆದುಕೊಂಡು ಅದರ ಸ್ಥಳದಲ್ಲಿ ನಾವು ತೆಗೆದುಕೊಂಡು ಹೋಗಿದ್ದ ಸೂಟ್‌ಕೇಸನ್ನು ಇಟ್ಟೆವು. ನಮ್ಮ ಸೂಟ್‌ಕೇಸ್ ಸಿಕ್ಕ ಸಂತೋಷವಾಗಿದ್ದರೂ ಅದನ್ನು ಬಿಚ್ಚಿ ನೋಡಿದ ಹೊರತು ನಮಗೆ ಸಮಾಧಾನವಾಗುವ ಹಾಗೆ ಇರಲಿಲ್ಲ. ಕುತೂಹಲವನ್ನು ತಡೆಯಲಾರದಾಗಿ ಅಲ್ಲೇ ಪಕ್ಕಕ್ಕೆ ಹೋಗಿ ಸೂಟ್‌ಕೇಸನ್ನು ತೆಗೆದು ನೋಡಲಾಗಿ ಎಲ್ಲಾ ವಸ್ತುಗಳೂ ಭದ್ರವಾಗಿದ್ದವು. ಭಾನೂಗೆ ಸಂತೋಷದಿಂದ ಕಣ್ಣಲ್ಲಿ ನೀರು ಬರುವುದೊಂದೇ ಬಾಕಿ. ತನ್ನ ಸೂಟ್‌ಕೇಸ್ ಇಲ್ಲದಿದ್ದರೂ ತನ್ನದಲ್ಲವಾದ ನಮ್ಮ ಸೂಟ್‌ಕೇಸನ್ನು ತೆಗೆದುಕೊಳ್ಳದ ಆ ಅಪರಿಚಿತ ವ್ಯಕ್ತಿಯ ಬಗ್ಗೆ ನಮ್ಮ ಹೃದಯ ಕೃತಜ್ಞತೆಯಿಂದ ತುಂಬಿ ಬಂದಿತು. ಆಗ ನಮಗೆ ಆ ವ್ಯಕ್ತಿ 'ಶ್ರೀ ಸಿದ್ಧಿ ವಿನಾಯಕ'ನಾಗಿ ಕಂಡು ಬಂದ. ಆದಿನ ಬೆಳಿಗ್ಗೆ ಮಾಡಿದ ಪೂಜೆಯ ಫಲ ಎಂದು ಭಾವಿಸಿ ನಮ್ಮ ಅದೃಷ್ಟವನ್ನು ಹೊಗಳಿಕೊಳ್ಳುತ್ತಾ ಹೋಟೆಲ್ಲಿಗೆ ಮರಳಿದೆವು.

ಚೆನ್ನಾಗಿ ಡ್ರೆಸ್ ಮಾಡಿಕೊಂಡು ಸಮ್ಮೇಳನಕ್ಕೆ ಹೊರಟಾಗ ಆರು ಘಂಟೆಯಾಗಿತ್ತು. ನಮ್ಮ ಮನಸ್ಸಂತೂ ತುಂಬಾ ಉಲ್ಲಾಸಮಯವಾಗಿತ್ತು. ಆ ಸೂಟ್‌ಕೇಸ್ ಸಿಗದಿದ್ದಲ್ಲಿ ಆದಿನ ನಮ್ಮ ಮನಃಸ್ಥಿತಿ ಹೇಗಿರುತ್ತಿತ್ತೋ ಏನೋ, ದೇವರಿಗೇ ಗೊತ್ತು.

ಸಮ್ಮೇಳನದ ಕನ್ವೆನ್ಷನ್ ಹಾಲ್‌ಗೆ ಹೋದಾಗ ೬:೩೦ ಘಂಟೆಯಾಗಿತ್ತು. ಅದರ ಭವ್ಯತೆಯನ್ನೂ ಮತ್ತು ಅಲ್ಲಿನ ವ್ಯವಸ್ಥೆಗಳನ್ನೂ ನೋಡಿ ನಮಗೆ ದಂಗಾಯಿತು. ಡಾ.

ಯು.ಆರ್. ಅನಂತಮೂರ್ತಿ, ಡಾ. ಗಿರೀಶ್ ಕಾರ್ನಾಡ್ ಅವರನ್ನು ನೋಡಿ ಮತ್ತು ಅವರೊಡನೆ ಮಾತನಾಡಿ ತುಂಬಾ ಖುಷಿಯಾಯಿತು.

ಸಮ್ಮೇಳನದ ಮೊದಲನೆಯ ದಿನದ ಕಾರ್ಯಕ್ರಮಗಳು ತುಂಬಾ ಚೆನ್ನಾಗಿದ್ದವು. ಕಾರ್ಯಕ್ರಮಗಳ ಗುಣಮಟ್ಟ, ಊಟೋಪಚಾರಗಳ ವ್ಯವಸ್ಥೆಗಳು ಅತ್ಯುತ್ತಮ ಮಟ್ಟದ್ದಾಗಿದ್ದವು. ನಮಗೆ ತುಂಬಾ ಹಿಡಿಸಿದ ಒಂದು ಅಂಶವೆಂದರೆ ಟೈಮ್ ಮ್ಯಾನೇಜ್‌ಮೆಂಟ್! ಕನ್ನಡಿಗರಿಗೆ ಇದು ಅಸಾಧ್ಯವಾದ ಮಾತು ಎಂದೇ ಭಾವಿಸಿದ್ದ ನಮಗೆ, ನಮ್ಮ ಕಲ್ಪನೆ ಸುಳ್ಳು ಎಂದು ಮನದಟ್ಟಾಯಿತು. ಒಟ್ಟಾರೆ, ನಮಗಂತೂ ತುಂಬಾ ಹರ್ಷವಾಗಿತ್ತು. ದಿನದ ಆಯಾಸವನ್ನೆಲ್ಲಾ ಮರೆತು ಹೋಟೆಲ್ಲಿಗೆ ರಾತ್ರಿ ಮರಳಿದೆವು. ಆ ದಿನ ಮಧ್ಯಾಹ್ನದ ಲಗ್ಗೇಜ್ ಗಲಾಟೆಯೆಲ್ಲಾ ಮರೆತುಹೊಗಿತ್ತು. ಮಲಗಿದಾಗ ೧ ಘಂಟೆಯ ಮೇಲಾಗಿತ್ತು.

ಮುಂದಿನ ಎರಡು ದಿನಗಳ ಕಾರ್ಯಕ್ರಮಗಳೂ ಮತ್ತು ಊಟ-ತಿಂಡಿಗಳೂ ಅದ್ಭುತವಾಗಿದ್ದವು. ನಮಗೆ ಅಮೆರಿಕದಲ್ಲಿದ್ದೀವಿ ಅಂತ ಅನ್ನಿಸಲೇ ಇಲ್ಲ. ಎಲ್ಲೆಲ್ಲೂ ಕನ್ನಡ, ನಮ್ಮ ಜನ, ನಮ್ಮ ಭಾಷೆ, ನಮ್ಮ ಊಟ, ನಮ್ಮ ಹಾಡು, ನಾಟಕ ಇತ್ಯಾದಿಗಳು ನಮ್ಮನ್ನು ಬೇರೇ ಲೋಕಕ್ಕೆ ಕರೆದೊಯ್ದಿದ್ದವು.

ಎರಡೂವರೆ ದಿನಗಳು ಎರಡು ಕ್ಷಣಗಳಂತೆ ಕಳೆದುಹೋಗಿದ್ದವು. ಮುಂದೆಲ್ಲಾ ಬರೀ ನೆನಪುಗಳು ಅಷ್ಟೇ. ಸಮ್ಮೇಳನಕ್ಕೆ ಬಂದು ತುಂಬಾ ಒಳ್ಳೆಯ ಕೆಲಸ ಮಾಡಿದೆವೆಂದು ನಮ್ಮ ಬೆನ್ನನ್ನು ನಾವೇ ಚಪ್ಪರಿಸಿಕೊಂಡೆವು.

ಮಾರನೆಯ ದಿನ, ಸೆಪ್ಟೆಂಬರ್ ೫, ಸೋಮವಾರ ಬೆಳಿಗ್ಗೆ ನಾವು ಎದ್ದಾಗ ನಮಗೆ ನಮ್ಮೂರಿಗೆ ಹೋಗಿ ಮತ್ತೆ ಮರಳಿದಂತೆ ಅನ್ನಿಸುತ್ತಿತ್ತು. ಮನಸ್ಸೆಲ್ಲಾ ಸವಿ ನೆನಪುಗಳಿಂದ ಉಲ್ಲಾಸಮಯವಾಗಿತ್ತು. ನಮ್ಮ ಫ್ಲೈಟ್ ಮಧ್ಯಾಹ್ನ ಇತ್ತು. ಕೆಟ್ಟ ಮೇಲೆ ಬುದ್ಧಿ ಬಂತು ಎನ್ನುವಂತೆ ಮೊದಲನೆಯ ದಿನದ ಅನುಭವದಿಂದ ನಾವು ಪಾಠ ಕಲಿತು ಈ ಬಾರಿ ಬೆಲೆ ಬಾಳುವ ಸಾಮಾನುಗಳನ್ನು ನಮ್ಮ ಕ್ಯಾರಿ-ಆನ್ ಬ್ಯಾಗ್‌ನಲ್ಲೇ ಇಟ್ಟುಕೊಳ್ಳುವುದೆಂದು ತೀರ್ಮಾನಿಸಿದೆವು. ನನ್ನ ಪತ್ನಿಯ ಬೆಲೆ ಬಾಳುವ ಸೀರೆಗಳೂ ಒಡವೆಗಳೂ ನಮ್ಮ ಕೈಚೀಲದಲ್ಲೇ ಉಳಿದವು. ಬಾಕಿ ವಸ್ತುಗಳನ್ನೆಲ್ಲಾ ಚೆಕ್-ಇನ್ ಮಾಡುವ ಹಸಿರು ಸೂಟ್‌ಕೇಸ್‌ನಲ್ಲಿ ತುಂಬಿದೆವು.

ಹೋಟೆಲ್‌ನಿಂದ ಚೆಕ್-ಔಟ್ ಮಾಡಿ ಮತ್ತೆ ಕನ್ವೆನ್ಷನ್ ಹಾಲ್‌ನ ಹತ್ತಿರ ಹೋಗಿ ಮೂರು ದಿನಗಳ ಅನುಭವವನ್ನು ಮತ್ತೊಮ್ಮೆ ನೆನಪಿಸಿಕೊಂಡು ಭಾರವಾದ ಹೃದಯದಿಂದ ಏರ್‌ಪೋರ್ಟ್‌ನ್ನು ತಲುಪಿದೆವು. ಈ ಬಾರಿ ನಮ್ಮ ಫ್ಲೈಟ್ ಇಂಡಿಯಾನಪೋಲಿಸ್ ಮಾರ್ಗವಾಗಿ ನ್ಯೂಯಾರ್ಕ್‌ಗೆ ಹೋಗುವುದಿತ್ತು. ಇಂಡಿಯಾನಪೊಲಿಸ್‌ನಲ್ಲಿ ಕೇವಲ ೧೫ ನಿಮಿಷಗಳ ಸ್ಟಾಪ್-ಓವರ್ ಇತ್ತು. ಹಾಗಾಗಿ ನಾವು ಹಾಯಾಗಿ ನಮ್ಮ ಸೀಟಿನಲ್ಲಿ ಕುಳಿತೆವು. ಟೈಮಿಗೆ ಸರಿಯಾಗಿ ನಮ್ಮ ವಿಮಾನ ಹ್ಯೂಸ್ಟನ್‌ಸಿಂದ ಹೊರಟಿತು.

ನಾವು ಇಂಡಿಯಾನಪೋಲಿಸ್ ತಲುಪಿದಾಗ ೭:೩೦ ಘಂಟೆಯಾಗಿತ್ತು. ನಮ್ಮ ಫ್ಲೈಟ್ ಅಲ್ಲಿ ನಿಂತಾಗ ಕ್ಯಾಪ್ಟನ್ನಿನ ಅನೌನ್ಸ್‌ಮೆಂಟ್ ಕೇಳಿಬಂತು. ನ್ಯೂಜೆರ್ಸಿಯಲ್ಲಿ ಹವಾಮಾನ ಪ್ರತಿಕೂಲವಾಗಿದ್ದ ಕಾರಣ ನಾವು ಅಲ್ಲೇ ಇನ್ನೂ ಕೆಲ ಕಾಲ ಇರಬೇಕಾಗಬಹುದೆಂದು ಹೇಳಿದನು. ಪ್ರಯಾಣಿಕರು ಅಪೇಕ್ಷೆಪಟ್ಟಲ್ಲಿ ಅಲ್ಲಿಯ ಏರ್‌ಪೋರ್ಟಿನಲ್ಲಿ ಇಳಿದುಕೊಂಡು ಕಾಲಾಡಿಸಬಹುದೆಂದೂ. ಅಲ್ಲಿಂದ ಹೊರಡಲು ಕ್ಲಿಯರೆನ್ಸ್ ಸಿಕ್ಕ ತಕ್ಷಣ ಹೊರಡಬೇಕಾದುದರಿಂದ ಆದಷ್ಟೂ ಫ್ಲೈಟ್‌ನ ಹತ್ತಿರವೇ ಇರಬೇಕೆಂದು ಕೇಳಿಕೊಂಡನು.

ವಿಮಾನದಲ್ಲಿದ್ದ ಬಹಳ ಪ್ರಯಾಣಿಕರು ಕೆಳಗೆ ಇಳಿಯಲು ಇಷ್ಟಪಡಲಿಲ್ಲ. ನಾನು ಮತ್ತು ನನ್ನ ಪತ್ನಿ ಭಾನು ಸ್ವಲ್ಪ ಕಾಲ ಹೊರಗೆ ಹೋಗಿ ಬರಲು ತೀರ್ಮಾನಿಸಿದೆವು. ನಮ್ಮ ಕ್ಯಾರಿ-ಆನ್ ಬ್ಯಾಗನ್ನು ಫ್ಲೈಟ್‌ನಲ್ಲೇ ಬಿಟ್ಟು ಹಾಗೆಯೇ ಆರಾಮಾಗಿ ಸುತ್ತಾಡಿಕೊಂಡು ಬರಲು ಕೆಳಗಿಳಿದು ಬಂದೆವು. ನಮ್ಮ ವಿಮಾನದ ಹತ್ತಿರವೇ ಓಡಾಡಿಕೊಂಡಿದ್ದೆವು. ಸುಮಾರು ೩೦ ನಿಮಿಷಗಳಾದರೂ ಅಲ್ಲಿಂದ ಹೊರಡುವ ಬಗ್ಗೆ ಯಾವುದೇ ಅನೌನ್ಸ್‌ಮೆಂಟ್ ಬರಲಿಲ್ಲ. ಘಂಟೆ ಎಂಟಾಗಿತ್ತು ನಮ್ಮ ಹೊಟ್ಟೆ ತಾಳಹಾಕುತ್ತಿತ್ತು. ಪಕ್ಕದಲ್ಲೇ ಒಂದು ಮೆಕ್ಸಿಕನ್ ರೆಸ್ಟೋರೆಂಟ್ ಕಾಣಿಸಿತು. ಅನೌನ್ಸ್‌ಮೆಂಟ್‌ನಲ್ಲೇ ನಮ್ಮ ಕಿವಿಯನ್ನಿಟ್ಟುಕೊಡು ಬೇಗ ಆ ಮೆಕ್ಸಿಕನ್ ರೆಸ್ಟೋರೆಂಟ್‌ನಲ್ಲಿ ಊಟ ಮಾಡಿ ಬರುವುದೆಂದು ನಿರ್ಧರಿಸಿ ಧೈರ್ಯ ಮಾಡಿ ಹೊರಟೇಬಿಟ್ಟೆವು.

ರೆಸ್ಟೋರೆಂಟ್‌ನಲ್ಲಿ ಬೇಗ ಬೇಗ ಊಟ ಮಾಡಿ ನಮ್ಮ ಗೇಟ್‌ಗೆ ಬಂದು ನೋಡುತ್ತೇವೆ, ನಮ್ಮ ಫ್ಲೈಟ್ ನಾಪತ್ತೆ! ಅಲ್ಲಿರುವವರನ್ನು ವಿಚಾರಿಸಿದಾಗ ತಿಳಿಯಿತು ಸುಮಾರು ೧೦ ನಿಮಿಷಗಳ ಮುಂಚೆ ನಮ್ಮ ವಿಮಾನ ಅಲ್ಲಿಂದ ಹೊರಟುಹೋಗಿದೆಯೆಂದು. ಹೊರಡುವ ಮುಂಚೆ ಅನೌನ್ಸ್ ಮಾಡಿ ನಮ್ಮನ್ನು ಕೂಗಿದರೆಂದು ಹೇಳಿದರು. ನಮಗೆ ಅದು ಕೇಳಿಸಲೇ ಇಲ್ಲ.

ಸರಿ, ನಮ್ಮ ಪರದಾಟ ಮತ್ತೆ ಶುರುವಾಯಿತು. ನಮ್ಮ ಕ್ಯಾರಿ-ಆನ್ ಬ್ಯಾಗ್‌ನ ಯೋಚನೆ ಬಂದು ಇನ್ನೂ ಗಾಬರಿ ಆಯಿತು. ಅದಕ್ಕೆ ಲಾಕ್ ಮಾಡಿರಲಿಲ್ಲ. ತೆಗೆದರೆ ಎಲ್ಲವೂ ಮೇಲಿನಿಂದ ಕಾಣುವಂತೇ ಇತ್ತು. ನಮ್ಮ ಕೈಯಲ್ಲಿ ಈಗ ಏನೂ ಇರಲಿಲ್ಲ. ಎಲ್ಲಾ ಖಾಲಿ! ಈಗಾಗಲೇ ಹ್ಯೂಸ್ಟನ್ ತಲುಪಿದಾಗ ನಮ್ಮ ಅದೃಷ್ಟ ಪರೀಕ್ಷೆ ಆಗಿತ್ತು. ದೇವರದಯದಿಂದ ಅದರಲ್ಲಿ ತೇರ್ಗಡೆಯಾಗಿದ್ದೆವು. ಈಗ ಮತ್ತೆ ನಮ್ಮ ಮೂರ್ಖತನದಿಂದ ಎಲ್ಲವನ್ನೂ ಕಳೆದುಕೊಂಡು ಮೈ ಪರಚಿಕೊಳ್ಳುವಂತೆ ಆಗಿತ್ತು.

ಮುಂದಿನ ಫ್ಲೈಟ್ ಬಗ್ಗೆ ವಿಚಾರಿಸಿದಾಗ, ಆ ರಾತ್ರಿ ನ್ಯೂಜೆರ್ಸಿಗೆ ಇನ್ಯಾವುದೂ ಫ್ಲೈಟ್ ಇಲ್ಲವೆಂದು ತಿಳಿಯಿತು. ಮಾರನೆಯ ದಿನ ಬೆಳಿಗ್ಗೆ ೭:೪೫ಕ್ಕೆ ನ್ಯೂಯಾರ್ಕ್‌ಗೆ ಮೊದಲ ಫ್ಲೈಟ್ ಇದೆಯೆಂದು ತಿಳಿಯಿತು. ಅದರಲ್ಲಿ ಹೊರಡುವುದೆಂದು ನಿರ್ಧರಿಸಿ, ಆ ರಾತ್ರಿಗೆ ಮಲಗಲು ಏರ್‌ಪೋರ್ಟ್ ಪಕ್ಕದಲ್ಲೇ ಇದ್ದ ಡೇಸ್-ಇನ್ ಹೋಟೆಲ್‌ಗೆ ತೆರಳಿದೆವು.

ಅಲ್ಲಿಯೇ ಇದ್ದ ಗಿಫ್ಟ್ ಶಾಪ್‌ನಲ್ಲಿ ಅವಶ್ಯವಾದ ಸಾಮಗ್ರಿಗಳನ್ನು ಖರೀದಿಸಿ ನಮ್ಮ ರೂಮಿಗೆ ಬಂದೆವು. ರಾತ್ರಿಯೆಲ್ಲಾ ನಮ್ಮ ಲಗ್ಗೇಜ್‌ದೇ ಯೋಚನೆ. ಮಾರನೆಯ ದಿನ ನನ್ನ ಕೆಲಸಕ್ಕೂ ಲೇಟ್ ಆಗುವ ಸಂಭವವಿತ್ತು. ಈ ಎಲ್ಲಾ ಚಿಂತೆಗಳಿಂದ ರಾತ್ರಿ ಬಹಳ ಹೊತ್ತಿನವರೆಗೂ ಹೊರಳಾಡುತ್ತಿದ್ದೆವು. ನಿದ್ದೆ ಬಂದಾಗ ರಾತ್ರಿ ೨.೦೦ ಘಂಟೆ ದಾಟಿತ್ತು. ಮತ್ತೆ ೫.೦೦ ಘಂಟೆಗೆಲ್ಲಾ ಎದ್ದು ಸ್ನಾನ ಮಾಡಿ, ರೆಡಿ ಆಗಿ ಏರ್‌ಪೋರ್ಟ್‌ಗೆ ದೌಡಾಯಿಸಿದೆವು. ೭:೪೫ರ ಫ್ಲೈಟ್‌ಗೆ ಚೆಕ್-ಇನ್ ಮಾಡಿ ಕುಳಿತುಕೊಂಡೆವು.

ದೈವವಶಾತ್ ಯಾವ ತೊಂದರೆಯೂ ಇಲ್ಲದೆ ೯:೧೫ಕ್ಕೆಲ್ಲಾ ನ್ಯೂಯಾರ್ಕ್‌ಗೆ ಬಂದಿಳಿದೆವು. ವಿಮಾನದಿಂದ ಇಳಿದವರೇ ಸೀದಾ ಬ್ಯಾಗೇಜ್ ಕಲೆಕ್ಷನ್‌ಗೆ ಹೋಗಿ ನಮ್ಮ ಸಾಮಾನುಗಳನ್ನು ಹುಡುಕಲಾರಂಭಿಸಿದೆವು. ನಾವು ಹ್ಯೂಸ್ಟನ್ನಿನಲ್ಲಿ ಚೆಕ್-ಇನ್ ಮಾಡಿದ್ದ ನಮ್ಮ ಹಸಿರು ಸೂಟ್‌ಕೇಸ್ ನಮಗೆ ಸಿಕ್ಕಿತು. ಆದರೆ, ಹಿಂದಿನ ದಿನ ನಮ್ಮ ಜೊತೆಯಲ್ಲಿದ್ದ ಬೆಲೆ ಬಾಳುವ ಸಾಮಾನುಗಳಿದ್ದ ಕ್ಯಾರಿ-ಆನ್ ಬ್ಯಾಗ್ ಮಾತ್ರ ನಾಪತ್ತೆಯಾಗಿತ್ತು. ಸರಿ, ಲಾಸ್ಟ್ ಅಂಡ್ ಫೌಂಡ್ ಸೆಕ್ಷನ್‌ಗೆ ಹೋಗಿ ಕಂಪ್ಲೆಂಟ್ ಮಾಡಿದೆವು. ಅವರು, ಆ ಫ್ಲೈಟ್ ಈಗ ಇನ್ನೆಲ್ಲೋ ಇದೆ. ನಮ್ಮ ಸಾಮಾನನ್ನು ಹುಡುಕಿ, ಸಿಕ್ಕರೆ ಮನೆಗೆ ಕಳುಹಿಸಿಕೊಡುವುದಾಗಿ ಹೇಳಿದರು. ಅದಕ್ಕೆ ಸುಮಾರು ಎರಡು-ಮೂರು ದಿನಗಳಾಗಬಹುದೆಂದು ತಿಳಿಸಿದರು. ನಾವು ಇನ್ನೇನನ್ನು ಹೇಳುವ ಅಥವಾ ಮಾಡುವ ಸ್ಥಿತಿಯಲ್ಲಿರಲಿಲ್ಲ. ಕೇವಲ ನಮ್ಮ ಸೂಟ್‌ಕೇಸ್ ನೊಂದಿಗೆ ಮನೆಗೆ ಮರಳಿ ಬಂದೆವು. ಈ ಬಾರಿಯೂ ನಾವು ಬೆಲೆ ಬಾಳುವ ವಸ್ತುಗಳನ್ನು ಸೂಟ್‌ಕೇಸಿನಲ್ಲಿ ಹಾಕಿರಬೇಕಿತ್ತೆಂದು ಅದೆಷ್ಟು ಸಾರಿ ಹೇಳಿಕೊಂಡು ಪೇಚಾಡಿದೆವೋ ದೇವರೇ ಬಲ್ಲ. ಮತ್ತೆ ಮನಸ್ಸೆಲ್ಲಾ ಬೇಜಾರಾಗಿತ್ತು.

ನಮಗೆ ಈ ಚಿಂತೆಯಲ್ಲಿ ಸಮ್ಮೇಳನದ ಆನಂದವೆಲ್ಲಾ ಮರೆತಂತಾಗಿತ್ತು. ಇಲ್ಲಿ ನಮ್ಮ ಸ್ನೇಹಿತರಿಗೆಲ್ಲಾ ನಮ್ಮ ಸಮ್ಮೇಳನದ ಅನುಭವಕ್ಕಿಂತಾ ನಮ್ಮ ಪ್ರವಾಸ ಕಥನವೇ ತುಂಬಾ ಆಸಕ್ತಿಕರ ವಿಷಯವಾಗಿತ್ತು. ನಮ್ಮ ಇಂಡಿಯಾನಪೊಲಿಸ್‌ನ ಕಥೆಯನ್ನು ಮತ್ತೆ ಮತ್ತೆ ಕೇಳಿ ಮೇಲೆ ಅನುತಾಪ ತೋರಿಸುತ್ತಾ ಒಳಗೊಳಗೇ ನಮ್ಮ ಮೂರ್ಖತನದ ಬಗ್ಗೆ ನಗುತ್ತಿದ್ದರು. ನಂತರದ ಎರಡು-ಮೂರು ದಿನಗಳನ್ನು ಕಳೆಯುವುದು ತುಂಬಾ ಕಷ್ಟಕರವಾಗಿತ್ತು. ಏರ್‌ಲೈನ್ಸ್‌ನಿಂದ ಯಾವುದೇ ಸುದ್ದಿ ಸಮಾಚಾರಗಳಿರಲಿಲ್ಲ. ಒಂದೊಂದು ದಿನ ಕಳೆದಂತೆ, ನಮ್ಮ ಆಸೆಯೂ ಕ್ಷೀಣಿಸುತ್ತಾ ಬಂತು.

ಅಂದು ಶುಕ್ರವಾರ. ನಾವು ಹ್ಯೂಸ್ಟನ್ನಿಂದ ಬಂದು ಆಗಲೇ ಮೂರು ದಿನಗಳಾಗಿಹೋಗಿತ್ತು. ಬೆಳಿಗ್ಗೆ ೫:೩೦ಕ್ಕೆ ನಾನು ಕೆಲಸಕ್ಕೆ ಹೊರಡಲು ಮುಂದಿನ ಬಾಗಿಲು ತೆಗೆದಾಗ, ಬಾಗಿಲಿನ ಮಗ್ಗುಲಲ್ಲಿ ನಮ್ಮ ಕ್ಯಾರಿ-ಆನ್ ಬ್ಯಾಗ್ ಇಟ್ಟಿರುವುದು ಕಾಣಿಸಿತು. ಬಹುಶಃ ಏರ್‌ಲೈನ್ಸ್‌ನವರು ರಾತ್ರಿ ಬಂದು ಬೆಲ್ ಮಾಡಿ ಇಟ್ಟು ಹೋಗಿರಬೇಕೆನಿಸುತ್ತದೆ. ರಾತ್ರಿಯೆಲ್ಲಾ ಹೊರಗೇ ಇದ್ದಿರಬೇಕು. ತಣ್ಣಗೆ ಕೊರೆಯುತ್ತಿತ್ತು. 'ಭಾನೂ, ಬೇಗ ಬಾ, ನೋಡು ಇಲ್ಲಿ ಏನಿದೆ ಅಂತ'

ಹೂಗಿದೆ. ನಮಗೆ ಅದನ್ನು ನೋಡಿ ಸಂತೋಷ ಮತ್ತು ಕಳವಳ ಏಕಕಾಲದಲ್ಲಿ ಆಯಿತು. ಬ್ಯಾಗ್ ನೋಡಿ ಸಂತೋಷವಾದರೆ, ಅದರಲ್ಲಿ ನಮ್ಮ ವಸ್ತುಗಳಿಲ್ಲದೇ ಹೋದರೆ ಎನ್ನುವ ಕಳವಳ!

ಬ್ಯಾಗನ್ನು ಮನೆ ಒಳಗೆ ತಂದು ಉಸಿರು ಬಿಗಿ ಹಿಡಿದು ಬಿಚ್ಚಿ ನೋಡಿದೆವು. ಅದರಲ್ಲಿ ನಾವಿಟ್ಟಿದ್ದ ಪ್ರತಿಯೊಂದು ವಸ್ತುವೂ ಜೋಪಾನವಾಗಿ ಹಾಗೇ ಇದ್ದವು! ನಮ್ಮ ಸಂತೋಷಕ್ಕಂತೂ ಪಾರವೇ ಇರಲಿಲ್ಲ. ಎರಡು ಬಾರಿ ನಮ್ಮ ಕೈತಪ್ಪಿ ಹೋದ ವಸ್ತುಗಳು ಜೋಪಾನವಾಗಿ ನಮ್ಮ ಕೈ ಸೇರಿದ್ದು ಎರಡು ಬಾರಿ ಸತತವಾಗಿ ಲಾಟರಿ ಹೊಡೆದಂತಿತ್ತು.

ಈಗ ೧೦ ವರ್ಷಗಳ ನಂತರ ಈ ಘಟನೆಯನ್ನು ನೆನಪಿಸಿಕೊಂಡರೆ, ಈಗಲೂ ಆಶ್ಚರ್ಯವಾಗುತ್ತದೆ. 'ಹೀಗೂ ಆಯಿತೆ?' ಅನಿಸುತ್ತದೆ. ಸೆಪ್ಟೆಂಬರ್ ೧೧, ೨೦೦೧ರ ಘಟನೆಯ ನಂತರ ಅಮೆರಿಕದಲ್ಲಿ ವಿಮಾನ ಪ್ರವಾಸದ ಸ್ವಾರಸ್ಯಕರ ಅನುಭವಗಳಿಗೆ ಹೊಸ ಹೊಸ ರೀತಿಯ ಸೆಕ್ಯೂರಿಟಿ ಸಿಸ್ಟಮ್‌ಗಳಿಂದ ತಣ್ಣೀರೆರಚಿದಂತೆ ಆಗಿದೆ. ಈಗಿನ ವಿಮಾನ ಪ್ರಯಾಣದಲ್ಲಿ ತುಂಬಾ ಪ್ಲಾನಿಂಗ್ ಮತ್ತು ಜಾಗರೂಕತೆ ಇರುವುದರಿಂದ ಅನಿರೀಕ್ಷಿತದ ಅವಕಾಶಗಳು ತುಂಬಾ ಕಡಿಮೆಯಾಗಿ ಅಷ್ಟು ಮಜಾ ಅನ್ನಿಸುವುದಿಲ್ಲ.

ಇದು ಆಕಸ್ಮಿಕವೇ? ವಿಧಿಯಾಟವೇ? ನೀವೇನಂತೀರಿ?

●

ಮನುಜ-ಗುಣಾವಗುಣಗಳ ಕಣಜ

-ಶ್ರೀನಾಥ್ ಭಲ್ಲೆ

ನನಗೆ ಹಲವಾರು ವಿಷಯಗಳು ಪ್ರಿಯವಾಗುತ್ತವೆ. ಅಂತಹವುಗಳಲ್ಲಿ ಜನರ ಗುಣ ಹಾಗೂ ನಡವಳಿಕೆಯನ್ನು ಸೂಕ್ಷ್ಮವಾಗಿ ಗಮನಿಸುವುದೂ ಒಂದು.

ಜನ ಸೇರಿರೋ ಕಡೆ- ಉದಾಹರಣೆಗೆ ಪಾರ್ಟಿ ನಡೆವ ಸ್ಥಳ, ಏರ್‌ಪೋರ್ಟ್, ಹೀಗೇ ಎಂದಿಟ್ಟುಕೊಂಡರೆ-ಹಾಗೇ ಸುಮ್ಮನೆ ಜನರ ಕಡೆ ಕಣ್ಣಾಡಿಸುತ್ತ ಅವರ ನಡವಳಿಕೆಯನ್ನು ಗಮನಿಸುತ್ತ ಇದ್ದಲ್ಲಿ ಅಥವಾ ಅಲ್ಲಿ ನಡೆವ ವಿಷಯಗಳನ್ನು ಸೂಕ್ಷ್ಮವಾಗಿ ಕೇಳಿಸಿಕೊಳ್ಳುತ್ತಿದ್ದಲ್ಲಿ ಎಷ್ಟೋ ವಿಷಯಗಳನ್ನು ಅರಿಯಬಹುದು. ಹತ್ತು ಜನ ಸೇರಿರೋ ಕಡೆ ಸುಮ್ಮನೆ ಅವರ ಮಾತನ್ನು ಆಲಿಸಿದರೆ ಸಾಕು ಒಂದು ಕಾದಂಬರಿಗೆ ಆಗುವಷ್ಟು ಕಥಾವಸ್ತು ಸಿಗುತ್ತದೆ.

ಅದು ಮೊದಲ ಕೆಲಸಕ್ಕೆ ಸೇರಿದ ಸಮಯ. ವೃತ್ತಿ ಜೀವನದ ಆರಂಭ ಕರ್ನಾಟಕ ಸರ್ಕಾರದ ಒಂದು 'ಪ್ರಾಜೆಕ್ಟ್'ನಿಂದ ಶುರುವಾಯ್ತು. ಹುಡುಗಾಟಿಕೆಯ ಓದಿನ ದಿನಗಳಿಂದ ಅನಾಮತ್ತಾಗಿ ರಾಜಕೀಯ ಕೂಪಕ್ಕೆ ಬಿದ್ದಿದ್ದೆ.

ಮೊದಲು ಹಾಸ್ಯದಿಂದ ಶುರು ಮಾಡೋಣ. ಕೆಲಸಕ್ಕೆ ಸೇರಿದ ಕೆಲವೇ ದಿನಗಳಲ್ಲಿ ಒಬ್ಬರ ಪರಿಚಯವಾಯ್ತು. ಕಾಫಿಗೆ ಹೋಗೋಣ ಬನ್ನಿ ಅಂದರು. ಸುಮಾರು ಹತ್ತು ಘಂಟೆ. ಆಯ್ತು ಪಕ್ಕದಲ್ಲೇ ತಾನೇ ಅಂತ ಅವರೊಂದಿಗೆ ಹೊರಟೆ. ಅರ್ಧ ಕಿಲೋಮೀಟರ್ ಆಚೆ ಇರೋ ದರ್ಶಿನಿಗೆ ಕರೆದುಕೊಂಡು ಹೋಗೋದೇ? ಆಮೇಲೆ ಕಾಫಿ ಮುಗಿಸಿ ಅಲ್ಲೇ ಸಿಕ್ಕ ಇನ್ಯಾರೊಂದಿಗೋ ಹರಟುತ್ತಾ ನಿಂತರು. ನನಗೋ ಭಯಂಕರ ಕಸಿವಿಸಿ. ಕೆಲಸದ ವೇಳೆಯಲ್ಲಿ ಯಾರಾದರೂ ನೋಡಿ ಏನಾದರೂ ಅಂದರೆ ಅಂತ! ಅಂತೂ ಇಂತೂ ಹೊರಟೆವು. ದಾರಿಯಲ್ಲಿ ವಾಪಸ್ಸು ಬರುತ್ತ ನಮ್ಮ 'ಡಿಪಾರ್ಟ್ಮೆಂಟ್ ಹೆಡ್'ನನ್ನು ಬೈದುಕೊಳ್ಳುತ್ತ ಬರುತ್ತಿದ್ದರು. ಏನಂತ ಗೊತ್ತೇ? 'ಅವರಿಗಂತೂ ಕೆಲಸವಿಲ್ಲ. ನಂ ತಲೆ ತಿಂತಾರೆ. ನಿನ್ನೆ ನಾನು ಸೀಟಿಗೆ ಬಂದ ಕೂಡಲೆ ಹೋದ ವಾರ ಕೊಟ್ಟ ಫೈಲ್ ಏನಾಯ್ತು ಅಂದರು. ನನಗೆ ತಲೆ ಕೆಟ್ಟು ಹೋಯ್ತು. ಆ ವಯ್ಯ ಯಾವಾಗ್ಲೂ ಹಾಗೇನೇ. ಸುಮ್ನೆ ಕೆಲ್ಸ ಹೇಳ್ತಾರೆ. ನನಗೆ ಬೇಜಾರು ಕೆಲ್ಸ ಮಾಡೋಕ್ಕೆ'. ಹತ್ತಕ್ಕೆ ಕಾಫಿಗೆ ಹೋಗಿ ಹನ್ನೊಂದಕ್ಕೆ ವಾಪಸ್ಸು ಬಂದ ಆ ದಿನವೇ ಅವರ ಸಹವಾಸ ಕೊನೆ ಮಾಡಿದೆ.

ಸರ್ಕಾರಿ ಕೆಲಸದ ಅಲ್ಲಿನ ಜನರ ನಡವಳಿಕೆ ನನಗೆ ಈಗಲೂ ಅರ್ಥವಾಗಿಲ್ಲ.

ಇನ್ನೊಂದು ವಿಷಯ ಹೀಗಿದೆ. ಒಬ್ಬಾತ ಬಂದು ಮತ್ತೊಬ್ಬರ ಬಳಿ ಏನೋ ಮಾತನಾಡುತ್ತಿರುತ್ತಾನೆ. ಇಬ್ಬರ ನಡವಳಿಕೆ ಗಮನಿಸಿದರೆ, ಗಳಸ್ಯ-ಕಂಠಸ್ಯ ಅನ್ನೋ ರೀತಿ. ಬಂದವರು ಆ ಕಡೆ ಹೋದ ಎರಡೇ ನಿಮಿಷದಲ್ಲಿ ಇವರು ಶುರು ಹಚ್ಚಿಕೊಳ್ಳುತ್ತಾರೆ, 'ಅಬ್ಬಬ್ಬ ತೊಲಗಿತು ಪೀಡೆ. ಶನಿ ತರಹ ವಕ್ಕರಿಸಿಕೊಂಡು ಬಿಡುತ್ತಾನೆ ಆ ವಯ್ಯ. ಮೊನ್ನೆ ಮಾರ್ಕೆಟ್ ಹತ್ತಿರ ಸಿಕ್ಕಿದ್ದ. ಹೆಂಡತಿ ಜೊತೆ ಹೋಗ್ತಿದ್ದ. ನನ್ನ ನೋಡಿ ಕೂಡ ಹಾಗೇ ಹೊರಟು ಹೋದ. ಹೋದರೆ ಹೋಗು ಅಂತ ನಾನು ಸುಮ್ಮನಿದ್ದೆ'... ಇಷ್ಟು ಹೊತ್ತೂ ಅವರನ್ನು 'ಸಾರ್' ಎಂದು ಸಂಬೋಧಿಸುತ್ತಿದ್ದವರು ಈಗ ಏಕ್-ದಂ ಏಕವಚನ. ನಾನೇಕೆ ಇಲ್ಲಿಗೆ ಬಂದೆ ಅಂತ ಅನ್ನಿಸದೆ ಇರಲಿಲ್ಲ ಬಿಡಿ.

ಈಗ 'ಏರ್ಪೋರ್ಟ್'ನಲ್ಲಿ ಒಂದು ಘಟನೆ ಬಗ್ಗೆ ಹೇಳುತ್ತೇನೆ ಕೇಳಿ.

ಈ ಜ್ವಲಂತ ಉದಾಹರಣೆ ಎಂದರೆ ನಾ ಕಂಡ ಒಬ್ಬ ಅಮೆರಿಕದ ಭಾರತೀಯ. ನಾನೊಮ್ಮೆ ಭಾರತಕ್ಕೆ ಹೊರಟಿದ್ದೆ. ನನಗೆ ಈತ ಡಿ.ಸಿ. ಏರ್ಪೋರ್ಟ್‌ನಲ್ಲಿ ಸಿಕ್ಕ. ಈತ ನನಗೆ ಪರಿಚಿತನಲ್ಲ. ಅವನೂ ಒಬ್ಬ ಸಹಪ್ರಯಾಣಿಕ ಅಷ್ಟೆ. ಲಗ್ಗೇಜ್ ಚೆಕ್-ಇನ್ ಮಾಡುವ ಸಮಯದಲ್ಲಿ ಆತ ಸ್ವಲ್ಪ ಮುಂದೆ ನಿಂತಿದ್ದ. ಆತನ ಹಿಂದೆ ಒಬ್ಬ ವಯಸ್ಸಾದ ಮುದುಕರು. ಇನ್ನಿಬ್ಬರ ನಂತರ ನಾನು. ಯಾಕೋ ಹಿಂದಕ್ಕೆ ತಿರುಗಿದವನು, ತನ್ನ ಹಿಂದಿರುವ ಮುದುಕರನ್ನು ನೋಡಿ, ತನಗಿಂತ ಮುಂದೆ ಅವರನ್ನು ಬಿಟ್ಟು, ತಾನು ಹಿಂದೆ ನಿಂತ. 'ಸಂಭಾವಿತ' ಎಂದನ್ನಿಸಿ ಮನದಲ್ಲೇ ಶ್ಲಾಘಿಸಿದೆ. ಮೊದಲ ವಿಮಾನದ ಪ್ರಯಾಣವಾದ ಮೇಲೆ ನನಗೆ ರೆಸ್ಟ್-ರೂಮ್‌ನಲ್ಲಿ ಸಿಕ್ಕ. ಹಲ್ಲುಜ್ಜಿ, ಮುಖ ತೊಳೆದುಕೊಂಡು ಸ್ವಚ್ಛವಾಗಿ

ಸಿದ್ಧನಾಗುತ್ತಿದ್ದ. ಆಮೇಲೆ, ಎರಡನೆಯ ವಿಮಾನದಲ್ಲೂ ನನ್ನೊಂದಿಗೇ ಬಂದ. ಇಂಗ್ಲಿಷ್ ಬಾರದ ಯಾರೋ ಭಾರತೀಯ ಹಿರಿಯರಿಗೆ ಸಹಾಯ ಮಾಡುತ್ತಿದ್ದ. ಬೆಂಗಳೂರಿಗೂ ಬಂದೆವು.

ನಿದ್ದೆ ಮುಖದಲ್ಲಿ ಹೊರಗೆ ಕಾದಿರುವ ಮನೆಯವರನ್ನು ಕಾಣುವುದು ಹೇಗೆ ಎಂದುಕೊಂಡು ಮುಖ ತೊಳೆಯಲು ಹೋದೆ. ಅಲ್ಲಿಯೂ ಇರಬೇಕೇ? ಆದರೆ... ಬಹಿರ್ದೆಶೆ ಮುಗಿಸಿ ಹೊರಬಂದವನು ಕೈ ತೊಳೆಯದೆ ಹಾಗೇ ಹೋದ... 'immigration'ನಲ್ಲಿ ಸಾಲಿಗೆ ಹೋಗುವಾಗ ಒಂದಿಬ್ಬರನ್ನು ದಬ್ಬಿಕೊಂಡೇ ಮುಂದೆ ಹೋಗಿ ನಿಂತ. ಚೂಯಿಂಗ್ ಗಂ ಬಾಯಿಗೆ ಹಾಕಿಕೊಂಡವ, ಪೇಪರನ್ನು ಅಲ್ಲೇ ಎಸೆದ. ಈತನ ನಡವಳಿಕೆ ನೋಡಿದಾಗ ಅನ್ನಿಸುತ್ತದೆ 'ಊರಾಚೆ ಬಂದಾಗ ತೋರುವ ನಡವಳಿಕೆಯೆಲ್ಲ ಸಹಜ ನಡವಳಿಕೆಯಲ್ಲ' ಎಂದು. ಹೀಗೇಕೆ?

ಕೆಲಸದಲ್ಲಿ ಕಂಡುಬರುವ ಹಲವರ ನಡವಳಿಕೆ ಇನ್ನೂ ಸೋಜಿಗ. ಸೂಟು ಬೂಟು ಹಾಕಿಕೊಂಡು ಸಿಕ್ಕಾಪಟ್ಟೆ ಹೈ-ಟೆಕ್ ಭಾಷೆಯಲ್ಲಿ ಮಾತನಾಡುತ್ತ, ಹಲವಾರು ಜನರು ಹಾದು ಹೋಗುವ ಸ್ಥಳದಲ್ಲಿ ಅಡ್ಡ ನಿಂತಿರುತ್ತಾರೆ. ಇಷ್ಟವಿದೆಯೋ ಇಲ್ಲವೋ Excuse me ಎಂದು ಹೇಳುತ್ತಾ ಜನರು ಹಾದು ಹೋಗುತ್ತಿದ್ದರೂ, ಇವರು ಕದಲೋದಿಲ್ಲ. ತಪ್ಪು ಯಾರದೋ, ಕ್ಷಮೆ ಕೇಳುವವರಾರೋ! ಇವರು ಅಕ್ಷರಸ್ಥರು ಅಷ್ಟೇ, ವಿದ್ಯಾವಂತರಲ್ಲ.

ಎಲ್ಲ ನಡವಳಿಕೆಗೂ ಒಂದು ರಂಗ ಅಂತ ಇರುತ್ತದೆ. ಅಂದರೆ 'ಸ್ಟೇಜ್'. ಆ ಸ್ಟೇಜಿನ ಮೇಲೆ, ಆ ರೀತಿ ಇದ್ದರೆ ಮಾತ್ರ ಸೊಗಸು. ಎಲ್ಲೆಡೆ ಹಾಗೇ ಇರ್ತೀವಿ ಅಂದರೆ ಅದಕ್ಕೆ ಬೆಲೆ ಇರುವುದಿಲ್ಲ. ಉದಾಹರಣೆಗೆ ಹಿಂದಿನ ರಾತ್ರಿಯ ಒಂದು ನಾಟಕದಲ್ಲಿ ತಾನು ಭೀಮಸೇನ ಪಾತ್ರಧಾರಿಯಾಗಿದ್ದೆ ಎಂದು, ಮರುದಿನ ಬೀದಿಯಲ್ಲಿ ನಡೆಯುವಾಗಲೂ ಗದೆ ಹೊತ್ತು ನಡೆದರೆ ಜನ ನಗುತ್ತಾರೆ. ಅಲ್ಲವೇ?

ಅದಕ್ಕೆಂದೇ ಅಮೆರಿಕದ ಕೆಲವು ಕಂಪನಿಗಳ ಮೀಟಿಂಗ್ ರೂಮಿನ ಹೊರಗೆ ಹೀಗೆ ಹಾಕಿರುತ್ತಾರೆ: 'Leave your titles at the door'.

ಸ್ನೇಹಿತನ ಮನೆಗೆ ಒಂದು ಪಾರ್ಟಿಗೆ ಹೋಗಿದ್ದೆ. ಅದೂ ಇದೂ ಮಾತನಾಡುತ್ತಿದ್ದಾಗ ಸ್ನೇಹಿತನ ಮೇನೇಜರ್ ಬಂದ. ಆತನೂ ಭಾರತೀಯ. ಹಲವಾರು ಜನ ಇದ್ದುದರಿಂದ ಪ್ರತ್ಯೇಕವಾಗಿ ಪರಿಚಯ ಮಾಡಿಸದೆ 'ಇವರು ನಮ್ಮ ಮೇನೇಜರ್' ಎಂದಷ್ಟೆ ಹೇಳಿ ಪರಿಚಯ ಮಾಡಿಸಿದ. ಆ ಪುಣ್ಯಾತ್ಮನಿಗೆ ಏನನ್ನಿಸಿತೋ ಏನೋ ಗೊತ್ತಿಲ್ಲ... ಕೆಲಸದಲ್ಲಿ ನಡೆದ ಯಾವುದೋ ಸಮಸ್ಯೆಯ ಬಗ್ಗೆ ಶುರು ಮಾಡಿದವರು, ನಂತರ ಸ್ನೇಹಿತನ ಟೈಮ್-ಶೀಟ್ ಬಗ್ಗೆ ಮಾತು ಹೊರಳಿಸಿದರು. ಎಲ್ಲರಿಗೂ ಒಂದು ರೀತಿ ಕಸಿವಿಸಿಯಾಗತೊಡಗಿ, ಮೆಲ್ಲಗೆ ಅಲ್ಲಿಂದ ಜಾಗ ಖಾಲಿ ಮಾಡಿದೆವು. ಅವರು ಮೇನೇಜರ್ ಆಗಿದ್ದಲ್ಲಿ ಕಚೇರಿಯಲ್ಲಿ ಮಾತ್ರ, ಇನ್ನೊಬ್ಬರ ಮನೆಯಲ್ಲಿ ಅಲ್ಲ. ಏನಂತೀರ?

ನಮ್ಮ ದಿನನಿತ್ಯ ಜೀವನದಲ್ಲಿ ಕಚೇರಿಯಲ್ಲಿ ಆಗುವ ಅನುಭವಗಳೇ ಹೇರಳ. ನಮ್ಮಲ್ಲೊಬ್ಬ ಭಾರತೀಯನಿದ್ದ. ನಮ್ಮೊಂದಿಗಿದ್ದಾಗ ಆರಾಮವಾಗಿ ಬೆರೆಯುತ್ತಿದ್ದ ಅವನು, ಪರದೇಶೀಯರೊಡನೆ ಇದ್ದಾಗ ಮಾತ್ರ, ನಮ್ಮೊಂದಿಗೆ ಮಾತು ಬಿಡಿ, ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ಮತ್ತೊಬ್ಬನಿದ್ದ ಪರದೇಶಿಯವರಂತೆ ನೀರು ಕುಡಿವ ಬದಲು ಸೋಡ ಕುಡಿದರೆ ತಾನೂ ಅವರಂತೆಯೇ ಎಂಬ ಮನೋಭಾವ. ಈ ರೀತಿಯ ನಡವಳಿಕೆಗಳು ಅರ್ಥವೇ ಆಗೋಲ್ಲ.

ಮೊನ್ನೆ ಒಂದೆಡೆ ಓದುತ್ತಿದ್ದೆ. ರಾಜಕುಮಾರ ವಿಲಿಯಮ್ಸ್‌ನನ್ನು ಮದುವೆಯಾಗುತ್ತಿರುವ ಕೇಟ್‌ಗೆ ಯಾವ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ತರಬೇತಿ ನೀಡಲಾಗುತ್ತಿದೆಯಂತೆ. ರಾಜಕುಮಾರಿಯಾಗುವವಳಿಗೆ ಇದು ಅವಶ್ಯಕ ಅನ್ನುವುದಕ್ಕಿಂತ ಅನಿವಾರ್ಯ ಎನ್ನಬಹುದು. ತರಬೇತಿ ಮುಗಿದ ಮೇಲೆ ತನ್ನ ಸ್ವಾಭಾವಿಕ ನಡವಳಿಕೆಯನ್ನೇ ಮರೆತು ರಾಜಕುಮಾರಿಯ ನಡವಳಿಕೆಯನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದುದು ಒಂದು ರೀತಿ ಪರಕಾಯ ಪ್ರವೇಶ ಮಾಡಿದಂತೆ.

ಆಗಲೇ ಹೇಳಿದಂತೆ, ಕೆಲವರಿಗೆ ಏನೋ ಒಂದು ರೀತಿ ದೊಡ್ಡಸ್ತಿಕೆ ಇರುತ್ತದೆ. ತಮಗಿಂತ ಜ್ಞಾನಿಗಳಿಲ್ಲ ಎಂಬೋ ರೀತಿ. ಬಹಳ ಹಿಂದೆ ನಡೆದ ಘಟನೆ. ಯಾರದೋ ಬಂಧುಗಳ ಮನೆಗೆ ಹೋಗಿದ್ದೆವು. ನನ್ನ ಅಣ್ಣನ ಮಗ ಆಗ ಪ್ರೈಮರಿಯಲ್ಲಿದ್ದ. ಅಲ್ಲಿದ್ದ ಮಹನೀಯರೊಬ್ಬರು ಅವನನ್ನು ಕೇಳಿದರು, 'ಏನಯ್ಯ, ಏನು ಓದುತ್ತಿದ್ದೀಯಾ?' ಅಂತ. ತನ್ನ ಕೈಯಲ್ಲಿ 'ಕಾಮಿಕ್ಸ್' ಪುಸ್ತಕ ಹಿಡಿದಿದ್ದ ಅವನು ನುಡಿದ 'ತೆನಾಲಿರಾಮನ ಕಥೆಗಳು' ಅಂತ. ಸರಿಯಾದ ಪ್ರಶ್ನೆಗೆ ಬಂದ ತಕ್ಕ ಉತ್ತರಕ್ಕೆ ಸಿಡಿದ ಅವರು ಹೇಳಿದರು 'ಯಾವ ಕ್ಲಾಸ್ ಓದುತ್ತಿದ್ದೀಯಾ ಅಂತ ಕೇಳಿದ್ದು'. ಆಮೇಲೆ ಅವನು ಉತ್ತರ ಹೇಳಿದ. 'ಹಾಗೋ, ನಿನಗೊಂದು ಪ್ರಶ್ನೆ ಕೇಳ್ತೀನಿ, ಉತ್ತರ ಹೇಳು. ಭಾರತದ ಇತಿಹಾಸದಲ್ಲಿ ಉಕ್ಕಿನ ಮನುಷ್ಯ ಅಂತ ಯಾರನ್ನು ಕರೀತಾರೆ?' ಎಂದರು.

ಇವನಿಗೆ ಪಾಪ ಅರ್ಥವಾಗಲಿಲ್ಲವೋ ಅಥವಾ ಗೊತ್ತಿರಲಿಲ್ಲವೋ, ಸುಮ್ಮನಿದ್ದ. 'ತಲೆ ಹರಟೆ ಉತ್ತರ ಕೊಡೋದಕ್ಕೆ ಗೊತ್ತು. ಈ ಉತ್ತರ ಗೊತ್ತಿಲ್ವಾ? ನಾನು, ನಿನ್ನ ವಯಸ್ಸಿನಲ್ಲಿ ಕಲಿತಿದ್ದು. ಇನ್ನೂ ಹಸಿರಾಗಿ ನೆನಪಿದೆ. ಭಾರತ ಇತಿಹಾಸದಲ್ಲಿ ಉಕ್ಕಿನ ಮನುಷ್ಯ ಅಂತ ಕರೆಸಿಕೊಂಡದ್ದು 'ರಾಜಾಜಿ' ಅವರನ್ನು. ಅಂದರೇ, ಸಿ.ರಾಜಗೋಪಾಲಾಚಾರಿಯವರನ್ನ. ತಿಳ್ಕೋ'. ನಾನು ದಂಗು ಬಡಿದವನಂತೆ ನೋಡುತ್ತಿದ್ದೆ!

ಬರೀ ಮಾನವನ ಋಣಾತ್ಮಕ ಅಂಶಗಳನ್ನೇ ಹೇಳುತ್ತಿದ್ದೇನೆ ಅಂದುಕೊಂಡಿರಾ? ಈಗ ಕೆಲವು ಇತರೆ ಉದಾಹರಣೆಗಳನ್ನೂ ಕೊಡುತ್ತೇನೆ.

ಒಬ್ಬಾನೊಬ್ಬ ಒಂದು ಊರಿಗೆ ಬಂದ. ಬಂದಾತ ಒಬ್ಬ ಮೋಸಗಾರ. ಮೊದಲಿಗೆ ಎಲ್ಲರ ಸ್ನೇಹ ಸಂಪಾದಿಸಿ, ಕೊನೆಗೆ ನಾಮ ಹಾಕಿ ಹಣ ಕಸಿದುಕೊಂಡು ಹೋಗುವುದು

ಅವನ ದುರಭ್ಯಾಸ. ಈ ಊರಿನಲ್ಲೂ ಅದೇ ಚಾಳಿ ಮುಂದುವರೆಸಿ, ಎಲ್ಲರ ಸ್ನೇಹ ಸಂಪಾದಿಸಿದ. ಒಂದು ದಿನ ಪೇಟೆ ಬೀದಿಯಲ್ಲಿ ಜಗಳವಾಗುತ್ತಿತ್ತು. ಈ ಮೋಸಗಾರ ಇನ್ನೊಬ್ಬನನ್ನು ಕುರಿತು 'ನಿನಗೆ ಹಣ ಬೇಕಿದ್ದ ಸಮಯದಲ್ಲಿ ಸಾವಿರ ದಿನಾರ ಕೊಟ್ಟಿದ್ದೆ. ಈಗ ನೋಡಿದರೆ, ನಾನು ಕೊಟ್ಟೇ ಇಲ್ಲ ಅನ್ನುತ್ತೀಯ' ಹಾಗೆ ಹೀಗೆ ಎಂದು. ಪಾಪ, ಹಣವನ್ನು ತೆಗೆದುಕೊಳ್ಳದೇ ಇದ್ದರೂ, ಊರಿನವರ ಮುಂದೆ ಅಪಮಾನಿತನಾಗುತ್ತಿದ್ದ ಆ ಮತ್ತೊಬ್ಬ.

ಅದೇ ಸಮಯದಲ್ಲಿ ಅಲ್ಲಿಗೆ ಬಂದ ಅವನ ಸ್ನೇಹಿತ, ತಕ್ಷಣವೇ ಯೋಚನೆ ಮಾಡಿ, ಆ ಮೋಸಗಾರನನ್ನು ಕುರಿತು 'ಅಯ್ಯಾ, ನೀನು ಹಣ ಕೊಟ್ಟಿದ್ದು ನನಗೆ, ಅವನಿಗಲ್ಲ' ಎಂದ. ವಾತಾವರಣ ತಿಳಿಯಾಯಿತು ಎಂದುಕೊಳ್ಳುತ್ತಿದ್ದಂತೆಯೇ ಆ ಮೋಸಗಾರ ನುಡಿದ, 'ನಿನಗೆ ನಾನು ಎರಡು ಸಾವಿರ ದಿನಾರ ಕೊಟ್ಟಿದ್ದು ನೆನಪಿದೆ. ಆದರೆ ಇವನಿಗೆ ನಾನು ಕೊಟ್ಟಿದ್ದು ಒಂದು ಸಾವಿರ. ನಾನು ಕೇಳುತ್ತಿರುವುದು ಆ ಹಣ' ಎನ್ನೋದೇ? ಸ್ನೇಹಿತನ ಮಾನ ಕಾಪಾಡಲು ಹೋಗಿ ಎರಡು ಸಾವಿರ ತೆತ್ತಲೇಬೇಕಾಯ್ತು!

ಮೊನ್ನೆ ಯಾರದೋ ಮನೆಗೆ ಹೋಗಿದ್ದಾಗ, ಗಂಡು ಪಾಳ್ಯ ಒಂದೆಡೆ ಕುಳಿತು ಊಟ ಮಾಡುತ್ತ ಮಾತನಾಡುತ್ತಿದ್ದೆವು. ಮಾತು 'ಇಂಟರ್ವ್ಯೂ' ಕಡೆ ತಿರುಗಿತು. ಆಗ ಒಬ್ಬ ಹೇಳಿದ 'ನನ್ನ ಟೀಮಿನಲ್ಲಿ ಒಂದು ಕೆಲಸ ಖಾಲಿ ಇತ್ತು. ಹೊಸದಾಗಿ ಕಾಲೇಜು ಮುಗಿಸಿ ಹೊರಬಂದಿದ್ದ ಒಬ್ಬ ಸಿಕ್ಕ. ಬಹಳ ಬುದ್ಧಿವಂತ. ಯಾವುದೇ ವಿಷಯವನ್ನೂ ಬೇಗ ಕಲಿವ ಸಾಮರ್ಥ್ಯ ಉಳ್ಳವನು. ಕುಶಾಗ್ರಮತಿ. ಎಲ್ಲ ಸರಿ, ಆದರೆ ಕೆಲಸದಲ್ಲಿ ಅನುಭವ ಇಲ್ಲ. ನನ್ನ ಮೇನೇಜರ್ ಇವನನ್ನು ತೆಗೆದುಕೊಳ್ಳಬಹುದು ಎಂದರೂ ನಾನೇ ಬೇಡ ಎಂದೆ. ಇವನಿಗೆ ಕೆಲಸ ಕೊಟ್ಟು ಇನ್ನಾರು ತಿಂಗಳಲ್ಲಿ ಬೇರೆಡೆ ಹೋದರೆ ನನಗೇ ನಷ್ಟ' ಎಂದ. ಅವರವರ ಕೆಲಸದ ವಾತಾವರಣ ಹೇಗೋ ಏನೋ, ನಾನೇನೂ ಮಾತನಾಡಲಿಲ್ಲ. ಆದರೆ ಅವನು ಹೇಳಿದ್ದು ನನಗೆ ಹಿಡಿಸಲಿಲ್ಲ.

ಆಗ ಮತ್ತೊಬ್ಬ ನೇರವಾಗಿ ನುಡಿದ, 'ತಪ್ಪು. ಅವನನ್ನು ಕೆಲಸಕ್ಕೆ ತೆಗೆದುಕೊಂಡು, ಅವನಿಗೆ ತರಬೇತಿ ನೀಡಿ ಸೂಕ್ತ ರೀತಿಯಲ್ಲಿ ನಡೆಸಿಕೊಂಡರೆ, ಅವನು ಕೆಲಸವನ್ನು ಬಿಟ್ಟು ಹೋಗುವ ಪ್ರಮೇಯವೇ ಬರುವುದಿಲ್ಲ. ಒಬ್ಬ ಒಳ್ಳೆಯ ಕೆಲಸಗಾರನ್ನು ನೀನು ಕಳೆದುಕೊಂಡೆ ಎನ್ನೋದು ನನ್ನ ಅನಿಸಿಕೆ' ಎಂದ.

ಆತ ಮಾತು ಮುಂದುವರೆಸಿದ, 'ನಾವು ಕೆಲವೊಮ್ಮೆ ನಿರ್ಧಾರ ತೆಗೆದುಕೊಳ್ಳುವ ಮುನ್ನ, ನಾವೂ ಒಮ್ಮೆ ಇದೇ ಪರಿಸ್ಥಿತಿಯಲ್ಲಿದ್ದೆವು ಎಂಬುದನ್ನು ಮರೆಯಬಾರದು. ಈಗ ಮೇಜಿನ ಆ ಕಡೆ ಬದಿಯಲ್ಲಿ ಇದ್ದೇವೆ ಎಂಬುದು ನಿಜವಾದರೂ, ಯಾವಾಗಲೂ ಅಲ್ಲೇ ಇರುವುದಿಲ್ಲ. ಮುಂಬೈ ಟ್ರೇನಿನಲ್ಲಿ ಮೊದಲು ಕುಳಿತವನು ಬೋಗಿಯನ್ನು ಹೊಕ್ಕು ಚಿಲಕ ಬಡಿದುಕೊಳ್ಳುತ್ತಾನೆ. ಯಾರು ತಟ್ಟಿದರೂ ತೆಗೆಯುವುದಿಲ್ಲ. ಟ್ರೈನ್ ತನ್ನದೇ ಎಂಬೋ

ಮನೋಭಾವ ಅವನದು. ಆದರೆ ಅವನ ಸಮಯ ಬಂದಾಗ ಇಳಿಯಲೇಬೇಕು ಅಥವಾ ಸ್ಟೇಷನ್ ಮಾಸ್ತರ್ ಬಂದಾಗ ಬಾಗಿಲು ತೆರೆಯಲೇಬೇಕು'.

ಅಬ್ಬ... ಎಂತಹ ಮಾತುಗಳು! ಬಹಳಷ್ಟು ಸಾರಿ ಪಾರ್ಟಿಗಳಲ್ಲಿ ಕೆಲಸಕ್ಕೆ ಬಾರದ ಮಾತುಗಳನ್ನು ಆಡಿದರೂ ಇಂತಹ ಸಂಭಾಷಣೆಗಳು ಒಮ್ಮೊಮ್ಮೆ ಇದ್ದರೂ ಸಾಕು.

ಕೆಲವು ಸಾರಿ ಎಲ್ಲ ಬಾಯಿಬಿಟ್ಟು ಹೇಳಲೇಬೇಕಿಲ್ಲ. ಸೂಕ್ಷ್ಮಗ್ರಾಹಿಯಾಗಿದ್ದರೆ ಸಾಂಕೇತಿಕ ಸನ್ನೆ ಅಥವಾ ಮಾತು ಸಾಕು.

ಒಬ್ಬ ಮಹಾರಾಜನಿದ್ದನಂತೆ. ಅವನ ಆಸ್ಥಾನದಲ್ಲಿ ಇದ್ದವರು ದುರುಳರು. ಮಹಾರಾಜನ ಗಮನಕ್ಕೆ ತಾರದಂತಹ ಜಾಣಾಕ್ಷತೆ ಉಳ್ಳವರು. ಗೋಡೆಗಳಿಗೂ ಕಿವಿ ಇರುತ್ತದೆ ಅನ್ನುತ್ತಾರಲ್ಲ ಹಾಗೆ, ಯಾವುದೇ ಗುಟ್ಟಿನ ವಿಚಾರವೂ ಅಲ್ಲಿ ನಿಲ್ಲುತ್ತಿರಲಿಲ್ಲ. ಸಿಗುವ ಮಾಹಿತಿಯಿಂದ ತಮಗೆ ಲಾಭ ಮಾಡಿಕೊಳ್ಳಲು ಹವಣಿಸುವ ಸಂಚೇ ಎಲ್ಲರ ತಲೆಯಲ್ಲಿ. ಇದು ರಾಜ್ಯಕ್ಕೆ ಶೋಭೆಯಲ್ಲ. ಹೀಗಿರಲು ರಾಜಗುರುಗಳು ಆಗಮಿಸುತ್ತಾರೆ. ಹಲವಾರು ವರ್ಷಗಳ ಕಾಲ ತಪಸ್ಸಿಗೆ ತೆರಳಿದವರು ಈಗ ರಾಜನನ್ನು ಕಂಡು ಹೋಗಲು ಬರುತ್ತಿದ್ದಾರೆ. ಗುರುಗಳು ಅರಮನೆಯಲ್ಲಿ ಕಾಲಿಟ್ಟೊಡನೆ, ಅವರಿಗೆ ಸಂದರ್ಭದ ಅರಿವಾಯಿತು.

ಮೊದಲೇ ರಹಸ್ಯ ನಿಲ್ಲುವುದಿಲ್ಲ ಎಂದ ಮೇಲೆ ರಾಜನನ್ನು ಪ್ರತ್ಯೇಕವಾಗಿ ಕರೆದು ಹೇಳುವುದೆಂತು? ಎಲ್ಲರ ಸಮ್ಮುಖದಲ್ಲಿ ರಾಜನು, ತನ್ನ ಆಡಳಿತ ಹೇಗಿದೆ, ನಿಮಗೆ ಏನನ್ನಿಸಿತು ಎಂದು ಪ್ರಶ್ನೆ ಮಾಡಿದಾಗ ಒಂದು ಕ್ಷಣ ಯೋಚನೆ ಮಾಡಿ ಇಂತೆಂದರು, 'ರಾಜನ್, ಗಂಧದ ಮರದಂತಿರುವ ನಿನ್ನ ಆಶ್ರಯದಲ್ಲಿ ಎಲ್ಲರೂ ಚೆನ್ನಾಗಿದ್ದಾರೆ' ಎಂದರು. ರಾಜನನ್ನುಳಿದು ಮಿಕ್ಕೆಲ್ಲರಿಗೂ ಮಹದಾನಂದ. ತಮ್ಮ ಬಗ್ಗೆ ರಾಜಗುರುಗಳು ಏನೂ ಹೇಳಲಿಲ್ಲ ಎಂದು. ರಾಜನಿಗೆ ಅರ್ಥವಾಯಿತು, 'ತಾನು ಗಂಧದ ಮರವೇ ಸರಿ. ಆದರೆ ಆಶ್ರಯ ಪಡೆದಿರುವವರೆಲ್ಲ ಸರ್ಪಗಳು' ಎಂದು. ಇದು ಬುದ್ಧಿವಂತರ ಲಕ್ಷಣ.

ಮಾನವ ಗುಣ, ನಡತೆ, ನಡವಳಿಕೆಗಳು ಅತ್ಯಂತ ಭಿನ್ನ. ಒಂದೆಡೆ ಹತ್ತು ಜನರಿದ್ದರೆ ಹತ್ತು ನಡವಳಿಕೆಗಳನ್ನು ಕಾಣಬಹುದು. ಆ ನಡವಳಿಕೆಗಳು ಸದಾ ಸತ್ಯವೇ ಆಗಿರಬೇಕಿಲ್ಲ. ಸ್ಥಳಕ್ಕೆ ತಕ್ಕಂತೆ, ರಂಗಕ್ಕೆ ತಕ್ಕಂತೆ ಹೊಂದಿಕೊಳ್ಳುವ ಗೋಸುಂಬೆ ಗುಣವೂ ಆಗಿರಬಹುದು ಅಥವಾ ಎಲ್ಲಿದ್ದರೇನು ನಾನು ನಾನೇ ಎಂಬ ಮದ್ದಾನೆಯ ಗುಣವೂ ಆಗಿರಬಹುದು. ಗುಳ್ಳೇನರಿಯ ಮೋಸದ ಗುಣ, ಕತ್ತೆಯ ದುಡಿತದ ಗುಣ, ಮಂಗನಂತೆ ಒಂದೆಡೆ ನಿಲ್ಲದ ಗುಣ, ಇರುವೆಯಂತೆ ಕೂಡಿಡುವ ಗುಣ; ಹೀಗೆ, ಹಲವಾರು ಪ್ರಾಣಿಗಳ ಗುಣ ಇತ್ಯಾದಿಗಳನ್ನು ತನ್ನಲ್ಲೇ ಮೇಳೈಸಿಕೊಂಡಿರುವ ಮಾನವನ ಗುಣಗಳ ಬಗ್ಗೆ ಬರೆದರೆ ಪುಟಗಳು ಸಾಲದಾಗುತ್ತವೆ.

●

ಬೆಳ್ಳಿ ಚುಕ್ಕಿ

–ಸುಪ್ತದೀಪ್ತಿ

ಹೀಗೇ ಒಂದು ಸಂಜೆ. ನಾಲ್ಕೂವರೆಯ ಸಮಯ. ನಮ್ಮೂರಿನ ಹತ್ತಿರದ ಆಸ್ಪತ್ರೆಯೊಂದರಲ್ಲಿ ಸಮ್ಮೋಹನ ಚಿಕಿತ್ಸೆಯ ಗ್ರಾಹಕ ಒಬ್ಬರನ್ನು ನೋಡಲು ಹೊರಡುತ್ತಿದ್ದೆ. ನಮ್ಮ ಕೋಣೆಯ ಕಿಟಕಿಯ ಹೊರಗೆ ಏನೋ ಶಬ್ದವಾಯ್ತು. ಈ ಹಾಡು ಹಗಲಲ್ಲಿ ಯಾವ ಕಳ್ಳ ಬಂದಾನು ಅಂತನಿಸಿದರೂ ನನ್ನವರನ್ನು ಕರೆದು ಹೇಳಿದೆ, 'ಸ್ವಲ್ಪ ಹೊರಗೆ ಹೋಗಿ ನೋಡಿ, ಏನೋ ಶಬ್ದ ಆಯ್ತು. ನಾನು ಬಾಳಿಗಾ ಆಸ್ಪತ್ರೆಗೆ ಹೊರಟೆ. ಬರುವಾಗ ಆರೂವರೆ ಆಗಬಹುದು. ಬಾಯ್...'

*

ಮತ್ತೆ ಬರುವಾಗ ಆರೂವರೆಯೇ ಆಗಿತ್ತು. ಬಂದವಳೇ ಕೈಕಾಲು ಮುಖ ತೊಳೆದುಕೊಂಡು ಟೀ ಕಪ್ ಕೈಯಲ್ಲಿ ಹಿಡಿದು ಸೋಫಾದಲ್ಲಿ ಕೂತಿದ್ದೇನಷ್ಟೇ, 'ಜ್ಯೋತಿ, ನೀನ್ ನಂಬ್ಲಿಕ್ಕಿಲ್ಲ. ನಮ್ಮ ಕೋಣೆಯ ಹೊರಗೆ ಏನಾಗಿದೆ ಗೊತ್ತುಂಟಾ? ಒಂದು ಬೀದಿ ನಾಯಿ ಬಂದು ಮರಿಯಿಟ್ಟಿದೆ....' ಯಾವಾಗಲೂ ಶಾಂತವಾಗಿರುವ ನನ್ನವರ ಸ್ವರ ನನಗೇ ಅಪರಿಚಿತ ಅನ್ನಿಸುವಂತಿತ್ತು. ಅಷ್ಟೊಂದು ಅಚ್ಚರಿ, ಉತ್ಸಾಹ ಅಲ್ಲಿತ್ತು.

'ಹ್ಞಾ?'

'ಹ್ಞ!... ನೀನು ಆಚೆ ಹೋದ ಕೂಡ್ಲೇ ನಾನು ಹೊರಗೆ ಹೋಗಿ ನೋಡಿದೆ. ಮನೆಯ ಗೋಡೆ ಮತ್ತು ಹಳೇ ಟ್ಯಾಂಕಿಯ ನಡುವೆ ಜಾಗ ಉಂಟಲ್ಲ, ಅಲ್ಲೊಂದು ಟೈರ್ ಬುಟ್ಟಿ ಇಟ್ಟಿದ್ದೀಯಲ್ಲ. ಅದ್ರಲ್ಲಿ ಕೂತಿದೆ. ಆಗ್ಲೇ ಮೂರು ಮರಿ ಹಾಕಿತ್ತು. ಮತ್ತೆ ನಾನು ನೋಡ್ಲಿಲ್ಲ...'

'ಅಯ್ಯೋ! ಹೌದಾ? ಆಗ್ಲೇ ಅಂದ್ರೆ ಯಾವಾಗ? ಎಷ್ಟು ಗಂಟೆಗೆ? ಆಮೇಲೆ ಯಾಕೆ ನೋಡ್ಲಿಲ್ಲ? ಮತ್ತೆ? ಇನ್ನೀಗ ಎಂತ ಮಾಡುದು? ಅವುಗಳನ್ನು ಹಾಗೇ ಬಿಡುದಾ? ಇಲ್ಲೇ ಇದ್ರೆ ನಮ್ಗೆ ಆಚೀಚೆ ಹೋಗ್ಲಿಕ್ಕೆ ಬಿಡ್ಲಿಕ್ಕಿಲ್ಲ ಆ ಅಮ್ಮ! ಏನ್ ಮಾಡುವಾ?' ನನ್ನ ಪ್ರಶ್ನಾವಳಿಗಳ ನಡುವೆ ಇವರ ಶಾಂತಾವತಾರ ಮರಳಿತು.

'ಏನ್ ಮಾಡ್ಲಿಕ್ಕಿಲ್ಲ. ಸುಮ್ನೆ ಇರ್ಲಿ ಬಿಡು. ಅದ್ರಷ್ಟಕ್ಕೆ ಹೊರಗ ಇರ್ತದೆ ಅದು; ನಮಗೇನು?'

'ಸುಮ್ಮನಿರು' ಅಂತ ಇವರು ಅಪ್ಪಣೆ ಕೊಟ್ಟಿದ್ರೂ ಸುಮ್ಮನಿರಲಿಕ್ಕೆ ನಾನೇನು ಸಾಕುನಾಯಿಯಾ? ಕುತೂಹಲಕ್ಕೇ ಮರ್ಯಾದೆ ತರುವ ಮಾರ್ಜಾಲರಾಣಿ. ಟೀ ಮುಗಿಸಿ ಹಿಂಬಾಗಿಲು ತೆರೆದು ಹೊರಗೆ ಹೋದೆ. ಅಲ್ಲಿ ನೀರೊಲೆಯ ಬದಿಗೆ, ಮನೆಗೋಡೆ ಮತ್ತು ಹಳೇ ಟ್ಯಾಂಕಿಯ ನಡುವೆ ಸುಮ್ಮನೇ ಇಟ್ಟಿದ್ದ ಕೈಹೋದ ಟೈರ್ ಬುಟ್ಟಿಯಲ್ಲಿ ದೊಡ್ಡ ಇಲಿಗಿಂತಲೂ ಸಣ್ಣ ಗಾತ್ರದ ಮೂರು ಜೀವಿಗಳು ಕುಯ್ಯ್ಞುಡುತ್ತಿದ್ದವು. ಇನ್ನು ಇವುಗಳ ಅಮ್ಮ!? ಅಲ್ಲೆಲ್ಲೂ ಇರಲಿಲ್ಲ. ಆಗಲೇ ಏರುತ್ತಿದ್ದ ಮಬ್ಬುಗತ್ತಲೆಯಲ್ಲಿ ಕಣ್ಣು ಸಣ್ಣದು ಮಾಡಿ ನೋಡಿದಾಗ, ಅಲ್ಲಿಂದ ಮುಂದೆ, ಟ್ಯಾಂಕಿಯ ಇನ್ನೊಂದು ಕೊನೆಯ ಮೂಲೆಯಲ್ಲಿ ಹಳೇ ಕುರ್ಚಿಯಿಟ್ಟಿದ್ದರ ಅಡಿಯಲ್ಲಿ ಕಪ್ಪು ನಾಯಿ ಕತ್ತು ಚಾಚಿ ಮಲಗಿತ್ತು. ನಾಲ್ಕಡಿ ದೂರದಿಂದ ನಿಟ್ಟಿಸಿದೆ. ನಾಲ್ಕು ಕಾಲುಗಳ ನಡುವೆ ಮತ್ತೆ ಮೂರು ಮರಿಗಳು. ಒಟ್ಟು ಅರ್ಧ ಡಝನ್! ಈ ತಾಯಿಯೇ ಸಣಕಲು ಪೀಚಲು ಕುನ್ನಿ! ಇವಳು ಹೇಗಪ್ಪಾ ಇಷ್ಟು ಮರಿಗಳನ್ನು ಹಾಲೂಡಿ ಸಾಕುತ್ತಾಳೆ? ಅಬ್ಬಾ ಪ್ರಕೃತಿಯೇ! ಇವಳನ್ನಿಲ್ಲಿಂದ ಸದ್ಯಕ್ಕಂತೂ ಓಡಿಸ್ಲಿಕ್ಕೆ ಸಾಧ್ಯ ಇಲ್ಲ. ಓಡಿಸುದಾದ್ರೂ ಯಾವಾಗ? ಹೇಗೆ? ಎಲ್ಲಿ ಹೋದಾಳು? ಲೆಕ್ಕಾಚಾರ ನಡೆಸುತ್ತಾ ಒಳಗೆ ಬಂದೆ.

ಇನ್ನರ್ಧ ಗಂಟೆ ಬಿಟ್ಟು ಹೊರಗೆ ಹೋಗಿ ನೋಡಿದಾಗ, ಬುಟ್ಟಿಯ ಮರಿಗಳು ಅಲ್ಲೇ ತೆವಳುತ್ತಿದ್ದವು. ಅಲ್ಲಿಂದ ನಾಲ್ಕಡಿ ದೂರದಲ್ಲಿ ಹದಿನೆಂಟು ಇಂಚುಗಳ ಎಡೆಯಲ್ಲಿ ಹಳೇ ಕುರ್ಚಿಯ ಬದಿಯಲ್ಲಿ ಕರಿಯ ತಾಯಿ ಎಳೆಯ ಮೂರು ಜೀವಗಳನ್ನು ಹೊಟ್ಟೆಯ ಮೇಲೆ ಏರಿಳಿಸಿಕೊಂಡು ಆಬ್ ಮಸಲ್ಸ್ ವರ್ಕೌಟ್ ಮಾಡುತ್ತಿದ್ದಳು. ಹಸಿ ಹಸಿ ಬಾಣಂತಿಯ ಫಿಟ್‌ನೆಸ್ ಮನಸಿಗೆ ಅಚ್ಚರಿ ಪಡುತ್ತಾ ನೋಡುತ್ತಿದ್ದೆ. ನನ್ನಂಥ ಉರುಟುರುಟಾದ ಫಿಟ್‌ನೆಸ್ ಟ್ರೈನರನ್ನು ಜನ್ಮದಲ್ಲೇ ಕಂಡಿರದ ಕುನ್ನಿ ಕಣ್ಣು ಪಿಳಿಪಿಳಿಗೊಳಿಸಿ ಗುರುಗುಟ್ಟಿದಳು. ಹೇಳಿ

ಕೇಳಿ ಬೀದಿನಾಯಿ. ಹೇಗೋ ಏನೋ ಗೊತ್ತಿಲ್ಲ. ಅಟ್ಟಿಸಿಕೊಂಡು ಬಂದರೆ ತಪ್ಪಿಸಿಕೊಂಡು ಓಡಲಾರದಷ್ಟು ರಣಹೇಡಿ ನಾನು. ಇವಳ ಸಹವಾಸ ಕಷ್ಟ ಎನಿಸಿತು.

ಆದರೂ, ಮೂರೂಮುಕ್ಕಾಲಡಿ ದೂರದಲ್ಲಿ ಮುರಿದ ಟೈರ್ ಬುಟ್ಟಿಯಲ್ಲಿ ಮುಲುಗುಡುತ್ತಿದ್ದ ಮೂರು ಎಳಸುಗಳ ದನಿ ನನ್ನನ್ನು ಸುಮ್ಮನಿರಗೊಡಲಿಲ್ಲ. ಮೆಲ್ಲಗೆ ಆ ಬುಟ್ಟಿಯನ್ನೆತ್ತಿಕೊಂಡೆ. ಅಮ್ಮನ ದಮ್ಮಿಲ್ಲ (ಅವಳಿಗೆ ನನ್ನ ಸಾಹಸಕೃತ್ಯ ಕಾಣುತ್ತಿರಲಿಲ್ಲ). ಟ್ಯಾಂಕಿಯನ್ನು ಬಳಸಿಕೊಂಡು ಈಚೆ ಬಂದು ಇವಳಿಂದ ಎರಡೇ ಅಡಿ ದೂರದಲ್ಲಿ ನಿಂತೆ. ಬುಟ್ಟಿಯೊಳಗೆ ಬೊಮ್ಮಟೆಗಳು ಹರಿದಾಡುತ್ತಿದ್ದವು. ಈ ತಾಯಿಯೆಲ್ಲಿ ಕಾಳಿಯಾಗುತ್ತಾಳೋ ಭಯ ನನಗೆ. ಬುಟ್ಟಿಯನ್ನು ಜಾಗ್ರತೆಯಾಗಿ ಅವಳ ಹೊಟ್ಟೆಯ ಹತ್ತಿರವೇ ಬಗ್ಗಿಸಿ ಹಿಡಿದೆ. ಥಟ್ಟನೆ ತಲೆಯೆತ್ತಿದಳು. ಕೈ ನಡುಗಿ ಬುಟ್ಟಿ ಜಾರುವುದರಲ್ಲಿತ್ತು, ಹೇಗೋ ಸಂಭಾಳಿಸಿಕೊಂಡೆ. ಇನ್ನೊಂದು ಕೈಯಿಂದಲೂ ಬುಟ್ಟಿಯನ್ನು ಗಟ್ಟಿಯಾಗಿ ಆಧರಿಸಿ ಹಿಡಿದೆ. ಎತ್ತಿದ ತಲೆ ಸರ್ರನೆ ಬುಟ್ಟಿಯ ಒಂದು ಬದಿಗೆ ತಿರುಗಿ ಗಬಕ್ಕನೆ ಅದನ್ನು ಬಾಯಲ್ಲಿ ಕಚ್ಚಿಕೊಂಡಿತು. ನನ್ನ ಎದೆಯಲ್ಲಿ ಡಮರುಗವೇ. ಹಲ್ಲುಗಳ ಬಾಯಿಂದ ನನ್ನ ಕೈಗೆ ಕೆಲವೇ ಸೆಂಟಿಮೀಟರ್. ಅವಳ ತಾಳ್ಮೆಯೋ, ನನ್ನ ಸಹನೆಯೋ? ಅಂತೂ ಮೂರೂ ಮರಿಗಳು ಬುಟ್ಟಿಯಿಂದ ಹೊಟ್ಟೆಗೆ ಇಳಿದವು. ಬುಟ್ಟಿಯಿಂದ ಹಲ್ಲುಗಳ ಹಿಡಿತ ತಪ್ಪಿಸುವ ಪ್ರಯತ್ನ ಮಾಡದೆಯೇ ನಾನು ಜಾರಿಕೊಂಡೆ. ಮತ್ತೆ ಅರ್ಧ ಘಂಟೆಯ ನಂತರ ಹೋಗಿ ಬುಟ್ಟಿಯನ್ನೆತ್ತಿಕೊಂಡೆ. ಸದ್ದಿಲ್ಲದೆ ನನ್ನ ಕಡೆ ಪಿಳಿಪಿಳಿ ಮಾಡಿದಳು, ಆರೂ ಮರಿಗಳನ್ನು ನಾಲ್ಕು ಕಾಲುಗಳ ನಡುವೆ ಸೇರಿಸಿಕೊಂಡು. ಆ ರಾತ್ರಿ ಅಲ್ಲಿಂದ ಹೊಮ್ಮುತ್ತಿದ್ದ ವಿವಿಧ ಸ್ಥಾಯಿ ಲಯಗಳ ಸಂಗೀತ ಮತ್ತು ಸರ್ವಗಂಧ ಮಿಶ್ರಿತ ಸುಗಂಧ ಘಮಕ್ಕೆ ನಮ್ಮ ಕೋಣೆಯಲ್ಲಿ ನಮಗೆ ಮಲಗಲಾಗಲಿಲ್ಲ.

ಮರದಿನ ಶ್ರೀಕೃಷ್ಣ ಜನ್ಮಾಷ್ಟಮಿ. ಬೆಳಗ್ಗೆ ಎದ್ದು ಈ ಮಹಾತಾಯಿಯ ದರ್ಶನ ಮಾಡಿದೆವು. ಅವಳ ಹೊಟ್ಟೆಯ ಬದಿಗೆ, ಸಾಲುಮೊಲೆಗೆ ಬಾಯಿಯಿಟ್ಟು ಒಂದರ ಮೇಲೊಂದು ಅಮರಿಕೊಂಡು ಮುಲುಗುಡುತ್ತಿದ್ದವು ಏಳು ಪಿಳ್ಳೆಗಳು (ನಿನ್ನೆ ಮುಸ್ಸಂಜೆಯ ನಂತರದ ಹೊಸ ಸೇರ್ಪಡೆಯೊಂದು). ಮೂರು ಬಿಳಿ. ಮತ್ತೆ ನಾಲ್ಕು ಕಪ್ಪು-ಬಿಳಿ ಮಿಶ್ರ. ಇವಳೂ ಕಪ್ಪು-ಬಿಳಿ ಮಿಶ್ರಣದವಳೇ. ಬೆನ್ನೆಲ್ಲ ಕಪ್ಪು. ನಾಲ್ಕೂ ಕಾಲತುದಿಗಳು, ಬಾಲದ ತುದಿ, ಕುತ್ತಿಗೆಯ ಕೆಳಭಾಗ, ಎದೆ- ಎಲ್ಲ ಬಿಳಿ. ಮಧ್ಯಾಹ್ನದವರೆಗಿನ ಸಮಯದಲ್ಲಿ ಪದೇ ಪದೇ ಇಣುಕಿ ಇಣುಕಿ ನಮ್ಮ ಮುಖ ಪರಿಚಯ ಮಾಡಿಕೊಟ್ಟೆವು.

ಹಸಿಹಸಿ ಬಾಣಂತಿ ಈ ಪೀಚಲು ನಾಯಿ ಅಲ್ಲಿಂದೆದ್ದು ಹೋದದ್ದನ್ನೇ ಕಾಣದ ನಾವು ಅದರ ಹೊಟ್ಟೆಯ ಬಗ್ಗೆ ಚಿಂತಿಸಿದೆವು. ನಮ್ಮ ಗಂಟಲಲ್ಲಿ ಅನ್ನ ಸರಾಗವಾಗಿ ಇಳಿಯಲಿಲ್ಲ. ಆದರೆ ಊರಿನಿಂದ ಕಟ್ಟುನಿಟ್ಟಿನ ಆದೇಶ ಬಂದಿತ್ತು- 'ತಾನಾಗಿ ಮನೆಗೆ ಬಂದ ನಾಯಿಗೆ ಊಟ ಹಾಕಬಾರದು (ನಾವಾಗಿ ತಂದ ನಾಯಿಗೆ ಮಾತ್ರ ಹಾಕಬಹುದು). ಹಾಗೆ 'ಬಂದ ನಾಯಿಗೆ ಅನ್ನ ಹಾಕಿದರೆ ಬೊಜ್ಜದೂಟ ತಿಂದು ಹೋಗುತ್ತದೆ'. ಆದ್ದರಿಂದ ಬಿಲ್‌ಕುಲ್

ತಿನ್ಲಿಕ್ಕೆ ಏನೂ ಹಾಕಬೇಡಿ.' ಇಂಥ ಕಟ್ಟೆಚ್ಚರ ಮೀರುವ ಪ್ರಯತ್ನ ಮಾಡಲಿಲ್ಲ (ಎರಡೂ ಮನೆಗಳಲ್ಲಿ ೬೦ ದಾಟಿದ ಹಿರಿಯರು ಇರುವಾಗ ಈ ಮಾತನ್ನು ಕಡೆಗಣಿಸುವ ಮನಸ್ಸು ಬರಲಿಲ್ಲ; ಹಾಗೆ ಮಾಡಿ ಅವರನ್ನು ನೋಯಿಸುವ ಉದ್ದೇಶವಂತೂ ಮೊದಲೇ ಇಲ್ಲ). ತೆಪ್ಪಗಿದ್ದೆವು; ತಪ್ಪದೇ ಪದೇ ಪದೇ ನೋಡುತ್ತಿದ್ದೆವು.

ಮರಿಗಳು ತೆವಳಿಕೊಂಡು ಅತ್ತಿತ್ತ ಸರಿದು ಅಮ್ಮನಿಂದ ದೂರ ಹೋಗದಂತೆ ಟ್ಯಾಂಕಿ-ಗೋಡೆಗಳ ನಡುವಿನ ಸಂದಿಯ ಒಂದು ಕೊನೆಯಲ್ಲಿ ದಪ್ಪದ ಪ್ಲಾಸ್ಟಿಕ್ ಹಾಳೆಯನ್ನು ಅದೇ ಹಳೇ ಕುರ್ಚಿಗೆ ಒರಗಿಸಿಟ್ಟು ತಾತ್ಕಾಲಿಕ ತಡೆಗೋಡೆ ಕಲ್ಪಿಸಿದೆ. ಅದರ ಒಂದು ಮೂಲೆಯಲ್ಲಿ ಉಳಿದುಕೊಂಡ ಬಿರುಕಿಗೆ ಇಟ್ಟಿಗೆಯ ತುಂಡೊಂದನ್ನು ಕೂರಿಸಿದೆ. ಇಷ್ಟರಲ್ಲೇ ಇವುಗಳ ನೆತ್ತರು, ಹೊಲಸಿನ ವಾಸನೆ ನಮ್ಮ ಕೋಣೆಯನ್ನು ಸಂಪೂರ್ಣ ಆವರಿಸಿಕೊಂಡು ನಡುಮನೆಗೂ ಹಬ್ಬುತ್ತಿತ್ತು. ಅದನ್ನೂ ಕಡೆಗಣಿಸಿ, ಸಂಜೆಗೆ ನಾವಿಬ್ಬರೂ ಊರಿಗೆ ಹೋದೆವು. ಸರ್ವಜೀವರಕ್ಷಕನಾದ ಜಗದೊಡೆಯ ಶ್ರೀಕೃಷ್ಣನಿಗೆ ಸಂಸಾರದ ಹಿರಿಕಿರಿಯರೊಡನೆ ಅರ್ಘ್ಯವೆರೆದೆವು. ನಮ್ಮ ಹಿತ್ತಲಲ್ಲಿ ಮಿಸುಕಾಡುತ್ತಿರುವ ಏಳು ಎಳೆ ಜೀವಗಳನ್ನೂ ಅವುಗಳ ಹೆತ್ತಮ್ಮನನ್ನೂ ನೀನೇ ಕಾಪಾಡಪ್ಪಾ ಎಂದಿತು ಮನಸ್ಸು.

ಅದರ ಮಾರನೇ ದಿನ, ಸೆಪ್ಟೆಂಬರ್ ಎರಡನೇ ತಾರೀಕು, ಬೆಳಗ್ಗೆ ಮನೆಗೆ ಹಿಂದಿರುಗಿದವರೇ ಹಿತ್ತಲ ಬಾಗಿಲ ಹೊರಗೆ ಹೋಗಿ ಸಂದಿಯಲ್ಲಿ ಇಣುಕಿದಾಗ ತಾಯಿ ಆರು ಮರಿಗಳನ್ನು ನಾಲ್ಕು ಕಾಲುಗಳ ನಡುವೆ ಇರುಕಿಕೊಂಡು ಮಲಗಿದ್ದಾಳೆ. ಒಂದು ಬಿಳಿ ಮರಿ ಮಾತ್ರ ಗೋಡೆ ಬದಿಯಲ್ಲಿ ಕುರ್ಚಿಸಂದಿಯ ತಡೆಗೋಡೆಯ ಮೂಲೆಯ ಇಟ್ಟಿಗೆಯ ಬುಡದಲ್ಲಿತ್ತು. ಯಾಕೋ ಸರಿದಾಡುತ್ತಿಲ್ಲ, ಉಸಿರಾಡುತ್ತಿಲ್ಲ ಅನ್ನಿಸಿ ಮತ್ತೆ ಮತ್ತೆ ನೋಡಿದಾಗ ಏಳರಲ್ಲಿ ಇಳಿಮುಖವಾದದ್ದು ಖಚಿತವಾಯ್ತು. ಮನಸ್ಸು ಮುದುಡಿತು. ನಡೆಸಬೇಕಾದ ನಿತ್ಯಕಾರ್ಯಗಳು ಸಾಗಲೇಬೇಕಲ್ಲ. ಇಲ್ಲೊಂದು ಮದುವೆಗೆ ಹಾಜರಿ ಕೊಡಬೇಕಿತ್ತು, ಕೊಟ್ಟೆವು. ಅಂದೇ ರಾತ್ರೆ ಹೊರಟು ಬೆಂಗಳೂರಿಗೆ ಹೋಗಿ ಮರುದಿನ ಅಲ್ಲಿ ಇನ್ನೊಂದು ಮದುವೆಯಲ್ಲಿ ಅಕ್ಷತೆ ಹಾಕಬೇಕಿತ್ತು. ಅದೂ ಆಯ್ತು.

ಅದಕ್ಕೂ ಮರುದಿನ ಬೆಳಗ್ಗೆ ಮನೆಗೆ ಬಂದಿಳಿದೆ (ಬೆಂಗಳೂರಿಗೆ ಇವರು ಬಂದಿರಲಿಲ್ಲ). ಆರು ಮರಿಗಳ ಕುಯ್ಞ್ ಕುಯ್ಞ್ ರಾಗ. ಹೊರಗೆ ತಲೆಹಾಕಿದರೆ ಈ ಕಪ್ಪಮ್ಮನ ಗುರ್ರ್...ಗುಟ್ಟುವಿಕೆ. ಆಗಲೇ ನೆನಪಾಗಿದ್ದು ಏಳನೇ ಮರಿಯದ್ದು. ಕೇಳಿದೆ ಇವರನ್ನು ಏನಾಯ್ತೆಂದು...

'ನೀನು ನಂಬ್ಲಿಕ್ಕಿಲ್ಲ. ಈ ಅಮ್ಮ ಎಂತ ಮಾಡಿದ್ದು ಗೊತ್ತುಂಟಾ? ನಿನ್ನೆ ಬೆಳಿಗ್ಗೆ ಕೆಟ್ಟ ನಾತ ಬರ್ತಿತ್ತು. ಆ ಮರಿ ಸತ್ತದ್ದು ಗ್ಯಾರಂಟಿ ಆಯ್ತು. ಅದನ್ನು ಹೇಗಾದ್ರೂ ಮೆಲ್ಲ ಕೋಲಿಂದ ಎಳ್ದು ತೆಗ್ದು, ತೆಂಗಿನ ಬುಡದಲ್ಲಿ ಹುಗಿವಾ ಅಂತ ಪ್ಲಾಸ್ಟಿಕ್ ಹಾಳೆ ಸರಿಸಿ ಇಟ್ಟಿಗೆ ಎಳ್ದೆ ನೋಡು... ಅವು ಗುರ್ರ್ ಮಾಡ್ತಿದ್ದವು ತಕ್ಷಣ ಗಬಕ್ ಅಂತ ಬಾಯಿ ಹಾಕಿ ಅದನ್ನು

ಎತ್ತಿಕೊಂಡು ಹೋಗಿ ಈ ಬದೀದ್ದಲ್ಲ, ಅದ್ರ ಆಚೆ ಕಾಂಪೌಂಡಿಗೆ ಹೋಗಿ ಹತ್ತೇ ನಿಮಿಷದಲ್ಲಿ ವಾಪಾಸ್ ಬಂದು ಇಲ್ಲೇ ಮಲಗಿದ್ದಾಳೆ. ಇಟ್ಟಿಗೆ ಸರಿಸಿದ ಎರಡೇ ಸೆಕೆಂಡಿಗೆ ಸತ್ತ ಮರಿಯನ್ನು ಎತ್ತಿಕೊಂಡು ಹೇಗೆ ಹೋಗಿದಾಳಂತ ಇಲ್ಲ. ನಂಗೆ ಶಾಕ್!...' ಅವರ ಕಥನದಲ್ಲಿ ಅವರಿಗಾದ ಶಾಕಿನ ಗೋಚರಾಂಶ ನನಗೂ ಶಾಕ್ ಕೊಟ್ಟಿತು.

'ನಾಯಿ' ಅಂದ್ರೇನೇ ದೂರ ನಿಲ್ತಿದ್ದ ಮನುಷ್ಯ, ಆ ಸತ್ತ ಮರಿಯನ್ನು ಅದರ ಅಮ್ಮನ ಸಮ್ಮುಖದಲ್ಲೇ ಎಳೆದು ಹಾಕುವ ಅಪಾಯಕಾರಿ ಕೆಲಸಕ್ಕೆ ಕೈ ಹಾಕಬೇಕಾದ್ರೆ ಆ ವಾಸನೆ ಹೇಗಿದ್ದಿರಬಹುದೆನ್ನುವ ಕಲ್ಪನೆ ಮಾಡಿಕೊಂಡೆ. ಪಾಪ, ಅದೇ ವಾಸನೆಯಲ್ಲಿ ಮೊನ್ನೆ ರಾತ್ರೆಯಿಡೀ ಇಲ್ಲೇ ಇದ್ದರಲ್ಲ, ಅನ್ನಿಸಿತು. ಈ ಮರಿಗಳು ಸ್ವಲ್ಪ ಓಡಾಡುವ ಹಾಗಾದಾಗ, ಬಹುಶಃ ಮೂರು-ನಾಲ್ಕು ವಾರಗಳಾದಾಗ ಇವುಗಳನ್ನೂ ಈ ಅಮ್ಮನನ್ನೂ ಇಲ್ಲಿಂದ ಓಡಿಸಬೇಕು ಅಂತ ಲೆಕ್ಕಾಚಾರ ಹಾಕಿದೆ. ಹತ್ತು ಹನ್ನೆರಡನೇ ದಿನಕ್ಕೆ ಕಣ್ಣು ತೆರೆದ ಈ ಎಳೇ ಬೊಮ್ಮಟೆಗಳ ಚಿತ್ರ ಇರಲೆಂದು ಅನ್ನಿಸಿದರೂ ಎರಡೂವರೆ ವಾರಗಳಾದ ಮೇಲಷ್ಟೇ ಕ್ಯಾಮೆರಾ ತೆರೆದೆ. ನಮ್ಮನ್ನು ಕಂಡಾಗೆಲ್ಲ ಗುರ್ರ್ ಮಾಡುವ ನಾಯಮ್ಮನ ಕೆಂಗಣ್ಣನ್ನೂ ಕಡೆಗಣಿಸಿ ಕೆಲವಾರು ಚಿತ್ರ ಹೊಡೆದೆ (ಇವಳನ್ನೂ ಮರಿಗಳನ್ನೂ ಹೊಡೆಯುವ ಇಚ್ಛೆಯೇ ಇಲ್ಲವಲ್ಲ).

*

ಮೂರು ವಾರ ಕಳೆದಾಗ ಆರೂ ಮರಿಗಳು ಓಡಾಡಲು ಶುರುಮಾಡಿದ್ದೇನೋ ಸರಿ. ಅವುಗಳು ಸಿಕ್ಕಸಿಕ್ಕಲ್ಲೆಲ್ಲ ತಿರುಗಾಡಿ ಹೊಲಸು ಮಾಡದ ಹಾಗೆ ಅಲ್ಲಲ್ಲಿ ಪ್ಲಾಸ್ಟಿಕ್ ಹಾಳೆಗಳ ಬೇಲಿ ನಿರ್ಮಿಸಿದ್ದೆ. ಅಷ್ಟರಲ್ಲಿ ಒಂದು ಬೆಳಗ್ಗೆ, ನಾನು ನೋಡುತ್ತಿದ್ದ ಹಾಗೆಯೇ ನಮ್ಮ ಸಂಪಿನ ಮೇಲೆಯೇ, ಅದರ ಮುಚ್ಚಳದ ಬದಿಯಲ್ಲೇ ಬಂದು ನಿಂತು ಏನನ್ನೋ ಕಕ್ಕಿಕೊಂಡು 'ಕಯ್ಞ್ಞ...ಕಯ್ಞ್ಞ... ಕಯ್ಞ್ಞ...ಕಯ್ಞ್ಞ...' ರಾಗವಾಗಿ ಮರಿಗಳನ್ನು ಕರೆಯತೊಡಗಿತು ಕಪ್ಪಮ್ಮ. ನನ್ನ ಪಿತ್ತ ನೆತ್ತಿಗೇರಿತು. ನಿಧಾನವಾಗಿ ಆಚೆ ಬದಿಗೆ ಹೋಗಿ, ಒಂದೆರಡು ಕಲ್ಲುಗಳನ್ನೆತ್ತಿಕೊಂಡು ಬೀಸಿ ಎಸೆದೆ ಅಮ್ಮನ ಮೇಲೆ. ಒಂದೂ ತಾಗದಿದ್ದರೂ ಅನಿರೀಕ್ಷಿತ ಬೀಸುವಿಕೆಯ ರಭಸದಿಂದ ಭಯವಾಗಿ ಓಡಿದಳು. ಸಂಪಿನ ಮುಚ್ಚಳಕ್ಕೆ ಹೊಲಸು ಸೋಕದಂತೆ ಜಾಗ್ರತೆಯಾಗಿ ಎಲ್ಲವನ್ನೂ ಗುಡಿಸಿ ಸ್ವಚ್ಛ ಮಾಡಿ ಫಿನಾಯಿಲ್ ಹಾಕಿ ತೊಳೆದೆ. ಇವೆಲ್ಲ ಬೆಳಗ್ಗೆ ಎಂಟೂವರೆಯ ಸುಮಾರಿಗೆ.

ಮತ್ತೆ ಹತ್ತು ಗಂಟೆಯ ಹೊತ್ತಿಗೆ ನಮ್ಮ ಮನೆಗೆಲಸಕ್ಕೆ ಜಾಜಿ ಬರುವಾಗ ಮತ್ತೊಮ್ಮೆ ಈ ಅಮ್ಮ ಸಂಪಿನ ಮೇಲೆ ನಿಂತಿತ್ತು ಎಂದಳವಳು. ನನ್ನ ತಾಳ್ಮೆಯ ಮಿತಿ ಮೀರಿತು. ಪುನಃ ಕಲ್ಲುಸೇವೆಯ ಪ್ರಯತ್ನ ಮಾಡಿದೆ. ಮರಿಗಳೆಲ್ಲ ಹದಿನೆಂಟಿಂಚುxನಾಲ್ಕಡಿ ಜಾಗದಲ್ಲಿ ಮೊರೆಯಿಡುತ್ತಿದ್ದವು ಬಿಡುಗಡೆಗಾಗಿ. ಅವುಗಳು ಅಮ್ಮನಂತೆ ಈ ಪ್ಲಾಸ್ಟಿಕ್ ಗೋಡೆಗಳನ್ನು

ಹಾರಿ ಬರಲಾಗುತ್ತಿರಲಿಲ್ಲ. ನಾನೊಂದು ನಿರ್ಧಾರಕ್ಕೆ ಬಂದೆ. ಮರಿಗಳನ್ನೆಲ್ಲ ಹಳೇ ಬಟ್ಟೆಯಲ್ಲಿ ಹಿಡಿದು ಮೊದಲ ಮೂರು ಮರಿಗಳು ಹುಟ್ಟಿದ ಅದೇ ಟೈರ್ ಬುಟ್ಟಿಯಲ್ಲಿಟ್ಟು ನಮ್ಮ ಗೇಟಿನ ಹೊರಗೆ ನೆರಳಿನಲ್ಲಿ ಇಟ್ಟು ಬಂದೆ. ಎಲ್ಲ ಪ್ಲಾಸ್ಟಿಕ್ ಹಾಳೆಗಳನ್ನೂ ತೆಗೆದು ಎಲ್ಲ ಕಡೆ ಪಂಪಿನಿಂದಲೇ ನೀರು ಬಿಟ್ಟುಕೊಂಡು ಬ್ರಶ್ ಹಾಕಿ ಉಜ್ಜಿ ಉಜ್ಜಿ ಗುಡಿಸಿ (ಅವುಗಳ ಮೂರು ವಾರಗಳ ಹೊಲಸು ನೆಲಕ್ಕೆ ಅಂಟಿಹೋಗಿತ್ತು), ಶುದ್ಧಗೊಳಿಸಿ, ಮತ್ತೆ ಫಿನಾಯಿಲ್ ಹಾಕಿ ಗುಡಿಸಿದೆ. ಮನೆಯೊಳಗೆಯೂ ಸೆಂಟ್ ಸೇವೆ ಆಯ್ತು.

ಒಮ್ಮೆ ನನ್ನ ಬೀಸಾಟಕ್ಕೆ ಓಡಿದ್ದ 'ಗಿಡ್ಡಿ' (ಕುಳ್ಳಗೆ ಪುಟಾಣಿ ಇದ್ದ ಈ ನಾಯಮ್ಮನಿಗೆ ನಾನಿತ್ತ ನಾಮಧೇಯ) ಈಗ ಮನೆಗೆ ಸುತ್ತು ಸುತ್ತು ಬಂದು ಮರಿಗಳನ್ನು ಕರೀಲಿಕ್ಕೆ ಶುರುಮಾಡಿದಳು. ಗೇಟಿನ ಹೊರಗಿನಿಂದ ಅವುಗಳ ಮಾರುತ್ತರ ಇವಳಿಗೆ ಕೇಳುತ್ತಲೇ ಇರಲಿಲ್ಲ. ಇವಳ ಗಲಾಟೆಯೇ ಜೋರಾಗಿತ್ತು. ಮತ್ತೊಮ್ಮೆ ಕಲ್ಲಿನ ಬೆದರಿಕೆ ಹಾಕಿ ಓಡಿಸಿದೆ. ಈ ಗೌಜಿಗೆ ಹೊರಗೆ ಬಂದ ಇವರು ಮತ್ತು ಮಗರಾಯ ನನ್ನನ್ನೇ ಶಪಿಸಿದರು. ಮರಿಗಳನ್ನು ಪುನಃ ಒಳಗೆ ತರಲು ಆಜ್ಞೆ ಆಯ್ತು. 'ಅವುಗಳೇನಾದ್ರೂ ಹರಿದಾಡಿಕೊಂಡು ಬುಟ್ಟಿಯಿಂದ ಹೊರಗೆ ರಸ್ತೆಗೆ ಬಂದು ವಾಹನದಡಿಗೆ ಸಿಕ್ಕಿ ಸತ್ರೆ ನೀವೇ ಜವಾಬ್ದಾರಿ, ನೋಡಿ!' ಅಂದ ಮಗ. 'ಇಮೋಷನಲ್ ಬ್ಲ್ಯಾಕ್‌ಮೇಲ್' ಕೆಲ್ಸ ಮಾಡಿತು. ಬುಟ್ಟಿ ಹೋದ ಹಾಗೇ ಒಳಗೆ ಬಂತು.

ಆರೂ ಮರಿಗಳೂ ಸ್ವಸ್ಥವಾಗಿದ್ದವು. ಗುಂಡುಗುಂಡಾಗಿ ಟುಣುಟುಣು ಓಡಾಡುವ ಇವುಗಳಿಗೆ ವ್ಯವಸ್ಥಿತ ಜಾಗ ಮಾಡಿಟ್ಟೆ. ಸಂಪಿನ ಮೇಲೆ ಬಾರದಂತೆ ದಪ್ಪ ಪ್ಲಾಸ್ಟಿಕ್ ಹಾಳೆಗಳನ್ನು ಜೋಡಿಸಿ ತಡೆಗೋಡೆ ಕಟ್ಟಿದೆ. ಅಂದು ರಾತ್ರೆ ಉಚ್ಚಿ-ಚಿಚ್ಚಿಗೆ ಹೊರಗೆ ಮಣ್ಣಿಗೆ ಹೋಗಿ ಮತ್ತೆ ಮೇಲೆ ಬರಲಾಗದೆ ರಾತ್ರೆಯಿಡೀ ಗೋಳಾಡಿದ ಒಂದು ಮರಿ ಮರುದಿನ ಬೆಳಗ್ಗಿನ ಹೊತ್ತಿಗೆ ತನ್ನ ಕೆಲಸಕ್ಕಾಗಿ ಮಣ್ಣಿಗಿಳಿದ ಇನ್ನೊಂದು ಮರಿಯನ್ನು ಮೆಟ್ಟಲಾಗಿ ಉಪಯೋಗಿಸಿಕೊಂಡ ರೀತಿ ನಗು, ಅಚ್ಚರಿ ಎರಡೂ ತರಿಸಿತು. ಸಂಜೆಗೆ ಮತ್ತೆರಡು ಮರಿಗಳು ಕೆಳಗಿನಿಂದ ಕಿರುಚಾಡುತ್ತಿದ್ದರೆ 'ಗಿಡ್ಡಿ' ಮೇಲೆಯೇ ಕೂತು ಸೂಪರ್‌ವೈಸಿಂಗ್ ಮಾಡುತ್ತಿದ್ದಳು. ಮರಿಗಳು ಮೇಲೆ ಹತ್ತಲಿಕ್ಕೆ ಸುಲಭ ಆಗಲೀಂತ ಇಟ್ಟಿಗೆ ಇಡಲು ಹೋದ ಇವರು ಗಿಡ್ಡಿಯ ಅಬ್ಬರಕ್ಕೆ ಹಿಮ್ಮೆಟ್ಟಿ ಹುಲ್ಲಿನಲ್ಲಿ ಜಾರಿದ್ದರು. ಬಂದ ನಗುವನ್ನು ಹೇಗೋ ತಡೆದುಕೊಂಡಿದ್ದೆ. ಜೋರಾಗಿ ಸಾಗುತ್ತಿದ್ದ 'ಕಯ್ಯ್ಞ... ಕಯ್ಯ್ಞ...' ಜುಗಲ್‌ಬಂದಿ ನಮ್ಮೆಲ್ಲರ ಮನಸ್ಸನ್ನು ಕಲಕುತ್ತಿದ್ದವು. ಅದೆಲ್ಲದರ ನಡುವೆಯೇ ಅದೆಷ್ಟೋ ಹೊತ್ತಿಗೆ ಮಗರಾಯ ಗೋಡೆಯ ಬದಿಯಲ್ಲೇ ನುಸುಳಿ ಮರಿಗಳ ಬುಡದಲ್ಲೇ ಒಂದು ಇಟ್ಟಿಗೆ ದೂಡಿದ. ಗಿಡ್ಡಿ ಅವನ ಮೇಲೆ ಹಾರಿ ಬರುವ ಮೊದಲೇ ಅವನು ಅಲ್ಲಿಂದ ಜಾರಿಕೊಂಡ.

ಅದರ ಮಾರನೇ ದಿನ ಈ ಚೌಕಟ್ಟಿನ ಇನ್ನೊಂದು ಬದಿಯಿಂದಲೂ 'ನನ್ನನ್ನೆತ್ತಿಕೊಳ್ಳಿ' ಕರೆ ಕಿವಿ ಕೊರೆಯಿತು. ಅಲ್ಲಿಗೂ ಬುಡಕ್ಕನೆ ಇಳಿದು ಮೇಲೆ ಹತ್ತಲಾಗದ ಕುನ್ನಿಗಳು ಮತ್ತೆ

ಇತ್ತ ಬರೋದಿಕ್ಕೆ ಮೆಟ್ಟಿಲು ಮೆಟ್ಟಿಲಾಗಿ ಮೂರು ಹಂತದಲ್ಲಿ ಇಟ್ಟಿಗೆಗಳನ್ನು ಜೋಡಿಸಿದೆ. ನಮ್ಮ ಈ ಎಲ್ಲ ಕೆಲಸಗಳನ್ನು ನೋಡಿ ಪಕ್ಕದ ಮನೆಯವರು ನಗುತ್ತಿದ್ದರು. 'ಈ ಮರಿಗಳು ನಿಮ್ಮ ಓಣಿತ್ತಲಲ್ಲಿ ಹುಟ್ಟೋದಿಕ್ಕೆ ಭಾರೀ ಪುಣ್ಯ ಮಾಡಿದಾವೆ, ಅಕ್ಕ. ಇಲ್ಲಾಂದ್ರೆ ಅವಕ್ಕೆ ಇಷ್ಟು ಚಂದದ ಜಾಗ ಎಲ್ಲಿ ಸಿಗ್ತಿತ್ತು!' ಎನ್ನುತ್ತಿದ್ರು. ದಿನವೂ ಬೆಳಗ್ಗೆದ್ದು, ಗಿಡ್ಡಿಯನ್ನು 'ಪೋ' ಅಂತ ಓಡಿಸಿ, ಮರಿಗಳನ್ನು ಬುಟ್ಟಿಯಲ್ಲಿಟ್ಟು ಅವುಗಳು ಇರುತ್ತಿದ್ದ ಆ ಜಾಗವನ್ನೆಲ್ಲ ನೀರು ಹಾಕಿ ಗುಡಿಸಿ ಫಿನಾಯಿಲ್ ಚಿಮುಕಿಸುತ್ತಿದ್ದೆ. ಇದರ ನಡುವೆ ಸಣ್ಣಗಾಗುತ್ತಿದ್ದ ಮರಿಗಳಿಗೆ ಒಂದು ದಿನ ತಟ್ಟೆಯಲ್ಲಿ ಹಾಲು ಹಾಕಿಟ್ಟೆ. ಎಲ್ಲ ಖಾಲಿ. ಮಧ್ಯಾಹ್ನ ಹಾಲನ್ನ ಖಾಲಿ. 'ನಾಮಕರಣ ಮಾಡ್ಲಿಲ್ವಾ?' ಕೇಳಿದ್ರು ಇನ್ನೊಬ್ಬ ನೆರೆಕರೆಯವರು. ಸುಮ್ಮನೇ ನಕ್ಕೆ. ದಿನಕ್ಕೆರಡು ಸಲ ಹಾಲನ್ನಸೇವೆ ಸರಾಗವಾಯ್ತು.

ನಾಲ್ಕು ವಾರಗಳಾದಾಗ, ಒಂದು ಬೆಳಗ್ಗೆ, ಇದ್ದದ್ದರಲ್ಲಿ ದಷ್ಟಪುಷ್ಟವಾಗಿದ್ದ ಬಿಳೀ ಹೆಣ್ಣುಮರಿಯೂ ಎಲ್ಲವುಗಳಿಗಿಂತ ಸಣ್ಣಗಿದ್ದ ಕರೀ ಗಂಡುಮರಿಯೂ ಕಾಣೆ! ನಮ್ಮನೆ ಮಕ್ಕಳೇ ಕಳೆದುಹೋದ ದುಗುಡ ಆತಂಕ. ಎರಡು ಕಾಂಪೌಂಡ್ ಆಚೆ ಗಿಡ್ಡಿ ಮತ್ತವಳ ಇನ್ನೆರಡು ಸ್ನೇಹಿತೆಯರ ವಾಸಸ್ಥಾನ ನಮಗೀಗಾಲೇ ಗೊತ್ತಾಗಿತ್ತು. ಅಲ್ಲಿಗೇ ಹೋಗಿರಬೇಕೆನ್ನುವುದು ನಮ್ಮ ಅನುಮಾನ. ಇವರು ಬೀದಿಯಲ್ಲಿ ಅತ್ತ ಕಡೆ ಹೋದಾಗ ಆ ಕಾಂಪೌಂಡಿನ ಗೋಡೆಯ ಬದಿಯಲ್ಲಿ ಹುಲ್ಲಿನ ನಡುವೆ ಕುಯ್ಯುಡುತ್ತಾ ಅಮ್ಮನ ಹಿಂದೆ ಓಡುತ್ತಿದ್ದ ಎರಡು ಬಾಲಗಳನ್ನು ಕಂಡು ಹಿಂದೆ ಬಂದರು. ಮತ್ತೆ ಸುಮ್ಮನಿದ್ದೆವು. ಅವು ಹಿಂದೆ ಬಂದೇ ಬರುತ್ತವೆಂದು ಪಕ್ಕದ ಮನೆಯವರ ನಂಬಿಕೆ. ಮಾರನೇ ಬೆಳಿಗ್ಗೆ ಅದು ನಿಜವಾಗಿತ್ತು. ಬೆಳಗಿನ ಪಾಲಿನ ಹಾಲು ಹಾಕಲು ಹೋದಾಗ, ಎದುರು ಬಂದು ಕಾಲಿನ ಮೇಲೆ ಹೊರಳಾಡಿ ಕುಣಿದಾಡಿ ಸುತ್ತುಸುತ್ತು ಓಡಾಡಿದವಳನ್ನು 'ಬೆಳ್ಳೀ' ಎಂದೆ. ಕಳ್ಳನ ಹಾಗೆ ಹಿಂದೆ ಹಿಂದೆ ನಿಲ್ಲುತ್ತಿದ್ದ ಸಣಕಲನನ್ನು 'ಬಂಟೂ' ಅಂದೆ. ಇನ್ನೊಬ್ಬ ಸಣಕಲ 'ಚಿಂಟೂ' ಆದ. ಇನ್ನೂ ಮೂವರಿಗೆ ನಾಮಕರಣ ಆಗಬೇಕಿತ್ತು.

ಅದಾಗಲೇ ಜಾಜಿ ತನ್ನ ನೆರೆಮನೆಯವರು ಎರಡು ಮರಿ ಬೇಕೆಂದಿದ್ದಾರೆ ಎಂದಿದ್ದಳು. 'ಇವತ್ತೇ ತಗೊಂಡು ಹೋಗು' ಎನ್ನುತ್ತಾ ಖಾಲಿ ಅಕ್ಕಿಚೀಲದಲ್ಲಿ ಒಂದು ಬಿಳೀ ಗಂಡು ಮರಿಯನ್ನೂ ಇನ್ನೊಂದು ಕಪ್ಪು-ಬಿಳಿ ಮಿಶ್ರಿತ ಗಂಡು ಮರಿಯನ್ನೂ ತುಂಬಿಸಿ ಕೊಟ್ಟೆ. ಹೆಸರಿಲ್ಲದವರಲ್ಲಿ ಇಬ್ಬರು ಗಂಡುಗಳೂ ಪರಕೀಯರಾದರು. ಇನ್ನೊಬ್ಬ ಹೆಣ್ಣು ಮರಿಗೆ ಹೆಸರಿರಲಿಲ್ಲ. ಅವಳೂ ಕಪ್ಪು-ಬಿಳಿ ಮಿಶ್ರಿತ ಚುರುಕುನ್ನಿ. ಕುತ್ತಿಗೆಯ ಸುತ್ತಲಿನ ಬಿಳಿಯಲ್ಲಿ ಕಪ್ಪು ಚುಕ್ಕಿಗಳಿದ್ದ ಅವಳನ್ನು 'ಚುಕ್ಕೀ' ಎಂದೆ. ನಾಮಕರಣ ಪ್ರಕ್ರಿಯೆ ಸಾಂಗವಾಯ್ತು.

ಮರುದಿನ ಕೆಲಸಕ್ಕೆ ಬಂದವಳನ್ನು ಕೇಳಿದೆ, 'ಜಾಜಿ, ಮರಿಗಳು ರಾತ್ರೆಯೆಲ್ಲ ಸಂಗೀತ ಸರಿಯಾಗಿ ಹಾಡಿದ್ದವಾ?' ಪೆಚ್ಚುಪೆಚ್ಚು ನಕ್ಕವಳು ಮತ್ತೆ ಜೋರಾಗಿ ನಕ್ಕಳು.

'ಯಾಕೆ ನಗು?'

'ಮರಿಗಳನ್ನು ನನ್ನ ನೆರೆಮನೆಗೆ ಕೊಂಡೋಗಲೇ ಇಲ್ಲ.'

'ಮತ್ತೆ?'

'ನಾಸಿಲ್ಲಿ ಬಸ್ಸಿಗೆ ಕಾಯುವಾಗಲೇ ನನ್ನ ಪಕ್ಕದಿರ ಕೂತವಳು ಚೀಲದಲ್ಲಿ ಅದೇನೊಂತ ಕೇಳಿದಳು. ನಾಯಿಮರಿ ಅಂದೆ. ನೋಡೋಣ ಅಂದಳು. ತೋರಿಸಿದೆ. ಗಂಡಾ ಹೆಣ್ಣಾ ಕೇಳಿದ್ಲು, ಗಂಡು ಅಂದೆ. ಚೀಲದಲ್ಲಿ ಇಣುಕಿ ನೋಡಿ ಮರಿಗಳು ಗುಂಡುಗುಂಡು ಮುದ್ದಾಗಿದ್ದಾವೆ ಅಂದ್ಲು. ಹೌದು, ನಮ್ಮ ಅಮ್ಮ ಅವಕ್ಕೆ ಸರಿಯಾಗಿ ಹಾಲನ್ನ ಹಾಕಿ ಸಾಕಿದ್ದಾರೆ ಅಂದೆ. ನನಗೆ ಕೊಡು ಅಂತ ಕೇಳಿ ಚೀಲ ತಗೊಂಡು ಅವಳೂರಿಗೆ ಹೋದ್ಲು. ನನ್ನ ನೆರೆಮನೆಯವರಿಗೆ ಇನ್ನು ನಾಯಿ ಬೇಡ ಅಂತೆ. ಸಿಮ್ಮ ಮರಿಗಳು ಪೆಬ್ರಿಗಲ್ಲ, ಪೆರಡೂರಿಗೆ ಹೋದ್ವು...' ಈಗ ಪೆದ್ದುಪೆದ್ದಾಗಿ ನಗುವ ಸರದಿ ನನ್ನದು.

ಇದನ್ನೆಲ್ಲ ಕೇಳಿಸಿಕೊಂಡ ಇವರು, 'ಅಷ್ಟು ಚಂದದ ಮರಿಗಳನ್ನು ನೀನು ಸುಮ್ಮನೇ ಕೊಟ್ಟದ್ದಾ? ಒಂದು ನೂರು ರುಪಾಯಿ ಆದ್ರೂ ವಸೂಲು ಮಾಡ್ಬೇಕಿತ್ತು' ಅಂದ್ರು.

'ಅಯ್ಯ! ಅದಕ್ಕೆಲ್ಲ ಎಂತ ದುಡ್ಡು? ನಾನೇನು ಇಲ್ಲಿ ದುಡ್ಡು ಕೊಟ್ಟು ತಗೊಂಡೋದ್ನಾ?' ಅಂತ ದೊಡ್ಡಸ್ತಿಕೆ ಮಾತಾಡಿದ್ಲು ಜಾಜಿ.

ಐದೂವರೆ ವಾರಗಳ ಮರಿಗಳು ಗುಂಡು ಗುಂಡು ಮುದ್ದಾಗಿದ್ದವು. ಚುರುಕಾಗಿದ್ದವು. ತೋಟದ ಕೆಲಸಗಳಲ್ಲಿ ಭಾಗಿಗಳಾಗುತ್ತಿದ್ದವು. ಗಿಡಗಳನ್ನು ನೆಡಲು (ಬೇಡವಾದಲ್ಲಿ) ಗುಂಡಿ ತೋಡುತ್ತಿದ್ದವು. ನೆಟ್ಟ ಗಿಡಗಳು ಬೇರುಬಿಟ್ಟಿವೆಯೋ ಅಂತ ಅಗೆದು ನೋಡುತ್ತಿದ್ದವು. ಮಣ್ಣಿನ ರುಚಿ, ಗೊಬ್ಬರದ ವಾಸನೆ ಪರೀಕ್ಷಿಸುತ್ತಿದ್ದವು. ಚಪ್ಪಲಿ ಕಚ್ಚುತ್ತದೆಯಾ ಅಂತ ಕಚ್ಚಿಯೇ ಟೆಸ್ಟ್ ಮಾಡುತ್ತಿದ್ದವು. ಮಗ ಮನೆಯಲ್ಲಿದ್ದರೆ ಸಂಜೆ ಹೊತ್ತು ಅವನ ಕಾಲುಗಳ ಜೊತೆ ಓಡುತ್ತಿದ್ದವು. ಸೊಗಸಾದ ಮುದ್ದಾದ ಸ್ಟ್ರೆಸ್ ರಿಲೀವರ್ಸ್. ಅಮ್ಮ ಗಿಡ್ಡಿ ಆಗೊಮ್ಮೆ ಈಗೊಮ್ಮೆ ಏನನ್ನೋ ತಿಂದು ತಂದು ನಮ್ಮ ಅಂಗಳದಲ್ಲೇ ಕಕ್ಕಿ ಮರಿಗಳನ್ನು ಕರೆದು ತಿನ್ನಿಸುತ್ತಿದ್ದಳು. ಅಂಥ ದಿನಗಳಲ್ಲಿ ಅವುಗಳಿಗೆ ಹಾಲನ್ನ ರುಚಿಸುತ್ತಿರಲಿಲ್ಲ. ಅಂಗಳದ ಆ ಜಾಗ ತೊಳೆದಿಟ್ಟ ಹಾಗೆ ಆಗುತ್ತಿತ್ತು. ಗಾಳಿ ಮಾತ್ರ... ಅವುಗಳಿಗೇ ಪ್ರೀತಿ.

ಇನ್ನೊಂದು ಬೆಳಗ್ಗೆ, ಗೇಟಿನ ಗ್ರಿಲ್ ನಡುವೆ ತೂರಿಕೊಂಡು ಬೆಳ್ಳಿ, ಚುಕ್ಕಿ, ಚಿಂಟೂ ರಸ್ತೆಗಿಳಿದರು. ಬೆನ್ನ ಹಿಂದೆಯೇ ಓಡಿದೆ. ಚಿಂಟೂ ಮತ್ತು ಚುಕ್ಕಿ ರಸ್ತೆಯಲ್ಲೇ ಕೈಗೆ ಸಿಕ್ಕಿದ್ರೆ ಬೆಳ್ಳಿ ಅವಳಮ್ಮನ ತೌರಿಗೇ ಹೋಗಿದ್ದಳು, ನಮ್ಮಿಂದ ಮೂರನೇ ಕಾಂಪೌಂಡ್ ಒಳಗೆ ರಾಜಾರೋಷವಾಗಿ ನುಗ್ಗಲಾಗದೆ ಅದರ ಗೇಟಿನಲ್ಲೇ ನಿಂತು ಬೆಳ್ಳಿಯನ್ನು ಕರೆದೇ ಕರೆದೆ. ನನ್ನ ಕೂಗಿಗೆ ಗಾಬರಿಯಾದ ಗಿಡ್ಡಿ ಅಲ್ಲಿಂದ ಹೊರಗೆ ಬಂದಾಗಲೇ ಅವಳ ಬೆಳ್ಳಿ ಬಾಲವೂ ಬಂತು. ಎತ್ತಿಕೊಂಡು ನಮ್ಮನೆಗೆ ಬಂದೆ. ಬೀದಿಯಲ್ಲಿ ಒಂದು ಸೀನ್. ಅದೇ ಸಂಜೆ ನಮ್ಮ ಎರಡೂ ಗೇಟುಗಳಿಗೂ ದಪ್ಪ ನೀಲಿ ಪ್ಲಾಸ್ಟಿಕ್ ಹಾಳೆಗಳ ಸ್ಕರ್ಟಿಂಗ್ ಹಾಕಲಾಯ್ತು.

ಆಮೇಲೊಂದು ದಿನ ಬೆಳಗ್ಗೆ ನಾವು ಏಳುವ ಹೊತ್ತಿಗೆ ವೆರಾಂಡದಲ್ಲಿ ನಮ್ಮ ಚಪ್ಪಲಿಗಳಲ್ಲಿ ಒಂದೊಂದು ಚಪ್ಪಲಿ ನಾಪತ್ತೆ. ಕಳ್ಳರ ಪರಿಚಯ ಮೊದಲೇ ಇತ್ತಲ್ಲ. ಹಿತ್ತಿಲು ಪೂರ್ತಿ ಹುಡುಕಿದಾಗ, ಒಂದು ಬದಿಯ ಹುಲ್ಲುರಾಶಿಯ ಎಡೆಯಲ್ಲಿ ಅರ್ಧ ಮಣ್ಣಿನಲ್ಲಿ ಹುದುಗಿ ಎರಡು ಚಪ್ಪಲಿಗಳೂ ಹಿಂದಿನ ತೆಂಗಿನ ಬುಡದಲ್ಲಿ ಮೂರನೆಯದೂ ಅವಶೇಷಗಳಾಗದೇ ಕಂಡುಬಂದವು. ಪರೀಕ್ಷೆಯ ಎಲ್ಲ ಗುರುತುಗಳೂ ಅವುಗಳ ಮೇಲಿದ್ದರೂ ಧರಿಸುವ ಸ್ಥಿತಿಯಲ್ಲೇ ಇದ್ದವಾದ್ದರಿಂದ ಅವೆಲ್ಲ ಮತ್ತೆ ವೆರಾಂಡ ಪ್ರವೇಶ ಪಡೆದವು. ಮರಿಗಳಿಗೆ ಮಾತ್ರ ಅಲ್ಲಿ ಪ್ರವೇಶ ನಿರ್ಬಂಧ ಹೇರಲಾಯಿತು, ನೀಲಿ ಪ್ಲಾಸ್ಟಿಕ್ ಸಂಪೂರ್ಣ ಸಹಕಾರ ನೀಡಿತು.

ಆರು ವಾರಗಳಾಗುವ ಹೊತ್ತಿಗೆ ಚಿಂಟೂ ಮತ್ತು ಬಂಟೂ ಮತ್ತೊಂದು ಮನೆಯ ಅಂಗಳದಲ್ಲಿ ಗಸ್ತು ಹೊಡೆಯಲು ರಫ್ತಾದರು. ನಮ್ಮನೆಯಲ್ಲಿ ಬೆಳ್ಳಿ-ಚುಕ್ಕಿ ಉಳಿದುಕೊಂಡರು. ಊರಿಂದ ಕಮೆಂಟ್ಸ್- 'ಅಯ್ಯೋ ಹೆಣ್ಣು ಮರಿಗಳನ್ನು ಯಾಕೆ ಇಟ್ಟುಕೊಂಡೆ? ಇನ್ನು ಅವುಗಳು ವರ್ಷವರ್ಷ ಮರಿಯಿಡುತ್ತವಲ್ಲ. ಯಾಕೆ ಬೇಕು ಅದೆಲ್ಲ ರಾಮಾಯಣ!' ಈ ಹೆಣ್ಣುಮರಿಗಳು ಮುಂದೆ ಮರಿ ಹಾಕದ ಹಾಗೆ ಮಾಡಬಹುದಲ್ಲ. ಇವು ನಮ್ಮನೆಯಲ್ಲಿರುದೇ ಒಳ್ಳೇದು. ನಾನು ಇವಕ್ಕೆ ಆಪರೇಶನ್ ಮಾಡಿಸ್ತೇನೆ. ಇನ್ನು ಎಂಟು-ಹತ್ತು ವರ್ಷಗಳಲ್ಲಿ, ಇವುಗಳ ಆರೆಂಟು ಮರಿಗಳು- ಅಂದ್ರೆ ಸುಮಾರು ನೂರಕ್ಕೂ ಮಿಕ್ಕಿ ಬೀದಿ ನಾಯಿಗಳು- ಬೀದಿಗೆ ಬರುದೇ ಇಲ್ಲ. ಈ ತರ್ಕ ಅವರಿಗೆಲ್ಲ ಒಪ್ಪಿಗೆಯಾಗಿದೆಯೋ ಇಲ್ಲವೋ ಗೊತ್ತಿಲ್ಲ, ಆದ್ರೆ ಸದ್ಯಕ್ಕೆ ಸುಮ್ಮನಾಗಿದ್ದಾರೆ.

ಈಗ ಬೆಳ್ಳಿ-ಚುಕ್ಕಿ ನಮ್ಮ ಸಂಸಾರದ ಎರಡು ಕಣ್ಣುಗಳು, ಕಿವಿಗಳು. ಗೇಟಿನ ಸದ್ದಾದರೆ ಕರೆದು ಹೇಳುತ್ತಾರೆ. ಬಂದವರ ಸುತ್ತಮುತ್ತ ಸುತ್ತಿ ಸ್ವಾಗತಿಸುತ್ತಾರೆ. ಸಂಜೆಹೊತ್ತು ಗೇಟಿನಿಂದ ಮೆಟ್ಟಿಲಿನ ತನಕ ನಾನು ಓಡಿದರೆ ಅರ್ಧದಿಂದ ಜೊತೆಯಾಗಿ ಅರ್ಧದಲ್ಲಿ ನಿಲ್ಲುತ್ತಾರೆ (ಮತ್ತೆ ಅದೇ ಅರ್ಧಕ್ಕೆ ನಾನು ಬಂದೇ ಬರುತ್ತೇನೆನ್ನುವ ಅವರ ನಂಬಿಕೆಯನ್ನು ನಾನಿನ್ನೂ ಹುಸಿ ಮಾಡಿಲ್ಲವಲ್ಲ!). ಬ್ರೆಡ್, ಹಾಲು, ಅನ್ನ-ಮೊಸರು, ಒಮ್ಮೊಮ್ಮೆ ಬಿಸ್ಕೆಟ್, ರಸ್ಕ್ ಮೆಲ್ಲುತ್ತಾರೆ. ಹಾಗೇನೇ, ಊರಿಗೆ ಹೋಗುವಾಗೆಲ್ಲ ವಾಂತಿ ಮಾಡಿಕೊಂಡಾದರೂ ಸರಿ, ಕಾರಿನಲ್ಲಿ ನಮ್ಮೊಡನೆ ಊರಿಗೂ ಬರುತ್ತಾರೆ. ಅಲ್ಲಿಯ ದೊಡ್ಡ ದನವನ್ನು ನೋಡಿ ತಮಗೂ ದನಿಯಿದೆಯೆಂದು ತೋರಿಸುತ್ತಾರೆ. ಅವಳೇನಾದರೂ ಹತ್ತಿರ ಬಂದರೆ ಶೆಡ್ ಒಳಗೆ ತೂರಿಕೊಂಡು ಬಾಗಿಲಡಿಯಿಂದ ಇಣುಕುತ್ತಾರೆ. ಇಲ್ಲೇ ಇರುವಾಗ ಒಮ್ಮೊಮ್ಮೆ ತಮ್ಮಮ್ಮ ಗಿಡ್ಡಿ ತಂದು-ಕಕ್ಕಿ-ಕೊಡುವ ವಾಸನಾಭರಿತ ಊಟವನ್ನು ಮೆಲ್ಲುತ್ತಾರೆ. ಕುಣಿಯುತ್ತಾರೆ. ದಣಿಯುತ್ತಾರೆ. ಮಣಿಯುತ್ತಾರೆ.

ಎಲ್ಲಕ್ಕಿಂತ ಹೆಚ್ಚಾಗಿ, ನಮ್ಮ ಮೂವರ ಸ್ವರ ಕೇಳಿದ ಕೂಡಲೇ ಎಲ್ಲಿದ್ದರೂ ಒಮ್ಮೆ ಕಿವಿ ನಿಮಿರಿಸಿ, ತಿರುಗಿ, ನಾಗಾಲೋಟ ಹಾಕಿ, ನಮ್ಮ ಕಡೆ ಬಂದು, ಕಾಲ ಸುತ್ತ ಸುತ್ತಿ

ಸುತ್ತಿ, ಕಾಲ ಮೇಲೆ ಬಿದ್ದು ಹೊರಳಿ, ಬಲ ಮುಂಗಾಲೆತ್ತಿ ಶೇಕ್ ಹ್ಯಾಂಡ್ ಕೊಟ್ಟು, ತಲೆ ತಗ್ಗಿಸಿ, ಹೇಳಿದಾಗ ಕೂತು, ತಕ್ಷಣವೇ ಎದ್ದು ಬಂದು ಬಾಲವಾಡಿಸಿ, ನಗಿಸಿ, ನಲಿಯುವ ಉತ್ಸಾಹದ ಬುಗ್ಗೆಗಳು. ಪ್ರೀತಿಯ ಮಹಾಪೂರಗಳು. ಬೆಳ್ಳಿ ತಿನ್ನುವ ರಭಸಕ್ಕೆ ಸಾಟಿಯಿಲ್ಲ. ಚುಕ್ಕಿಯ ಚುರುಕು ಕಣ್ಣು-ಕಿವಿಗೆ ಎದುರಿಲ್ಲ. ಇಬ್ಬರೂ ಜೊತೆಯಾಗಿ ಆಡುತ್ತಿದ್ದರೆ ನಮ್ಮ ಆತಂಕ ಒತ್ತಡಗಳಿಗೆ ಉಳಿಗಾಲವಿಲ್ಲ.

ಈಗ, ಎರಡೂವರೆ ತಿಂಗಳಾಗುತ್ತಿರುವಾಗ, ಇವರಿಬ್ಬರಿಗೆ ಜೊತೆಯಾಗಿ ಸುಮಾರು ಎರಡು ತಿಂಗಳ ಬೆಕ್ಕಿನ ಮರಿಯೂ ಸೇರಿಕೊಂಡಿದ್ದಾನೆ. ಇವರಿಬ್ಬರ ಕಾಲುಗಳ ನಡುವೆ ನುಸುಳಿ, ಇಬ್ಬರ ಬಟ್ಟಲಿಂದಲೂ ಹಾಲಿನಲ್ಲಿ ಪಾಲು ಪಡೆದು, ಇಬ್ಬರ ಬುಟ್ಟಿಯಲ್ಲೂ ತನ್ನ ನಿಶಾನೆಯಿರಿಸಿ, ಇಬ್ಬರ ಕಿವಿ-ಬಾಲ-ಮೂತಿ-ಮುಸುಡಿ ಕಚ್ಚಿ ಎಳೆದು ಆಟವಾಡಿಸುವ ಪೋರ ಈ ಹೊಸ ಚಿಂಟೂ. ಇವರಿಬ್ಬರನ್ನೇ ಉಚ್ಚೆ-ಚಿಚ್ಚೆಗಾಗಿ ಕಾಂಪೌಂಡ್ ಬದಿಗೆ ಕರೆದುಕೊಂಡು ಹೋಗಿದ್ದರೆ ಇವ ಅಲ್ಲೂ ಹಾಜರ್. ಅವರ ಕೆಲಸ ಮಾಡಲು ಬಿಡದೇ ಅವರ ಬೆನ್ನ ಮೇಲೆ ಹಾರಿ, ಅಲ್ಲಿಂದ ಮರಕ್ಕೆ ಎಗರಿ, ಅಲ್ಲಿಂದ ನೆಲಕ್ಕೆ ಜಿಗಿದು, ಅವರಲ್ಲಿನ ಹುಚ್ಚುತನಕ್ಕೆ ಕಿಚ್ಚು ಹಚ್ಚಿ ಇಬ್ಬರನ್ನೂ ರೊಚ್ಚಿಗೆಬ್ಬಿಸಿ ಅವರಿಬ್ಬರೂ ಇವನ ತಲೆಯಲ್ಲಿ-ಬಾಲದಲ್ಲಿ ಹಿಡಿದು ಹಗೆ ತೀರಿಸಿಕೊಳ್ಳುವಾಗ ಜೋರಾಗಿ ಕಿರುಚಿ ಯಾರಾದರೊಬ್ಬರ ಮುಖಕ್ಕೆ ನಖಸೇವೆ ಮಾಡಿ ಪರಾರಿಯಾಗುವ ಇವನಿಗೂ ಮನೆಯೊಳಗೆ ಪ್ರವೇಶವಿಲ್ಲ. ಅದಕ್ಕೆ ನನ್ನವರ ಶಾಂತಾವತಾರ ಉವಾಚ: 'ಬೆಕ್ಕುಗಳು ಮನೆಯೊಳಗೆ ಇರಬೇಕಾದವು. ಅಂಥಾದ್ರಲ್ಲಿ, ನೀನು ಅವನನ್ನು ಮನೆಯೊಳಗೆ ಸೇರಿಸಿಕೊಳ್ಳುದಿಲ್ಲ ಅಲ್ವಾ? ಅದ್ಕೇ ಅವ್ನು ಒಂದಿನ ನಿನ್ನನ್ನು ಡೈವೋರ್ಸ್ ಮಾಡ್ತಾನೆ, ನೋಡು!'

ಯಾರು ಯಾರನ್ನು ಡೈವೋರ್ಸ್ ಮಾಡ್ತಾರೋ, ಯಾರು ಯಾರಿಗೆ ಪ್ರಪೋಸ್ ಮಾಡ್ತಾರೋ ಕಾದುನೋಡಬೇಕಾಗಿದೆ. ಈಗಂತೂ ಬೆಳ್ಳಿ-ಚುಕ್ಕಿ-ಚಿಂಟೂ ಸಹಿತ ನಮ್ಮದು ಸುಖೀ ಸಂಸಾರ. ಮನೆಯೊಳಗೆ ಇಬ್ಬರು ಗಂಡು, ಒಂದು ಹೆಣ್ಣು. ಮನೆ ಹೊರಗೆ ಒಂದು ಗಂಡು, ಇಬ್ಬರು ಹೆಣ್ಣು. ಪ್ರಕೃತಿಯ ಸಮತೂಕ ಇದೇ ಅಲ್ವಾ?

●

ಜವರಾಯ ಬಂದರೆ

–ಪಿ. ಎಸ್. ಮೈಯ

ಜವರಾಯ ಬಂದರೆ ಬರಿ ಕೈಲಿ ಬರಲಿಲ್ಲ
ಕುಡುಗೋಲು ಕೊಡಲ್ಯೊಂದು ಹೆಗಲೇರಿ
ಒಳ್ಳೊಳ್ಳೆ ಮರನಾ ಕಡಿಬಂದ
ಫಲಬಿಟ್ಟ ಮರನಾ ಕಡಿಬಂದ

ಜೀವನ, ಜೀವ, ಜಗತ್ತು ನಶ್ವರ ಅಂತ ನಮಗೆ ಚಿಕ್ಕಂದಿನಿಂದಲೇ ಎಲ್ಲ ಗುರುಗಳೂ ಪಾಠ ಅರೆದು ಕುಡಿಸುತ್ತಾರೆ. ಆದರೂ ನಮ್ಮಲ್ಲಿ ಪ್ರತಿಯೊಬ್ಬರಿಗೂ ಆ ರೂಲ್ಸ್ ನಮಗೆ ಮಾತ್ರ ಅಪ್ಲೈ ಆಗಲ್ಲ ಅಂತ ಏನೋ ಒಂದು ಭಾವನೆ. ಅಥವಾ ಅಪ್ಲೈ ಆದರೂ ಮುಂದೆ ಎಂದೋ ನಮಗೆ ತೊಂಭತ್ತು ಅಥವಾ ನೂರು ವರ್ಷ ಆದಾಗ ಆಗಬಹುದು ಅಂತ ಏನೋ ಒಂದು ಆಸೆ. ಒಟ್ಟಾರೆ 'ಸಾವು' ಎಂಬುದರ ಬಗ್ಗೆ ಎಲ್ಲರಿಗೂ ಭಯ, ಅಳುಕು, ಅಂಜಿಕೆ. ಅದಕ್ಕೇ ನೋಡಿ, ಯಾರೂ ಪರಿಚಿತರು 'ಸತ್ತು ಹೋದರು' ಅಂತ ಹೇಳಲ್ಲ. ಅವರು 'ಹೋಗಿಬಿಟ್ಟರು' ಅಂತಾರೆ. ಇಲ್ಲ 'ತೀರಿಕೊಂಡರು' ಅಂತಾರೆ. ಇಂಗ್ಲಿಷಿನಲ್ಲೂ 'ಪಾಸ್ಡ್ ಅವೇ' ಅಂತಾರೆ ಹೊರತು 'ಡೈಡ್' ಅಂತ ಹೇಳಲ್ಲ. ಆದರೆ ಯಾರು ಸಾವನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿ ನಗಬಲ್ಲರೋ ಅವರೇ ಧೀರರು.

ಒಂದೊಂದು ಸಾರಿ ಜೀವನವೇ ನಿಮಗೆ ಪಾಠ ಕಲಿಸುತ್ತೆ. ನನಗಂತೂ ಕಳೆದ ಒಂದೆರಡು ವರ್ಷಗಳಿಂದ ತೀರಾ ಬೇಕಾದವರನ್ನು, ಬಂಧು ಬಾಂಧವರನ್ನು ಕಳೆದುಕೊಂಡು ಸಾವಿನ ಬಗ್ಗೆ ಒಂಥರಾ ಉಡಾಫೆ ಬಂದುಬಿಟ್ಟಿದೆ. 'ಅದೇನು ಮಾಡ್ತೀಯೋ ನೋಡೇ ಬಿಡ್ತೀನಿ' ಅಂತ ಆ ಯಮಧರ್ಮನ ಹತ್ತಿರ ಮೂಕ ಸಂಭಾಷಣೆ ನಡೆಸಿದ್ದೂ ಇದೆ. ಆ ಧೋರಣೆ ಇಟ್ಟುಕೊಂಡೇ ಬರೆದ ಕೊರವಣಿಗೆ ಇದು.

ನನ್ನ ತಂಗಿ ಸವಿತ ಇರೋದು ದಕ್ಷಿಣ ಕನ್ನಡ ಜಿಲ್ಲೆಯ ಒಂದು ಸಣ್ಣ ಊರಿನಲ್ಲಿ. ನಾನು ಅವಳಿಗೆ ಫೋನ್ ಮಾಡಿದಾಗೆಲ್ಲ ಇತ್ತೀಚೆಗೆ ನಮ್ಮ ಸಂಭಾಷಣೆ ನಮಗೆ ಗೊತ್ತಿರುವವರು ಎಲ್ಲಿದ್ದಾರೆ, ಏನು ಮಾಡ್ತಾ ಇದ್ದಾರೆ ಎಂಬುದರ ಬದಲು ಹೊಸದಾಗಿ ಯಾರು ನೆಗೆದು ಬಿದ್ದರು ಎಂಬ ವಿಷಯವಾಗೇ ಇರುತ್ತೆ. ಅರವತ್ತು ವರ್ಷ ಆದ ಮೇಲೆ ಇಂತಹ ಸಂಭಾಷಣೆಗೆ ಬೇಕಾದಷ್ಟು ಸಾಮಗ್ರಿಯೂ ಸಿಕ್ಕುತ್ತೆ. ಅರ್ಥಾತ್ ನಾನು ಪ್ರತಿ ಸಾರಿ ಫೋನ್ ಮಾಡಿದಾಗಲೂ ಇನ್ನೂ ಒಂದಿಬ್ಬರು ಪರಂಧಾಮವನ್ನೈದಿರುತ್ತಾರೆ.

ಸವಿತ ಹಪ್ಪಳ ಮಾಡೋದರಲ್ಲಿ ನಿಸ್ಸೀಮಳು. ನನಗೂ ಊರಿಗೆ ಹೋದಾಗೆಲ್ಲ ಹಪ್ಪಳ, ಸಂಡಿಗೆಗಳ ಹೊರೆ ಕೊಟ್ಟೇ ಕೊಡುತ್ತಾಳೆ. ಈಗೀಗ ಅವಳು ಯಾರ್‍ಯಾರು ನೆಗೆದು ಬಿದ್ದರು ಅಂತ ಹೇಳಿಯಾದ ತಕ್ಷಣ, 'ಅವರಿಗೆ ನನ್ನ ಹಪ್ಪಳ ಅಂದರೆ ಅಷ್ಟು ಇಷ್ಟ. ಸಾಯುವುದಕ್ಕೆ ಒಂದು ತಿಂಗಳ ಹಿಂದೆ ನಾನು ಕೊಟ್ಟ ಹಪ್ಪಳ ಖುಷಿ ಮಾಡಿಕೊಂಡು ತಗೊಂಡರು' ಅಂತ ಡೈಲಾಗ್ ಹೊಡೆಯೋಕೆ ಶುರು ಮಾಡಿದ್ದಳು! ಮುಂಚೆಯೇ ನಾನು ಸೈಂಟಿಸ್ಟು. ನನ್ನದೇ ಒಂದು ಹೈಪಾಥಿಸಿಸ್ ಮನಸ್ಸಿನಲ್ಲೇ ಮೂಡಿ ಬಂತು. 'ಇವಳು ಹಪ್ಪಳ ಕೊಟ್ಟು ಸರಿಯಾಗಿ ಒಂದು ತಿಂಗಳಿಗೆ ಜನ ಗೊಟಕ್ ಅಂತಾರೆ' ಅಂತ. ಮತ್ತೊಮ್ಮೆ ಫೋನ್ ಮಾಡಿದಾಗ 'ಅಣ್ಣಯ್ಯ, ಅತ್ತಿಗೆ ಇಲ್ಲಿಗೆ ಬರ್ತಾರಲ್ಲ. ಅವರ ಕೈಯಲ್ಲಿ ಹಪ್ಪಳ ಕೊಟ್ಟು ಕಳಿಸ್ತೀನಿ' ಅಂದಳು ಸವಿತ.

'ನಿನಗೆ ನಿನ್ನ ಅಣ್ಣನ ಮೇಲೆ ನಿಜವಾಗ್ಲೂ ಪ್ರೀತಿ ಇದ್ದರೆ ಅವನು ಇನ್ನೂ ಕೆಲವು ಕಾಲ ಬದುಕಿ ಬಾಳಬೇಕು ಅಂತ ಆಸೆ ಇದ್ದರೆ ಹಪ್ಪಳ ಮಾತ್ರ ದಯವಿಟ್ಟು ಕಳಿಸಬೇಡ, ಮಾರಾಯ್ತಿ' ಅಂತ ಅಂಗಲಾಚಿ ಬೇಡಿಕೊಂಡೆ.

ನಮ್ಮ ಪರಿಚಯದ ಇನ್ನೂ ಪ್ರಾಯ ಮೀರದ ಒಬ್ಬಾತ ಕಳೆದ ವರ್ಷ ಕೆನಡಾದಿಂದ ವೈಕುಂಠಕ್ಕೆ ಹೋದರು. ಅವರ ಹೆಂಡತಿಯ ಎದುರು ಆತನ ತಾಯಿ-ತಂದೆ ತುಂಬ ಗೋಳಾಡಿದರಂತೆ, ಹಾಗಂತ ಅವರ ಪತ್ನಿ ನನ್ನ ಹತ್ತಿರ ಹೇಳಿಕೊಂಡರು. 'ಅಲ್ವೆ ಮತ್ತೆ? ಪಾಪ, ಚಿಕ್ಕ ವಯಸ್ಸಿನ ಮಗನನ್ನು ಕಳೆದುಕೊಂಡ ದುಃಖ' ಅಂದೆ.

'ಇಲ್ಲ ಇಲ್ಲ. 'ಅವನು ಹೋಗೋನಂತೂ ಹೋದ. ಹೋಗೋಕೆ ಮುಂಚೆ ನಮಗೊಂದು ಮನೇನಾದರೂ ಕಟ್ಟಿಕೊಟ್ಟು ಹೋಗಿದ್ದರೆ?' ಅಂತ ಹೇಳಿಕೊಂಡು ತುಂಬ ಅಳುತ್ತಾ ಇದ್ದರು.' ಎಂದರಾಕೆ!

ಇನ್ನು ಕೆಲವರಿದ್ದಾರೆ. ಅವರದ್ದು 'ಮಿಸರಿ ಲವ್ಸ್ ಕಂಪೆನಿ' ಎಂಬ ಧೋರಣೆ! ನಮ್ಮ ಸ್ನೇಹಿತರೊಬ್ಬರು ಡಯಾಬಿಟಿಸ್, ಹೃದಯ ರೋಗ, ಬ್ಲಡ್ ಪ್ರೆಶರ್ ಮುಂತಾದ ಸಕಲ ರೋಗಗಳನ್ನೂ ಹೊಂದಿದ ವೀರಾಧಿವೀರರು. ಅವರು ನನ್ನ ಹತ್ತಿರ 'ನಿಮಗೂ ಡಯಾಬಿಟಿಸ್ ಇದೆಯಾ?' ಅಂತ ಕೇಳಿದರು. 'ಇಲ್ಲ' ಅಂದೆ. 'ಯೋಚಿಸಬೇಡಿ. ಬಂದೇ ಬರುತ್ತೆ' ಅಂತ ತುಂಬು ಹೃದಯದಿಂದ ಆಶ್ವಾಸನೆ ನೀಡಿದರು! ಅವರು ಮುಂಚೆ ಯಾವಾಗಲೂ ನನಗೆ ಫೋನ್ ಮಾಡಿ ಆರೋಗ್ಯ ವಿಚಾರಿಸುತ್ತಾ ಇದ್ದರು. ಪ್ರತಿ ಸಾರಿಯೂ ನಾನು 'ಚೆನ್ನಾಗಿದ್ದೀನಿ' ಅಂತ ಉತ್ತರ ಕೊಟ್ಟಾದ ಮೇಲೆ ಏನೋ ನಿರಾಸೆಯಾದವರ ಹಾಗೆ ಅವರ ಧ್ವನಿ ಇಳಿದುಹೋಗುತ್ತಿತ್ತು. ಆಮೇಲೆ 'ಈ ಪ್ರಾಣಿಗೆ ಫೋನ್ ಮಾಡಿ ಪ್ರಯೋಜನವಿಲ್ಲ. ಯಾವ ಬ್ಯಾಡ್ ನ್ಯೂಸೂ ಸಿಕ್ಕಲ್ಲ' ಅಂತ ಫೋನ್ ಮಾಡೋದನ್ನ ಬಿಟ್ಟೇಬಿಟ್ಟರು.

ಇತ್ತೀಚೆಗೆ ಈ 'ಸಾವು' ಎಂಬ ಘಟನೆಯ ಮೂಲಕವೇ ಜನರ ಸ್ವಭಾವ, ವ್ಯಕ್ತಿತ್ವಗಳ ಒಂದು ಹೊಸ ಪರಿಚಯ ನನಗಾಯ್ತು. ಹೇಗಪ್ಪಾ ಅಂದರೆ ಹೇಳ್ತೀನಿ, ಕೇಳಿ. ನನ್ನಾಕೆಯ ಬಂಧು ಒಬ್ಬರು ಮೊನ್ನೆ ಮೊನ್ನೆ ಹೋಗಿಬಿಟ್ಟರು. ಅದೂ ಅವರು ಭಾರತದಿಂದ ಅಮೆರಿಕಗೆ ಪ್ರವಾಸಕ್ಕೆಂದು ಬಂದವರು. ವಿಷಯ ತಿಳಿದ ತಕ್ಷಣ ನನ್ನಾಕೆ ಅವರ ಪತ್ನಿಗೆ ಕೈಲಾದ ಸಹಾಯ ಮಾಡಲು ಆ ಊರಿಗೆ ಧಾವಿಸಿದಳು. ನಮ್ಮ ಕನ್ನಡ ಕೂಟದಲ್ಲಿ ಈ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತು! ಆಮೇಲೆ ಶುರುವಾಯ್ತು ನೋಡಿ ಫೋನ್ ಕಾಲ್‌ಗಳ ದಾಳಿ. ಅಲ್ಲ, ಎಲ್ಲರೂ ಪಾಪ ಒಳ್ಳೆ ಉದ್ದೇಶದಿಂದಲೇ ವಿಚಾರಿಸಿಕೊಳ್ಳೋಕೆ ಫೋನ್ ಮಾಡಿದ್ದು. ಆದರೆ ಸ್ವಭಾವತಃ ಫೋನ್ ದ್ವೇಷಿ ಹಾಗೂ ಸಂಭಾಷಣೆ ದ್ವೇಷಿಯಾದ ನನಗೆ 'ಅಯ್ಯೋ ಪಾಪ ನನ್ನ ನಾಲಗೆಗೆ ಉತ್ತರ ಹೇಳಿ ಹೇಳಿ ವಿಪರೀತ ಸುಸ್ತಾಗುತ್ತಿದೆಯಲ್ಲ' ಅಂತ ಆತಂಕವಾಯಿತು.

ನನ್ನ ವಿಶ್ಲೇಷಣೆಯ ಪ್ರಕಾರ ಈ ಪ್ರಪಂಚದಲ್ಲಿ ಮೂರು ಬಗೆಯ ಜನ ಇದ್ದಾರೆ- ನಕ್ಯೂರಿಯಸ್ಸು, ಕ್ಯೂರಿಯಸ್ಸು ಮತ್ತು ವಿಕ್ಯೂರಿಯಸ್ಸು ಅಂತ ಕರೆಯಬಹುದು. ಈ ನಕ್ಯೂರಿಯಸ್ಸು ಜನರಿಗೆ ಯಾವುದರ ಬಗ್ಗೆಯೂ ಕುತೂಹಲವಿಲ್ಲ. ಅವರ ಹತ್ತಿರ 'ಇಂಥವರು ಹೋಗಿಬಿಟ್ಟರು' ಅಂತ ಹೇಳಿದರೆ ಒಮ್ಮೆ ಆಕಳಿಸಿ, 'ಹೌದಾ?' ಅಂತ ಹೇಳಿ ಆಮೇಲೆ ಟೀವಿಯಲ್ಲಿ ಚಾನೆಲ್ ಬದಲಾಯಿಸುತ್ತಾರೆ. ಕ್ಯೂರಿಯಸ್ಸು ಜನ ಒಂಥರ ನಾರ್ಮಲ್. ಯಾರಾದರೂ ಹೋದರು ಅಂತ ಗೊತ್ತಾದ ಕೂಡಲೆ ಫೋನ್ ಮಾಡಿ 'ಕೇಳಿ ಬೇಜಾರಾಯಿತು. ಯಾವ ಸಹಾಯ ಬೇಕಿದ್ದರೂ ಕೇಳಿ. ಮಾಡುತ್ತೇವೆ.' ಅಂತಷ್ಟೇ ಹೇಳಿ ಫೋನ್ ಇಡುತ್ತಾರೆ.

ಆದರೆ ಈ ವಿಕ್ಯೂರಿಯಸ್ಸು ಜನ ಫಜೀತಿ ಆಸಾಮಿಗಳು! ವಿಕ್ಯೂರಿಯಸ್ಸು ಅಂದರೆ ವಿಪರೀತ ಕ್ಯೂರಿಯಸ್ಸು. ಅವರು ವಿಷಯ ತಿಳಿದ ತಕ್ಷಣ ಫೋನ್ ಮಾಡಿ ನಿಮ್ಮ ಮೇಲೆ ಪ್ರಶ್ನೆಗಳ ಸುರಿಮಳೆಯನ್ನೇ ಕರೆಯುತ್ತಾರೆ. 'ಅವರಿಗೆ ಎಷ್ಟು ವಯಸ್ಸಾಗಿತ್ತು? ಅವರ

ಹೆಂಡತಿಗೆ ಎಷ್ಟು ವಯಸ್ಸು? ಅವರು ಯಾವ ಆಸ್ಪತ್ರೆಯಲ್ಲಿದ್ದಾರೆ? ಅವರು ಬೆಳಿಗ್ಗೆ ಏನು ತಿಂಡಿ ತಿಂದಿದ್ದರು? ಮಕ್ಕಳಿದ್ದಾರಾ? ಮಕ್ಕಳ ವಯಸ್ಸೆಷ್ಟು? ಮಕ್ಕಳಿಗೆ ಮದುವೆಯಾಗಿದೆಯಾ? ಅವರಿಗೆ ಇನ್ಶೂರೆನ್ಸ್ ಇತ್ತಾ? ಎಷ್ಟಕ್ಕೆ ಇತ್ತು? ಆ ಇನ್ಶೂರೆನ್ಸ್ ಪೇಪರ್ ಕಳಿಸಿಯಾಯಿತೆ, ಇಲ್ಲವೆ?...' ಇತ್ಯಾದಿ ಇತ್ಯಾದಿ. ಮುಕ್ಕಾಲು ಪಾಲು ಪ್ರಶ್ನೆಗಳಿಗೆ ನನಗೇ ಉತ್ತರ ಗೊತ್ತಿರುವುದಿಲ್ಲ!

ಹೇಳಿ ಕೇಳಿ ನಾನು ಫೋನ್ ದ್ವೇಷಿ. ಈ ಬವಣೆ ನನಗೆ ಬೇಕಾ? ಅದಕ್ಕೇ ನಾನು ಈಗ ಇನ್ನೊಂದು ಉಪಾಯ ಮಾಡಿದ್ದೇನೆ. ನಮ್ಮ ಮನೆಯಲ್ಲಿ ಒಂದು ಸ್ಪೆಷಲ್ ಫೋನ್ ಹಾಕಿಸುತ್ತೇನೆ. ಅದರಲ್ಲಿ ಈ ಕೆಳಗಿನ ಸಂದೇಶ ಇರುತ್ತದೆ:

'ನಿಮಗೆ ಅವರು ಬದುಕಿದ್ದಾರಾ? ಅಥವಾ ಸತ್ತರಾ? ಎಂದು ತಿಳಿಯಬೇಕಾದರ ಒನ್ ಪ್ರೆಸ್ ಮಾಡಿ', 'ಅವರು ಸತ್ತಿದ್ದಾರೆ ಅಂತ ಗೊತ್ತಿದ್ದು ಅಂತ್ಯಕ್ರಿಯೆಯ ಬಗ್ಗೆ ತಿಳಿಯಬೇಕಾದರೆ ಟು ಪ್ರೆಸ್ ಮಾಡಿ', 'ಅವರ ವಯಸ್ಸು, ಅವರ ಪತ್ನಿಯ ವಯಸ್ಸು ಮತ್ತು ಮಕ್ಕಳ ವಯಸ್ಸಿನ ಬಗ್ಗೆ ಮಾಹಿತಿ ಬೇಕಾದರೆ ತ್ರೀ ಪ್ರೆಸ್ ಮಾಡಿ...' ಹೀಗೆ. ನನ್ನ ನಾಲಗೆಗೆ ಸುಸ್ತಾಗದಂತೆ ವಿಷಯ ತಿಳಿಸುವ ಹೊಸ ವಿಧಾನವನ್ನು ಅಳವಡಿಸಿಕೊಳ್ಳಬೇಕು ಅಂತ ಮಾಡಿದ್ದೇನೆ.

ಈ ಫೋನ್ ಹಾಕಿಸುವುದರ ಒಳಗೆ ನನ್ನಾಕೆ ಮನೆಗೆ ವಾಪಸು ಬಂದೇ ಬಿಟ್ಟಳು. ಇನ್ನು ಅದರ ಅವಶ್ಯಕತೆ ಇಲ್ಲ. ನಮ್ಮ ಬಂಧುಗಳ ವೈಕುಂಠ ಸಮಾರಾಧನೆಯಲ್ಲಿ ಅವರಿಗೆ ಪ್ರಿಯವಾದ ಮಸಾಲೆ ದೋಸೆ, ಮಾವಿನ ಕಾಯಿ ಚಟ್ನಿ ಮಾಡಿಸುತ್ತಾರಂತೆ. ಮೃತರಿಗೆ ಪ್ರಿಯವಾದ ತಿಂಡಿ ತೀರ್ಥಗಳನ್ನೇ ವೈಕುಂಠ ಸಮಾರಾಧನೆಯಲ್ಲಿ ಮಾಡಿ ಬಡಿಸುವುದು ರೂಢಿಯಂತೆ. ಹಾಗಾದರೆ ಯಾರಾದರೂ ಉಪ್ಪು, ಖಾರ, ಸಿಹಿ, ಜಿಡ್ಡು ತಿನ್ನದ ಹೆಲ್ತ್-ನಟ್ ಹೋಗಿಬಿಟ್ಟರೆ ಅವರ ವೈಕುಂಠ ಸಮಾರಾಧನೆಯಲ್ಲಿ ಊಟ ಹೇಗಿರಬಹುದು? ನೀವೇ ಯೋಚಿಸಿ. ಬಹುಶಃ ಎಲ್ಲ ವಿಪ್ರೋತ್ತಮರೂ ಏನಾದರೂ ನೆಪ ಹೇಳಿ ಊಟ ಬಡಿಸುವುದಕ್ಕೆ ಮುಂಚೆಯೇ ಜಾಗ ಖಾಲಿ ಮಾಡುತ್ತಾರೆ!

ಇನ್ನು ನನ್ನವಳಿಗೆ ಬರೆಯುವ ಹುಚ್ಚು ಇರೋದು ನಿಮ್ಮಲ್ಲಿ ಎಷ್ಟೋ ಜನರಿಗೆ ತಿಳಿದೇ ಇದೆ. ಈಗೀಗ ಯಾರಾದರೂ ಸತ್ತರೆ ಅವರ ಮೇಲೆ ಕವನ ಬರೆಯೋದು ಬೇರೆ ಶುರು ಮಾಡ್ಕೊಂಡಿದ್ದಾಳೆ. ಆಗಲೇ ಈ ಥರದ ಮೂರು ಕವನಗಳಿವೆ ಅವಳು ಬರೆದಿದ್ದು. ಇನ್ನೊಂದು ನಾಲ್ಕಾರು ಕವನಗಳನ್ನ ಬರೆದುಬಿಟ್ಟರೆ 'ಮರಣ ಸಂಚಿಕೆ' ಅಂತ ಒಂದು ಪುಸ್ತಕ ಬಿಡುಗಡೆ ಮಾಡಬಹುದು! ಆ ಬಿಡುಗಡೆ ಸಮಾರಂಭಕ್ಕೆ ಆಹ್ವಾನವನ್ನ ಭೂಲೋಕ ಮಾತ್ರವಲ್ಲದೆ ಸ್ವರ್ಗ, ನರಕ ಮುಂತಾದ ಲೋಕಗಳಿಗೂ ಕಳಿಸಬೇಕಾಗುತ್ತೇನೋ! ನಿಮ್ಮ ವಿಳಾಸವನ್ನೂ ಕೊಟ್ಟುಬಿಡಿ. ನೀವೆಲ್ಲೇ ಇದ್ದರೂ (ಭೂಲೋಕ ಅಥವಾ ಪರಲೋಕ) ನಿಮ್ಮನ್ನು ಪುಸ್ತಕ ಬಿಡುಗಡೆಗೆ ಖಂಡಿತ ಆಹ್ವಾನಿಸುತ್ತೀವಿ.

ನಮಗೆಲ್ಲ ಇರುವ ಜೀವ ಭಯದ, ಅಲ್ಲ ಸಾವಿನ ಭಯದ ಸದುಪಯೋಗವನ್ನು ಚೆನ್ನಾಗಿ ಮಾಡಿಕೊಂಡಿರುವವರೆಂದರೆ ದಾಸರು. ಈ ಮನುಷ್ಯ ಅನ್ನೋ ಪ್ರಾಣಿ ಸುಮ್ಮ ಸುಮ್ಮನೆ ಹೇಳಿದರೆ ದೇವರ ಧ್ಯಾನ ಮಾಡೋದಿಲ್ಲ ಅಂತ ಗೊತ್ತು ಮಾಡಿಕೊಂಡ ಅವರು ಯಮ ಬರ್ತಾನೆ ನೋಡಿ ಅಂತ (ಮಕ್ಕಳಿಗೆ ಗುಮ್ಮ ಬರ್ತಾನೆ ಊಟ ಮಾಡು ಅಂತ ಹೆದರಿಸಿದ ಹಾಗೆ) ನಮ್ಮನ್ನು ಕೊಂಚ ಕೊಂಚವೇ ಹೆದರಿಸುತ್ತಾ ದೇವರ ಧ್ಯಾನ ಮಾಡಿ ಅಂತಾರೆ. ಈ ಕೆಳಗಿನ ಉದಾಹರಣೆಗಳನ್ನು ನೋಡಿ:

ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ
ಚಿಂತೆಯನು ಬಿಟ್ಟು ಶ್ರೀಹರಿಯ ನೆನೆ ಮನವೆ...

*

ಆರು ಸಂಗಡ ಬಹರಿಲ್ಲ
ಸುತ್ತಲು ಕುಳ್ಳಿರ್ದ
ಮಿತ್ರ ಬಾಂಧವರೆಲ್ಲ
ಹೊತ್ತಾಯಿತು ಹೊರಗೆ ಹಾಕೆನುವರೊ
ಹಿತ್ತಲ ಕಸಕಿಂತ ಅತ್ತತ್ತಲೀ ದೇಹ...

*

ಮುನ್ನ ಶತಕೋಟಿ ರಾಯರುಗಳಾಳಿದ ನೆಲವ
ತನ್ನದೆಂದೆನುತ ಶಾಸನವ ಬರೆಸಿ
ಬಿನ್ನಣದ ಮನೆ ಕಟ್ಟಿ ಕೋಟೆ ಕೊತ್ತಲವಿಕ್ಕಿ
ಚೆನ್ನಿಗನ ಅಸುವಳಿಯೆ ಹೊರಗೆ ಹಾಕುವರೋ...
ಇತ್ಯಾದಿ ಇತ್ಯಾದಿ...

ಹೀಗೆ, ನೀನು ಒಂದಲ್ಲ ಒಂದು ದಿನ ಸತ್ತೇ ಸಾಯುತ್ತೀಯಾ. ಸತ್ತ ಮೇಲೆ 'ದಾರಿ ಯಾವುದಯ್ಯಾ ವೈಕುಂಠಕೆ' ಅಂತ ಏನಾದರೂ ಆ ಯಮದೂತರನ್ನು ಕೇಳಿದರೆ ಅವರು ನಿನಗೆ ಹೇಳೋದಿಲ್ಲ. ಅದಕ್ಕೇ ಬದುಕಿರುವಾಗಲೇ ಶ್ರೀಹರಿಯನ್ನು ಕೇಳಿ ದಾರಿ ತಿಳಿದುಕೊಂಡುಬಿಟ್ಟರೆ ಒಳ್ಳೇದು ಅಂತ ದಾಸರ ಅಭಿಪ್ರಾಯ.

ಮುಂಚೆ ನಾವು ಬೆಂಗಳೂರಿನಲ್ಲಿ ವಾಸವಾಗಿದ್ದಾಗ ನಮ್ಮ ಪಕ್ಕದ ಮನೆಯಲ್ಲಿ ವೃದ್ಧ ದಂಪತಿಗಳಿಬ್ಬರು ವಾಸಿಸುತ್ತಿದ್ದರು- ವೆಂಕಟ್ರಾಮು ಮತ್ತು ಸುಬ್ಬಲಕ್ಷ್ಮಿ ಅಂತ. ಮಕ್ಕಳೆಲ್ಲ ಅಮೆರಿಕ, ಆಸ್ಟ್ರೇಲಿಯಾ ಅಂತ ಎಲ್ಲೆಲ್ಲೋ ಇದ್ದರು. ಇವರಿಬ್ಬರೂ ಕಾರಿನಲ್ಲಿ ಝುಮ್ಮಂತ ಓಡಾಡಿಕೊಂಡು ಆರಾಮಕ್ಕಿದ್ದರು. ವೆಂಕಟ್ರಾಮು ಅವರಿಗೆ ವಯಸ್ಸಾಗಿದ್ದರೂ ಕಣ್ಣಿನ ದೃಷ್ಟಿ ಚೆನ್ನಾಗೇ ಇತ್ತು. ಒಂದಿನ ಇದ್ದಕ್ಕಿದ್ದ ಹಾಗೆ ವೆಂಕಟ್ರಾಮು ಅವರು ಹೃದಯಾಘಾತದಿಂದ

ಹೋಗಿಬಿಟ್ಟರು. ಮಕ್ಕಳೆಲ್ಲ ಬರೋವರೆಗೆ ನಾನೇ ಸುಬ್ಬಲಕ್ಷ್ಮಿ ಅವರಿಗೆ ಬೇಕಾದ ಸಹಾಯ ಮಾಡ್ದೆ. ಅವರ ನಿಧನದ ಬಗ್ಗೆ ಪೇಪರಿನಲ್ಲಿ ಅನೌನ್ಸ್‌ಮೆಂಟ್ ಕೊಡಬೇಕೂಂತ ಹೇಳಿದ್ರು ಸುಬ್ಬಲಕ್ಷ್ಮಿ ಅವರು. ಅವರನ್ನೂ ಕರಕೊಂಡು ಹೋಗಿದ್ದೆ ನ್ಯೂಸ್ ಪೇಪರ್ ಆಫೀಸಿಗೆ. ಅಲ್ಲಿ ಅವರು 'ವೆಂಕಟ್ರಾಮು ಹೋಗ್ಬಿಟ್ರು' ಅಂತ ಹಾಕಿ ಅಂದರು. ಆತ 'ಇಲ್ಲ ತಾಯಿ, 'ಸ್ವರ್ಗಸ್ಥರಾದರು' ಅಂತ ಹಾಕಿದ್ರೆ ಸರಿಹೋಗುತ್ತೆ' ಅಂದ. ಇವರು 'ಆಗಲಿ' ಅಂದರು.

'ಇಷ್ಟೇನಾ, ತಾಯಿ? ಇಷ್ಟು ವರ್ಷ ಬಾಳಿ ಬದುಕಿದ ಮನುಷ್ಯ ಅವರು. ಇನ್ನೂ ಏನಾದರೂ ಎರಡು ಮಾತು ಹೇಳಿ. ಹಾಕೋಣ' ಅಂದರು ಆತ.

'ಎರಡು ಮಾತು' ಅಂದಿದ್ದೇ ಅವರ ತಲೆಯಲ್ಲಿ ಪಟ್ಟಾಗಿ ಕೂತಿತ್ತೋ ಏನೋ! 'ಹಾಗಾದ್ರೆ ವೆಂಕಟ್ರಾಮು ಹೋಗ್ಬಿಟ್ರು, ಅಲ್ಲ ಸ್ವರ್ಗಸ್ಥರಾದರು. ಕಾರು ಮಾರಾಟಕ್ಕಿದೆ. ಅಂತ ಹಾಕಿ' ಅನ್ನೋದೆ ಆಕೆ!

ಗುಂಡ, ಭೀಮ ಇಬ್ಬರೂ ಆಪ್ತ ಗೆಳೆಯರು. ಇಬ್ಬರಿಗೂ ಕುಡಿಯೋ ಚಟ. ಒಂದು ದಿನ ಕುಡಿತದ ಅಮಲಿನಲ್ಲಿದ್ದಾಗ ಇಬ್ಬರೂ ಪರಸ್ಪರ ಒಂದು ಮಾತು ಪ್ರಾಮಿಸ್ ಮಾಡಿದರು. ಏನಪ್ಪಾ ಅಂದರೆ ಇಬ್ಬರಲ್ಲಿ ಯಾರೇ ಮೊದಲು ಸತ್ತರೂ ಅವರು ಇನ್ನೊಬ್ಬರಿಗೆ ಸ್ವರ್ಗ ಅಂದರೆ ಹೇಗಿರುತ್ತೆ ಅಂತ ತಿಳಿಸಬೇಕು ಅಂತ. ಸರಿ ಭೀಮನೇ ಮೊದಲು ಸತ್ತ. ಅವನು ಸತ್ತು ಒಂದು ತಿಂಗಳಿಗೆ ಗುಂಡನಿಗೆ ಒಂದು ಫೋನ್ ಕಾಲ್ ಬಂತು. ಯಾರಪ್ಪಾ ಅಂತ ನೋಡಿದ್ರೆ ಆ ಕಡೆ ಭೀಮ ಮಾತಾಡ್ತಾ ಇದ್ದ! 'ಏನೋ ಭೀಮ ಹೇಗಿದ್ದೀಯಾ?' ಅಂತ ಕೇಳಿದ ಗುಂಡ.

'ತುಂಬ ಖುಷಿಯಾಗಿದ್ದೀನಿ ಕಣೊ. ದಿನ ಬೆಳಗಾದ್ರೆ ಇಲ್ಲಿರುವ ಉದ್ಯಾನವನದಲ್ಲಿ ವಿಹರಿಸ್ತೀನಿ. ಆಮೇಲೆ ಬ್ರೇಕ್ ಫಾಸ್ಟು. ಆಮೇಲೆ ಇಲ್ಲಿರುವ ಚೆಲುವೆಯರ ಜೊತೆ ಪ್ರಣಯ ಹಾಗೂ ಸರಸ ಸಲ್ಲಾಪ. ಆಮೇಲೆ ಪುನಃ ಊಟ, ಆಮೇಲೆ ಮತ್ತೆ ರತಿಕ್ರೀಡೆ. ಹೀಗೇ... ಸಮಯ ಹೋಗಿದ್ದೇ ಗೊತ್ತಾಗಲ್ಲ.' ಅಂದ.

'ಅಯ್ಯೊ, ಸ್ವರ್ಗ ಅಷ್ಟೊಂದು ಚೆನ್ನಾಗಿರುತ್ತೇನೋ? ರಂಭೆ, ಊರ್ವಶಿ ಎಲ್ಲ ಅಲ್ಲೇ ಇದ್ದಾರೇನೋ? ಹಾಗಾದ್ರೆ ನಾನೂ ಬೇಗ ಸಾಯ್ತೀನಿ. ನನಗೊಂದು ಸೀಟು ರಿಸರ್ವ್ ಮಾಡಿ ಇಟ್ಟುಬಿಡು' ಅಂದ ಗುಂಡ.

'ಸ್ವರ್ಗ ಅಂತ ನಾನೆಲ್ಲಿ ಹೇಳಿದೆ? ನಾನೀಗ ಒಂದು ಅಳಿಲಾಗಿದ್ದೀನಿ' ಅಂದ ಭೀಮ.

ನಿಮಗೆ ನಿಜಸ್ಥಿತಿ ಹೇಳಬೇಕೆಂದರೆ, ಇಷ್ಟರವರೆಗೂ ಯಾರೂ ಸ್ವರ್ಗಕ್ಕೆ ಹೋಗಿ ವಾಪಾಸು ಬರಲಿಲ್ಲ. ಇದನ್ನು ಗುಂಡಪ್ಪನವರು ಬಹಳ ಸೊಗಸಾಗಿ ನಮ್ಮ ಮುಂದೆ ಇಟ್ಟಿದ್ದಾರೆ:

ಮರಣದಿಂ ಮುಂದೇನು? ಪ್ರೇತವೋ? ಭೂತವೋ?
ಪರಲೋಕವೋ? ಪುನರ್ಜನ್ಮವೋ? ಅದೇನೋ?
ತಿರುಗಿ ಬಂದವರಿಲ್ಲ, ವರದಿ ತಂದವರಿಲ್ಲ
ಧರೆಯ ಬಾಳ್ಗದರಿನೇಂ?-ಮಂಕುತಿಮ್ಮ

ಮುಂದೇನು ಅಂತ ಯಾರಿಗೂ ಗೊತ್ತಿಲ್ಲದೆ ಇರಬೇಕಾದರೆ ಇವತ್ತಿನ ದಿನವನ್ನು ಮನಃಪೂರ್ತಿ ಅನುಭವಿಸಿ ಆನಂದಿಸುವುದೇ ಒಳ್ಳೆಯದಲ್ಲವೆ? ನಾನು ಮಾತ್ರ ಹೀಗೆ ಹೇಳುತ್ತಿಲ್ಲ. ಉಮರ ಖಯಾಮನೂ ಹಾಗೇ ಹೇಳುತ್ತಾನೆ (ಅದಕ್ಕೇ ಹೇಳೋದು ಗ್ರೇಟ್ ಮೈಂಡ್ಸ್ ಥಿಂಕ್ ಅಲೈಕ್ ಅಂತ). ಈ ಕೆಳಗೆ ಉಮರ ಖಯಾಮ ತನ್ನ ಪ್ರೇಯಸಿಗೆ ಹೇಳುವ ಪದ್ಯ ನೋಡಿ:

ನಾಳೆ ಬೆಳಗಾಗ ನಾಮಿರುವ ಭರವಸೆಯಿಲ್ಲ;
ಇರುವರೆಕ್ಷಣ ತಣಿಸು ಬಳಲಿದೆನ್ನೆದೆಯ
ಎನ್ನಿಂದು, ಬಾ, ಕುಡಿವಮ್ ಇಂದು ರುಚಿಯಲಿ ಮಧುವ;
ನಾಳೆ ಬರುವಿಂದುವೇಂ ನಮ್ಮ ಕಾಣುವನೆ?
(ಉಮರನ ಒಸಗೆ, ಡಿವಿಜಿ)

ನಾಳೆ ಬೆಳಿಗ್ಗೆ ನಾವು ಇರುತ್ತೀವೋ ಬಿಡುತ್ತೀವೋ ಗೊತ್ತಿಲ್ಲ. ಇರೋ ಈ ಗಳಿಗೆಯಲ್ಲಿ ನನ್ನ ಹೃದಯವನ್ನು ತಣಿಸು, ನನ್ನ ಸೂರ್ಯನೆ, ಬಾ ಮಧುವನ್ನು ಕುಡಿಯೋಣ. ನಾಳೆ ಬರುವ ಸೂರ್ಯ ನಮ್ಮನ್ನು ಕಾಣುತ್ತಾನೇನು? ಯಾರಿಗೆ ಗೊತ್ತು?

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಹೇಳಿದ ಹಾಗೆ ನಮ್ಮ ಹುಟ್ಟಿನ ಮುಂಚೆ ಏನಿತ್ತೋ ಅದು ಅವ್ಯಕ್ತ. ಸತ್ತ ಮೇಲೆ ಏನಾಗುತ್ತೋ ಅದೂ ಅವ್ಯಕ್ತ. ಅದರ ಮಧ್ಯೆ ಇರುವ ಈ ವ್ಯಕ್ತಮಧ್ಯದ ಜೀವನದಲ್ಲಿ ತುಂಬು ಹೃದಯದಿಂದ ಆನಂದಿಸೋಣ. ಅಲ್ಲವೆ?

ಚಿಂತನೆ ಚಾವಡಿ

ರೈಲ್ವೆ ಹಳಿಗಳು ಕಲಿಸಿದ ಅಧ್ಯಾತ್ಮ

-ಅನಿಲ ದೇಶಪಾಂಡೆ

ಇದೇನು? ಇದೆಂತಹ ತಲೆಬರಹ ಅನ್ನಿಸಿತೇ? ಹೌದು. ನಾವು ಅನೇಕ ಥರದ ವೈರಾಗ್ಯಗಳನ್ನು ಕೇಳಿಲ್ಲವೆ? ನಿಮಗೂ ಗೊತ್ತಿರುವಂತೆ, ಉದರ ವೈರಾಗ್ಯ, ಅಭಾವ ವೈರಾಗ್ಯ, ಸ್ಮಶಾನ ವೈರಾಗ್ಯ ಇತ್ಯಾದಿ. ಇವೆಲ್ಲವೂ ಒಂದೊಂದು ಥರದ ಅಧ್ಯಾತ್ಮದ ಸುಳಿವನ್ನು ಕೊಡುತ್ತವೆ. ಅದೇ ರೀತಿ ಈ ರೈಲ್ವೆ ಹಳಿ ಕೂಡ. ಮೊನ್ನೆ ಶ್ರೀ ಬನ್ನಂಜೆ ಗೋವಿಂದಾಚಾರ್ಯರ 'ಪ್ರಕೃತಿಯ ಪಾಠ/ಅವಧೂತ ಗೀತೆ' ಧ್ವನಿಮುದ್ರಿಕೆಯನ್ನು ಕೇಳುತ್ತಿದ್ದೆ. ಅದರಲ್ಲಿ ಬರುವ ಅವಧೂತ ವ್ಯಕ್ತಿ, ತಾನು ಪ್ರಕೃತಿಯಿಂದ ಅನೇಕ ಪಾಠ ಕಲಿತುದಾಗಿ ಹೇಳುತ್ತಾನೆ. ಪ್ರಕೃತಿಯಲ್ಲಿ ತಾನು ಕಂಡ ೨೪ ಗುರುಗಳನ್ನು ಹೇಳುತ್ತಾನೆ. ಆಗ ನನಗೆ ತಟ್ಟನೆ ಎದುರಾದದ್ದು 'ಅಂದರೆ ನಾನು ಪ್ರಕೃತಿಯಲ್ಲಿ ಕಾಣುವ ವಸ್ತುಗಳಿಂದ ಏನನ್ನಾದರೂ ಕಲಿಯಬಹುದೆ?' ಎನ್ನುವ ಪ್ರಶ್ನೆ.

ಕ್ಯಾಸೆಟ್ ಓಡುತ್ತಿದ್ದಂತೆ ಈ ಕಾಡುವ ಪ್ರಶ್ನೆಯೊಂದಿಗೆ ಕಣ್ಣುಗಳು ನೆಲವನ್ನು ನೋಡುತ್ತಿರುವಂತೆ ಇರುವೆಯೊಂದು 'ಟೈಲ್ಸ್' ಮಧ್ಯದ ರೇಖೆಯಲ್ಲಿ ಪ್ರಯಾಣ ಹೊರಟಿದ್ದು ಕಾಣಿಸಿತು. ಮನಸ್ಸು ಅದನ್ನೇ ಹಿಂಬಾಲಿಸತೊಡಗಿತು. ನೆಲದ ಟೈಲ್ಸ್ ಪಕ್ಕದ ಎರಡೂ

ರೇಖೆಗಳು ಸಮಾನಾಂತರವಾಗಿವೆ, ಒಟ್ಟಿಗೆ ಎಲ್ಲೋ ಹೊರಟಂತಿವೆ. ಆದರೆ ಎಲ್ಲಿಯೂ ಒಂದನ್ನೊಂದು ಮುಟ್ಟುವದಿಲ್ಲ, ಅಲ್ಲವೆ? ಆದರೂ ಜೊತೆಯಾಗಿವೆ. ರೈಲ್ವೆ ಹಳಿ ಕೂಡ ಹಾಗೇ ಅಲ್ಲವೇ? ದೂರದೂರ ಸಾವಿರಾರು ಮೈಲಿ ಹೋದರೂ ಒಂದನ್ನೊಂದು ಸೇರುವುದೇ ಇಲ್ಲ. ಆದರೂ ಜೊತೆ ಬಿಡುವದಿಲ್ಲ. ಇದೇನು? ರೈಲ್ವೆ ಹಳಿ ಕೂಡ ಪಾಠ ಹೇಳುವುದೆ? ಏನಿರಬಹುದು ಆ ಸಂದೇಶ? ಅವು ಒಂದನ್ನೊಂದು ಸೇರದೆ ಇದ್ದರೂ ಜೊತೆ ಬಿಟ್ಟಿಲ್ಲ, ಅಗಲುವದೂ ಇಲ್ಲ. ಅಗಲಿದರೆ ದುರ್ಘಟನೆ, ದುರಂತ ತಪ್ಪಿದ್ದಲ್ಲ. ಎರಡೂ ಕಂಬಿಗಳು ಒಂದೇ ಗುರಿಯನ್ನು ಹೊಂದಿವೆ. ತಮ್ಮ ಉದ್ದೇಶವನ್ನು ಮರೆಯದೇ ಸಮಾಜದ ಒಳಿತಿಗೋಸ್ಕರ ಒಟ್ಟಿಗೆ ಸಾಗಿವೆ.

ಇದೇ ಥರದ ಜನರನ್ನು ನಾವು ನಮ್ಮ ದಿನನಿತ್ಯದ ಬದುಕಿನಲ್ಲಿಯೂ ಕಾಣುತ್ತೇವಲ್ಲವೆ? ಅದು ವೃತ್ತಿಯಲ್ಲಿರಬಹುದು, ಸಾಮಾಜಿಕ ಕಾರ್ಯದಲ್ಲಿಯೂ ಇರಬಹುದು, ಅಷ್ಟೇ ಏಕೆ ಸಂಸಾರದಲ್ಲಿ ಕೂಡ ಕೆಲವು ದಂಪತಿಗಳು ಮಾನಸಿಕವಾಗಿ ಒಂದಾಗದೆ ಇದ್ದರೂ ಜೊತೆ ಜೊತೆಯಲಿ ಸಾಗಿ ಸಂಸಾರ ನಿಭಾಯಿಸುತ್ತಾರೆ. ಅವರು ಜಗಳವಾಡದ ದಿನಗಳೇ ಇರುವುದಿಲ್ಲ. ಜಗಳವಾಡದೆ ಅವರ ದಿನ ಮುಗಿಯುವುದಿಲ್ಲ. ಅನ್ಯೋನ್ಯತೆ ಇಲ್ಲದಿದ್ದರೂ ಅವರು ಜೊತೆಯಲ್ಲಂತೂ ಇರುತ್ತಾರೆ. ಕಾರಣ ಏನೇ ಇರಬಹುದು. ಮಕ್ಕಳಿಗೋಸ್ಕರವೊ, ತಮ್ಮ ಹೆತ್ತವರಿಗೋಸ್ಕರವೊ ಅಥವಾ ಸಮಾಜಕ್ಕೋಸ್ಕರವೊ, ನಾಕಾಣೆ. ಒಟ್ಟಿನಲ್ಲಿ ಗೂಡಿನಲ್ಲಿ ಕೂಡಿದ್ದು ಜೋಡಿ ಎತ್ತಿನಂತೆ ಸಂಸಾರ ಬಂಡಿಯನ್ನು ಸಾಗಿಸುತ್ತಾರೆ. ಸಂಸಾರದ ಉದ್ದೇಶ ಸಾಧಿಸುತ್ತಾರೆ. ಇದು ನಾನು ಭಾರತದಲ್ಲಿದ್ದಾಗ ನೋಡಿದ್ದು.

ಅಮೆರಿಕೆಯ ಸಮಾಜದಲ್ಲಿ ಈ ಹೊಂದಾಣಿಕೆ ಕಡಿಮೆ ಎನ್ನಿಸಿದ್ದುಂಟು. ಅದಕ್ಕೆ ಕಾರಣ ಮೊನ್ನೆ ಒಬ್ಬ ಸಹೋದ್ಯೋಗಿ ತನ್ನ ಬದುಕಿನ ವಿಷಯಗಳನ್ನು ನನ್ನಲ್ಲಿ ತೋಡಿಕೊಂಡದ್ದು. ಆ ವ್ಯಕ್ತಿ ಅಮೆರಿಕೆಯಲ್ಲಿ ಹುಟ್ಟಿ, ಬೆಳೆದಿದ್ದರೂ ಭಾರತೀಯತೆ ಮರೆತಂತೆ ಕಾಣಲಿಲ್ಲ. ಆಚಾರ ವಿಚಾರಗಳಲ್ಲಿ ಭಾರತೀಯತೆಯನ್ನು ಮೈಗೂಡಿಸಿಕೊಂಡಿದ್ದಾರೆ. ಅವರ ತಂದೆ ತಾಯಿಯರ ಬಗೆಗೆ ಹೆಮ್ಮೆಯೆನ್ನಿಸಿತು. ಆ ಬಗ್ಗೆ ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದೆ. ದಿನ ಕಳೆದಂತೆ ಅವರಿಗೆ ನನ್ನ ಮೇಲೆ ಭರವಸೆ ಮೂಡಿ, ತಮ್ಮ ವೈಯಕ್ತಿಕ ವಿಚಾರಗಳನ್ನು ನನ್ನಲ್ಲಿ ಹಂಚಿಕೊಳ್ಳತೊಡಗಿದರು. ಅವರು ಪ್ರೀತಿಸಿ ಮದುವೆಯಾಗಿದ್ದರು. ಆದರೆ, ಮದುವೆಯಾದ ವರ್ಷದಲ್ಲಿಯೇ ಸಮಸ್ಯೆಗಳು ಕಾಣಿಸಿಕೊಂಡಿವೆ. ನಾಲ್ಕು ವರ್ಷಗಳ ನಂತರ ಅದು ವಿವಾಹ ವಿಚ್ಛೇದನದ ವಿಚಾರದ ತನಕ ಬಂದುನಿಂತಿದೆ. ವಿಚ್ಛೇದನಕ್ಕೆ ಅವರ ಮನಸ್ಸು ಒಪ್ಪುತ್ತಿಲ್ಲ. ಆದರೆ ಸಂಸಾರದಲ್ಲಿ ಸಾಮರಸ್ಯ ಸಾಧಿಸುವ ಬಗೆ ಹೇಗೆಂದೂ ತಿಳಿಯುತ್ತಿಲ್ಲ. ನನಗೆ, ಅವರ ಸಮಸ್ಯೆಯ ಕಾರಣ ಅಷ್ಟೇನು ಮಹತ್ವದ್ದು ಅನ್ನಿಸಲಿಲ್ಲ. ಇಷ್ಟು ಸಣ್ಣ ವಿಷಯಕ್ಕೆ ವಿಚ್ಛೇದನ ಪಡೆಯಬೇಕೇ ಎಂದು ಅನ್ನಿಸಿತು. ಅವರನ್ನೂ ಕೇಳಿಯೇಬಿಟ್ಟೆ. 'ಸಂಸಾರದಲ್ಲಿ ಸಣ್ಣಪುಟ್ಟ ತೊಂದರೆಗಳು ಬರುವುದು ಸಹಜ. ಅದನ್ನೂ ಸರಿಪಡಿಸಿಕೊಂಡು, ಅನುಸರಿಸಿಕೊಂಡು ಹೋಗುವುದು ನಿಮ್ಮಿಬ್ಬರ

ಜವಾಬ್ದಾರಿಯಲ್ಲವೇ?' ಎಂದು. ಅದಕ್ಕೂ ಅವರಲ್ಲಿ ಉತ್ತರವಿತ್ತು. 'ನಾನು ನನ್ನ ಹೊಣೆಯನ್ನು ನಾಲ್ಕು ವರ್ಷಗಳಿಂದ ಅರಿತು, ಅದರಂತೆ ನಡೆಯುತ್ತಾ ಬಂದಿದ್ದೇನೆ. ಆದರೆ ಆ ಕಡೆಯಿಂದಲೂ ಅದೇ ರೀತಿಯ ಜವಾಬ್ದಾರಿ ಇರಬೇಕಲ್ಲವೇ? ಎಷ್ಟು ದಿನ ಎಂದು ನಾನೊಬ್ಬನೇ ನಿಭಾಯಿಸುವದು?' ಎಂದರು. ನನಗೂ ಅವರ ಉತ್ತರ ಮೊದಲಿಗೆ ಸರಿ ಅನ್ನಿಸಿತು. ಆದರೆ, ಇನ್ನೊಂದು ಮನಸ್ಸು ಆ ಉತ್ತರವನ್ನು ಒಪ್ಪಲಿಲ್ಲ. ಎಷ್ಟು ದಿನ ಅಂದರೆ? ಇರುವಷ್ಟು ದಿನ, ಅಲ್ಲವೆ? ಏನು ಇರುವಷ್ಟು? ಆಸೆಯೇ? ಮನಸ್ಸೇ? ಆಯಸ್ಸೇ? ಅಥವಾ ಅಭಿಮಾನವೇ? ಛೆ! ಇದು ಯಾಕೊ ಬಗೆಹರಿಯದ ಪ್ರಶ್ನೆ ಅನ್ನಿಸಿತು. ಮನಸ್ಸು ಮಾತ್ರ ಒಪ್ಪುತ್ತಿಲ್ಲ, ಬಹುಶಃ ನಾನು ಬೆಳೆದ ವಾತಾವರಣವೇ ಇದಕ್ಕೆ ಕಾರಣವೇ? ನನ್ನ ಭಾರತಿಯ ಸಂಸ್ಕೃತಿಯ ಪ್ರಭಾವ ಕಾರಣವೇ? ಅಥವಾ Generation gap ಕೂಡ ಕಾರಣವೇ?

ನೆಲದ ಮೇಲಿನ ಇರುವೆ ತನ್ನ ಚಲನೆಯ ದಿಕ್ಕನ್ನು ಬದಲಿಸಿದ್ದು ನನ್ನ ಆಲೋಚನೆಯನ್ನು ಬದಲಿಸಿತ್ತು. ಮತ್ತೆ ಸಮಾನಾಂತರ ರೇಖೆಗಳನ್ನು ನೋಡಿದೆ. 'ಹೌದು, ರೈಲ್ವೆ ಹಳಿಗಳು ಈ ಸಮಸ್ಯೆಗೆ ಉತ್ತರಿಸಬಹುದೆ?' ಎನ್ನುವ ವಿಚಾರ ಶುರುವಾಯಿತು. ಆ ವ್ಯಕ್ತಿಯ ವಿಚಾರ ಸರಿಯೇ? ಚಿಕ್ಕದೋ, ದೊಡ್ಡದೋ, ಯಾವುದೇ ಕಾರಣಕ್ಕೆ ವಿಚ್ಛೇದನವೊಂದೇ ಪರಿಹಾರವೇ? ಮದುವೆ ಆಗುವಾಗ, ಇಡೀ ಜೀವನದಲ್ಲಿ ಕಷ್ಟ-ಸುಖಗಳು ಏನೇ ಬಂದರೂ ಜೊತೆಯಾಗಿ ಇರುವ ನಿರ್ಧಾರ ಮಾಡಿರುವುದಿಲ್ಲವೇ? 'ಕಲ್ಲಿರಲಿ ಮುಳ್ಳೇ ಇರಲಿ ಜೊತೆಗೂಡಿ ನಾ ನಡೆವೆ' ಎಂದು ಹಾಡಿಕೊಂಡು ಪಯಣ ಪ್ರಾರಂಭಿಸಿರುವುದಿಲ್ಲವೇ? ಆದರೆ, ಕೆಲವೇ ದಿನಗಳ ನಂತರ ಕೈಗೊಂಡ ಉದ್ದೇಶವನ್ನೇ ಮರೆತು ದೂರವಾಗುವುದು ಸರಿಯೇ? ಏನಿದು? ರೈಲ್ವೆ ಹಳಿಗಳು ಸಾರುವ ಸಂದೇಶವಾದರೂ ಏನು? 'ನಾವು ನಮಗೋಸ್ಕರ ಜೊತೆಯಾಗಿ ಹೊರಟಿಲ್ಲ, ನಮ್ಮ ಯಾತ್ರಿಕರಿಗೋಸ್ಕರ, ಅವರನ್ನು ಗುರಿ ಮುಟ್ಟಿಸುವದಕ್ಕೋಸ್ಕರ ಕೊನೆಯವರೆಗೂ ಜೊತೆಯಾಗಿರುತ್ತೇವೆ. ಯಾತ್ರಿಕರ ಗುರಿಯೇ ನಮ್ಮ ಗುರಿಯೂ ಹೌದು.' ಎನ್ನುತ್ತಿವೆಯೇ? ಅವುಗಳು ಸಾರುತ್ತಿರುವ ಈ ಸಂದೇಶ ನಮಗೂ ಮಾದರಿಯಾಗಬೇಕಲ್ಲವೇ? ನಾವೆಲ್ಲರೂ ಯಾವುದೋ ಹಿರಿಯ ಉದ್ದೇಶದ ಸಲುವಾಗಿ ಸಂಸಾರದಲ್ಲಿರುವೆವಲ್ಲವೆ? ಇಲ್ಲದಿದ್ದರೆ ಎಲ್ಲೋ ಹುಟ್ಟಿ ಬೆಳೆದ ಎರಡು ಜೀವಗಳು, ಮತ್ತೆಲ್ಲೋ ಭೇಟಿಯಾಗಿ, ಒಂದುದಿನ ಒಂದಾಗಿ, ಮುಂದೆ ಜೊತೆಯಾಗಿರಲು ನಿರ್ಧರಿಸಿ ಹೊರಡುವರಲ್ಲವೆ? ಆ ಕಾಣದ ಕೈ ಜೀವಿಗಳನ್ನು ಕೂಡಿಸುತ್ತದೆ. ಬಾಳಿಗೊಂದು ಅರ್ಥ, ಗುರಿಯನ್ನು ಒದಗಿಸಿ ಕೊಡುತ್ತದೆ. ನಮ್ಮನ್ನು ವಿಕಾಸದೆಡೆಗೆ ಮುನ್ನಡೆಯಲು ಪ್ರೇರೇಪಿಸುತ್ತದೆ. ಆದರೆ, ಆ ದಾರಿಯಲ್ಲಿ ಬೇರೆ ಬೇರೆ ನಿಲ್ದಾಣಗಳು, ಆಸೆ ಆಮಿಷಗಳು, ಬೇರೆ ಆಗುವ ಅವಕಾಶಗಳು, ಇಂಥ ನೂರೆಂಟು ವಿಘ್ನಗಳನ್ನು ತಂದೊಡ್ಡಿ ಪರೀಕ್ಷಿಸುತ್ತದೆ. ಆದರೆ, ಸಾಧಿಸ ಹೊರಟವರು ತಮ್ಮ ಉದ್ದೇಶವನ್ನೇ ಮರೆಯಬಾರದು, ಗುರಿ ತಲುಪದೆ ಇರಬಾರದು.

ನನಗೇಕೋ ನನ್ನ ಹುಟ್ಟೂರಿನ ಒಬ್ಬ ಹಿರಿಯರ ನೆನಪಾಗುತ್ತಿದೆ. ಅವರನ್ನು ನಾನು ಚಿಕ್ಕವನಿದ್ದಾಗಿಂದ ನೋಡಿದ್ದೇನೆ. ಬುದ್ಧಿ ಬೆಳೆದಾಗಿಂದ ಅವಲೋಕಿಸಿದ್ದೇನೆ. ಅವರು ಪಟ್ಟ

ಸಂಸಾರದ ಜವಣೆ ಒಂದೇ ಎರಡೇ? ಅಲ್ಪವಿವೇಕಿಯಾದ ಹೆಂಡತಿ. ತಿಳಿವಳಿಕೆ ಕಡಿಮೆ ಇರುವುವರ ಜೊತೆಗೆ ಮಿತಿಮೀರಿದ ವಾಚಾಳಿತನ ಬೇರೆ. ಜೊತೆಗೆ ಚಂಚಲತೆ! ಇದರಿಂದಾಗಿ ಅನೇಕ ಆಭಾಸಗಳನ್ನು ಅವರು ಅನುಭವಿಸಬೇಕಾಯಿತು. ಆದರೂ ಆ ಹಿರಿಯರು ಒಂದು ದಿನವೂ ವಿಚ್ಛೇದನಕ್ಕೆ ಯೋಚಿಸಿದ್ದಿಲ್ಲ, ಹೆಂಡತಿಯ ಮನ ನೋಯುವಂತೆ ಮಾತಾಡಿದ್ದಿಲ್ಲ, ಹೀಯಾಳಿಸಿದ್ದಿಲ್ಲ, ಆಕೆಯನ್ನು ನಿಂದಿಸಿದ್ದೂ ಇಲ್ಲ. ಅತಿ ಬೇಸರವೆನಿಸಿದರೆ ಗದರಿದ್ದು ಕೇಳಿದ್ದೇನೆ. ಆದರೆ ಜೀವನದಲ್ಲಿ ಅದಮ್ಯ ಉತ್ಸಾಹ ತೋರಿದ್ದಾರೆ. ಅದೇ ಹೆಂಡತಿಯಲ್ಲಿ ಎಂಟು ಮಕ್ಕಳನ್ನು ಪಡೆದು ಸುಖ ಜೀವನ ಸಾಗಿಸಿದ್ದಾರೆ. ಸಮಾಜ ಏನೇ ತಪ್ಪು ಮಾತಾಡಿದರೂ ಸಹಿಸಿಕೊಂಡಿದ್ದಾರೆ. ನಗು ಮಾತ್ರ ಮರೆತಿಲ್ಲ. ಅನೇಕರಿಗೆ ಜೀವನದ ಸಮಸ್ಯೆಗಳಿಗೆ ಸಲಹೆ ನೀಡುತ್ತಾ ಆದರ್ಶವಾಗಿದ್ದಾರೆ.

ಒಮ್ಮೆ, ನಾನು ಅಲ್ಲಿ ಇರುವಾಗಲೇ ತಮ್ಮಲ್ಲಿರುವ ಮನಸ್ತಾಪದಿಂದ ಬಳಲಿ ಬೇರಾಗಬಯಸಿದ್ದ ಯುವ ದಂಪತಿಗಳು ಅವರಲ್ಲಿ ಸಲಹೆ ಕೇಳಲು ಬಂದಿದ್ದರು. 'ತಾವು ಜೊತೆಗಿರಲು ಬಯಸುವುದಿಲ್ಲ. ತಮಗೆ ಬೇರಾಗುವುದೊಂದೇ ಉಳಿದಿರುವ ದಾರಿ' ಎಂಬುದು ಆ ಜೋಡಿಯ ತೀರ್ಮಾನವಾಗಿತ್ತು. ಆದರೆ ಆ ಹಿರಿಯರು ಅವರಿಗೆ ನೀಡಿದ ಸಲಹೆಯೇ ಬೇರೆ. 'ನೀವು ಒಂದಾಗಿ, ಜೊತೆಯಾಗಿ ಬಾಳುವದು ಆ ಭಗವಂತನ ಇಚ್ಛೆ. ಒಬ್ಬರು ಇನ್ನೊಬ್ಬರ ತಪ್ಪನ್ನು ಕ್ಷಮಿಸಬೇಕು. ಪ್ರೀತಿಸಬೇಕು, ಪ್ರೀತಿಯ ಔಷಧಿ ಎಲ್ಲವನ್ನೂ ಗುಣಪಡಿಸುತ್ತದೆ. ಅದು ಆ ಭಗವಂತನ ಬಯಕೆ ಕೂಡ. ದಯವಿಟ್ಟು ನಿಮ್ಮ ಬಯಕೆಗಳಿಂದ ಅವನ ಬಯಕೆಯನ್ನು ಸಾಯಿಸಬೇಡಿ' ಎಂದು ಹೇಳಿದರು. ತಮ್ಮ ಜೀವನವನ್ನೇ ಅವರೆದುರು ತೆರೆದಿಟ್ಟರು. 'ಭಗವಂತನನ್ನು ಬೇಡಿಕೊಳ್ಳಿ, ತಂದೆ ನಿನ್ನ ಇಚ್ಛೆಗೆ ಬಂದುದು ನನ್ನ ಇಚ್ಛೆಗೆ ಬರಲಿ, ಎಂದು.' ಎಂದರು. ನಾನಂತೂ ಅವರ ಮಾತು ಕೇಳಿ ದಿಙ್ಮೂಢನಾದೆ. ಎಂಥಾ ಪರಿಪಕ್ವತೆ ಎನ್ನಿಸಿತ್ತು.

ಮತ್ತೆ ಆ ಇರುವೆ ನನ್ನ ಮುಂದೆ ಹರಿದಾಡಿ ನನ್ನನ್ನು ಎಚ್ಚರಿಸಿತ್ತು. ಅದೇ ಸಮಾನಾಂತರ ರೇಖೆಗಳು. ರೈಲ್ವೆ ಹಳಿಗಳ ನೆನಪು. ವಿಚಿತ್ರ ಎನ್ನಿಸಿ ಮುಖದಲ್ಲಿ ನಗು ಅರಳಿತು. ಹೌದಲ್ಲವೇ ನಾನೂ ಕೂಡ ಈ ರೈಲ್ವೆ ಹಳಿಗಳಿಂದ ಪಾಠ ಕಲಿತೆ. ಇದನ್ನು ಆ ನನ್ನ ಸಹೋದ್ಯೋಗಿಗೆ ಹೇಳಬೇಕು ಎನ್ನಿಸಿತು. ನೋಡೋಣ, ಇದೂ ಕೂಡ ಆ ಭಗವಂತನ ಇಚ್ಛೆ ಇರಬಹುದಲ್ಲವೆ? 'ಅವನ ಇಚ್ಛೆಗೆ ಬಂದುದು ನನ್ನ ಇಚ್ಛೆಗೂ ಬರಲಿ.'

●

ಸಾವೆಂಬ ಲಹರಿ

–ಗುರುಪ್ರಸಾದ್ ಕಾಗಿನೆಲೆ

ನಾನು ಬಳ್ಳಾರಿಯಲ್ಲಿ ಆಗತಾನೆ ಎಂಬಿಬಿಎಸ್ ಮುಗಿಸಿ ಹೌಸ್ ಸರ್ಜನ್ಸಿ ಶುರುಮಾಡಿದ್ದೆ. ಎಲ್ಲರೂ ಹೊಸ ವೈದ್ಯರಿಗಿರಬೇಕಾದ ಉತ್ಸಾಹ, ಆತಂಕ ಮತ್ತು ಭಂಡ ಧೈರ್ಯಗಳೊಂದಿಗೆ ವರ್ಷವನ್ನು ಆರಂಭಿಸಿದ್ದೆವು. ಒಂದು ಸ್ಟೆಥೋಸ್ಕೋಪು ಹೆಗಲಮೇಲಿದ್ದು ಪ್ರಾಣ ಉಳಿಸುವ ನಾಲ್ಕು ಔಷಧಿಗಳ ಡೋಸನ್ನು ಬಾಯಿಪಾಠ ಮಾಡಿದ್ದರೆ ಸಾಕು, ಜಗತ್ತನ್ನೇ ಗೆಲ್ಲುವ ಛಾತಿ ನಮ್ಮಲ್ಲಿದೆ ಎಂದು ತಿಳಕೊಂಡ ಅಡ್ಡಾದಿಡ್ಡಿ ವಯಸ್ಸದು. ಆಸ್ತಮಾಕ್ಕೆ ಅಮೈನೋಫಿಲಿನ್, ಹಾರ್ಟಿಗೆ ಡಿಗಾಕ್ಸಿನ್ನು, (ಅಮೆರಿಕಕ್ಕೆ ಬಂದಮೇಲೆ ಡಿಜಾಕ್ಸಿನ್ ಅನ್ನುತ್ತಿದ್ದೇನೆ) ಬೀಪಿಗೆ ನಿಫಿಡೆಪಿನ್ನುಗಳೇ ಡಾಕ್ಟರಿಕೆಯೆಂದುಕೊಂಡಿದ್ದ ನಾವು ಹೆನ್ರೀ ಗ್ರೇನ ಅನಾಟಮಿ, ಬೈಲಿ ಮತ್ತು ಲವ್‌ರ ಸರ್ಜರಿಯಂತ ದಪ್ಪದಪ್ಪ ಪುಸ್ತಕಗಳನ್ನು ನಮಗೆ ಉರುಹೊಡೆಸಿದ ನಮ್ಮ ಪ್ರೊಫೆಸರರುಗಳೆಲ್ಲರನ್ನೂ ಬಯ್ದುಕೊಂಡು ಮೊದಲ ತಿಂಗಳ ಸ್ಟೈಪೆಂಡಿನಲ್ಲಿ ಬೆಂಗಳೂರು ರಸ್ತೆಯಲ್ಲಿದ್ದ ಸಂದೀಪ್ ಟೈಲರ್ಸ್‌ನಲ್ಲಿ ಎರಡು ಪ್ಯಾಂಟು ಹೊಲಿಸಿ, ರೌಂಡ್ಸ್ ಮುಗಿಸಿದ ಮೇಲೆ ಕ್ಯಾಂಪಸ್ಸಿನಲ್ಲಿದ್ದ ಕೃಷ್ಣ ಬೇಕರಿಯಲ್ಲಿ ಬೈಟು ಟೀ ಕುಡಿದುಕೊಂಡು ಓಡಾಡುತ್ತಿದ್ದೆವು.

ಆ ಮಡುಗಾಟಿಕೆಯ ವಯಸ್ಸಲ್ಲಿಯೂ ನಿಜವಾಗಿ ನನ್ನನ್ನು ಕಂಗೆಡಿಸುತ್ತಿದ್ದುದು ಕ್ಯಾಶುಯಾಲ್ಟಿಯಲ್ಲಿ ರಾತ್ರಿಪಾಳಿಯಲ್ಲಿದ್ದಾಗ ವಾರ್ಡಿನಿಂದ ಬರುವ 'ಸಾರೂ, ಎಂಎಂಟೂನಾಗೆ (ಎರಡನೇ ಮಹಡಿಯಲ್ಲಿರುವ ಮೇಲ್ ಮೆಡಿಕಲ್ ವಾರ್ಡ್) ಸೀರಿಯಸ್ ಕೇಸು, ಈಗ್ಲೇ ಬರಬೇಕಂತೆ' ಎಂದು ವಾರ್ಡ್‌ಬಾಯ್ ಓಬಳೇಶು ತರುವ 'ಸಾವಿನ' ಕರೆಗಳು. ಬಳ್ಳಾರಿಯ ಮೆಡಿಕಲ್ ಕಾಲೇಜಿನಲ್ಲಿ ಕ್ಯಾಶುಯಲ್ಟಿಯಿರುವುದು ವಾರ್ಡಿನಿಂದ ಸುಮಾರು ಹತ್ತು ನಿಮಿಷದ ನಡಿಗೆಯ ದೂರ. ಆಗ ನಾವು ಪಾಳಿಯಲ್ಲಿದ್ದರೂ ವಾರ್ಡಿನ ನರ್ಸುಗಳು ನಮ್ಮನ್ನು ಸುಲಭವಾಗಿ ಪತ್ತೆಹಚ್ಚಲು ಅನುಕೂಲವಾಗುವಂಥ ಬೀಪರು, ಮೊಬೈಲುಗಳಂಥ ಜಂಗಮ ಆಟಿಕೆಗಳಿರಲಿಲ್ಲ. ಮೆಡಿಕಲ್ ಆಫೀಸರರ ಮೇಜಿನ ಮೇಲೆ ಇದ್ದ ಕರಿಯ ರಿಂಗು ರಿಂಗು ರಿಂಗಾ ಫೋನೊಂದೇ ಕ್ಯಾಶುಯಾಲ್ಟಿಗೂ ಮೆಡಿಕಲ್ ವಾರ್ಡಿಗೂ ನಡುವೆ ಇದ್ದ ಏಕೈಕ ಸಂಪರ್ಕ ಸಾಧನ; ಅದೂ ಮೂರು ಹೊತ್ತೂ ಕ್ಯಾಶ್ಯುಯಾಲ್ಟಿ ಮೆಡಿಕಲ್ ಆಫೀಸರರು ಫೋನಿನ 'ಮೇಲಿರದಿದ್ದರೆ'. ಅಕಸ್ಮಾತ್ ಫೋನು ಹತ್ತಲಿಲ್ಲವೆಂದರೆ ವಾರ್ಡಿನ ನರ್ಸುಗಳು ವಾರ್ಡ್‌ಬಾಯ್ ಅನ್ನು 'ಹೋಗಿ ಡ್ಯೂಟಿ ಡಾಕ್ಟರನ್ ಹಿಡಿಕ್ಯಂಬಾ, ಸೀರಿಯಸ್ ಕೇಸಂತ ಹೇಳು' ಎಂದು ಹೇಳಿ ಕಳಿಸುತ್ತಿದ್ದರು.

ಓಬಳೇಶು ಬಂದು ಕರೆದಾಗ ಪಾಳಿಯ ಕಾರ್ಯಶ್ರೇಣಿಯ ಅತಿಕೆಳಗಿನ ಮೆಟ್ಟಿಲಲ್ಲಿದ್ದ ಹೌಸ್ ಸರ್ಜನ್ನುಗಳೆಂಬ ಬಡಪಾಯಿಗಳಾದ ನಾವು ನಮ್ಮ ಸ್ಟೆಥೋಸ್ಕೋಪನ್ನೂ ಮತ್ತು ಬಿಳಿಯ ಕೋಟಿನ ಪಾಕೀಟೆಂಬ ಬತ್ತಳಿಕೆಯಲ್ಲಿ ಮಂಡಿ ಕುಟ್ಟುವ ಸಣ್ಣ ಸುತ್ತಿಗೆ, ಒಂದೆರಡು ಅಡ್ರಿನಲಿನ್‌ನ ವಯಾಲ್ ಎಲ್ಲವನ್ನೂ ತೆಗೆದುಕೊಂಡು ಹೊರಡುತ್ತಿದ್ದೆವು. ನಮ್ಮ ಅದೃಷ್ಟಕ್ಕೆ ಈ ಸೀರಿಯಸ್ ಕೇಸು ಸ್ಪೆಷಲ್ ವಾರ್ಡು ಅಥವಾ ಐಸಿಯುನಲ್ಲಾಗಿದ್ದರೆ ಅಥವಾ ನಮ್ಮ ಜತೆ ರಾತ್ರಿಪಾಳಿಯಲ್ಲಿ ಸ್ವಲ್ಪ ಚೆಂದಾದ ಲೇಡಿ ಡಾಕ್ಟರೇನಾದರೂ ಡ್ಯೂಟಿಯ ಮೇಲಿದ್ದಿದ್ದರೆ, ಆಗ ನಮ್ಮ ಜತೆ ಈ ಹೆಜಿಮೊನಿಯಲ್ಲಿ ನಮಗಿಂತ ಒಂದು ಮೆಟ್ಟಿಲು ಮೇಲಿದ್ದ ಪೀಜೀಗಳೂ ನಮ್ಮ ಜತೆ ಹೊರಡುತ್ತಿದ್ದರು. 'ಗುರೂ ಹೋಗಿ ಸರ್ಟಿಫೈ ಮಾಡಿ ಬಂದುಬಿಡು. ಈ ಸಾವು ಅನ್ನೋದು ಯಾರಿಗೆ ಬರೋಲ್ಲ, ಹೇಳು' ಎಂದು ಬುದ್ಧರಾಗುತ್ತಿದ್ದ ಈ ನಮ್ಮ ಪೀಜೀಗಳಿಗೆ ಈ ಲಲನಾಮಣಿಗಳಿದ್ದ ಕ್ಷಣ 'ಕಾರ್ಡಿಯಾಕ್ ಅರೆಸ್ಟ್'ನ ಪೆಥೋಫಿಸಿಯಾಲಜಿ ಇದ್ದಕ್ಕಿದ್ದ ಹಾಗೆ ನೆನಪಿಗೆ ಬಂದು ಎಂತಹ 'ಅರೆಸ್ಟ್' ಆದರೂ ರೈಟ್ ಟೈಮ್ ಮತ್ತು ರೈಟ್ ಪ್ಲೇಸಲ್ಲಿ ಆದರೆ ಹೇಗೆ ಉಳಿಸಿಬಿಡಬಹುದೆಂದು ಪಾಠಹೇಳಿಕೊಡುವ ಬೃಹಸ್ಪತಿಗಳಾಗಿಬಿಡುತ್ತಿದ್ದುದನ್ನು ನಾವು ಬಾಯಿಬಿಟ್ಟುಕೊಂಡು ನೋಡುತ್ತಿದ್ದೆವು. ಹೊಸಾ ವೈದ್ಯರುಗಳಾದ ನಾವು ಇಂತಹ ಸಮಯದಲ್ಲಿ ಯಾರು ಸಿಕ್ಕರೂ ಸಾಕು ಎಂದು ಕರೆದುಕೊಂಡು ಹೊರಡುತ್ತಿದ್ದೆವು.

ಒಂದು ಇಂಥದೇ ರಾತ್ರಿ. ಸ್ಪೆಷಲ್ ವಾರ್ಡಿನಲ್ಲಿ ಯಾರೂ ರೋಗಿಗಳಿಲ್ಲದ, ಲೇಡಿಗಳು ಯಾರೂ ಡ್ಯೂಟಿಯಲ್ಲಿರದ ರಾತ್ರಿ. ನಾನೊಬ್ಬನೇ ಎಂಎಂಟೂಗೆ ಹೋಗಬೇಕಾದ ಪ್ರಸಂಗ ಬಂತು. ವಾರ್ಡ್ಬಾಯ್ ಓಬಳೇಶು ಬಂದು 'ಸಾರೂ, ಆ ನಾಲ್ಕನೇ ಬೆಡ್‌ನಲ್ಲಿದ್ದನಲ್ಲ,

ವಡ್ಡರಬಂಡದ ರಾಮುಲು, ಆತಗೆ ಉಸಿರು ಎಬ್ಬೆಬ್ಬಿ ಬರತಾಐತಂತೆ. ರುದ್ರಮ್ಮ ಸಿಸ್ಟರ್ ಓಗಿ ಡಾಕ್ಟ್ರನ್ನ ಬರ್‍ರನೆ ಕರಕಂಬಾ, ಅಂದ್ಲು' ಅಂದ. ನಾನು ನನ್ನ ಪೀಜೀ ಕಡೆ ನೋಡಿದಾಗ ಆತ ಹ್ಯಾರಿಸನ್ನಲ್ಲಿ ಕುತ್ತಿಗೆ ಹುಗಿದು, 'ಗುರೂ, ನಾಳೆ ಕ್ಲಿನಿಕಲ್ ಸೆಮಿನಾರಿನಲ್ಲಿ ಮಲ್ಟಿಪಲ್ ಕ್ರೇನಿಯಲ್ ನರ್ವ್ ಪಾಲ್ಸಿ ಪ್ರೆಸೆಂಟ್ ಮಾಡ್ತಾ ಇದೀನಿ. ನೀ ಹೋಗ್ಬಾ. ಏನು ಹೆದರ್ಕೆ ಇಲ್ಲ. ಯು ಆರ್ ರೆಡಿ' ಎಂದು ವಿಜಯೀಭವ ಎನ್ನುವಂತೆ ಆಶೀರ್ವದಿಸಿ ಕಳಿಸಿದ. ಸರಿ, ಎಂದು ನಾ ಹೊರಡಲು ಸಿದ್ಧನಾದೆ.

ಮೊದಲೇ ಹೇಳಿದ ಹಾಗೆ ಈ ಮೆಡಿಕಲ್ ವಾರ್ಡ್ ಇರುವುದು ಕ್ಯಾಶುಯಾಲ್‌ಟಿಯಿಂದ ಸುಮಾರು ಹತ್ತು ನಿಮಿಷದ ವಾಕ್. ಓಬಳೇಶು ನಮ್ಮನ್ನು ಹುಡುಕಿಕೊಂಡು ಬಂದಿದ್ದಾನೆ ಎಂದರೆ ನರ್ಸ್ ರುದ್ರಮ್ಮ ಸುಮಾರು ಬಾರಿ ಫೋನು ಮಾಡಿ ಲೈನು ಹತ್ತದೆ, ಕೊನೆಗೆ ಓಬಳೇಶುವನ್ನು ಕಳಿಸಿದ್ದಾರೆ. ಆಗ ತಾನೆ ತಿಂದ ಬೀಡಾದಿಂದ ಕೆಂಪಾದ ನಾಲಿಗೆಯನ್ನು ತೋರಿಸುತ್ತಾ ಹಲ್ಲಿನ ಸಂದಿಗೆ ಕಡ್ಡಿ ಹಾಕುತ್ತಾ 'ಸಾರೂ, ಅರ್ಜೆಂಟಂತೆ' ಎಂದು ಹೇಳುವ ಪರಿ ನೋಡಿದರೆ ಓಬಳೇಶು ನೇರವಾಗಿ ಕ್ಯಾಶುಯಾಲ್‌ಟಿಗೆ ಬಂದಿದಾನೆ ಎನ್ನುವಂತೆ ಕಾಣಲಿಲ್ಲ. ಹತ್ತು ನಿಮಿಷದ ನಡಿಗೆ, ಹತ್ತದ ಫೋನು, ಕೆಂಪುನಾಲಿಗೆಯ ಓಬಳೇಶು ಎಲ್ಲವನ್ನೂ ನೋಡಿದಾಗ ಆ ರಾಮುಲು ಬದುಕಿರುವ ಸಾಧ್ಯತೆ ಕಮ್ಮಿ ಎನಿಸಿದರೂ ಅಲ್ಲಿಗೆ ನಾ ಹೋಗಲೇ ಬೇಕಾಗಿರುವುದರಿಂದ ನನ್ನ ಪರಿಕರಗಳನ್ನೆಲ್ಲಾ ಸಿದ್ಧಮಾಡಿಕೊಳ್ಳುತ್ತಿದ್ದೆ. ಅಕಸ್ಮಾತ್ ಆ ರಾಮುಲು ಬದುಕಿದ್ದು ಉಸಿರಾಡಲು ಕಷ್ಟಪಡುತ್ತಿದ್ದರೆ, ಹೃದಯದ ಬಡಿತ ನಿಂತುಹೋಗಿದ್ದರೆ ನಾ ಏನು ಮಾಡಬೇಕು? ಕೃತಕ ಉಸಿರಾಟಕ್ಕೆ ವಾರ್ಡಲ್ಲಿ ಪರಿಕರಗಳಿರುತ್ತವೆಯೇ? ಅಡ್ರಿನಲಿನ್‌ನ ಡೋಸೆಷ್ಟು? ಎದೆಯನ್ನು ನಿಮಿಷಕ್ಕೆ ಎಷ್ಟು ಬಾರಿ ಒತ್ತಬೇಕು? ಇದ್ದಕ್ಕಿದ್ದಂತೆ ಒಂದು ಜೀವದ ಅಳಿವು-ಉಳಿವು ನನ್ನ ಕೈಯಲ್ಲಿದೆ ಎಂದೆನಿಸಿ ತೊಡೆ ನಡುಗಲು ಶುರುವಾಯಿತು. ಆದರೂ ಓಬಳೇಶು ಮುಂದೆ ಅಧೀರನಾಗಬಾರದೆಂದು ಉಗುಳು ನುಂಗಿ ಬಚ್ಚಲಿಗೆ ಹೋಗಿ, 'ಮೃತ್ಯುಂಜಯಾಯ ರುದ್ರಾಯ' ಹೇಳಿಕೊಂಡು, 'ಸರಿ ನಡಿ' ಎಂದು ಹೊರಟೆ.

ನಡಕೊಂಡು ಹೊರಟ ನನ್ನ ನೋಡಿ, ಓಬಳೇಶು 'ಇದೇನ್ಸಾಮಿ ಕಾಲ್ನಾಗ್ ನಡೀತಾ ಹೊರಟ್ಯಾ?' ಎಂದು ನನ್ನ ನೋಡಿದ. ಆಸ್ಪತ್ರೆಯೊಳಗೆ ನಡೆಯದೇ ಇನ್ನು ಹೇಗೆ ಹೋಗುವುದು ಎಂದು ನಾ ಆಶ್ಚರ್ಯದಿಂದ ಆತನ ಮುಖ ನೋಡಿದಾಗ ಆತ, 'ಅಯ್, ಬಾ ಇಲ್ಲಿ ಕೂತ್ಕ ಈ ಸೈಕಲ್ ಹಿಂದೆ. ಹಿಂಗ್ ವಾಲಾಡ್ಕಂಡು ಹೋದ್ರೆ ಆ ರಾಮುಲು ಸತ್ತು ಸುಮ್ಮಕಾದ್ರೂ ಆ ಸಿಸ್ಟರ್ ನಿನ್ ಜೀವಾ ತಗೀತಾಳೆ' ಎಂದು ಸೈಕಲ್‌ನ ಕ್ಯಾರಿಯರ್ ಮೇಲೆ ನನ್ನ ಕೂರಿಸಿಕೊಂಡು ಆಸ್ಪತ್ರೆಯ ಕಾರಿಡಾರಿನಲ್ಲಿ ಸೈಕಲ್ಲನ್ನು ಜುಂಯ್ ಎಂದು ಪೆಡಲಿಸಿದ. ನಾನು ನನ್ನ ಕೋಟು, ಹೆಗಲಮೇಲಿನ ಸ್ಟೆಥೋಸ್ಕೋಪು ಮತ್ತು ನೂರಾ ಇಪ್ಪತ್ತು ರೂಪಾಯಿ ಬೆಲೆಬಾಳುವ ಬಾಟಾ ಶೂಗಳೊಳಗಿದ್ದ ನನ್ನ ಕಾಲನ್ನು ಅಗಲಿಸಿ ಕೂತೆ. ಕೇವಲ

ಎರಡು ನಿಮಿಷದಲ್ಲಿ ನಾವಿಬ್ಬರೂ ಎಂಎಂಟೂಲಿದ್ದವು. ಅಲ್ಲಿ ಸೈಕಲ್‌ಗೆ ಸ್ಟ್ಯಾಂಡ್ ಹಾಕುತ್ತಾ, 'ಎಲ್ಲ ಸರ್ರೋದ್ಮೇಲೆ ನಂಗೇಳು. ವಾಪಸ್ ಕ್ಯಾಶ್ವಾಲ್ಟಿಗೆ ಡ್ರಾಪ್ ಹಾಕ್ತೀಸಿ' ಎಂದ. ಬೀಪರು, ಮೊಬೈಲುಗಳಿಲ್ಲದೇ ಆಗುವ ವಿಳಂಬವನ್ನು ಓಬಳೇಶು ನಿಭಾಯಿಸುತ್ತಿದ್ದುದು ತನ್ನ ಹರ್ಕ್ಯುಲಿಸ್ ಸೈಕಲ್ಲಿನಿಂದ. ಭಪ್ಪರೇ, ಎಂದುಕೊಂಡು ಒಳಹೋದೆ.

ನನ್ನ ನೋಡಿದ ತಕ್ಷಣ ರುದ್ರಮ್ಮ 'ಏನ್ ಡಾಕ್ಟ್ರೇ, ಈಗ ಬಂದ್ರಾ. ಬರ್‍ರಿ ಬರ್‍ರಿ. ಊರು ಸೂರೆ ಹೊಡೆದ ಮೇಲೆ ಕೋಟೆ ಬಾಗ್ಲು ಹಾಕಿದ್ರಂತೆ. ಮೋಹನ್‌ಬಾಬು ಸಿನಿಮಾನಾಗೆ ಪೋಲಿಸರು ಬರೋದು, ಈ ಎಂಎಂಟೂಗೆ ಡ್ಯೂಟೀ ಡಾಕ್ಟುಗಳು ಬರೋದು ಎಲ್ಲ ಒಂದೇ ನೋಡಿ. ಬರ್‍ರಿ ಬರ್‍ರಿ. ಇಲ್ಲಿ ಕೇಸ್ ಶೀಟಲ್ಲಿ ಒಂದು ಸೈನ್ ಹಾಕಿ ಸರ್ಟಿಫೈ ಮಾಡಿ ಹೋಗ್ರಲಾ. ಓಬಳೇಶು ಹೊರಟ ಐದು ನಿಮಿಷಕ್ಕೇ ಇತ್ತಕಡೆ ರಾಮುಲು ಕಲಾಸ್. ಹಾರ್ಟ್ ಫೈಲ್ ಆಗಿತ್ತಂತಲ್ಲ. ನೀವು ಬಂದಿದ್ರೂ ಏನ್ಮಾಡಕ್ ಆಗ್ತಿತ್ತು, ತಗೋರಿ. ಸರಿ ಈಗ ಭಡಾರನೆ ಮಾಡ್ರಿ. ನಾನು ಉಳಿದ ಏರ್ಪಾಟು ಮಾಡ್ಬೇಕು. ಈ ಟೈಮಲ್ಲಿ ಯಾರು ಬಾಡಿ ತಗಂಡೋಗ್ತಾರೆ? ಓಬಳೇಶು, ಆ ಟ್ಯಾಕ್ಸಿ ಬಾಬೂ ಇದಾನಾ ನೋಡು. ಕೊಂಚ ರೊಕ್ಕಾ ಹೆಚ್ಚುಕಮ್ಮಿ ಮಾಡ್ಕಂಡು ಒಂದು ಟ್ರಿಪ್ ಹೊಡೀತಾನ ಕೇಳ್ಕಂಬ. ಆಕಡೀಂದ ಬರಬೇಕಾದ್ರೆ ಬೆಳಗ್ಮುಂಜಾನೆ ಗಿರಾಕಿಗಳು ಸಿಗ್ತಾದು ಅಂತ ಏಳು. ಸಿಸ್ಟರ್ ರುದ್ರಮ್ಮ ಏಳಿದ್ರು ಅಂತ ಏಳು ಓಗಲೇ. ಬೇಗ ಓಗ್ಲೇ ಮಂಗ. ಅಸಲು ನಯಾಪೈಸಾ ಉಪಯೋಗಿಲ್ಲ. ಉಂಬಾಕಿಲ್ಲದಿದ್ರೂ ಸೈ ಹಲ್ಲಿಗೆ ಕಡ್ಡೀ ಹಾಕ್ತಾ ನಿಂತಿರ್ತೈತೆ' ಎಂದು ಓಬಳೇಶುವನ್ನು ಡ್ರೈವರ್ ಬಾಬುವನ್ನು ಹುಡುಕಲು ಕಳಿಸಿ ಇನ್ನೂ ಏನು ಮಾಡುತ್ತಾ ನಿಂತಿದ್ದೀಯಾ ಎನ್ನುವಂತೆ ನನ್ನ ನೋಡಿದಳು.

ನಾನು ಇಲ್ಲಿ ಮಾಡುವುದು ಏನೂ ಉಳಿದಿಲ್ಲ ಎನ್ನುವುದು ನನಗೆ ಖಾತ್ರಿಯಾಯಿತು. ಪರದೆಗಳಿಂದ ಮುಚ್ಚಿದ್ದ ರಾಮುಲುವಿನ ಹಾಸಿಗೆಯ ಹತ್ತಿರ ಒಂದು ಪೆನ್‌ಟಾರ್ಚ್, ಸ್ಟೆಥೋಸ್ಕೋಪ್ ತೆಗೆದುಕೊಂಡು ನಿಧಾನವಾಗಿ ಹೋದೆ. ರೋಗಿಯನ್ನು ಪರೀಕ್ಷಿಸಿ ಜೀವ ಕೊಂಚವಾದರೂ ಇದೆ ಎಂದು ನನಗನಿಸಿದರೆ ಉಳಿಸುವ ಎಲ್ಲ ಪ್ರಯತ್ನವನ್ನು ಮಾಡಬೇಕಾದ, ಇಲ್ಲವಾದಲ್ಲಿ 'ಸತ್ತಿದ್ದಾನೆ' ಎಂದು ಷರಾ ಬರೆದು ಸಹಿ ಹಾಕುವ ಕ್ರಿಯೆಯನ್ನು ಯಾರ ಸಹಾಯವೂ ಇಲ್ಲದೇ ಒಬ್ಬನೇ ಮಾಡುತ್ತಿದ್ದುದು ಅದೇ ಮೊದಲು. ಅಳುಕಳುಕಿನಿಂದಲೇ ನಿಧಾನವಾಗಿ ಪರದೆ ಸರಿಸಿ ಒಳಗೆ ಹೋದೆ. ಶಾಂತವಾಗಿ ಮಲಗಿದ್ದ ರಾಮುಲು. ಅರೆನಿಮೀಲಿತ ಕಣ್ಣುಗಳು, ಕೊಂಚವೇ ತೆರೆದ ಬಾಯಿ, ಕಟವಾಯಿಯಲ್ಲಿ ಕೊಂಚ ಜೊಲ್ಲು ಒಸರುತ್ತಿತ್ತು. ಕೆಳತುಟಿಯ ಬಲಭಾಗದಲ್ಲಿ ಕೊಂಚ ರಕ್ತ- ಸಾಯುವ ಕಾಲಕ್ಕೆ ನೋವಿನಿಂದ ತುಟಿಕಚ್ಚಿರಬಹುದೇನೋ ಎನ್ನಿಸಿತು. ಜೀವವಿರುವ ಯಾವ ಸೂಚನೆಯೂ ಕಾಣಲಿಲ್ಲ. ಆದರೂ, ಸ್ಟೆಥೋಸ್ಕೋಪನ್ನು ಆತನ ಎದೆಯ ಮೇಲೆ ಇಟ್ಟು ಕೇಳಲು ಪ್ರಯತ್ನಿಸಿದೆ. ಲಬ್-ಡಬ್ ರಾಮುವಿನ ಎದೆಬಡಿತವೋ ಇಲ್ಲ ನನ್ನದೋ? ಸಣ್ಣಗೆ ಸಿಳ್ಳಿನಂತೆ ನನ್ನ

ಕಿವಿಯಲ್ಲಿ ಕೇಳುತ್ತಿರುವುದು ಉಸಿರೇ? ಸುಮ್ಮನೇ ಆತನನ್ನೇ ನೋಡುತ್ತಾ ನಿಂತೆ. ಸತ್ತವನನ್ನು ಸತ್ತಿದ್ದಾನೆ ಎಂದು ಪ್ರಮಾಣೀಕರಿಸಿ ಹೇಳುವುದು ಹೇಗೆ? ಹಾ! ಕಣ್ಣಿನ ಪಾಪೆಗಳಿಗೆ ಬೆಳಕು ತೋರಿಸಿ, ಅವು ಕುಗ್ಗುತ್ತವಾ ನೋಡುವುದು. ಸರಿ, ಎಂದು ಜೇಬಿನಲ್ಲಿದ್ದ ಪೆನ್‌ಟಾರ್ಚನ್ನು ರಾಮುಲುವಿನ ಕಣ್ಣಿಗೆ ತೋರಿಸಿದೆ. ಉಹೂ, ಏನೇನೂ ಇಲ್ಲ.

'ಏನ್ನೋಡ್ತಾ ಇದೀರ್‍ರೀ ಡಾಕ್ಟ್ರೇ. ಆತ ಸತ್ತಿದ್ದಾನೆ. ಇಲ್ಲಿ ಸರ್ಟಿಫೈ ಮಾಡಿ. ನಾ ಎಲ್ಲ ಮುಂದಿಂದು ಏರ್ಪಾಟು ಮಾಡ್ತೀನಿ' ಎಂದು ನನ್ನ ಮುಂದೆ ಒಂದು ಕೇಸ್ ಪೇಪರನ್ನು ಹಿಡಿದಳು, ರುದ್ರಮ್ಮ. ನಾನು ಸಹಿ ಹಾಕಿ ಅಲ್ಲಿಂದ ಹೊರಟೆ. ಓಬಳೇಶು ಡ್ರೈವರ್ ಬಾಬುವನ್ನು ಹುಡುಕುವುದಕ್ಕೆ ಹೋಗಿದ್ದರಿಂದ ನಾನು ಹತ್ತು ನಿಮಿಷ ವಾಕ್ ಮಾಡಬೇಕಾಯಿತು. ವಾಪಸ್ಸು ಬಂದು ಡ್ಯೂಟಿ ರೂಮಿನಲ್ಲಿ ಮಲಗಲು ಪ್ರಯತ್ನ ಮಾಡಿದೆ. ಏನೇನೋ ಕೆಟ್ಟಕೆಟ್ಟ ಕನಸುಗಳು, ರಾಮುಲು ಕನಸಲ್ಲಿ ಬಂದು 'ಸಾರೂ' ಎಂದಂತೆ. ನಾನು ಆತನ ಹೃದಯವನ್ನು ಒತ್ತಿಒತ್ತಿ ಉಳಿಸಿದಂತೆ. ಆತ ಎದ್ದು 'ನಿಮ್ಮಿಂದ ತುಂಬಾ ಉಪ್ಕಾರ ಆತು' ಎಂದಂತೆ, ಅರೆಬರೆ ನಿದ್ದೆ. ಅರೆಬರೆ ಎಚ್ಚರ. ಮೊದಲ ಸಾವು, ಮೊದಲ ನಿರಾಸೆ.

ಮಾರನೆಯ ದಿನಾ ಎದ್ದು ಅಲ್ಲೇ ಕ್ಯಾಶುಯಾಲ್‌ಟಿಯಲ್ಲಿದ್ದ ನಲ್ಲಿಯಲ್ಲಿ ಮುಖ ತೊಳೆದು, ಹಲ್ಲುಜ್ಜಿ ರೌಂಡ್ಸಿಗೆ ರೆಡಿಯಾಗುತ್ತಿರಬೇಕಾದರೆ ಹೊರಗೆ ಕಾರಿಡಾರಿನಲ್ಲಿ ಓಬಳೇಶು ಅನುಮಾನಾಸ್ಪದವಾಗಿ ಓಡಾಡುತ್ತಿದ್ದುದು ಕಾಣಿಸಿತು. ಡ್ರೈವರ್ ಬಾಬು ಜತೆ ಬೀಡಿ ಸೇದುತ್ತಾ ಪದೇ ಪದೇ ನನ್ನ ಕಡೆ ನೋಡುವುದು, ಏನೋ ಗುಸುಗುಸು ಮಾತಾಡಿಕೊಂಡಂತೆ ಕಾಣಿಸಿತು. ನನಗೇನೋ ಅನುಮಾನವಾಗಿ ಓಬಳೇಶುವಿನ ಹತ್ತಿರ ಹೋಗಿ 'ಏನಾರ ವಿಷಯ ಇದೆಯಾ?' ಎಂದು ಕೇಳಿದೆ. ಓಬಳೇಶು ನನ್ನ ನೋಡಿ ಕಣ್ಣು ಹೊಡೆದು 'ನೀ ರೌಂಡ್ಸ್ ಮುಗ್ಸು, ಆಮೇಗೆ ಹೇಳ್ತೀನಿ' ಎಂದ. ನನ್ನ ಹತ್ತಿರ ಗುಟ್ಟು ಮಾಡುವುದು ಓಬಳೇಶುವಿಗೇನಿದೆ ಎನ್ನಿಸಿತು. 'ಏನು ಅಂತ ಹೇಳೋ ಮಾರಾಯ' ಎಂದು ಕೊಂಚ ಬೇಸರಿಸಿಕೊಂಡೇ ಕೇಳಿದೆ.

ಒಂದು ಕ್ಷಣ ಆಕಡೆ ಈಕಡೆ ನೋಡಿ ಯಾರೂ ಇಲ್ಲ ಎನ್ನುವುದನ್ನು ದೃಢಪಡಿಸಿಕೊಂಡು ಬಂದು ಕಿವಿಯಲ್ಲಿ 'ಸಾರೂ. ರಾಮುಲು ಸತ್ತಿಲ್ಲ, ಸಾರೂ' ಎಂದ. ನನಗೆ ಎದೆ ಧಸಕ್ಕೆಂದಿತು. ನಾನು ಸತ್ತ ಎಂದು ದೃಢೀಕರಿಸಿದ ಮೊಟ್ಟಮೊದಲ ರೋಗಿ ಸತ್ತೇ ಇಲ್ಲ ಅಂದರೆ. ಆದರೂ ಸ್ವಲ್ಪ ಧೈರ್ಯ ತೆಗೆದುಕೊಂಡು 'ಏನಯ್ಯ, ಏನ್ಮಾತಾಡ್ತಾ ಇದೀ. ನಾನೇ ಕಣ್ಣಾರೆ ನೋಡಿದ್ದೀನಿ' ಎಂದೆ. ಮತ್ತೆ ಮತ್ತೆ ಹಿಂದಿನ ರಾತ್ರಿ ನೋಡಿದ್ದ ರಾಮುಲುವಿನ ಮುಖವನ್ನು ನೆನಪಿಸಿಕೊಳ್ಳಲು ಪ್ರಯತ್ನ ಮಾಡಿದೆ. ಕಿವಿಯಲ್ಲಿ ಲಬ್‌ಡಬ್, ಸುಂಯ್, ಗೊರಗೊರ ಧ್ವನಿಗಳು ಅನುರಣಿತವಾದವು. ಓ ದೇವರೇ... ಎಂಥಾ ಕೆಲಸವಾಯಿತು? ಕಾಯಿಲೆ ಕಂಡುಹಿಡಿಯುವುದರಲ್ಲಿ ತಪ್ಪು ಮಾಡಿದರೆ ಪರವಾಗಿಲ್ಲ. ಆದರೆ, ಸಾವನ್ನೇ ಗುರುತಿಸದೇ ಹೋದೆನಲ್ಲ. ಎಂಥ ಕಲಿಸಿದ್ದಾರೆ, ಮೆಡಿಕಲ್ ಕಾಲೇಜಿನಲ್ಲಿ. ಹೌದು ನನಗೆ ಕೈಕೊಟ್ಟಿದ್ದು

ಆ ಪಾಪವೇ. ಆ ಸಣ್ಣ ಬೆಳಕಿನ ಕೋಲಿನಲ್ಲಿ ಅದು ಹಿಗ್ಗುತ್ತದೋ, ಕುಗ್ಗುತ್ತದೋ ಯಾರಿಗೆ ಗೊತ್ತಾಗುತ್ತದೆ?

‘ಇಲ್ಲ, ಸಾರೂ. ನೀನು ಬಂದು ಪರೀಕ್ಷೆ ಮಾಡಿ ಓದ್ರಾ, ರುದ್ರಮ್ಮಾ ಬಂದು ಬಾಬೂ ಗಾಡಿ ತಗಂಬಾ ಅಂತ ನಂಗೆ ಹೇಳ್ತ್ರಾ. ನಾ ಓಗಿ ಬಾಬೂನ ಕರಕಂಬಂದ್ರಾ. ಬಾಬೂ ಬಂದು, ‘ಏಮ್ರಾ ಓಟ್ಟೇಸು ಬಾಡಿ ಇಂಕಾ ವಾರ್ಮ್ ಉಂದಿ’ ಅಂದ್ರಾ, ನಂಗೂ ಏಕ್‌ದಂ ಅನ್ಮಾನ ಸುರು ಆಗ್ಬುಟ್ತು. ಆದ್ರೆ, ರುದ್ರಮ್ಮೋರು ನಮ್ಮಿಬ್ರಿಗೂ ಬೈದು ಕರ್ಕಂಡು ಹೋಗ್ರಲೇ, ನಿಮ್ದೊಂದು ಎಂದಿರತನ ಇದ್ದಿದ್ದೇ ಅಂತ ನಂಗೂ ಬಾಬೂಗೂ ಚುಪ್ ಮಾಡ್ಸಿ ಕಳಿಸ್ಬಿಟ್ರು. ಬಾಬೂನೇ ಕೇಳಿ, ಏ ಬಾಬೂ ಇಕ್ಕಡ ರಾರೇ ರಾ.’ ಎಂದು ಬಾಬೂನ ಕರೆದ. ಹೊರಗೆ ಬೀಡಿಯ ಹೊಗೆಯಿಂದ ವರ್ತುಲಾಕಾರದ ಧೂಮಗೋಳಗಳನ್ನು ರಚಿಸುವುದರಲ್ಲಿ ತಲ್ಲೀನನಾದ ಬಾಬು ಬೀಡಿಯ ಬೆಂಕಿಯನ್ನು ಅಲ್ಲೇ ಇದ್ದ ಕಂಬಕ್ಕೆ ಒತ್ತಿ, ಉಳಿದ ಮೋಟನ್ನು ಕಿವಿಯ ಮೇಲಿಟ್ಟುಕೊಂಡು ನಿರ್ವಾತದಲ್ಲಿ ಸೃಷ್ಟಿಯಾಗಿದ್ದ ತನ್ನದೇ ಧೂಮಕಲೆಯನ್ನು ತಾನೇ ನಿರ್ನಾಮ ಮಾಡಿ ನಮ್ಮ ಬಳಿ ಬಂದ.

‘ಔನ್ ಸಾರೂ. ಅಸಲು ನೀ ಏದಕ್ಕೆ ರಾಮುಲು ಸತ್ತ ಅಂದ ಹೇಳ್ದಿ ಅಂತ ನಂಗರ್ಥವೇ ಆಗ್ಲಿಲ್ಲ. ಇಂಥ ಕೇಸನ್ನ ನನ್ನ ಸರ್ವೀಸಲ್ಲಿ ಒಂದೆರಡು ಸಾರಿ ನೋಡಿದೀನಿ. ಆದರೆ, ಈ ಕೇಸೇ ಬೇರೆ. ಮೈಕೈಯೆಲ್ಲ ಬೆಚ್ಚಗೆ ಇತ್ತು ಅಂತ ರಾಮುಲು ಹೆಡತೀಗೆ ಸೂಚ್ನೆ ಗೊತ್ತಾದ ತಕ್ಷಣ ಕಾನ್ಸಾರ್ಗೇ ಮೈಕೈ ಉಜ್ಜಕ್ಕೆ ಶುರುಮಾಡಿದಳು. ತಕ್ಷಣ ರಾಮುಲು ಎತ್ರಿತಾತಾ ತನ ಬಲಗೈ ಮೇಲೆತ್ತಿದ. ನಾ ಇದೇ ಎರ್ಡು ಕಣ್ಣಾಗೇ ನೋಡ್ದೇ. ಆಮೇಗೆ ರಾಮುಲು ತಮ್ಮ, ತಂಗೀ ಎಲ್ರೂ ಗಾಡೀನ ಓಪಿಡೀಗ್ ವಾಪಸ್ ತಿರುಗ್ಸು ಬಾಬೂ ಅಂದರು. ಆದ್ರೆ ಆಯಮ್ಮ ಮಾತ್ರ ಸತ್ರೂ ಸೈ ಮತ್ತೆ ಓಪಿಡಿ ಮಾತ್ರ ಬೇಡ. ಹಟ್ಯಾಗೇ ಯಾರೋ ಹಕೀಮನ್ನ ಕರ್ಸಣ, ನೀ ಬೇಗ್ನಡಿ ಅಂತು. ನಾ ಸೀದಾ ಗಾಡೀನ ಹಟ್ಟೀಗೆ ಕರಕೊಂಡು ಹೋಗಿ ಅವನ್ನ ಬಿಟ್ಟು ಅಂಗೇ ವಾಪಸ್ ಬರ್ತಾ ರಾಮುಲು ತಮ್ಮನ್ನ ಹಕೀಮ್ ಭೈ ಮನೀತಾವ ಡ್ರಾಪ್ ಹಾಕ್ಬಂದೆ. ಆಯಪ್ಪ ನಮಜ್ ಮುಗಿಸ್ಕಂಡು ಬರ್ತಾನಂತೆ. ಈ ಟೇಮಿಗೆ ರಾಮುಲು ಓಡಾಡ್ತಾ ಇರಬಹುದು’ ಎಂದ, ತನ್ನ ಹಳೇ ಫೇವರ್ ಲ್ಯೂಬಾ ನೋಡುತ್ತಾ.

ನನಗೆ ಜಂಘಾಬಲವೇ ಉಡುಗಿಹೋದಂತಾಯಿತು. ನಮ್ಮ ಪ್ರೊಫೆಸರರಿಗೆ ವಿಷಯವೇನಾದರೂ ಗೊತ್ತಾದರೆ ಆ ರಾಮುಲು ಬದುಕಿದ್ದಾನೋ ಇಲ್ಲವೋ ಗೊತ್ತಿಲ್ಲ, ನಾನಂತೂ ಉಳಿಯುವುದಿಲ್ಲ ಎನ್ನಿಸಿತು. ನಾನೇ ನಮೂದಿಸಿದ ‘ಟೈಮ್ ಆಫ್ ಡೆತ್-೨.೩೦ ಎಎಮ್’ ಎಂಬ ಮರಣೋಲ್ಲೇಖದ ಕೆಳಭಾಗದಲ್ಲಿ ನನ್ನ ಸಹಿ, ಅದರ ಮುಂದಿದ್ದ ಎಂಬಿಬಿಎಸ್ ಎಂಬ ನಾಲ್ಕಕ್ಷರ ಎಲ್ಲವೂ ನನ್ನ ಕಣ್ಣ ಮುಂದೆ ಕುಣಿಯತೊಡಗಿತು. ‘ಎದ್ದು ಕೂತ ಶವ, ವಡ್ಡರಬಂಡದಲ್ಲೊಂದು ಮಹಾ ಪವಾಡ’ ಎಂಬ ಬಳ್ಳಾರಿ ಪತ್ರಿಕೆಯ ಕಪ್ಪುಬಿಳುಪು ಹೆಡ್‌ಲೈನ್ ನನ್ನ ಕಣ್ಣ ಮುಂದೆ ಕುಣಿದಾಡತೊಡಗಿತು. ಪ್ರೊಫೆಸರರು

ಕಾಲೇಜಿನಿಂದ ಹೊರಗೆ ಹಾಕುವುದು, ಅಪ್ಪ 'ಕೆಲಸಕ್ಕೆ ಬಾರದವನ ತಗೊಂಬಂದು. ಒಂದು ಡೆಡ್ ಬಾಡೀನ ಗುರುತಿಸೋದಕ್ಕೆ ಆಗೋದಿಲ್ಲ ಅಂದರೆ ಇವನೆಂತ ಡಾಕ್ಟರು, ನಮ್ ವಿಷ್ಣುಮೂರ್ತಿ ಡಾಕ್ಟರು ಸತ್ತಿರೋರನ್ನ ಎಬ್ಬಿಸಿ ಕೂರಿಸ್ತಾರೆ. ಡಾಕ್ಟ್ರು ಅಂದರೆ ಹಂಗಿರ್ಬೇಕು, ಕೆಲವ್ರಿಗೆ ಹುಟ್ಟಿದಾಗ್ಲೇ ಕೈಗುಣ ಬಂದಿರುತ್ತೆ,' ಎಂದು ಮೂದಲಿಸುವುದು, ಎಲ್ಲವನ್ನೂ ನೆನೆಸಿ 'ಅಯ್ಯೋ ದೇವರೇ, ಎಂಥಾ ಕೆಲಸ ಮಾಡ್ಬಿಬಿಟ್ಟೆಯಪ್ಪಾ' ಎಂದು ನೇರ ಎಮೆರ್ಮ್‌ಟೂಗೆ ನರ್ಸ್ ರುದ್ರಮ್ಮ ಇನ್ನೂ ಡ್ಯೂಟಿಯಲ್ಲಿದ್ದಾರಾ ಅಂತ ನೋಡುವುದಕ್ಕೆ ಹೋದರೆ ಅಲ್ಲಿಯೂ ನಿರಾಶೆ ಕಾದಿತ್ತು. ಏನು ಮಾಡಲೂ ಗೊತ್ತಾಗದೇ ಸುಮ್ಮನೇ ರೂಮಿಗೆ ಬಂದು ರೂಂಮೇಟು ತ್ಯಾಗರಾಜನ ಹತ್ತಿರ ಹೀಗೀಗಾಯ್ತು ಎಂದು ಹೇಳಿಕೊಂಡು ನನ್ನಿಂದ ಆಗಿರಬಹುದಾದ ಒಂದೇ ಒಂದು ಸಣ್ಣ ತಪ್ಪಿನಿಂದ ನನ್ನ ಭವಿಷ್ಯ ಹೇಗೆ ಕರಾಳವಾಗಲಿದೆ ಎಂದು ಚಿತ್ರಕವಾಗಿ ವರದಿಯೊಪ್ಪಿಸಿ ಗಳಗಳ ಎಂದು ಅತ್ತುಬಿಟ್ಟೆ.

'ಛೆ, ಬಿಡ್ತು ಅನ್ನು ಗುರೂ. ಇಷ್ಟಕ್ಕೆಲ್ಲಾ ಯಾರಳ್ತಾರೆ.' ಎಂದು ಒಂದೆರಡು ಕ್ಷಣ ಗಂಭೀರವಾಗಿ ಯೋಚನೆ ಮಾಡಿ, 'ನಡೀ, ನಾವೇ ಹೋಗಿ ನೋಡಿಕೊಂಡು ಬಂದುಬಿಡೋಣ' ಎಂದ. ನಾನು ಸತ್ತ ಎಂದು ಹೇಳಿದ ವ್ಯಕ್ತಿ ಎದ್ದು ಕೂತಿದ್ದಾನೆ, ಅವನನ್ನು ನೋಡಲು ಹೋಗಿ ಬರುವುದು ಎಂದರೆ? ಅರ್ಥವಾಗಲಿಲ್ಲ. ಒಂದು ಕ್ಷಣ ಯೋಚಿಸಿದ ನಂತರ ಯಾಕಾಗಬಾರದು ಎನ್ನಿಸಿತು. ನಾನೇನು ನನ್ನ ಕೈಯಾರ ಯಾರನ್ನೂ ಸಾಯಿಸಲಿಲ್ಲವಲ್ಲ. ಆತ ಇನ್ನೂ ಬದುಕಿದ್ದಾನೆ ತಾನೆ. ಬದುಕಿದ್ದರೆ ಹೋಗಿ ಕೈಹಿಡಕೊಂಡು 'ನನ್ನ ತಪ್ಪಾಯಿತಪ್ಪಾ' ಎಂದು ಕೇಳಿಬಿಡುವುದು. ಇನ್ನು ಮುಂದೆ ಹುಷಾರಾಗಿರುತ್ತೇನಿ ಎಂದು ಹೇಳುವುದು. ತ್ಯಾಗರಾಜ ಹೇಳುತ್ತಿರುವುದರಲ್ಲಿ ಏನೂ ತಪ್ಪಿಲ್ಲ ಎನಿಸಿತ್ತು.

ಸೀದಾ ಹೋಗಿ ಕ್ಯಾಷುಯಾಲ್ಟಿಯ ಮುಂದೆ ಮತ್ತೆ ಬೀಡಿ ಸೇದುತ್ತಿದ್ದ ಡ್ರೈವರ್ ಬಾಬುವನ್ನು ಹಿಡಿದು ರಾಮುಲುವಿನ ಹಟ್ಟಿಗೆ ಕರಕೊಂಡು ಹೋಗು ಎಂದು ಗೋಗರೆದು ಐವತ್ತು ರೂಪಾಯಿ ಕೊಟ್ಟಾಗ ಆತ ಒಲ್ಲದ ಮನಸ್ಸಲ್ಲಿ ಒಪ್ಪಿದ. ಡವಡವಗುಡುತ್ತಿದ್ದ ಎದೆಯನ್ನು ಒತ್ತಿಹಿಡಿದು ತ್ಯಾಗರಾಜನ ಕೈಹಿಡಿದು ಕಾರಿಂದ ಇಳಿದು ಬಾಬೂ ತೋರಿಸಿದ ವಿಳಾಸ ಹುಡುಕಿಕೊಂಡು ಹೋದಾಗ ಮನೆಯ ಮುಂದೆ ಕುಡಿಕೆಯಲ್ಲಿ ಬೆಂಕಿ. ಒಳಗಿನಿಂದ ಜೋರಾಗಿ ಅಳು, ಪ್ರಲಾಪ. ಆ ಒಂದು ಕ್ಷಣ ಸದ್ಯ ರಾಮುಲು ಸತ್ತಿದ್ದಾನಲ್ಲ ಎಂದು ನನಗೆ ಒಂದು ರೀತಿ ವಿಚಿತ್ರವಾದ ಸಮಾಧಾನವಾಯಿತು. ಹತ್ತಿರ ಹೋಗೋಣವೇ ಬೇಡವೇ ಎಂದು ತ್ಯಾಗರಾಜನನ್ನು ಕೇಳಿದಾಗ 'ಇನ್ನೇನೂ ಯೋಚನೆಯಿಲ್ಲ. ಬಾ' ಎಂದು ಕರಕೊಂಡು ಹೋದ.

ಮನೆಯ ಒಳಗೆ ಹೋಗಲು ನನಗೆ ಧೈರ್ಯವಿರಲಿಲ್ಲ. ಹೊರಗೆ ರಾಮುಲುವಿನ ತಮ್ಮ ಓಡಾಡುತ್ತಿದ್ದ. ಆತ ನನ್ನನ್ನು ಗುರುತಿಸಿದವನೇ ಹತ್ತಿರ ಬಂದ. 'ಓ ಇಲ್ಲೀಗೆ ಬಂದ್ರಾ ಸಾರೂ. ಎಂಥ ದೇವ್ರಂಥ ಮನಸು ನಿಂದು' ಎಂದು ಸಾವಿನ ಮನೆಯಲ್ಲಿಯೂ ಕರೆದು ಕೂಡಿಸಿ

ಟೀ ಕೊಟ್ಟು ಉಪಚಾರ ಮಾಡಿದ. ಏನೆಂದು ಕೇಳುವುದು, ಆತನನ್ನು. ಸತ್ತಿರುವನನ್ನು ಸತ್ತಿದ್ದಾನಾ ಎಂದು ವ್ಯಥಪಡಿಸಿಕೊಂಡು ಹೋಗುವುದಕ್ಕೆ ಡಾಕ್ಟರುಗಳು ಬಂದಿದ್ದಾರೆ ಎಂದರೆ ನಮ್ಮನ್ನು ಶತಮೂರ್ಖರು ಎಂದು ತಿಳಕೊಳ್ಳುವುದಿಲ್ಲವೇ? ಸುಮ್ಮನೇ ಟೀ ಕುಡಿದು ಬಂದಾಯಿತು. ಸತ್ತಿದ್ದ ರಾಮುಲು ಎರ್ರಿತಾತನ ತರ ಕೈ ಎತ್ತಿದ ಎಂದು ನನ್ನ ಹತ್ತಿರ ಹೇಳಿದ ಬಾಬೂವನ್ನು ಹುಡುಕಿದೆ. ಆತ ಎಲ್ಲಿಲ್ಲೂ ಸಿಗಲಿಲ್ಲ.

ವಾಪಸ್ಸು ಬರುವಾಗ ನನಗಿಂತ ಈ ಒಂದು ವರ್ಷ ಸೀನಿಯರ್‌ರಾದ ತ್ಯಾಗರಾಜ, ಸತ್ತ ಮೇಲೆ ಎಷ್ಟು ಹೊತ್ತು ಮೈ ಇನ್ನೂ ಬೆಚ್ಚಗೆ ಇರುತ್ತದೆ. ಇದ್ದಕ್ಕಿದ್ದಂತೆ ಮೈ ಸೆಟೆದುಕೊಳ್ಳುವುದಕ್ಕೆ ರೈಗರ್ ಮಾರ್ಟಿಸ್ ಎನ್ನುತ್ತಾರೆ ಎನ್ನುವ ವೈದ್ಯಕೀಯ ವಿವರಣೆ (ರಾಮುಲು ಎರ್ರಿತಾತಾನ ರೀತಿ ಕೈ ಎತ್ತಿದ್ದು ಆದರಿಂದ ಹೌದೇ ಅಲ್ಲವೇ ಎನ್ನುವುದು ನನಗೆ ಇನ್ನೂ ಗೊತ್ತಾಗಿಲ್ಲ) ಇತರೇ ಎಲ್ಲವನ್ನೂ ವಿವರವಾಗಿ ಹೇಳಿದ್ದಷ್ಟೇ ಅಲ್ಲ, ಮುಂದಿನ ಮೂರು ತಿಂಗಳು ಹಾಸ್ಟೆಲ್ಲಿನ ಮೆಸ್ಸಿನಲ್ಲಿ ಯಾರೇ ಸಾವನ್ನು ಸರ್ಟಿಫೈ ಮಾಡಿ ಬಂದಿದ್ದನ್ನು ಮಾತಾಡುತ್ತಿದ್ದರೂ 'ಒಮ್ಮೆ ಗುರೂಗೆ ತೋರಿಸಬೇಕಿತ್ತು' ಎಂದು ತಮಾಷೆ ಮಾಡುತ್ತಿದ್ದ.

*

ಈ ಸಾವನ್ನುವುದನ್ನು ದಿನಂಪ್ರತೀ ನೋಡುವ ನನ್ನಂತ ಕೆಲಸದಲ್ಲಿರುವವರು ಸಾವಿನ ಘನತೆಯ ಬಗ್ಗೆ ಎಂಥ ಗೌರವವಿಟ್ಟುಕೊಂಡಿದ್ದರೂ ಸಾವು ಹುಟ್ಟಿಸಬೇಕಾದಂತ ಹಲವು ತೀವ್ರತರ ಭಾವನೆಗಳಿಗೆ ಒಂದು ಮಟ್ಟಿನಲ್ಲಿ ಇನ್ಸುಲರ್ ಆಗಿಬಿಡುತ್ತೇವೆ. ಬಹಳಷ್ಟು ಬಾರಿ ರೋಗಿಯ ಜತೆ ನಮಗೆ ಯಾವ ಸಂಬಂಧ, ಸ್ನೇಹವಿರದೇ ಇರುವುದರಿಂದ ಆ ಸಾವು ನಮ್ಮ ಕೆಲಸದ ಇನ್ನೊಂದು ಭಾಗವಾಗಿ ಹೋಗುತ್ತದೆ. ಎಷ್ಟರಮಟ್ಟಿಗೆ ಎಂದರೆ ಕೆಮ್ಮು, ನೆಗಡಿಗೆ ಮಾತ್ರೆ ಬರೆದುಕೊಟ್ಟಷ್ಟೇ ನಿರಾಳವಾಗಿ ಡೆತ್ ಸರ್ಟಿಫೈ ಮಾಡಿ ಮುಂದಿನ ಕೆಲಸದಲ್ಲಿ ತೊಡಗಿಕೊಳ್ಳುತ್ತಿರುತ್ತೇವೆ. ಒಮ್ಮೆ ರಾತ್ರಿಪಾಳಿಯಲ್ಲಿದ್ದಾಗ ಬೆಳಿಗ್ಗೆ ಮೂರುಗಂಟೆಯ ಸಮಯದಲ್ಲಿ ಭಯಂಕರ ಹಸಿವಾಗಿ ಪೀಟ್ಜಾ ತಿನ್ನೋಣವೆಂದು ಸಿದ್ಧಮಾಡಿಕೊಳ್ಳುತ್ತಿದ್ದೆವು. ಪೀಟ್ಜಾದವ ಬಿಸಿಬಿಸಿ ಹಬೆಯಾಡುವ ಪೀಟ್ಜಾವನ್ನು ಬ್ರೇಕ್‌ರೂಮಿನಲ್ಲಿರಿಸಿ ಹೋಗಿದ್ದ. ಇನ್ನೇನು ಪೀಟ್ಜಾ ತುಂಡನ್ನು ಕೈಯಲ್ಲಿ ತೆಗೆದುಕೊಳ್ಳಬೇಕು ಎನ್ನುವಷ್ಟರಲ್ಲಿ ಮೇಲಿನ ವಾರ್ಡಿನಿಂದ ಯಾರಿಗೋ ಸೀರಿಯಸ್ ಎಂದು ಎಲ್ಲರ ಬೀಪರ್‌ಗಳೂ ಸದ್ದುಮಾಡಿದಾಗ ಎಲ್ಲರೂ ಅಲ್ಲಿಗೆ ಹೋಗಬೇಕಾಗಿ ಬಂತು. ಮೇಲೆ ಹೋದಾಗ ತೊಂಬತ್ತನಾಲ್ಕರ ಮುದುಕಿಯೊಬ್ಬಳಿಗೆ ಹೃದಯದ ಬಡಿತ ನಿಂತಿತ್ತು. ಏನೇ ಪ್ರಯತ್ನ ಮಾಡಿದರೂ ಆ ಮುದುಕಿ ಉಳಿಯಲಿಲ್ಲ.

ಆ ಮುದುಕಿಯ ಕುಟುಂಬದವರೂ ಇದನ್ನು ನಿರೀಕ್ಷಿಸಿದ್ದರೆನಿಸುತ್ತದೆ. ಆ ಮುದುಕಿಯ ಸಾವಿನ ಸುದ್ದಿಯನ್ನು ಆಕೆಯ ಮಗಳಿಗೆ ಫೋನು ಮಾಡಿ ತಿಳಿಸಿದಾಗ ಆಕೆ ಆಸ್ಪತ್ರೆಯವರೇ

ಎಲ್ಲ ವ್ಯವಸ್ಥೆಯನ್ನೂ ಮಾಡಬೇಕೆಂದೂ, ಫ್ಯೂನರಲ್ ಹೋಮಿನ ವಿಳಾಸ ಆಸ್ಪತ್ರೆಯ ರೆಕಾರ್ಡುಗಳಲ್ಲಿದೆಯೆಂದೂ, ಆಕೆ ಬೆಳಿಗ್ಗೆ ನೇರವಾಗಿ ಫ್ಯೂನರಲ್ ಹೋಮ್‌ಗೆ ಹೋಗುತ್ತೇನೆಂದೂ ಹೇಳಿದಳು. ನಾನು ನನ್ನ ಕೆಲಸ ಮುಗಿಸಿ, ಎಲ್ಲೆಲ್ಲಿ ಬೇಕೋ ಅಲ್ಲಲ್ಲಿ ಸಹಿ ಹಾಕಿ ಮತ್ತೆ ಎಮರ್ಜೆನ್ಸಿ ಡಿಪಾರ್ಟ್‌ಮೆಂಟಿಗೆ ಬಂದಾಗ ನನ್ನ ಬರವನ್ನೇ ಕಾಯುತ್ತಿದ್ದಂತೆ ಅಲ್ಲಿನ ನರ್ಸು ನನ್ನ ಕೈಗೆ ನಾಲ್ಕು ಹೊಸಾ ರೋಗಿಗಳ ಚಾರ್ಟನ್ನು ಕೊಟ್ಟಳು. ಮುಂದೆ ಕೌಂಟರಿನ ಮೇಲೆ ಕಾಣುತ್ತಿದ್ದ ಪೀಟ್ಸಾದ ಒಂದು ತುಣುಕನ್ನು ಕಚ್ಚಿ ತಿನ್ನುತ್ತಾ ನಾನು ಚಾರ್ಟಿನ ಮೇಲೆ ಕಣ್ಣಾಡಿಸತೊಡಗಿದೆ. ಆಗ ಇದ್ದಕ್ಕಿದ್ದಂತೆ ವಾರ್ಡನ್ನು ಸ್ವಚ್ಛಗೊಳಿಸುವ ಟಾಡ್ ಬಂದು ನನ್ನ ಕಡೆ ನೋಡಿ, 'ನಾಚಿಕೆಯಾಗ್ಬೇಕು, ಡಾಕ್ ನಿನಗೆ. ಆ ಮುದುಕಿ ಸತ್ತು ಐದು ನಿಮಿಷವಾಗಿಲ್ಲ. ಕೈ ಕೂಡ ತೊಳಕೊಂಡಿದೀಯೋ ಇಲ್ಲವೋ. ಇಲ್ಲಿ ಬಂದು ಪೀಟ್ಸಾ ತಿಂತಾ ಇದೀಯಲ್ಲ. ಮನಸಾದರೂ ಹೇಗೆ ಬರುತ್ತೆ ನಿನಗೆ' ಎಂದು ಹೇಳಿ ಜೋರಾಗಿ ಅಳತೊಡಗಿದ.

ಟಾಡ್ ಇಪ್ಪತ್ತೆರಡು ವರ್ಷದ ಯುವಕ. ಈ ಕೆಲಸಕ್ಕೆ ಸೇರಿ ಒಂದು ತಿಂಗಳಾಗಿತ್ತಷ್ಟೇ. ನನಗೆ ಈತ ಏನು ಹೇಳುತ್ತಿದ್ದಾನೆ ಎಂದು ಅರ್ಥವಾಗುವುದಕ್ಕೇ ಹತ್ತು ಸೆಕೆಂಡು ಬೇಕಾಯಿತು. 'ಸಾರಿ, ಟಾಡ್' ಎಂದೆ. ಆತ ಆಗತಾನೇ ಆ ಮುದುಕಿಯ ದೇಹವನ್ನು ಮಾರ್ಚುರಿಗೆ ಸಾಗಿಸಿ ಬಂದಿದ್ದನಂತೆ. ಮುದುಕಿಯ ಹೆಣದ ಜತೆ ಹತ್ತು ನಿಮಿಷಗಳನ್ನು ಕಳೆದ ಆತನಿಗೆ ಬೆಳೆದಿದ್ದ ಬಾಂಡಿಂಗ್‌ನ ತುಣುಕೂ ಆಕೆಯನ್ನು ಉಳಿಸಲು ಪ್ರಯತ್ನಪಟ್ಟ ನನಗೆ ಇಲ್ಲದೇ ಹೀಗೆ ಯಾವ ರೀತಿಯ ಭಾವನೆಯೂ ಇಲ್ಲದೇ ಪೀಟ್ಸಾ ತಿನ್ನುತ್ತಿರುವುದು ಆತನನ್ನು ವಿಚಲಿತಗೊಳಿಸಿತ್ತು. ಇದು ನನ್ನ ಮಟ್ಟಿಗೆ ಹತ್ತರ ನಂತರ ಬರುವ ಹನ್ನೊಂದನೆಯ ಸಾವು ಎಂದು ಟಾಡ್‌ಗೆ ಹೇಳಿ ಅರ್ಥಮಾಡಿಸುವುದಾದರೂ ಹೇಗೆ? ಟಾಡ್ ಜತೆ ಯಾವ ಮಾತಾಡಲೂ ಧೈರ್ಯವಾಗಲಿಲ್ಲ. ಆದರೆ, ಎಷ್ಟೇ ಗಟ್ಟಿ ಹೃದಯ ನನ್ನದು ಅಂದುಕೊಂಡಂತ ನನಗೂ ಅಂದು ಪೀಟ್ಸಾ ತಿನ್ನಲಾಗಲಿಲ್ಲ. ಅಂದಿನಿಂದ ಇಂದಿನವರೆಗೆ ನಾನು ಯಾವುದೇ ಕೆಲಸದಲ್ಲಿರಬೇಕಾದರೆ ಎಂಥ ವ್ಯಕ್ತಿ ಸತ್ತರೂ, ಒಂದು ನಿಮಿಷ ಮೌನವಾಗಿ ನಿಂತು, ಬಂದು ಮುಂದಿನ ಕೆಲಸದಲ್ಲಿ ತೊಡಗುತ್ತೇನೆ. ಖಂಡಿತಾ ಪೀಟ್ಸಾ ತಿಂದಿಲ್ಲ.

ಅಕಾಲ, ಅನಿರೀಕ್ಷಿತ ಸಾವು ಎಂಥ ಗಟ್ಟಿ ಮನಸ್ಸಿನವನನ್ನೂ ವಿಚಲಿತಗೊಳಿಸಬಹುದು. ಆದರೆ, ಒಬ್ಬ ವ್ಯಕ್ತಿ ಏನು ಮಾಡಿದರೂ ಬದುಕುಳಿಯುವುದಿಲ್ಲ ಎಂದು ಗೊತ್ತಿದ್ದಲ್ಲಿ ಆತನನ್ನು ಮನೆಯವರ ಒತ್ತಾಯದಿಂದಲೋ ಅಥವಾ ಕಾನೂನಿಗೆ ಹೆದರಿಯೋ ಆ ವ್ಯಕ್ತಿಯನ್ನು ಉಳಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾಗ ಆ ಪ್ರಯತ್ನದ ಸಾರ್ಥಕತೆಯ ಬಗ್ಗೆ ಅನುಮಾನ ಬಂದು ಪ್ರಯತ್ನದ ತೀವ್ರತೆ ಹುಸಿಯಾಗುತ್ತದೆ. ನಾನು ಮೇಲೆ ಹೇಳಿದ ಮುದುಕಿಯ ವಿಷಯದಲ್ಲಿ ಆಕೆಯ ಸಾವು ಅವರ ಮನೆಯವರಿಗೂ ಅನಿರೀಕ್ಷಿತವಾಗಿರಲಿಲ್ಲ. ಆದರೆ, ಆಕೆಯ ಹೃದಯ ನಿಂತಾಗ ಆಕೆಯನ್ನು ಉಳಿಸುವ ಪ್ರಯತ್ನ ಮಾಡಬೇಡಿ ಎಂದು ಆಕೆಯಾಗಲೀ ಆಕೆಯ ಮನೆಯವರಾಗಲೀ ಎಲ್ಲೂ ಸೂಚನೆ ಕೊಡದೇ ಇದ್ದುದರಿಂದ ಕಾನೂನುಬದ್ಧವಾಗಿ ಆಕೆಯನ್ನು ಉಳಿಸುವ ಪ್ರಯತ್ನವನ್ನು ನಾವು ಮಾಡಲೇಬೇಕಾಗಿತ್ತು.

ಯಾವುದೇ ರೋಗಿಗೆ ಇದು ಘನತೆಯ ಸಾವಲ್ಲ. ಆದರೂ ಎಷ್ಟೋ ಬಾರಿ ಈ ರೀತಿಯ ಕೃತಕ ಉಸಿರಾಟ, ಎದೆಗೂಡನ್ನು ಒತ್ತುವುದು, ಜೀವ ಉಳಿಸುವ ಔಷಧಿಗಳನ್ನು ಒಲ್ಲದ ಮನಸ್ಸಿನಿಂದ ರೋಗಿಗೆ ಕೊಡುವುದು- ಇಂಥವನೆಲ್ಲ ಪರಿಸ್ಥಿತಿಯ ಕೈಗೊಂಬೆಯಾಗಿ ಮಾಡಲೇಬೇಕಾಗುತ್ತದೆ. ಆಗ ಇದು ಪ್ರಯತ್ನಕ್ಕಿಂತ ಹೆಚ್ಚಾಗಿ ರಿಚುಯಲ್ ಆಗಿಬಿಡುತ್ತದೆ.

ಈ ಮುದುಕಿಯ ವಿಷಯದಲ್ಲಿ ಆದದ್ದೂ ಹಾಗೆ. ನಾ ಆಕೆಯ 'ಸಾವಿನ ಕರೆ'ಗೆ ಓಗೊಟ್ಟು ಮೇಲೆ ಹೋದಾಗ ಅಲ್ಲಿದ್ದ ವೈದ್ಯಕೀಯ ಸಿಬ್ಬಂದಿ ಒಲ್ಲದ ಮನಸ್ಸಿನಿಂದ ಆಕೆಯ ಎದೆ ಒತ್ತುತ್ತಿದ್ದರು. ಒಂದು ಹಬೆಗಟ್ಟಿದ ಮಾಸ್ಕನ್ನು ಆಕೆಯ ಮುಖದ ಮುಂದೆ ಹಿಡಿದು ಆಕೆಯ ಶ್ವಾಸನಾಳಗಳು, ಶ್ವಾಸಕೋಶಗಳಿಗೆ ಜೀವವಾಯುವಿನ ಪೂರೈಕೆಯನ್ನು ತೋರಿಸಿದ್ದರು. ಇವಕ್ಕೆ ವೈದ್ಯಕೀಯ ಸ್ಲಾಂಗ್ 'ಹಾಲಿವುಡ್ ಕೋಡ್' ಅಥವಾ 'ಸ್ಲೋ ಕೋಡ್' ('ಕೋಡ್ ಬ್ಲೂ' ಅಂದರೆ ಯಾರದಾದರೂ ಹೃದಯ ಸ್ತಂಭನ ಆದಲ್ಲಿ ವೈದ್ಯಕೀಯ ಸಿಬ್ಬಂದಿ ಜೀವ ಉಳಿಸಲು ಕೈಗೊಳ್ಳುವ ಕ್ರಿಯೆ. ಇಲ್ಲಿ ಇದು ತೀರ ತೋರಿಕೆಯ 'ಕೋಡ್ ಬ್ಲೂ' ಆಗಿರುವುದರಿಂದ ಇದು ಹಾಲಿವುಡ್ ಕೋಡ್). ವೈದ್ಯಕೀಯ ಸಿಬ್ಬಂದಿಯ ಮೇಲೆ ನಾನು ಕಾನೂನು, ರೋಗಿಯ ಆಯ್ಕೆ- ಎಲ್ಲವುಗಳ ಬಗ್ಗೆ ದೊಡ್ಡ ಉಪನ್ಯಾಸ ಕೊಡಬಹುದು. ಆದರೆ, ಎಲ್ಲರಿಗೂ ಗೊತ್ತಿರುವ ಅನಿವಾರ್ಯ ಅಂತ್ಯವನ್ನು ನಾನಂತೂ ತಪ್ಪಿಸಲಾರೆನಲ್ಲ. ಆದ್ದರಿಂದ ಎಷ್ಟೇ ಬಾರಿ ನಾನಿದನ್ನು ಒಪ್ಪದಿದ್ದರೂ ಈ ನಾಟಕದ ಪಾತ್ರಧಾರಿಯಾಗದೇ ಉಳಿಯಲಾಗಿಲ್ಲ.

ಹಾಗೆಂದು ಈ ಸಾವುಗಳು ನನ್ನನ್ನು ವಿಚಲಿತಗೊಳಿಸಿಲ್ಲವೆಂದಲ್ಲ. ನಮ್ಮ ಬಳ್ಳಾರಿಯ ಪೀಜೀಗಳು ಹೇಳುತ್ತಿದ್ದ ಮಾತು ನೆನಪಾಗುತ್ತದೆ. ರಾಂಗ್ ಪರ್ಸನ್ ಅಟ್ ದ ರಾಂಗ್ ಟೈಮ್ ಅಂಡ್ ರಾಂಗ್ ಪ್ಲೇಸ್. ಅಂದರೆ ಅಕಾಲ, ಅನಿರೀಕ್ಷಿತ ಮರಣಗಳಾದಾಗ ಎಷ್ಟೋ ದಿನ ನಿದ್ರೆ ಬಾರದೇ ಒದ್ದಾಡಿದ್ದೇನೆ. ಒಮ್ಮೆ ಒಬ್ಬ ೨೩ ವರ್ಷದ ಭಾರತೀಯ ವಿದ್ಯಾರ್ಥಿ ಅಪಘಾತದಿಂದ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ಭರ್ತಿಯಾಗಿದ್ದ. ಆಗ, ನಾನು ಅನಿವಾರ್ಯವಾಗಿ ಉತ್ತರಪ್ರದೇಶದಲ್ಲಿರುವ ಆತನ ಕುಟುಂಬದವರೊಂದಿಗೆ ದುಭಾಷಿಯಾಗಿ ಮಾತನಾಡುವ ಸಂದರ್ಭ ಬಂದಿತು. 'ಡಾಕ್ಟರ್ ಸಾಬ್, ವಹಾಂ ಹಮಾರಾ ಕೋಯೀ ನಹೀ ಹೈ. ಉಸ್ಕೋ ಕ್ಯಾ ಹೋ ರಹಾ ಹೈ ಯೆ ಭೀ ಹಮೆ ನಹೀ ಮಾಲೂಮ್. ಉಸ್ಕಾ ಖಯಾಲ್ ರಖ್‌ನಾ' ಎಂದು ಆತನ ತಾಯಿ ನನ್ನ ಹತ್ತಿರ ಹೇಳಿದಾಗ ನಾನು ನನಗೆ ಬರುವ ಹಿಂದಿಯಲ್ಲಿ ಆಕೆಯನ್ನು ಸಮಾಧಾನ ಮಾಡುತ್ತಿದ್ದೆ.

ನಂತರ ಆ ವಿದ್ಯಾರ್ಥಿ ಸತ್ತಾಗ ಆಕೆಗೆ ಆತ ಸತ್ತ ವಿಷಯವನ್ನೂ ನಾ ಕಷ್ಟಪಟ್ಟು ತಿಳಿಸಿದ್ದೆ. ನನ್ನ ಕೆಲಸದಲ್ಲಿ ಕಾಣುವ ಸಾವುಗಳಿಗೆ ಎಂದೂ ಅಳದ ನಾನು ಅಂದು ಆ ತಾಯಿಯ ಜತೆ ಮಾತಾಡುವಾಗ ಬಿಕ್ಕಿಬಿಕ್ಕಿ ಅತ್ತಿದ್ದೆ. ಆ ಹುಡುಗನಿಗೆ ಆದ ಅಪಘಾತದ ಗಾಯಗಳು ತೀವ್ರವಾಗಿದ್ದು ಆತ ಬದುಕುಳಿಯುವ ಸಾಧ್ಯತೆಗಳೇ ಇರಲಿಲ್ಲ. ಮತ್ತು ಅದೇ

ವಯಸ್ಸಿನವರ ಎಷ್ಟೋ ಸಾವನ್ನು ನಾ ನೋಡಿದ್ದೇನೆ. ಆದರೆ ಈ ಸಾವು ನ್ಯಾಯವಲ್ಲ ಎನಿಸಿದ್ದು ಒಂದು ವಿಚಿತ್ರ. ಇದು ಅಕಾಲ ಸರಿ, ಆದರೆ ತಪ್ಪಾದ ಸಮಯಕ್ಕಿಂತ ತಪ್ಪಾದ ಜಾಗ, ದೇಶದಲ್ಲಾದ ಸಾವು ಎಂದು ನನಗೆ ದುಃಖವಾಗಿತ್ತು. ಅಮೆರಿಕದಲ್ಲಿ ಭಾರತೀಯರು ಸಾಯಬಾರದು ಎಂಬ ನನ್ನ ನಂಬಿಕೆ ಯಾವ ಹೊಸಾ ಭಾರತೀಯರ ನಂಬಿಕೆಗಿಂತ ಬೇರೆಯಾಗಿರಲಿಲ್ಲ. ಎಲ್ಲೋ ಓದಿದ ನೆನಪು, 'ಬದುಕಲು ಬೇಕಾದ ಅಮೆರಿಕಾ ಭಾರತೀಯರಿಗೆ ಸಾಯಲು ಬೇಡ.' ಈ ಬಗ್ಗೆ ನನಗೆ ಇನ್ನೂ ಒಂದು ನಿರ್ಧಾರಕ್ಕೆ ಬರಲಾಗಿಲ್ಲ.

*

ನಮ್ಮ ವಿಶಿಷ್ಟ ಸಂಪ್ರದಾಯಗಳು ನಮ್ಮನ್ನು ಕೆಲವೊಮ್ಮೆ ವಿಪರೀತವಾದ ಫಜೀತಿಗೆ ತಂದಿಟ್ಟುಬಿಡುತ್ತವೆ. ತೀರಿಕೊಂಡವರ ದೇಹವನ್ನು ಅಂತಿಮ ದರ್ಶನಕ್ಕಾಗಿ ಒಂದು ಕಡೆ ಇಡುವುದು ಭಾರತದಲ್ಲಿ ಒಂದು ಸಂಪ್ರದಾಯ. ಅಮೆರಿಕದಲ್ಲಿಯೂ ಈ ಸಂಪ್ರದಾಯವಿದೆ (ಇದು ಓಪನ್ ಅಥವಾ ಕ್ಲೋಸ್ಡ್ ಕ್ಯಾಸ್ಕೆಟ್ ಆಗಿರಬಹುದು). ಪಾಕಿಸ್ತಾನದಲ್ಲಿ ಈ ಸಂಪ್ರದಾಯ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಒಮ್ಮೆ ಆಸ್ಪತ್ರೆಯಲ್ಲಿ ಪಾಕಿಸ್ತಾನ ಮೂಲದ ಮಹಮ್ಮದ್ ಅಲಿ ಎಂಬಾತನೊಬ್ಬ ಸತ್ತ. ಆತ ಸತ್ತ ಸ್ವಲ್ಪ ಹೊತ್ತಿಗೆ ಆತನನ್ನು ನೋಡಲೆಂದು ಬಂದ ಆತನ ಮಗ ಅಲಿಯನ್ನು ನೋಡಿಕೊಳ್ಳುತ್ತಿದ್ದ ನರ್ಸಿನ ಹತ್ತಿರ 'ಇಲ್ಲಿ ಇಂಟರ್ನೆಟ್ ಕನೆಕ್ಷನ್ ಇದೆಯಾ?' ಎಂದು ಕೇಳಿದ್ದನಂತೆ. ಯಾಕೆ, ಏನು ಎಂದು ಕೇಳದೆ ಆಸ್ಪತ್ರೆಯ ವೈ ಫೈ ಪಾಸ್‌ವರ್ಡನ್ನು ಕೊಟ್ಟಿದ್ದಾಳೆ ಆಕೆ.

ಕೊಂಚ ಹೊತ್ತಿನ ನಂತರ ಅಲಿಯ ರೂಮಿಗೆ ಹೋದಳು. ಅಲಿಯ ಮಗ ಒಬ್ಬ ಒಂದು ಟ್ರೈಪಾಡಿನ ಮೇಲೆ ಕ್ಯಾಮ್‌ಕಾರ್ಡರನ್ನು ಇರಿಸಿ ಅದನ್ನು ಲ್ಯಾಪ್‌ಟಾಪಿಗೆ ಸಿಕ್ಕಿಸಿ ಅಲಿಯ ಮುಖವನ್ನು ಜೂಮ್ ಇನ್, ಜೂಮ್ ಔಟ್ ಮಾಡುತ್ತಿದ್ದನಂತೆ. ಈಕೆಗೆ ಏನಾಗುತ್ತಿದೆ ಎಂದು ಅರ್ಥವಾಗಿಲ್ಲ. ರೂಮಿಗೆ ಹೋದಾಗ ಆಕೆಗೆ ಮೊದಲು ಕಾಣಿಸಿದ್ದು ಹದಿನಾರಿಂಚಿನ ಸ್ಕ್ರೀನಿನಲ್ಲಿ ಕಾಣಿಸುತ್ತಿರುವ ಮಹಮ್ಮದ್ ಅಲಿಯ ಮುಖ. ಆಕೆಗೆ ಗೊಂದಲವಾದರೂ ಅದನ್ನು ತೋರಿಸಿಕೊಳ್ಳದೇ ಅಲಿಯ ಮಗನನ್ನು ನೋಡಿದಳಂತೆ. ಆತ, ಪಕ್ಕದಲ್ಲಿದ್ದ ಅಪ್ಪನ ಮುಖ ನೋಡದೇ ಕಂಪ್ಯೂಟರಿನ ಸ್ಕ್ರೀನಿನಲ್ಲಿದ್ದ ಅಲಿಯ ಮುಖ ನೋಡುತ್ತಿದ್ದನಂತೆ. ಸೆಪ್ಟೆಂಬರ್ ೧೧ರ ನಂತರ ಮಹಮ್ಮದ್, ಅಹಮದ್, ರಜಾಕ್ ಎಂಬ ಹೆಸರುಗಳ ಬಗ್ಗೆ ಕೊಂಚ ಹೆಚ್ಚಾಗೇ ಸೂಕ್ಷ್ಮವಾಗಿರುವ ಅಮೆರಿಕನ್ ಮನಸ್ಸಿಗೆ ಇದು ನಾನಾ ಅರ್ಥಗಳನ್ನು ಉಂಟುಮಾಡಿದೆ. ಆಕೆ ಬಂದು ನನ್ನ ಹತ್ತಿರ 'ನಾವೀಗಲೇ ಪೋಲೀಸನ್ನು ಕರೆಸಬೇಕು' ಎಂದಳು. ನಾನು 'ಏಕೆ?' ಎಂದು ಕೇಳಿದಾಗ ಆಕೆ, 'ಮಹಮದ್ ಅಲಿ ಸತ್ತು ಇನ್ನೂ ಹತ್ತು ನಿಮಿಷವಾಗಿಲ್ಲ. ಆತನ ಸಾವಿನ ಸುದ್ದಿ ಇಂಟರ್ನೆಟ್ಟಿನಲ್ಲಿ ಇದೆ.' ಎಂದು ನನ್ನ ಹತ್ತಿರ ಬಂದು ಕಿವಿಯಲ್ಲಿ, 'ಈತ ದೊಡ್ಡ ವ್ಯಕ್ತಿ ಇರಬಹುದು, ಯು ನೋ' ಎಂದಳು, ಕಣ್ಣು ಮಿಟುಕಿಸಿ.

ನಾನು ಇಲ್ಲೇನೋ ಎಡವಟ್ಟಾಗಿದೆ ಎಂದುಕೊಂಡು ಹೋಗಿ ಅಲಿಯ ಮಗನನ್ನು ವಿಚಾರಿಸಿದಾಗ ಆತ ತನ್ನ ಲ್ಯಾಪ್‌ಟಾಪಿನಲ್ಲಿ ಸ್ಕೈಪ್ ಮೂಲಕ ಅಲಿಯ ಮುಖವನ್ನು ಇಸ್ಲಾಮಾಬಾದಿನಲ್ಲಿದ್ದ ಆತನ ಕುಟುಂಬದವರಿಗೆ ಕೊನೆಯ ಬಾರಿಗೆ ತೋರಿಸುತ್ತಿರುವ ವಿಷಯವನ್ನು ಹೇಳಿದ. ನಾನು ಆ ನರ್ಸು ಮತ್ತು ಆಸ್ಪತ್ರೆಯಲ್ಲಿನ ಇನ್ನಿತರ ಸಿಬ್ಬಂದಿಯನ್ನು ಕರಕೊಂಡು ಹೋಗಿ ಮಹಮದ್ ಅಲಿಯ ಮಗ ಆತನ ಪಾಕಿಸ್ತಾನದ ವಿಸ್ತೃತ ಕುಟುಂಬಕ್ಕೆ ಮಾಡಿಸುತ್ತಿರುವ ಅಂತಿಮ ದರ್ಶನದ ಬಗ್ಗೆ ವಿವರವಾಗಿ ತಿಳಿಸಿ, ಸತ್ತಿದ್ದ ಮಹಮದ್ ಅಲಿಯನ್ನು ಉಗ್ರವಾದಿಯಾಗುವುದರಿಂದ ಬಚಾವ್ ಮಾಡಿದೆ.

ಇನ್ನೊಮ್ಮೆ ಧಾರವಾಡದ ನರಹರಿರಾಯರೆಂಬುವವರ ಶ್ರೀಮತಿ ಪರಿಮಳಾಬಾಯಿ ಎನ್ನುವವರು ಆಸ್ಪತ್ರೆಗೆ ಭರ್ತಿಯಾಗಿದ್ದರು. ನರಹರಿರಾಯರ ತಲೆಯ ಚಂಡಿಕೆ, ಆಕೆಯ ಕಚ್ಚೆ ಸೀರೆ, ಕೈ ಮೇಲೆ ಇನ್ನೂ ಹಸಿಯಾಗಿ ಕಾಣಿಸುತ್ತಿರುವ ತಪ್ತಮುದ್ರೆ ಎಲ್ಲವನ್ನೂ ನೋಡಿ ಇವರು ಸಾಗರೋಲ್ಲಂಘನ ಹೇಗೆ ಮಾಡಿದ್ದಾರೆ ಎಂದು ನನಗೆ ಆಶ್ಚರ್ಯವಾಯಿತು. ಇರಲಿ, ಪರಿಮಳಾಬಾಯಿಯವರ ಪರಿಸ್ಥಿತಿ ಗಂಭೀರದಿಂದ ಇನ್ನೂ ಬಿಗಡಾಯಿಸಿ ಉಸಿರಾಟಕ್ಕೆ ತೊಂದರೆಯಾಗಿ ಕೃತಕ ಉಸಿರಾಟದ ಯಂತ್ರವನ್ನು ಅಳವಡಿಸಬೇಕಾಗಿ ಬಂತು. ಕನ್ನಡ ಮಾತಾಡುತ್ತಿದ್ದ ನನ್ನ ನೋಡಿ ನರಹರಿರಾಯರಿಗೆ ಬಹಳ ಖುಷಿಯಾಗಿತ್ತು. ಅವರ ನಾಲ್ಕು ಜನ ಮಕ್ಕಳೂ ಅಮೆರಿಕಾದಲ್ಲಿಯೇ ಇದ್ದುದರಿಂದ ನರಹರಿರಾಯರು ನಿರ್ವಾಹವಿಲ್ಲದೇ ಅಮೆರಿಕಕ್ಕೆ ಬರಲೇಬೇಕಾಯಿತಂತೆ. ನಾನು ಹೋಗಿ ಪರಿಮಳಾಬಾಯಿಯವರ ಪರಿಸ್ಥಿತಿಯನ್ನು ವಿವರವಾಗಿ ತಿಳಿಸಿ, ಅವರಿಗೆ ಕೃತಕ ಉಸಿರಾಟದ ಯಂತ್ರವನ್ನು ಅಳವಡಿಸಬೇಕಾಗಿರುವುದರಿಂದ ಬಾಯೊಳಗೆ ಒಂದು ಪ್ಲಾಸ್ಟಿಕ್ ನಾಳವನ್ನು ಹಾಕಬೇಕಾಗಿದೆಯೆಂದೂ, ಅವರಿಗೆ ನಿದ್ರೆ ಬರುವ ಔಷಧಿಗಳನ್ನು ಕೊಡುತ್ತೇವೆಂದೂ ನರಹರಿರಾಯರು ಪರಿಮಳಾಬಾಯಿಯವರಿಗೆ ಪ್ರಜ್ಞೆಯಿದ್ದಾಗಲೇ ಹೋಗಿ ಒಮ್ಮೆ ಮಾತಾಡಿಸಿ ಬರುವುದು ಒಳ್ಳೆಯದು ಎಂದು ಸೂಕ್ಷ್ಮವಾಗಿ ಹೇಳಿದೆ.

ನರಹರಿರಾಯರಿಗೂ ತಮ್ಮ ಶ್ರೀಮತಿಯವರ ಪರಿಸ್ಥಿತಿ ಅರ್ಥವಾಗಿರಬೇಕು. ನನ್ನ ಹತ್ತಿರ ಬಂದು 'ನೋಡಪ, ನೀ ನನ್ನ ಮಗ ಇದ್ದ ಹಾಗಿದ್ದೀ. ನಿನ್ನ ಬಳಿ ಒಂದೇ ಒಂದು ಕೇಳಕೋತೀನಿ. ಇಲ್ಲೀಗ ಬರೂಮುಂದ ನಾವ್ ಕಾಶೀಗೆ ಹೋಗಿದ್ದೆವು. ಅಲ್ಲಿಂದ ಗಂಗಾಜಲ ತಂದೀವಪ್ಪ. ವಿಮಾನದಾಗ ಎಲ್ಲರ ಕಣ್ತಪ್ಪಿಸಿ ಇಲ್ಲೀತನಕ ತಗಂಬಂದೀವಿ. ಆಕಿ ಉಳಿಯೋ ಭರವಸಾ ನಂಗಂತ ಇಲ್ಲ. ಆಕೀಗ ಇವೆಲ್ಲ ಬೇಕಿತ್ತ ಇಲ್ಲ ಅನ್ನೂದು ನಮಗ್ಗೊತ್ತಿಲ್ಲ. ನೀ ಆಕೀ ಬಾಯೊಳಗ ಉಸಿರಾಟಕ್ಕ ಟ್ಯೂಬ್ ಹಾಕಿದ್ರೂ ನಂತರ ನಾ ಈ ಗಂಗಾಜಲ ಹಾಕೂಕೆ ಬರ್ತದೆ ಹೌದೋ ಅಲ್ಲೋ' ಎಂದು ಕೇಳಿದರು. ನಾನು ಯಾವುದೋ ಧ್ಯಾನದಲ್ಲಿ 'ಅಲ್ಲಿಯ ತನಕ ಯಾಕೆ ಕಾಯುತ್ತೀರಿ. ಈಗಲೇ ಬನ್ನಿ ನಾನೇ ನಿಮ್ಮ ಕೈಯಾರೆ ಹಾಕಿಸ್ತೀನಿ' ಎಂದು ಒಳಗೆ ಕರಕೊಂಡು ಹೋದೆ. ಇನ್ನೇನು ಒಂದೆರಡು ತೊಟ್ಟು ಗಂಗಾಜಲವನ್ನು ರಾಯರು ತಂದಿದ್ದ ತಾಲಿಯಿಂದ ಹಾಕಬೇಕು ಅನ್ನುವಷ್ಟರಲ್ಲಿ ನನ್ನ ನರ್ಸ್ ಬಂದು 'ನಥಿಂಗ್ ಬೈ

ಮೌತ್. ಯು ನೋ, ಶೀ ಈಸ್ ಗೋಯಿಂಗ್ ಟು ಬೀ ಆನ್ ವೆಂಟಿಲೇಟರ್' ಎಂದು ಆಸ್ಪತ್ರೆಯ ಪ್ರೋಟೋಕಾಲುಗಳ ಸರಣಿಯನ್ನೇ ನನ್ನ ಮುಂದೆ ಹಿಡಿದಳು. ನಿರ್ವಾಹವಿಲ್ಲದೇ ನಾ ಸುಮ್ಮನಾದೆ. ಕಡೆಗೂ ಪರಿಮಳಾಬಾಯಿ ಎಚ್ಚರವಿದ್ದಾಗ ನರಹರಿರಾಯರು ಗಂಗಾಜಲವನ್ನು ಆಕೆಯ ಬಾಯೊಳಗೆ ಹಾಕಲಾಗಲೇ ಇಲ್ಲ. ಆಕೆಯನ್ನು ವೆಂಟಿಲೇಟರ್ಗೆ ಹಾಕಿದ ಮೇಲೆ ನಾನು ನರಹರಿರಾಯರನ್ನು ಒಳಗೆ ಕರಕೊಂಡು ಹೋಗಿ ಯಾರಿಗೂ ಕಾಣದ ಹಾಗೆ ಎರಡು ಹನಿ ಗಂಗಾಜಲವನ್ನು ಪರಿಮಳಾಬಾಯಿಯವರ ಬಾಯಿಯ ಬದಿಯಲ್ಲಿ ಹಾಕಿಸಿ ಅವರ ಕಡೆಯ ಆಸೆಯನ್ನು ಪೂರ್ತಗೊಳಿಸಿದೆ.

*

ಜೀವ ಉಳಿಸುವ ಕೆಲಸದಲ್ಲಿರುವ ನಾನು ಈ ಸಾವುಗಳಿಂದ ಕಲಿತಿರುವುದು ಜೀವ ಉಳಿಸಿರುವುದರಿಂದ ಕಲಿತಿರುವುದಕ್ಕಿಂತಾ ಹೆಚ್ಚು. ಎಷ್ಟೋ ಬಾರಿ ನನ್ನಿಂದಲೇ ಈ ಜೀವ ಉಳಿದಿದೆ ಎಂದು ವಿನಮ್ರನಾಗಿ ಒಪ್ಪಿಕೊಂಡಿದ್ದರೂ ಅದು ಎಲ್ಲೋ ಒಂದು ಕಡೆ ನನ್ನ ಇಗೋವನ್ನು ಹೆಚ್ಚಿಸುವುದರ ಪರಿ ವಿಚಿತ್ರ ಆದರೆ ಅನುಮಾನಾತೀತ. ಆದರೆ, ನನ್ನ ಶುಶ್ರೂಷೆಯಲ್ಲಿದ್ದ ಒಬ್ಬ ರೋಗಿ ಸತ್ತಾಗ ಆಗುವ ಮೊದಲ ಭಾವ ಸೋಲು. ಈ ಸೋಲನ್ನು ನಾನು ಅನಿವಾರ್ಯವಾಗಿ ಮೀರಲೇಬೇಕಾಗಿದೆ. ಇಲ್ಲದಿದ್ದಲ್ಲಿ ದಿನಾ ಕಾಣುವ ಈ ಸೋಲಿನಿಂದ ಆತ್ಮಸ್ಥೈರ್ಯ ಉಡುಗಿ ಈ ಕೆಲಸವನ್ನೇ ಮಾಡಲಾಗದೇ ಇರಬಹುದು. ಆದ್ದರಿಂದಲೇ ನನ್ನಂಥ ಕೆಲಸದಲ್ಲಿರುವವರಿಗೆ ಈ ಸಾವು ಎನ್ನುವುದು ಒಂದು ಲಹರಿಯಾಗಿಬಿಡುತ್ತದೆ. ಅದು ಸೋಲಲ್ಲ, ಇಂಥ ಸಾವಿಂದ ನಾ ಅಳುಕಿಲ್ಲ ಎಂದು ನನಗೆ ನಾನೇ ಹೇಳಿಕೊಳ್ಳಲು ಯಾರಾದರೂ ಸತ್ತನಂತರ ಕೈ ಒರೆಸಿಕೊಳ್ಳದೆ ಪೀಟ್ಜಾ ತಿನ್ನುವ ಡಿಫೆನ್ಸಿವ್ ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತೀವೇನೋ.

ಒಂದು ಮಾತ್ರ ನಿಜ. ನನ್ನ ಹೆಸರನ್ನು ಕೂಡ ಉಚ್ಚರಿಸಲು ಬರದ ರೋಗಿಗಳ ಜೀವಗಳು ನನ್ನ ಕೈಯಾರೆ ಉಳಿದಾಗ 'ಡಾ. ಕೇ. ಥ್ಯಾಂಕ್ ಯು' ಎಂದು ಮನೆಗೆ ಹೋಗುವ ಮುಂಚೆ ಕೈಕುಲುಕಿದಾಗ ಆಗುವ ಪುಲಕವೇ ನನ್ನನ್ನು ಈ ಕೆಲಸದಲ್ಲಿ ಇನ್ನೂ ಮುಂದುವರಿಯುವಂತೆ ಮಾಡುತ್ತಿರುವುದು. ಹಾಗೆ ಉಳಿದ ರೋಗಿಗಳು ನನ್ನ ಕಣ್ಣ ಮುಂದೆ ಶಿಲೆಗಳಂತೆ ಅಚಲ ಪ್ರತಿಮೆಗಳಾಗಿ ಉಳಿದು ನನಗೇನಾದರೂ ಆದಲ್ಲಿ ಉಳಿದರೆ ಹೇಗೆ ಉಳಿಯಬೇಕು, ಹೋದರೆ ಹೇಗೆ ಹೋಗಬೇಕು ಎಂಬುದನ್ನು ಕಲಿಸಿಕೊಟ್ಟಿರುವ ಗುರುಗಳಾಗಿದ್ದಾರೆ.

●

ತಾಯ್ನಾಡಿನಿಂದ ಬಾಳ್ನಾಡಿಗೆ ನಿರಂತರ ಪಯಣ

ಇಂಗ್ಲಿಷ್ ಮೂಲ: ಗುಂಡು ಶಂಕರ್
ಕನ್ನಡ ಭಾವ ಸಂಗ್ರಹ: ಶ್ರೀಕಾಂತ ಬಾಬು

The philosopher/writer's view's apprehends the world as a whole as a question to be answered. He studies the world, not in order to satisfy this or that practical need, but because the passion to know has seized the mankind. In the modern era, the sciences have reduced the world to a mere object of technical and mechanical investigation and put the concrete world of life, beyond their horizon.

The rise of the sciences propelled man into the tunnels of specialized disciplines. The more he advanced his knowledge, the less clearly could he see the world as a whole or his own self, and man plunged further into what Husserl's disciple Heidegger called, in a beautiful and magical phrase, 'the forgetting of being'.

Milan Kundera, The Art of the Novel, 2000.

*

ನನ್ನ ಹೆಸರು ಗುಂಡು ಶಂಕರ್. ನಾನು ನನ್ನ ತಾಯ್ನಾಡಾದ ಭಾರತದಿಂದ ಅಮೆರಿಕಗೆ ೧೯೮೩ರಲ್ಲಿ ವಲಸೆ ಬಂದೆ. ಮೇಲ್ನೋಟಕ್ಕೆ ಇದರಲ್ಲಿ ವಿಶೇಷತೆಯಿಲ್ಲದಿದ್ದರೂ ನಾನು ಇದರ ಬಗ್ಗೆ ಯೋಚಿಸಿದಾಗಲೆಲ್ಲಾ ಹೊಸ ಹೊಸ ವಿಚಾರಗಳು ಹೊಳೆಯುತ್ತವೆ. ಆದರೆ ಪ್ರಶ್ನೆಗಳು ಮಾತ್ರ ಅವೇ ಹಳೆಯವೇ! ನಮ್ಮ ಜೀವನದ ತಿರುವುಗಳು ಒಂದು ರೀತಿಯ ನಿರ್ಧಾರ ಮಾಡುವ ಸಮಯ (Decision making point) ಗಳಾಗಿರುತ್ತವೆ. ನಮ್ಮ ನಿರ್ಧಾರಗಳು ಮುಂದಿನ ತಿರುವಿಗೆ ಕಾರಣವಾಗುತ್ತವೆ. ನಮ್ಮ ಹಳೆಯ ನಿರ್ಧಾರಗಳನ್ನು ಕಾಲದ ಮಾನದಂಡದ ಮೇಲೆ ನೋಡಿದಾಗ ಅಸ್ಪಷ್ಟ ವಿಷಯಗಳು ಸ್ಪಷ್ಟವಾಗಿ ನಮ್ಮ ನಿರ್ಧಾರಗಳ ಸರಿ-ತಪ್ಪುಗಳು ನಮಗೆ ಗೋಚರಿಸುತ್ತವೆ. ನನ್ನ ಯೋಚನೆಗಳ ಸರಮಾಲೆಯನ್ನು ಈ ಲೇಖನದ ಮೂಲಕ ಕಾಗದಕ್ಕೆ ಇಳಿಸುವ ಪ್ರಯತ್ನ ಮಾಡಿದ್ದೇನೆ. ನನ್ನ ಹಲವಾರು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಹುಡುಕುತ್ತಲೇ ಇದ್ದೇನೆ. ಇದೊಂದು ನಿರಂತರ ಪ್ರಕ್ರಿಯೆ ಎನಿಸುತ್ತದೆ. ಬಹುಶಃ ಇಲ್ಲಿಗೆ ವಲಸೆ ಬಂದ ಎಲ್ಲರೂ ಈ ಸುಳಿಗೆ ಸಿಕ್ಕಿದ್ದಾರೆಂದೇ ನನ್ನ ಭಾವನೆ. ಪ್ರಶ್ನೆಗಳು ಸರಳವಾಗಿದ್ದರೂ ಉತ್ತರ ಶೋಧನೆಯ ಆಳಕ್ಕೆ ಇಳಿದಾಗ, ಸಹಜವಾಗಿ ಅವು ಅಧ್ಯಾತ್ಮಿಕ ತಿರುವನ್ನು ಪಡೆದು ಗೋಜಲಾಗುತ್ತದೆ. ಕೆಲವು ಉದಾಹರಣೆಯ ಪ್ರಶ್ನೆಗಳು:

೧. ಅಮೆರಿಕಗೆ ಬಂದ ನನ್ನ ನಿರ್ಧಾರ ಸರಿಯೆ?

೨. ನಾನು ಭಾರತದಲ್ಲಿಯೇ ಇದ್ದಿದ್ದರೆ ಹೇಗಿರುತ್ತಿತ್ತು?

೩. ನನ್ನ ಮಕ್ಕಳಿಗೆ ಅಮೆರಿಕ ಸೂಕ್ತ ಭವಿಷ್ಯವೆ?

೪. ಅಮೆರಿಕ ನಿಜವಾಗಲೂ ಭಾರತಕ್ಕಿಂತ ಉತ್ತಮ ದೇಶವೇ? ಯಾವ ರೀತಿಯಲ್ಲಿ?

೫. ಅಮೆರಿಕ ಬಗ್ಗೆ ನನಗೆ ನಿಜವಾಗಲೂ ಎಷ್ಟು ಗೊತ್ತಿದೆ? ನಾವು ಇಲ್ಲಿ ಯಾವ ರೀತಿಯಲ್ಲಿ ಸಮ್ಮಿಳಿತವಾಗಿದ್ದೇವೆ?

೬. ಅಮೆರಿಕದಲ್ಲಿ ನಮ್ಮ ಪಾಡಿಗೆ ನಾವು ಇದ್ದು ಅವರ ಜೀವನಾಡಿಗಳಲ್ಲಿ ಬೆರೆಯದೆ ನಮ್ಮ ಜೀವನವನ್ನೇ ಕಳೆಯಬಹುದು. ಆದರೆ ಹಾಗೆ ಮಾಡುವುದು ಸರಿಯಲ್ಲ. ನಮ್ಮ ಮುಂದಿನ ಪೀಳಿಗೆಗಾದರೂ ನಾವು ಅಮೆರಿಕನ್ನರಾಗಬೇಕು ಅಂದರೆ ಏನು ಮಾಡಬೇಕು?

ಇತ್ಯಾದಿ, ಇತ್ಯಾದಿ...

ಭಾರತ ಬಿಟ್ಟು ಅಮೆರಿಕಗೆ ಬರುವ ನನ್ನ ನಿರ್ಧಾರ ಕಠಿಣವಾಗೇ ಇತ್ತು. ಭಾರತೀಯತೆ ಎಂಬ ಆದರ್ಶದ ಪರಿಕಲ್ಪನೆಯಿಲ್ಲದಿದ್ದರೂ ಈ ಬದಲಾವಣೆ ನನ್ನ ಜೀವನದಲ್ಲಿ ಬಹಳ ದೊಡ್ಡದಾದದ್ದು ಎನ್ನುವ ನಂಬಿಕೆ ಇತ್ತು. ಒಮ್ಮೆ ಹೊರಗೆ ಹೋದರೆ ಮತ್ತೆ ಹಿಂತಿರುಗುವ ಅವಕಾಶ ಬಹಳ ಕಡಿಮೆಯೆಂದು ನನಗೆ ಗೊತ್ತಿತ್ತು. ನನ್ನ ತಂದೆಯವರು ನಾನು ಅಮೆರಿಕಗೆ ಬಂದರೆ ಅವರನ್ನು ನೋಡಿಕೊಳ್ಳಲು ಯಾರೂ ಇಲ್ಲದಿದ್ದರೂ ಹೋಗಲು ತುಂಬಾ ಪ್ರೋತ್ಸಾಹಿಸಿದರು.

ಭಾರತದಿಂದ ಒಂದು ಹೆಸರಾಂತ ಕಂಪನಿಯ ಮೂಲಕ ಅಮೆರಿಕಗೆ ಕೆಲಸದ ಮೇಲೆ ಕನ್ಸಲ್ಟೆಂಟ್ ಆಗಿ ಬಂದೆ. ಆಗ ಆ ಕಂಪನಿಯೂ ಸೇರಿದಂತೆ ಯಾರಿಗೂ ಭವಿಷ್ಯದ ಬಗ್ಗೆ ಸ್ಪಷ್ಟವಾದ ಚಿತ್ರಣವಿರಲಿಲ್ಲ. ಅಮೆರಿಕಗೆ ನೆಲೆಸಲು ಬಂದ ನನ್ನಂತಹ ಹಲವಾರು ಜನ ಇಲ್ಲಿನ ಜನಜೀವನಕ್ಕೆ ಹೊಂದಿಕೊಳ್ಳಲು ಊಟ, ವಸ್ತ್ರ, ವಸತಿ, ಮನರಂಜನೆ, ಸ್ನೇಹಕೂಟ, ಇತ್ಯಾದಿಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಯಿತು. ಇದನ್ನೆಲ್ಲಾ ಈಗ ತಕ್ಕಡಿಯಲ್ಲಿ ಹಾಕಿ ತೂಗಿದಾಗ ನನ್ನ ಆಗಿನ ನಿರ್ಧಾರ ಸರಿಯಾಗಿತ್ತೇ ಎನ್ನುವ ಸಂದೇಹ ನನ್ನನ್ನು ಪದೇ ಪದೇ ಕಾಡುತ್ತಿರುತ್ತದೆ. ನನಗೆ ರಾಷ್ಟ್ರಪ್ರೇಮ, ರಾಷ್ಟ್ರೀಯತೆ ಮುಂತಾದವುಗಳ ಮೇಲೆ ಸ್ಪಷ್ಟವಾದ ಪರಿಕಲ್ಪನೆ ಇಲ್ಲದಿದ್ದರೂ, ನನ್ನ ಬೇರುಗಳ ಬಗ್ಗೆ, ನನ್ನ ಐಡೆಂಟಿಟಿಯ ಬಗ್ಗೆ ಅರಿತುಕೊಳ್ಳಲು ಹೆಣಗಾಡುತ್ತಿದ್ದೇನೆ. ಭಾರತದಿಂದ ಅಮೆರಿಕಗೆ ಬರುವ ನಿರ್ಧಾರ ಮಾಡಿದ್ದು ನಾನೇ ಆದರೂ, ಆ ನಿರ್ಧಾರದ ಹಿಂದೆ ನನ್ನ ಹಿಂದಿನ ತಲೆಮಾರುಗಳ ಬೆಳವಣಿಗೆ, ಹೊರಗಿನ ಪ್ರಪಂಚದ ಪ್ರಭಾವಗಳು ಕಾರಣೀಭೂತವಾಗಿರುತ್ತವೆಯೆಂದು ನನ್ನ ನಂಬಿಕೆ. ಈ ಹಿನ್ನೆಲೆಯಿಂದಲೇ, ನನ್ನ ನಿರ್ಧಾರವನ್ನು ಗಮನಿಸೋಣ.

*

ನಮ್ಮಜ್ಜ ಹುಟ್ಟಿದ್ದು ೧೯೦೦ನೇ ಇಸವಿಯಲ್ಲಿ, ಒಂದು ಬಡ ಬ್ರಾಹ್ಮಣರ ಕುಟುಂಬದಲ್ಲಿ. ಅವರ ಬಾಲ್ಯದ ಸಮಯ ಭಾರತೀಯ ಇತಿಹಾಸದಲ್ಲಿ ಒಂದು ಮೇರು ಘಟ್ಟವೆನ್ನಬೇಕು. ಬ್ರಿಟಿಷರು ತಮ್ಮ ಆಡಳಿತವನ್ನು ಸುಭದ್ರವನ್ನಾಗಿಸಲು ಯತ್ನಿಸುತ್ತಿದ್ದ ಸಮಯ. ಶೈಕ್ಷಣಿಕ ಕ್ಷೇತ್ರದಲ್ಲಿ, ಆಡಳಿತದಲ್ಲಿ, ಸಂಪರ್ಕ ಮತ್ತು ಪ್ರಸಾರಗಳಲ್ಲಿ ಮತ್ತು ಸಮಾಜಿಕ ಕ್ಷೇತ್ರದಲ್ಲಿ ಕೂಡ ಅಪಾರವಾದ ಬದಲಾವಣೆಗಳನ್ನು ತಂದಿದ್ದರು. ಸ್ವಾತಂತ್ರ್ಯದ ಕಿಡಿ ಆಗ ತಾನೆ ಹತ್ತಿ ಹರಡತೊಡಗಿತ್ತು. ತಿಲಕ, ಗೋಖಲೆ, ಅರವಿಂದರ ಪ್ರಭಾವ ಹರಡುತ್ತಿತ್ತು. ಗಾಂಧಿಯವರು ಆಗ ತಾನೆ ಭಾರತಕ್ಕೆ ಮರಳಿ ಸ್ವಾತಂತ್ರ್ಯ ಸಂಗ್ರಾಮದ ಸಾರಥ್ಯ ವಹಿಸಿದ್ದರು. ಆಶ್ಚರ್ಯವೆಂದರೆ ನಮ್ಮಜ್ಜನಿಗೆ ಈ ಸ್ವಾತಂತ್ರ್ಯದ ಹೋರಾಟ ಯಾವ ರೀತಿಯಲ್ಲೂ ಆಸಕ್ತಿ ಮೂಡಿಸಲಿಲ್ಲ. ಬದಲಾಗಿ ಅವರು ಆಂಗ್ಲ ಪದ್ಧತಿಗಳಿಗೆ ಮಾರು ಹೋಗಿದ್ದರು. ಅವರು ಬಹಳ ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಿ ಇತಿಹಾಸದ ವಿಷಯದಲ್ಲಿ ೧೯೨೦ರಲ್ಲಿ ಮಾಸ್ಟರ್ಸ್ ಪದವಿಯನ್ನು ಪಡೆದರು. ನಂತರ ಒಂದು ಆಂಗ್ಲ ಶಾಲೆಯಲ್ಲಿ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿದರು. ಅವರಿಗೆ ಕೆಲಸದ ಮೇಲೆ ಬಹಳ ಆಸಕ್ತಿ ಮತ್ತು ಸ್ವಲ್ಪ ಜಂಭ ಕೂಡ ಇತ್ತು. ಅವರು ಆಂಗ್ಲ ಜೀವನದಲ್ಲಿ ಎಷ್ಟು ಮೋಹಿತರಾಗಿದ್ದರೆಂದರೆ ಪ್ರತಿದಿನ ಮದ್ಯಾಹ್ನದ ಊಟದ ನಂತರ ತಮ್ಮ ಸೂಟನ್ನು ಬದಲಾಯಿಸುತ್ತಿದ್ದರು ಮತ್ತು ಸಾಯಂಕಾಲ ತಪ್ಪದೇ ಟೆನ್ನಿಸ್ ಆಡುತ್ತಿದ್ದರು.

ಇಂಗ್ಲಿಷ್ ಸಾಹಿತ್ಯದ ಮೇಲೆ ಅಪಾರವಾದ ಆಸಕ್ತಿಯನ್ನು ಬೆಳೆಸಿಕೊಂಡಿದ್ದರು. ಖ್ಯಾತ ಲೇಖಕ ಥಾಮಸ್ ಹಾರ್ಡಿಯವರ 'Tess of the D'Urbervilles' ಎನ್ನುವ ಇಂಗ್ಲಿಷಿನ

ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದರು. ಮುಂದೆ ೧೯೫೦ರ ದಶಕದಲ್ಲಿ ಅವರು 'History of the Freedom Movement in Karnataka' ಎನ್ನುವ ಪುಸ್ತಕಕ್ಕೆ ಸಂಪಾದಕರಾಗಿ ಕೆಲಸ ಮಾಡಿದರು. ಹೀಗೆ ಅವರು ತಮ್ಮನ್ನು ಶಿಕ್ಷಣ ಕ್ಷೇತ್ರದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು ಸ್ವಾತಂತ್ರ್ಯ ಸಂಗ್ರಾಮದ ಉರಿಗೆ ಸಿಕ್ಕಿಕೊಳ್ಳಲೇ ಇಲ್ಲ. ನಮ್ಮಜ್ಜ ಮತ್ತು ನಮ್ಮಜ್ಜಿಯರ ವ್ಯಕ್ತಿತ್ವವು ಪರಸ್ಪರ ತದ್ವಿರುದ್ಧವಾಗಿತ್ತು. ಅಜ್ಜ ಆರು ಅಡಿ ಎತ್ತರದ ಕಟ್ಟು ಮಸ್ತಾದ ಆಳು. ಅವರಿಗೆ ಒಳ್ಳೆಯ ವಿದ್ಯೆಯ ಜೊತೆಗೆ ಹೊರ ಪ್ರಪಂಚದಲ್ಲಿ ಆಳವಾದ ಜ್ಞಾನವಿತ್ತು. ಆದರೆ ನಮ್ಮಜ್ಜಿಗೆ ವಿದ್ಯೆ ಇರಲಿಲ್ಲ. ಅವರ ಜ್ಞಾನವೆಲ್ಲಾ ರಾಮಾಯಣ ಮತ್ತು ಮಹಾಭಾರತಕ್ಕೆ ಸೀಮಿತವಾಗಿತ್ತು. ನಮ್ಮ ಅಜ್ಜನವರ ತಂದೆಯವರ ಸ್ನೇಹಿತರ ಮಗಳಾದ ಅವಳನ್ನು ಮದುವೆಯಾಗದೆ ಬೇರೇ ದಾರಿಯೇ ಇರಲಿಲ್ಲ ನಮ್ಮಜ್ಜನಿಗೆ! ನನ್ನ ದೃಷ್ಟಿಯಲ್ಲಿ ನನ್ನ ಅಜ್ಜ-ಅಜ್ಜಿಯರ ಜೋಡಿ ಪರಸ್ಪರ ಪೂರಕವಾಗಿರಲಿಲ್ಲ. ಅಜ್ಜಿಯ ಜ್ಞಾನ ತುಂಬಾ ಸೀಮಿತವಾಗಿತ್ತು. ಹೊರಗಿನ ಆಧುನಿಕ ಪ್ರಪಂಚವನ್ನು ಅರಿತುಕೊಳ್ಳುವ ಪ್ರಯತ್ನವನ್ನೂ ಅಷ್ಟಾಗಿ ಮಾಡಲಿಲ್ಲವೆಂದು ತೋರುತ್ತದೆ. ೧೯೬೯ರಲ್ಲಿ ಅಪೊಲೋನಲ್ಲಿ ಮಾನವನು ಚಂದ್ರಲೋಕಕ್ಕೆ ಕಾಲಿಟ್ಟ ಸುದ್ದಿಯನ್ನು ಓದಲು ನಮ್ಮ ಅಜ್ಜಿಗೆ ಪೇಪರ್ ಕೊಟ್ಟೆ. ಅಜ್ಜಿ ಅದನ್ನು ಅತ್ಯಂತ ಕುತೂಹಲದಿಂದ ಓದಿ 'ಚಂದ್ರಲೋಕಕ್ಕೆ ಹೋಗಿ ಬಂದಾಯ್ತಲ್ಲ, ಮುಂದೇನು? ಪಾತಾಳ ಲೋಕಕ್ಕೆ ಹೋಗ್ತಾರ?' ಅಂತ ಕೇಳಿದಳು.

ನಮ್ಮಪ್ಪನ ಬಾಲ್ಯ ೧೯೩೦ರ ದಶಕದಲ್ಲಿ ಕಳೆಯಿತು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚು ಎಲ್ಲೆಲ್ಲೂ ವ್ಯಾಪಿಸಿತ್ತು. ಬಾಲಕನಾದ ನಮ್ಮಪ್ಪನ ಮೇಲೆ ಇದು ಬಹಳ ಪ್ರಭಾವವನ್ನು ಬೀರಿರಬೇಕು. ಇನ್ನು ೧೯೪೦ರ ದಶಕದಲ್ಲಂತೂ ಭಾರತದ ಮೂಲೆ ಮೂಲೆಗಳಲ್ಲೂ 'ವಂದೇ ಮಾತರಂ' ಕೇಳಿ ಬರುತ್ತಿತ್ತು. ಸ್ವತಂತ್ರ ಭಾರತದ ಕಲ್ಪನೆ ಮೂಡುತ್ತಿದ್ದಂತೆ ಆದರ್ಶ ಮತ್ತು ದೇಶ ಪ್ರೇಮಗಳು ಎಲ್ಲೆಲ್ಲೂ ಸೂಸುತ್ತಿದ್ದವು. ದೇಶದ ಸ್ವಾತಂತ್ರ್ಯಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಿದ ನಾಯಕರು ಎಲ್ಲಾ ಕ್ಷೇತ್ರಗಳಲ್ಲಿಯೂ ಇದ್ದರು. ಈ ಆದರ್ಶಗಳೇ ನಮ್ಮಪ್ಪನ ವ್ಯಕ್ತಿತ್ವವನ್ನು ರೂಪಿಸಿದವು. ೧೯೪೨ರ ಚಲೇ-ಜಾವ್ (ಕ್ವಿಟ್-ಇಂಡಿಯಾ) ಚಳವಳಿಯಲ್ಲಿ ಜೈಲಿಗೂ ಹೋಗಿ ಬಂದರು. ಮಧ್ಯಮವರ್ಗದ ಅನೇಕ ಸಂಪ್ರದಾಯಸ್ಥ ಕುಟುಂಬಗಳಿಗೆ ಜೈಲಿಗೆ ಹೋದುದರ ಕಾರಣಕ್ಕಿಂತ ಜೈಲಿಗೆ ಹೋಗಿದ್ದೇ ಒಂದು ಅಪರಾಧದಂತೆ ತೋರುತ್ತಿತ್ತು. ೧೬ ವರ್ಷದ ನಮ್ಮಮ್ಮ ಮತ್ತು ಅವರ ಮನೆಯವರಿಗೆ ನಮ್ಮಪ್ಪ ಜೈಲಿಗೆ ಹೋಗಿದ್ದು ಸರಿ ಕಾಣಲಿಲ್ಲ. ನಮ್ಮಪ್ಪನ ತ್ಯಾಗ, ಸೇವೆಗಳು ಅವರಿಗೆ ಅರ್ಥವಾಗಲೇ ಇಲ್ಲ! ತಮಾಷೆ ಏನೆಂದರೆ, ನಮ್ಮಪ್ಪ ಸೆಂಟ್ರಲ್ ಜೈಲಿನಲ್ಲಿದ್ದಾಗ ನಮ್ಮಜ್ಜ (ಅಮ್ಮನ ಅಪ್ಪ) ಐ.ಜಿ.ಪಿ. (Inspector General of Police) ಕಚೇರಿಯಲ್ಲೇ ಕೆಲಸ ಮಾಡುತ್ತಿದ್ದರು! ನಮ್ಮಪ್ಪ-ಅಮ್ಮನ ಜೋಡಿಯಲ್ಲೂ ಅಂಥಾ ಸಾಮ್ಯತೆ ಇರಲಿಲ್ಲ. ಹೊಸತನ, ಆದರ್ಶಗಳ ಪ್ರತೀಕವಾಗಿ ನಮ್ಮಪ್ಪನಿದ್ದರೆ, ಸಂಪ್ರದಾಯ ಮತ್ತು ಪುರಾತನ ಮೌಲ್ಯಗಳ ಪ್ರತೀಕವಾಗಿದ್ದಳು ನಮ್ಮಮ್ಮ.

ಇನ್ನು ನನ್ನ ಬಗ್ಗೆ ಹೇಳುವುದಾದರೆ, ೧೯೬೦-೭೦ರ ದಶಕಗಳಲ್ಲಿ ನನ್ನ ವ್ಯಕ್ತಿತ್ವ ರೂಪಿತವಾಯಿತು. ಸ್ವತಂತ್ರ ಭಾರತದ ಕನಸುಗಳು ಒಂದೊಂದಾಗಿ ಚೂರಾಗುತ್ತಿದ್ದ ಕಾಲ. ಸ್ವಾತಂತ್ರ್ಯ ಹೋರಾಟದ ಕಾಲದ ಆದರ್ಶ ವ್ಯಕ್ತಿಗಳೆಲ್ಲಾ ಒಬ್ಬೊಬ್ಬರಾಗಿ ಮರೆಯಾಗುತ್ತಿದ್ದರು. ನಂತರದ ಪೀಳಿಗೆ ಅಧಿಕಾರದ ದಾಹದಿಂದ ಭ್ರಷ್ಟರಾಗುತ್ತಿದ್ದರು. ರಾಜಕಾರಣಿಗಳಿಗೆ ಗೌರವವಿರಲಿಲ್ಲ. ಅಲಿಪ್ತ ರಾಷ್ಟ್ರಕೂಟ, ಪಂಚವಾರ್ಷಿಕ ಯೋಜನೆಗಳು, ಸಮಾಜವಾದಿ ನೀತಿಗಳು, ಎಲ್ಲವೂ ವಿಫಲವಾಗುತ್ತಿರುವುದು ಸ್ಪಷ್ಟವಾಗಿತ್ತು. ಚೀನಾ, ಪಾಕಿಸ್ತಾನಗಳ ಮೇಲಿನ ಯುದ್ಧಗಳಿಂದ ಆರ್ಥಿಕವಾಗಿ ನಷ್ಟ ಹೊಂದಿತ್ತು. ಹೊರ ದೇಶಗಳ ದೃಷ್ಟಿಯಿಂದ ಭಾರತ ಒಂದು 'ಬಡ' ರಾಷ್ಟ್ರವಾಗಿತ್ತು. ಒಟ್ಟಾರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತ ಒಂದು ದುರ್ಬಲ ದೇಶವಾಗಿ ಕಾಣುತ್ತಿತ್ತು. ಇನ್ನು ಶೈಕ್ಷಣಿಕ ಸಂಸ್ಥೆಗಳ ಸ್ಥಿತಿಯಂತೂ ಶೋಚನೀಯವಾಗಿತ್ತು. ಶಿಕ್ಷಣ ಸಂಸ್ಥೆಗಳು ಏಕ ಮುಖವಾಗಿ ಕಾರ್ಖಾನೆಯಂತೆ ವಿದ್ಯಾರ್ಥಿಗಳನ್ನು ತಯಾರಿಸಿ ಪದವಿ ಪ್ರದಾನ ಮಾಡುತ್ತಿದ್ದವು. ಭಾರತದ ಶಿಕ್ಷಣ ವ್ಯವಸ್ಥೆಯಲ್ಲೇ ದೋಷವಿತ್ತು. ವಿದ್ಯಾರ್ಥಿಗಳು ಕಲಿಕೆಯಲ್ಲಿ ಯಾವ ಆನಂದವನ್ನೂ ಹೊಂದದೆ ವಿಷಯಗಳಲ್ಲಿ ತರಬೇತಿ ಪಡೆಯುತ್ತಿದ್ದರು. ಈ ವ್ಯವಸ್ಥೆ ಸಾವಿರಾರು ಡಾಕ್ಟರುಗಳು, ಇಂಜಿನಿಯರುಗಳು, ವಿಜ್ಞಾನಿಗಳನ್ನು ತಯಾರಿಸಿತಾದರೂ, ಅದು ಒಂದು ಸರ್ವತೋಮುಖವಾದ ದೃಷ್ಟಿಕೋನವುಳ್ಳ ಸಂಪೂರ್ಣ ವಿದ್ಯಾಭ್ಯಾಸವಾಗಿರಲಿಲ್ಲ. ಹಾಗಾಗಿ ಶಿಕ್ಷಣ ಸಂಸ್ಥೆಗಳ ಪ್ರಯೋಗವೂ ಕೂಡ ಸಂಖ್ಯೆಯ ದೃಷ್ಟಿಯಿಂದ ಉತ್ತಮವಾಗಿದ್ದರೂ ಗುಣಮಟ್ಟದ ದೃಷ್ಟಿಯಿಂದ ವಿಫಲವಾದ ಪ್ರಯೋಗವೆಂದೇ ಹೇಳಬೇಕು. ನಮ್ಮ ಶಿಕ್ಷಣ ವ್ಯವಸ್ಥೆ ಮೇಲೆ ಹೇಳಿದ ಮಿಲಾನ್ ಕುಂದೇರಾರು ಹೇಳಿದಂತೆ 'the forgetting of being'ನಂತೆ ಆಗಿತ್ತು.

ಹೀಗೆ ಈ ಮೂರು ತಲೆಮಾರುಗಳಿಗೂ ತಮ್ಮದೇ ಆದ ವಿದ್ಯೆ, ಸಂಸಾರಗಳ ಜೊತೆಗೆ ಹೊರಗಿನ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ವ್ಯವಸ್ಥೆಗಳು ಯಾವ ರೀತಿಯಲ್ಲಿ ಪ್ರಚೋದನೆಯನ್ನು ನೀಡಿದವು ಎನ್ನುವುದನ್ನು ಗಮನಿಸಬಹುದು. ನಮ್ಮ ಜೀವನದ ಪ್ರಮುಖ ನಿರ್ಧಾರಗಳಲ್ಲಿ ಈ ಪ್ರಚೋದನೆಗಳ ಪಾತ್ರವನ್ನು ಅಲ್ಲಗಳೆಯುವಂತಿಲ್ಲ.

ಈ ಸನ್ನಿವೇಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅಮೆರಿಕ ವಿಷಯಕ್ಕೆ ಬರೋಣ. ಆಗಿನ ಕಾಲದಲ್ಲಿ, ಅಂದರೆ ೧೯೭೦ರ ದಶಕದ ಆರಂಭದಲ್ಲಿ, ರಾಜಕೀಯವಾಗಿ ಭಾರತದ ಧೋರಣೆ ರಷ್ಯಾದ ಪರವಾಗಿದ್ದು ಅಮೆರಿಕವನ್ನು ಬಂಡವಾಳಶಾಹಿಗಳ ಹಿಡಿತದಲ್ಲಿರುವ ಸರ್ವಾಧಿಕಾರಿ ಎನ್ನುವಂತೆ ಚಿತ್ರಿಸಲಾಗಿತ್ತು. ನನ್ನಂತಹ ಅನೇಕ ವಿದ್ಯಾರ್ಥಿಗಳಿಗೆ ಅಮೆರಿಕ ಒಂದು ವಿಫುಲ ಅವಕಾಶವಿರುವ ಸ್ವರ್ಗದಂತೆ ತೋರಿತು. ವಿಯಟ್ನಾಮ್ ಸೇರಿದಂತೆ ಅಮೆರಿಕದ ವಿದೇಶಾಂಗ ನೀತಿ ಪ್ರಶ್ನಾತ್ಮಕವಾಗಿದ್ದರೂ ನಮಗೆ ಅಮೆರಿಕ ಆಶಾದಾಯಕ ವಾಗಿಯೇ ಕಂಡಿತು. ಇನ್ನು ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ಹಣಕಾಸು, ಕಂಪ್ಯೂಟರ್ ಸೈನ್ಸ್, ಅಣು, ಬಾಹ್ಯಾಕಾಶ ಮತ್ತು ಕ್ರೀಡೆಗಳಲ್ಲಿ ಅವರ ಸಾಧನೆಗಳು ಅದ್ಭುತವಾಗಿದ್ದವು. ಈ

ದೃಷ್ಟಿಯಿಂದ ಅಮೆರಿಕಗೆ ಹೋಗುವ ನನ್ನ ನಿರ್ಧಾರ ಅತ್ಯಂತ ಸೂಕ್ತವಾಗಿ ಕಂಡಿತು. ಕೊನೆಗೂ ತೀರ್ಮಾನ ಮಾಡಿ ಕೆಲವು ಸಹೋದ್ಯೋಗಿಗಳೊಂದಿಗೆ ಅಮೆರಿಕಗೆ ಹೊರಟೇಬಿಟ್ಟೆ. ಇಲ್ಲಿಗೆ ಬಂದ ನಂತರವೂ ನನಗೆ ಒಂದು ರೀತಿಯ ಮಿಶ್ರ ಭಾವನೆ ಇದ್ದೇ ಇತ್ತು. ಈ ಹೊಸ ದೇಶವನ್ನು ನನ್ನ ಮನೆಯನ್ನಾಗಿ ಸ್ವೀಕರಿಸಲು ಇನ್ನೂ ಪೂರ್ಣ ಮನಸ್ಸಿರಲಿಲ್ಲ. ಬಹುಶಃ ಇದಕ್ಕೆ ನಮ್ಮ ಸಂಸ್ಕೃತಿ, ಸಮಾಜ ಮತ್ತು ಆದರ್ಶಗಳಲ್ಲಿರುವ ಮೂಲಭೂತ ವ್ಯತ್ಯಾಸಗಳೇ ಕಾರಣವೆಂದು ತೋರುತ್ತದೆ.

ಅಮೆರಿಕದಲ್ಲಿ ನನ್ನ ಜೀವನ

ವಲಸೆ ಬಂದ ಅನೇಕ ಭಾರತೀಯರಂತೆ ನಾನೂ ಸಹ ನನ್ನ ಎಲ್ಲಾ ಬುದ್ಧಿ-ಶಕ್ತಿಗಳನ್ನೂ ಕೆಲಸದ ಮೇಲೇ ಕೇಂದ್ರೀಕರಿಸಿದ್ದೆ. ಈ ದೇಶದಲ್ಲಿ ನನಗೆ ಮೊದಲು ಗೋಚರಿಸಿದ್ದು, ಇಲ್ಲಿ ಪರಿಶ್ರಮಕ್ಕೆ ಫಲವುಂಟು ಎಂದು ಮತ್ತು ಇಲ್ಲಿಯವರು ಕೆಲಸೇತರ ವಿಷಯಗಳಾದ ದೇಶ, ಬಣ್ಣ, ಜಾತಿ, ಭಾಷೆ ಮುಂತಾದ ವಿಷಯಗಳಿಗೆ ಮಹತ್ವ ಕೊಡುವುದಿಲ್ಲವೆಂದು. ಕೆಲ ಕಾಲ ಭಾರತದಲ್ಲಿ ಕೆಲಸ ಮಾಡಿ ಇಲ್ಲಿಗೆ ಬಂದಿದ್ದರಿಂದ ನನಗೆ ಎರಡನ್ನೂ ಹೋಲಿಸುವ ಅವಕಾಶವಿತ್ತು. ಭಾರತದಲ್ಲಿ ಕೆಲಸದ ವಾತಾವರಣದ ಬಗ್ಗೆ ಬಹಳ ಅಸಹ್ಯ ಪಟ್ಟಿದ್ದೆ. ಆದರೆ ಇಲ್ಲಿನ ವಾತಾವರಣ ನನಗೆ ಬಹಳ ಇಷ್ಟವಾಯಿತು. ಹೀಗೆ ಅಮೆರಿಕದಲ್ಲಿ ಮೊದಲ ಕೆಲವು ವರ್ಷಗಳು ಕಲಿಕೆಯ (ಎಲ್ಲ ರೀತಿಯ) ಕಾಲವಾಗಿದ್ದವು.

ನನ್ನ ಕೆಲಸದ ಮೇಲೆ ಬೇರೆ ಬೇರೆ ಸ್ಥಳಗಳಿಗೆ ವಾರಗಟ್ಟಲೆ ಪ್ರಯಾಣ ಮಾಡಬೇಕಾಗುತ್ತಿತ್ತು. ಈ ರೀತಿಯ ಪ್ರಯಾಣಗಳು ನನಗೆ ಅಮೆರಿಕನ್ನರನ್ನು ಸೂಕ್ಷ್ಮವಾಗಿ ನೋಡುವ ಮತ್ತು ಅವರೊಡನೆ ಕೆಲಸಕ್ಕೆ ಬಾಹಿರವಾದ ಸಾಮಾನ್ಯ ವಿಷಯಗಳಲ್ಲಿ ವಿಚಾರ ವಿನಿಮಯ ಮಾಡಿಕೊಳ್ಳುವ ಅವಕಾಶಗಳನ್ನು ವಿಫುಲವಾಗಿ ಒದಗಿಸಿದವು. ಹಲವಾರು ಬಾರಿ ಕೆಲವರ ಮನೆಗಳಿಗೂ ಹೋಗಿ ಅವರ ಜೀವನವನ್ನು ಹತ್ತಿರದಿಂದ ಅಭ್ಯಾಸ ಮಾಡುವ ಅವಕಾಶಗಳು ದೊರಕಿದವು. ಇವು ನನಗೆ ನಿಜವಾದ ಅಮೆರಿಕವನ್ನು ಅಭ್ಯಾಸ ಮಾಡಲು ತುಂಬಾ ಸಹಕಾರಿಯಾಯಿತು. ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ.

ನನಗೆ ೧೪ ತಿಂಗಳ ಅವಧಿಗೆ ಪಶ್ಚಿಮ ವರ್ಜೀನಿಯಾದಲ್ಲಿರುವ ಒಂದು ಬ್ಯಾಂಕಿಗೆ ಕೆಲಸದ ಮೇಲೆ ಕಳುಹಿಸಲಾಯಿತು. ನ್ಯೂ ಜೆರ್ಸಿಗೆ ಹೋಲಿಸಿದರೆ ಪಶ್ಚಿಮ ವರ್ಜೀನಿಯ ಬಹಳ ಹಿಂದುಳಿದ ರಾಜ್ಯ. ನನ್ನ ಬಾಸ್ ಮೊದಲೇ ಎಚ್ಚರಿಸಿದ್ದರು 'ನೀನು ಅಲ್ಲಿ ಬ್ಯುಸಿನೆಸ್ ಸೂಟ್ ಹಾಕಿಕೊಂಡು ಹೋದರೆ ನಿನ್ನನ್ನು ಅಲ್ಲಿ ಎಲ್ಲರೂ ಆಶ್ಚರ್ಯದಿಂದ ನೋಡುತ್ತಾರೆ' ಅಂತ. ಈ ಕೆಲಸವು ನನಗೆ ಅಮೆರಿಕದ ಒಂದು ಹಿಂದುಳಿದ ರಾಜ್ಯವನ್ನೂ ಮತ್ತು ಅಲ್ಲಿಯ ಜನರನ್ನು ಅಭ್ಯಾಸ ಮಾಡುವುದಕ್ಕೆ ತುಂಬಾ ನೆರವಾಯಿತು.

ನ್ಯಾನ್ಸಿ ಸಿ. ಎನ್ನುವವಳು ಆ ಬ್ಯಾಂಕಿನ ಉಪಾಧ್ಯಕ್ಷಳಾಗಿದ್ದಳು ಮತ್ತು ನಾನು ಅವಳೊಡನೆ ಕೆಲಸ ಮಾಡಬೇಕಿತ್ತು. ಅವಳೊಡನೆ ನನ್ನ ಮೊದಲ ಮೀಟಿಂಗ್ ಆದ ನಂತರ ಬಿಡುವಿನಲ್ಲಿ ಮತ್ತೆ ಮಾತನಾಡಲು ಸಿಕ್ಕಿದಳು. ಆಗ ಸ್ವಲ್ಪ ಬೇರೇ ವಿಷಯಗಳ ಬಗ್ಗೆ ಮಾತನಾಡಲು ಸಾಧ್ಯವಾಯಿತು. ನ್ಯಾನ್ಸಿ ನನ್ನ ಮತದ ಬಗ್ಗೆ ವಿಚಾರಿಸಿದಳು. ನಾನು ನಮ್ರತೆಯಿಂದ 'ನಾನು ಹಿಂದೂ ಬ್ರಾಹ್ಮಣ' ಎಂದು ಹೇಳಿ ನಮ್ಮ ದೇವರು ಮತ್ತು ಪ್ರಾರ್ಥನೆಗಳ ಬಗ್ಗೆ ಸ್ವಲ್ಪ ಹೇಳಿದೆ. ನ್ಯಾನ್ಸಿ ನಾನು ಹೇಳಿದುದನ್ನೆಲ್ಲಾ ಕುತೂಹಲದಿಂದ ಕೇಳಿಸಿಕೊಂಡು ಹೇಳಿದಳು 'ನೀನು ನಿನ್ನ ಪ್ರಾರ್ಥನೆಗಳೆಲ್ಲಾ ಆದಮೇಲೆ ಕ್ರಿಸ್ತನನ್ನು ಕುರಿತು ಪ್ರಾರ್ಥಿಸುತ್ತೀಯಾ ತಾನೆ?'

ನನಗೆ ಈ ವಿಚಿತ್ರ ಪ್ರಶ್ನೆಯನ್ನು ಕೇಳಿ ಏನು ಹೇಳಬೇಕೆಂದು ತಿಳಿಯಲಿಲ್ಲ. ಅಷ್ಟೊಂದು ವಿದ್ಯಾವಂತಳಾಗಿದ್ದು, ದೊಡ್ಡ ಬ್ಯಾಂಕಿನ ಉಪಾಧ್ಯಕ್ಷಳಾಗಿದ್ದ ಅವಳಿಗೆ ಕ್ರಿಶ್ಚಿಯನ್ ಮತ್ತು ಹಿಂದೂ ಧರ್ಮಗಳು ಭಿನ್ನಮತಗಳೆಂಬ ತಿಳಿವಳಿಕೆ ಇರಲಿಲ್ಲ! ಹೀಗೆಂದ ಮಾತ್ರಕ್ಕೆ ಅವಳೇನೂ ದಡ್ಡಿಯಾಗಲೀ, ಕೆಟ್ಟವಳಾಗಲೀ ಆಗಿರಲಿಲ್ಲ. ಹೀಗೆಯೇ ಹಲವಾರು ತಿಂಗಳು ಅವಳೊಡನೆ ಕೆಲಸ ಮಾಡುತ್ತಾ ನಾವಿಬ್ಬರೂ ಪರಸ್ಪರ ಚೆನ್ನಾಗಿ ಅರಿತುಕೊಂಡೆವು. ಅವಳೆಂದೂ ಮತ್ತೆ ನನ್ನ ಮತದ ಬಗ್ಗೆ ಹೆಚ್ಚು ಮಾತನಾಡಲಿಲ್ಲ. ಇದು ನನ್ನ ಕೆಲಸಕ್ಕೆ ಯಾವುದೇ ರೀತಿಯಲ್ಲೂ ಬಾಧಿಸಲಿಲ್ಲ. ಆ ಬ್ಯಾಂಕಿನಲ್ಲಿ ನನ್ನ ಕೆಲಸ ಮುಗಿದಾಗ ನ್ಯಾನ್ಸಿ ನನ್ನ ಇಬ್ಬರು ಮಕ್ಕಳಿಗೂ ನೆನಪಿಗೆಂದು ಗಿಫ್ಟ್‌ಗಳನ್ನು ಕೊಟ್ಟಾಗ ಅವಳ ಪ್ರೀತಿ, ವಿಶ್ವಾಸಗಳನ್ನು ನೋಡಿ ವಿಸ್ಮಿತನಾದೆ. ಅವಳು ಧಾರ್ಮಿಕ ಪ್ರವೃತ್ತಿಯವಳಾಗಿದ್ದು ನಿಜವಾದ 'ಕ್ರಿಶ್ಚಿಯನ್' ಆಗಿದ್ದಳು, ಮತಾಂಧಳಾಗಿರಲಿಲ್ಲ. ಎಲ್ಲರನ್ನೂ, ಎಲ್ಲ ಮತದವರನ್ನೂ ಗೌರವಿಸುವ ಉದಾರತೆ ಅವಳಲ್ಲಿತ್ತು.

ಜಾತಿ-ವೈಷಮ್ಯ ಮತ್ತು ಪೂರ್ವಾಗ್ರಹಪೀಡೆಗಳು ಸಾಧಾರಣವಾಗಿ ಗುಂಪುಗಳ ಮಧ್ಯೆ ಆಗುತ್ತದೆಯಾಗಲೀ, ವೈಯಕ್ತಿಕ ಸಂಬಂಧಗಳಲ್ಲಿ ಇವು ಯಾವುದೇ ರೀತಿಯಲ್ಲೂ ಅಡ್ಡ ಬರುವುದಿಲ್ಲ. ಹಲವಾರು ಪಾಕಿಸ್ತಾನಿ ಮುಸ್ಲಿಮರು ಭಾರತೀಯರಿಗೆ ಅತ್ಯಂತ ಪ್ರೀತಿ ಪಾತ್ರರಾದ ಸ್ನೇಹಿತರಾಗಿರುವುದನ್ನು ಕಣ್ಣಾರೆ ಕಂಡಿದ್ದೇನೆ.

ನಾನು ಇನ್ನೊಂದು ಪ್ರಾಜೆಕ್ಟ್‌ನಲ್ಲಿ ಗಸ್ ಕೆ. ಎನ್ನುವವನೊಬ್ಬನ ಜೊತೆಗೆ ಕೆಲಸ ಮಾಡಿದೆ. ಅವನೇ ನಮ್ಮ ಪ್ರಾಜೆಕ್ಟ್‌ಗೆ ಮ್ಯಾನೇಜರ್ ಆಗಿದ್ದ. ನಮ್ಮ ಕಂಪನಿಗೆ ಈ ಪ್ರಾಜೆಕ್ಟ್ ತುಂಬಾ ಮುಖ್ಯವಾಗಿತ್ತು. ಇದು ಮೂರು ವರ್ಷದ ಅವಧಿಯದಾಗಿತ್ತು. ಈ ಕಂಪನಿಯ ಜೊತೆ ನಮ್ಮ ಕಂಪನಿಯ ಸಂಬಂಧ ಅಷ್ಟು ಚೆನ್ನಾಗಿರಲಿಲ್ಲ. ಹಾಗಾಗಿ ನನಗೆ ಈ ಸಂಬಂಧವನ್ನು ಸುಧಾರಿಸಿ ಉತ್ತಮಪಡಿಸುವುದರಲ್ಲಿ ತುಂಬಾ ಜವಾಬ್ದಾರಿ ಇತ್ತು. ಗಸ್ ಜೊತೆಗೆ ನನ್ನ ಮೊದಲ ಭೇಟಿ ತುಂಬಾ ಚೆನ್ನಾಗಿ ನಡೆಯಿತು.

ಈ ಪ್ರಾಜೆಕ್ಟ್ ನಡೆದ ಸ್ಥಳ ಪೆನ್ಸಿಲ್ವೇನಿಯಾ ರಾಜ್ಯದ ಈಶಾನ್ಯದಲ್ಲಿರುವ ವಿಲ್ಕಿಸ್ ಬ್ಯಾರೆ ಎನ್ನುವ ಊರಿನಲ್ಲಿ. ಈ ಊರು ಬಲ ಪಂಥೀಯ ಕ್ರಿಶ್ಚಿಯನ್ ಜಾತಿವಾದಿಗಳ ಪ್ರದೇಶವೆಂದು ಖ್ಯಾತವಾಗಿತ್ತು. ನಾನು ವಾರದ ಕೆಲಸದ ದಿನಗಳಲ್ಲಿ ಅಲ್ಲಿದ್ದು ವಾರದ ಕೊನೆಯಲ್ಲಿ ನಮ್ಮೂರಿಗೆ ಹೋಗುತ್ತಿದ್ದೆ. ಮೊದಲ ಕೆಲವು ತಿಂಗಳುಗಳು ತುಂಬಾ ಕಷ್ಟಪಟ್ಟು ಕೆಲಸ ಮಾಡಿ ಗಸ್‌ನನ್ನು ತೃಪ್ತಿಪಡಿಸಿದೆ. ಗಸ್‌ಗೆ ನನ್ನ ಮೇಲೆ ವಿಶ್ವಾಸ ಬೆಳೆಯಿತು. ಗಸ್ ನನ್ನ ಮತ, ನಂಬಿಕೆಗಳು ಮತ್ತು ಸಂಸಾರದ ಬಗ್ಗೆ ಬಹಳ ಆಸಕ್ತಿಯಿಂದ ಕೇಳಿ ತಿಳಿದುಕೊಂಡ. ಅವನು ಕ್ರಿಶ್ಚಿಯನ್ ಮತದ ತೀವ್ರಗಾಮಿಯಾಗಿದ್ದನು. ಅವನಿಗೆ ಮರು-ಹುಟ್ಟು (born-again Christian) ಆಗಿದೆಯೆಂದು ಹೇಳುತ್ತಿದ್ದರು. ಮರು-ಹುಟ್ಟಿನಲ್ಲಿ ನಂಬಿಕೆಯಿರುವವರು ಕ್ರಿಶ್ಚಿಯನ್ ಮತದ ಮೂಲಭೂತವಾದಿಗಳೆಂದು ಪರಿಗಣಿಸಬಹುದು. ಮರು-ಹುಟ್ಟಿನ ಬಗ್ಗೆ ಒಂದೆರಡು ಮಾತುಗಳಲ್ಲಿ ಹೇಳಬಹುದಾದರೆ, ಮನುಷ್ಯನಿಗೆ ಮೊದಲನೆಯ ಹುಟ್ಟು ತನ್ನ ತಂದೆ-ತಾಯಿಯರಿಂದ ಆಗುತ್ತದೆ. ಈ ಹುಟ್ಟಿನಿಂದ ಮನುಷ್ಯನಿಗೆ ಸಾಯುವ ದೇಹ ಮತ್ತು ಕಲ್ಮಶಪೂರಿತ ಆತ್ಮ ಬರುತ್ತದೆ. ಇದರಿಂದ ಮನುಷ್ಯ ಜನ್ಮಕ್ಕೆ ಉದ್ಧಾರವಿಲ್ಲ. ಕ್ರಿಸ್ತನನ್ನು ರಕ್ಷಕನೆಂದು ಒಪ್ಪಿಕೊಂಡ ನಂತರ, ಎರಡನೆಯ ಹುಟ್ಟು ಆಗುತ್ತದೆ. ಇದರಿಂದ ಮನುಷ್ಯನು ದೈವತ್ವವನ್ನು ಪಡೆಯುತ್ತಾನೆ.

ಗಸ್ ಬಾಹ್ಯದಲ್ಲಿ ತನ್ನ ಮತೀಯ ಭಾವನೆಗಳನ್ನೆಂದಿಗೂ ತೋರಿಸಿಕೊಳ್ಳುತ್ತಿರಲಿಲ್ಲ. ಹಾಗಾಗಿ ನನಗೆ ಅವನೊಂದಿಗೆ ಕೆಲಸ ಮಾಡಲು ಯಾವ ತೊಂದರೆಯೂ ಇರಲಿಲ್ಲ. ನಮ್ಮ ಕಂಪನಿಗೆ ನನ್ನ ಮತ್ತು ಅವನ ಸ್ನೇಹದಿಂದ ವ್ಯವಹಾರದಲ್ಲಿ ಬಹಳ ಉಪಯೋಗವಾಗಿತ್ತು. ಒಂದು ದಿನ ಸಾಯಂಕಾಲ ನನ್ನನ್ನು ಅವನ ಮನೆಗೆ ಊಟಕ್ಕೆ ಕರೆದ. ನನಗೆ ಬಹಳ ಸಂತೋಷ ಮತ್ತು ಹೆಮ್ಮೆಯುಂಟಾಯಿತು. 'ಸರಿ, ಬರುತ್ತೇನೆ' ಎಂದೆ. ಸಾಯಂಕಾಲ ಗಸ್ ಅವನ ಕಾರಿನಲ್ಲಿ ನನ್ನನ್ನು ಅವರ ಮನೆಗೆ ಕರೆದುಕೊಂಡು ಹೊರಟ. ಗಸ್‌ನ ಕಾರಿನಲ್ಲಿ ಹಾಕಿದ ರೇಡಿಯೋ ಸ್ಟೇಷನ್ನಿನ ಪ್ರಸಾರವನ್ನು ಕೇಳಿ ಆಶ್ಚರ್ಯವಾಯಿತು. ಆ ರೇಡಿಯೋ ಚಾನೆಲ್ಲಿನಲ್ಲಿ ಪ್ರಸಾರಕನು ಬೈಬಲ್ಲಿನಿಂದ ಆಯ್ದ ಶ್ಲೋಕಗಳನ್ನು ಓದುತ್ತಿದ್ದನು. ಅದು ಅಲ್ಲಿ ಬಹಳ ಜನಪ್ರಿಯವಾದ ಸ್ಟೇಷನ್ ಎಂದು ನಂತರ ತಿಳಿಯಿತು. ಅಮೆರಿಕ ದೇಶ ಮೇಲ್ನೋಟಕ್ಕೆ ಜಾತ್ಯತೀತವಾಗಿ ಕಂಡರೂ ಕೆಲ ಪ್ರದೇಶಗಳಲ್ಲಿ ಜಾತೀಯ ಭಾವನೆಗಳು ಬಹಳ ಪ್ರಬಲವಾಗಿರುವುದನ್ನು ಕಾಣಬಹುದು. ಗಸ್‌ನ ಮನೆ ತಲುಪಿದ ನಂತರ ನನ್ನನ್ನು ಬಹಳ ಆದರದಿಂದ ಬರಮಾಡಿಕೊಂಡು ಊಟೋಪಚಾರಗಳನ್ನು ಮಾಡಿದರು. ಊಟದ ನಂತರ ಗಸ್ ಚರ್ಚ್‌ನಲ್ಲಿ ನಡೆಯಲಿರುವ ಒಂದು ಕಾರ್ಯಕ್ರಮಕ್ಕೆ ಹೋಗಬೇಕೆಂದು ಹೇಳಿದ. 'ಸರಿ' ಎಂದು ನಾನೂ ಸಹ ಅವನ ಜೊತೆಗೆ ಹೊರಟೆ.

ಆ ಚರ್ಚ್ ಬಹಳ ಭವ್ಯವಾಗಿತ್ತು. ಅನೇಕ ಕೊಠಡಿಗಳಿದ್ದವು. ಅಲ್ಲಿ ಎಲ್ಲಾ ವಯಸ್ಸಿನ ಜನರಿದ್ದುದನ್ನು ನೋಡಿದೆ. ಅವರೆಲ್ಲರೂ ಪರಸ್ಪರ ಪರಿಚಯವಿರುವಂತೆ ಕಂಡರು ಮತ್ತು

ಯಾರೂ ಅಪರಿಚಿತರಂತೆ ಕಾಣಲಿಲ್ಲ. ನನ್ನನ್ನು ಬಹಳ ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳಲಾಯಿತು. ನಂತರ ಒಂದು ದೊಡ್ಡ ಪ್ರಾರ್ಥನಾ ಸಭೆಗೆ ಹೋದೆವು. ಎಲ್ಲರೂ ಆಸೀನರಾದ ಮೇಲೆ, ಪಾದ್ರಿಯು ಬೈಬಲ್ಲಿನ ಶ್ಲೋಕಗಳನ್ನು ಓದುತ್ತಾ ಅವನ ಪ್ರವಚನವನ್ನು ಶುರು ಮಾಡಿದನು. ಅಂದಿನ ವಿಷಯ ಕ್ರಿಸ್ತನನ್ನು ನಮ್ಮ ಹೃದಯದೊಳಗೆ ಆಹ್ವಾನಿಸುವ ಬಗೆಗೆ ಆಗಿತ್ತು. ಬಹಳ ಆವೇಶದಿಂದ ತನ್ಮಯನಾಗಿ ಮಾತನಾಡುತ್ತಿದ್ದನು. ಜೀಸಸ್ ಮೇಲೆ ಅನುಮಾನ ಪಡುವವರು ತಮ್ಮ ಮನಸ್ಸುಗಳನ್ನು ತೆರೆಯಬೇಕು ಎಂದು ಹೇಳಿದನು. ನನಗೆ ಆಗ ಸ್ವಲ್ಪ ಕಸಿವಿಸಿ ಆಗಲು ಶುರುವಾಯಿತು. ಅವನು ಅದನ್ನೆಲ್ಲಾ ನನಗೇ ಹೇಳುತ್ತಿರುವಂತೆ ತೋರುತ್ತಿತ್ತು. ಏಕೆಂದರೆ ಅಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರೂ ಹೊರಗಿನವರು ಇರಲಿಲ್ಲ. ಅಂತೂ ಕೊನೆಗೆ ಅಲ್ಲಿಂದ ಹೊರಟಾಗ, ಅಮೆರಿಕದಲ್ಲಿ ಅತ್ಯಂತ ಜಾತೀವಾದಿ ಪ್ರದೇಶವೊಂದನ್ನು ನೋಡಿದ ಹಾಗೆ ಅನ್ನಿಸಿತು.

ಮುಂದೆ ನಡೆದ ಇನ್ನೊಂದು ಘಟನೆ ಗಸ್‌ನಲ್ಲಿದ್ದ ಮಾನವೀಯ ದೌರ್ಬಲ್ಯಗಳನ್ನು ತೋರಿಸಿತು. ನಮ್ಮ ಪ್ರಾಜೆಕ್ಟಿಗೆ ಒಂದು ಅಮೆರಿಕನ್ ಮಹಿಳೆ ಕೆಲಸಕ್ಕೆ ಸೇರಿದಳು. ದಿನ ಕಳೆದಂತೆ ಗಸ್‌ಗೆ ಅವಳ ಮೇಲೆ ಸಲುಗೆ ಹೆಚ್ಚುತ್ತಿದ್ದಂತೆ ತೋರುತ್ತಿತ್ತು. ಒಂದು ದಿನ ಮೀಟಿಂಗ್‌ನಲ್ಲಿ ಗಸ್ ಅವಳ ಕೈ ಹಿಡಿದುಕೊಂಡದ್ದು ನನ್ನ ಗಮನಕ್ಕೆ ಬಂತು. ಅದನ್ನು ನೋಡಿದ ಗಸ್ ತಕ್ಷಣ ತನ್ನ ಕೈ ಹಿಂದೆಗೆದುಕೊಂಡು ನನ್ನನ್ನು ದುರುಗುಟ್ಟಿ ನೋಡಿದನು. ನಾನು ನನ್ನ ದೃಷ್ಟಿಯನ್ನು ಬದಲಿಸಿದೆ. ನನಗೆ ಅವನ ದುರ್ಬಲತೆಯ ಅರಿವಾಯಿತು. ಅವನ ಕ್ರಿಶ್ಚಿಯಾನಿಟಿಯ ಆದರ್ಶಗಳೆಲ್ಲಾ ಗಾಳಿಯಲ್ಲಿ ತೂರಲ್ಪಟ್ಟಿದ್ದವು. ಕ್ರಿಶ್ಚಿಯಾನಿಟಿ ಮತ್ತು ಬೈಬಲ್ ಅವನ ಜೀವವಾಗಿದ್ದರೂ, ಮಾನವ ಸಹಜ ದುರ್ಬಲತೆಗಳು ಅವನನ್ನು ಕಾಡಿದ್ದವು.

ಈ ತರಹದ ಘಟನೆಗಳಿಂದ ಅಮೆರಿಕದ ಬಗ್ಗೆ ನನ್ನ ಅಭಿಪ್ರಾಯಗಳು ಸ್ಪಷ್ಟವಾಗತೊಡಗಿತು. ಅಮೆರಿಕದ ಸಂವಿಧಾನ, ಕೋರ್ಟ್, ಕಚೇರಿಗಳು ಸಂಪೂರ್ಣವಾಗಿ ಜಾತ್ಯತೀತವಾಗಿದ್ದರೂ, ಬಹುಮತದ ಅಮೆರಿಕನ್ನರು ಅಧ್ಯಾತ್ಮಿಕತೆಯ ಜಾತೀಯತೆಯನ್ನು ಇನ್ನೂ ಉಳಿಸಿಕೊಂಡಿದ್ದಾರೆ ಎನಿಸುತ್ತದೆ. ಆದರೆ ನಮ್ಮ ಭಾರತೀಯರು ಮೇಲುನೋಟಕ್ಕೆ ಜಾತೀವಾದಿಗಳಂತೆ ಕಂಡರೂ, ನಿಜವಾಗಿ ಜಾತ್ಯತೀತರು ಎಂದೇ ನನ್ನ ಭಾವನೆ.

ಅಮೆರಿಕದಲ್ಲಿ ವಲಸೆ ಬಂದವರ ಬಾಳು

'This separation from one's tribe creates an inner loneliness that increases as one ages' –Annie Proulx

ಒಂದು ಜನಜೀವನ, ಸಂಸ್ಕೃತಿ ಮತ್ತು ಭಾಷೆಯಿಂದ ಬೇರೆಯಾಗಿ ಹೊರಗೆ ಬಂದಾಗ, ಒಂದು ರೀತಿಯ ಏಕಾಂತತೆಯು ವಲಸೆಗಾರರನ್ನೆಲ್ಲ ಪೀಡಿಸುತ್ತದೆ. ಇನ್ನು ಹೊಸ

ಜಾಗ ಮತ್ತು ಪರಿಸರಗಳಿಗೆ ಹೊಂದಿಕೊಳ್ಳಲು ಸಾಕಷ್ಟು ಕಾಲ ಬೇಕಾಗುತ್ತದೆ ಮತ್ತು ಹಲವು ಹೊಂದಾಣಿಕೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ಬದಲಾವಣೆಗಳನ್ನು, 'ವೈಯಕ್ತಿಕ ವಿಕಾಸ' ಎಂದು ಕರೆಯಬಹುದು.

ಅಮೆರಿಕಗೆ ಬಂದ ಮೊದಲು ಕೆಲವು ವರ್ಷಗಳು ಸಾಧಾರಣವಾಗಿ ಹೊಸ ಜಾಗಗಳನ್ನು ನೋಡುವ, ಭಾಷೆ, ವಾತಾವರಣಗಳಿಗೆ ಹೊಂದಿಕೊಳ್ಳುವ, ಇತ್ಯಾದಿ ವಿಷಯಗಳಲ್ಲಿ ಕಳೆದುಹೋಗುತ್ತದೆ. ಇನ್ನು ಮಕ್ಕಳಾದ ಮೇಲಂತೂ ಬೇರೆ ಬೇರೆ ರೀತಿಯ ಸಮಸ್ಯೆಗಳಿಗೆ ಎದುರಾಗುತ್ತೇವೆ. ನಮ್ಮ ಊರಿನಂತೆ ನಮಗೆ ಇಲ್ಲಿ ಹೆಚ್ಚಿನ ಸಹಕಾರ, ಸಹಾಯಗಳು ಸಿಕ್ಕದೆ ಏಕಾಂಗಿಗಳಾಗಿ ಪರದಾಡುತ್ತೇವೆ. ಕೆಲ ದಿನಗಳ ಮಟ್ಟಿಗೆ ಬರುವ ಅಪ್ಪ, ಅಮ್ಮಂದಿರು ಹರುಷ ತರುತ್ತಾರೆ. ಅವರು ಮರಳಿದ ನಂತರ ಮತ್ತೆ ಬಿಕೋ ಎನಿಸುತ್ತದೆ. ಮುಂದಿನ ಹಲವು ವರ್ಷಗಳ ಗಮನವೆಲ್ಲಾ ಮಕ್ಕಳ ಮೇಲೇ! ಅವರಿಗೆ ಎರಡು ಸಂಸ್ಕೃತಿಗಳನ್ನು ತುರುಕಲು ಪ್ರಯತ್ನಿಸುತ್ತೇವೆ. ನಾವೆಲ್ಲಾ ಒಂದು ವಿಚಿತ್ರ ರೀತಿಯ 'ದ್ವಂದ್ವ-ಜೀವನ'ವನ್ನು ನಡೆಸುತ್ತೇವೆ. ವಾರದ ದಿನಗಳು ಕೆಲಸದ ಮೂಲಕ ಅಮೆರಿಕದ ಜೀವನವಾದರೆ, ವಾರಾಂತ್ಯದಲ್ಲಿ ಭಾರತೀಯರಾಗಿರಲು ಹೆಣಗುತ್ತೇವೆ. ಆಗ ನಮ್ಮೂರಿನಲ್ಲಿರುವ ನಮ್ಮವರಿಗೆ ಫೋನ್ ಮಾಡುವ ಮೂಲಕ ನಾವು ಅಲ್ಲೇ ಇರುವಂತೆ ಭಾವಿಸುತ್ತೇವೆ. ಇಲ್ಲಿಯೂ ಹಬ್ಬ-ಹರಿದಿನಗಳನ್ನು ಮಾಡುತ್ತಾ, ಭಾರತೀಯ ಮಿತ್ರರೊಂದಿಗೆ ಔತಣ ಕೂಟಗಳಲ್ಲಿ ಭಾಗವಹಿಸುತ್ತಾ ನಾವು ಭಾರತದಲ್ಲಿರುವಂತೆಯೇ ಭ್ರಮಿಸಿ ಆನಂದಿಸುತ್ತೇವೆ.

ನಾನು ಭಾರತದಲ್ಲಿದ್ದಾಗ ದೇವರು, ದೇವಸ್ಥಾನಗಳೆಂದರೆ ಅಷ್ಟಕ್ಕಷ್ಟೆ. ಆದರೆ ಇಲ್ಲಿಗೆ ಬಂದ ಮೇಲೆ, ಸ್ನೇಹಿತರಿಂದ ಮಂತ್ರಗಳನ್ನು ಕಲಿಯಲು ಶುರುಮಾಡಿದೆ. ದೇವಸ್ಥಾನ, ಕನ್ನಡ ಕೂಟ, ಇತ್ಯಾದಿಗಳಿಗೆ ಆಗಿಂದಾಗ್ಗೆ ಹೋಗಿಬರಲು ಶುರು ಮಾಡಿದೆವು. ಅಂತರಾಳದಲ್ಲಿ ನಮಗೆ ನಮ್ಮೂರಿಗೆ ಹೋಗುವ ಮನಸ್ಸಿದ್ದರೂ, ಕಾರಣಾಂತರದಿಂದ ಇಲ್ಲಿರಬೇಕಾದ ಸಂದರ್ಭಗಳಿರುವುದರಿಂದ, ಬಹುಶಃ ಇದೆಲ್ಲವೂ ಮೇಲೆ ಹೇಳಿದಂತೆ ನಾವು ನಮ್ಮೂರಲ್ಲೇ ಇರುವಂತೆ ಭ್ರಮಿಸಲು ಮಾಡಿಕೊಂಡ ಏರ್ಪಾಡುಗಳು! ಭಾರತದಲ್ಲೇ ಇದ್ದಿದ್ದರೆ, ನಾವು ಇಷ್ಟೊಂದು ನಮ್ಮ ಸಂಸ್ಕೃತಿ, ಭಾಷೆ, ದೇವರುಗಳಿಗೆ ಹಂಬಲಿಸುತ್ತಿರಲಿಲ್ಲವೆಂದೇ ನನ್ನ ಭಾವನೆ. ಈ ತರಹದ ಹೊಯ್ದಾಟಗಳಲ್ಲಿ ಸಿಕ್ಕು, ಸನ್ನಿವೇಶಕ್ಕೆ ತಕ್ಕಂತೆ ನಮ್ಮನ್ನು ನಾವೇ 'ಭಾರತೀಯ'ರನ್ನಾಗಿ ಇಲ್ಲಾ 'ಅಮೆರಿಕನ್ನ'ರನ್ನಾಗಿ ಗುರುತಿಸಿಕೊಳ್ಳಲು ಹೆಣಗಾಡುತ್ತೇವೆ.

ಹೀಗೆ, ಆನೀ ಪ್ರೌಲ್ಕ್ಸ್‌ನ ವಿಚಾರಧಾರೆಯು ವಲಸೆಗಾರರ ಒಂದು ದೃಷ್ಟಿಕೋನವನ್ನು ಪ್ರತಿಪಾದಿಸಿದರೆ, ಬೇರೇ ಹಲವು ಆಶಾದಾಯಕ ನಿಲುವುಳ್ಳ ದೃಷ್ಟಿಕೋನಗಳೂ ಇವೆ. ಇವುಗಳಲ್ಲಿ ಮುಖ್ಯವಾದದ್ದು ಸ್ವತಃ ವಲಸೆ ಮೇಲೆ ಭಾರತದಿಂದ ಬಂದ ಖ್ಯಾತ ಬರಹಗಾರ್ತಿ, ಝುಂಪಾ ಲಾಹಿರಿಯವರ ಸಣ್ಣ ಕಥೆಗಳ ಸಂಕಲನ 'Interpreter of Maladies'ನಲ್ಲಿ ನೋಡಬಹುದು:

'In my son's eyes, I see the ambition that had first hurled me across the world. In a few years he will graduate and pave his way, alone and unprotected. But I remind myself that he has a father who is still living, and a mother who is happy and strong. Whenever he is discouraged, I tell him that if I can survive on three different continents, then there is no obstacle that he cannot conquer. While astronauts, heroes forever, spent mere hours on the moon, I have remained in this new world for nearly thirty years. I know that my achievement is quite ordinary. I am not the only man to seek his fortune far away from home, and I certainly am not the first. Still there are times when I am bewildered by each mile I have travelled, each meal I have eaten, each person I have met, each room in which I have slept. As ordinary as it all appears, there are times when it is beyond my imagination.'

ಹೊರದೇಶಕ್ಕೆ ವಲಸೆ ಬಂದ ಪ್ರತಿ ಪೀಳಿಗೆಯೂ ಆ ದೇಶದ ಸಂಸ್ಕೃತಿ ಮತ್ತು ಜನಾಂಗದೊಡನೆ 'ಸಮ್ಮಿಳಿಸುವ' ಪ್ರಕ್ರಿಯೆಯಲ್ಲಿ ಭಾಗವಹಿಸಲೇ ಬೇಕು. ಈ ಪ್ರಕ್ರಿಯೆಯು ಅಷ್ಟೇನು ಸುಖಕರವಾಗಿರುವುದಿಲ್ಲ. ಇದನ್ನು ವಲಸೆ ಬಂದುದಕ್ಕೆ ಕೊಟ್ಟ ಬೆಲೆಯೆಂದು ಭಾವಿಸಬೇಕು. ಈ ನಾಟಕವು ಪ್ರತಿನಿತ್ಯ ಅಮೆರಿಕದಲ್ಲೂ, ಪಶ್ಚಿಮ ಯೂರೋಪಿನಲ್ಲೂ ನಡೆಯುತ್ತಲೇ ಇದೆ. ಈಗ ಅಮೆರಿಕದಲ್ಲಂತೂ 'ವಲಸೆ ನಿಯಮ'ಗಳ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಇನ್ನು ೨೫-೩೦ ವರ್ಷಗಳಲ್ಲಿ ಅಮೆರಿಕ ಹೇಗಿರುತ್ತದೆಯೆಂದು ಹೇಳುವುದು ಕಷ್ಟ. ನಮ್ಮ ಮುಂದಿನ ಪೀಳಿಗೆಯವರು ಆಗ ಹೇಗಿರುತ್ತಾರೆ?

ಒಬ್ಬ ವಲಸೆಗಾರನ ದೃಷ್ಟಿಯಿಂದ ನಾನು ೨೫೦ ವರ್ಷಗಳ ಅಮೆರಿಕದ ಪ್ರಜಾಪ್ರಭುತ್ವದ ಪ್ರಯೋಗವನ್ನು ಭಾರತದ ೬೦ ವರ್ಷಗಳ ಕಿರು ಪ್ರಯೋಗದೊಡನೆ ಹೋಲಿಸಿ ನೋಡಿದಾಗ ನನಗನ್ನಿಸುವುದು, ಅಮೆರಿಕ ಈ ಹೊತ್ತು ಒಂದು ರೀತಿಯ ಸಂಕಷ್ಟ ಸ್ಥಿತಿಯಲ್ಲಿದೆ ಎಂದು. ಬಹಳಷ್ಟು ದೇಶಗಳಿಗೆ ಅಮೆರಿಕದ ಮೇಲೆ ನಾನಾ ಕಾರಣಗಳಿಂದ ಅಸಮಾಧಾನವಿದೆ. ಅಮೆರಿಕದ ಸುಂದರ ದಿನಗಳು ಕಳೆದುಹೋದವೇನೋ ಎಂದೆನಿಸುತ್ತದೆ. ಭಾರತ ಮತ್ತು ಚೀನಾ ದೇಶಗಳನ್ನು ಉತ್ತಮ ಭವಿಷ್ಯವಿರುವ ರಾಷ್ಟ್ರಗಳೆಂದು ಎಲ್ಲ ದೇಶಗಳೂ ಒಪ್ಪಿಕೊಂಡಂತೆ ತೋರುತ್ತದೆ. ಅಮೆರಿಕ ಒಂದು ರೀತಿಯಲ್ಲಿ ವಯಸ್ಸಾಗಿ ದುರ್ಬಲವಾಗುತ್ತಿರುವಂತೆ ಕಾಣಿಸಿದರೆ ಯುವಕರಿಂದ ತುಂಬಿದ ಭಾರತ ಮತ್ತು ಚೀನಾಗಳು ಬಲಿಷ್ಠವಾದಂತೆ ಕಾಣುತ್ತಿವೆ. ಇನ್ನೊಂದು ಗಮನಿಸಬಹುದಾದ ಅಂಶವೆಂದರೆ, ಭಾರತದ ಸಹೋದರ ದೇಶ ಪಾಕಿಸ್ತಾನದ ಸಂಪೂರ್ಣ ವಿಫಲತೆ.

ನಾನು ನನ್ನ ಭಾರತೀಯ ಸಂಸ್ಕೃತಿಯ ಮೌಲ್ಯವನ್ನು ಬಹಳವಾಗಿ ಅನುಭವಿಸುವುದು ಪ್ರತಿವರ್ಷ ತಪ್ಪದೆ ಆಚರಿಸುವ ನಮ್ಮ ತಂದೆಯವರ 'ಹಿರಣ್ಯ ಶ್ರಾದ್ಧ'ದಲ್ಲಿ. ಆದಿನ ಪುರೋಹಿತರು ನನ್ನ ಹಿಂದಿನ ಮೂರು ತಲೆಮಾರುಗಳನ್ನು ಇಲ್ಲಿಗೆ ಆಹ್ವಾನಿಸಿ ಉಣಬಡಿಸುವುದು, ಈ ಪ್ರಕ್ರಿಯೆಯಲ್ಲಿ ನನಗೆ ನನ್ನ ಸಂಸ್ಕಾರ, ವಂಶಗಳ ವ್ಯಾಪಕ ನೆನಪಿನಿಂದ ನಾನ್ಯಾರೆಂಬ ಅರಿವು ಮೂಡುತ್ತದೆ. ಆಗ ಮತ್ತೆ ಅದೇ ಪ್ರಶ್ನೆ ಏಳುತ್ತದೆ, 'ನಾನು ಈ ಹೊತ್ತು ನಿರ್ಧಾರ ಮಾಡುವಂತಿದ್ದರೆ, ಭಾರತ ಬಿಟ್ಟು ಬರುತ್ತಿದ್ದೆನೆ?' ಈಗಿನ ಸನ್ನಿವೇಶದಲ್ಲಿ ಭಾರತದಲ್ಲಿ ಇತ್ತೀಚಿನ ವರ್ಷಗಳ ಬದಲಾವಣೆಗಳಿಂದ ಬೇಕಾದಷ್ಟು ಅವಕಾಶಗಳಿವೆ. ಹಾಗಿರುವಾಗ ನಮ್ಮ ಜೀವನ ಕ್ರಮವನ್ನೇ ಬದಲಾಯಿಸುವ 'ವಿದೇಶಕ್ಕೆ ವಲಸೆ' ಹೋಗುವ ಅವಶ್ಯಕತೆ ಈಗ ಇದೆಯೆ?

●

ವರ್ತುಳದಲ್ಲಿ ಸಿಕ್ಕ ಮನವೆಂಬ ಮರ್ಕಟ

- ಮೈ. ಶ್ರೀ. ನಟರಾಜ

ಪಶ್ಚಿಮತೀರದ ಸುಂದರ ಸ್ಯಾಂಡಿಯಾಗೋ ನಗರದಲ್ಲಿ ನಾನು ಗಾಳಿ ಸವಾರಿಗೆ ಹೊರಟಾಗ ಇನ್ನೂ ಬೆಳಗಿನ ಏಳು-ಏಳೂವರೆಯಷ್ಟೆ. ಪೂರ್ವತೀರದಿಂದ ಬಂದಿದ್ದ ನನಗೆ ಅಭ್ಯಾಸಬಲದಿಂದ ಎಚ್ಚರವಾಗಿ ಎರಡು ಮೂರು ಘಂಟೆಗಳೇ ಕಳೆದಿದ್ದವು. ಬೆಳಗಿನ ಸೂರ್ಯನ ಕಿರಣಗಳಲ್ಲಿ ಇನ್ನೂ ಶಾಖವಿರಲಿಲ್ಲ. ಹೊಟೇಲಿನ ಸುತ್ತ ಮುತ್ತಲ ಉದ್ಯಾನದಲ್ಲಿ ಕಂಡ ಗಿಡ-ಮರ-ಬಳ್ಳಿಗಳು ಅವುಗಳಲ್ಲಿ ಬಿಟ್ಟಿದ್ದ ಹೂಗಳು ನನಗೆ ಪರಿಚಿತವಿರುವ ಸಸ್ಯವೈವಿಧ್ಯಕ್ಕಿಂತ ತೀರ ಭಿನ್ನವಾಗಿ ಕಂಡವು. ಹಿತವಾಗಿ ಚಳಿ ಎನ್ನಿಸುವ ಆ ಹವೆಯಲ್ಲಿ ಬರೀ ಶರಟಿನಲ್ಲಿ ಬಂದದ್ದು ತಪ್ಪಾಯಿತೇನೋ ಎನ್ನಿಸಿ ನಡಿಗೆಯ ವೇಗವನ್ನು ಹೆಚ್ಚಿಸಿ ಮೈಬಿಸಿಮಾಡಿಕೊಂಡೆ. ಜೊತೆಗೆ, ಏರಿಳಿತಗಳಿಂದ ಕೂಡಿದ ರಸ್ತೆಗಳು ಮೈಬಿಸಿ ಏರಿಸಲು ಸಹಾಯ ಮಾಡಿದವು. ದಕ್ಷಿಣ ಕ್ಯಾಲಿಫೋರ್ನಿಯಾದ ಮನೆಗಳೇ ಚಂದ, ನಾಡಹಂಚು ಮತ್ತು ಮಂಗಳೂರು ಹಂಚನ್ನೇ ಹೋಲುವ ಮೇಲ್ಹಾವಣಿಗಳುಳ್ಳ ಮನೆಗಳೇ ಹೆಚ್ಚು. ಸ್ಪ್ಯಾನಿಶ್ ಸೌಧಶೈಲಿಯಲ್ಲಿ ಕಟ್ಟಿದ ಮನೆಗಳು ಈ ಪ್ರದೇಶದಲ್ಲಿ ಅಧಿಕ ಸಂಖ್ಯೆಯಲ್ಲಿವೆ. 'ನಮ್ಮ ಹಳ್ಳಿಯಲ್ಲಿರುವ

ನಾಡಹಂಚಿನ ಮನೆಯನ್ನು ಸ್ವಲ್ಪ ರಿಪೇರಿ ಮಾಡಿಸಿ ಇಲ್ಲಿ ತಂದಿಟ್ಟರೆ... ಸುಮಾರು ಎರಡು ಮೂರು ಮಿಲಿಯನ್ ಡಾಲರುಗಳಾದರೂ ಬೆಲೆಬಾಳಬಹುದು' ಎಂಬ ಕಲ್ಪನೆಯೇ ನನಗೆ ಖುಷಿ ಕೊಟ್ಟಿತು. 'ಒಬ್ಬೊಬ್ಬರ ಕಲ್ಪನೆ ಮತ್ತೊಬ್ಬರ ಸತ್ಯ' ಎಂಬ ಮಾತು ನೆನಪಾಗಿ ಸಣ್ಣದಾಗಿ ನಗು ಬಂತು.

ಗಿಡ-ಬಳ್ಳಿಗಳಿಂದ ಆವರಿಸಲ್ಪಟ್ಟ ಮನೆಗಳ ವೈವಿಧ್ಯವನ್ನು ನೋಡುತ್ತ ಸುಮಾರು ಒಂದು ಘಂಟೆ ಕಾಲ ನಡೆದದ್ದೇ ಗೊತ್ತಾಗಲಿಲ್ಲ. ಹೋಟೇಲಿಗೆ ಹಿಂದಿರುಗಿ ಬಂದು ಹಾಸಿಗೆಯ ಮೇಲೆ ಕುಳಿತು ಕಾಲು ಚಾಚಿ ಟೀವಿ ಹಚ್ಚಿದೆ. ಓದಲು ತಂದಿದ್ದ ಚಿತ್ತಾಲರ ಪುಸ್ತಕವೂ ಕೈಯಲ್ಲಿತ್ತು. ವಿಮಾನದಲ್ಲಿ ಬರುವಾಗ ಅರ್ಧಕ್ಕೂ ಹೆಚ್ಚು ಭಾಗ ಓದಿ ಆಗಿದ್ದ ಚಿತ್ತಾಲರ ಕಾದಂಬರಿ 'ಕೇಂದ್ರ ವೃತ್ತಾಂತ' ಕುತೂಹಲಕಾರಿಯಾಗಿ ಓದಿಸಿಕೊಳ್ಳುವ ಪುಸ್ತಕ. ಮುಂದೇನು? ಮುಂದೇನು? ಎಂಬ ಪ್ರಶ್ನೆ ಕಾಡುತ್ತಲೇ ಇತ್ತು. ಆದರೆ, ಆತ್ಮಹತ್ಯೆ ಮಾಡಿಕೊಂಡಳೆನ್ನಲಾದ ಹುಡುಗಿ ತನಗೆ ಬರೆದಿಟ್ಟ ಕೊನೆಯ ಮೃತ್ಯುಪತ್ರವನ್ನು ಲಕೋಟೆಯೊಡೆಯದೇ ತಿಂಗಳುಗಟ್ಟಲೆ ಕಚೇರಿಯಲ್ಲಿ ಮುಚ್ಚಿಟ್ಟಿದ್ದ ಕಥಾನಾಯಕನ ಸಂಯಮ ವಿಚಿತ್ರವೂ ನಂಬಲರ್ಹವಲ್ಲದ್ದೂ ಎನಿಸಿ ಹಿಂದಿನ ರಾತ್ರಿ ನಿದ್ರೆ ಸರಿಯಾಗಿ ಮಾಡಿರಲಿಲ್ಲ. ನಾನು ಓದಿದ್ದೆಷ್ಟು, ಚಿಂತಿಸಿದ್ದೆಷ್ಟು, ಟೀವಿ ನೋಡಿದ್ದೆಷ್ಟು, ನಿದ್ರಿಸಿದ್ದೆಷ್ಟು, ನನಗೆ ನೆನಪಿಲ್ಲ. ಹಿಂದಿನೆರಡು ದಿನಗಳ ಘಟನೆಗಳೆಲ್ಲ ಕಣ್ಮುಂದೆ ಬರುತ್ತಿದ್ದವು. ಟೀವಿ ಮೇಲಿನ ಕಾರ್ಯಕ್ರಮ ನಡೆಯುತ್ತಲೇ ಇತ್ತು.

ಗೆಳೆಯನ ಮಗನ ಮದುವೆಗೆಂದು ಸ್ಯಾಂಡಿಯಾಗೋಗೆ ಬಂದದ್ದು. ಮದುವಣಿಗನನ್ನು ಹಿಂದೆ ನಾನು ನೋಡಿದ್ದಾಗ ಅವನಿಗೆ ಐದಾರು ವರ್ಷ ಎಂದು ನೆನಪು. ಆದರೂ ಎಷ್ಟೋ ವರ್ಷಗಳ ದೋಸ್ತಿಯಂತೆ ಬಂದು ಮಾತಾಡಿಸಿದ್ದ. ತಾನು ಪ್ರೀತಿಸಿ ಮದುವೆ ಆಗುತ್ತಿರುವ ಚೆಲುವೆಯನ್ನು ಪರಿಚಯ ಮಾಡಿಕೊಟ್ಟ. ಮದುವೆ ಸಮಾರಂಭ ತುಂಬಾ ಸರಳವಾಗಿತ್ತು. ಗಂಡು ನಮ್ಮವನು, ಅಮೆರಿಕದಲ್ಲಿ ಹುಟ್ಟಿ ಬೆಳೆದ ಹಿಂದೂ ಯುವಕ. ಹೆಣ್ಣಿನ ಪೂರ್ವಜರು ಪೋರ್ಟೋರೀಕೋ ಕಡೆಯವರು, ಕ್ಯಾಥೋಲಿಕ್ ಪಂಗಡದವರು. ಮದುವೆಯಾಗಲಿದ್ದ ವಧೂವರರೇ ತಮ್ಮ ಮದುವೆಯ ಸಕಲ ವಿಧಿ-ವಿಧಾನಗಳನ್ನೂ ತಾವೇ ಖುದ್ದಾಗಿ ನಿಂತು ಯೋಜಿಸಿಕೊಂಡಿದ್ದರು. ಹಿಂದೂ ಸಂಪ್ರದಾಯವನ್ನು ಪ್ರಾತಿನಿಧಿಕವಾಗಿ ಒಂದು ಸಣ್ಣ ಪೂಜೆಯೊಂದಿಗೆ ಪ್ರಾರಂಭಿಸಿ ಭಾರತೀಯ ಅಡುಗೆಯ ಭೋಜನದೊಂದಿಗೆ ಮೊದಲ ಸಂಜೆಯ ಕಾರ್ಯಕ್ರಮದ ಮುಕ್ತಾಯ. ಪಾಶ್ಚಿಮಾತ್ಯರ ಪದ್ಧತಿಯನ್ನವಲಂಬಿಸಿ ಮಾರನೆಯ ಸಂಜೆಯ ಕಾರ್ಯಕ್ರಮ. ಯಾವ ಒಂದು ಪದ್ಧತಿಗೂ ಕಟ್ಟುಬೀಳದ ('ನಾನ್-ಡಿನಾಮಿನೇಶನಲ್') ಒಂದು ಸರಳ ಮದುವೆಯ ಶಾಸ್ತ್ರ. ದೇವರ ಸಮಾರಾಧನೆ, ವರಪೂಜೆ, ಧಾರೆ, ನಾಗೋಲಿ, ಬೀಗರೌತಣ ಮುಂತಾದ ಸಮಾರಂಭಗಳಾಗಲೀ ಕನ್ಯಾದಾನ ಮಾಡುವ, ತಾಳಿ ಕಟ್ಟುವ, ಸಪ್ತಪದಿ ತುಳಿಯುವ ಅಥವಾ ಸೆರಗುಗಳನ್ನು ಕಟ್ಟಿಕೊಂಡು ಬೆಂಕಿ ಸುತ್ತುವ, ಇವೇ ಮುಂತಾದ ಯಾವ ಅಟಾಟೋಪವೂ ಇಲ್ಲದ, ಓಲಗ ಡೋಲಿನ ಸದ್ದುಗದ್ದಲವಿಲ್ಲದ

ಮದುವೆ ಮುವ್ವತ್ತು ನಿಮಿಷಗಳಲ್ಲಿ ನಡೆದೇ ಹೋಯಿತು! ಹುಡುಗ ಆನೆ ಮೇಲೆ ಬರುವುದಿರಲಿ, ಶ್ವೇತಾಶ್ವವನ್ನೂ ಏರಲೇಯಿಲ್ಲ. ಭಾಂಗಡಾ ಬಜಂತ್ರಿಗೆ ಹುಚ್ಚೆದ್ದು ಕುಣಿಯುವ ನರ್ತಕರೂ ಇಲ್ಲ.

ರಿಸೆಪ್ಷನ್ ಸಹ ಹಿತಮಿತವಾದ ಕೆಲವೇ ಮಾತುಗಳ ಸಂತೋಷಕೂಟವಾಗಿತ್ತು. ಪಾಶ್ಚಿಮಾತ್ಯ ಪಾನೀಯಗಳು ಮತ್ತು ಭೋಜನ ವ್ಯವಸ್ಥೆಯ ನಂತರ ಗಂಡು-ಹೆಣ್ಣು ಮೊದಲ್ಗೊಂಡು ಎಲ್ಲರಿಂದ ಒಂದಿಷ್ಟು ನರ್ತನ. ಸುಮಾರು ಇಪ್ಪತ್ತೈದು ಮುವ್ವತ್ತು ವರ್ಷಗಳಿಂದ ಸಿಕ್ಕದೇ ಇದ್ದ ಹಲವು ಹಳೆಯ ಮಿತ್ರರ ಪುನಃಪರಿಚಯ ಈ ಮೂಲಕ ಆಯಿತು. ಅಂತೂ ಮತ್ತೊಬ್ಬ ಭಾರತೀಯ ಮೂಲದ ಹುಡುಗನನ್ನು ಅಮೆರಿಕದ ಕರಗಿಸುವ ಕಡಾಯಿ ತನ್ನಲ್ಲಿ ಲೀನವಾಗಿಸಿಕೊಂಡು ಅರಗಿಸಿಕೊಂಡಿತು! ನಮ್ಮ ಜನ ನಮ್ಮ-ನಮ್ಮವರಲ್ಲೇ ಮದುವೆ ಸಂಬಂಧ ಮಾಡುವ ಕಾಲ ಮುಗಿದು ಹೋಯಿತೆ? ಯಾರನ್ನೂ ಮದುವೆಯಾಗದೇ ಉಳಿದಿರುವ ಅನೇಕ ಮಕ್ಕಳನ್ನು ನೆನೆಸಿಕೊಂಡರೆ, 'ಯಾರನ್ನಾದರೂ ಸರಿ, ಮದುವೆ ಮಾಡಿಕೊಂಡು ಸುಖವಾಗಿದ್ದರೆ ಸಾಕು' ಎನ್ನಿಸಿತು. ವರನ ಅಪ್ಪನೂ ನಾನೂ ಬಾಲ್ಯದ ದೋಸ್ತಿಗಳು, ನಮ್ಮ ಗೆಳೆತನದ ಸುವರ್ಣಮಹೋತ್ಸವವನ್ನು ಈ ಮದುವೆಯ ಹಿನ್ನೆಲೆಯಲ್ಲಿ ಆಚರಿಸಿಕೊಂಡೆವು! ಮನಸ್ಸು ಎಲ್ಲೆಲ್ಲೋ ಓಡಾಡುತ್ತಿತ್ತು. ಟೀವಿ ಚಾನಲ್ ಬದಲಿಸುತ್ತಾ ಹೋದೆ. ಟೀವಿ ಪರದೆಯ ಮೇಲೆ ಕಾಣುವ ಚಿತ್ರಗಳ ಜೊತೆ ಜೊತೆಗೆ ಮನಸ್ಸಿನ ಪರದೆಯ ಮೇಲೆ ಹಳೆಯ ಚಿತ್ರಗಳು ಕಲಸಿಕೊಳ್ಳುತ್ತಿದ್ದವು.

*

ಟೀವಿ ಮೇಲೆ ಅಲ್ಲೊಬ್ಬ ಗುರು ಉಪದೇಶ ಕೊಡುತ್ತಿದ್ದ. ರಿಮೋಟನ್ನು ಕೆಳಗಿಟ್ಟು ಕುತೂಹಲದಿಂದ ಕೇಳಿಸಿಕೊಂಡೆ. 'ಹಿಂದಾಗಿದ್ದರ ಬಗ್ಗೆ ಚಿಂತಿಸಿ ವ್ಯಥೆ ಪಡುವ, ಮುಂಬರುವುದನ್ನು ಶಂಕಿಸಿ ವ್ಯಾಕುಲಗೊಳ್ಳುವ ಮನಸ್ಸು ನಿಮ್ಮ ಶಾಂತಿಯನ್ನು ಹಾಳುಮಾಡುತ್ತದೆ. ಆಗಿಹೋದದ್ದನ್ನು ಬದಲಿಸಲು ಸಾಧ್ಯವಿಲ್ಲ. ಮುಂದಾಗುವುದು ನಮ್ಮ ಅಧೀನವಲ್ಲ. ಆದ್ದರಿಂದ, ಈ ಕ್ಷಣದಲ್ಲಿ ಮಾತ್ರ ಬದುಕಿ' ಎಂದು ಎಲ್ಲರಿಗೂ ಗೊತ್ತಿರುವ ಸತ್ಯವನ್ನೇ ಆತನೂ ಹೇಳುತ್ತಿದ್ದ. 'ಈ ಕ್ಷಣದಲ್ಲಿ ಬದುಕುವುದು ಅಂದ್ರೆ ಏನಪ್ಪಾ' ಎಂದು ನಾನು ಮರು ಪ್ರಶ್ನೆ ಮಾಡಿದೆ. ಆದರೆ, ಆತ ಟೀವಿಯಲ್ಲಿ ಕುಳಿತು ಭಾಷಣ ಹೊಡೆಯುತ್ತಿದ್ದ, ನನ್ನ ಮಾತು ಅವನಿಗೆ ಕೇಳಿಸುವುದಾದರೂ ಹೇಗೆ? 'ಈ ಕ್ಷಣವೆಂಬುದು ತುಂಬಾ ಕ್ಷಣಿಕವಲ್ಲವೇ?' ಎಂದು ಕೇಳಿತು ನನ್ನ ಮನಸ್ಸು. 'ಈ ಕ್ಷಣವೂ ಕ್ಷಣಿಕ' ಎಂಬ ನನ್ನ ಮಾತಿನ ಜಾದುವಿಗೆ ನಾನೇ ತಲೆದೂಗಿದೆ.

ಹೌದಲ್ಲಾ! 'ಈ ಕ್ಷಣ' ಎನ್ನುವ ಹೊತ್ತಿಗೆ ಈ ಕ್ಷಣವೇ ಇರುವುದಿಲ್ಲ, ಮುಂದಿನ ಕ್ಷಣ ಬಂದಾಗಿರುತ್ತಲ್ಲ. ಹಾಗಾದರೆ ಪ್ರತಿ ಕ್ಷಣವೂ ತಾತ್ಕಾಲಿಕ ವರ್ತಮಾನ, ಅದಕ್ಕೊಂದು

ಭೂತ ಇದ್ದೇ ಇರುತ್ತಲ್ಲಾ. ಅರ್ಥಾತ್, ಈ ಕ್ಷಣದ ಹಿಂದಿನ ಎಲ್ಲಾ ಕಳೆದ ಕ್ಷಣಗಳೂ ಭೂತವೇ. ನಾವು 'ಈ ಕ್ಷಣ' ಎನ್ನುವ ಹೊತ್ತಿಗೆ ಮುಂದಿನ ಕ್ಷಣ ಅಂದರೆ ಭವಿಷ್ಯತ್ಕಾಲದ ಆಗಮನ ಆಗಿಬಿಡುತ್ತದೆ. ಆದರೆ ಆ ಭವಿಷ್ಯತ್ ಎಂಬುದು ಮುಂದಿನ ಕ್ಷಣದ ವರ್ತಮಾನ. ಈ ವಾದಸರಣಿಯಿಂದ ನನ್ನ ತಲೆ ಬಿಸಿಯಾಗಹತ್ತಿತು. ಕೇಂದ್ರ, ವೃತ್ತ, ಪರಿಧಿ, ವರ್ತುಲ ಮುಂತಾದ ಚಿತ್ತಾಲರ ಸ್ಪೆಶಲ್ ಮನೋವೈಜ್ಞಾನಿಕ ವಿಶ್ಲೇಷಣೆಗಳು ನನ್ನ ಸುತ್ತ ಸುತ್ತಾಡಿದವು. ವೃತ್ತದ ಕೇಂದ್ರದಲ್ಲಿ ಒಮ್ಮೆ ನನ್ನ ಗೆಳೆಯನೂ, ಮತ್ತೊಮ್ಮೆ ಅವನ ಮಗ-ಮದುವಣಿಗನೂ, ನಂತರ ಮದುವಣಗಿತ್ತಿಯೂ ಬಂದು ಕುಳಿತರು, ವೃತ್ತ ಸುತ್ತುತ್ತಾ ಅದರ ಪರಿಧಿಯಲ್ಲಿ ನಾನು ಸುತ್ತುತ್ತಿದ್ದಂತೆ ನನ್ನ ತಲೆ ಸುತ್ತಿತು.

ಅಷ್ಟರಲ್ಲಿ, ಟೀವಿ ಗುರು ಹೇಳುತ್ತಿದ್ದುದು ಕೇಳಿಸಿತು: 'ಈ ಕ್ಷಣವನ್ನು ಬಂಧಿಸಿಡಿ -ಕ್ಯಾಪ್ಚರ್ ದ ಮೊಮೆಂಟ್' ಎಂದ. ಮತ್ತದೇ ಮಾತಿನ ಚಮತ್ಕಾರ. 'ವರ್ತಮಾನದಲ್ಲಿ ಬದುಕಿ, ಭೂತವನ್ನು ಮರೆತು ಭವಿಷ್ಯದ ಬಗ್ಗೆ ತಲೆಕೆಡಿಸಿಕೊಳ್ಳದೇ, - ವನ್ ಡೇ ಎಟ್ ಎ ಟೈಮ್- ಆಯಾ ದಿನವನ್ನು ಕಳೆಯಿರಿ' ಎಂದ. 'ಕಳೆಯಿರಿ' ಎಂದರೆ ಕಳೆದುಕೊಳ್ಳಿರಿ ಅಂತಲೇ? ಸುಮ್ಮನೆ ಕಾಲವನ್ನು ಕಳೆಯುವುದೇ ಜೀವನದ ಉದ್ದಿಶ್ಯವೇ? ಪುನಃ ನನ್ನ ಪ್ರಶ್ನೆಯ ಬಗ್ಗೆ ಚಿಂತಿಸುತ್ತ ಆತ ಹೇಳಿದ ಮಾತುಗಳನ್ನು ಕೇಳಿಸಿಕೊಳ್ಳಲು ವಿಫಲನಾದೆ. ಇದೊಂದು ನನಗೆ ಅಂಟಿದ ಹಳೆಯ ರೋಗ. ಶಾಲೆಯ ದಿನಗಳಲ್ಲೂ ಹೀಗೇ ಆಗುತ್ತಿತ್ತು. ಗಣಿತದ ಅಧ್ಯಾಪಕರು ಕಪ್ಪು ಹಲಗೆಯ ಮೇಲೆ ಲೆಕ್ಕವನ್ನು ಬರೆಯುತ್ತಿದ್ದರು. ಅದು ಅಂಕಗಣಿತವೇ ಆಗಿರಲಿ, ಬೀಜಗಣಿತವೇ ಆಗಿರಲಿ, ರೇಖಾಗಣಿತವೇ ಆಗಿರಲಿ, ಲೆಕ್ಕವನ್ನು ಬರೆದುಕೊಂಡೊಡನೆ ನಾನು ನನ್ನೊಳಗಿನ ಗಣಿತ-ಪ್ರಪಂಚಕ್ಕೆ ಸೇರಿಕೊಳ್ಳುತ್ತಿದ್ದೆ. ಮಾಸ್ತರು ಬರೆದ ಲೆಕ್ಕವನ್ನು ಬಿಡಿಸುವುದು ಹೇಗೆ ಎಂಬ ನನ್ನ ಆಲೋಚನೆಯಲ್ಲಿ ಮುಳುಗಿ, ಮಾಸ್ತರು ಹೇಳಿಕೊಡುತ್ತಿದ್ದ ಪಾಠದ ಕಡೆಗೆ ನನ್ನ ಗಮನವಿರುತ್ತಲೇ ಇರಲಿಲ್ಲ. ಹೀಗಾಗಿ ನಾನು ಹೇಗೋ ಲೆಕ್ಕವನ್ನು ಬಿಡಿಸುತ್ತಿದ್ದೆನಾದರೂ ಮಾಸ್ತರು ಕಲಿಸುತ್ತಿದ್ದ ಅನೇಕ ಸುಲಭೋಪಾಯಗಳು, ಸರಳಮಾರ್ಗಗಳು, 'ಟ್ರಿಕ್'ಗಳ ಬಗ್ಗೆ ಅವರು ಹೇಳುತ್ತಿದ್ದ ವಿವರಗಳಿಂದ ನಾನು ವಂಚಿತನಾಗುತ್ತಿದ್ದೆ. ನನ್ನ ಅಕ್ಕಪಕ್ಕದಲ್ಲೇ ಕುಳಿತಿರುತ್ತಿದ್ದ ಇತರೇ ಕುಡುಮಿಗಳು ಮಾಸ್ತರರ ಮಾತುಗಳನ್ನು ಕಿವಿಗೊಟ್ಟು ಕೇಳುತ್ತಿದ್ದರು. ತಂತಾವೇ ಲೆಕ್ಕ ಬಿಡಿಸುವ ಹಠ ಅವರಿಗಿರಲಿಲ್ಲ. ಹೀಗಾಗಿ ಅವರು ಮಾಸ್ತರರಿಂದ ನನಗಿಂತ ಹೆಚ್ಚು ಕಲಿಯುತ್ತಿದ್ದರು ಎಂಬ ಜ್ಞಾನೋದಯ ನನಗಾಗುವ ವೇಳೆಗೆ ನಾನು ಕಾಲೇಜಿಗೆ ಬಂದಿದ್ದೆ. 'ಅದು ಹಳೇ ಕತೆ, ಹಾಗಿರಲಿ' ಅನ್ನೋಣವೆಂದರೆ, ಕಾಲೇಜಿನ ಕಟ್ಟಡಗಳು ಕಾಣಿಸಿ ಕಾಡತೊಡಗಿದವು. ಅವನ್ನು ತಳ್ಳಲು ಯತ್ನಿಸುತ್ತ ಟೀವಿ ಕಡೆ ಗಮನಹರಿಸಿದೆ.

ಟೀವಿಯಲ್ಲಿ ಭಾಷಣ ಮುಂದುವರೆದೇ ಇತ್ತು. 'ಮನುಷ್ಯನ ಸಂತೋಷಕ್ಕೆ ಕಾರಣವೇನು, ಅವನು ಪಡುವ ದುಃಖಕ್ಕೆ ಕಾರಣವೇನು?' ಎಂದು ವಿಶ್ಲೇಷಿಸುತ್ತಿದ್ದ, ನಮ್ಮ ಗಡ್ಡದ ಗುರು.

ಆತನ ಪ್ರಕಾರ ಮನಸ್ಸನ್ನು ಭೂತ ಮತ್ತು ಭವಿಷ್ಯಗಳ ನಡುವೆ ತಾಕಲಾಡಿಸುತ್ತ ವರ್ತಮಾನವನ್ನು ಕಳೆದುಕೊಳ್ಳುವ ದೌರ್ಬಲ್ಯವೇ ನಮಗೆ ಸಂತೋಷವಿಲ್ಲದೇ ಇರುವುದಕ್ಕೆ ಕಾರಣ. ಈ ಮಾತುಗಳನ್ನು ಕೇಳಿಸಿಕೊಳ್ಳುತ್ತಿರುವಾಗಲೇ ಅಲ್ಲವೇ ನನ್ನ ಮನಸ್ಸು ಪ್ರೌಢಶಾಲೆಯ ತರಗತಿಗೆ ಓಡಿದ್ದು? ಅಲ್ಲಿಂದ ಕಾಲೇಜಿನ ಕಟ್ಟಡಗಳನ್ನು ನೆನೆಸಿಕೊಂಡದ್ದು? ಅದು ನನ್ನ ಭೂತಕಾಲ. ಭೂತದ ಬಗ್ಗೆ ಚಿಂತಿಸುತ್ತಿರುವಾಗಲೇ ಇದ್ದಕ್ಕಿದ್ದ ಹಾಗೆ ನನ್ನ ಕಣ್ಣು ಕಿಟಕಿಯತ್ತ ಹೋಗಬೇಕೇ? ಕಿಟಕಿಯಾಚೆ ಕಂಡಿದ್ದು ಅಪ್ಪಟ ವರ್ತಮಾನ! ಕಿಟಕಿಯ ಮೇಲೆ ಇಳಿಬಿಟ್ಟಿದ್ದ ಪರದೆಗಳ ನಡುವೆ ನನ್ನ ಕಣ್ಣಿಗೆ ಕಂಡದ್ದು ಹೊಟೆಲಿನ ಈಜುಕೊಳ. ನೀರಿನಲ್ಲಿ ಹೆಚ್ಚು ಜನರಿರಲಿಲ್ಲ. ಕೊಳದ ಸುತ್ತ ಹತ್ತಾರು ಆರಾಮಕುರ್ಚಿಗಳಲ್ಲಿ ಹೆಚ್ಚಿನವು ಖಾಲಿ. ಸೂರ್ಯನ ಬೆಳಕನ್ನು ಮೈಮೇಲೆ ಬಿಟ್ಟುಕೊಳ್ಳಲು ಆರಾಮಕುರ್ಚಿಯಲ್ಲಿ ಒರಗಿರುವ ಬಿಕಿನಿ ತೊಟ್ಟ ಸುಂದರಿಯೊಬ್ಬಳ ಮೈ ನನಗೆ ಚೆನ್ನಾಗೇ ಕಾಣುತ್ತಿದೆ. ಒಮ್ಮೆ ಬಿಳಿಯಾಗಿದ್ದ ಅವಳ ಮೈ ತಾಮ್ರವರ್ಣಕ್ಕೆ ತಿರುಗಿ ಮತ್ತೊಂದೇ ರೀತಿಯ ಸೌಷ್ಠವವನ್ನು ಬಿಂಬಿಸುತ್ತಿದೆ. ಅವಳ ಪ್ರೇಮಿ (ಪ್ರೇಮಿಯೇ ಇರಬೇಕು, ಇಲ್ಲದಿದ್ದರೆ ಹೀಗೆ ಅವಳ ಮೈಮೇಲೆಲ್ಲ ಕೈ ಆಡಿಸುತ್ತ ಮಾಲಿಷ್ ಮಾಡುತ್ತಿರಲಿಲ್ಲ) ಪಕ್ಕದ ಕುರ್ಚಿಯಲ್ಲಿ ಬಿದ್ದುಕೊಂಡಿದ್ದಾನೆ.

ಟೀವಿ ಗುರು ಹೇಳಿದ: 'ನಿಮ್ಮ ಮನಸ್ಸಿನಲ್ಲಿ ಯಾರನ್ನಾದರೂ ಚಿತ್ರಿಸಿಕೊಳ್ಳಿ.' ನಾನು ಕೇಳಿದೆ: 'ಯಾರನ್ನಾದರೂ?' ಅವನಿಗೆ ನನ್ನ ಮಾತು ಕೇಳಿಸಬೇಕಲ್ಲ. ಅವನು ಮುಂದೆ ಏನು ಹೇಳಿದನೋ. ನಾನು ಮತ್ತೆ ಕಿಟಕಿಯ ಕಡೆ ಕಣ್ಣೋಡಿಸಿದೆ, ಅರೆಬೆತ್ತಲೆ ಮೈಯಿನ ಸುಂದರಿಯೂ ಅವಳ ಪ್ರೇಮಿಯೂ ಏನು ಮಾಡುತ್ತಿರಬಹುದೆಂಬ ಕುತೂಹಲದಿಂದ. ಅವನು ಪ್ರೇಮಿಯೇ ಎಂದು ಈ ಬಾರಿ ಖಚಿತವಾಯಿತು. ಏಕೆಂದರೆ, ಅವನು ಅವಳನ್ನು ಅತ್ಯಂತ ಉತ್ಸಾಹದಿಂದ ಚುಂಬಿಸುತ್ತಾ ಅವಳ ಸೊಂಟವನ್ನು ತಬ್ಬುತ್ತಾ ಮುದ್ದಾಡುತ್ತಾ ಅವಳಿಗೆ ನಾನಾರೀತಿಯ ಖುಷಿ ಕೊಡುತ್ತಿದ್ದ! ಅವಳಾದರೋ, ಯಾವ ಬಿಗುಮಾನವೂ ಇಲ್ಲದೇ ಆತ ಕೊಟ್ಟ ಸುಖವನ್ನು ಸವಿಯುತ್ತಿದ್ದಳು. 'ಎಲಾ ಇವಳಾ' ಎನ್ನಿಸಿತು! ಅವಳ ಮೈಮಾಟ ಇದ್ದಕ್ಕಿದ್ದಂತೆ ನನಗೆ ಮೆರಿಲಿನ್ ಮನ್ರೋಳನ್ನು ನೆನಪಿಗೆ ತಂದಿತು. ಸರಿ, ಯಾರನ್ನಾದರೋ ನೆನಪಿಸಿಕೊಳ್ಳಿ ಎಂದಿದ್ದನಲ್ಲ ನಮ್ಮ ಟೀವಿ ಗುರು, ಮೆರಿಲಿನ್ ಮನ್ರೋಳನ್ನೇ ನೆನಪಿಸಿಕೊಂಡೆ. ಅವಳಿಗೂ ಅಧ್ಯಕ್ಷ ಕೆನಡಿಗೂ ಸಂಬಂಧವಿದ್ದ ಕತೆಗಳು ವೃತ್ತ ಪತ್ರಿಕೆಗಳಲ್ಲಿ ಬರುತ್ತಿದ್ದಾಗ, ನಾನಿನ್ನೂ ಕಾಲೇಜ್ ವಿದ್ಯಾರ್ಥಿ. ಅಯ್ಯೋ, ಕಾಲೇಜ್ ಎಂದ ಕೂಡಲೇ ನಮ್ಮ ಎಂಜಿನಿಯರಿಂಗ್ ಕಾಲೇಜಿನ ಕೆಟ್ಟ ಮೇಷ್ಟ್ರುಗಳ ನೆನಪು ಶುರುವಾಯಿತು.

ವಿದ್ಯಾರ್ಥಿಗಳ ಕಡೆಗೆ ತಿರುಗದೇ ತಮ್ಮಷ್ಟಕ್ಕೆ ತಾವು ಸಣ್ಣ ದನಿಯಲ್ಲಿ ಮಾತಾಡಿಕೊಳ್ಳುತ್ತಾ ಕಪ್ಪು ಹಲಗೆಯ ಮೇಲೆ ಮನಸ್ಸಿಗೆ ಬಂದದ್ದನು ಗೀಚುತ್ತಿದ್ದ ಮೇಷ್ಟ್ರು ಒಬ್ಬರು. ಇಡೀ ಪೀರಿಯಡ್ಡನ್ನು ಒಂದು ಚಿತ್ರ ಬರೆಯುವುದಕ್ಕೇ ಉಪಯೋಗಿಸಿ ಅದರ ಬಗ್ಗೆ ಮಾತಾಡುವ ಮೊದಲೇ ಘಂಟೆಯಾಗಿ, ಚಿತ್ರವನ್ನು ಅಳಿಸಿ, ಮತ್ತೆ ಮುಂದಿನ ತರಗತಿಯಲ್ಲೂ ಇಡೀ ಘಂಟೆ ಅದೇ ಚಿತ್ರವನ್ನೇ ಬರೆಯುತ್ತಿದ್ದ ಮೇಷ್ಟ್ರು ಇನ್ನೊಬ್ಬರು (ಅಯ್ಯೋ, ಅವರು ಸುಮ್ಮನೆ

ಕಲ್ಲಚ್ಚು ಮಾಡಿಸಿ ಎಲ್ಲರಿಗೂ ಚಿತ್ರ ಹಂಚಬಹುದಾಗಿತ್ತಲ್ಲ, ಆಗಿನ್ನೂ ಕ್ಸೆರಾಕ್ಸ್ ಇರಲಿಲ್ಲ). ಯಾವುದೋ ಒಂದು ಫಾರ್ಮುಲಾವನ್ನು ಬರೆದು ಕಿಟಕಿಯ ಮೂಲಕ ಹೊರಗಿನ ರಸ್ತೆಯಲ್ಲಿ ಗಂಜಳ ಹುಯ್ಯುತ್ತಾ ನಿಂತಿದ್ದ ಹೋರಿಯನ್ನು ನೋಡುತ್ತಾ ನಿಂತುಬಿಡುತ್ತಿದ್ದ ಮತ್ತೊಬ್ಬ ಮೇಷ್ಟ್ರು. ಸೂರನ್ನು ನೋಡುತ್ತಾ ಪಾಠಮಾಡುತ್ತಿದ್ದ ಉರಿಮುಖದ ಕರಿ ಮೇಷ್ಟ್ರು. ಮಾತಾಡುವಾಗ ದೂರದವರೆಗೆ ಎಂಜಲ ಹನಿಗಳನ್ನು ಹಾರಿಸುತ್ತಾ ಕೆಟ್ಟ ಇಂಗ್ಲಿಷ್ ಉಪಯೋಗಿಸುತ್ತಿದ್ದ ಕುಳ್ಳ ಮೇಷ್ಟ್ರು (ಅವರ ತರಗತಿಯಲ್ಲಿ ಮುಂದಿನ ಬೆಂಚು ಯಾವಾಗಲೂ ಖಾಲಿ ಇರುತ್ತಿತ್ತು!). ಇಡೀ ಲೆಕ್ಕವನ್ನೆಲ್ಲ ಉರುಹೊಡೆದು ಯಾವ ವಿವರವನ್ನೂ ಕೊಡದೆ ಉತ್ತರವನ್ನು ಡೆಸಿಮಲ್ ಪಾಯಿಂಟಿನ ನಾಲ್ಕು ಡಿಜಿಟುಗಳವರೆಗೆ ಬರೆದು ತೃಪ್ತಿಯ ನಗೆ ಬೀರಿ ಮೆಚ್ಚುಗೆಯನ್ನು ನಿರೀಕ್ಷಿಸುತ್ತಾ ವಿದ್ಯಾರ್ಥಿಗಳೆಡೆಗೆ ನೋಡುತ್ತಿದ್ದ ಗುಂಗುರು ಕೂದಲಿನ ಮೇಷ್ಟ್ರು. ಏನಾದರೋ ಪ್ರಶ್ನೆ ಕೇಳಿದರೆ, 'ಸುಮ್ನೆ ಬರ್ಕೊಳಯ್ಯಾ, ನಿನಗೀಗ್ ಅರ್ಥ ಆಗ್‌ಕಿಲ್ಲ, ಪರೀಕ್ಷೆ ಟೈಮ್‌ನಾಗೆ ಇನ್ನೊಂದ್ ದಫಾ ನೋಡ್ಕೋ' ಎನ್ನುತ್ತಿದ್ದ ಮೇಷ್ಟ್ರು... ಹೀಗೇ ಸಾಲುಸಾಲಾಗಿ ಮನಃಪಟಲದಮೇಲೆ ಒಬ್ಬೊಬ್ಬರಾಗಿ ಬಂದರು. ಅಯ್ಯೋ! ಎಷ್ಟೆಲ್ಲ ಘಂಟೆಗಳನ್ನು ಕೆಲಸಕ್ಕೆ ಬಾರದ ವಿಷಯಗಳನ್ನು ಕಲಿಯಲು ವ್ಯರ್ಥ ಮಾಡಿಸಿದ ಆ ಕಾಲೇಜಿನ ಮಾಸಲು ಸುಣ್ಣದ ಕೊಠಡಿಗಳು ಕಣ್ಮುಂದೆ ಬಂದವು. ಎಷ್ಟು ಯತ್ನಿಸಿದರೂ ಕಾಲೇಜಿನ ದೃಶ್ಯಗಳನ್ನು ಅಳಿಸಲಾಗಲೇ ಇಲ್ಲ.

ಮಧ್ಯವಿರಾಮದ ಘಂಟೆಯಾದ ಕೂಡಲೇ ಮೂತ್ರಿಗಳಿಗಾಗಿ ಸಾಲಾಗಿ ಕಾದುನಿಲ್ಲುತ್ತಿದ್ದಾಗ ಗೋಡೆಗಳ ಮೇಲೆ ಹುಡುಗರ ಕೈಚಳಕದಿಂದ ಹುಟ್ಟಿದ ಪೋಲೀಚಿತ್ರಗಳು ನೆನಪಾದವು. ಆ ಚಿತ್ರಗಳ ಕೆಳಗೆ ಅಲ್ಲಲ್ಲಿ ನುರಿತ ಬರಹಗಾರರು ಬರೆದಿರುತ್ತಿದ್ದ ರಸಮಯ ವಿವರಗಳ ಸಾಲುಗಳು, ಆ ಕಾಮೆಂಟರಿಗಳಿಗೆ ಇತರರ ಪ್ರತ್ಯುತ್ತರಗಳು ಕಣ್ಮುಂದೆ ಬಂದು ಮಾಯವಾದವು. ಮೂತ್ರಿಯ ವಾಸನೆಯಿಂದ ತಪ್ಪಿಸಿಕೊಂಡು ಹೊರಬಂದರೆ ಕ್ಯಾಂಟೀನಿನಲ್ಲಿ ವಡೆ ಸಾಂಬಾರಿನ ಘಮಘಮ! ಒಂದಿಷ್ಟು ತಿಂದು, ಹತ್ತು ಪೈಸದ ಸಣ್ಣ ಬಟ್ಟಲ ಕಾಫಿ ಹೀರಿ ಮತ್ತೆ ಮೇಷ್ಟ್ರುಗಳ ಭೈರಿಗೆ ಕೊರೆತಕ್ಕೆ ಒಂದಿಷ್ಟು ಶಕ್ತಿ ಪಡೆದು ಹಿಂದಿರುಗುತ್ತಿದ್ದ ಆ ಯಾತನಾಮಯ ದಿನಗಳು ಸಾಲು ಸಾಲಾಗಿ ಬಂದು ಹೋದವು. ಇವುಗಳ ಮಧ್ಯೆ ಮೆರಿಲಿನ್ ಮನ್ರೋ ಮಾಯವಾಗಿದ್ದಳು. ಮತ್ತೆ ಕಿಟಕಿಯ ಕಡೆ ತಿರುಗಿದರೆ ಅರೆನಗ್ನ ಸುಂದರಿಯೂ ಅವಳ ಪ್ರೇಮಿಯೂ ಮಾಯವಾಗಿದ್ದರು. (ಆಹಾ, ಅವರು ತಮ್ಮ ಕೊಠಡಿಗೆ ಹೋಗಿದ್ದಾರೆ, ಅಲ್ಲಿ ಏನಾಗುತ್ತಿರಬಹುದು? ಮನಸ್ಸು ಮುಲುಮುಲುಗುಟ್ಟಿತು!)

ಟೀವಿ ಗುರು ಕೇಳುತ್ತಿದ್ದ: 'ನೆನೆಸಿಕೊಂಡಿರಾ?' ಯಾರನ್ನಾದರೂ ನೆನೆಸಿಕೊಳ್ಳಿ ಎಂದಿದ್ದನಲ್ಲವೇ? ವೈಜಯಂತಿಮಾಲಾ ಏಕಾಗಬಾರದು? ಯಾಕೋ ಏನೋ, ಮಾಲಾ ಸಿನ್ಹ, ಮೀನಾ ಕುಮಾರಿ, ಮಧುಬಾಲಾ, ವಹೀದಾ ರೆಹಮಾನ್, ಹೇಮಮಾಲಿನಿ ಇವರು ಯಾರೂ ನೆನಪಾಗಲಿಲ್ಲ. ಇತ್ತ ಜೀನಾ ಲೋಲಾಬ್ರಿಜಿಡಾ ಅಥವಾ ಡೋರಿಸ್ ಡೇ ಅವರುಗಳೂ ನೆನಪಾಗಲಿಲ್ಲ. ಯಾಕೆ ಬರೀ ಹೆಣ್ಣುಗಳೇ, ಅದೂ ಸಿನಿಮಾ ತಾರೆಯರೇ

ನನ್ನ ಮನಸ್ಸಿನಲ್ಲಿ ತಳ ಊರಿದ್ದಾರೆ? ಗಾಂಧಿ, ನೆಹ್ರೂ, ವಿನೋಬಾ, ರಾಜಾಜಿ, ರಾಮಕೃಷ್ಣ, ವಿವೇಕಾನಂದ, ಕುವೆಂಪು, ಡಿವಿಜಿ, ವಿಶ್ವೇಶ್ವರಯ್ಯ ಇವರೆಲ್ಲ ಎಲ್ಲಿ ಮಾಯವಾದರು?

ಗುರು ಮುಂದುವರೆಸಿದ. 'ಸುಮ್ಮನೆ ಕಣ್ಮುಚ್ಚಿ ಕುಳಿತರೆ ಸಾಲದು, ಮನಸ್ಸನ್ನು ಸ್ತಬ್ಧಗೊಳಿಸಿ' ಎಂದ. ನನಗೇ ಕೇಳಿಸದ ನನ್ನ ಮನಸ್ಸಿನ ಗಲಾಟೆ ಅವನಿಗೆ ಕೇಳಿಸಿತ್ತೇ ಹಾಗಾದರೆ? 'ಮನಸ್ಸನ್ನು ಸ್ತಬ್ಧಗೊಳಿಸುವುದು ಹೇಗೆ?' ಎಂದು ಕೇಳಿದೆ. ಅವನಿಗದು ಕೇಳಲಿಲ್ಲ. 'ಪಕ್ಕದಲ್ಲೇ ಜುಳು ಜುಳು ಹರಿಯುತ್ತಿರುವ ನದಿಯ ಮಂಜುಳ ನಿನಾದವನ್ನೋ ದೂರದಲ್ಲಿ ಭೋರ್ಗರೆಯುತ್ತಾ ಧುಮುಕುತ್ತಿರುವ ಜಲಪಾತದ ಅಸ್ಪಷ್ಟ ಸದ್ದನ್ನೋ ಹಿನ್ನೆಲೆಯಲ್ಲಿಟ್ಟುಕೊಂಡು ಸಮಾಧಿಗಿಳಿಯಿರಿ' ಎಂದ. 'ಸಮಾಧಿ' ಎಂದ ಕೂಡಲೆ ನನಗೆ ನೆನಪಾಗುವುದು ಒಂದು ಬೃಂದಾವನ, ಅದರಲ್ಲಿ ಹುದುಗಿರುವ ರಾಘವೇಂದ್ರ ಸ್ವಾಮಿಗಳು, ಅಥವಾ ಉಡುಪಿ ಮುಂತಾದ ಮಠಗಳ ಒಳಾಂಗಣಗಳಲ್ಲಿ ಕಂಡುಬರುವ, ಗತಿಸಿಹೋದ ಸ್ವಾಮಿಗಳ ಪಾರ್ಥಿವ ಶರೀರಗಳ ಮೇಲೆ ಕಟ್ಟಿರುವ ನೆನಪಿನ-ಕಟ್ಟೆಗಳು, ಮತ್ತು ಕ್ರಾಸ್ ನೆಟ್ಟಿರುವ ಕ್ರಿಶ್ಚಿಯನ್ ಗೋರಿಗಳು. ಹಾಗಾಗಿ ಸಮಾಧಿಸ್ಥ ಎಂದರೆ ನನ್ನ ಊಹೆಗೆ ನಿಲುಕುವುದು ತೀರಿಕೊಂಡವರ ನೆನಪೇ ಹೊರತು ಯೋಗಾಭ್ಯಾಸ ಮಾಡುತ್ತ ಜಪದಲ್ಲಿ ಮಗ್ನರಾಗಿರುವ ಸಮಾಧಿಸ್ಥರದ್ದಲ್ಲ. ಜಲಪಾತ ಎಂದಿದ್ದನಲ್ಲ, ಶಿವನ ಸಮುದ್ರ ನೆನಪಾಯಿತು. ಜೋಗದ ಜಲಪಾತ, ಅದರಲ್ಲೂ 'ಮುಂಗಾರು ಮಳೆ' ಚಿತ್ರದಲ್ಲಿ ತೋರಿಸಿರುವ ದೃಶ್ಯಗಳು, ನಯಾಗರಾ, ಸ್ವಿಟ್ಸರ್ಲೆಂಡಿನಲ್ಲಿ ಎಂದೋ ನೋಡಿದ (ಹೆಸರು ನೆನಪಿಲ್ಲದ) ಒಂದು ಸುಂದರ ಜಲಪಾತ... ಹೀಗೆ, ನಿಜಜೀವನದಲ್ಲಿ ನೋಡಿದ, ಸಿನಿಮಾಗಳಲ್ಲಿ ನೋಡಿದ ಎಲ್ಲಾ ಜಲಪಾತಗಳೂ ಒಟ್ಟೊಟ್ಟಾಗಿ ನುಗ್ಗಿ ಬಂದು ಮನಸ್ಸು ಸ್ತಬ್ಧವಾಗುವುದರ ಬದಲು ಅಲ್ಲೋಲ ಕಲ್ಲೋಲವಾಯಿತು.

ಇಡೀ ವೃತ್ತಾಂತದ ಬಗ್ಗೆ ಯೋಚಿಸುತ್ತಾ ಪುಸ್ತಕದ ಮೇಲೆ ಕಣ್ಣಾಡಿಸುತ್ತಿದ್ದೆ. ಎಲೆಲೆ, 'ವೃತ್ತಾಂತ' ಎಂಬ ಶಬ್ದವೇ! ಈ ಶಬ್ದಕ್ಕೇ ಅರ್ಥವಿಲ್ಲವೆನ್ನಿಸಿತು. ವೃತ್ತವೆಂದರೆ ಆದಿ, ಮಧ್ಯ ಅಥವಾ ಅಂತ್ಯವಿಲ್ಲದ ಚಕ್ರ. ವೃತ್ತದ ಅಂತ ಯಾವುದು? ಯಾವುದನ್ನು ಅಂತ್ಯ ಎನ್ನಬಹುದೋ ಅದನ್ನೇ ಆದಿ ಅಥವಾ ಮಧ್ಯ ಎನ್ನಬಹುದಲ್ಲವೇ? ಅಷ್ಟರಲ್ಲೇ ಟಿವಿ ಗುರು ಹೇಳುತ್ತಿದ್ದ, 'ನಿಮ್ಮ ಸುತ್ತ ಒಂದು ವೃತ್ತ ಎಳೆದುಕೊಳ್ಳಿ' ಅರೆ! ನಾನು ವೃತ್ತದ ಬಗ್ಗೆ ಯೋಚಿಸುತ್ತಿದ್ದಾಗಲೇ ಅವನೂ ವೃತ್ತದ ವಿಷಯವನ್ನೇ ಎತ್ತಿದ್ದ, ಇದೇನು ಆಕಸ್ಮಿಕವೋ, ಕಾಕತಾಳೀಯವೋ ಅಥವಾ ಅವನೇ ಮೊದಲು ವೃತ್ತದ ಬಗ್ಗೆ ಹೇಳಿದ್ದನೋ ಅಥವಾ ನಾನು ಓದುತ್ತಿದ್ದ ಪುಸ್ತಕದ ಶೀರ್ಷಿಕೆಯಿಂದ ನನ್ನ ಮನಸ್ಸು ಆ ಶಬ್ದವನ್ನು ಕುರಿತು ಚಿಂತಿಸುತ್ತಿತ್ತೋ? ಸರಿ, ನನ್ನ ಸುತ್ತ ಒಂದು ವೃತ್ತ ಎಳೆದುಕೊಂಡು ದಿಗ್ಬಂಧನ ಹಾಕಿಹೊಂಡೆ. ನನಗೇ ತಿಳಿಯದಂತೆ ನನ್ನ ಬಲಗೈ ನನ್ನ ತಲೆಯ ಸುತ್ತ ಬಂದು ಒಂದು ಚಿಟಿಕೆ ಹಾಕಿತು, 'ಭೂರ್ಭುವಸ್ಸುವರೋಮಿತಿ ದಿಗ್ಬಂಧಃ' ಎಂಬ ಮಂತ್ರ ಬಾಯಲ್ಲಿ ಬಂದಿತು. 'ಅದರ

ಮಧ್ಯದ ಕೇಂದ್ರ ನೀವಾಗಿ' ಎಂಬ ಗುರುವಿನ ಮಾತಿನಿಂದ ನನಗೆ ಮತ್ತೆ ಶಾಕ್ ಹೊಡೆಯಿತು, ಅವನೂ 'ಕೇಂದ್ರ'ವನ್ನೇ ಕುರಿತು ಮಾತಾಡುತ್ತಿದ್ದಾನೆ. ನನ್ನ ಕೈಯಲ್ಲಿರುವ ಪುಸ್ತಕದ ಶೀರ್ಷಿಕೆ 'ಕೇಂದ್ರ-ವೃತ್ತಾಂತ' ಅವನಿಗೆ ಹೇಗೆ ಕಾಣಿಸಿತು?

ನನ್ನ ಪ್ರಯತ್ನ ಕೊಂಚವೂ ಇಲ್ಲದೆಯೇ ನನ್ನ ದೇಹ ಕುಗ್ಗುತ್ತಾ ಕುಗ್ಗುತ್ತಾ ಒಂದು ಬಿಂದುವಾಗುವಂತೆ ಸಂಕುಚಿಸಿಕೊಂಡೆ. 'ಆ ಕೇಂದ್ರದಲ್ಲಿ ನಿಮ್ಮ ಹೃದಯವಿದೆ ಎಂದುಕೊಳ್ಳಿ.' ಸರಿ, ಎಂದುಕೊಂಡೆ- ಬಿಂದುವನ್ನು ದೊಡ್ಡದಾಗಿ ಹಿಗ್ಗಿಸಿ ಒಂದು ಮುಷ್ಟಿಗಾತ್ರದ ಹೃದಯವಾಗುವಂತೆ ಕಲ್ಪಿಸಿಕೊಂಡೆ (ಜೀವಶಾಸ್ತ್ರದ ಯಾವುದೋ ಪುಸ್ತಕದಲ್ಲಿ ನೋಡಿದ್ದ ಒಂದು ವರ್ಣಚಿತ್ರದ ಸಹಾಯವನ್ನು ಪಡೆದುಕೊಳ್ಳಬೇಕಾಯಿತು). 'ಆ ಹೃದಯ ಒಂದು ಕಮಲದ ಹೂವಿನ ಹಾಗಿದೆ ಎಂದು ಭಾವಿಸಿಕೊಳ್ಳಿ.' ಹೃದಯದ ವರ್ಣಚಿತ್ರ ಮಾಯವಾಗುವಂತೆ ಮಾಡಿ ಆ ಜಾಗದಲ್ಲಿ ಒಂದು ಕಮಲದ ಹೂವನ್ನು ಬಿಡಿಸಿದೆ (ಇದ್ದಕ್ಕಿದ್ದ ಹಾಗೆ ಗಜಲಕ್ಷ್ಮಿಯ ನೆನಪಾಯಿತು, ಹೇಗೋ ಗಜವನ್ನೂ ಲಕ್ಷ್ಮಿಯನ್ನೂ ತಳ್ಳಿ, ಕಮಲವನ್ನು ಮಾತ್ರ ಇಟ್ಟುಕೊಂಡೆ!). 'ಆ ಕಮಲದ ಹೂವು ಮೊಗ್ಗಿನ ರೂಪದಲ್ಲಿದೆ ಎಂದುಕೊಳ್ಳಿ.' ತಕ್ಷಣ ಒಂದೊಂದೇ ದಳ ಒಳಕ್ಕೆ ಮಡಿಚಿಕೊಂಡು ಅರಳಿದ ಕಮಲಪುಷ್ಪ ಮೊಗ್ಗಾಗುವಂತೆ 'ತಥಾಸ್ತು' ಎಂದೆ (ಈ ಸಂದರ್ಭದಲ್ಲಿ, ನನ್ನ ಮನಸ್ಸಿನಲ್ಲಿದ್ದ ಪ್ರೊಜೆಕ್ಟರನ್ನು ಹಿಂದಕ್ಕೆ ತಿರುಗಿಸಬೇಕಾಯಿತು. ಆಗ ತುಂಬಾ ಮಜಾ ಬಂದು ಮತ್ತೊಮ್ಮೆ ಪ್ರೊಜೆಕ್ಟರನ್ನು ಮುಂದಕ್ಕೂ ಹಿಂದಕ್ಕೂ ಸ್ಲೋ ಮೋಷನ್ನಿನಲ್ಲಿ ನಡೆಸಿ ಕಮಲದ ಮೊಗ್ಗನ್ನು ಕಣ್ಣೆದುರಿಗೇ ಬಿರಿಯುವಂತೆ ಮಾಡಿ ಮತ್ತೆ ಮೊಗ್ಗಾಗಿಸಿ ಖುಷಿಪಟ್ಟೆ). 'ಆ ಮೊಗ್ಗು ಕೆಳಮುಖವಾಗಿದೆ ಎಂದುಕೊಳ್ಳಿ' ಎಂದು ಗುರು ಹೇಳಿದಾಗ, 'ಎಲಾ ಇವನಾ? 'ಪದ್ಮಕೋಶಪ್ರತೀಕಾಶಗ್ಂ ಹೃದಯಂಚಾಪ್ಯಧೋಮುಖಮ್' ಎಂಬ ವೇದ ಮಂತ್ರವನ್ನೂ ಬಲ್ಲನೇ ಈ ಬಿಳೀ ಗುರು!' ಎಂದು ಯೋಚಿಸುತ್ತಾ ರೋಮಾಂಚಿತನಾದೆ! ಸರಿ, ಮೊಗ್ಗು ಕೆಳಮುಖವಾಗುವಂತೆ ಮಾಡಿದೆ (ಯಾಕೋ ಮೊಗ್ಗು ಕೆಳಮುಖವಾದದ್ದನ್ನು ಕಂಡು ಮನಸ್ಸು ಸಪ್ಪೆಯಾದಂತೆ ಅನ್ನಿಸಿ ಸ್ವಲ್ಪ ಪಿಚ್ಚೆನಿಸಿತು).

ದೂರದ ಜಲಪಾತದ ಹಿನ್ನೆಲೆ ಸದ್ದು, ಪಕ್ಕದಲ್ಲೇ ಹರಿಯುವ ನದಿಯ ಜುಳು-ಜುಳು. ಹಿಂಬದಿಯಲ್ಲಿ ರವಿಶಂಕರ್ ನುಡಿಸುತ್ತಿರುವ ಸಿತಾರ್, ಜೊತೆಗೆ ಅಲ್ಲಾರಖಾ ತಬ್ಲಾ, ಮಲ್ಲಿನ ಬಿಳಿ ಪಂಚೆಯುಟ್ಟ ಮಹರ್ಷಿ ಮಹೇಶ ಯೋಗಿ, ಅಪ್ಪಟ ಬಿಳೀ ಹತ್ತಿಯಂತೆ ಮೋಡಗಳು, ಬಿಳೀ ಗಡ್ಡ, ಬಿಳೀ ಮೀಸೆ, ಬಿಳೀ ಹುಬ್ಬು, ಬೀಟಲ್ ಸಂಗೀತ, ಎಲ್ಲೆಲ್ಲೂ ಓಂಕಾರ ಧ್ವನಿ! ಮೂರು ಸುತ್ತಿನ ಚಚ್ಚೌಕ ಕೋಟೆ, ನಾಲ್ಕು ದಿಕ್ಕಿನಲ್ಲಿ ನಾಲ್ಕು ದ್ವಾರಗಳು. ಒಳಗೆ ಒಂದರ ಸುತ್ತ ಒಂದರಂತೆ ಮೂರು ವೃತ್ತಗಳು, ಅದರೊಳಗೆ ಕಮಲದ ಹೊರಸುತ್ತಿನ ಹದಿನಾರು ದಳಗಳು, ಅದರೊಳಗೆ ಕಮಲದ ಒಳಸುತ್ತಿನ ಎಂಟು ದಳಗಳು. ಅದರೊಳಗೆ ಕೆಳಮುಖವಾದ ಐದು ತ್ರಿಕೋಣಗಳು ಮತ್ತು ಮೇಲ್ಮುಖವಾದ ನಾಲ್ಕು ತ್ರಿಕೋಣಗಳು,

ಇವುಗಳು ಒಂದನ್ನೊಂದು ಕತ್ತರಿಸುತ್ತ ಉಂಟಾದ ಒಟ್ಟು ನಲವತ್ಮೂರು ತ್ರಿಕೋಣಗಳು. ಮಧ್ಯದ ತ್ರಿಕೋಣದಲ್ಲೊಂದು ಹೊಳೆವ ಬಿಂದು. ಟೀವೀ ಪರದೆಯ ಮೇಲೆ ಅವನೇ ಶ್ರೀಚಕ್ರವನ್ನು ವರ್ಣಿಸುತ್ತಿದ್ದನೋ, ನಾನೇ ಎಲ್ಲೋ ನೋಡಿದ ಚಿತ್ರವನ್ನು ಕಲ್ಪಿಸಿಕೊಂಡೆನೋ ಗೊತ್ತಿಲ್ಲ!

ಎಲ್ಲೆಲ್ಲೂ 'ಓಮ್ ಓಮ್' ಎಂಬುದನ್ನು 'ಆಮ್ ಆಮ್' ಎನ್ನುತ್ತಿರುವ ಹಿಪ್ಪಿಗಳು, ಮೂರು ನಾಮಗಳನ್ನು ನೀಟಾಗಿ ಬಳಿದುಕೊಂಡು ಕಾಷಾಯವಸ್ತ್ರ ತೊಟ್ಟ ಹರೇ ಕೃಷ್ಣ ಅನುಯಾಯಿಗಳು 'ಹಾರಿ-ರಾಮ, ಹಾರಿ-ಕ್ರೀಷ್ನ' ಎಂದು ತಾಳ-ಮದ್ದಳೆ ಸಹಿತ ಕುಣಿಯುತ್ತಾ ಇರುವ ಯಾವುದೋ ಪರಿಚಿತವೆನ್ನಿಸುವಂಥ ವಿಮಾನ ನಿಲ್ದಾಣ, ಅಲ್ಲಿನ ಜನಸಂದಣಿಯಲ್ಲಿ ನಾನು ಚಲಿಸುತ್ತಿದ್ದರೂ ನನ್ನ ಹಿಂದೆ ಹಿಂದೆ ವರ್ತುಲಾಕಾರದ ಪ್ರಭಾವಳಿಯ ನಡುವೆ ಗಾಳಿಯಲ್ಲಿ ತೇಲುತ್ತಾ ಹಿಂಬಾಲಿಸುತ್ತಿರುವ ಯಾರದೋ ಚಿತ್ರ ನನ್ನ ಬೆನ್ನಿಗೂ ಸ್ಪಷ್ಟವಾಗಿ ಕಾಣುತ್ತಿದೆ. ಚಿತ್ರದಲ್ಲಿದ್ದವನ ಮುಖ ಮಾತ್ರ ಕೋತಿಯದು! ಆತನ ಎದೆಯಿರುವಲ್ಲಿ ಒಂದು ಕೆಳಮುಖವಾದ ಕಮಲದ ಮೊಗ್ಗು. ಒಂದೇ ಕ್ಷಣದಲ್ಲಿ ಎಲ್ಲಾ ಮಾಯ. ಕೇವಲ ನಯಾಗರಾ ಜಲಪಾತದ ಬುಡದಲ್ಲಿ ಪದ್ಮಾಸನಸ್ಥನಾಗಿ ನಾನು. ಅದ್ಭುತ! ಅದ್ಭುತ!

ಗುರು ಹೇಳಿಕೊಟ್ಟಂತೆ ನಾನು ಮಾಡುತ್ತಾ ಹೋದೆ. ಕಮಲದ ಮೊಗ್ಗು ಸ್ಲೋ ಮೋಷನ್ನಿನಲ್ಲಿ ಸ್ವಲ್ಪ-ಸ್ವಲ್ಪವೇ ಚಲಿಸುತ್ತ ನಿಧಾನವಾಗಿ ಮೇಲ್ಮುಖವಾಯಿತು. 'ಸ್ಲೋಲಿ ರಿಪೀಟ್ ದಿ ಮಾಂತ್ರ' ಎಂಬ ಗುರುವಾಣಿಯ ಬಲದಿಂದ ನಾನು ನನಗೆ ಉಪದೇಶವಾಗಿದ್ದ ಮಂತ್ರವನ್ನು ಉಚ್ಚರಿಸುತ್ತಿದ್ದೆ. ಮೇಲ್ಮುಖವಾದ ಮೊಗ್ಗು ಒಂದೊಂದೇ ಪಕಳೆಯಾಗಿ ಅರಳುತ್ತಾ ವೃತ್ತದ ಕೇಂದ್ರದಲ್ಲಿ ಹೊಂಬಣ್ಣದ ಸೂರ್ಯ ಕಿರಣಗಳ ನಡುವೆ ಹೊಳೆಯುತ್ತಾ ನಕ್ಕಿತು! ಇದ್ದಕ್ಕಿದ್ದಂತೆ, ಘೊರ್-ಘೊರ್ ಎಂಬ ಶಬ್ದ ಕಿವಿಗೆ ಕರ್ಕಶವೆನಿಸುವಷ್ಟು ಜೋರಾಗಿ ಕೇಳುತ್ತಿದೆ. ಹೌದು, ಅದು ನನ್ನದೇ ಗೊರಕೆಯ ಸದ್ದು!

ಎಚ್ಚರ ಮಾಡಿಕೊಂಡೆ, ಪುಸ್ತಕದ ಮೇಲೆ ಕಣ್ಣಾಡಿಸಿದೆ. 'ನೀವು ಕಲ್ಪನೆ ಎಂದುಕೊಂಡದ್ದು ಮತ್ತೊಬ್ಬರ ಸತ್ಯವಿರಬಹುದು, ನಿಮಗೆ ಸತ್ಯವೆನಿಸುವುದು ಮತ್ತೊಬ್ಬರ ಕಲ್ಪನೆಯಿರಬಹುದು. ಇವೆಲ್ಲ ನೀವು ಕುಳಿತು ನೋಡುವ ಸ್ಥಾನವನ್ನವಲಂಬಿಸಿದೆ. ನೀವು ಪರಿಧಿಯಲ್ಲಿ ಕುಳಿತು ಕೇಂದ್ರಬಿಂದುವನ್ನು ನೋಡುತ್ತಾ ಅರ್ಥೈಸುತ್ತಿದ್ದೀರೋ ಅಥವಾ ನಿಮ್ಮನ್ನೇ ಕೇಂದ್ರವನ್ನಾಗಿಸಿಕೊಂಡು ಪರಿಧಿಯತ್ತ ನೋಡುತ್ತಿದ್ದೀರೋ ಅನ್ನುವುದನ್ನು ಅವಲಂಬಿಸುತ್ತದೆ' ಎಂಬ ಅರ್ಥದ ಹಲವಾರು ತಲೆಸುತ್ತು ತರಿಸುವ ಮಾತುಗಳ ಮೋಡಿ ಅಲ್ಲಿತ್ತು. ಸೈಕಾಲಜಿಯನ್ನವಲಂಬಿಸಿ ಬರೆಯುವ ಸಾಹಿತಿಗಳ ಬಗ್ಗೆ ನನಗೆ ತುಂಬಾ ಕೋಪ ಬಂತು. ಈ ಕಾದಂಬರಿಯ ನಾಯಕನ ಮನಸ್ಸಿನಲ್ಲಿನ ತುಮುಲ - ಅದನ್ನು ಆತ್ಮರತಿ ಎನ್ನಬೇಕೋ, ಅಥವಾ ಭ್ರಮೆ ಎನ್ನಬೇಕೋ ತಿಳಿಯಲಿಲ್ಲ. ಆದರೆ, ವಿಚಿತ್ರ. ಪುಸ್ತಕದಲ್ಲಿರುವಂತೆ, ನಮ್ಮ ಜೀವನದ ಘಟನೆಗಳು ಆಕಸ್ಮಿಕವೆನಿಸಿದರೂ ಆಕಸ್ಮಿಕವಲ್ಲವೇನೋ ಎನ್ನಿಸತೊಡಗಿತು. ನಮ್ಮ ಸುತ್ತಲ ಘಟನೆಗಳಿಗೆ

ಏನೋ ಒಂದು ಅವ್ಯಕ್ತ ಸಂಬಂಧವಿದ್ದೇ ಇರುತ್ತದೆಯೇ ಎಂಬ ಪ್ರಶ್ನೆ ಕಾಡತೊಡಗಿತು. ಟೀವಿ ಗುರು ಹೇಳುತ್ತಿದ್ದ ವೃತ್ತ, ವರ್ತುಳ, ಮುಂತಾದ ಮಾತುಗಳಿಗೂ ನಾನು ಓದುತ್ತಿದ್ದ ಪುಸ್ತಕದ ವಿವರಣೆಗೂ ಸಂಬಂಧವಿತ್ತೇ? ಅಥವಾ ಅದು ನನ್ನ ಕಲ್ಪನೆಯೇ? ಅಥವಾ ಭ್ರಮೆಯೇ?

ಅಷ್ಟರಲ್ಲಿ ದೂರವಾಣಿ ಬಡಿದುಕೊಂಡಿತು. ನನ್ನನ್ನು ವಿಮಾನನಿಲ್ದಾಣಕ್ಕೆ ಕರೆದೊಯ್ಯಲು ಶಟಲ್ ಇನ್ನು ಅರ್ಧ ಘಂಟೆಗೆ ಬರುವುದಾಗಿ ತಿಳಿದು ಝಗ್ಗನೆದ್ದು ಜಳಕಮಾಡಲು ಹೊರಟೆ. ಬಿಸಿ ಬಿಸಿ ನೀರನ್ನು ಬಿಟ್ಟುಕೊಂಡು ನನ್ನ ತಲೆಯಲ್ಲಿದ್ದ ಎಲ್ಲಾ ಭೂತಕಾಲದ ನೆನಪುಗಳನ್ನೂ ತೊಳೆಯಲೆತ್ನಿಸಿ ವಿಫಲನಾದೆ. ಸುರಿಯುವ ಶವರಿನ ನೀರೂ ನನ್ನನ್ನು ವರ್ತುಳದಲ್ಲಿ ತಳ್ಳಿದಂತಾಗಿ ನಾನು ಬೆವತು ಹೋದೆ. ಏನೂ ತೋಚದೇ, 'ಗಂಗೇ ಚ ಯಮುನೇ ಚೈವ' ಹೇಳುತ್ತ ಹೊರಬಂದೆ! ನಿಜ, ವರ್ತಮಾನವೊಂದೇ ನಿಜ. ಆದರೆ ಅದನ್ನು ಹಿಡಿದಿಟ್ಟುಕೊಳ್ಳಲಾಗುವುದಿಲ್ಲ! ಭೂತವು ಯಾವಾಗಲೂ ನಮ್ಮ ಬೆನ್ನಟ್ಟುತ್ತಲೇ ಇರುತ್ತದೆ. ಅದರಿಂದ ಬಿಡುಗಡೆ ಬದುಕಿರುವವರೆಗೂ ಸಾಧ್ಯವಿಲ್ಲ. ಭವಿಷ್ಯದ ಅನಿಶ್ಚಿತತೆಯ ಬಗ್ಗೆ ಹುಲುಮಾನವ ಏನನ್ನೂ ಮಾಡಲಾರ. ಮನಸ್ಸೆಂಬ ಮರ್ಕಟ ಕ್ಷಣದಿಂದ ಕ್ಷಣಕ್ಕೆ ನೆಗೆಯುತ್ತಾ ಮೆದುಳನ್ನು ಚುರುಕಾಗಿಡುತ್ತದೆ. ಎಲ್ಲಾ ಅಚಲವಾದಾಗ, ಮನಸ್ಸು ನಿಶ್ಚಲವಾದಾಗ ಮನುಷ್ಯ ಬದುಕಿರುವುದಿಲ್ಲ! ನಿಶ್ಚಲ ಮನಸ್ಸಿನ ಸಾವಿಗಿಂತ, ಕೋತಿಯಂತೆ ಕುಣಿಯುವ ಚಂಚಲ ಮನಸ್ಸೇ ನನಗೆ ಹಿತವೆನ್ನಿಸಿತು, ಬದುಕಿನ ಸಂಕೇತವಾಗಿ ಕಂಡಿತು.

ಟೀವೀ ಗುರು ಇನ್ನೂ ಏನೇನೋ ಹೇಳುತ್ತಲೇ ಇದ್ದ: 'ಬ್ರಹ್ಮಗ್ರಂಥಿ, ವಿಷ್ಣುಗ್ರಂಥಿ, ರುದ್ರಗ್ರಂಥಿಗಳನ್ನು ಭೇದಿಸಿ ಕೇಂದ್ರಬಿಂದುವಿನಲ್ಲಿ ಅಡಕವಾಗಿರುವ ಶ್ರೀವಿದ್ಯಾಸ್ವರೂಪದ ಶಿವಶಕ್ತಿಯನ್ನು... ಬ್ಲಾ-ಬ್ಲಾ-ಬ್ಲಾ...' ಹೊಟೆಲಿನ ಕೊಠಡಿ ಬಿಡುವ ಮುನ್ನ ಟೀವೀ ಸ್ವಿಚ್ಚನ್ನು ಆರಿಸಿ ಆ ಬಿಳೀ ಗಡ್ಡದ ಬಿಳೀ ಗುರುವಿನ ಬಾಯ್ಮುಚ್ಚಿಸಿದ್ದರಿಂದ ಮನಸ್ಸಿಗೆ ಏನೋ ಒಂದು ಅನಿರ್ವಚನೀಯವಾದ ಖುಷಿ ಸಿಕ್ಕಿತು! 'ಮನಸ್ಸನ್ನು ಸ್ತಬ್ಧಗೊಳಿಸಬೇಕಂತೆ, ಹೋಗಯ್ಯೋ' ಎನ್ನುತ್ತಾ ಕೊಠಡಿಯಿಂದ ಹೊರಬಂದೆ. ಶಟಲ್ ಹತ್ತಿ ವಿಮಾನ ನಿಲ್ದಾಣ ಸೇರಿದೆ. ವಿಮಾನ ಭೂಮಿಯನ್ನು ಬಿಟ್ಟು ಜಿಗಿದಾಗ, ಸ್ಯಾಂಡಿಯಾಗೋಗೆ ಬೈ ಬೈ ಹೇಳಿ ಕಣ್ಮುಚ್ಚಿದೆ. ಕೆಲ ನಿಮಿಷಗಳ ಸಕ್ಕರೆ ನಿದ್ರೆಯ ನಂತರ ಮತ್ತೆ ಚಿತ್ತಾಲರ ಪುಸ್ತಕದ ಮಿಕ್ಕ ಭಾಗವನ್ನು ಓದಿ ಮುಗಿಸುವ ಹೊತ್ತಿಗೆ ವಿಮಾನ ಪೂರ್ವತೀರದ ಹತ್ತಿರ ಬಂದಾಗಿತ್ತು!

●

ಸೊನ್ನೆಗೊಂದು ಸುತ್ತು...

–ಪ್ರಕಾಶ್ ನಾಯಕ್

ಸೊನ್ನೆಯನ್ನು ಕಂಡಾಗಲೆಲ್ಲಾ ಮನಸ್ಸಿಗೇನೋ ಹೆಮ್ಮೆ. ತೀರಾ ಆತ್ಮೀಯರನ್ನು ಕಂಡ ಸಂತಸ. ಇದು ಜಗತ್ತಿಗೆ ಭಾರತೀಯರ ಕೊಡುಗೆ. ಕೆಲವೊಮ್ಮೆ ಮತ್ತೇಕೋ ಸಂಶಯ. ತುದಿ ಮೊದಲಿಲ್ಲದ ಪ್ರಶ್ನೆಗಳು. ಅಷ್ಟಕ್ಕೂ ಸೊನ್ನೆಯನ್ನು ಕಂಡು ಹಿಡಿಯುವುದೆಂದರೇನು? ಅಲ್ಲಿಯವರೆಗೆ ಇಂತಹ ಮಹತ್ವದ ಸಂಖ್ಯೆ ಯಾರ ಕಣ್ಣಿಗೂ ಯಾಕೆ ಬೀಳಲಿಲ್ಲ. ಅದಕ್ಕೆ ಯಾಕೆ ಅಷ್ಟು ಮಹತ್ವ? ಕಂಡುಹಿಡಿದವ ಗಣಿತಜ್ಞನೇ? ವಿಜ್ಞಾನಿಯೇ? ಇಂದ್ರಿಯಗಳಿಗಿಂತಲೂ ಅತೀಂದ್ರಿಯಗಳ ನಂಬಿದ ಅನುಭಾವಿ ಸಂತನೆ? ಸಂಖ್ಯೆಯ ಸಾಲಿನಲ್ಲಿ ಸುಮ್ಮನೆ ನಿಂತ ಸೊನ್ನೆಯನ್ನು ನೋಡಿದಾಗಲೆಲ್ಲ ಅಂದುಕೊಳ್ಳುತ್ತೇನೆ, ಇದನ್ನು ಮೊದಲು ಅರ್ಥಮಾಡಿಕೊಂಡವ ಅನುಭಾವಿಯಿರಬೇಕು. ಇಂತಹ ವಿಕ್ಷಿಪ್ತ ವ್ಯಕಿತ್ವವನ್ನು ಕಂಡರೂ ಕಂಡೆನೆಂದು ಒಪ್ಪಿಕೊಳ್ಳುವ ಧೈರ್ಯ ಅನುಭಾವಿಗೆ ಮಾತ್ರ ಬರಲು ಸಾಧ್ಯ.

ಎಲ್ಲವನ್ನೂ ಬಯಲಲ್ಲಿಟ್ಟು ಅಳೆದು ತೂಗುವ ವಾಸ್ತವವಾದಿ ಗಣಿತಕ್ಕೂ, ಯಾವುದನ್ನೂ ನಿಶ್ಚಿತವಾಗಿ ಹೇಳದ ಅನುಭಾವಕ್ಕೂ ಎಲ್ಲಿಯ ಸಂಬಂಧವೆನ್ನುತ್ತೀರಾ? ಕೆಲವೇ ಶತಮಾನಗಳ ಹಿಂದೆ

ಗಣಿತಜ್ಞರಿಗೂ, ವಿಜ್ಞಾನಿಗಳಿಗೂ ಮತ್ತು ದಾರ್ಶನಿಕರಿಗೂ ಅಂತರವಿರಲಿಲ್ಲ. ಮುಕ್ತವಾಗಿ ವಿಚಾರಮಾಡಬಲ್ಲ ಎಲ್ಲರಿಗೂ ಎಲ್ಲ ರಂಗಗಳೂ ಮುಕ್ತವಾಗಿದ್ದುವು. ವಿಜ್ಞಾನಿಗಳಿಗೂ ತಾವು ನಂಬಿದ ಧರ್ಮಗಳ ನಂಬಿಕೆಗಳ ನೆರಳಿತ್ತು. ಸೊನ್ನೆಯ ಗುಣವನ್ನು ಅರಿತು ಅಪ್ಪಿಕೊಳ್ಳುವ, ಅದು ತರುವ ದ್ವಂದ್ವವನ್ನು ಒಪ್ಪಿಕೊಳ್ಳುವ ಮನಸ್ಥಿತಿ ಇದ್ದಲ್ಲಿ ಶೂನ್ಯ ಪ್ರಚಲಿತಕ್ಕೆ ಬಂದಿದ್ದರಲ್ಲಿ ಆಶ್ಚರ್ಯವಿಲ್ಲ. ಜಗತ್ತಿನ ಹಲವೆಡೆಗಳಲ್ಲಿ ವಿವಿಧ ಶತಮಾನಗಳಲ್ಲಿ ಕಾಣಿಸಿಕೊಂಡ ಸೊನ್ನೆಗೆ ಗಣಿತದ ನೀತಿನಿಯಮಗಳನ್ನು ರೂಪಿಸಿದ ಕೀರ್ತಿ ಭಾರತೀಯರಿಗೆ ಲಭ್ಯವಾಯಿತು. ನಮ್ಮ ದೈನಂದಿನ ವ್ಯವಹಾರಗಳಲ್ಲಿ ಅರಿವಿಲ್ಲದಂತೆ ಬಂದುಹೋಗುವ ಸೊನ್ನೆಯ ಹಿಂದೆ ಇಷ್ಟೆಲ್ಲ ಇದೆ ಎಂದರೆ ಯಾರಿಗೆ ಆಶ್ಚರ್ಯವಾಗುವುದಿಲ್ಲ! ಅದೇ ಸೊನ್ನೆಯ ಹೆಗ್ಗಳಿಕೆ ಮತ್ತು ಪರಿಚಯ ಕೂಡ.

ಸೊನ್ನೆಯನ್ನು ಸಂಕೋಚವಿಲ್ಲದೆ ಬಳಸುತ್ತಿರುವ ನಮಗೆ ಅದು ಪಕ್ಕದ ಮನೆಯವನಷ್ಟೇ ಪರಿಚಿತ. ಆರಂಭದ ದಿನಗಳಲ್ಲಿ ಅದರ ಅಸ್ತಿತ್ವದ ಅರಿವು ಇಲ್ಲದಿದ್ದಾಗ ಅದರ ಅಗತ್ಯವಿದೆ ಎಂದು ಅನ್ನಿಸಿರಲಿಲ್ಲ. ತಮ್ಮ ನಂಬಿಕೆಗೆ ಹೊರತಾದ ಸೊನ್ನೆಯ ಇರುವಿಕೆಯನ್ನು ನಿರಾಕರಿಸುವವರಿಗೇನೂ ಕೊರತೆಯಿರಲಿಲ್ಲ. ತತ್ವಶಾಸ್ತ್ರಜ್ಞರಲ್ಲಿ ಸೊನ್ನೆ ಎಬ್ಬಿಸಿದ ಬಿರುಗಾಳಿ ಯಾವ ವಿವಾದಕ್ಕೂ ಕಡಿಮೆಯಾಗಿರಲಿಲ್ಲ. ಸೊನ್ನೆಯ ಪರ-ವಿರುದ್ಧ ಹಲವು ಫರ್ಮಾನುಗಳು ಹೊರಟಿದ್ದುವು. ವೈಚಾರಿಕವಾಗಿ ಸೊನ್ನೆಯನ್ನು ಒಪ್ಪಿಕೊಳ್ಳಲಾರದ ಗ್ರೀಕ್ ಗಣಿತಜ್ಞರಿಗೆ, ಅದನ್ನು ಸವಾಲೆಂದು ಸ್ವೀಕರಿಸಿ ವಿರೋಧಿಸಲು ಸಿದ್ಧವಾಗೇ ಕುಳಿತಿದ್ದ ಅಲ್ಲಿಯ ತತ್ವಶಾಸ್ತ್ರಜ್ಞರಿಗೆ, ಒಂದೋ ಸೊನ್ನೆಯುಂಟು ಇಲ್ಲಾ ನಾವುಂಟು ಎಂದು ಹಟಹಿಡಿದು ಕುಳಿತಿದ್ದ ವ್ಯಾಟಿಕನ್ ಧರ್ಮಾಧಿಕಾರಿಗಳಿಗೆ ಸವಾಲೊಡ್ಡಿ ಸೊನ್ನೆ ಬೆಳೆಯಬೇಕಾಗಿ ಬಂದಿತ್ತು. ತನ್ನ ಅಸ್ತಿತ್ವವನ್ನು ನಂಬದವರನ್ನೂ, ತನ್ನನ್ನೇ ಆರಾಧಿಸುವವರನ್ನೂ ಯಾವ ಮುಜುಗರಕ್ಕೂ ಆಸ್ಪದಕೊಡದಂತೆ ತೂಗಿಸಿಕೊಂಡು ಈ ಸೊನ್ನೆ ಬೆಳೆದು ಬಂದ ಬಗೆ ಆಶ್ಚರ್ಯಕರವಾದದ್ದು.

ಸೊನ್ನೆಯನ್ನು ನಂಬದೊಡನೆ ಪ್ರಳಯವೇನೂ ಘಟಿಸುವದಿಲ್ಲ. ಇಂದಿಗೂ 'ಸೊನ್ನೆ' ಶಬ್ದವಿರದ ಭಾಷೆಗಳಿವೆ, ನೆರೆಮನೆಯ ತಮಿಳನ್ನೂ ಸೇರಿ. ನೇರ ನೋಟಕ್ಕೆ ಆ ವಾದದಲ್ಲೂ ಹುರುಳಿದೆ ಅನ್ನಿಸುತ್ತದೆ. 'ನನ್ನ ಕಿಸೆಯಲ್ಲಿ ಸೊನ್ನೆ ಕುಂಬಳಕಾಯಿಗಳಿವೆ' ಎಂದು ಯಾರಾದರೂ ಹೇಳುವದನ್ನು ಕೇಳಿದ್ದೀರಾ? ಇಲ್ಲದುದನ್ನೆಲ್ಲ ಪಟ್ಟಿಮಾಡುತ್ತ ಹೋದರೆ ಜೀವಮಾನ ಸಾಕಾಗಲಿಕ್ಕಿಲ್ಲ. ಗಣಿತದ ಮೇಷ್ಟ್ರನ್ನೇ ಕೇಳಿ: ಅವರೂ 'ಒಂದು ನೂರಾ ಮೂರು' ಎನ್ನುತ್ತಾರೆಯೇ ಹೊರತು 'ಒಂದುನೂರಾ-ಸೊನ್ನೆಹತ್ತು-ಮೂರು' ಎಂದು ಹೇಳುವುದಿಲ್ಲ. ಭಾಷೆಗೆ ಬೇಡದ ಸೊನ್ನೆ ಗಣಿತಕ್ಕಾದರೂ ಯಾಕೆ ಬೇಕು? ಮಹಡಿಗಳಿಲ್ಲದ ಕಟ್ಟಡಗಳನ್ನು ಒಂದು ಮಹಡಿಯ ಕಟ್ಟಡ ಎಂದು ಒಪ್ಪಿಕೊಳ್ಳುವ ನಮಗೆ ಸೊನ್ನೆ ಅನಿವಾರ್ಯವೇ?

ಸೊನ್ನೆಯನ್ನು ನಾವು ಬರೆಯುವ ರೀತಿಯನ್ನು ನೋಡಿದರೆ ಅದರ ಹಿಂದಿರುವ ಅರ್ಥ ವೈಶಾಲ್ಯತೆಯ ಕಲ್ಪನೆ ಬರಬಹುದು. ಬಹುಭಾಷೆಗಳಲ್ಲಿ ಉಪಯೋಗಿಸುವ ಸೊನ್ನೆಯ

ಸಂಕೇತ '೦' ಸಾಕಷ್ಟು ಪರಿಷ್ಕಾರಗಳನ್ನು ಕಂಡಿದೆ. ತುದಿಮೊದಲಿಲ್ಲದ ಆಕಾರಗಳಲ್ಲಿ ವೃತ್ತ ಒಂದು. ಕಾಣದ ಕೇಂದ್ರದ ಸುತ್ತ, ಸಮದೂರದಲ್ಲಿ ಸಾಲುಗಟ್ಟಿ ನಿಲ್ಲುವ ಬಿಂದುಗಳು ನೈಸರ್ಗಿಕ ಆಕೃತಿಯೊಂದನ್ನು ನಿರ್ಮಿಸುತ್ತವೆ. ಈ ಆಕೃತಿಗೆ ಸಂಕುಚಿತ ಮೂಲೆಗಳಿಲ್ಲ, ಅನಿಯಮಿತ ತಿರುವುಗಳಿಲ್ಲ. ಎಲ್ಲಿಂದ ಹೊರಟರೂ ಮತ್ತದೇ ಬಿಂದುವಿಗೆ ಬಂದು ನಿಲ್ಲುವ, ಎಲ್ಲ ಕಡೆಗಳಿಂದಲೂ ಅನುರೂಪ (symmetric) ಎನ್ನಬಹುದಾದ ಚಿರಪರಿಚಿತ ಸಾರ್ವತ್ರಿಕ ರೂಪ. ಚಿತ್ರ ವಿಚಿತ್ರ ಗೆರೆಗಳಿಂದಲೋ, ಏನೂ ಬರೆಯದೇ ಖಾಲಿ ಬಿಡುವುದರಿಂದಲೋ ಸೊನ್ನೆಯನ್ನು ಬರೆದ ಇತಿಹಾಸ ಇದೆ. ಆದರೂ ಭಾಷೆಗಳ ಗಡಿಯನ್ನು ದಾಟಿ ನಿಲ್ಲುವ '೦' ಹೆಚ್ಚು ಪ್ರಿಯ. ಈ ಆಕಾರದಲ್ಲೂ ಸೊನ್ನೆಗೆ ಹಲವು ವೇಷಗಳು. ಭಾರತದಲ್ಲೇ ಮೊದಲು ಸೊನ್ನೆಯನ್ನು ಉಳಿದೆಲ್ಲ ಅಕ್ಷರಗಳಿಗಿಂತಲೂ ಬಲುಚಿಕ್ಕದಾಗಿ ಬರೆಯುವ ಪದ್ಧತಿ ಇತ್ತು. ಕೇಂದ್ರದಲ್ಲೊಂದು ತಿಲಕ ಧರಿಸಿ ನಿಂತ IBM ಸೊನ್ನೆ, ಉದ್ದಕ್ಕೆ ನಿಂತ ಸೊನ್ನೆ, ಹೊಟ್ಟೆ ಸೀಳಿದ ಸೊನ್ನೆ, ಅಷ್ಟೇ ಏಕೆ ಇತ್ತೀಚಿನ LEDಗಳಲ್ಲಿ ಬಳಸುವ ಶುದ್ಧ ಆಯತಾಕಾರದ ಸೊನ್ನೆ. ಅನುಕೂಲಕ್ಕೆ ತಕ್ಕ ಆಧುನಿಕ ಪೋಷಾಕು ಧರಿಸಿದರೂ ನಿಲುವು ಮಾತ್ರ ಅದೇ.

ಸೊನ್ನೆಯ ಇತಿಹಾಸವೆಂದರೆ ಮನುಷ್ಯನ ಊಹಾ ಶಕ್ತಿಯ ವಿಕಾಸದ ಇತಿಹಾಸವೂ ಹೌದು. ನೇರ ಅರಿವಿಗೆ ಮೀರಿದ ತತ್ವವೊಂದರ ತಾತ್ವಿಕ ಅವಶ್ಯಕತೆಯ ಇತಿಹಾಸ. ಒಪ್ಪಿಕೊಳ್ಳಬೇಕೋ ಬೇಡವೋ ಎಂಬ ಇಬ್ಬಂದಿತನದಲ್ಲಿ ಮನುಕುಲ ಕಳೆದ ಶತಮಾನಗಳೆಷ್ಟೋ! ಬ್ಯಾಬಿಲೋನದ ಗಣಿತಜ್ಞರು ಸೊನ್ನೆಯನ್ನು ತಮ್ಮ ಸಂಖ್ಯಾಪದ್ಧತಿ (number system)ಯಲ್ಲಿ ಬಳಸಿಕೊಂಡಿದ್ದರೂ ಅದನ್ನೆಂದೂ ಒಂಟಿಯಾಗಿ 'ಏನೂ ಇಲ್ಲ' ಎಂದು ತೋರಿಸಲಿಕ್ಕೆ ಬಳಸಿರಲಿಲ್ಲ. ಗ್ರೀಕರಿಗೆ ಏನೂ ಇಲ್ಲದಿರುವುದನ್ನು ಸಂಕೇತಿಸುವ ಸೊನ್ನೆ, ಸಂಖ್ಯೆಗಳಲ್ಲಿ ಒಂದೆಂಬ ಬಗ್ಗೆಯೇ ಗುಮಾನಿಯಿತ್ತು. ಕ್ರಿ.ಪೂ. ೪ನೇ ಶತಮಾನದಲ್ಲಿ ಸೊನ್ನೆಗಾಗಿ ಖಾಲಿ ಜಾಗವೊಂದನ್ನು ಬಿಡುವ ಸಂಪ್ರದಾಯವಿದ್ದುದನ್ನು ಕೆಲವು ಕಡೆ ಉಲ್ಲೇಖಿಸಲಾಗಿದೆ. ಸೊನ್ನೆಯ ಕುರಿತಾದ ನಿಯಮಗಳನ್ನು ಪ್ರಥಮ ಬಾರಿಗೆ ಬ್ರಹ್ಮಗುಪ್ತನ (ಕ್ರಿ.ಶ. ೫೯೮ರಿಂದ ಕ್ರಿ.ಶ. ೬೬೮) 'ಬ್ರಹ್ಮಸ್ಫುಟ ಸಿದ್ಧಾಂತ'ದಲ್ಲಿ ನೋಡಬಹುದು. ಬ್ರಹ್ಮಗುಪ್ತ ರಚಿಸಿದ ನಿಯಮಗಳು ಬಹುಮಟ್ಟಿಗೆ ನಾವು ಈಗ ಉಪಯೋಗಿಸುವ ನಿಯಮಗಳೇ. ಆದರೆ ಸಂಖ್ಯೆಯೊಂದನ್ನು ಸೊನ್ನೆಯಿಂದ ಭಾಗಿಸಿದರೆ ಬರಬೇಕಾದ ಉತ್ತರದಲ್ಲಿ ಭಿನ್ನತೆಯಿದೆ. ಬ್ರಹ್ಮಗುಪ್ತ ಸೊನ್ನೆಯ ಕುರಿತು ನಿಯಮ ರಚಿಸಿದರೂ ಅವು ಉಪಯೋಗಕ್ಕೆ ಬರಲು ಶತಮಾನಗಳೇ ಬೇಕಾದುವು. ಭಾರತದಲ್ಲಿಯೂ ಬರೀ ಜಾಗ ಕಾಯ್ದಿಡುವಿಕೆಯಲ್ಲದ ಸೊನ್ನೆಯ ಉಪಯೋಗ ಕಂಡುಬರುವುದು ಒಂಬತ್ತನೇ ಶತಮಾನದಲ್ಲಿ! ಇದು ಸೊನ್ನೆಯ ಅಸ್ತಿತ್ವವನ್ನು ಒಪ್ಪಿಕೊಂಡ ಮೊದಲ ದಾಖಲೆ. ಅಂದರೆ ಕ್ರಿ.ಶ. ೯ನೇ ಶತಮಾನದವರೆಗೆ ಸೊನ್ನೆಯ ಸ್ಥಾನ ಬರೀ ಸ್ಥಾನ ಹಿಡಿದುಕೊಳ್ಳುವುದಕ್ಕೆ ಮಾತ್ರ ಮೀಸಲಾಗಿತ್ತು. ಹನ್ನೆರಡನೇ ಶತಮಾನದಲ್ಲಿ ವ್ಯಾಪಾರಿ ಅರಬ್ಬರಿಂದ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಸೊನ್ನೆಯ ಪರಿಚಯವಾಯಿತು.

ಸೊನ್ನೆಯೆಂದೊಡನೆ ನಮಗೆ ತಕ್ಷಣ ಹೊಳೆಯುವುದು ದಶಮಾನ ಪದ್ಧತಿಯಲ್ಲಿ ಉಪಯೋಗಿಸುವ ಅಂಕೆ. ಇದರಿಂದ ದೊಡ್ಡ ಸಂಖ್ಯೆಗಳನ್ನು ಬರೆಯಲು ಸುಲಭ. ಗಣಿತದ ಕೂಡು, ಕಳೆ, ಗುಣಿಸು ಮತ್ತು ಭಾಗಿಸುವ ಕ್ರಿಯೆಗಳಿಗೆ ಸೊನ್ನೆ ಸಹಕರಿಸುವ ರೀತಿ ನಿಜಕ್ಕೂ ಮೆಚ್ಚಬೇಕಾದದ್ದೇ. '೧೦*೮ = ೮೦' ಅನ್ನುವದನ್ನು 'X*VII=LXXX' ಅನ್ನುವಾಗ ಇರುವ ಅಸಹಜತೆ ಈ ಅಂಶವನ್ನು ಮನದಟ್ಟು ಮಾಡಿಕೊಡಬಹುದು. ಆದರೆ ಇದು ಸೊನ್ನೆಯ ಒಂದು ಉಪಯೋಗ ಮಾತ್ರ. ಗುಣಾತ್ಮಕ ದೃಷ್ಟಿಯಿಂದ ೯ ಮತ್ತು ೧೦ರ ಮಧ್ಯೆ ಅಂತಹ ವ್ಯತ್ಯಾಸವೇನೂ ಇಲ್ಲ.

ಸೊನ್ನೆಯೆಂದರೆ 'ಏನೂ ಇಲ್ಲದಿರುವ, ಎಲ್ಲವನ್ನೂ ಹೊರತಾಗಿರುವ' ಸ್ಥಿತಿ ಮತ್ತು ಅದನ್ನು ತೋರಿಸುವ ಸಂಕೇತ. ಅನಂತವಾಗಿರುವ ಸಂಖ್ಯಾಗಣದಲ್ಲಿ (..., -೩, -೨, -೧, ೦, ೧, ೨, ೩,...) ಸೊನ್ನೆ ಬೇಕೆ? ಈ ಪ್ರಶ್ನೆ ಗಣಿತಕ್ಕೆ ಸವಾಲಾಗುತ್ತದೆ. ಉಳಿದ ಸಂಖ್ಯೆಗಳಿಗೆ ಅನ್ವಯಿಸುವ ಹಲವು ಸಾಮಾನ್ಯ ನಿಯಮಗಳು ಸೊನ್ನೆಯೊಡನೆ ಅರ್ಥಹೀನ ವಾಗುತ್ತವೆ. ನಾವು ಕಲ್ಪಿಸಬಹುದಾದ ಅತಿ ಚಿಕ್ಕ ಸಂಖ್ಯೆಗೂ ಸೊನ್ನೆಗೂ ವಿವರಣೆಗೆ ಸಿಗಲಾರದ ವ್ಯತ್ಯಾಸ. ಸೊನ್ನೆಯಿಂದ ಸೊನ್ನೆಯನ್ನು ಭಾಗಿಸಿದರೆ ಉತ್ತರವೇನಿರಬೇಕು? ಉತ್ತರ ಅಷ್ಟು ಸಹಜವೇನಲ್ಲ. ಈ ಪ್ರಶ್ನೆಗೆ ಬ್ರಹ್ಮಗುಪ್ತ ನಿರುತ್ತರನಾದದ್ದರಲ್ಲಿ ಆಶ್ಚರ್ಯವಿಲ್ಲ.

ಸೊನ್ನೆಗೆ ಇನ್ನೂ ಹಲವು ವಿಶೇಷತೆಗಳಿವೆ. ಸಂಖ್ಯೆಗಳು ಅನಂತವಾಗಿವೆ. ಆದರೆ ಅವೆಲ್ಲವನ್ನೂ ಕೂಡಿಸಿದಾಗ ಬರುವ ಒಟ್ಟು ಮೊತ್ತ ಸೊನ್ನೆ! ಪ್ರತಿಯೊಂದು ಧನಸಂಖ್ಯೆಗೂ ಒಂದು ಋಣಸಂಖ್ಯೆಯಿದೆ. ಇದೊಂದು ಗಣಿತದ ಚಮತ್ಕಾರ ಅಥವಾ ಆಕಸ್ಮಿಕ ಎನಿಸಬಹುದು, ಇದಕ್ಕೂ ನಮಗೂ ಸಂಬಂಧವಿಲ್ಲ ಎಂದು ನಿರಾಳವಾಗಿ ಉಸಿರು ಬಿಡಬಹುದು. ಇದಕ್ಕೆ ಭೌತಿಕ ಆಯಾಮಗಳಿವೆ ಎಂದಾಗ ನಮಗೆ ಕುತೂಹಲ ಉಂಟಾಗುತ್ತದೆ. ನಮ್ಮ ಸುತ್ತಮುತ್ತಲಿನ ಎಲ್ಲ ವಸ್ತುಗಳೂ, ನಮ್ಮನ್ನೂ ಸೇರಿ, ಒಂದು ಸೊನ್ನೆಯಿಂದ ಬಂದಿರಲು ಸಾಧ್ಯವಿದೆ. ಪ್ರತೀ ಕಣಕ್ಕೂ ಪ್ರತಿಕಣವೊಂದಿದೆ ಮತ್ತು ಶೂನ್ಯದಿಂದ ಈ ಕಣ-ಪ್ರತಿಕಣಗಳ ಆರಂಭ ಸಾಧ್ಯ! ಈ ಕ್ರಿಯೆಗೂ ಮೊದಲು ಹೇಳಿದ ಗಣಿತದ 'ಆಕಸ್ಮಿಕ'ಕ್ಕೂ ಇರುವ ಸಮಾನತೆಯನ್ನು ನೋಡಿದರೆ ಸೊನ್ನೆ ತರುವ ವೈಚಾರಿಕ ಮಹತ್ವ ತಿಳಿಯುತ್ತದೆ. ಸಮಾನ ಸಂಖ್ಯೆಯ ಧನ ಮತ್ತು ಋಣ ವಿದ್ಯುದಂಶಗಳು ಪರಸ್ಪರ ಅಸ್ತಿತ್ವವನ್ನು ಕಳೆದುಕೊಂಡ ಹಾಗೆ ಕಣ ಮತ್ತು ಪ್ರತಿಕಣಗಳು ಒಂದಾದಾಗ ಅವುಗಳ ಅಸ್ತಿತ್ವವೂ ಇಲ್ಲವಾಗುತ್ತದೆ. ಈ 'ಇಲ್ಲದಿರುವಿಕೆ' ಮತ್ತು 'ಇರುವಿಕೆ'ಗಳ ನಡುವಿನ ಸಂಬಂಧವೇ ಸೊನ್ನೆಯ ಆರಂಭದಲ್ಲಿ ವೈಚಾರಿಕ ಗೊಂದಲವನ್ನು ಸೃಷ್ಟಿಸಿತು. 'ಏನೂ ಇಲ್ಲದಿರುವಿಕೆ'ಯನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲದ ಸಮುದಾಯಗಳು ಸಾಕಷ್ಟಿದ್ದವು.

ಇದಕ್ಕೂ ವಿಚಿತ್ರವಾದದ್ದು ಸೊನ್ನೆ ಮತ್ತು ಅನಂತಗಳ ಅವಿನಾಭಾವ ಸಂಬಂಧ. ಕೆಲವೊಮ್ಮೆ ಪ್ರಾಚೀನ ಗಣಿತಜ್ಞರು ಸೊನ್ನೆ-ಅನಂತಗಳ ಹೆಸರು ಬದಲು ಮಾಡಿದ್ದೂ ಇದೆ.

ಅನಂತವೆಂದರೆ 'ಕೊನೆಯಿಲ್ಲದ' ಎಂದಾದರೆ ಸೊನ್ನೆಯೆಂದರೆ 'ಏನೂ ಇಲ್ಲದ' ಎಂದರ್ಥ. ಆದರೆ ಇದೇ ಸೊನ್ನೆಯನ್ನು 'ಎಲ್ಲವನ್ನೂ ಒಳಗೊಂಡಿರುವ' ಎಂಬರ್ಥದಲ್ಲಿಯೂ ಬಳಸಿರುವುದನ್ನೂ ಕಾಣುತ್ತೇವೆ. ಇದಕ್ಕಲ್ಲವೇ ವಚನಗಳ ಸಂಗ್ರಹವನ್ನು 'ಶೂನ್ಯ-ಸಂಪಾದನೆ' ಎಂದು ಕರೆದಿರುವುದು! ಇಲ್ಲಿ ಸೊನ್ನೆಯೆಂದರೆ ಶಿವ, ಎಲ್ಲವನ್ನೂ ಒಳಗೊಂಡಿರುವ ಅಂತಿಮ ಸತ್ಯ. ಸೊನ್ನೆ ಮತ್ತು ಅನಂತದ ಎರಡು ಸಾಮಾನ್ಯ ಅರ್ಥಗಳು ಶಿವ ಮತ್ತು ಆಕಾಶ! ಗಣಿತ ಶಾಸ್ತ್ರದಲ್ಲಿ ಒಂದಿಲ್ಲದಿದ್ದರೆ ಇನ್ನೊಂದಿಲ್ಲ. ಅನುಭಾವದಲ್ಲಿ ಎರಡೂ ಒಂದೇ!

ಸೊನ್ನೆ ಮತ್ತು ಅನಂತಗಳ ಈ ವಿಶಿಷ್ಟತೆ ವಿಜ್ಞಾನದ ಎಲ್ಲ ಶಾಖೆಗಳಲ್ಲೂ ಹರಡಿದೆ. ಎಲ್ಲಕ್ಕೂ ಮೊದಲು ವಿಜ್ಞಾನ ಲೋಕವನ್ನು ಅಚ್ಚರಿಗೊಳಿಸಿದ ಸಾಪೇಕ್ಷವಾದವನ್ನೇ ನೋಡಬಹುದು. ಸಾಪೇಕ್ಷವಾದದಲ್ಲಿ ಎರಡು ಶಾಖೆಗಳಿವೆ. ವಿಶೇಷ ಸಾಪೇಕ್ಷವಾದ (Special Relativity) ಕಣ-ಕಣಗಳ ಮಧ್ಯದ ವ್ಯವಹಾರಗಳನ್ನು ವಿವರಿಸಲು ಯತ್ನಿಸಿದರೆ, ಸಾಮಾನ್ಯ ಸಾಪೇಕ್ಷವಾದ (General Relativity) ಖಗೋಲವನ್ನು ಕುರಿತು ವಿವರಿಸಲು ಯತ್ನಿಸುತ್ತದೆ. ಮೇಲ್ನೋಟಕ್ಕೆ ಇವೆರಡೂ ಪ್ರೇಯಸಿಯ ಮೊದಲ ನೋಟದಷ್ಟೇ ಕುತೂಹಲಕಾರಿ, ಸುಮ್ಮನೆ ಕುಳಿತು ಏನನ್ನೂ ಅರ್ಥಮಾಡಿಕೊಳ್ಳದೇ ಕೇಳಬಹುದಾದಷ್ಟು ವಿಸ್ಮಯಕಾರಿ. ಸಾಮಾನ್ಯ ಸಾಪೇಕ್ಷವಾದದ ಸೊನ್ನೆ ಕಪ್ಪುರಂಧ್ರ (Black Hole)ದ ವೇಷದಲ್ಲಿ ಒಂದು ಸಾವಿರ ಸೂರ್ಯರನ್ನು ನುಂಗುವ ದೈತ್ಯ ನಕ್ಷತ್ರವಾಗಿ ಪರಿಗಣಿತವಾಗುತ್ತದೆ. ಈ ಕಪ್ಪುರಂಧ್ರದ ಸಾಂದ್ರತೆ ಅನಂತವಾದರೆ, ಅದರ ಆಕಾರ ಸೊನ್ನೆ, ಬರೀ ಬಿಂದು. ಕಣ್ಣಿಗೆ ಕಾಣದ ಆದರೆ ಅಗಾಧ ತೂಕದ ಕಪ್ಪುರಂಧ್ರ! ಈ ಕಪ್ಪುರಂಧ್ರದೊಳಗೆ ಸಮಯ ಮತ್ತು ಆಕಾಶ (Time and Space) ಎರಡೂ ಅರ್ಥವಿಲ್ಲದ ಶಬ್ದಗಳು. ವಿಶೇಷ ಸಾಪೇಕ್ಷವಾದದಲ್ಲಿ ತೂಕವನ್ನು ಕಳೆದುಕೊಂಡ ಕಣವೊಂದು ಅನಂತ ಶಕ್ತಿಯನ್ನು ಹೊರಸೂಸುವ ಶಕ್ತಿಕೇಂದ್ರವಾಗುತ್ತದೆ.

ಸೊನ್ನೆ-ಅನಂತಗಳ ಜುಗಲ್ಬಂದಿ ಇಲ್ಲಿಗೆ ನಿಲ್ಲುವುದಿಲ್ಲ. ಸೊನ್ನೆಯಿಂದ ಯಾವ ಸಂಖ್ಯೆಯನ್ನು ಭಾಗಿಸಿದರೂ ಬರುವುದು ಅನಂತ. ಗಣಿತದ ಈ 'ಆಕಸ್ಮಿಕ'ಕ್ಕೆ ಹಲವು ವೈಜ್ಞಾನಿಕ ಅವತಾರಗಳು! ಸೊನ್ನೆಯ ಈ ವಿಸ್ಮಯಕಾರಿ ವರ್ತನೆ ಸಾಪೇಕ್ಷವಾದ, ಕಣವಾದಗಳಂತಹ ವಿಶೇಷ ವಿಷಯಗಳಿಗೆ ಮೀಸಲಲ್ಲ. ಆಧುನಿಕ ವಿಜ್ಞಾನದ ಮಹತ್ವದ ಮೈಲಿಗಲ್ಲಾದ ಉಷ್ಣಗತಿಶಾಸ್ತ್ರ (Thermodynamics)ದ ಮೂರನೆಯ ನಿಯಮದ ಮಿತಿಯೂ ಸೊನ್ನೆಯೆ! ಇದರ ಪ್ರಕಾರ ಯಾವುದೇ ವಸ್ತು ಅಥವಾ ವ್ಯವಸ್ಥೆ ಪರಿಪೂರ್ಣ ಸೊನ್ನೆ (absolute zero) ಉಷ್ಣಾಂಶವನ್ನು ತಲುಪಲಾರದು. ಈ ತಾಪಮಾನದಲ್ಲಿ ತಾತ್ವಿಕವಾಗಿ ಎಲ್ಲ ಅನಿಲಗಳೂ ತಮ್ಮ ಗಾತ್ರವನ್ನು ಇಲ್ಲವಾಗಿಸಿಕೊಳ್ಳುತ್ತವೆ! ಸೊನ್ನೆ ತಾಪಮಾನವನ್ನು ತಲುಪುತ್ತಿದ್ದಂತೆ ವಿಜ್ಞಾನ ಕೊಡುವ ವಿವರಣೆಗಳು ಅನುಭಾವಿಗಳ ಒಗಟುಗಳಂತೆ ಭಾಸವಾಗುತ್ತವೆ. ಆಗ ವಿಜ್ಞಾನಕ್ಕುಳಿಯುವುದು ಪ್ರಯೋಗದ ಮಿತಿಗೆ ಹೊರತುಪಟ್ಟ ತತ್ವಶಾಸ್ತ್ರ ಮಾತ್ರ! ಸೊನ್ನೆ ಮತ್ತು ಅನಂತದ ಗಣಿತದ ಪ್ರಕ್ರಿಯೆಗಳು ಇನ್ನೂ ಸಂಪೂರ್ಣವಾಗಿ ಕೈಗೆ ನಿಲುಕಿಲ್ಲವೆನ್ನುವುದಕ್ಕೆ ಇದೊಂದು ಉದಾಹರಣೆ ಮಾತ್ರ.

ಎಣಿಕೆಗೆ ಮೀರಿದ ನಿನ್ನೆ-ನಾಳೆಗಳ ಸಾಲು, ನಡುವಿನ ಈ ಕ್ಷಣ ಅರಿವಿಗೆ ಮೀರಿದ ಸೊನ್ನೆ. ಹಿಂದೆ ಜಾರಿದರೆ ಇತಿಹಾಸ, ಮುಂದೆ ಬಾಗಿದರೆ ಕನಸುಗಳ ಆಕಾಶ! ದಿಟ್ಟಿಸಿ ನೋಡುತ್ತ ಹೋದರೆ ಸಣ್ಣದಾಗುತ್ತ ಹೋಗುವ ಈ ಕ್ಷಣ. ಅನಂತದೆಡೆಗೆ ಎಷ್ಟು ಸಾಗಿದರೂ ಮುಗಿಯದ ದಾರಿಯುದ್ದಕ್ಕೂ ಬೆನ್ನಿಗಂಟಿದ ಈ ಕ್ಷಣ. ಸೊನ್ನೆಗೆ ಬೇರೆ ವ್ಯಾಖ್ಯೆ ಬೇಕೆ? ವಿಜ್ಞಾನಿ-ಅನುಭಾವಿಗಳೊಡನೆ ಕವಿಗಳಿಗೂ ಮುತ್ತು ಬರಿಸುವ ಈ ಸೊನ್ನೆಯನ್ನು ಬರೀ ಸೊನ್ನೆಯೆಂದರೆ ಸಾಕೆ?

●

ಆ ಕಾಲ ಚಂದವೋ?
ಈ ಕಾಲ ಚಂದವೋ?

– ಹಂ. ಕ. ರಾಮಪ್ರಿಯನ್

ಸುಮಾರು ೩೦ ವರ್ಷಗಳಿಗಿಂತ ಹೆಚ್ಚಾಗಿ ವಯಸ್ಸಾದವರು ಕೆಲವರು ಒಂದು ಕಡೆ ಸೇರಿದರೆ ಸರಿ, ಸಂಭಾಷಣೆಗೆ ಬರುವ ವಿಷಯ 'ಆ ಕಾಲದಲ್ಲಿ ಹಾಗಿತ್ತು, ಈ ಕಾಲದಲ್ಲಿ ಹೀಗಿದೆ' ಎಂದು. ಅದರಲ್ಲೂ ವಯಸ್ಸು ಹೆಚ್ಚಾಗುತ್ತಿರುವ ಹಾಗೆ ಈ ರೀತಿಯ ಸಂಭಾಷಣೆಗೆ ಪ್ರಾಧಾನ್ಯ ಹೆಚ್ಚಾಗುತ್ತಾ ಹೋಗುತ್ತದೆ. ನನಗೆ ಚಿಕ್ಕವಯಸ್ಸಾಗಿದ್ದಾಗ ಮನೆಯಲ್ಲಿ ಯಾರಾದರೂ ಅತಿಥಿಗಳು ಬಂದು ಕುಳಿತರೆ ಮನೆಯ ಹಿರಿಯರಿಗೂ ಅವರಿಗೂ ಆಗುವ ಸಂಭಾಷಣೆಯೂ ಹೀಗೆಯೇ ನಡೆಯುತ್ತಿತ್ತು. 'ನಾವು ಹುಡುಗರಾಗಿದ್ದಾಗ ಸೆಟ್ ದೋಸೆಗೆ ಮೂರೇ ಕಾಸು ಕೊಡುತ್ತಿದ್ದೆವು. ತಿಂಗಳಿಗೆ ನೂರು ರೂಪಾಯಿ ಸಂಬಳ, ಆದರೂ ಅದರಲ್ಲೂ ಹಣ ಮಿಗಿಸುತ್ತಿದ್ದೆವು' ಇತ್ಯಾದಿ ಮಾತುಗಳು ತಡೆಬಡೆಯಿಲ್ಲದೆ ನಡೆಯುತ್ತಿದ್ದವು. ಆವಾಗ ಚಿಕ್ಕಮಕ್ಕಳಾಗಿದ್ದ ನಮಗೆ ಇದೆಲ್ಲ ಹಳೇ ಪುರಾಣ, ಏನೂ ಉಪಯೋಗಕ್ಕೆ ಬಾರದ ಮಾತು ಎಂದು ಬೇಜಾರಾಗುತ್ತಿತ್ತು. ಆದರೆ ಈಗ ನನಗೂ ಈ ರೀತಿ ಮಾತಾಡುವ ವಯಸ್ಸೇ ಆಗಿದೆ. ಆದ್ದರಿಂದ ಆಗಿನ ಕಾಲಕ್ಕೂ ಈಗಿನ ಕಾಲಕ್ಕೂ ವ್ಯತ್ಯಾಸಗಳನ್ನು ತೋರುವ ಕೆಲವು ವಿಷಯಗಳ ಬಗ್ಗೆ ಇಲ್ಲಿ

ಬರೆಯುತ್ತೇನೆ. ಆಗಿನ ಕಾಲ ಎಂದರೇನು ಎನ್ನುವುದನ್ನು ಇಲ್ಲಿ ಬರೆದಿರುವ ವಿಷಯಗಳನ್ನೋದಿಯೇ ಓದುಗರು ತಿಳಿದುಕೊಳ್ಳಬಹುದು. ಇಲ್ಲಿ ಬರೆದಿರುವ ಕೆಲವು ಬೆಲೆಗಳು ಅಷ್ಟು ನಿಖರವಾಗಿಲ್ಲದಿರಬಹುದು - ನೆನಪುಗಳು ದೂರದ ಬೆಟ್ಟದ ಹಾಗೆ ಸ್ವಲ್ಪ ನುಣ್ಣಗಾಗಿಬಿಟ್ಟಿವೆ, ಅದಕ್ಕಾಗಿ ಓದುಗರ ಕ್ಷಮೆಯನ್ನು ಬೇಡುತ್ತೇನೆ.

೧. ಬೆಲೆಗಳು

ನಾನು ಮಲ್ಲೇಶ್ವರದ ೧೮ನೆಯ ಅಡ್ಡರಸ್ತೆಯಲ್ಲಿದ್ದ ಹೈಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿದ್ದ ಕಾಲ. ಆವಾಗ ನಾನು ಎ.ಸಿ.ಸಿ.ಯಲ್ಲಿ ಒಬ್ಬ ಪೇದೆಯಾಗಿದ್ದೆ. ಪ್ರತಿದಿನವೂ (ಅಥವಾ ವಾರಕ್ಕೆ ಮೂರುದಿನವಿದ್ದಿರಬಹುದು - ಮರೆತುಹೋಗಿದೆ) ಬೆಳಿಗ್ಗೆ ವ್ಯಾಯಾಮ, ಪೆರೇಡು ಆಗುತ್ತಿತ್ತು. ಅದಾದನಂತರ ಅಲ್ಲೇ ಹತ್ತಿರದಲ್ಲಿದ್ದ ಒಂದು ಹೋಟೆಲಿನಲ್ಲಿ? ಉಪಾಹಾರ - ಒಳ್ಳೆಯ ರುಚಿರುಚಿಯಾದ ಇಡ್ಲಿ-ಸಾಂಬಾರು. ಎರಡು ಇಡ್ಲಿಗಳು ಮತ್ತು ಹೇರಳವಾಗಿ ಸಾಂಬಾರು ಕೊಡುತ್ತಿದ್ದರು. ಅದಕ್ಕೆ ಬೆಲೆ ಕೇವಲ ಒಂದೇ ಆಣೆ (ಎಂದರೆ ಆರು ಪೈಸೆ - ಆದರೆ ಆಗ ಇನ್ನೂ ನಯೇ ಪೈಸೇ ಚಾಲತಿಯಲ್ಲಿರಲಿಲ್ಲ). ಯಾವಾಗಲಾದರೂ ಚಪಲಕ್ಕೆ ಮಸಾಲೆದೋಸೆ ತಿನ್ನಬೇಕೆನಿಸಿದರೆ ಅದಕ್ಕೆ ಬೆಲೆ ಎರಡೇ ಆಣೆ. ಆಗ ಸಿನಿಮಾಗಳಿಗೆ ಹೋಗುವ ಅಭ್ಯಾಸವಿರಲಿಲ್ಲ. ಆದರೆ ಯಾವಾಗಲಾದರೂ ಅಪರೂಪವಾಗಿ ಹೋದರೆ ಒಂದು ರೂಪಾಯಿ (ಇದ್ದಿರಬಹುದು) ಕೊಟ್ಟು ಬಾಲ್ಕನಿಯ ಮೇಲೆ ತೆರೆಯಿಂದ ಸಾಧ್ಯವಾದಷ್ಟು ಹೆಚ್ಚು ದೂರದಲ್ಲಿ ಕುಳಿತುಕೊಳ್ಳುತ್ತಿದ್ದೆವು. ನಾಲ್ಕಾಣೆ ಸೀಟಿನಲ್ಲಿ ಕುಳಿತು ಶಿಳ್ಳೆಹೊಡಿಯುತ್ತ ಗಲಾಟೆ ಮಾಡುವವರ ಬಗ್ಗೆ ಬೇಜಾರು ಮಾಡಿಕೊಂಡು ಮಾತನಾಡುತ್ತಿದ್ದದ್ದೂ ಉಂಟು.

ಅದಾದ ಮೇಲೆ ಇನ್ನೂ ಸ್ವಲ್ಪ ವರ್ಷಗಳು ಮುಂದಕ್ಕೆ ಹೋಗೋಣ. ಪ್ರಿ-ಯೂನಿವರ್ಸಿಟಿ ದರ್ಜೆಯಲ್ಲಿ ವಿದ್ಯಾರ್ಥಿಯಾಗಿದ್ದಾಗ ನಾನು ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿದ್ದೆ. ಅದು ನಾಗಪ್ಪ ಬ್ಲಾಕಿನಲ್ಲಿದ್ದ ನಮ್ಮ ಮನೆಯಿಂದ ಸುಮಾರು ೫ ಮೈಲಿ ದೂರದಲ್ಲಿತ್ತು. ನಾನು ಮತ್ತು ನನ್ನ ಕೆಲವು ಸ್ನೇಹಿತರು ಒಟ್ಟಿಗೆ ಹೋಗುತ್ತಿದ್ದೆವು. ಬಸ್ಸಿನಲ್ಲಿ ಹೋಗುವ ಪದ್ಧತಿ - ಮಲ್ಲೇಶ್ವರದ ಎಂಟನೆಯ ಕ್ರಾಸಿನಲ್ಲಿ ಹತ್ತಿಕೊಳ್ಳುತ್ತಿದ್ದೆವು. ಆದರೆ ಅನೇಕ ಸಲ ಅಲ್ಲಿ ತುಂಬ ಜನಗಳು ಇರುತ್ತಿದ್ದರು. ಬರುತ್ತ ಬರುತ್ತ ೧೮ನೆಯ ಕ್ರಾಸಿನಿಂದ ಹೊರಟು ಬರುತ್ತಿದ್ದ ಆ ಬಸ್ಸು ಎಂಟನೆಯ ಕ್ರಾಸಿಗೆ ಬರುವ ವೇಳೆಗೆ ಅದರಲ್ಲಿ ಸೀಟುಗಳೇ ಸಿಗುತ್ತಿರಲಿಲ್ಲ. ಬಸ್ಸು ನಿಂತರೂ ಜನಗಳು ನೂಕಿ ನುಗ್ಗಿ ಒಳಗೆ ಹೋಗುತ್ತಿದ್ದರು. ಕ್ಯೂ ಎಂದರೇನು ಎಂದು ಜನಗಳಿಗೆ ಅರಿವಿರಲಿಲ್ಲ. 'Might is right' ಎಂಬ ಪದ್ಧತಿಯೇ ಜಾರಿಯಲ್ಲಿತ್ತು. ಚಿಕ್ಕವರಾಗಿದ್ದ ನಮಗೆ ನುಗ್ಗಿ ಬಸ್ಸನ್ನೇರುವುದಕ್ಕಾಗುತ್ತಿರಲಿಲ್ಲ. ಹೀಗಾಗಿ ಹದಿನೆಂಟನೆಯ ಕ್ರಾಸಿಗೇ ನಡೆದುಕೊಂಡು ಹೋಗಿ ಬಸ್ಸನ್ನು ಹತ್ತುವ ಅಭ್ಯಾಸ ಮಾಡಿಕೊಂಡೆವು. ಅದು ಸುಮಾರು ಒಂದೂವರೆ ಮೈಲಿ. ಅದರಿಂದ ಬೆಲೆಯೂ ಹೆಚ್ಚಾಗುತ್ತಿತ್ತು (೨೦ ಪೈಸೆಗಳ ಬದಲು

೨೬ ಅಥವಾ ೨೫ ಇದ್ದಿರಬಹುದು). ಆದ್ದರಿಂದ ನಾವು ಸುಮ್ಮನೆ ಏಕೆ ಕಾಲೇಜಿಗೆ ನಡೆದುಕೊಂಡೇ ಹೋಗಬಾರದು ಎಂದು ಯೋಚಿಸಿ ಪ್ರತಿದಿನವೂ ಬೆಳಿಗ್ಗೆ ಹೋಗುವಾಗ ನಡೆದೇ ಹೋಗಲು ಪ್ರಾರಂಭಿಸಿದೆವು. ಮನೆಗೆ ಬಸ್ಸಿನಲ್ಲಿ ಹಿಂತಿರುಗುತ್ತಿದ್ದೆವು. ಪ್ರತಿದಿನವೂ ಚೆನ್ನಾಗಿ ವ್ಯಾಯಾಮವಾಗುತ್ತಿತ್ತು. ಆ ವಯಸ್ಸಿನಲ್ಲಿ ಬಿಸಿಲಿನಲ್ಲಿ ಬೇಗ ಬೇಗ ನಡೆದುಹೋಗಿ ಬೆವರು ಸುರಿಯುತ್ತಿದ್ದರೂ ನಮಗೆ ಅದರ ಪರಿವೆಯಿರುತ್ತಿರಲಿಲ್ಲ. ಈಗಿನ ಹಾಗೆ ಡಿಯೋಡರೆಂಟನ್ನು ಉಪಯೋಗಿಸಿ ಇತರರು ನಮ್ಮ ಬೆವರಿನ ವಾಸನೆಯನ್ನು ಅನುಭವಿಸದಿರಲಿ ಎಂಬ ಯೋಚನೆಯೂ ಇರಲಿಲ್ಲ. ಎರಡು-ಮೂರು ದಿನಗಳ ಬಸ್ಸಿನ ಖರ್ಚಿನ ಉಳಿತಾಯದಿಂದ ಹೋಟೆಲಿನಲ್ಲಿ ಎಸ್.ಕೇ.ಸಿ. (ಸ್ವೀಟು, ಖಾರ, ಕಾಫಿ – ಆದರೆ ನಾನು ಕಾಫಿ ಕುಡಿಯುತ್ತಿರಲಿಲ್ಲ – ಆದ್ದರಿಂದ ಹಾಲು) ಉಪಾಹಾರ ಚೆನ್ನಾಗಿ ನಡೆಯುತ್ತಿತ್ತು. (ಈ ಕಾಲದಲ್ಲಿ ಇಂತಹ ಉಪಾಹಾರಕ್ಕೆ ೩೦-೫೦ ರೂಪಾಯಿಗಳಾಗಬಹುದು. ಬಸ್ಸಿನ ಟಿಕೆಟ್ಟಿಗೆ ೧೦-೧೫ ರೂಪಾಯಿ.)

ಅದಾದ ನಂತರ ನಾನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದೆ. ಆವಾಗ ನನ್ನ ಹತ್ತಿರ ಒಂದು ಬೈಸಿಕಲ್ಲು ಇತ್ತು. ಬಸ್ಸುಗಳನ್ನು ಉಪಯೋಗಿಸದೆ ಎಲ್ಲೆಲ್ಲೂ ಸುತ್ತಬಹುದಾಗಿದ್ದ ನನ್ನ ಭಾಗ್ಯಕ್ಕಾಗಿ ದೇವರಿಗೆ (ಮತ್ತು ನನ್ನ ತಂದೆ ತಾಯಿಯರಿಗೆ) ಧನ್ಯವಾದಗಳನ್ನು ಹೇಳಿ ಆ ಸ್ವಯಂಚಾಲಿತ ವಾಹನವನ್ನೇರಿ ಕಾಲೇಜಿಗೂ ಮತ್ತು ಇತರ ಜಾಗಗಳಿಗೂ (ಸ್ನೇಹಿತರ ಮನೆಗಳಿಗೆ, ವೀಣೆ ನುಡಿಸಲು ಕಲಿಯುತ್ತಿದ್ದುದರಿಂದ ನಮ್ಮ ಗುರುಗಳ ಮನೆಗೆ, ಆಗಾಗ ಸಿನಿಮಾ ನೋಡುವುದಕ್ಕೆ ಮೆಜೆಸ್ಟಿಕ್ ಅಥವಾ ಕಂಟೋನ್ಮೆಂಟಿಗೆ, ಇತ್ಯಾದಿ) ಹೋಗುತ್ತಿದ್ದೆ. ಇದೇ ಕ್ರಮ ನಾನು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸಿನಲ್ಲಿ ವಿದ್ಯಾರ್ಥಿಯಾಗಿದ್ದಾಗಲೂ ಮುಂದುವರೆಯಿತು. ಊರನ್ನೆಲ್ಲ ಬೈಸಿಕಲ್ಲನ್ನೇರಿ ಸುತ್ತುತ್ತಿದ್ದ ನನಗೆ ಹಸಿವಾದಾಗ ಸುಮ್ಮನೆ ಹೋಟೆಲಿನಲ್ಲಿ ತಿನ್ನುವ ಬದಲು ಅಂಗಡಿಗಳಲ್ಲಿ ಬಾಳೆಯಹಣ್ಣನ್ನು ತಿಂದರೆ ಆರೋಗ್ಯಕ್ಕೆ ಒಳ್ಳೆಯದು ಎಂಬ ವಿವೇಕ ಆ ವೇಳೆಗೆ ಸ್ವಲ್ಪ ಬಂದಿತ್ತು. ಆ ಕಾಲದಲ್ಲಿ ಆರು ಪೈಸೆ ಕೊಟ್ಟರೆ ಒಂದು ಬಾಳೆಯ ಹಣ್ಣು (ರುಚಿರುಚಿಯಾದ ದೊಡ್ಡ ಪಚ್ಚಬಾಳೆಯ ಹಣ್ಣು) ಸಿಗುತ್ತಿತ್ತು. ಈ ಕಾಲದಲ್ಲಿ ಅದಕ್ಕೆ ೬ ರೂಪಾಯಿಯಾಗಬಹುದು.

ಬೆಂಗಳೂರನ್ನು ಬಿಟ್ಟು ಈ ದೇಶಕ್ಕೆ ಬಂದು ಮಿನೆಸೋಟಾ ವಿಶ್ವವಿದ್ಯಾಲಯದಲ್ಲಿ ಪಿ. ಎಚ್. ಡಿ. ಗಳಿಸುವುದಕ್ಕೆ ವಿದ್ಯಾರ್ಥಿಯಾಗಿದ್ದಾಗ ಮೊದಲನೆಯ ವರ್ಷದಲ್ಲಿ ಟೀಚಿಂಗ್ ಅಸಿಸ್ಟೆಂಟ್ ಆಗಿದ್ದೆ. ಆಗ ಸಂಬಳ ಕೇವಲ ತಿಂಗಳಿಗೆ $೨೪೦. ಮತ್ತಿಬ್ಬರು ವಿದ್ಯಾರ್ಥಿಗಳೊಂದಿಗೆ ಒಂದು ಅಪಾರ್ಟ್‌ಮೆಂಟಿನಲ್ಲಿ ವಾಸ. ಬಾಡಿಗೆ ತಿಂಗಳಿಗೆ $೧೧೦. (ಈ ಕಾಲದಲ್ಲಿ $೫೦೦-$೬೦೦). ಎಂದರೆ ಒಬ್ಬೊಬ್ಬರಿಗೆ $೩೭. ತಿಂಗಳಿಗೆ ಸುಮಾರು $೧೦-$೧೫ಗಳೊಳಗೆ ಒಬ್ಬೊಬ್ಬರ ಊಟದ ಖರ್ಚು ಮುಗಿಯುತ್ತಿತ್ತು (ಆಗ ಹೆಚ್ಚಾಗಿ ಹೋಟೆಲುಗಳಲ್ಲಿ ತಿನ್ನುತ್ತಿರಲಿಲ್ಲ, ವಿದ್ಯಾರ್ಥಿ ಜೀವನದಲ್ಲಿ ಹಣವನ್ನು ಉಳಿಸಬೇಕು ಎನ್ನುವ

ಧ್ಯೇಯದಿಂದ). [ಈಗಲೂ ನೆನಪಿಗೆ ಬರುತ್ತದೆ - ನಾನು ಬೆಂಗಳೂರಿನಿಂದ ವಿಮಾನ ಪ್ರಯಾಣ ಮಾಡುತ್ತಿದ್ದಾಗ ನನ್ನ ಪಕ್ಕದಲ್ಲಿ ಕುಳಿತಿದ್ದ ಒಬ್ಬರು ಈ ದೇಶದಲ್ಲಿ ವಾಸಿಸುತ್ತಿದ್ದು ಭಾರತಕ್ಕೆ ರಜೆಯಲ್ಲಿ ಹೋಗಿ ಹಿಂದಿರುಗುತ್ತಿದ್ದರು. ಅವರೊಡನೆ ಇಲ್ಲಿಯ ವಿಷಯಗಳ ಬಗ್ಗೆ ತಿಳಿದುಕೊಳ್ಳುವ ಕುತೂಹಲದಿಂದ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದೆ. ಅವರು 'ನನ್ನ ಮನೆಯಾಕೆಗೆ ಹೋಟೆಲುಗಳಲ್ಲಿ ಆಗಾಗ ಊಟ ಮಾಡುವುದಕ್ಕೆ ಇಷ್ಟ, ಆದರೆ ಅಲ್ಲಿ ಬೆಲೆ ಬಹಳ ಜಾಸ್ತಿ. ಒಂದು ಸಲ ಊಟ ಮಾಡುವುದಕ್ಕೆ ನಮ್ಮಿಬ್ಬರಿಗೆ $೫ ಆಗಿಬಿಡುತ್ತದೆ. ನಾನು- Honey, we cannot afford the money - ಎಂದು ಹೇಳುತ್ತೇನೆ' ಎಂದು ಹೇಳಿದ್ದರು.] ಈ ಕಾಲದಲ್ಲಿ ಹೋಟೆಲುಗಳಲ್ಲಿ ಇಬ್ಬರ ಊಟಕ್ಕೆ ಸುಮಾರು $೩೦ ಖರ್ಚು ಮಾಡಬೇಕಾಗುತ್ತದೆ. ಆ ದಿನಗಳಲ್ಲಿ ಬಟ್ಟೆ ಒಗೆಯುವುದಕ್ಕೆ ಲಾಂಡ್ರೋಮ್ಯಾಟ್‌ಗಳಿಗೆ ಹೋಗಬೇಕಾಗಿತ್ತು. ಅಲ್ಲಿ ೨೫ ಸೆಂಟಿಗೆ ವಾಷಿಂಗ್ ಮೆಷೀನನ್ನೂ ಮತ್ತು ಹತ್ತು ಸೆಂಟಿಗೆ ಡ್ರೈಯರ್‌ನ್ನೂ ಉಪಯೋಗಿಸಬಹುದಾಗಿತ್ತು. ಈ ರೀತಿ ಸ್ವಲ್ಪವೇ ಖರ್ಚಾಗುತ್ತಿದ್ದು ನನ್ನ ತಿಂಗಳ ವೇತನದಲ್ಲಿ ಸುಮಾರು ೫೦% ಉಳಿತಾಯವಾಗುತ್ತಿತ್ತು.

ನಾನು ಅಲ್ಲಿದ್ದ ಎರಡನೆಯ ವರ್ಷದಲ್ಲಿ ನನ್ನ ಸಂಬಳದಲ್ಲಿ ಒಳ್ಳೆಯ ಏರಿಕೆಯಾಗಿ ತಿಂಗಳಿಗೆ $೩೨೦ ದೊರಕುತ್ತಿತ್ತು. (ಈ ಕಾಲದಲ್ಲಿ ತಿಂಗಳಿಗೆ $೧,೨೦೦-$೧,೫೦೦ ದೊರಕಬಹುದು). ಹೀಗಾಗಿ ಕೈಹಿಡಿತವನ್ನು ಸ್ವಲ್ಪ ಸಡಿಲಿಸಬಹುದಾಗಿ ಆಗಾಗ ಹೊರಗೆ ಸ್ನೇಹಿತರೊಡನೆ ಉಪಾಹಾರಕ್ಕೆ ಹೋಗುತ್ತಿದ್ದೆ. ಆ ಕಾಲದಲ್ಲಿ ಬ್ಯಾಸ್ಕಿನ್ ರಾಬಿನ್ಸಿನಲ್ಲಿ ಐಸ್ ಕ್ರೀಮ್ ಒಂದು ಉಂಡೆಗೆ (scoopಗೆ) ೧೦ ಸೆಂಟು. ಹಾಗೆಯೇ ಹೋಟೆಲುಗಳಲ್ಲಿ ಕಾಫಿ ಕೂಡ ೧೦ ಸೆಂಟಿಗೆ ಒಂದು ಕಪ್ ಕೊಂಡರೆ ಅದನ್ನು ಮತ್ತೆ ಮತ್ತೆ ತುಂಬಿಸುತ್ತಿದ್ದರು. ಈಗ ಅವಕ್ಕೆ ಸುಮಾರು $೨.೦೦ ಆಗುತ್ತದೆ. ಅಲ್ಲದೆ ನನ್ನೊಡನೆ ವಾಸಮಾಡುತ್ತಿದ್ದ ಇನ್ನಿಬ್ಬರು ವಿದ್ಯಾರ್ಥಿಗಳೊಡನೆ ಸೇರಿ ಒಂದು ಕಾರನ್ನು ಕೂಡ ಕೊಂಡುಕೊಂಡಿದ್ದೆ. ಆಗ ಪೆಟ್ರೋಲಿನ ಬೆಲೆ ಒಂದು ಗ್ಯಾಲನ್ನಿಗೆ ಸುಮಾರು $೦.೩೦. ಆಗಾಗ ಪೆಟ್ರೋಲಿನ ಬೆಲೆ $೦.೨೦ ಇದ್ದದ್ದನ್ನೂ ಕಂಡಿದ್ದೆ. (ಈಗಿನ ಬೆಲೆ ಸುಮಾರು $೩.೦೦ ಒಂದು ಗ್ಯಾಲನ್ನಿಗೆ.) ಅಷ್ಟೇ ಅಲ್ಲ, ಪೆಟ್ರೋಲನ್ನು ಕೊಳ್ಳಲು ಹೋದರೆ ಅದನ್ನು ನಾವಾಗಿಯೇ ತುಂಬುತ್ತಿರಲಿಲ್ಲ. ಅಂಗಡಿಯ ಕೆಲಸಗಾರನು ಅದನ್ನು ತುಂಬಿಸಿ, ಕಾರಿನ ಕಿಟಕಿಗಳ ಗಾಜನ್ನು ಶುಭ್ರಮಾಡಿ, ಗಾಜಿನ ಲೋಟಗಳನ್ನೋ, ಸ್ಟ್ಯಾಂಪುಗಳನ್ನೋ ಕೊಡುತ್ತಿದ್ದ. ಈಗ ನ್ಯೂ ಜರ್ಸಿಯನ್ನು ಬಿಟ್ಟು ನಾನು ಹೋಗಿರುವ ಎಲ್ಲ ರಾಜ್ಯಗಳಲ್ಲೂ ನಾವೇ ಪೆಟ್ರೋಲನ್ನು ತುಂಬಿಸಬೇಕು. ನನ್ನ ವಿದ್ಯಾರ್ಥಿ ಜೀವನವನ್ನು ಮುಗಿಸಿ ಕೆಲಸ ಸಿಕ್ಕಿದಮೇಲೆ ಕೊಂಡ ಹೊಚ್ಚಹೊಸ ಕಾರಿನ ಬೆಲೆ $೩,೦೦೦. ಈಗ ಹೊಸಕಾರನ್ನು ಕೊಳ್ಳಲು ಸುಮಾರು $೩೦,೦೦೦ ಆದರೂ ಖರ್ಚು ಮಾಡಬೇಕಾಗುತ್ತದೆ.

೨. ಪ್ರಯಾಣ

ಆ ಕಾಲದಲ್ಲಿ ವಿಮಾನ ಪ್ರಯಾಣಗಳು ಕೆಲವು ವಿಧಗಳಲ್ಲಿ ಬಹಳ ಅನುಕೂಲವಾಗಿರುತ್ತಿದ್ದವು. ನಾನು ಮೊದಲನೆಯ ಬಾರಿ ವಿಮಾನದಲ್ಲಿ ಕುಳಿತು ಪ್ರಯಾಣ ಮಾಡಿದ್ದು ಬೆಂಗಳೂರಿನಿಂದ ಮಿನಿಯಾಪೊಲಿಸ್ಸಿಗೆ. ಈ ಕಾಲದಲ್ಲಿರುವ ಹಾಗೆ ವಿಮಾನದಲ್ಲಿ ಪ್ರಯಾಣಕರು ಕುಳಿತುಕೊಳ್ಳುವಲ್ಲಿ (ಕ್ಯಾಬಿನ್ನಿನಲ್ಲಿ) ಸಾಮಾನುಗಳನ್ನು ಸೀಟಿನ ಕೆಳಗೆ ಅಥವಾ ತಲೆಯ ಮೇಲೆ ಮುಚ್ಚಿಡಬಹುದಾದೆಡೆಯಲ್ಲಿ (ಓವರ್‌ಹೆಡ್ ಬಿನ್ನಿನಲ್ಲಿ) ಮಾತ್ರ ಇಡಬೇಕೆಂಬ ನಿಯಮವಿರಲಿಲ್ಲ. ಆದ್ದರಿಂದ ನನ್ನ ವೀಣೆಯನ್ನು ಕೂಡ ನನ್ನ ಜೊತೆಯಲ್ಲೇ ಒಳಗೆ ತೆಗೆದುಕೊಂಡುಹೋಗಿ ನನ್ನ ತೊಡೆಯ ಮೇಲೆ ಇಟ್ಟುಕೊಂಡು ಪ್ರಯಾಣ ಮಾಡಿದ್ದೆ. ಇದಕ್ಕೆ ನನ್ನೊಡನೆ ಪ್ರಯಾಣ ಮಾಡಿದ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸಿನಲ್ಲಿ ಸಹಪಾಠಿಯಾಗಿದ್ದು ಮಿನೆಸೋಟ ವಿಶ್ವವಿದ್ಯಾಲಯದಲ್ಲಿಯೂ ಸಹಪಾಠಿಯಾಗಲಿದ್ದ ಮತ್ತು ನನ್ನ ಪಕ್ಕದಲ್ಲೇ ಕುಳಿತು ಪ್ರಯಾಣ ಮಾಡಿದ ಶ್ರೀ ಗುರುರಾಜರವರ ಸಹಾಯವೂ ಇತ್ತು. ಅದಕ್ಕಾಗಿ ನಾನು ಇಂದಿಗೂ ಕೃತಜ್ಞನಾಗಿದ್ದೇನೆ.

ಪ್ರಯಾಣಿಕರನ್ನು ಆ ಕಾಲದಲ್ಲಿ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಈಗಿನಂತೆ ಆತಂಕವಾದಿಗಳ ಭಯವಿರಲಿಲ್ಲವಾದ್ದರಿಂದ ಸಾಮಾನುಗಳನ್ನು ಎಕ್ಸ್-ರೇ ಮೂಲಕ ಕಳುಹಿಸುತ್ತಿರಲ್ಲ. ಮನುಷ್ಯರನ್ನು ಎಕ್ಸ್-ರೇ ಮೂಲಕ ಕಳುಹಿಸಿಯೂ ಮತ್ತು ಮೈತಡವಿಯೂ ನೋಡುತ್ತಿರಲಿಲ್ಲ. ಜನಗಳನ್ನು ನಂಬಬಹುದಾಗಿತ್ತು. ಈ ಕಾಲದಲ್ಲಿ, ಅದರಲ್ಲೂ ಸೆಪ್ಟೆಂಬರ್ ೧೧, ೨೦೦೧ರಲ್ಲಿ ಈ ದೇಶದಲ್ಲಿ ಆತಂಕವಾದಿಗಳು ವಿಮಾನಗಳನ್ನು ಉಪಯೋಗಿಸಿ ವಿನಾಶಕಾರಿ ಘಟನೆಗಳನ್ನು ನಡೆಸಿದ ನಂತರ ಜನರಲ್ಲಿ ಭಯ ಬಹಳ ಹೆಚ್ಚಾಗಿದೆ. ವಿಮಾನ ಪ್ರಯಾಣಕ್ಕಾಗಿ ನಿಲ್ದಾಣಗಳಿಗೆ ಸುಮಾರು ಎರಡು ಗಂಟೆಗಳ ಮುಂಚೆಯೇ ಹೋಗಬೇಕು. ಸುರಕ್ಷೆಯ ಪಂಕ್ತಿಗಳಲ್ಲಿ ನಿಂತು ನಮ್ಮ ಚಿತ್ರಗಳನ್ನುಳ್ಳ ಸರ್ಕಾರೀ ಪರಿಚಯಪತ್ರಗಳನ್ನು ತೋರಿಸಿ, ಕೋಟು-ಜ್ಯಾಕೆಟ್ ಮುಂತಾದ ಮೇಲುಡುಪುಗಳನ್ನು, ಬೆಲ್ಟು, ಪಾದರಕ್ಷೆಗಳು, ಮತ್ತು ಬೇರೆಯೇನಾದರೂ ಲೋಹಸಾಮಗ್ರಿಗಳನ್ನು ಧರಿಸಿದ್ದರೆ ಅವುಗಳನ್ನೂ ಬಿಚ್ಚಿ, ಗಣಕಯಂತ್ರಗಳಿದ್ದರೆ ಅವನ್ನು ಬೇರೆಯಾಗಿ ತೆಗೆದಿಟ್ಟು, ದ್ರವಪದಾರ್ಥಗಳಿದ್ದರೆ (ಅದೂ ಪ್ರತಿಯೊಂದೂ ಮೂರು ಔನ್ಸಿಗಿಂತ ಕಡಿಮೆ ಇರಬೇಕು ಮತ್ತು ಇಟ್ಟಿರುವ ಬಾಟ್ಲುಗಳೆಲ್ಲಾ ಒಂದೇ ಒಂದು ಚಿಕ್ಕ ಪ್ಲ್ಯಾಸ್ಟಿಕ್ ಚೀಲದಲ್ಲಿ ಹಿಡಿಸಬೇಕು) ಅವನ್ನು ಕೂಡ ಬೇರೆಯಾಗಿ ತೆಗೆದಿಟ್ಟು, ಜೇಬುಗಳನ್ನೆಲ್ಲಾ ಖಾಲಿಯಾಗಿಸಿ, ಇವೆಲ್ಲವನ್ನೂ ಎಕ್ಸ್-ರೇ ಮೂಲಕ ಮುಂದೆ ಕಳುಹಿಸಿ, ನಂತರ ನಾವೂ ಎಕ್ಸ್-ರೇ ಅಥವಾ ಸಂಪೂರ್ಣ ದೇಹ-ಚಿತ್ರಕ-ಯಂತ್ರದ ಮೂಲಕ ನಡೆದುಹೋಗಿ, ಇಷ್ಟೆಲ್ಲ ಆದರೂ ಕೆಲವೊಮ್ಮೆ ಮೈತಡವಿಸಿಕೊಂಡು ಪುನಃ ನಮ್ಮ ಸಾಮಾನುಗಳನ್ನೆಲ್ಲ ಶೇಖರಿಸಿಕೊಂಡು 'ಉಸ್ಸಪ್ಪಾ, ಈ ಸಾರಿ ಗೆದ್ದುಕೊಂಡೆ' ಎಂದು ನಿಟ್ಟುಸಿರುಬಿಟ್ಟು ವಿಮಾನವನ್ನೇರುವ ದ್ವಾರದ ಕಡೆಗೆ ಕಾಲೆಳೆಯಬೇಕು. ಒಮ್ಮೊಮ್ಮೆಯಂತೂ

ಸುರಕ್ಷೆಯ ಪಂಕ್ತಿ ಈ ಹಿಂದಿನ ವಾಕ್ಯದಂತೆಯೇ ಬಹಳ ಉದ್ದವಾಗಿರುತ್ತದೆ! ಇದೆಲ್ಲಾ ಆದಮೇಲೂ ಒಮ್ಮೊಮ್ಮೆ ವಿಮಾನವನ್ನು ಹತ್ತುವ ಕೆಲವೇ ಕ್ಷಣಗಳ ಮುಂಚೆ ಕೆಲವರನ್ನು ಪಂಕ್ತಿಯಿಂದ ಹೊರಕ್ಕೆಳೆದು ಮತ್ತೊಮ್ಮೆ ಪರೀಕ್ಷಿಸಿ ಮುಂದೆ ಕಳುಹಿಸುತ್ತಾರೆ.

ಆ ಕಾಲದಲ್ಲಿ ವಿಮಾನಗಳನ್ನು ನಡೆಸುವ ಏರ್ ಇಂಡಿಯಾ, ಪ್ಯಾನ್ ಆಮ್, ಟಿ. ಡಬ್ಲ್ಯು. ಎ., ಇತ್ಯಾದಿ ಸಂಸ್ಥೆಗಳಿಗೆ ಲಾಭ ಚೆನ್ನಾಗಿತ್ತೇನೋ, ಆದ್ದರಿಂದ ಜಿಪುಣತನ ತೋರದೆ ಪ್ರಯಾಣಿಕರಿಗೆ ಊಟ ಚೆನ್ನಾಗಿ ಕೊಡುತ್ತಿದ್ದರು. ಅಮೆರಿಕದ ದೇಶದೊಳಗಿನ ಪ್ರಯಾಣಗಳಲ್ಲಿ ಕೂಡ ಪ್ರಯಾಣಕ್ಕೆ ಮುಂಚೆ ಹೇಳಿದ್ದಲ್ಲಿ ಶಾಖಾಹಾರಿ ಊಟಗಳನ್ನು ಕೊಡುತ್ತಿದ್ದರು. ಇತ್ತೀಚಿನ ದಶಕಗಳಲ್ಲಿ ಅನೇಕ ಹೆಸರಾಂತ ವೈಮಾನಿಕ ಸಂಸ್ಥೆಗಳು ದಿವಾಳಿಯಾಗಿ ಕೆಲವೇ ಜೀವಸಹಿತ ಉಳಿದುಕೊಂಡಿವೆ. ಹೀಗಾಗಿ ಪ್ರಯಾಣಿಕರ ವ್ಯವಸ್ಥೆಗಳಲ್ಲಿ ದುರವಸ್ಥೆ ಬಂದಿದೆ. ಮೇಲೆ ಹೇಳಿದ ಕಷ್ಟಗಳಲ್ಲದೆ ಸಂಸ್ಥೆಗಳು ಹಾರಿಸುವ ವಿಮಾನಗಳ ಸಂಖ್ಯೆಗಳು ಸ್ವಲ್ಪ ಕಡಿಮೆಯಾಗಿ, ಪ್ರಯಾಣಿಕರ ಸಂಖ್ಯೆಯೂ ಹೆಚ್ಚಾಗಿ, ಯಾವ ವಿಮಾನದಲ್ಲಿಯಾದರೂ ಒಂದು ಸೀಟೂ ಖಾಲಿಯಿಲ್ಲದಂತೆ ತುಂಬಿರುತ್ತಾರೆ. ಕೆಲವೊಮ್ಮೆ ಇರುವ ಸೀಟುಗಳಿಗಿಂತ ಹೆಚ್ಚು ಟಿಕೆಟ್ಟುಗಳನ್ನು ಮಾರಿ, 'ಪ್ರಯಾಣಿಕರೇ, ನಿಮ್ಮಲ್ಲಿ ಯಾರಾದರೂ ದಯವಿಟ್ಟು ಈ ವಿಮಾನವನ್ನು ಏರದಿದ್ದರೆ ನಿಮಗೆ ಬಹುಮಾನಗಳನ್ನು ಕೊಡುತ್ತೇವೆ. ನಿಮ್ಮ ಊಟದ ಖರ್ಚನ್ನು ಕೊಡುತ್ತೇವೆ. ಇನ್ನು ಮೂರುಗಂಟೆಗಳೊಳಗೆ ಹೊರಡುವ ಮತ್ತೊಂದು ವಿಮಾನದಲ್ಲಿ ನಿಮ್ಮನ್ನು ಕೂರಿಸುತ್ತೇವೆ. ಮುಂದಿನ ವರ್ಷದಲ್ಲಿ ಯಾವಾಗಲಾದರೂ ಈ ದೇಶದಲ್ಲಿ ಎಲ್ಲಿಗಾದರೂ ನಮ್ಮ ವಿಮಾನಗಳಲ್ಲಿ ಬಿಟ್ಟಿ ಪ್ರಯಾಣಮಾಡಿ ನಿಮ್ಮ ಊರಿಗೆ ಹಿಂತಿರುಗಬಹುದು' ಎಂದೆಲ್ಲ ಹೇಳಿ ಕೆಲವು ಜನರನ್ನು ವಿಮಾನವನ್ನೇರದೆ ನಿಲ್ಲುವಂತೆ ಪ್ರಚೋದಿಸುತ್ತಾರೆ. ಈ ಕಾಲದಲ್ಲಿ ಶಾಖಾಹಾರಿ ಊಟವಿರಲಿ ಯಾವ ಊಟವೂ ಸಿಗುವುದಿಲ್ಲ. ನಾವೇ ವಿಮಾನವನ್ನೇರುವ ಮುಂಚೆ ಊಟವನ್ನು ಕೊಂಡು ತೆಗೆದುಕೊಂಡು ಹೋಗಬೇಕು ಅಥವಾ ವಿಮಾನದಲ್ಲಿ ಚಿಕ್ಕ ಕಾಗದದ ಪೆಟ್ಟಿಗೆಗಳಲ್ಲಿಟ್ಟು ಮಾರುವ (ಸ್ನ್ಯಾಕ್ ಬಾಕ್ಸ್) ತಿಂಡಿಗಳನ್ನು ತಿನ್ನಬೇಕು. ಎರಡು ಗಂಟೆಗಳ ಪ್ರಯಾಣವಾದರೆ ಆ ರೀತಿಯ ಊಟಗಳೂ ಸಿಕ್ಕುವುದಿಲ್ಲ. ಒಂದೆರಡು ಕಡಲೆಕಾಯಿ ಮತ್ತು ಕುಡಿಯಲು ನೀರೋ, ಕಾಫಿಯೋ, ಚಹವೋ ಸಿಗುತ್ತವೆ ಅಷ್ಟೆ (ಹಣ ಕೊಟ್ಟರೆ ಹಿಂದಿನ ಕಾಲದಂತೆಯೇ ಈಗಲೂ ಮದ್ಯವನ್ನು ಕೊಳ್ಳಬಹುದು).

ಆ ಕಾಲದಲ್ಲಿಯೂ ಅಂತಾರಾಷ್ಟ್ರೀಯ ವಿಮಾನ ಪ್ರಯಾಣಗಳಲ್ಲಿ ನಾವು ತೆಗೆದುಕೊಂಡುಹೋಗಬಹುದಾದ ಪೆಟ್ಟಿಗೆಗಳ ತೂಕಕ್ಕೆ ಮಿತಿಯಿರುತ್ತಿತ್ತು. ಆದರೆ ಅಮೆರಿಕದಲ್ಲಿ ದೇಶದೊಳಗೆ ನಡೆಸುವ ವಿಮಾನ ಪ್ರಯಾಣಗಳಲ್ಲಿ ಆ ರೀತಿಯ ಮಿತಿಯಿರುತ್ತಿರಲಿಲ್ಲ. ಅಲ್ಲದೆ ಅಮೆರಿಕದಿಂದ ಹೊರದೇಶಗಳಿಗೆ ಪ್ರಯಾಣ ಮಾಡುವಾಗ ತೂಕದ ಮಿತಿಯು ಒಂದೊಂದು ಪೆಟ್ಟಿಗೆಗೂ ೭೦ ಪೌಂಡು. ಪ್ರತಿಯೊಬ್ಬ ಪ್ರಯಾಣಿಕರಿಗೆ ಎರಡು ಪೆಟ್ಟಿಗೆಗಳ ಮಿತಿ. ಈ

ಮಿತಿಗಳನ್ನು ಮೀರಿದರೆ ಎಕ್ಸೆಸ್ ಬ್ಯಾಗೇಜ್ ಫೀ ಎಂದು ಹಣವನ್ನು ಸಂದಾಯ ಮಾಡಬೇಕಾಗುತ್ತಿತ್ತು. ಹೀಗಿದ್ದು ಭಾರತಕ್ಕೆ ಪ್ರಯಾಣಮಾಡುವಾಗಲೆಲ್ಲ ಬಂಧುಮಿತ್ರರಿಗೆ ಅನೇಕ ಉಡುಗೊರೆಗಳನ್ನು ತೆಗೆದುಕೊಂಡು ಹೋಗುವ ಮತ್ತು ಅಲ್ಲಿಂದ ಹಿಂದಿರುಗುವಾಗ ನಾನಾ ತಿಂಡಿಗಳನ್ನೂ ಅನೇಕ ವಿಧವಾದ ಅಡಿಗೆಗಳಿಗೆ ಬಳಸುವ ಪುಡಿಗಳನ್ನೂ ತೆಗೆದುಕೊಂಡು ಬರುವ ಅವಕಾಶವಿರುತ್ತಿತ್ತು (ಅಭ್ಯಾಸವೂ ಇತ್ತು - ಎತ್ತಲು ಕೈಯಲ್ಲಾಗದಿದ್ದರೂ ಹೇಗಾದರೂ ಕಷ್ಟಪಟ್ಟು ಜನಗಳು ತೆಗೆದುಕೊಂಡೇ ಹೋಗುತ್ತಿದ್ದರು ಎಂದಿಟ್ಟುಕೊಳ್ಳಿ). ಈಗ ಈ ದೇಶದೊಳಗಿನ ಪ್ರಯಾಣಗಳಲ್ಲೇ ಒಂದು ಪೆಟ್ಟಿಗೆಗೆ ೫೦ ಪೌಂಡಿನ ಮಿತಿಯಿದೆ. ಅಲ್ಲದೆ ಅನೇಕ ವೈಮಾನಿಕ ಸಂಸ್ಥೆಗಳು (ಉದಾಹರಣೆಗೆ ಯುನೈಟೆಡ್ ಏರ್ಲೈನ್ಸ್) ಮೊದಲನೆಯ ಪೆಟ್ಟಿಗೆಯನ್ನು ವಿಮಾನದ ಹೊಟ್ಟೆಯಲ್ಲಿಡಲು $೨೫ ಮತ್ತು ಎರಡನೆಯದಕ್ಕೆ $೩೫ ತೆಗೆದುಕೊಳ್ಳುತ್ತವೆ. ಎರಡಕ್ಕೆ ಹೆಚ್ಚಾದ ಅಥವಾ ಅಧಿಕವಾದ ತೂಕವುಳ್ಳ ಪೆಟ್ಟಿಗೆಗಳಾದರಂತೂ ಅಸಾಧ್ಯ ಬೆಲೆಯಾಗುತ್ತದೆ.

ಆ ಕಾಲದಲ್ಲಿ ವೈಮಾನಿಕ ಸಂಸ್ಥೆಗಳು ಪೈಪೋಟಿಗೋಸ್ಕರ ಅನೇಕ ಸೌಕರ್ಯಗಳನ್ನು ಮಾಡಿಕೊಡುತ್ತಿದ್ದರು. ಉದಾಹರಣೆಗೆ ಅಂತಾರಾಷ್ಟ್ರೀಯ ಪ್ರಯಾಣ ಮಾಡುವಾಗ ಯಾವುದಾದರೂ ಊರಿನಲ್ಲಿ ವಿಮಾನವನ್ನು ಬದಲಾಯಿಸಬೇಕಿದ್ದು ಅದಕ್ಕೆ ಅನೇಕ ಗಂಟೆಗಳ ಕಾಲ ಕಾಯಬೇಕಾಗಿದ್ದರೆ ಕಾಯುವಾಗ ಇರುವ ಸ್ಥಳದ ಮತ್ತು ಊಟದ ವ್ಯವಸ್ಥೆಯನ್ನೂ ವೈಮಾನಿಕ ಸಂಸ್ಥೆಯವರೇ ನಿಭಾಯಿಸುತ್ತಿದ್ದರು. ಅದಕ್ಕಾಗಿ ಪ್ರಯಾಣಿಕರಿಗೆ ಕೂಪನ್ನುಗಳನ್ನು ಕೊಡುತ್ತಿದ್ದರು. ಒಂದು ಸಂಸ್ಥೆಯ ವಿಮಾನದಲ್ಲಿ ಒಂದು ಊರಿಗೆ ಹೋಗಿ ಅಲ್ಲಿಂದ ಮುಂದಿನ ಪ್ರಯಾಣವನ್ನು ಮತ್ತೊಂದು ಸಂಸ್ಥೆಯ ವಿಮಾನದಲ್ಲಿ ಮುಂದುವರಿಸಿದರೆ ಒಮ್ಮೊಮ್ಮೆ ಸುಮಾರು ೨೩ ಗಂಟೆಗಳ ಸಮಯ ಸಿಗುತ್ತಿತ್ತು ಮತ್ತು ಸ್ವಲ್ಪ ಊರನ್ನು ಸುತ್ತಿ ದೃಶ್ಯಗಳನ್ನು ನೋಡುವ ಅವಕಾಶವೂ ದೊರಕುತ್ತಿತ್ತು. ಅನೇಕ ವರ್ಷಗಳ ಹಿಂದೆ ವಿಶೇಷವಾದ 'ಸೇಲಿನಲ್ಲಿ' ನ್ಯೂಯಾರ್ಕಿನಿಂದ ಮುಂಬಯಿಗೆ ಹೋಗಿ ಹಿಂದಿರುಗಲು ಟಿಕೆಟ್ಟಿನ ಬೆಲೆ ಕೇವಲ $೩೫೦ ಆಗಿತ್ತು (ಅದೂ ಪೆಟ್ರೋಲಿಗೆ ಒಂದು ಗ್ಯಾಲನ್ನಿಗೆ ೨೫ ಸೆಂಟಾಗಿದ್ದ ಕಾಲದಲ್ಲಿ). ಆ ರೀತಿಯ ಬೆಲೆಗಳನ್ನು ಕಾಣುವುದು ಈ ದಿನಗಳಲ್ಲಿ ಕೇವಲ ಕನಸಿನಲ್ಲಿಯೇ!

೩. ಜನಸಂಪರ್ಕ

ಆ ಕಾಲದಲ್ಲಿ ಬೆಂಗಳೂರಿನಲ್ಲಿ ನಾನು ವಾಸಿಸುತ್ತಿದ್ದಾಗ ಯಾರ ಮನೆಗಳಲ್ಲೂ ಸಾಮಾನ್ಯವಾಗಿ ಫೋನುಗಳು ಇರುತ್ತಿರಲಿಲ್ಲ. ಫೋನು ಬೇಕಾಗಿದ್ದರೆ ಅದಕ್ಕೆ ಅರ್ಜಿ ಸಲ್ಲಿಸಿ ಎರಡು-ಮೂರು ವರ್ಷಗಳು ಕಾಯಬೇಕಾಗಿತ್ತು. ಅದರಲ್ಲೂ ವೈದ್ಯರು ಮೊದಲಾದವರಿಗೆ ಅತ್ಯಗತ್ಯವಾಗಿದ್ದುದರಿಂದ ಅಂತಹ ಉದ್ಯೋಗದವರಿಗೆ ಮೊದಲು ಕೊಟ್ಟು ಅನಂತರ ಇತರರಿಗೆ ಕೊಡುತ್ತಿದ್ದರು. ನಮ್ಮ ತಂದೆಯವರು ವೈದ್ಯರಾಗಿದ್ದುದರಿಂದ ನಮ್ಮ ಮನೆಯಲ್ಲಿ

ಫೋನ್ ಇತ್ತು. ಅದರಿಂದ ನಮ್ಮ ಮನೆಯ ಹತ್ತಿರ ವಾಸಿಸುತ್ತ ಅನೇಕರು ಆಗಾಗ ನಮ್ಮ ಮನೆಗೆ ಬಂದು ಫೋನನ್ನು ಉಪಯೋಗಿಸುತ್ತಿದ್ದರು. ನಮ್ಮ ಮನೆಯಲ್ಲೂ, ನಮ್ಮ ತಂದೆಯವರ ಚಿಕಿತ್ಸಾಲಯದಲ್ಲೂ ಫೋನುಗಳಿದ್ದರೂ ಫೋನಿನಲ್ಲಿ ಮಾತನಾಡುವಾಗ ಚೆನ್ನಾಗಿ ಕೇಳಿಸುತ್ತಿರಲಿಲ್ಲ. ಬಹಳ ಜೋರಾಗಿಯೇ ಮಾತನಾಡಬೇಕಿತ್ತು (ಮನೆಗೂ ಚಿಕಿತ್ಸಾಲಯಕ್ಕೂ ಕೇವಲ ಎರಡೇ ಮೈಲಿಗಳಿದ್ದಿದ್ದರಿಂದ ಫೋನಿನಲ್ಲಿ ಮಾತಾಡುವಷ್ಟೇ ಜೋರಾಗಿ ಮಾತಾಡಿದರೆ ಫೋನಿಲ್ಲದೆಯೇ ಕೇಳಿಸುತ್ತಿತ್ತೇನೋ!).

ಫೋನ್ ಸಂಪರ್ಕದ ಪರಿಸ್ಥಿತಿ ಹಾಗಿದ್ದುದರಿಂದ ಜನಗಳು ಇನ್ನೊಬ್ಬರ ಮನೆಗೆ ಹೋಗುವುದಕ್ಕೆ ಮುಂಚೆ ಫೋನ್ ಮಾಡಿ ತಿಳಿಸಿ ಹೋಗುವ ಅಭ್ಯಾಸವಿರಲಿಲ್ಲ. ಅನೌಪಚಾರಿಕವಾಗಿ ಯಾರಾದರೂ ಯಾವಾಗಲಾದರೂ ಮನೆಗೆ ಬರುತ್ತಿದ್ದರು. ನಾವೂ ಹಾಗೇ ಹೋಗುತ್ತಿದ್ದೆವು. ಈ ಪ್ರಕಾರ ಸ್ನೇಹಸಂಬಂಧಗಳು ಮುಖಾಮುಖಿ ಹೆಚ್ಚಾಗಿ ಬೆಳೆಯುತ್ತಿದ್ದವು. ಬಂದುಹೋದವರಿಗೆಲ್ಲ ಆತಿಥ್ಯ (ಕಾಫಿ, ತಿಂಡಿ ಅಥವಾ ಊಟದ ಸಮಯಕ್ಕೆ ಬಂದರೆ ಊಟ) ಚೆನ್ನಾಗಿ ನಡೆಯುತ್ತಿತ್ತು.

ಈ ದೇಶಕ್ಕೆ ವಿದ್ಯಾರ್ಥಿಯಾಗಿ ನನ್ನ ಸಹಪಾಠಿ ಶ್ರೀ ಗುರುರಾಜರವರೊಡನೆ ಪ್ರಯಾಣ ಮಾಡಿದ ವಿಷಯವನ್ನು ಮೇಲೆ ಹೇಳಿದ್ದೇನೆ. ಆಗ ಮಿನೆಸೋಟ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಡಾ. ಕುಮಾರ್ ಅವರು ನಮಗೆ ಆ ಊರಿನಲ್ಲಿ ನೆಲೆಸುವುದಕ್ಕೆ ಬಹಳ ಸಹಾಯ ಮಾಡಿದರು. ತಮ್ಮ ಕಾರಿನಲ್ಲೇ ನಮ್ಮನ್ನು ವಿಮಾನ ನಿಲ್ದಾಣದಿಂದ ತಮ್ಮ ಮನೆಗೆ ಕರೆದುಕೊಂಡು ಹೋಗಿ ಕೆಲವು ದಿನ ಅಲ್ಲೇ ವಾಸಿಸಿರಲು ಅವಕಾಶ ಕೊಟ್ಟು ನಮ್ಮ ಮೊದಲನೆಯ ಅಪಾರ್ಟ್‌ಮೆಂಟನ್ನು ಹುಡುಕಿಕೊಟ್ಟಿದ್ದರು. ಹಾಗೆ ನಾವು ಅಪಾರ್ಟ್‌ಮೆಂಟಿಗೆ ವರ್ಗಾಯಿಸಿದ ತಕ್ಷಣ ನಾವು ಅಲ್ಲಿ ಫೋನ್ ಒಂದನ್ನು ಇಟ್ಟುಕೊಳ್ಳಬೇಕು ಎಂದೂ ಹೇಳಿದರು. ಆಗ ನಮಗೆ ಭಾರತದ ಫೋನಿನ ಕ್ರಮಗಳೇ ತಿಳಿದಿದ್ದು ಈ ದೇಶದ ಸೌಕರ್ಯಗಳ ಪರಿಚಯವಿರಲಿಲ್ಲ. ಆದ್ದರಿಂದ ವಿದ್ಯಾರ್ಥಿಗಳಾಗಿದ್ದ ನಮಗೆ ಈ ಫೋನಿನ ರಾಜಭೋಗ ಅನುಚಿತವಲ್ಲವೇ ಎಂದೇ ಮನಸ್ಸಿಗೆ ಬಂದಿತ್ತು. ಆದರೂ ಅವರು ಈ ದೇಶದಲ್ಲಿ ವಾಸಮಾಡುವುದಕ್ಕೆ ಫೋನ್ ಇದ್ದರೇ ಸೌಕರ್ಯ. ಅಷ್ಟೇನೂ ಬೆಲೆಯಿಲ್ಲ, ಇಟ್ಟುಕೊಳ್ಳಿ ಪರವಾಗಿಲ್ಲ ಎಂದು ಒತ್ತಾಯ ಮಾಡಿದರು. ಆದ್ದರಿಂದ ಫೋನನ್ನು ಇಟ್ಟುಕೊಂಡೆವು. ಕ್ರಮೇಣ ಅದನ್ನು ಅನೇಕ ಕೆಲಸಗಳಿಗೆ ಉಪಯೋಗಿಸುವುದನ್ನೂ ಅಭ್ಯಾಸ ಮಾಡಿಕೊಂಡೆವು. ಚಳಿಗೆ ಬಹಳ ವಿಖ್ಯಾತವಾದ ಆ ದೇಶದಲ್ಲಿ ಚಳಿಗಾಲದಲ್ಲಿ ಅಲ್ಲಿದ್ದ ದೂರದರ್ಶನ ಪ್ರಸ್ತಾರ ಕೇಂದ್ರಕ್ಕೆ ಪ್ರತಿದಿನವೂ ಎರಡು ಮೂರು ಸಲ ಫೋನ್ ಮಾಡಿ ಆಗಿನ ಉಷ್ಣತೆಯೆಷ್ಟು ಎಂದು ಕೇಳಿ ತಿಳಿದುಕೊಳ್ಳುತ್ತಿದ್ದೆವು. ಆ ಕಾಲದಲ್ಲಿ ಫೋನ್ ಮಾಡಿದಾಗ ಯಾರಾದರೂ ಮನುಷ್ಯರೇ ನಮ್ಮೊಡನೆ ಮಾತಾಡಿ ಉಷ್ಣತೆಯೆಷ್ಟು ಎಂದು ಹೇಳಿ ನಮಗೇ ಅವರು ಉಪಕಾರ ಮಾಡಿದ್ದರೂ ಫೋನ್ ಮಾಡಿದ್ದಕ್ಕಾಗಿ ನಮಗೇ ಧನ್ಯವಾದ ಹೇಳುತ್ತಿದ್ದರು.

ಮಿನಿಯಾಪೊಲಿಸ್ಸಿಗೆ ಹೋಗಿ ಎರಡು ವರ್ಷಗಳಾದ ಮೇಲೆ ಒಂದು ಸಲ ಬೆಂಗಳೂರಿಗೆ ಫೋನ್ ಮಾಡಿ ನಮ್ಮ ತಂದೆ ತಾಯಿ ಮತ್ತು ಇತರ ಬಂಧುಗಳೊಡನೆ ಮಾತಾಡಬೇಕೆಂಬ ಆಸೆಯಾಯಿತು. ಅದಕ್ಕೆ ಫೋನ್ ಸಂಸ್ಥೆಯೊಡನೆ ೨೪ ಗಂಟೆಗಳ ಮುಂಚೆಯೇ ಸಮುದ್ರದಾಚೆಯ ಫೋನ್ ಕಾಲ್ ಎಂದು 'ಬುಕ್' ಮಾಡಬೇಕಾಯಿತು. ಅವರು ಹೇಳಿದ್ದರು 'ಕೆಲವು ಸಲ ಸಂಪರ್ಕ ಲಂಡನ್ ಕಡೆಯಿಂದ ದೊರಕುತ್ತದೆ. ಇನ್ನು ಕೆಲವು ಸಲ ಆಸ್ಟ್ರೇಲಿಯದ ಕಡೆಯಿಂದ. ಇದೆಲ್ಲ ಕಡಲಿನಡಿಯಲ್ಲಿರುವ ತಂತಿಗಳ ಮೂಲಕ' ಎಂದು. ಹಾಗೆ ಸುಮಾರು ೨೪ ಗಂಟೆಗಳು ಕಾದ ನಂತರ ಆಸ್ಟ್ರೇಲಿಯದ ಕಡೆಯಿಂದ ಸಂಪರ್ಕ ಸಿಕ್ಕಿತು. ಮನೆಯಲ್ಲಿದ್ದವರೆಲ್ಲ ಒಂದು ಸಲ ಹಲೋ ಎಂದು ಕಿರುಚಿ ನಾನೂ ಅನೇಕ ಬಾರಿ ಹಲೋ ಎಂದು ಕಿರುಚಿ ಪರಸ್ಪರ ಯೋಗಕ್ಷೇಮ ಹೇಳುವ ಹೊತ್ತಿಗೆ ಸುಮಾರು ೧೫ ನಿಮಿಷಗಳಾದವು. ಅದರ ಮುಂದಿನ ತಿಂಗಳ ಬಿಲ್ಲಿನಲ್ಲಿ ನೋಡಿದರೆ ಆ ಒಂದು ಫೋನ್ ಕಾಲಿಗೇ $೯೦ ಎಂದು ಹಾಕಿದ್ದರು!

ಈ ದೇಶದೊಳಗಿನ ಇತರ ಪಟ್ಟಣಗಳಿಗೆ ಫೋನ್ ಮಾಡುವುದಕ್ಕೂ ಹೆಚ್ಚಾದ ಬೆಲೆಯನ್ನೇ ಕೊಡಬೇಕಾಗಿತ್ತು. ಉದಾಹರಣೆಗೆ ೧೯೭೦ರಲ್ಲಿ ಪೂರ್ವತೀರದಿಂದ ಪಶ್ಚಿಮತೀರಕ್ಕೆ ಶನಿವಾರ ಭಾನುವಾರ ಫೋನ್ ಮಾಡುವುದಕ್ಕೆ ಕನಿಷ್ಠಪಕ್ಷ ೭೦ ಸೆಂಟುಗಳು (ಮೂರು ನಿಮಿಷ ಉಪಯೋಗಿಸುವುದಕ್ಕೆ). ಅದಕ್ಕೇ ೧೯೧೫ರಲ್ಲಿ $೨೦ ಆಗುತ್ತಿತ್ತಂತೆ!

ಈ ಕಾಲಕ್ಕೂ ಆ ಕಾಲಕ್ಕೂ ಸಂಪರ್ಕವಿಧಾನಗಳಲ್ಲಿ ಮತ್ತು ಅವುಗಳ ಬೆಲೆಗಳಲ್ಲಿ ಅಜಗಜಾಂತರ. ಈಗ ಭಾರತದಲ್ಲಿ ಎಲ್ಲೆಲ್ಲಿ ಹೋದರೂ ಜೋಪಡಿಯಲ್ಲಿ ವಾಸ ಮಾಡುವವರಾಗಲಿ, ರಸ್ತೆಯಲ್ಲಿ ತರಕಾರಿ ಮಾರುವವರಾಗಲಿ, ದೊಡ್ಡ ಬಂಗಲೆಗಳಲ್ಲಿ ವಾಸಿಸುವವರಾಗಲಿ ಎಲ್ಲರೂ ಸೆಲ್‌ಫೋನುಗಳನ್ನಿಟ್ಟುಕೊಂಡೇ ಓಡಾಡುತ್ತಿರುತ್ತಾರೆ. (ಆದರೆ ಅವನ್ನು ಅಲ್ಲಿ ಮೋಬೈಲ್ ಎಂದು ಕರೆಯುತ್ತಾರೆ.) ಈ ದೇಶದಲ್ಲೂ ಎಲ್ಲರೂ ಮನೆಯ ಫೋನುಗಳೊಂದಿಗೆ ಸೆಲ್‌ಫೋನುಗಳನ್ನೂ ಇಟ್ಟುಕೊಂಡಿರುತ್ತಾರೆ. ಮನೆಯ ಪ್ರತಿಯೊಬ್ಬರ ಹತ್ತಿರವೂ ಒಂದು (ಕೆಲವರ ಹತ್ತಿರ ಎರಡೋ ಮೂರೋ) ಫೋನುಗಳಿರುತ್ತವೆ. ಮನೆಯ ಫೋನುಗಳಲ್ಲೂ ಸೆಲ್‌ಫೋನುಗಳಲ್ಲೂ ತಿಂಗಳ ಬಾಡಿಗೆಗೆ ದೇಶದೊಳಗಿನ ಯಾವ ಫೋನಿಗಾದರೂ ಮಿತಿಯಿಲ್ಲದಷ್ಟು ನಿಮಿಷಗಳು ಮಾತಾಡಬಹುದು. ಭಾರತಕ್ಕೆ ಫೋನಿನಲ್ಲಿ ಮಾತಾಡಲು ನಿಮಿಷಕ್ಕೆ ೨ ಸೆಂಟಿನಷ್ಟೇ ಬೆಲೆಯೆಂದು ಇಂದು ತಾನೇ ಜಾಹೀರಾತನ್ನು ನೋಡಿದ್ದೇನೆ. ಅಲ್ಲದೆ ಗಣಕಯಂತ್ರಗಳಿದ್ದಲ್ಲಿ ಮ್ಯಾಜಿಕ್ ಜ್ಯಾಕ್ ಅಥವಾ ಸ್ಕೈಪ್ ಇತ್ಯಾದಿ ಮಾರ್ಗಗಳಿಂದ ಬಿಟ್ಟಿಯಾಗಿಯೇ ಮಾತಾಡಬಹುದು. ವಿದ್ಯುತ್ಸಂದೇಶಗಳನ್ನು (ಅಂದರೆ ಈ-ಮೇಲ್ಗಳನ್ನು) ಬಿಟ್ಟಿಯಾಗಿ ಅನಿಮಿತವಾಗಿ ಕಳುಹಿಸಬಹುದು. ಹಿಂದಿನ ಕಾಲದಲ್ಲಿ ರಾಜಭೋಗವೆನ್ನಿಸುತ್ತಿದ್ದ ಫೋನುಗಳು ಈಗ ಅತ್ಯವಶ್ಯಕ ಸಲಕರಣೆಗಳಾಗಿವೆ. ಜಗವೇ ಪುಟ್ಟದಾಗಿದೆ. ಜನಗಳೊಡನೆ ಸಂಪರ್ಕವಿಟ್ಟುಕೊಳ್ಳುವ ಮನೋಭಾವಕ್ಕೆ ಕುಂದಿರಬಹುದು ಆದರೆ ಸಲಕರಣೆಗಳಿಗೇನೂ ಕೊರತೆಯಿಲ್ಲ.

೪. ಮೈತ್ರಿ

ಇಲ್ಲಿಯ ವಿಶ್ವವಿದ್ಯಾಲಯಗಳಿಗೆ ಅರ್ಜಿ ಸಲ್ಲಿಸುವುದಕ್ಕೆ ಆ ಕಾಲದಲ್ಲಿ ಭಾರತದಲ್ಲಿ ಸ್ವಲ್ಪ ಕಷ್ಟವಾಗಿತ್ತು. ರಿಜರ್ವ್ ಬ್ಯಾಂಕಿನಿಂದ ಹೆಚ್ಚು ರೂಪಾಯಿಗಳನ್ನು ಡಾಲರುಗಳಾಗಿ ಮಾರ್ಪಡಿಸುವುದಕ್ಕೆ ಅನುಮತಿಯನ್ನು ಕೊಡುತ್ತಿರಲಿಲ್ಲ. ಆದ್ದರಿಂದ ಅರ್ಜಿಶುಲ್ಕವನ್ನು ಕೊಡುವುದಕ್ಕೆ ನನಗಿಂತ ಇಲ್ಲಿಗೆ ಒಂದು ವರ್ಷ ಮುಂಚೆ ಬಂದಿದ್ದ ವಿದ್ಯಾರ್ಥಿಯೊಬ್ಬರು ಬಹಳ ಸಹಾಯ ಮಾಡಿದರು. ನಾಲ್ಕೈದು ವಿಶ್ವವಿದ್ಯಾಲಯಗಳಿಗೆ ಅವರೇ ನನ್ನ ಪರವಾಗಿ ಶುಲ್ಕವನ್ನು ಕಳುಹಿಸಿದ್ದರು. ಅದನ್ನು ಸಾಲವಾಗಿ ಪರಿಗಣಿಸಿ ನಾನು ಇಲ್ಲಿಗೆ ಬಂದ ಮೊದಲನೆಯ ವರ್ಷದಲ್ಲಿ ಹಿಂದಿರುಗಿಸಿದ್ದರೂ ಅವರ ಸಹಾಯದ ಋಣವನ್ನು ಇಂದಿಗೂ ಮರೆಯಲಾರೆ. ಅಷ್ಟೇ ಅಲ್ಲ, 'It takes a village' ಎಂದು ಹೇಳುವಂತೆ ಅನೇಕರ ಸಹಾಯದಿಂದಲೇ ನನಗೆ ಇಲ್ಲಿಯ ವಿದ್ಯಾರ್ಥಿಜೀವನದಲ್ಲಿ ನೆಲೆಸಲು ಸಾಧ್ಯವಾಯಿತು. ಡಾ. ಕುಮಾರ್ ಅವರು ಮಾಡಿದ ಸಹಾಯವನ್ನು ಮೇಲೆಯೇ ಹೇಳಿದ್ದೇನೆ. ಅವರು ಕೇವಲ ಪ್ರಾಧ್ಯಾಪಕರಾಗಿಲ್ಲದೆ ಆಪ್ತಮಿತ್ರರೂ ಆಗಿದ್ದರು. ಆ ವಿಶ್ವವಿದ್ಯಾಲಯಕ್ಕೆ ನನಗಿಂತ ಮುಂಚೆ ಬಂದಿದ್ದ ಇತರ ಕನ್ನಡಿಗರೂ ನನಗೆ ಬಹಳ ಸಹಾಯ ಮಾಡಿದ್ದರು. ಆ ಕಾಲದಲ್ಲಿ ಹೊರದೇಶಗಳಿಂದ ಬಂದ ಹೊಸ ವಿದ್ಯಾರ್ಥಿಗಳಿಗೆ ಮಿನೆಸೋಟದ ಚಳಿಯನ್ನು ತಡೆಯಲಾಗದಿರಬಹುದೆಂದು ಅಲ್ಲಿಯ ಫಾರಿನ್ ಸ್ಟೂಡೆಂಟ್ ಅಡ್ವೈಜರ್ಸ್ ಆಫೀಸಿನವರು ಕೋಟು, ಬೂಟು, ಟೋಪಿ, ಗ್ಲವ್ಸ್ ಮೊದಲಾದ ಸಾಮಾನುಗಳನ್ನು ಎರವಲಾಗಿ ಕೊಡುತ್ತಿದ್ದರು. ನಮ್ಮ ಜವಾಬ್ದಾರಿಯು ಬಟ್ಟೆಗಳನ್ನು ಉಪಯೋಗಿಸಿದ ನಂತರ ಡ್ರೈ ಕ್ಲೀನ್ ಮಾಡಿಸಿ ಹಿಂತಿರುಗಿಸುವುದಷ್ಟೆ.

ಆ ಕಾಲದಲ್ಲಿ ಬರೀ ವಿಶ್ವವಿದ್ಯಾಲಯದಲ್ಲಷ್ಟೇ ಅಲ್ಲ, ಬೇರೆ ಎಲ್ಲಿಯಾದರೂ ಭಾರತೀಯರನ್ನು ಕಂಡರೆ 'ನೀವು ಯಾರು, ಎಲ್ಲಿಂದ ಬಂದಿದ್ದೀರಿ, ಇಲ್ಲಿ ಬಂದು ಎಷ್ಟು ವರ್ಷಗಳಾದುವು, ಏನು ಮಾಡುತ್ತೀರಿ' ಎಂದೆಲ್ಲಾ ವಿಚಾರಿಸಿಕೊಂಡು ಸ್ನೇಹವನ್ನು ಬೆಳೆಸುತ್ತಿದ್ದೆವು. ಪರಸ್ಪರ ಫೋನ್ ಸಂಖ್ಯೆಗಳನ್ನು ತಿಳಿದುಕೊಳ್ಳುತ್ತಿದ್ದೆವು. ಒಮ್ಮೊಮ್ಮೆ ಇಲ್ಲಿ ಹಲವು ವರ್ಷಗಳಿಂದ ವಾಸಿಸುತ್ತಿದ್ದ ಸಂಸಾರವಂದಿಗರು ವಿದ್ಯಾರ್ಥಿಗಳಾದ ನಮ್ಮನ್ನು ತಮ್ಮ ಮನೆಗೆ ಕರೆದುಕೊಂಡುಹೋಗಿ ಪುಷ್ಕಳವಾದ ಊಟ ಹಾಕಿ ನಮ್ಮ ಮನೆಗೆ ಕರೆದುಕೊಂಡುಬರುತ್ತಿದ್ದರು. ಬೇರೆ ಊರುಗಳಿಗೆ ಪ್ರಯಾಣ ಮಾಡಿದಾಗ ಅಲ್ಲಿಯ ಫೋನ್ ಡೈರೆಕ್ಟರಿಗಳಲ್ಲಿ ಭಾರತೀಯ ಹೆಸರುಗಳನ್ನು ಹುಡುಕಿ ಯಾರನ್ನಾದರೂ ಸಂಪರ್ಕಿಸಿದರೆ ಬಹಳ ಸ್ನೇಹದಿಂದ ಮಾತಾಡಿಸಿ ಒಮ್ಮೊಮ್ಮೆ ಸಂಧಿಸುವ ಏರ್ಪಾಡನ್ನೂ ಮಾಡುತ್ತಿದ್ದರು. ಅದೇ ರೀತಿ ಒಮ್ಮೆ ನಾನು ವಿದ್ಯಾರ್ಥಿಯಾಗಿದ್ದಾಗಲೇ ಆನ್ ಆರ್ಬರ್, ಮಿಷಿಗನ್ನಿನಲ್ಲಿ ಒಂದು ಸಮ್ಮೇಳನಕ್ಕೆ ಹೋಗಿದ್ದೆ. ಒಂದು ದಿನ ಮಧ್ಯಾಹ್ನ ಫೋನ್ ಪುಸ್ತಕವನ್ನು ನೋಡಿ ಒಬ್ಬ ಭಾರತೀಯರನ್ನು ಸಂಪರ್ಕಿಸಿದೆ. ಆಗ ಅವರು ಅಂದು ಸಂಜೆ ತಮ್ಮ ಅಪಾರ್ಟ್ಮೆಂಟಿನಲ್ಲಿ

ಊಟಕ್ಕೆ ಬರಬೇಕೆಂದು ಕರೆದರು. ಅವರೊಡನೆ ಊಟಮಾಡುತ್ತ ಮಾತಾಡುತ್ತಿರುವಾಗ ಅವರು ನನಗೆ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸಿನಲ್ಲಿ ಸಹಪಾಠಿಯಾಗಿದ್ದ ಉತ್ತರಭಾರತೀಯರೊಬ್ಬರ ತಮ್ಮನೆಂದು ತಿಳಿಯಿತು.

ಮಿನೆಸೋಟಾದಲ್ಲಿ ನನ್ನ ವಿದ್ಯಾಭ್ಯಾಸವನ್ನು ಮುಗಿಸಿದ ನಂತರ ಮೊದಲನೆಯ ಕೆಲಸ ಸ್ಯಾನ್ ಡಿಯೇಗೋನಲ್ಲಿ. ಅಲ್ಲಿಗೆ ಹೋದಾಗ ನನಗೆ ಆಫೀಸಿನವರನ್ನು ಬಿಟ್ಟರೆ ಮತ್ತೆ ಯಾರ ಪರಿಚಯವೂ ಇರಲಿಲ್ಲ. ಕೆಲವು ದಿನಗಳ ನಂತರ ಬೇಜಾರಾಗಿದ್ದು ಫೋನ್ ಡೈರೆಕ್ಟರಿಯಲ್ಲಿ ಭಾರತೀಯರಂತೆ ತೋರುವ ಹೆಸರುಗಳನ್ನು ಹುಡುಕಲು ಪ್ರಾರಂಭಿಸಿದೆ. ಆಗ ನರಸಿಂಹನ್ ಎಂಬ ಹೆಸರು ಸಿಕ್ಕಿತು. ಅವರನ್ನು ಸಂಪರ್ಕಿಸಿದಾಗ ಅಂದು ಸಂಜೆಯೇ ಊಟಕ್ಕೆ ಬನ್ನಿ ಎಂದು ಕರೆದರು. ಅವರು, ಅವರ ಪತ್ನಿ, ಮತ್ತು ಅವರ ತಮ್ಮ (ಶ್ರೀನಿವಾಸನ್) ಅಲ್ಲಿ ಲಹೋಯಾದಲ್ಲಿ ಇದ್ದರು. ಬ್ರಹ್ಮಚಾರಿಯಾಗಿದ್ದ ನನ್ನನ್ನು ಆಗಾಗ ತಮ್ಮ ಮನೆಗೆ ಕರೆದು ಊಟಹಾಕಿ ಮಾತುಕಥೆಗಳನ್ನು ನಡೆಸಿ ಮನೆಗೆ ಕಳುಹಿಸಿಕೊಡುತ್ತಿದ್ದರು. ಅವರ ಮಿತ್ರವರ್ಗದವರೊಡನೆಯೂ ಪರಿಚಯವಾಗಿ ಆಗಾಗ ಪಿಕ್ನಿಕ್ ಇತ್ಯಾದಿ ಮನೋರಂಜನೆಗಳಲ್ಲೂ ಭಾಗವಹಿಸಲು ಅವಕಾಶವಾಯಿತು. ಒಮ್ಮೊಮ್ಮೆ ವಾರಾಂತ್ಯದಿನಗಳನ್ನು ಅವರ ಮನೆಯಲ್ಲೇ ಕಳೆಯಲು ಆಹ್ವಾನಿಸುತ್ತಿದ್ದರು. ಅಲ್ಲದೆ ನಾನು ವಾಷಿಂಗ್‌ಟನ್ನಿಗೆ ವರ್ಗಾಯಿಸಿದಾಗ ಆ ಶ್ರೀನಿವಾಸನ್ ಮತ್ತು ಅವರ ಪತ್ನಿ ಸುಧಾ ಅವರೂ ಇಲ್ಲೇ ಕೆಲವು ವರ್ಷಗಳು ವಾಸವಾಗಿದ್ದರು, ಮತ್ತು ಅವರ ಸಂಪರ್ಕ ಪುನಃ ಆಗಿತ್ತು.

ಈ ಕಾಲದಲ್ಲಿ ಈ ರೀತಿಯ ಮೈತ್ರಿಗಳು ಬೆಳೆಯುವುವೋ ಇಲ್ಲವೋ. ಎಲ್ಲರೂ ತಮ್ಮ ತಮ್ಮ ಕೆಲಸಗಳಲ್ಲಿ ಮಗ್ನರಾಗಿರುತ್ತಾರೆ. ಸಮಯಾವಕಾಶವೂ ಇರುವುದಿಲ್ಲ. ನನ್ನ ಸ್ನೇಹಿತರೊಬ್ಬರು ಹೇಳಿದ್ದರು. ಅವರು ದಾರಿಯಲ್ಲಿ ಹೋಗುತ್ತಿದ್ದ ಭಾರತೀಯರೊಬ್ಬರನ್ನು 'Are you from India?' ಎಂದು ಕೇಳಿದರಂತೆ. ಅದಕ್ಕೆ ಆತ 'Yeah, so what?' ಎಂದು ಒರಟಾಗಿ ಹೇಳಿ ಮುಖತಿರುಗಿಸಿಕೊಂಡು ಹೋದನಂತೆ!

*

ಈ ರೀತಿ ಆ ಕಾಲದಲ್ಲಿ ಹೇಗಿತ್ತು ಎಂಬ ವಿಚಾರಗಳನ್ನು ಸ್ವಲ್ಪ ವಿಶದವಾಗಿ ಮತ್ತು ಈ ಕಾಲದಲ್ಲಿ ಹೇಗೆ ಬದಲಾವಣೆಗಳಾಗಿವೆ ಎಂದು ಚಿಕ್ಕದಾಗಿ ಬರೆದಿದ್ದೇನೆ. ಓದುಗರಲ್ಲಿ ಕೆಲವರಿಗೆ ಇದರಿಂದ ತಮ್ಮ ತಮ್ಮ ನೆನಪುಗಳು ಬಂದು nostalgia ಮೂಡಿಬರಬಹುದು (ಇನ್ನೂ ಕೆಲವರಿಗೆ ಇದೆಲ್ಲ ಕಂತೆಪುರಾಣ - ನಮಗೂ ಇದಕ್ಕೂ ಏನು ಸಂಬಂಧ ಎಂದು nausea ಕೂಡ ಬರಬಹುದು!). ಒಟ್ಟಿನಲ್ಲಿ ಆಗಿನ ಕಾಲ ಚೆನ್ನಾಗಿತ್ತು ಈಗಿನ ಕಾಲ ಕೆಟ್ಟುಹೋಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವು ವಿಧಗಳಲ್ಲಿ ಆ ಕಾಲ ಉತ್ತಮವಾಗಿತ್ತು. ಮತ್ತೆ ಕೆಲವು ವಿಧಗಳಲ್ಲಿ ಈ ಕಾಲವೇ ಉತ್ತಮ. ಆ ಕಾಲಕ್ಕೆ ಮತ್ತೆ ಹೋಗುವುದಕ್ಕಾಗುವುದಿಲ್ಲವಲ್ಲ. ಆದ್ದರಿಂದ ಈ ಕಾಲವನ್ನೇ ಶಾಂತಚಿತ್ತರಾಗಿ ಅನುಭವಿಸೋಣ! ●

ಅಮೇರಿಕೋಪನಯನ

– ಎಚ್. ವಿ. ರಂಗಾಚಾರ್

'ನಿಮ್ ಮನೇ ಉಪನಯನ ಬಹಳ ಅದ್ದೂರಿಯಿಂದ ನಡೆಯಿತು ಕಣಯ್ಯ' ಎಂದು ಹೇಳುತ್ತಾ ನನ್ನ ಹಳೆಯ ಮಿತ್ರ ಅಳಗುವನ್ನು ಮಾತನಾಡಿಸಲು ತೊಡಗಿದೆ. ಆ ದಿನ ಸಂಜೆ ಮಾಲಿನಲ್ಲಿ ಏನನ್ನೋ ಕೊಳ್ಳಲು ಹೋಗಿದ್ದಾಗ ಒಂದು ಅಂಗಡಿಯ ಮುಂದೆ ಅವನನ್ನು ಅಕಸ್ಮಾತ್ ಕಂಡೆ. ಹತ್ತಿರ ಹೋಗಿ ಮಾತಾಡಿಸಿದಾಗ ಅವನ ಮುಖ ಏನೋ ಭಾರದಿಂದ ಬಾಗಿತ್ತು. ಅವನ ಕಣ್ಣುಗಳೂ ಸೋತಿದ್ದವು. ಯಾವುದೋ ಸಂಸಾರದ ವಾಗ್ವಾದದಲ್ಲಿ ಸೋತು ಅದರಿಂದ ಸ್ವಲ್ಪ ಹೊತ್ತಾದರೂ ತಪ್ಪಿಸಿಕೊಳ್ಳಲು ಇಲ್ಲಿಗೆ ಬಂದಿರುವವನಂತೆ ತೋರಿದನು. ಹೊರಗಡೆ ಎಲೆ ಬೀಳುವ ಕಾಲದ ತೆಳುವಾದ ಹೊಂಬಿಸಿಲು. ಛಳಿ. ಸಂಜೆ ನಾಕೂವರೆಗೇ ಸೂರ್ಯಾಸ್ತ. ಸುತ್ತಲೂ ಅರೆಬೆತ್ತಲು ಮರಗಳು. ಅವುಗಳ ಸುತ್ತಲೂ ಬಣ್ಣಬಣ್ಣದ ಎಲೆಗಳ ಹಾಸು.

ಅವನೂ ನಾನೂ ಬಹಳ ವರ್ಷಗಳಿಂದ ಸ್ನೇಹಿತರು. ಅವನ ಪೂರಾ ಹೆಸರು ಅಳಸಿಂಗ್ರಾಚಾರ್ ಅಂತ. ಅಂದರೆ ತಿಳಿಯಿತಲ್ಲ, ಬಹಳ ಸಂಪ್ರದಾಯಸ್ಥ ಅಯ್ಯಂಗಾರ್ ಕುಟುಂಬದವನು. ನನ್ನ ಹಾಗೆಯೇ ಎಲ್ಲಾ; ಇಂಜಿನಿಯರಿಂಗ್ ಓದಿ, ಭಾರತದಲ್ಲಿ

ಕೆಲಸ ಸಿಕ್ಕದೇ, ಅಮೆರಿಕಕ್ಕೆ ಬಂದು, ಎಂ.ಎಸ್. ಮಾಡಿಕೊಂಡು, ಕೆಲಸ, ಸಂಸಾರ, ಮನೆ, ವಯಸ್ಸಿಗೆ ಬಂದ ಮಕ್ಕಳು, ಅವರ ಮಕ್ಕಳು, ಅವರ ಸಂಸಾರ, ಇತ್ಯಾದಿ ಇತ್ಯಾದಿ. ಅವನೂ ನಮ್ಮ ಗ್ರಾಮದ ಆಸುಪಾಸಿನವನೆ. ನಾನು ಹೆಮ್ಮಿಗೆ. ಅವನು ನದೀಪುರ. ಹೀಗೆ ಇಷ್ಟೊಂದು ಸಾಮ್ಯವಿರುವುದರಿಂದ ನಮ್ಮಿಬ್ಬರ ಸಖ್ಯ ಬಹಳ ಕಾಲದ ಸುಖದುಃಖಗಳ ಬಿರುಗಾಳಿಗಳನ್ನು ಎದುರಿಸಿ ಘಟ್ಟಿಯಾಗಿ ಉಳಿದುಕೊಂಡು ಬಂದಿದೆ.

ಅವನು ಅಮೆರಿಕಕ್ಕೆ ಬಂದ ಹೊಸದರಲ್ಲಿ ಅವನ ಕಷ್ಟದ ಹೆಸರನ್ನು ಹೇಳಲು ಯಾರಿಗೂ ಆಗುತ್ತಿರಲಿಲ್ಲ. ಅದಕ್ಕಾಗಿ ಅವನು ಅದನ್ನು ಆಲ್ ಜಾರ್ ಎಂದು ಅಮೆರೀಕರಿಸಿಕೊಂಡಿದ್ದಾನೆ. ಈಗ ಅವನ ಫ್ಯಾಮಿಲಿ ಹೆಸರೇ ಜಾರ್ ಎಂದಾಗಿಬಿಟ್ಟಿದೆ. ಇಲ್ಲಿ ಅವನನ್ನು ಎಲ್ಲರೂ ಆಲ್ ಎಂದೇ ಕರೆಯೋದು. ನಾವು ಹಳೆಯ ಕನ್ನಡಿಗರು ಕೆಲವರು ಮಾತ್ರ ಅವನನ್ನು ಅಳಗು ಎಂದು ನಮ್ಮೂರಿನ ಕಡೆಯವರ ಹಾಗೆ ಕರೀತೇವೆ ಅಷ್ಟೆ. 'ನಿಮಗೆಲ್ಲಾ ಅದು ಚೆನ್ನಾಗಿತ್ತು ಅಂತನ್ನಿಸ್ತೆ? ಸಂತೋಷ' ಎಂದು ಅದೇ ಭಾರವಾದ ಕಣ್ಣುಗಳು, ಅದನ್ನು ಹೊತ್ತ ಮುಖದ ಮೂಲಕ ಉತ್ತರ ಕೊಟ್ಟ. 'ಅದ್ಯಾಕಯ್ಯಾ, ನಿನಗ್ ನಿಮ್ಮ ಮೊಮ್ಮಕ್ಕಳ ಈ ಉಪನಯನ ಸರಿ ಹೋಗಲಿಲ್ಲವೆ? ನಿನ್ ಮುಖದಲ್ಲಿ ಅಸಮಾಧಾನ ಸುರೀತಿದೆಯಲ್ಲಾ' ಎಂದೆ. 'ಇದೆಲ್ಲಾ ಉಪನಯನವೇ? ಅಲ್ಲ, ಉಪಹಸನ, ಬಿಡಿ' ಎಂದ ಅಳಗು. ನನಗೆ ಅವನ ಮಾತುಗಳಿಂದ ಕುತೂಹಲ ಕೆರಳಿತು. 'ಬಾ. ಅಲ್ಲಿ ಸ್ಟಾರ್ ಬಕ್ಸ್‌ನಲ್ಲ್ ಕೂತು ಕಾಫಿ? ಕುಡೀತಾ ಮಾತಾಡೋಣಂತೆ' ಎಂದು ಅವನ ಕೈ ಹಿಡಿದುಕೊಂಡು ಅಲ್ಲಿಗೆ ಕರೆದುಕೊಂಡು ಹೋದೆ. ಅವನನ್ನು ಒಂದು ಕುರ್ಚಿಯಲ್ಲಿ ಕೂರಿಸಿ, ಕಾಫಿಯವನ ಬಳಿಗೆ ಹೋಗಿ, ಒಂದು ಕಾಫಿ, ಒಂದು ಖಾಲಿ ಕಪ್ಪು ಕೊಂಡು ಕೊಂಡು ಒನ್ ಬೈ ಟು ಮಾಡಿಕೊಂಡು, ಅವನ ಪಕ್ಕದಲ್ಲಿ ಕುಳಿತುಕೊಂಡೆ. ಅವನ ಕಡೆಗೆ ಕಪ್ಪನ್ನು ಜರುಗಿಸುತ್ತಾ, 'ಈಗ್ ಹೇಳು. ನಿಂಗ್ ಯಾಕ್ ನಿನ್ ಮೊಮ್ಮಕ್ಕಳ ಉಪನಯನದ್ ಮೇಲ್ ಇಷ್ಟು ನಿರುತ್ಸಾಹ, ಅಸಮಾಧಾನ ಆಯ್ತು?' ಎಂದು ಕೇಳಿದೆ.

ನನ್ನೊಡನೆ ಎಲ್ಲರೂ ಬಹುವಚನದಲ್ಲಿ ಸಂಬೋಧಿಸುತ್ತಾರೆ. ನನ್ನನ್ನು ಕಂಡರೆ ಯಾರಿಗೂ ಸಲಿಗೆಯಿಲ್ಲ. ನಾನೇನು ಮಾಡಲಿ. ನನ್ನ ಹೆಂಡತಿ ಕೂಡ ಹಾಗೆಯೇ. ಎಷ್ಟೋ ಬಾರಿ, ಅವಳು ನನ್ನ ಮೇಲೆ ಕೋಪಿಸಿಕೊಂಡಾಗ, 'ರೀ, ನಿಮಗೆಷ್ಟ್ ಸಲ ಹೇಳೋದ್ರೀ? ಈ ಬಟ್ಟೆ ಇಲ್ಲ್ ತೆಗೆದ್ರೀ. ಇಲ್ಲೇ ಹಾಕ್ಬಿಟ್ರೀ...' ಬಹುವಚನದಲ್ಲೇ ತರಾಟೆಗೆ ತೆಗೋತಾಳೆ. ಇಷ್ಟು ವರ್ಷಗಳ ಪರಿಚಯವಾದರೂ ಅಳಗು ನನ್ನನ್ನ ಅಣ್ಣಾವರೆ ಎಂದೇ ಕರೀತಾನೆ. 'ನೋಡಿ ಅಣ್ಣಾವರೆ, ನನಗ್ ಮೊದಲಿನಿಂದ್ಲೂ ಈ ಉಪನಯನ ಆಗೋದೇ ಇಷ್ಟವಿರಲಿಲ್ಲ. ಈಗ ಎರಡು ವರ್ಷಗಳಿಂದ್ಲೂ ಇದನ್ನ ಮಾಡ್ಬೇಕೂ ಮಾಡ್ಬೇಕೂ ಅಂತ ನನ್ನ ಮಗ, ಸೊಸೆ, ಅವಳ ಅಮ್ಮ, ಅಪ್ಪ ಹೇಳ್ತಾನೇ ಇದ್ದರು. ನಾನೂ ಹೂಂ, ಹೂಂ ಅಂತ ಸುಮ್ಮನೆ ಮುಂದಕ್ಕ್ ತಳ್ತಾನೇ ಇದ್ದೆ. ಈ ವರ್ಷ ಇನ್ನೇನ್ ಆ ದೊಡ್ಡವನಿಗೆ ೧೬ ತುಂಬುತ್ತೆ

ಅನ್ನೋವಾಗ ಅವರ ಕಡೆಯಿಂದ ಒತ್ತಾಯ ಬಲವಾಯ್ತು. 'ಈ ದೇಶದಲ್ಲಿ ಬೆಳೆಯೋ ಹುಡುಗರನ್ನ ಬ್ರಾಹ್ಮಣರಾಗಿಸೋಕೆ ಖಂಡಿತ ಆಗೊಲ್ಲ. ಸುಮ್ಮನೆ ಯಾಕೆ ಉಪನಯನ ಮಾಡಿ ಅವಕ್ಕೆ ನಡೆಸ್ಲಾಗದ ವಿಧಿಗಳನ್ನ ತಲೇಗ್ ಕಟ್ಟಿ ಅಪರಾಧಿ ಪ್ರಜ್ಞೆಯ ಬವಣೇಗ್ ಗುರೀಪಡ್ಸಬೇಕು. ಉಪನಯನ ಮಾಡದೇ ಇದ್ದರೆ ಏನು ಹೋಗುತ್ತೆ? ಇಲ್ಲಿ ಯಾರ್ ಕೇಳ್ತಾರೆ? ನಡೆಸ್ಲಾರದ್ ಈ ಅತೀ ಹಳೇ ಜಾತಿಕರ್ಮವನ್ನ ವಿದೇಶಕ್ಕೆ ಬಂದಿರೋ ನಾವ್ ಯಾಕ್ ಪಾಲಿಸಬೇಕು? ತ್ಯಜಿಸೋದೇ ಮೇಲು' ಎಂದು ಒಂದೆರಡು ಬಾರಿ ವಾದಿಸಿಯೂ ವಾದಿಸಿದೆ. ಅದರಿಂದ ನನ್ನ ಸೊಸೆಗೆ ಮತ್ತು ಬೀಗಿತ್ತಿಗೆ ನನ್ನ ಮೇಲೆ ಬಲವಾದ್ ಕೋಪ ಬಂತು ಮತ್ತು ಉಪನಯನ ಮಾಡ್ಯೇ ತೀರ್ಬೇಕು ಅಂತ ಅವರ ಹಠ ಬಲ್ವಾಯಿತು. ನನ್ನಾಕೆಗೂ ನನ್ನ್ ನಿಲುವು ಸರಿಯೆನಿಸ್ಲಿಲ್ಲ.

ನಮಗ್ ತಿಳಿಸದ್ಯೇ ಉಪನಯನದ ದಿನ, ಲಗ್ನ, ಅದನ್ನ್ ನಡೆಸೋ ಏರ್ಪಾಡುಗಳು ಎಲ್ಲ ಪ್ರಾರಂಭವಾದವು. ನಮ್ಮನ್ನು ಬಿಟ್ಟು ಉಪನಯನ ನಡೆದೇ ಬಿಡುತ್ತದೆ ಅಂತ ನನಗ್ ಬೋಧೆ ಆಯಿತು. ಹಾಗೆ ಆಗೋದಾದ್ರೆ ನಾವು ಅದರಲ್ಲಿ ಸೇರ್ಕೊಳ್ಳದೇ ಇರೋದು ಸರಿಯಲ್ಲ, ಅಂತ ನಾವೂ ಅವರ್ ಜೊತೆಗ್ ಸೇರ್ಕೊಂಡ್ವು. ಅಣ್ಣ್ ತಮ್ಮಂದಿರಿಬ್ಬರಿಗೂ ಒಟ್ಟಿಗೇ ಸೇರಿಸಿ ಮಾಡ್ತೀವಿ ಅಂದರು. ನಾನು ಅದ್ ಕೂಡದು ಅಂದೆ. ಶನಿವಾರ ಮಾಡ್ತೀವಿ, ಲಗ್ನ ಹುಡುಕಿ ಅಂತಂದ್ರು. ನಾನ್ ಅದೂ ಕೂಡದು ಅಂದೆ. ಪುರೋಹಿತರನ್ನ್ ಕೇಳಿ ನೋಡೋಣ ಅಂದ್ ಸ್ವಲ್ಪ ಮುಂದಕ್ಕ್ ಹಾಕಿದೆ. ಪುರೋಹಿತರು, ನಮ್ಮ ರಾಂಭಟ್ಟರು, ಅವರು ಹೇಳಿದ್ದಕ್ಕೆಲ್ಲಾ, 'ಓ, ಅದಕ್ಕೇನು. ಎಲ್ಲ ಈಗಿನ ಕಾಲದಲ್ಲಿ ಮಾಡ್ತಾರೆ' ಅಂತ ಒಪ್ಪಿಕೊಂಡ್ಬಿಡೋದೆ!

ಇಲ್ಲಿ ನಾನು ತಲೆ ಹಾಕಿದೆ, 'ಓಹೋ, ಅದೇ, ಉಪನಯನದ ಮಧ್ಯದಲ್ಲಿ, ಆ ಹೊಸ ವಟುಗಳ ಕೈಗೆ ದಂಡ ಕೋಲ್ಗಳನ್ನ ಹಿಡ್ಕೊಳ್ಳೋಕ್ ಕೊಡ್ಬೇಕಾಗಿತ್ತಲ್ಲಾ, ಆಗ ಕೋಲ್ಗಳ್ನೇ ತರೋದೇ ಮರೆತ್ ಬಿಟ್ಟಿದ್ರಲ್ಲಾ. ಆಗ ಪುರೋಹಿತರು ಸರಕ್ಕಂತ ಎದ್ದು, ಅಲ್ಲೇ ಹತ್ತಿರದಲ್ಲೇ ಅಲಂಕಾರಕ್ಕೇಂತ ಇಟ್ಟಿದ್ದ ಬಾಳೇ ಸುಳೀಗ್ಳಲ್ಲೆರಡನ್ನ್ ಕಿತ್ಕೊಂಡ್ ಅದನ್ನೇ ದಂಡ್ಕೋಲ್ಗಳ್ ಥರ ಮಾಡ್ ಕೊಟ್ಟು ಕೆಲಸ ಮುಂದಕ್ ಸಾಗಿಸಿದ್ರಲ್ಲಾ, ಅವರೇನಾ? ಅವರು ಬಿಡಿ. ಭಾಳ ರಿಸೋರ್ಸ್‌ಫುಲ್ಲು' ಅಂದೆ. 'ಹೂಂ, ಅವರೇನೆ. ಅವರು ಹೇಳಿದ ಹಾಗೇ ಉಪನಯನವೂ ಪದೇ ಪದೇ ರಿಸೋರ್ಸ್‌ಫುಲ್ಲಾಗ್ಯೇ ನೆರವೇರಿತು. ಆಯಿತು. ಬಿಡಿ' ಎಂದು ಹೇಳುತ್ತಾ ಅಳಗು ನಿಧಾನವಾಗಿ ಕಾಫಿ ಹೀರುತ್ತಾ ಕುರ್ಚಿಯ ಹಿಂದಕ್ಕೆ ಒರಗಿಕೊಂಡ. ಸ್ಟಾರ್ ಬಕ್ಸ್ ಬಿಸಿ ಬಿಸಿ ಕಾಫಿಯ ಸೊಗಸಾದ ಪರಿಮಳ ಅವನ ನಾಲಗೆಯ ಮೇಲೇರಿ, ಜ್ಞಾನೇಂದ್ರಿಯವನ್ನು ಮುಟ್ಟಿ, ಅವನ ಮುಖದ ಮಂಕು ಸ್ವಲ್ಪ ಕಳೆಯಿತು.

'ಅಲ್ಲಪ್ಪ ಅಳಗು, ನಿಮ್ಮ ಮನೆ ಉಪನಯನ ಚೆನ್ನಾಗ್ಯೇ ನಡೀತು. ತುಂಬಾ ಜನ ಬಂದಿದ್ರು. ನೀವ್ ಬಹಳ ಒಳ್ಳೇ ವಸತಿ ಇರೊ ರೆಸ್ಟೋರೆಂಟ್‌ನಲ್ಲಿ ಎಲ್ಲಾ ಏರ್ಪಾಡು

ಮಾಡಿಸಿದ್ರಿ. ಸ್ಟೇಜು ಎತ್ತರದಲ್ಲಿತ್ತು, ಎಲ್ಲಾರ್ಗೂ ಎಲ್ಲಾ ಚೆನ್ನಾಗಿ ಕಾಣೋ ಹಾಗೆ. ಇಬ್ರು ಪುರೋಹಿತರು, ವೇದ ಮಂತ್ರಗಳು ಕೇಳೋದಕ್ಕೆ ಬಹಳ ಹಿತವಾಗಿತ್ತು. ನೀನು ಮತ್ತು ನಿನ್ನ್ ಹೆಂಡತಿ ಸ್ಟೇಜಿನ ಮೇಲೆ ಹಸೇಮಣೆ ಪಕ್ಕದಲ್ಲಿ ಗೌರವಸ್ಥಾನದಲ್ಲ್ ಕುಳಿತ್ಕೊಂಡು ವಿರಾಜ್‌ಮಾನವಾಗ್ ಕಾಣ್ತಿದ್ರಿ. ವಟುಗ್ಳು ತೆಳ್ಳಗ್ ಎತ್ತರ್ವಾಗಿ ಬಹಳ ಲಕ್ಷಣವಾಗ್ ಕಾಣ್ತಾ ಇದ್ರು. ನಿಮ್ಮೆಲ್ಲರ್ ಮೊಖದಲ್ಲಿ ನಾಮದ್ ಕಳೆ ಬಹಳ ಸೊಗಸಾಗಿತ್ತು ಕಣಯ್ಯ. ನಾಲ್ಲಕ್ ಘಂಟೆ ಕಾಲದ್ ದೀರ್ಘವಾದ ಉಪನಯನ, ನಾದಸ್ವರ, ಆರ್ತೀಗ್ಳು, ಹಾಡುಗ್ಳು, ಎಲ್ಲಾ ತುಂಬಾ ಅಪ್ ಸ್ಕೇಲ್. ಆಮೇಲ್ ಊಟ, ಪಾರ್ಟಿ, ಪ್ರೊಫೆಷನಲ್ ಫೋಟಾಗ್ರಾಫರ್ ನಿಮಿಷಕ್ಕೊಂದ್ರಂತ್ ಪಿಕ್ಚರ್ ತೆಗೋತಾ ಇದ್ದ... ಇನ್ನೇನಯ್ಯ ಬೇಕು? ಅದ್ಯಾಕೆ ನಿಂಗ್ ಸಮಾಧಾನ ಇಲ್ಲ?' ಎಂದು ನಾನು ಪ್ರಶ್ನೆ ಹಾಕಿದೆ. ಅಳಗು ನಿಧಾನವಾಗಿ ಕಾಫಿಯನ್ನು ಹೀರುತ್ತ ನನ್ನ ಮೊಖ ನೋಡಿದ. 'ಅಣ್ಣಾವ್ರೆ, ಉಪನಯನ ಅಂದ್ರೆ ಏನು, ಅದನ್ನು ಹೇಗೆ ಮಾಡ್ಬೇಕು, ಯಾಕೆ ಮಾಡ್ಬೇಕು, ಅದನ್ನು ನಾವು ಮಾಡಿದ ರೀತಿ ಸರಿಯಾ? ಸ್ವಲ್ಪ ಹೇಳ್ತೀರಾ?' ಎಂದು ಮರುಪ್ರಶ್ನೆ ಹಾಕಿ ಛಾಲೆಂಜ್ ಮಾಡಿದ.

ನಾನು ಚಿಕ್ಕವನಾಗಿದ್ದಾಗ, ನಂಗೆ ಉಪನಯನ ಮಾಡೋ ಸಮಯದಲ್ಲಿ, ನನ್ನ ತಾತಾವರು 'ನಿಂಗ್ ಉಪನಯನ ಮಾಡಿದ್ ಮೇಲೆ ದಿನಾ ಬರಿ ಉಪ್ಪು, ನೆಯ್ಯಿ, ಅನ್ನ. ಅಷ್ಟೆ, ಮದ್ವೆ ಆಗೋ ತನಕ' ಎಂದು ಹೇಳಿ ಹಾಸ್ಯ ಮಾಡ್ತಾ ಇದ್ರು. ಹಿಂದಿನ ದಿನ ಸಂಜೆ, ಉದಕಶಾಂತಿಯ ಸಮಯದಲ್ಲಿ ನಮ್ಮ ಪುರೋಹಿತರು 'ಉಪ ಅರ್ಥಾತ್ ಜ್ಞಾನದ ನಯನ ಅಂದ್ರೆ ಕಣ್ಣುಗಳನ್ನು ಪಡೆಯುವುದು' ಎಂದು ಅರ್ಥೈಸಿದ್ದರು ಆಗ. ಇದು ಭಾಳ ಪ್ರಾಚೀನಕಾಲದ ಸಂಸ್ಕಾರ, ಕಣಯ್ಯ. ಆಗಿನ ಕಾಲದಲ್ಲಿ ಮೇಲಿನ ಮೂರು ಜಾತಿಯವ್ರು ಮಾತ್ರ ಶಾಸ್ತ್ರೀಯವಾಗ್ ವಿದ್ಯಾಭ್ಯಾಸಕ್ಕೆ ಅರ್ಹರಾಗಿದ್ರು. ಆ ಕಾಲದಲ್ಲಿ ಗಂಡ್ ಮಕ್ಕಳು ತಂದೇ ಮನೆಯಿಂದ ವಿದ್ಯಾಭ್ಯಾಸಕ್ಕೇಂತ ಗುರುವಿನ್ ಮನೆಗೆ ವಾಸಕ್ಕೆ ಮತ್ತು ಅವರ್ ಸೇವೇಗೇಂತ ಹೋಗಬೇಕಾಗಿತ್ತು. ಎಂಟ್, ಹತ್ತು ವರ್ಷದ್ ಮಗನನ್ನ ತಂದೆಯಾದೋನು ತನ್ ಮನೆಯಿಂದ ಗುರುವಿನ್ ಮನೇಗ್ ಕರ್ಕೊಂಡು ಹೋಗಿ ಬಿಟ್ ಬರ್ಬೇಕಾಗಿತ್ತು. ಹಾಗ್ ಮಾಡೋದನ್ನ ಸಂಸ್ಕೃತದಲ್ಲಿ ಉಪನಯನ ಅಂತಾರೆ. 'ಪ್ರಾಯಶಃ ಅದೇ ಅದರ್ ನಿಜಾರ್ಥ' ಎಂದೆ.

'ಹಾಗಾದ್ರೆ, ಅದಕ್ಕೆ ಇಷ್ಟು ಸಂತೋಷ, ಸಂಭ್ರಮ, ಧಾಮ್ ಧೂಮ್ ಯಾಕೆ? ಅದೇನೂ ಅಷ್ಟು ಸಂತೋಷದ್ ದಿನವಾಗಿರ್ಲಾರದು. ಪಾಪ, ಆ ಹುಡುಗನಿಗ್ ಎಷ್ಟು ದಿಗಿಲಾಗಿರ್ಬಹುದು ಆಗ? ಅವನನ್ನು ಅಗ್ಲಿ ಮನೇಯಿಂದ್ ಕಳಿಸೋಕ್ಕೆ ಅವನ್ ತಾಯೀಗ್ ಎಷ್ಟು ದುಃಖವಾಗ್ ಬೇಕು? ಆ ಗುರೂನ್ ಮನೇಲಿ ಅವನಿಗೆ ಯಾವ್ ಯಾವ್ ಕೆಲಸ ಮಾಡಬೇಕಾಗುತ್ತೋ, ಸರಿಯಾಗ್ ಊಟ ಹಾಕ್ತಾಳೋ ಇಲ್ಲವೋ ಆ ಗುರುಪತ್ನಿ. ಇದರ ಬದಲು, ಆ ಹುಡುಗ ತನ್ನ್ ವಿದ್ಯಾಭ್ಯಾಸ ಎಲ್ಲಾ ಮುಗಿಸ್ಕೊಂಡು ಗುರುವಿನ್ ಮನೆಯಿಂದ

ಹಿಂತಿರುಗಿ ಬರೋವಾಗ ಈ ಸಂಭ್ರಮ ನಡೆಸಿದರೆ ಅದು ಸರಿ ಹೋಗುತ್ತೆ ಅಲ್ಲವೆ. ಇದು ಯಾಕೆ ಹೀಗೆ ತಿರುಗುಮುರುಗಾಗಿದೆಯಲ್ಲಾ' ಎಂದ ಅಳಗು. ನನಗೆ ಅವನ ಮಾತು ಸರಿಯೆ ಎಂದೆನ್ನಿಸಿತು. ಆದರೆ ಈ ಚರ್ಚೆಯನ್ನು ಇಲ್ಲಿಯೇ ಮುಗಿಸಿ ಕೈಬಿಡುವುದಕ್ಕೆ ನಾನು ಸಿದ್ಧನಿರಲಿಲ್ಲ. ಅದಕ್ಕೆ ಹೀಗೆ ಉತ್ತರ ಕೊಟ್ಟೆ. 'ಈಗ ನಾನ್ ನಿನಗೆ ಹೇಳಿದ್ದು ಉಪನಯನ ಅನ್ನುವ ಪದದ ಅರ್ಥ ಮಾತ್ರ. ಆದರೆ ನೋಡು, ನಾವು ಈಗ ಉಪನಯನ ಅಂತ ಕರೀತಿರೋ ಸಂಭ್ರಮದಲ್ಲಿ ಕನಿಷ್ಠಪಕ್ಷ ಮೂರು ಭಾಗಗ್ಳು ಸೇರ್‌ಕೊಂಡಿವೆ.

ಅವುಗಳಲ್ಲಿ ಮೊದಲನೇದು: ತಂದೆ ತನ್ನ್ ಮಗನನ್ನ ಬ್ರಾಹ್ಮಣ ಅನ್ನಿಸಿಕೊಳ್ಳೋವಂತೆ ಮಾಡೋದು. ಏಕೇಂದ್ರೆ ಪ್ರಾಚೀನಕಾಲದಲ್ಲಿ ಬ್ರಾಹ್ಮಣ ಗುರುಗಳು ದ್ವಿಜತ್ವವನ್ನು ಪಡೆಯದ ಯಾವನನ್ನೂ ಮನೆಗೆ ಸೇರಿಸ್ಕೊಂಡು ವಿದ್ಯೆ ಕಲಿಸ್ತಿರಲಿಲ್ಲ. ಆದ್ರಿಂದ ತಂದೆಯಾದೋನು ತನ್ನ್ ಮಗನನ್ನ ಗುರುವಿನ್ ಮನೇಗ್ ಕರ್‌ಕೊಂಡ್ ಹೋಗೋ ಮೊದಲು, ಇನ್ನೂ ಎಳೇ ಹುಡುಗ್‌ನಾದ ಅವನ್ಗೆ ದ್ವಿಜ ಅನ್ನಿಸಿಕೊಳ್ಳೋದಕ್ಕೆ ಅತ್ಯವಶ್ಯವಾದ ಜನಿವಾರ ಹಾಕಿ, ಅದನ್ನ ಸರಿಯಾಗಿ ಸಂರಕ್ಷಿಸಿ ಇಟ್ಟುಕೊಳ್ಳೋ ಕೆಲವು ಮೂಲ ಆಚಾರಗ್ಳನ್ನ ಹೇಳಿಕೊಡೋದು. ಅಂದರೆ ನಿಂಗ್ ಗೊತ್ತಿದೆಯಲ್ಲ, ಸ್ನಾನ ಮಾಡೋವಾಗ ಅಥವಾ ಶೌಚಕರ್ಮ ಮಾಡೋವಾಗ ಅದನ್ನ ಎತ್ತಿ ಕಿವೀಗ್ ಸುತ್ತಿಕೊಳ್ಳೋದು, ಬನೀನು ತೆಗೆಯೋವಾಗ ಅದು ಹೊರಕ್ಕ್ ಬರದಂತೆ ನೋಡಿಕೊಳ್ಳೋದು; ಒಂದ್ ಸಮಯ ಅದು ಹೊರಗ್ ಬಂದ್ ಬಿಟ್ರೆ, ಅದನ್ನ ಪುನಃ ಹಾಕಿಕೊಳ್ಳೋವಾಗ ಆ ಬ್ರಹ್ಮ ಗಂಟಿನ್ ತಲೆ ಮೇಲಕ್ ಬರೋವಂತೆ ಹಾಕ್ಕೊಳ್ಳೋದು, ಇತ್ಯಾದಿ. ಆಮೇಲೆ ಊಟದ್ ಸಮಯದಲ್ಲಿ ಪರಿಷೇಚನ ಮಾಡೋದು, ಆಪೋಶನ ತೆಕ್ಕೊಳೋದು, 'ಪ್ರಾಣಾಯ ಸ್ವಾಹಾ...' ಮಂತ್ರಗಳನ್ನು ಹೇಳಿ, ಸಣ್ಣ ಸಣ್ಣ ಅನ್ನದ್ ಗುಕ್ಕುಗಳನ್ನ ಬೇಗ ಬೇಗ ಉಣ್ಣೋದು, ಆಮೇಲೆ ಊಟ ಪ್ರಾರಂಭಿಸೋದು, ಮಧ್ಯೆ ಏಳದೇ ಊಟ ಮುಗಿಸಿ, ಉಪಸ್ತರಣ ಮಂತ್ರ ಹೇಳಿ ಉತ್ತರಾಪೋಶನವಾದ್ ಮೇಲೇನೇ ಊಟದಿಂದ ಏಳೋದು, ಇವನ್ನೆಲ್ಲಾ ಹೇಳಿಕೊಡೋದು.

ಇನ್ನು ಎರಡನೇ ಭಾಗ: ಮುಖ್ಯವಾಗಿ ಹುಡುಗನ್ಗೆ ಬೆಳಿಗ್ಗೆ ಬೇಗ, ಅಂದರೆ ಸೂರ್ಯ ಹುಟ್ಟೋಕ್ಕ್ ಮುಂಚೆ ಏಳೋದು, ದಿನಕ್ಕ್ ಮೂರು ಬಾರಿ ಸಂಧ್ಯಾವಂದ್ನೆ ಮಾಡೋದು, ತನ್ನ್ ಬಟ್ಟೆಬರೆಗಳನ್ನ ಒಗೆದು ಮಡಿ ಮಾಡಿಕೊಳ್ಳೋದು, ತನ್ನ್ ಆಹಾರ ತಾನೇ ಹೊಂದಿಸ್ಕೊಳ್ಳುವುದು, ಅಂದರೆ ಭಿಕ್ಷೆ ಮಾಡೋದು ವಿದ್ಯಾರ್ಥಿಗ್ ಅವಮಾನ ಅಲ್ಲ ಅಂತ ಕಲಿಸೋದು, ಮುಂತಾದ ಬ್ರಹ್ಮಚಾರಿ ಜೀವನದ ಮುಖ್ಯಾಂಶಗಳನ್ನ ಮೊದಲು ಕಲಿಸ್‌ಬೇಕಾಗಿತ್ತು. ಸಂಧ್ಯಾವಂದ್ನೆ ಅಂದ್ರೆ ಅತಿಪ್ರಾಚೀನವಾದ (ಈಗ್ ಯಾರ್ಗೂ ಸರಿಯಾದ್ ಅರ್ಥ ತಿಳಿಯದ) ವೇದ ಸಂಹಿತೆಗಳು, ಆಚಮನ, ಪ್ರಾಣಾಯಾಮ, ಗಾಯತ್ರೀ ಮಂತ್ರದ್ ಜಪ, ಸಂಧ್ಯಾದೇವೀ ಪ್ರಾರ್ಥನೆಗಳು, ಮುಂತಾದ್‌ವನ್ನ ಮಗನಿಗ್ ಕಲಿಸೋದು ತಂದೇ ಕರ್ತವ್ಯವಾಗಿತ್ತು.

ಇದೆಲ್ಲಾ ಚೆನ್ನಾಗಿ ಅಭ್ಯಾಸ ಮಾಡಿಸಿದ್ ಮೇಲೆ ಯಾವ್ದಾದ್ರೂ ಒಂದು ಶುಭದಿನದಲ್ಲಿ ತಮ್ಮ ಕುಲದ್ ಗುರೂನ್ ಮನೇಗ್ ಕರ್ಕೊಂಡು ಹೋಗಿ ಅಲ್ಲಿ ಬಿಟ್‌ಬರೋದು ಮೂರನೆಯ ಭಾಗ. ಈ ಕಡೇ ಭಾಗದ್ ಹೆಸರೇ ಉಪನಯನ. ಆದರೂ ಯಾವ ದಿನ ಈ ಮೂಲಶಿಕ್ಷೆ ಪ್ರಾರಂಭಿಸ್ತದ್ದೋ ಆ ದಿನಾನೇ ಉಪನಯನ ಅಂತ ಹೆಸರ್ ಬಂದ್‌ಬಿಡ್ತು. ಅದನ್ನ ದೊಡ್ಡ 'ಮಹೋತ್ಸವ'ದಂತೆ ಆಚರಿಸೋ ಪದ್ಧತಿ ಈಗ ಅನೇಕ ಶತಮಾನಗಳಿಂದ ನಡೆದುಕೊಂಡು ಬಂದು ಬಿಟ್ಟಿದೆ ಕಣಯ್ಯಾ. ನಮ್ಮ ಸಂಸ್ಕೃತೀಲಿ ದುಃಖ ಪಡುವ ಸಂದರ್ಭ ಯಾವುದನ್ನೂ ದೊಡ್ಡ ಹಬ್ಬದಂತ್ ಆಚರಿಸೋಲ್ಲ, ಯೆಹೂದಿಗಳು ಮಾಡ್ತಾರಲ್ಲಾ ಹಾಗೆ. ನಾವು ದುಃಖವನ್ನ ಏಕಾಂತದಲ್ಲಿ ಅನುಭವಿಸಿ ನುಂಗಿಕೊಳ್ತೀವೆ. ಯಾವುದು ಶುಭವೋ, ಉಲ್ಲಾಸಕರವೋ ಅದನ್ನ ನೆಂಟ್ರು ಇಷ್ಟ್ರೊಡನೆ ಹಂಚಿಕೊಂಡು ಹಬ್ಬದ ಹಾಗೆ ಆಚರಿಸ್ತೇವೆ. ಅಂತೂ ಹೀಗೆ ನಡೆದ್‌ಕೊಂಡು ಬಂದಿದೆ. ಇತ್ತೀಚೆಗೆ, ಹಿಂದಿನ ಹಾಗೆ ಗುರುಕುಲಗಳೇ ಇಲ್ಲವಾಗಿರೋದ್ರಿಂದ ಉಪನಯನದ್ ನಿಜವಾದ ಭಾಗವೇ ಕಾಲಾಂತಕನ ಕೈವಾಡದಿಂದ ಕಳೆದ್‌ಹೋಗಿದೆ. ಈಗಿನ ಕಾಲದ ಹುಡುಗರ್‌ಗೆ 'ಉಪನಯನ' ಮಾಡಿದ್ ಮೇಲೆ, ಅವರ್ ತಂದೆ ಅವರನ್ನ ಎಲ್ಲಿಗೂ ಕರೆದುಕೊಂಡ್ ಹೋಗಬೇಕಾಗಿಲ್ಲ ಕಣಯ್ಯಾ. ಮನೆಯಲ್ಲೇ ಕಾಲೇಜಿಗ್ ಹೋಗೋವರ್ಗೆ ಇರ್ತಾರೆ. ಅದಕ್ಕೆಯೋ ಏನೋ ನೋಡು- ಮದುವೆಯಾಗೋವಾಗ, ವರಪೂಜೇನ್ನೆಲ್ಲ ಮಾಡಿಸಿಕೊಂಡು, ಇನ್ನೇನು ಹುಡುಗಿ ಬಂದು ನೀನೇ ನನ್ನ ಗಂಡ ಅಂತ ಮಾಲೆ ಹಾಕೋವಾಗ, ಅವನ್‌ಗೆ ತಾನು ವಿದ್ಯಾಭ್ಯಾಸಕ್ಕೇಂತ ಕಾಶೀಗ್ ಹೋಗಲೇ ಇಲ್ಲವಲ್ಲ, ಈಗ ಹೋಗಿಬಂದ್ ಬಿಡ್ತೇನೇಂತ ಹೊರಡೋ ಅಸಂಬದ್ಧ ಪದ್ಧತಿ ಒಂದು ಈಚೆಗೆ ಸೇರಿಕೊಂಡು ಬಂದಿದೆ' ಎಂದು ಒಂದು ಸಣ್ಣ ಪ್ರವಚನ ಹೊಡೆದೆ.

ಈ ಹೊತ್ತಿಗೆ ಸ್ಟಾರ್ ಬಕ್ಸ್ ಕಾಫಿ ತನ್ನ ಕೆಲಸ ಮಾಡಿತ್ತು. ಅಳಗುವಿನ ಮುಖದಲ್ಲಿ ವ್ಯಗ್ರತೆ ಇಳಿದು, ಅವನ ಉಸಿರಾಟ ಹಿಂದಿದ್ದ ಬಿಗಿತ ಕಳೆದುಕೊಂಡಿತ್ತು. 'ಅಣ್ಣಾವರೆ, ನಿಮ್ಮ ಮಾತ್ನಿಂದ ನನಗೆಷ್ಟೋ ಸಮಾಧಾನ ಆಯಿತು. ಉಪನಯನ ಅಂದ್ರೆ ಮನೇಲಿ ಬೆಳೀತಿರೋ ಎಳೇ ಹುಡುಗನ್ನ ಗುರುಕುಲಕ್ಕೆ ವರ್ಷಾಂತರ ಕಾಲ ಕಳ್ಸಿ ವಿದಾಯ ಹೇಳೋ ಸಮಾರಂಭ ಅಂತ ತಿಳ್ಕೊಂಡ್ ಬಿಟ್ಟಿದ್ದೆ. ಅದರಲ್ಲಿ ಗಾಂಭೀರ್ಯ, ಕರ್ತವ್ಯನಿಷ್ಠೆ, ಜೊತೇಗ್ ಒಂದು ಥರಾ ದುಃಖ ತೋರಿಸ್ಬೇಕು ಅಂದ್ಕೊಂಡಿದ್ದೆ. ಈಗ ನೀವ್ ಹೇಳಿದ್ ಮೇಲೆ ಅದು ಎಳೇ ಹುಡುಗನ್ಗೆ ಜನಿವಾರ ಹಾಕಿಸೋದು, ಬ್ರಾಹ್ಮಣ್ರಂತೆ ಊಟ ಮಾಡೋದು, ದಿನಕ್ಕೆ ಮೂರು ಬಾರಿ ಸಂಧ್ಯಾವಂದ್ನೆ ಮಾಡೋದು, ಅಂಥಾ ಆಚಾರ ಕಲಿಸಿ, ಬ್ರಾಹ್ಮಣ ಅನ್ನಿಸಿಕೊಳ್ಳೋ ಹಾಗೆ ಮಾಡೋ ಮೊದಲ್ ಭಾಗಕ್ಕೇ ಹೆಚ್ಚು ಪ್ರಾಶಸ್ತ್ಯವಿರೋದ್ ತಿಳಿಸಿದ್ದರ್ ತುಂಬಾ ಥ್ಯಾಂಕ್ಸ್. ನೀವ್ ಹೇಳಿದ್ ಹಾಗೆ ಈಗಿನ ಕಾಲದಲ್ಲಿ ಕಳಿಸೋಣ ಅಂದ್ರೂ ಯಾವ ಗುರುಕುಲವೂ ಇಲ್ಲದೇ ಇರೋದರಿಂದ ಆ ನಿಜವಾದ 'ಉಪನಯನ' ಬರಿ ಹೆಸರ್‌ನಲ್ಮಾತ್ರ ಉಳಿದುಕೊಂಡ್ ಬಂದಿದೆಯಷ್ಟೆ. ಅದರಿಂದ ಈ ಸಂಭ್ರಮ್‌ದಲ್ಲಿ ಸಂತೋಷಕ್ಕೇ ಹೆಚ್ಚು ಪ್ರಾಶಸ್ತ್ಯ. ದುಃಖಪಡೋ, ವಿದಾಯ ಹೇಳೋ ಪ್ರಸಂಗ್ವೇ ಇಲ್ಲ.

ಗುಡ್, ಗುಡ್' ಎಂದು ಹೇಳಿ ಅವನು ಮನಸ್ಸಿಗೆ ಗೆಲುವು ತಂದುಕೊಳ್ಳುವುದಕ್ಕೆ ಪ್ರಯತ್ನ ಪಟ್ಟ.

'ಆದ್ರೂ, ಈ ಅಮೆರಿಕದಲ್ಲಿ ಬೆಳೆದು, ಮುಂದೆ ಇಲ್ಲೇ ಜೀವಿಸೋ ಹುಡುಗನಿಗೆ, ಈ ಜಾತಿವ್ಯವಸ್ಥೆ ಬಂಧನ ಯಾಕ್ ಕಟ್ಬೇಕು? ಇದೋ ಎಲ್ಲರೂ ಎಲ್ಲದ್ರಲ್ಲೂ ಸರಿಸಮಾನರು ಅಂತ ಘೋಷಿಸೋ ಸಮಾಜ. ಮತ್ತು ಆ ಐಡಿಯಾನ ಎಲ್ಲ ನಡತೇಗ್ಳಲ್ಲೂ ಕಾನೂನುಗ್ಳಲ್ಲೂ ತಪ್ಪದೇ ಪಾಲಿಸಿಕೊಂಡು ಬರೋ ದೇಶ. ಇಲ್ಲಿ ಬೆಳೆಯೋ ಮಕ್ಕಳು ಯಾವ ಬ್ರಾಹ್ಮಣ್ರ ಭೋಜನಕೂಟ್‌ದಲ್ಲಿ ಸಹಭೋಜನಕ್ಕೆ ಕೂರ್‌ಬೇಕು? ಪರಿಷೇಚನ, ಆಪೋಶನ, ಉಪಸ್ತರಣ, ಇವನ್ನೆಲ್ಲಾ ಅನುಸರಿಸೋರು ಯಾರಿದ್ದಾರೆ ಇಲ್ಲಿ? ನನಗೆ ತಿಳಿದಿರೊ ಬ್ರಾಹ್ಮಣರ್ ಮನೇಲೆಲ್ಲಾ ಡಿನ್ನರ್ ಪಾರ್ಟಿಗೆ ಕರೆದ್ರೆ, ಬರೋವ್ರೆಲ್ಲ ಬನೀನು, ಷರ್ಟು ಹಾಕಿಕೊಂಡು ಬಂದಿರ್ತ್ತಾರೆ. ಯಾರ ಜನಿವಾರವೂ ಕಾಣೋದಿಲ್ಲ. ಅದು ಕಾಣಬೇಕಾಗೂ ಇಲ್ಲ. ಅದಿರಲಿ. ಊಟ ಮಾಡೋವಾಗ ಪೇಪರ್ ತಟ್ಟೇನ ಅಂಗೈಲಿ ಹಿಡ್ಕೊಂಡು, ನಾವೇ ನಮಗೆ ಬೇಕಾದ್ದನ್ನ ಬಡಿಸ್ಕೊಂಡು, ಎಲ್ಲೂ ಕೆಳಗೆ ಚೆಲ್ಲದೇ ಜೋಪಾನವಾಗಿ ತಿನ್ನಬೇಕು. ಎಲ್ಲರೂ ಬಹುಶಃ ಚಮ್ಮಚ ಉಪಯೋಗಿಸೋವರೆ. ಶಾಸ್ತ್ರದಲ್ಲ್ ಹೇಳಿರೋವಂತೆ, ಮೌನವಾಗ್ ಊಟಮಾಡೋದಿಲ್ಲ. ಹಾಗೆ ಮಾಡಿದ್ರೆ ಅವನಿಗೆ ಏನೋ ಪ್ರಾಬ್ಲೆಮ್ಮಿದೆ ಅಂತ ಯಾರೂ ಅವನ ಹತ್ತಿರ ಊಟ ಮಾಡೋದಿಲ್ಲ. ಊಟದ್ ಸಮಯದಲ್ಲ್ ನಡೆಯೋವಷ್ಟು ಚರ್ಚೆ, ವಾದ, ನಗು, ಜೋರುಮಾತು, ಬೇರೆ ಯಾವಾಗ್ಲೂ ನಡೆಯೋದಿಲ್ಲ.

ಅದಿರಲಿ. ದಿನಕ್ಕೆ ಮೂರು ಬಾರಿ ಸಂಧ್ಯಾವಂದ್ನೆ ಮಾಡೋದಂತೂ ಖಂಡಿತ ನಡೆಸ್ಲಾಗದಂಥ ವಿಧಿ. ಈಗಿನ ವಿದ್ಯಾಭ್ಯಾಸ ಕ್ರಮ, ಸ್ಕೂಲುಗಳ್ ಸಮಯ, ನಿಯಮಗ್ಳು, ಇಲ್ಲ್ ಬೆಳೆಯೋ ಹುಡುಗರಿಗಿರೋ ಕಾರ್ಯಕ್ರಮ, ಆಟ, ಸಂಗೀತ, ಇ-ಮೇಲ್, ಹೋಂ ವರ್ಕ್ ಎಲ್ಲಾ ಮಾಡ್ಯಾದಮೇಲೆ, ನಿನಗ್ ಅನುಕೂಲವಾದಾಗ್, ಸಂಧ್ಯಾವಂದ್ನೆ ಮಾಡಪ್ಪ, ಅಂತ್ ಹೇಳಿದ್ರೆ ನಡೆಯುತ್ತೇನ್ರಿ? ಇದೊಂದು ಜೋಕು. ಏನೋ ಋಗ್ವೇದದ್ ಕಾಲದಲ್ಲಿ, ಗಗನ್‌ದಲ್ಲಿ ಕಂಡದ್ದೆಲ್ಲಾ, ನಡೆದದ್ದೆಲ್ಲಾ ಒಂದು ದೇವತೆಯಂತೆ ಅಂತ ತಿಳ್ಕೊಂಡಿದ್ರು. ಆಗ ಆಚರಣೇಗ್ ಬಂದದ್ದು ಈ ಸಂಧ್ಯಾವಂದ್ನೆ ಅನ್ನೋದು. ಅದನ್ನ ಇಲ್ಲೀವರ್ಗೆ ಹೇಗೋ ಉಳಿಸ್ಕೊಂಡು ಬಂದದ್ದೇ ಒಂದ್ ಮಿರಕಲ್ಲು. ಅದನ್ನ ಇಲ್ಲಿಯೂ, ಈ ಅಲ್ಟ್ರಾ ಮಾಡರ್ನ್ ಅಮೇರಿಕಾ ಜೀವನಶೈಲೀಲೂ ನಡೆಸ್ಕೊಂಡು ಬಾ ಅಂತ ಈ ಸಣ್ಣ ಹುಡುಗರಿಗ್ ಹೇಳಿದರೆ ಹೇಗಾಗುತ್ರೀ? ಸಮಯ ಎಲ್ಲಿ ಸಿಗುತ್ರೀ? ಅವರೇನ್ ಜಾದೂಗಾರ್ರಾ, ನೀವೇ ಹೇಳಿ' ಎಂದು ನನಗೆ ಮರು ಪ್ರವಚನ ಹಿಂದಿರುಗಿಸಿದ ಅಳಗು.

ಅವನ ಮಾತೆಲ್ಲ ಶತಶಃ ನಿಜ. ಆದ್ದರಿಂದ ಅದನ್ನೆಲ್ಲಾ ಒಪ್ಪಿಕೊಂಡೆ. 'ಆಗೊಲ್ಲ. ಒಂದೆರ್ಡ್ ತಿಂಗ್ಳಲ್ಲ್ ಬಿಟ್ಬಿಡ್ತಾರೆ. ಅಷ್ಟೆ' ಎಂದೆ. 'ಆದ್ರೆ, ನಮ್ ಜನ ಈ ಕಾರಣಕ್ಕೇಂತ ಉಪನಯನ ಮಾಡೋದನ್ನ ನಿಲ್ಲಿಸೋಕ್ ಸಿದ್ಧ್ರಾಗಿಲ್ಲ. ನಾವೆಲ್ಲಾ ಇನ್ನೂ ಈಗ್ತಾನೇ ವಲಸೆ

ಬಂದಿರೋರು. ಅಲ್ಲಿ ಏನೇನ್ ಯಾವ್ಯಾವ್ಕಾಲಕ್ ಮಾಡ್ತ ಇದ್ರೋ, ಅದೆಲ್ಲಾ ಇಲ್ಲೂ ಆಯಾ ಕಾಲಕ್ಕ್ ನಡೆಸ್ಕೊಂಡ್ ಹೋಗೋಕ್ ಪ್ರಯತ್ನ ಮಾಡ್ತೀವಿ, ಹಾಗ್ಮಾಡೋಕ್ಕೆ ಆರ್ಥಿಕ ಶಕ್ತಿ ಇರೋ ತನಕ. ಈಗ ಇಂಡಿಯಾಲ್ಲೂ ಇದೇ ಸ್ಥಿತಿ ಆಗಿದೆಯಲ್ಲಾ. ಅಲ್ಲಿ ಹುಡುಗರೂ ನಮ್ ಥರಾನೇ ಈ ಬ್ರಾಹ್ಮಣ್ಕೇ ಆಚಾರಾನೆಲ್ಲ ಬಿಟ್ಬಿಡ್ತಿದ್ದಾರಲ್ವಾ? ಅಲ್ಲಿ ಯಾವಾಗ ಇದೆಲ್ಲಾ ಸಂಪೂರ್ಣ ನಿಂತುಹೋಗುತ್ತೋ, ಆಗ ಇಲ್ಲೂ ಹೋಗಿಬಿಡುತ್ತೆ. ಹಾಗೆ ಆಗದಿದ್ರೆ, ಅದು ನಿಜವಾಗ್ಲೂ ವಿಚಿತ್ರವಾಗಿ ಕಾಣುತ್ತೆ ಅಲ್ವಾ?' ಎಂದೆ. 'ಈಗ ಆ ಮಾತೆಲ್ಲಾ ಯಾಕೆ? ನಮ್ಮ ಹುಡುಗ್ರು ಪರಿಷೇಚನ, ಸಂಧ್ಯಾವಂದ್ನೆ, ಮಾಡ್ತಾರೂ ಬಿಡ್ತಾರೂ ಯಾರು ನೋಡ್ತಾರೆ, ಯಾರ್ ಕೇಳ್ತಾರೆ ಇಲ್ಲಿ? ಬಿಡಿ ಅವರಿಗೀಗ ಜನಿವಾರ ಬಂದದ್ದು ಮುಖ್ಯ. ಅಷ್ಟೆ. ಇನ್ನು ಮುಂದಕ್ಕೆ, ಅವ್ರು ಅದನ್ ಹಾಕಿಕೊಂಡಿದ್ರೂನೂ ಒಂದೆ, ಹಾಕಿಕೊಳ್ದೇ ಇದ್ರೂನೂ ಒಂದೆ. ಅವ್ರಿಗೆ 'ಉಪನಯನ' ಮಾಡಿಯಾಯಿತು. ಅವ್ರಿಗಾಗ್ಬೇಕಾದ ಸಂಸ್ಕಾರ ಮಾಡಿಯಾಯ್ತು. ಅದರ ಸಂಪೂರ್ಣ ದಾಖಲೆ ಹೇಗಿದ್ದರೂ ಇದೆ. ನಿಮಿಷ್ ನಿಮಿಷಕ್ಕೂ ಒಂದೊಂದು ವಿಧಿಯನ್ನೂ ವಿಡಿಯೋ ತೆಕ್ಕೊಂಡಿಟ್ಟುಕೊಂಡಿರೋದು ಯಾಕ್ಮತ್ತೆ?' ಎಂದು ಮಾತು ಮುಂದುವರಿಸಿದೆ. ನಮ್ಮ ಕಾಫಿ ಮೊದಲು ಬಹಳ ಬಿಸಿಯಾಗಿದ್ದುದು, ಈಗ ಸುಖೋಷ್ಣವಾಗಿ ಕುಡಿಯುವುದಕ್ಕೆ ಹಿತವಾಗಿತ್ತು. ನಮ್ಮ ಭಾವನೆಗಳೂ ಹಾಗೆಯೇ ಹೊಂದಿಕೊಳ್ಳುವ ಹಾಗೆ ತೋರಿತು. ಒಂದು ಘಳಿಗೆ ಮೌನವಾಗಿ ಇಬ್ಬರೂ ಕಾಫಿಯನ್ನು ಹೀರುತ್ತಾ ಕುಳಿತೆವು. ಆದರೆ ಅಳಗುವಿನ ಮನಸ್ಸಿನಲ್ಲಿ ಸಂಪೂರ್ಣ ಸಮಾಧಾನ ಬಂದಿಲ್ಲವೆಂದು ವ್ಯಕ್ತವಾಗುತ್ತಿತ್ತು.

'ಆದ್ರೂ ನೋಡಿ, ಅಣ್ಣಾವ್ರೆ, ಈಗ ನಡೆದ ಉಪನಯನ್‌ದಲ್ಲಿ ಅಷ್ಟೆಲ್ಲಾ ಆಚಮನ, ಪ್ರಾಣಾಯಾಮ, ಅಗ್ನಿಕಾರ್ಯ, ಇವೆಲ್ಲಾ ಮುಗಿದ್‌ಮೇಲೆ, ಆ ಪಾರ್ಟಿ ಥರಾ ಔತಣ, ಅಂದ್ರೆ ವೈನು, ವ್ಹಿಸ್ಕಿ, ಬ್ಯಾಂಡು, ಕುಣಿತ, ವಿಧವಿಧ ವಾದ್ಯಗಳನ್ನ ಊದೋದು, ಹಾಗೆಲ್ಲಾ ಧಾಮ್ ಧೂಮ್ ನಡೆಸಿದ್ದು ನನಗ್ ಸ್ವಲ್ಪಾನೂ ಸರಿ ಹೋಗಲಿಲ್ಲ. ಅದ್ ಸರೀನಾ? ಏನು?' ಎಂದು ಪ್ರಶ್ನೆ ಹಾಕಿ ನನ್ನ ಮುಖ ನೋಡುತ್ತಾ ಕಾಫಿ ಹೀರುವುದನ್ನು ಮುಂದುವರಿಸಿದ. 'ಅದಾ, ಹೌದು. ಈಚೆಗೆ ಈ ಹೊಸ ರೀತಿ ಉಪನಯನದ ಔತಣ ಹಾಕೋದು ಪ್ರಾರಂಭವಾಗಿದೆ. ಕಾರಣ, ಈ ಜ್ಯೂಯಿಷ್ ಜನರ ಸಹವಾಸ. ಅವರು ನಮ್ಮ ಉಪನಯನವನ್ನ ತಮ್ಮ ಬಾರ್ ಮಿತ್ಸ್ವಾಹ್‌ಗೆ ಹೋಲಿಸ್ಕೊಂಡು, ನಾವ್ ಅದನ್ನ ಒಪ್ಕೊಂಡು, ಈ ಹೊಸ ಪದ್ಧತಿ ಹುಟ್‌ಕೊಂಡಿದೆ ಕಣಯ್ಯಾ. ಅವ್ರು ಜಾಣ್ರು. ಅವ್ರಲ್ಲಿ ಮಗನ ವಿದ್ಯಾಭ್ಯಾಸ ಪ್ರಾರಂಭಿಸೋವಾಗ, ಅಂದ್ರೆ, ಗುರುಮನೆಗ್ ಕಳ್ಸೋವಾಗ ಅಲ್ಲ ಪಾರ್ಟಿ ಕೊಡೋದು. ಅವ್ನು ವಿದ್ಯಾಭ್ಯಾಸ ಮುಗಿಸ್ಕೊಂಡ್ ಬಂದಾಗ ಕೊಡ್ತಾರೆ. ಅಲ್ದೆ, ಅವರಲ್ಲಿ ಮದ್ಯ ಇಲ್ಲದೇ ಔತಣ ಅನ್ನೋದ್ ಇಲ್ಲವೇ ಇಲ್ಲ. ನಾವು ಅವರನ್ನನುಸರಿಸೋಕ್ ಹೋಗಿ, ಈ ಥರಾ ಅಸಂಬದ್ಧಗಳು ಹುಟ್ಟಿಕೊಳ್ತ್ವೆ. ಅಮೇರಿಕಾಕ್ ವಲಸೆ ಬಂದು ಇಂಡ್ಯಾದಲ್ಲಿರೋ ಹಾಗೇ ಇರೋಕಾಗುತ್ತೇನಯ್ಯ? ಹೇಗೋ ಹೊಂದ್ಕೊಂಡ್ ಹೋಗ್ಬೇಕು.

ಒಟ್ನಲ್ಲೆಲ್ಲಾರೂ ನಗ್‌ನಗ್ತಾ ಸುಖವಾಗಿದ್ದರೆ ಸರಿ, ಅಲ್ವಾ?' ಎಂದು ಸಮಾಧಾನ ಮಾಡಲು ಪ್ರಯತ್ನಿಸಿದೆ. ನನ್ನ ಮಾತು ಅವನಿಗೆ ಅಷ್ಟೇನೂ ಹಿತ ತರಲಿಲ್ಲ. 'ಇಂಥ ಉಪನಯನಾನ್ನೇ ನಾನು ಉಪಹಸನ ಅಂತ ಕರೆದಿದ್ದು. ನೀವು ಅದು ಉಪಹಸನ ಅಲ್ಲ, ಒಂದು ಪ್ರಹಸನ ಅಂತ ತೋರಿಸ್ಕೊಟ್ರಿ; ಅಷ್ಟೆ. ಅದಕ್ಕೇ ನಾನ್ ಹಠ ಹಿಡಿದು ವಾದಿಸಿದ್ದು ಅಣ್ಣಾವ್ರೆ, ಈ ಅರ್ಥ ಕಳೆಕೊಂಡಿರೋ ಪದ್ಧತೀನ ನಿಲ್ಲಿಸ್‌ಬಿಡೋದೆ ವಾಸಿ ಅಂತ. ನನ್ ಮಾತ್ ನಡೀಲಿಲ್ಲ. ಆಯ್ತು. ಅಣ್ಣಾವ್ರೆ, ಹಳೇ ಕಾಲದಿಂದ್ ಬಂದಿರೋ ಈ ತುಂಬಾ ಗಂಭೀರವಾದ್ ಸಂಸ್ಕಾರಾನ್ ತೆಗೊಂಡು, ಹೀಗೆ ಛಿದ್ರ ಛಿದ್ರವಾಗಿ ಹರಿದು ಕನ್ನಾ ಪಿನ್ನಾ ಆಚರಿಸಿದ್ರೆ ಅದಕ್ಕವಮಾನ ಮಾಡಿದ್ ಹಂಗೆ ನಿಮಗ್ ಅನ್ನಿಸೋದಿಲ್ವಾ, ನಿಜ ಹೇಳಿ' ಎಂದು ತನ್ನ ಮನಸ್ಸಿನಲ್ಲಿದ್ದ ಉದ್ವೇಗದ ನಿಟ್ಟುಸಿರನ್ನು ನನ್ನ ಮೇಲೆ ಬಿಟ್ಟ. ನನಗೆ ಅವನ ಪರಿಸ್ಥಿತಿ ಚೆನ್ನಾಗಿ ಅರ್ಥವಾಗಿ ಸಹಾನುಭೂತಿಯೂ ಹುಟ್ಟಿತು. ಆದರೆ ಅವನಿಗೆ ಮನಸ್ಸಮಾಧಾನ ತರುವುದನ್ನು ನಿಲ್ಲಿಸಲು ಮಾತ್ರ ಮನಸಾಗಲಿಲ್ಲ. ನನ್ನ ನಿಲುವನ್ನೇ ಹಿಡಿದು ಮುಂದುವರಿಸಿದೆ.

'ಅಳಗು, ನೋಡಪ್ಪ, ನೀನು ಬಹಳ ಸಂಪ್ರದಾಯಸ್ಥ ಮನೆತನದವನೆಂದ್ ನನಗ್ ಗೊತ್ತು. ಇದೆಲ್ಲ ನೋಡಿ ನಿನ್ನ ಮನಸ್ಸಿಗೆ ಕಷ್ಟವಾಗಿದೆ. ನೀನು ನಿನ್ ಮಗನ್‌ಗೆ ಉಪನಯನ ಮಾಡ್ದಾಗ ಇದಕ್ಕಿಂತ ಹೆಚ್ಚಾಗಿ ಸಂಪ್ರದಾಯ ಬದ್ಧವಾಗಿ ನಿನಗೆ ತೃಪ್ತಿಕರ್ವಾಗಿ ಮಾಡಿದೆ. ಸರಿ. ಒಪ್ಪಿಕೊಳ್ತೇನೆ. ಈಗ ನಿನ್ನ ಮಗನ್ಮಗನ್ಗೆ ಉಪನಯನ ನಡೀತಿರೋದು ಅಂತ ಮರೀಬೇಡ. ಒಂದೊಂದು ತಲೆಮಾರಿಗೂ, ದೇಶಕಾಲಗಳು ವ್ಯತ್ಯಾಸವಾದಂತೆಲ್ಲಾ ಇಂಥಾ ಆಚಾರಗಳು ಅದಕ್ಕೆ ತಕ್ಕಂತೆ ಬದಲಾಯಿಸ್ತಾ ಹೋಗುತ್ತವೆ ಕಣಯ್ಯ. ಇದು ಕಾಲಧರ್ಮ. ನಮ್ಮ ಪರಿಸ್ಥಿತಿಯಲ್ಲಿರೋವರಿಗೆ ದೇಶಧರ್ಮ ಕೂಡ. ಈಗ ನಿನ್ನ ಮಗ, ಸೊಸೆ- ಮುಖ್ಯ ಸೊಸೆ- ಷೀ ಕಾಲ್ಸ್ ದಿ ಷಾಟ್ಸ್, ಐ ಸೇ. ನೀನು, ಏನಿದ್ರೂನೂ, ಗಂಭೀರ್ವಾಗಿ, ಗೌರವ್‌ದಿಂದ, ಎಲ್ಲಕ್ಕೂ ಸಹಕರ್ಸಿಕೊಂಡು ಸಂತೋಷ್ವಾಗಿರೋದೆ ಮೇಲು. ನಿನ್ನ ಸಲಹೆ ಏನಾದ್ರೂ ಇದ್ರೆ ಅದನ್ನು ಕೊಡಬಾರದು ಅಂತಲ್ಲಾ ನಾನ್ ಹೇಳೋದು. ಹಾಗೇ ಮಾಡ್ಬೇಕು ಅಂತ ಹಠ ಮಾಡ್ಬಾರ್ದು. ನೋಡು. ಈಗ ನಾವು ಮಾಡೋ ಸಂಧ್ಯಾವಂದ್ನೆ ಋಗ್ವೇದವ್ ಕಾಲದಿಂದ ಹಾಗೇ ಸ್ವಲ್ಪೂ ವ್ಯತ್ಯಾಸವಿಲ್ಲದೇ ಉಳ್ಕೊಂಡ್ ಬಂದಿದ್ಯೇನಯ್ಯಾ? ಒಂದೆರಡು ಅರ್ಥ್ವಾಗದ ಮಂತ್ರಗಳ್ ಮಾತ್ರ ಆ ಕಾಲದ್ದು. ಆಚಮನದಲ್ಲಿ ಬರೋ ದೇವತೆಗಳ್ಯಾರೂ ವೇದದ್ಕಾಲದವರಲ್ಲ. ಪ್ರಾಣಾಯಾಮ ಕೂಡ ಪತಂಜಲೀ ಯೋಗದ ಕಾಲದ್ದು, ವೇದದ್ದಲ್ಲ. ಆಮೇಲೆ, ನಿಜವಾದ ಸಂಧ್ಯಾವಂದ್ನೆ, ಅಂದ್ರೆ, ಕಡೇಲಿ ಸಂಧ್ಯಾದೇವಿಗೆ ನಮಸ್ಕಾರ ಸಲ್ಲಿಸ್ತೇವಲ್ಲ, ಅದೆಲ್ಲ ಸಾಕಷ್ಟು ಇತ್ತೀಚಿನದು. ಅದಾದಮೇಲೆ ಬರೋ ಸೊಗಸಾದ ಶ್ಲೋಕಗಳೆಲ್ಲ ದಕ್ಷಿಣದೇಶದವು. ಹೀಗೆ ಈ ಆಚಾರ ಕಾಲ ಸರಿದ ಹಾಗೆ, ಬದಲಾಯ್ತುತ್ತಾ ಬಂದಿದೆ. ಈಗಲೂ ಅಷ್ಟೆ. ಅವನ್ನು ನೀನು ಕಟ್ಟಿಹಾಕಿ ಇಟ್ಟುಕೊಳ್ಳೋಕ್ ಆಗೊಲ್ಲ. ಅದನ್ನ್ ಸ್ವತಂತ್ರವಾಗಿ ಹರ್ಕೊಂಡ್ ಹೋಗೋಕ್ ಬಿಡಬೇಕು.

ಈ ಆಚಾರದಲ್ ಆಗೋ ವ್ಯತ್ಯಾಸಗ್ಳಲ್ಲಿ ಕೆಲವು ಅದರ ಫಾರಮ್‌ನಲ್ಲಿ. ಇನ್ ಕೆಲವು ಅದರ ಸಬ್ಸ್ಟೆನ್ಸ್‌ನಲ್ಲಿ. ಗಂಡಸರು ಸಾಮಾನ್ಯವಾಗಿ ಸಬ್ಸ್ಟೆನ್ಸ್‌ಗೆ ಪ್ರಾಮುಖ್ಯತೆ ಕೊಟ್ಟು ಅದನ್ನ್ ಬಿಗಿಯಾಗಿ ಹಿಡ್ಕೋಂತಾರೆ. ಹೆಂಗಸರಿಗೆ ಫಾರಂ ತುಂಬ ಮುಖ್ಯ. ಅದು ಬದಲಾಯ್ಸ್‌ಧಂಗೆ ಹಠ ಹಿಡೀತಾರೆ. ಅಮೆರಿಕದಲ್ಲಿ ಹೆಂಗಸರ ಬಲ ಹೆಚ್ಚು ಕಣಯ್ಯ. ನಿನಗೆ ಇನ್ನೂ ಗೊತ್ತಾಗಿಲ್‌ದಿದ್ರೆ, ಈಗಲಾದ್ರೂ ತಿಳ್ಕೋ. ಇನ್ನು ಆ ಪಾರ್ಟಿ ವಿಷ್ಯ. ನೋಡು, ಈಗ ಅಮೇರಿಕಾಕ್ಕೆ ಬಂದ್ ನೆಲಸಿರೋ ಹಿಂದೂಗ್ಳು ಈ ಜೂಯಿಷ್ ಜನರ ಮಕ್ಕಳನ್ನ ಮದ್ವೆ ಮಾಡಿಕೊಳ್ಳೋದ್ ಸರ್ವೇ ಸಾಮಾನ್ಯವಾಗಿರೋದ್ ನಿನಗ್ ತಿಳೀದ್ ಸಮಾಚಾರವೇನಲ್ಲ. ಅವರನ್ನ್ ಅನುಕರಿಸೋದು, ನಾವೂ ಅವ್ರಿಗ್ ಸಮಾನ ಅನ್ನುವ ಭಾವ್ನೆ ನಮಗೆ ಬೇಕಾಗಿದೆ ಈಗ. ಅವ್ರಿಗ್ ನಮ್ಮ ಸಂಸ್ಕೃತಿ ಬಗ್ಗೆ ತಿಳಿಸೋದು ನಮ್ ಜನಗಳಿಗ್ ತುಂಬಾ ಅವಶ್ಯಕ್ವಾಗಿದೆ. ಅದರಿಂದ ಈ ಪಾರ್ಟಿ ಪರ್ಟಿನೆಂಟಾಗ್ಯೇ ಇದೆ. ಅದನ್ ತುಂಬಾ ಮನಸ್ಸಿಗ್ ಹಚ್ಚಿಕೋ ಬೇಡ' ಎಂದು ನನ್ನ ವಾದದ ಧೋರಣೆಯನ್ನು ಇನ್ನೂ ಸ್ವಲ್ಪ ವಿಶದಪಡಿಸಿದೆ.

'ನೀವ್ ಏನೇ ಹೇಳಿ. ಇದೆಲ್ಲಾ ಇಲ್ಲಿಯೇ ಬೆಳೆದ ನಮ್ಮ ಮಕ್ಕಳಿಗೆ ನಮ್ಮ ಸಂಸ್ಕೃತಿ ಸರಿಯಾಗ್ ತಿಳೀದೇ ಇರೋದೇ ಕಾರಣ. ಅದರಲ್ಲೂ ಇಲ್ಲಿ ಹೆಂಗಸರ ಬಲ, ಛಲ, ತುಂಬಾ ಹೆಚ್ಚು. ದಿಗ್ಬಲಂ ಪುರುಷಬಲಂ ಸ್ತ್ರೀಬಲಂ ಬಲಂ ಬಲಂ!' ಎಂದು ಹೇಳುತ್ತಾ ಎರಡು ಕೈಗಳನ್ನೂ ಮೇಲಕ್ಕೆತ್ತಿ, ಹೋಮ ಕುಂಡಕ್ಕೆ ಪೂರ್ಣಾಹುತಿ ಕೊಡುವ ಹಾಗೆ, ಕುಡಿದು ಮುಗಿದ ಖಾಲಿ ಕಪ್ಪನ್ನು ಟೇಬಲ್ಲಿನ ಮೇಲಿಟ್ಟು ಕುಕ್ಕಿದ. ನನಗೆ ಸ್ವಲ್ಪ ಗಾಬರಿಯಾಯಿತು. ಅವನು ಈ ಕಳೆದ ಕೆಲವು ತಿಂಗಳು ತನ್ನ ಮಗ, ಸೊಸೆ, ಬೀಗಿತ್ತಿಯರ ಜೊತೆ ಸಾಕಷ್ಟು ಹೆಣಗಾಡಿ ಸೋತಿದ್ದಾನೆಂದು ಸ್ಪಷ್ಟವಾಯಿತು. 'ಹೌದಯ್ಯಾ, ನಿನ್ನ ಮಾತು ಶತಶಃ ನಿಜ. ದಿಗ್ಬಲಂ ಪುರುಷಬಲಂ... ಎಲ್ಲಾ ಅವರ ಕೈಯಲ್ಲಿ ಬಿಟ್ಟು, ಅವರು ಹೇಗ್ ಮಾಡ್ತಾರೋ ಹಾಗಾಗ್ಲಿ ಅಂತ ಬಿಡು. ತೆಪ್ಗಿರು. ಯಾಕ್ ಸುಮ್ನೆ ತಲೇಕೆಡ್‌ಸ್ಕೋತೀಯ?' ಎಂದು ಹೇಳಿ ಮುಗಿಸಿದೆ. ಕಾಫಿ ಕಪ್ಪುಗಳನ್ನು ಕಸದ ಬುಟ್ಟಿಯಲ್ಲಿ ಎಸೆದು ನಾವಿಬ್ಬರೂ ವಿದಾಯ ಹೇಳಿ ನಮ್ಮ ನಮ್ಮ ದಾರಿ ಹಿಡಿದೆವು.

ನಾನು ಮನೆಗೆ ಕಾರ್ ಓಡಿಸುತ್ತಾ ಅಳಗುವಿನ ಮಾತುಗಳನ್ನು ಮನಸ್ಸಿನಲ್ಲಿ ಮೆಲಕು ಹಾಕಲು ತೊಡಗಿದಾಗ, ನಾವು ಈಗ ಚರ್ಚೆಮಾಡಿದ ಈ ವಿಷಯ ಇಲ್ಲಿಗೆ ಬಂದು ನೆಲಸಿರುವ ನಮ್ಮ ಹಿಂದು ಸಮಾಜದ ಒಂದು ಜಟಿಲ ಪ್ರಶ್ನೆಯಲ್ಲವೆ ಎಂದೆನಿಸಿತು. ಇಲ್ಲಿ ನಾವು ಎಂತಹ ಹಿಂದೂಯಿಸಂ ಸ್ಥಾಪಿಸಬೇಕು? ಚಾತುರ್ವರ್ಣ್ಯದ ತಳಹದಿಯ ಮೇಲೆ ನಿಂತಿರುವ ನಮ್ಮ ಇತ್ತೀಚಿನ ಅನುಭವದ ಹಿಂದೂಯಿಸಂ ಇಲ್ಲಿ ನಡೆಯುವುದೆ? ಅದು ನಡೆದರೂ ಅದನ್ನು ಇಲ್ಲಿ ನೆಡುವುದು ಸೂಕ್ತವೆ? ಎಂದು ಮನಸ್ಸಿನಲ್ಲಿ ಚರ್ಚೆ ಪ್ರಾರಂಭವಾಯಿತು.

ನಾನು ನಮ್ಮ ಜೊತೆಗೆ ಇಲ್ಲಿಗೆ ಬಂದು ನೆಲಸಿರುವವರಲ್ಲಿ ನಾನಾ ಬಗೆಯ ಬ್ರಾಹ್ಮಣರ

ಮತ್ತು ಬ್ರಾಹ್ಮಣೇತರರ ಪರಿಚಯ ಮಾಡಿಕೊಂಡಿದ್ದೇನೆ. ಅವರಲ್ಲಿ ಕೆಲವರು ಸಂಪ್ರದಾಯಸ್ಥರು. ಅವರಲ್ಲಿ ಕೆಲವರು ಮಹಾಶಕರಿದ್ದಾರೆ. ಅವರು ಯಜ್ಞಗಳನ್ನು ಮಾಡಿಸುವುದು, ವೇದಗಳನ್ನು ಗೋಷ್ಠಿಗಳನ್ನು ನಡೆಸುವುದು, ಮಿಲಿಯನ್ ಡಾಲರುಗಳ ಚಂದಾ ಎತ್ತಿ ದೇವಸ್ಥಾನಗಳನ್ನು ಕಟ್ಟಿಸಿ ಅವುಗಳ ಪಾರುಪತ್ಯ ನಡೆಸುವುದು ಮುಂತಾದ ಕಾರ್ಯಗಳಲ್ಲಿ ನಿರತರಾಗಿದ್ದಾರೆ. ಒಬ್ಬರು ತಮ್ಮ ಭಾಷಣಗಳ ಪ್ರಾರಂಭದಲ್ಲಿ ಜೋರಾಗಿ ಒಂದು ಶಂಖ ಊದಿ ಪ್ರಖ್ಯಾತಿಪಡೆದಿದ್ದಾರೆ. ಮಹಾಶಕರಲ್ಲಿ ಕೆಲವರು ಸ್ತ್ರೀಯರು ವೇದಗಳನ್ನು ಕಲಿಯಬಾರದೆಂದು ಹಠ ಮಾಡುತ್ತಾರೆ. ಅವರ ಪ್ರಕಾರ ಅವರು ವೇದದ ಯಾವ ಪುಸ್ತಕವನ್ನೂ ಮುಟ್ಟಲು ಕೂಡ ಅರ್ಹರಲ್ಲ. ಅವರ ಮನೆಗಳಲ್ಲಿ ಸ್ತ್ರೀಯರು ಮಾಸದ ದಿನಗಳನ್ನು ಹೇಗೆ ಕಳೆಯುತ್ತಾರೋ ನನಗೆ ತಿಳಿಯದು. ಬಹಳ ಕಷ್ಟಪಡುತ್ತಾರೆಂದು ನನ್ನ ಊಹೆ.

ಇನ್ನು ಕೆಲವರು ಈ ಜನರ ಪ್ರತಿಗಾಮಿಗಳಾಗಿ, ತಮ್ಮ ಬ್ರಾಹ್ಮಣ್ಯವನ್ನು ಸಂಪೂರ್ಣ ಅಥವಾ ಅರ್ಧಮ್ಮರ್ಧ ತ್ಯಜಿಸಿ ಅಜಾವಿಕುಕ್ಕುಟಗೋಋುಷರುಚಿತಜ್ಞರಾಗಿ, ಓನಾಲಜಿ ಪ್ರವೀಣರಾಗಿ, ಅನುಕೂಲ ಚರ್ಯೆಯವರಾಗಿದ್ದಾರೆ. ಈ ಪ್ರತಿಗಾಮಿಗಳ ಪೈಕಿ ಕೆಲವು ಸ್ತ್ರೀಯರಿಗೆ ವೇದ ಕಲಿಯುವ ಹುಚ್ಚು ಬಹಳ. ನಾವೂ ಜನಿವಾರ ಹಾಕಿಕೊಳ್ಳಬೇಕು, ನಮ್ಮ ಹೆಣ್ಣುಮಕ್ಕಳಿಗೂ ಉಪನಯನ ಮಾಡಬೇಕು ಎಂದು ಅವರ ಹಠ. ಹಿಂದಿನ ಕಾಲದಲ್ಲಿ ಋಷಿಪತ್ನಿಯರು ಜನಿವಾರ ತೊಟ್ಟುಕೊಳ್ಳುತ್ತಿದ್ದರೆಂದು ಅವರು ವಾದಿಸುತ್ತಾರೆ. ಮಾಸದ ದಿನಗಳು, ಗರ್ಭಧಾರಣೆ, ಶಿಶುಪಾಲನೆ, ಅವುಗಳ ಮಲಮೂತ್ರಗಳ ಶೌಚ, ಇವೆಲ್ಲಾ ಅವರ ಜೀವನದಲ್ಲಿ ಸತತವಾಗಿರುವುದರಿಂದ, ಹಾಗೆ ಎಂದೂ ಇರಲಿಲ್ಲವೆಂದು ಒಂದು ದಿನ ನಾನು ಒಬ್ಬ ಮಹಿಳೆಯ ಹತ್ತಿರ ವಾದಿಸಿದೆ. ಆಗ ಅವಳು ನನ್ನ ಮನೆಯಲ್ಲೇ, ಬಾಗಿಲ ಮುಂದೆಯೇ ಇರುವ ಒಂದು ದೇವತೆಯ ಪ್ರತಿಮೆಯ ಮುಂದೆ ನನ್ನನ್ನು ಕರೆದುಕೊಂಡು ಹೋಗಿ ನಿಲ್ಲಿಸಿ ನೋಡಿ ಎಂದು ತೋರಿಸಿದಳು. ಆ ಪ್ರತಿಮೆಯ ದೇವತೆ ನಿಸ್ಸಂದೇಹವಾಗಿ ಉದ್ದದ ಮೂರೆಳೆಯ ಜನಿವಾರ ತಳೆದಿದ್ದಾಳೆ. ಅದು ಅವಳ ಸುಸೌಷ್ಠವಸ್ತನಗಳ ಮಧ್ಯೆ ಠೀವಿಯಿಂದ ಹರಿದು ಕಟಿಪ್ರದೇಶವನ್ನು ದಾಟಿ ಸಾಕಷ್ಟು ನಿಮ್ನಗಾಮಿಯಾಗಿ ರಾರಾಜಿಸುತ್ತಿದೆ. ಅದನ್ನು ನಾನು ಎಂದೂ ಗಮನಿಸಿ ನೋಡಿಯೇ ಇರಲಿಲ್ಲ. ನನ್ನ ಮೊಖ ಅಂದು ಬಹಳ ಪೆಚ್ಚಾಯಿತು.

ಇಲ್ಲಿಯೇ ಬೆಳೆದ ಮೊದಲನೆಯ ತಲೆಮಾರಿನ ಮಕ್ಕಳು ಬಹುಪಾಲು ಅಮೆರಿಕನ್ ಯುವಕ ಯುವತಿಯರನ್ನು ಮದುವೆ ಮಾಡಿಕೊಂಡು ವರ್ಣ ಸಂಕರ ನಡೆಯುತ್ತಿದೆ. ಹೀಗೆ ನಮ್ಮ ಸಮಾಜ ಸ್ವಾಭಾವಿಕವಾಗಿ ನಮ್ಮನ್ನು ಆವರಿಸಿರುವ ಬಾಹ್ಯ ಸಮಾಜಕ್ಕೆ ಬೆಸೆದುಕೊಳ್ಳುತ್ತಿದೆ. ಈಗ ಅಮೆರಿಕದಲ್ಲಿ ನೂರಕ್ಕಿಂತ ಹೆಚ್ಚು ಹಿಂದೂ ದೇವಸ್ಥಾನಗಳಿವೆಯಂತೆ. ಇನ್ನೂ ಹಲವು ನಿರ್ಮಾಣಗೊಳ್ಳುತ್ತಿವೆ. ಆಶ್ಚರ್ಯದ ವಿಷಯವೆಂದರೆ ಇವುಗಳೆಲ್ಲ ಶಿವ-ವಿಷ್ಣು ವೈಷಮ್ಯ ರಹಿತವಾಗಿರುವುದು. ಪೂಜಾರಿಗಳು ಕೂಡ ನಾಮ, ವಿಭೂತಿ, ಗಂಧ, ತಿಲಕ, ಎಲ್ಲಾ ವಿಧವಾದ ಲಲಾಟಾಲಂಕಾರಗಳನ್ನೂ ಧರಿಸಿ ಆಯಾ ದೇವರಿಗೆ ತಕ್ಕ ಆಯಾ ಸ್ತೋತ್ರಾದಿಗಳನ್ನು

ಪಠಿಸಿ ಪೂಜೆ, ಅರ್ಚನೆ, ಸಲ್ಲಿಸುತ್ತಾರೆ. ಇಲ್ಲಿಯ ಪುರೋಹಿತ-ಅರ್ಚಕವರ್ಗ ಇಲ್ಲಿಗೆ ಹೊಂದಿಕೊಂಡು ಉದಾರಬುದ್ಧಿ ಬೆಳೆಸಿಕೊಂಡು ಜನಸಾಮಾನ್ಯರ ನಿರೀಕ್ಷೆಯನ್ನು ಮೀರಿಸಿದ್ದಾರೆಂದು ನನಗನ್ನಿಸಿದೆ. ಇಲ್ಲಿ ಒಬ್ಬರು ಪುರೋಹಿತ ಅನ್ನಿಸಿಕೊಂಡಿರುವವರು ಗೇ-ಮದುವೆಯನ್ನು ಕೂಡ ಮಾಡಿಸಿರುವುದು ನನಗೆ ಗೊತ್ತು.

ಹೀಗೆ ಅನುಗಾಮೀ, ಪ್ರತಿಗಾಮೀ ಸೆಳೆತಗಳಿಗೆ ಸಿಕ್ಕಿ ಇಲ್ಲಿಯ ಹಿಂದೂಯಿಸಂ ಕೊಂಕರುಬಂಕರು ಗತಿಯಲ್ಲಿ ಹೇಗೆ ಹೇಗೋ ಸಾಗುತ್ತಿದೆ. ಈಗ ನಮ್ಮ ಪರಂಪರೆಗೆ ಬಂದಿರುವ ಸಂಪ್ರದಾಯದ ಪದ್ಧತಿಗಳಲ್ಲಿ ಯಾವುದನ್ನು ಉಳಿಸಿಕೊಳ್ಳಬೇಕು, ಯಾವುದನ್ನು ಬಿಟ್ಟುಕೊಡಬೇಕು ಅನ್ನುವ ಪ್ರಶ್ನೆ ಹೆಜ್ಜೆಹೆಜ್ಜೆಗೂ ಅಳಗು ಅಂಥವರನ್ನೂ ನನ್ನಂಥವರನ್ನೂ ಕಾಡುತ್ತಿದೆ. ಈ ಪರಾವರಣದಲ್ಲಿ ಇಪ್ಪತ್ತೊಂದನೆಯ ಶತಮಾನದ ಅಮೆರಿಕನ್ ಹಿಂದೂಯಿಸಂ ಏನೋ ಒಂದು ಅನಿರ್ದಿಷ್ಟ ರೂಪದ ಕಡೆಗೆ ಧಾವಿಸುತ್ತಿದೆ. ಅದರ ಭವಿಷ್ಯ ಅಂತಿಮ ರೂಪ ಅದನ್ನು ಸೃಷ್ಟಿಸುತ್ತಿರುವ ಆ ಕೃತಾಂತಕನಿಗೇ ಗೊತ್ತು.

●

ನಿನ್ನನೆಲ್ಲಿ ಹುಡುಕಲಯ್ಯ ಕಸಗುಡ್ಡದೊಳಗೆ...

- ವೈಶಾಲಿ ಹೆಗಡೆ

'ನಿಮ್ಮ ದೇಶ ಸಾಕೆ ಮಾರಾಯ್ತಿ. ಮೂಗೊರೆಸುವುದರಿಂದ ಹಿಡಿದು ಕುಂಡೆ ಒರೆಸುವುದರವರೆಗೆ ಎಲ್ಲದಕ್ಕೂ ಕಾಗದ! ಕಾಗದದ ದೇಶ ಇದು!' ಮೊದಲ ಬಾರಿ ಇಲ್ಲಿಗೆ ಭೇಟಿ ನೀಡಿದಾಗ ಅಮ್ಮನ ಎದೆಯಾಳದ ಉದ್ಗಾರವಾಗಿತ್ತು. ಶಾಲೆ ಶುರುವಾಗಿ ಬರೀ ೪ ತಿಂಗಳಿಗೆ ಹೋಂವರ್ಕ್, ಕ್ಲಾಸ್‌ವರ್ಕ್, ಆರ್ಟ್ ವರ್ಕ್ ಎನ್ನುತ್ತ ಈಗಲೇ ಮೈಲೆತ್ತರವಾಗಿರುವ ಮಗಳ ಕಾಗದ ರಾಶಿಯನ್ನು ಜೊಕ್ಕಟಗೊಳಿಸುವಾಗ ಇದು ಕಾಗದದ ದೇಶವೇ ಸೈ. ಅಬ್ಬ! ಬರೀ ಕ್ಯಾಟ್ ಬ್ಯಾಟ್ ಎಂದು ಕಲಿಸಲು ಎಷ್ಟೆಲ್ಲಾ ಕಾಗದ ಹಾಳು ಮಾಡುತ್ತಾರೆ! ಎನಿಸಿದ್ದು ಸುಳ್ಳಲ್ಲ. ನನ್ನ ಅ ಆ ಇ ಈ ಕಲಿತ ಕಟ್ಟಿಗೆ ಕಟ್ಟಿನ ಕಲ್ಲುಪಾಟಿಯ ನೆನಪು ಒತ್ತರಿಸಿ ಬಂತು.

ನನ್ನ ಚಂದದ ಪಾಟಿ. ಅಪ್ಪನ ಜೊತೆ ಹೋಗಿ ಶಾಲೆ ಶುರುವಾಗುವ ಮೊದಲೇ ಕೊಂಡು ತಂದ ಪಾಟಿ. ಒಂದು ಅಳತೆ ಪಟ್ಟಿ ಇಟ್ಟು ನೇರವಾಗಿ ಕಬ್ಬಿಣದ ಮೊಳೆಯಿಂದ ಗೆರೆ ಎಳೆದು ಸಾಲುಗಳನ್ನು ನಿರ್ಮಿಸಿದ ಮೈ. ಇನ್ನೊಂದು ನುಣುಪಾದ ಕರಿ ಮೈ. ಜೊತೆಗೊಂದು ಚಿಕ್ಕ ಡಬ್ಬಿಯಲ್ಲಿ ಸ್ವಲ್ಪವೇ ನೀರಿಟ್ಟು, ಒಳಗೊಂದು ಚಿಕ್ಕ ವಸ್ತ್ರ, ಉರ್ಫ್ ಪಾಟಿ ಒರ್ಸುವ ವಸ್ತ್ರ. ಅಂಕಿ ಬರೆಯಲು,

ಕ ಕಾ ಕಿ ಕೀ ಬರೆಯಲು, ಗೆರೆ ಹೊಡೆವ ಮೈ ಆದರೆ, ಶಬ್ದ, ಗಣಿತಕ್ಕೆಲ್ಲ ಕರಿ-ಮಿರಿ ಮೈ. ಸರ್ವಸ್ವವೇ ಆಗಿದ್ದ ಪಾಟಿ. ಬರೆದಿದ್ದು ಅಳಿಸಿ ಹೋಗಬಾರದೆಂದು ಒಂದು ಪ್ಲಾಸ್ಟಿಕ್ ಸುತ್ತಿ ಚೀಲದಲ್ಲಿ ಹಾಕಿ ಶಾಲೆಗೆ ಹೋಗುತ್ತಿದ್ದ ಪಾಟಿಚೀಲದ ದಿನಗಳು! ನನ್ನ ಚಂದದ ಪಾಟಿ ಒಮ್ಮೆ ಅಮ್ಮನ ಅವತಾರಕ್ಕೆ ಒಡೆದು ಹೋಯಿತು. ಗಣಿತ ತಪ್ಪು ತಪ್ಪಾಗಿ ಮಾಡಿದರೆ ಅಮ್ಮನಿಗೆ ಅಸಾಧ್ಯ ಸಿಟ್ಟು ಬರುತ್ತಿತ್ತು. ಅದೇ ತಪ್ಪು ಪದೇ ಪದೇ ಆಯಿತೆಂದರೆ... ಅಮ್ಮ ಪಾಟಿ ಎತ್ತಿ ಬೀಸಿ ಎಸೆಯುತ್ತಿದ್ದಳು. ಕಲ್ಲಿನ ಪಾಟಿ ನನ್ನ ಕಣ್ಣೀರಿಗೂ ಕರಗದೆ ಒಡೆದು ಹೋಗಿತ್ತು! ಮತ್ತೆ ಅಪ್ಪನ ಜೊತೆ ಪೇಟೆಗೆ ಹೋದರೆ ಅಪ್ಪ, 'ನಿನ್ನ ಅಮ್ಮನ ಮಧ್ಯೆ ನಾನು ಪಾಟಿ ಕೊಡಿಸಿ ಬಡವಾದೆ, ಇದು ಸಾಕು ನೀನು ಹೇಗೆ ಬರೆದರೂ ಹೇಗೆ ಎಸೆದರೂ ಒಡೆಯದು' ಎನ್ನುತ್ತಾ ತಗಡಿನ ಪಾಟಿ ಕೊಡಿಸಿದ್ದರು. ಪಾಟಿ ಅಂಗಡಿಯ ಕಲ್ಲಿನ ಪಾಟಿಯನ್ನು ತಿರುತಿರುಗಿ ನೋಡುತ್ತಲೇ ಗಿಳಿಹಸಿರು ಕಟ್ಟಿನ ತಗಡಿನ ಪಾಟಿ ಹಿಡಿದುಕೊಂಡು ಬಂದಿದ್ದೆ.

ತಗಡಿನ ಪಾಟಿಯ ಮೇಲೆ ಮೊಳೆ ಗೆರೆ ಹೊಡೆದರೆ ಸರಿಯಾಗಿ ಮೂಡುತ್ತಿರಲಿಲ್ಲ. ಹೊಪ್ಪಳಿಕೆ ಎದ್ದು ಬೇಗ ತುಕ್ಕು ಬೇರೆ ಬರುತ್ತಿತ್ತು. ಕೊನೆಗೆ ಅಪ್ಪನೇ, 'ಈ ಜಂಗು ಪಾಟಿಲ್ಲಿ ಬರೆದರೆ ರೋಗ ಬರ್ತು' ಎನ್ನುತ್ತಾ ಇನ್ನೊಂದು ಪಾಟಿ ತಂದುಕೊಡುತ್ತಿದ್ದರು. ಆದರೂ ವರ್ಷದಲ್ಲಿ ಹೆಚ್ಚೆಂದರೆ ೨ ಪಾಟಿ ಆಗುತ್ತಿತ್ತೇನೋ. ತಗಡಿನ ಪಾಟಿಯ ಮೇಲೆ ಅಕ್ಷರಗಳು ಸುಂದರವಾಗಿ ಮೂಡುವುದಿಲ್ಲ ಎನ್ನುತ್ತಾ ಪರೀಕ್ಷೆಯ ಸಮಯದಲ್ಲಿ ಅಮ್ಮನೇ ಕಲ್ಲಿನ ಪಾಟಿ ತಂದು ಗೆರೆ ಹೊಡೆದು ಕೊಡುತ್ತಿದ್ದಳು. ಆ ಪಾಟಿ ಪರೀಕ್ಷೆಗಷ್ಟೇ ಸೀಮಿತವಾಗಿತ್ತು. ಕೊನೆಕೊನೆಗೆ ಪ್ಲಾಸ್ಟಿಕ್ ಪಾಟಿಗಳು ಬರತೊಡಗಿದ ಮೇಲೆ ಕಲ್ಲಿನ ಪಾಟಿಗಳು ಸಿಗುವುದೇ ಕಡಿಮೆಯಾಯಿತು. ಮೂಲೆ ಒಡೆದರೂ ಹಾಗೇ ಜೋಡಿಸಿಕೊಂಡು ಬರೆಯುತ್ತಿದ್ದ ಆ ಪಾಟಿಗಳ ಆತ್ಮೀಯತೆ, ಒರೆಸಿದಷ್ಟೂ ನುಣುಪಾಗುತ್ತಿದ್ದ ಅವುಗಳ ಹೊಳಪು, ಇನ್ಯಾವ ಪಾಟಿಗಳಲ್ಲೂ ಇರಲಿಲ್ಲ. ಈಗೀಗಂತೂ ಯಾರೂ ಯಾವ ಬಗೆಯ ಪಾಟಿಗಳನ್ನೂ ಉಪಯೋಗಿಸುವುದಿಲ್ಲವಂತೆ. ಸ್ನೇಹಿತರೊಬ್ಬರ ಬಳಿ ಪಾಟಿಗಳ ಬಗ್ಗೆ ವಿಚಾರಿಸಿದಾಗ, 'ಅಯ್ಯೋ, ಪಾಟಿಗಳು ಈಗ ಮ್ಯೂಸಿಯಂನಲ್ಲೂ ಸಿಗುವುದಿಲ್ಲ' ಎಂದರು!

ಪಾಟಿಯ ನೆನಪಾದಾಗಿನಿಂದ ಮಗಳಿಗೆ ಶಬ್ದ, ಗಣಿತ, ಅಂಕಿಗಳನ್ನು, ಮನೆಯಲ್ಲಿ ಬರೆಯುವಾಗೆಲ್ಲ ಅವಳ 'ಡೂಡಲ್ ಪ್ರೊ'ದ ಮೇಲೆ ಬರೆಯಲು ಹೇಳುತ್ತಿದ್ದೇನೆ, ಕಾಗದ ರಾಶಿಯನ್ನು ತಪ್ಪಿಸಲು. ಒಮ್ಮೆ ದಾಂಡೇಲಿಯ ಕಾಗದ ಕಾರ್ಖಾನೆಗೆ ಪ್ರವಾಸ ಹೋಗಿದ್ದೆವು. ಅಲ್ಲಿಯ ಆನೆಗಾತ್ರದ ದಿಮ್ಮಿಗಳು ಕ್ಷಣಮಾತ್ರದಲ್ಲಿ ಪುಡಿಪುಡಿಯಾಗಿ, ಮೈಯೆಲ್ಲಾ ಕೊಳೆಸಿಕೊಂಡು, ಬೇಯಿಸಿಕೊಂಡು, ಒಣಗಿಸಿಕೊಂಡು ಬಣ್ಣಬಣ್ಣದ ಕಾಗದವಾಗುವುದನ್ನು ನೋಡಿದಾಗ ಇದೊಂದು ಮಾಂತ್ರಿಕ ಕಾರ್ಖಾನೆ ಎನಿಸಿತ್ತು. ಜೊತೆಗೆ ಕಾಗದ ಬಳಸುವಾಗೆಲ್ಲ ಮರದ ಹೊಟ್ಟು ಕೊಳೆತ ವಾಸನೆ ಬಂದಂತಾಗುತ್ತಿತ್ತು. ಈಗೀಗ ಮರೆತು ಹೋಗುತ್ತಿರುವ ಆ ವಾಸನೆಯನ್ನು ಮತ್ತೆ ನೆನಪಿಗೆ ತಂದುಕೊಳ್ಳಬೇಕು ಎನಿಸುತ್ತಿದೆ.

ಈಗಿನ 'ಸೇವ್ ಅರ್ಥ್' ಸ್ಲೋಗನ್ನಿನಡಿಯಲ್ಲಿ ಆಲ್ಟರ್‌ನೇಟ್ ಲಿವಿಂಗ್ ಎನ್ನುತ್ತಾ ಇಡುವ ಹೈ-ಫೈ ಶಬ್ದಗಳ ಹೆಜ್ಜೆಗಳೆಲ್ಲ, ನಮ್ಮಲ್ಲಿ ಯಾವ ಆಡಂಬರವಿಲ್ಲದ ಜೀವನ ರೀತಿಯವಾಗಿದ್ದವು. ತರಕಾರಿ ತರಲು, ಕಿರಾಣಿ ತರಲು ಎಂದೆಲ್ಲ ಮೀಸಲಿದ್ದ ಬಟ್ಟೆಯ ಚೀಲಗಳು! ಪ್ಲಾಸ್ಟಿಕ್ ಚೀಲಗಳಲ್ಲಿ ತರಕಾರಿ ತಂದ ನೆನಪೇ ಇಲ್ಲ ನನಗೆ. ಈಗ ಮತ್ತೆ ಗ್ರೋಸರಿ ಟೋಟ್ ಬ್ಯಾಗ್ ಎನ್ನುತ್ತಾ ಸ್ಟೈಲಾಗಿ ಗ್ರೀನ್ ಆಪ್ಷನ್ ಎನ್ನುವ ಹಣೆಪಟ್ಟಿಯ ಚೀಲಗಳು ದೊರೆಯುತ್ತವೆ.

ಇಲ್ಲಿ ಕಸ ಎಸೆಯಲು ಬೇರೆಯದೇ ವಿಶೇಷ ವ್ಯವಸ್ಥೆಯಿದೆ. ಕಸದಿಂದ ರಸ ಬೇರ್ಪಡಿಸಿ ಕಾಂಪೋಸ್ಟ್ ಮಾಡುವ ಉಪಾಯಗಳಿವೆ. ರಿಸೈಕಲ್ ವಸ್ತುಗಳ ವಿಂಗಡಣೆಯ ಜ್ಞಾನವಿದೆ. ಇಲ್ಲಿ ನಮ್ಮೂರ ಹತ್ತಿರದಲ್ಲೇ ಒಂದು ಟ್ರಾಶ್ ಗುಡ್ಡವಿದೆ. ಸುಂದರವಾಗಿ ಹುಲ್ಲುಹಾಸು ಬೆಳೆಸಿ, ನಡುನಡುವೆ ಹಾನಿಕಾರಕ ಅನಿಲಗಳ ವಿಸರ್ಜನೆಗೆಂದು ಮೂತಿ ಹೊರಚಾಚಿಕೊಂಡಿರುವ ಕೊಳವೆಗಳ, ನೋಡಲು ಸುಂದರವಾದ ಗುಡ್ಡ. ಅದು ಮುಂಚೆ ಕಸದ ಲ್ಯಾಂಡ್ ಫಿಲ್ ಆಗಿದ್ದು, ಊರು ಬೆಳೆಯತೊಡಗಿದಂತೆ ಮಣ್ಣು ಮುಚ್ಚಿಕೊಂಡು ಗುಡ್ಡವಾಯ್ತೆಂದು ಎಷ್ಟೋ ವರ್ಷಗಳ ಮೇಲೆ ತಿಳಿದು ಬಂದಿತ್ತು. ಭಾರತದಲ್ಲಿ ಎಲ್ಲ ಮಹಾನಗರಗಳು, ಸುತ್ತಲೂ ಕೊಳೆಗೇರಿಯಿಂದ ಮುಚ್ಚಿ ಹೋಗಿವೆ. ಎರಡನೇ ಬಾರಿ ಮದ್ರಾಸಿಗೆ ವೀಸಕ್ಕೆಂದು ಹೋದ ಘಟನೆಯನ್ನು ಎಂದೂ ಮರೆಯಲಾರೆ. ಮದ್ರಾಸಿನ ಬಿಸಿಲಿಗೆ ಕೊಚ್ಚೆಯೆಲ್ಲ ಕೊಳೆತು ನಾರುವ ವಾಸನೆಯನ್ನು ತಡೆದುಕೊಂಡು ಇಡೀ ದಿನ ಹೇಗೆ ಕಳೆದೆನೋ, ಇನ್ನ್ಯಾವತ್ತೂ ಇಲ್ಲಿಗೆ ಬರುವುದಿಲ್ಲ ಎಂದು ತೀರ್ಮಾನಿಸಿದ್ದೆ.

ಹುಬ್ಬಳ್ಳಿಯಲ್ಲಿ ಓದುವ ದಿನಗಳಲ್ಲಿ, ಹುಬ್ಬಳ್ಳಿ ಬಂತೆಂದು ಬಸ್ಸಲ್ಲಿ ಮಲಗಿದ್ದರೂ ನಗರದ ಹೊರವಲಯ ಹತ್ತಿರವಾಗುತ್ತಿದ್ದಂತೆ ಅದರ ಗಬ್ಬುನಾತದಿಂದ ತಿಳಿದುಬಿಡುತ್ತಿತ್ತು. ಆ ವಿಸ್ತೀರ್ಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಹೋಗಿದೆ. ಮುಂಬೈ ವಿಮಾನ ನಿಲ್ದಾಣದಲ್ಲಿ ವಿಮಾನ ಇಳಿಯುತ್ತಿದ್ದಂತೆಯೇ ಬಿಸಿಗಿಂತಲೂ ಹೆಚ್ಚಾಗಿ ಮುಂಬಯಿಯದೆ ಆದ ವಿಶಿಷ್ಟ ವಾಸನೆ ಅಡರುತ್ತದೆ. ಈ ಬಾರಿ ಬೆಂಗಳೂರಿಗೆ ಹೋದಾಗಲೂ ಉಸಿರು ಬಿಡಲಾಗದಷ್ಟು ವಾಹನಗಳ ಹೊಗೆ, ಕರಿಗಾಳಿ, ಕಂಗೆಡಿಸಿಬಿಟ್ಟಿತು.

ಅತಿ ಹೆಚ್ಚು ಕಸ ಉತ್ಪಾದಿಸುವ ದೇಶಗಳಲ್ಲಿ ಅಮೆರಿಕಕ್ಕೆ ಅಗ್ರಸ್ಥಾನ. ಇಲ್ಲಿ ಉತ್ಪಾದಿಸಲ್ಪಡುವ ೮೦ ಪ್ರತಿಶತ ವಸ್ತುಗಳು ಕೇವಲ ಒಂದು ಬಾರಿ ಬಳಸಿ ಎಸೆಯುವಂಥವುಗಳು. ಜಗತ್ತಿನ ಒಟ್ಟೂ ಕಸಕ್ಕೆ ೩೦ ಪ್ರತಿಶತ ಕೊಡುಗೆ ನಮ್ಮದೇ. ಒಂದು ಸಾವಿರ ಅಡಿಗಳಿಗಿಂತಲೂ ಎತ್ತರವಾದ ಬರೀ ಕಸದಿಂದಲೇ ನಿರ್ಮಿತವಾದ ಪರ್ವತ-ಒಹಾಯೋದ ಮೌಂಟ್ ರಮ್ಸ್ಕೆ– ನಮ್ಮ ಕಸ ಹರಡುವ ಸಾಮರ್ಥ್ಯಕ್ಕೊಂದು ಸಣ್ಣ ಸಾಕ್ಷಿ. ಹಾಂಗ್‌ಕಾಂಗ್ ಜಗತ್ತಿನಲ್ಲಿಯೇ ಅತಿ ಹೆಚ್ಚು ಕಸ ಹುಟ್ಟಿಸುತ್ತಿರುವ ನಗರ. ಎಲ್ಲ ಸಾಧನೆಗಳಲ್ಲಿ ಅಮೆರಿಕವನ್ನು ಹಿಮ್ಮೆಟ್ಟಿಸುವತ್ತ ನುಗ್ಗುತ್ತಿರುವ ಚೀನಾ, ಇಲ್ಲೂ ತಾನೇ ಮುಂದು ಎಂದು

ರಭಸದಿಂದ ಸ್ಪರ್ಧೆಗಿಳಿಯುತ್ತಿವೆ. ಸ್ವಿಜರ್ ಲ್ಯಾಂಡ್, ಜರ್ಮನಿ, ನೆದರ್ ಲ್ಯಾಂಡ್ಸ್ ಕಸದಿಂದ ವಸ್ತುಗಳ ಪುನರುತ್ಪಾದನೆಯ ಮುಂಚೂಣಿಯಲ್ಲಿದ್ದರೆ, ಭಾರತ, ಗ್ರೀಸ್ ಕೊಟ್ಟಕೊನೆಯ ಸ್ಥಾನದಲ್ಲಿವೆ.

ಚಿಕ್ಕಂದಿನಲ್ಲಿ ಕಸ ಎಸೆಯುವುದು ಎಂದರೆ, ಸಾವಯವ ಪದಾರ್ಥಗಳನ್ನು ಗೊಬ್ಬರ ಗುಂಡಿಗೆ ಎಸೆಯುವುದು. ರದ್ದಿಯವನು ಕೊಳ್ಳದ ರಟ್ಟು, ಕಾಗದಗಳನ್ನು ಬಚ್ಚಲೊಲೆಗೆ ತುರುಕುವುದು. ಕಸದ ಜೀವಂತ ಅವಶೇಷಗಳೆಲ್ಲೂ ಕಾಣುತ್ತಿರಲಿಲ್ಲ. ವಾರವಾರವೂ ಬುಟ್ಟಿಗಟ್ಟಲೆ ತುಂಬಿ ನಿಲ್ಲುವ ಈ ಕಸ ಈಗ ಎಲ್ಲಿ ಎಸೆಯುವುದು ಎಂದೇ ತಿಳಿಯುತ್ತಿಲ್ಲ! ಬೆಳಗಿಂದ ಸಂಜೆಯವರೆಗೆ ಪರಪರನೆಂದು ಎಳೆದೆಳೆದು ಖಾಲಿಯಾಗುವ ಪೇಪರ್ ನ್ಯಾಪ್‌ಕಿನ್‌ಗಳು, ಹೊರಬಿದ್ದರೆ ಬರೀ ಪೇಪರ್ ಕಪ್, ತಟ್ಟೆ, ಚಮಚ ಎಂದೆಲ್ಲ ಯೂಸ್ ಎಂಡ್ ಥ್ರೋ ಸಂಸ್ಕೃತಿಗೆ ಒಗ್ಗಿಹೋಗಿರುವ ಈ ಜೀವನವನ್ನು ಜಗತ್ತಿನಾದ್ಯಂತ ಹರಡುತ್ತಿದ್ದೇವೆ. ಹೌದು ಅನಾಯಾಸದ ಜೀವನ ಯಾರಿಗೆ ಬೇಡ? ಕಾಫಿ ಕದಡಿ ಎಸೆಯುವ ಪುಟ್ಟ ಪ್ಲಾಸ್ಟಿಕ್ ಕೊಳವೆ ಎಲ್ಲಿ ಹೋಗುತ್ತದೆ ಎಂದು ಒಮ್ಮೆಯಾದರೂ ಕಾಫಿ ಕುಡಿಯುವಾಗ ತಲೆಕೆಡಿಸಿಕೊಂಡಿದ್ದೇವೆಯೇ?

ಇಬ್ಬರು ಮಕ್ಕಳಿಂದ ಸಾವಿರಾರು ಡಾಯಪರ್ ಮಡಚಿ ಎಸೆದಿರುವ ನಾನು ಅವೇನಾಗುತ್ತವೆ ಎಂದು ಯೋಚನೆಗೆ ಹೋಗುವುದಿಲ್ಲ, ಅಂಥಾದ್ದರಲ್ಲಿ ಎಲ್ಲೆಲ್ಲಿ ಡಾಯಪರ್ ಗುಡ್ಡಗಳಿವೆಯೋ ಯಾರಿಗೆ ಗೊತ್ತು? ಅಂಕಿ ಅಂಶಗಳ ಪ್ರಕಾರ ಜಾಗತಿಕವಾಗಿ ಪ್ಲಾಸ್ಟಿಕ್ ಕೊಟ್ಟೆಯ ಬಳಕೆ ವರ್ಷಕ್ಕೆ ೫೦೦ ಬಿಲಿಯನ್. ಅಂದರೆ ನಿಮಿಷಕ್ಕೆ ೧ ಮಿಲಿಯನ್ ಕೊಟ್ಟೆಯಂತೆ ಉತ್ಪಾದಿತವಾಗುತ್ತವೆ, ಉಪಯೋಗಿಸಲ್ಪಡುತ್ತವೆ, ಎಸೆಯಲ್ಪಡುತ್ತವೆ! ಕೆಲವೊಂದು ಕಡೆ ಹಳೆ ಸ್ಮಶಾನಗಳ ಮೇಲೆಲ್ಲಾ ಮನೆ ಕಟ್ಟಿ, ಜಾಗ ಮತ್ತೆ ಬಳಕೆಗೆ ಉಪಯೋಗಿಸಿದಂತೆ, ಇನ್ನು ಈ ಕೊಳಚೆ ಗುಡ್ಡಗಳ ಮೇಲೂ ಮನೆಕಟ್ಟಿ ಕೂಡಬೇಕೇನೋ! ಸ್ಮಶಾನದ ಮೇಲೆ ಕಟ್ಟಿದ ಮನೆಯ ಮುಂದೆ ಒಂದು ಸುಂದರ ಹೂಗಿಡವಾದರೂ ಹುಟ್ಟೀತು, ಪ್ಲಾಸ್ಟಿಕ್ ಗುಡ್ಡಗಳ ಮೇಲೆ ಕಟ್ಟಿದ ಮನೆಯಂಗಳದಲ್ಲಿ ಮಾತ್ರ ಪ್ಲಾಸ್ಟಿಕ್ ಹೂವೆ ಗತಿ!

ನಾವು ಹೋದಲ್ಲೆಲ್ಲ ಕಸ ಹರಡುತ್ತೇವೆ. 'ದ ಗ್ರೇಟ್ ಪೆಸಿಫಿಕ್ ಗಾರ್ಬೇಜ್ ಪ್ಯಾಚ್' ಎಂದು ಒಳ್ಳೆ ತರಕಾರಿ ತೋಟಕ್ಕೆ ಹೆಸರಿಡುವಂತೆ ಪೆಸಿಫಿಕ್ ಮಹಾಸಾಗರದಲ್ಲಿನ ಕಸದ ರಾಶಿಗೆ ಹೆಸರಿಟ್ಟಿದ್ದೇವೆ. ಇದು ಜಗತ್ತಿನಲ್ಲಿಯೇ ಅತಿ ದೊಡ್ಡ ಕಸದ ತೊಟ್ಟಿ! ನಮ್ಮೆಲ್ಲ ಮಹಾಸಾಗರಗಳೂ ಪ್ಲಾಸ್ಟಿಕ್ ಚೂರುಗಳಿಂದ, ಪೆಟ್ರೋಲಿಯಂ ಉತ್ಪನ್ನಗಳ ಚೆಲ್ಲುವಿಕೆಯಿಂದ ಕದಡಿ ಹೋಗಿವೆ. ಚಿಕ್ಕಚಿಕ್ಕ ಚೂರುಗಳು ಬ್ಯಾಕ್ಟೀರಿಯಾಗಳಿಂದ ಆವೃತಗೊಂಡು ಭಾರವಾಗಿ ಸಮುದ್ರದ ತಳ ಸೇರುತ್ತಿವೆ. ಆಳ ಸಾಗರದಲ್ಲಿ ಮೀನುಗಾರಿಕೆ ಮಾಡುವ ಹಡಗುಗಳಿಗೆ ಬಲೆಯ ತುಂಬೆಲ್ಲ ಒಮ್ಮೊಮ್ಮೆ ಬರೀ ಈ ಕಸವೇ ಸಿಗುತ್ತಿದೆ. ಸಾಗರಜೀವಿಗಳಿಗೆ ಕಸದಿಂದಾಗುವ ಹಾನಿ ಎಂದು ಅಧ್ಯಯನ ನಡೆಸಲು ಮತ್ತಷ್ಟು ಹಡಗೂ, ಮನುಷ್ಯರೂ

ಹೋಗುತ್ತಾರೆ, ಇನ್ನಷ್ಟು ಕಸ ಹರಡಿ ಬರುತ್ತಾರೆ. ಹಿಮಾಲಯದ ಶೃಂಗವೇರುವ ಭರದಲ್ಲಿ ಅದರ ಅಪ್ರತಿಮ ಶೃಂಗಾರವನ್ನೇ ಕೆಡಿಸಿದ್ದೇವೆ. ಮೌಂಟ್ ಎವರೆಸ್ಟ್ ಜಗತ್ತಿನ ಅತಿ ಎತ್ತರದ ಪರ್ವತ ಎಂದೊಂದೇ ಅಲ್ಲ, ಜಗತ್ತಿನ ಅತಿ ಎತ್ತರದ 'ಗಾರ್ಬೇಜ್ ಡಂಪ್' ಎಂಬ ಪದವಿಯನ್ನೂ ಪಡೆದುಕೊಂಡಿದೆ. ತಲೆ ಮೇಲೆ ಬಾವುಟ ಕುಕ್ಕುವುದಲ್ಲದೆ, ದಾರಿಯುದ್ದಕ್ಕೂ ಕಸದ ಕಾಣಿಕೆ ಸಲ್ಲಿಸುತ್ತಾ ಹತ್ತಿಳಿಯುತ್ತವೆ ಪರ್ವತಾರೋಹಿ ತಂಡಗಳು. ಬಾಟಲಿ, ಪ್ಲಾಸ್ಟಿಕ್‌ಗಳಲ್ಲದೆ, ಉಪಕರಣಗಳನ್ನೂ ಬಿಟ್ಟು ಬರುತ್ತಾರೆ! ಇವರೆಲ್ಲರ ಹೆಸರು ಪರ್ವತಾರೋಹಿಗಳೆಂದು ದಾಖಲಾಗುತ್ತವೆ, ಆದರೆ ಅಲ್ಲಿ ಕಸ ಹೆಕ್ಕುವ ಭಂಗಿ ಹುಡುಗರ ಹೆಸರು ಅವರು ಆರಿಸಿ ತರುವ ಕಸದ ಮೂಟೆಯಲ್ಲಿಯೇ ಕಳೆದು ಹೋಗುತ್ತದೆ.

ಪಂಚ ಮಹಾ ಸರೋವರಗಳೂ ಈ ಕಸದ ಹಿಡುಗಿನಿಂದ ಮುಕ್ತವಾಗಿಲ್ಲ. ಲೇಕ್ ಈರಿ ಹೇಗೆ ಜಗತ್ತಿನ ಅತಿದೊಡ್ಡ ಸಿಹಿನೀರಿನ ಮೀನುಗಳ ಕಣಜ ಎಂದು ಪ್ರಖ್ಯಾತವಾಗಿದೆಯೋ, ಹಾಗೆಯೆ ಅತಿ ಜನದಟ್ಟಣೆಯ ಪ್ರದೇಶವೂ ಹೌದು, ತೀವ್ರಗತಿಯಲ್ಲಿ ಕಲುಷಿತವಾಗುತ್ತಿರುವ ಸರೋವರವೂ ಹೌದು. ಜಗತ್ತಿನ ಬಹುತೇಕ ನದಿಗಳು ಕಣ್ಣಿಗೆ ಕಾಣುವ ಕಸವಷ್ಟೇ ಅಲ್ಲದೆ, ಕಣ್ಣಿಗೆ ಕಾಣದ ವಿಷಗಳಿಂದ ತುಂಬಿ ಹೋಗಿವೆ. ಇಂಡೋನೇಷಿಯ, ಫಿಲಿಪೀನ್ಸಿನ ಸಾಕಷ್ಟು ನದಿಗಳಲ್ಲಿ ಒಂದಿಂಚು ನೀರು ಕೂಡ ಕಾಣುವುದಿಲ್ಲ, ಇಡೀ ನದಿಯೇ ಮೆಲ್ಲಗೆ ಹರಿಯುವ ಕಸದ ಕೂಪ. ಈ ನದಿಗಳ ಮೇಲೆ ಅಕ್ಷರಶಃ ನಡೆದಾಡಬಹುದು. 'ಗಂಗೇಚ ಯಮುನೇಚೈವ...' ಎಂದು ಇಂದಿಗೂ ತಂಬಿಗೆ ನೀರು ಸುರಿದುಕೊಳ್ಳುತ್ತೇವೆ. ಆದರೆ, ಯಮುನಾ ನದಿಗೆ ಜಗತ್ತಿನ ಮುಖ್ಯ ಹತ್ತು ಕೊಳಕು ನದಿಗಳಲ್ಲಿ ಸ್ಥಾನ ಗಿಟ್ಟಿಸಿಕೊಟ್ಟ ಸಾಧನೆ ನಮ್ಮದು! ಹಿಂದೆ, ಪರೀಕ್ಷಿತ ಮಹಾರಾಜ ಯಮುನೆಯ ದಂಡೆಯ ಮೇಲೆ ಕುಳಿತು ಸಾವನ್ನು ಎದುರು ನೋಡುತ್ತಾ ಆತ್ಮಾವಲೋಕನ ಮಾಡಿಕೊಂಡನಂತೆ. ಈಗಾಗಿದ್ದರೆ ಕೂತ ತಕ್ಷಣ, ಈಗಲೇ ಸಾವು ಬರಲಿ ಕೃಷ್ಣಾ ಎಂದು ಅರ್ಚಿಸುತ್ತಿದ್ದನೇನೋ. ಮುರಳಿಗಾನಕ್ಕೆ ನೆಗೆದು ಗೋಪಿಕೆಯರ ಗೆಜ್ಜೆನಾದಕ್ಕೆ ಬಳುಕಿದ ಯಮುನೆ, ಅಂಗನೆಯ ಸೆರಗಲ್ಲಿ ಸುಳಿದು ಕಚಗುಳಿಯಿಟ್ಟ ಯಮುನೆ, ಈಗ ಪ್ಲಾಸ್ಟಿಕ್ ಸುತ್ತಿಕೊಂಡು, ಖಾಲಿ ಕೋಲಾ ಕ್ಯಾನುಗಳನ್ನು ತುಳುಕಿಸುತ್ತಾ ಹುಚ್ಚಿಯಂತೆ ಸುತ್ತುತ್ತಿದ್ದಾಳೆ. ಆ ಕ್ಯಾನುಗಳ ತಾಕಲಾಟದ ಶಬ್ದಗಳಲ್ಲಿ ಕಿವುಡಾಗಿರುವ ಅವಳಿಗೆ ಮುರಲೀಗಾನವೂ ಮರೆತು ಹೋಗಿದೆ.

ಭೂಮಿ ಆಕಾಶವಷ್ಟೇ ಅಲ್ಲ, ಅದರಾಚಿನ ನಿರ್ವಾತವನ್ನೂ ಬಿಟ್ಟಿಲ್ಲ ನಾವು. ಹಳೆಯ, ಮುರುಕು, ಹಾಳುಮೂಳು ಎಂದು ಏನೇನೋ ಆಕಾಶಕಾಯಗಳನ್ನು ಅಲ್ಲಲ್ಲೇ ಬಿಟ್ಟು ಬಂದಿದ್ದೇವೆ. ಉಪಗ್ರಹಗಳ ತುಣುಕುಗಳು, ರಾಕೆಟ್‌ಗಳ ಚೂರುಗಳು, ಏನೇನೋ ಲೋಹಗಳ ಏನೆಂದೂ ವಿಂಗಡಿಸಲಾಗದ ಬಿಡಿಭಾಗಗಳು ಗಿರಕಿ ಹೊಡೆಯುತ್ತಿವೆ ಅಲ್ಲಿ. ನೆಟ್ಟಗೆ ಮನೆಯ ಮುಂದಿನದನ್ನೇ ಸ್ವಚ್ಛಗೊಳಿಸದ ನಾವು ಕಾಣದ ಲೋಕಕ್ಕೆ ಪೊರಕೆ ಹಿಡಿದುಕೊಂಡು ಹೋಗುವುದುಂಟೆ? ಮುಂದಿನ ಪೀಳಿಗೆಗೆ, ಅಗಾಧ ವಿಶ್ವದ ಮೂಲೆಯಲ್ಲೆಲ್ಲೋ

ಮುಂದೆ ಉದ್ಭವಿಸಬಹುದಾದ ಇನ್ನೊಂದು ಗ್ರಹಕ್ಕೆ ನಮ್ಮ ಲಗಸಿ ಬಿಟ್ಟುಹೋಗಬೇಕಲ್ಲ... ಹೇಗೂ ಸಾಕಷ್ಟು ಒಟ್ಟಾಗಿದೆ ಈಗಲೇ... ಕಸವನ್ನೇ ಬಿಟ್ಟು ಹೋದರಾಯಿತು... ನಮ್ಮ ಉಡುಗೊರೆ... ಇಟ್ಟುಕೊಳ್ಳಿ ಎಂದು.

ಮನೆಯನಷ್ಟೇ ಅಲ್ಲ, ಮನವನೂ ಗುಡಿಸು ಎಂದು ದಾಸರೊಬ್ಬರು ಹೇಳಿದಂತ ಮನದ ಕಸಗುಡಿಸಿ ಸ್ವಚ್ಛ ಮಾಡಿ ಎಲ್ಲಿ ಹಾಕುವುದು? ಮೇಲೊಬ್ಬನಿದ್ದಾನೆ, ಅಗಾಧ ಗಾರ್ಬೇಜ್ ಡಿಸ್ಪೋಸರ್. ಪಾಪ ಅವನೂ ನಮ್ಮೆಲ್ಲರ ಕಸದ ರಾಶಿಯಲ್ಲಿ ಮುಚ್ಚಿ ಕಾಣುತ್ತಿಲ್ಲ. ಈಗಾಗಿದ್ದರೆ ದಾಸರು ಕೊಳೆತು ನಾರುವ ಕಸದಗುಡ್ಡಗಳ ನಡುವೆ 'ನಿನ್ನನೆಲ್ಲಿ ಹುಡುಕಲಯ್ಯ...' ಎಂದು ಹಾಡುತ್ತಿದ್ದರೇನೋ!

●

ಹುಲ್ಲಾಗು ಬೆಟ್ಟದಡಿ...

-ಶಶಿಕಲಾ ನಿಂಬಾಳ

ಇದೇನು ವಿಚಿತ್ರ? ಹುಲ್ಲಿಗೂ ತೂಕ ಎಂಬುದು ಇದೆಯೋ? ಹೌದು, ಇದೆ ಎಂಬುದು ನನ್ನ ಸರಳ ಉತ್ತರ. ಸಾಮಾನ್ಯವಾಗಿ ಸಭ್ಯ ಪ್ರಾಣಿಗಳನ್ನು ವಿವರಿಸುವುದು ಅವು ತಿನ್ನುವ ಆಹಾರದ ಮೇಲೆ ತಾನೆ? ಕಾಡಿನ ಕ್ರೂರ ಪ್ರಾಣಿಗಳಾದ ಹುಲಿ, ಕರಡಿ, ಸಿಂಹಗಳ ನೆನಪಾದರೆ ಹೆದರಿಕೆಯಿಂದ ಮೈ ಬೆವರುತ್ತದೆ. ಆದರೆ ಅದೇ ಸಾಧು ಸ್ವಭಾವದ ಪ್ರಾಣಿಗಳಾದ ಜಿಗರೆ, ಆಕಳು, ಮೇಕೆಗಳನ್ನು ನೆನಪಿಸಿದರೆ ಅವುಗಳನ್ನು ಪ್ರೀತಿಸಬೇಕು, ತಂದು ಮನೆಯಲ್ಲಿ ಸಾಕಬೇಕು ಎಂದು ಅನ್ನಿಸುತ್ತದೆ. ಕೆಲವು ವನ್ಯ ಪ್ರಾಣಿಗಳನ್ನು ಸಾಧು ಪ್ರಾಣಿಗಳನ್ನಾಗಿ ಪರಿವರ್ತನೆ ಮಾಡಿದ್ದು ಹುಲ್ಲು! ಅಷ್ಟೇ ಅಲ್ಲ! ನರರಿಗಿಂತಲೂ ಹುಲ್ಲು ತಿಂಬ ಆಕಳು ಒಂದು ತೂಕ ಹೆಚ್ಚಾಗಿದೆ! ಅದಕ್ಕಾಗಿಯೇ 'ನೀನಾರಿಗಾದೆಯೋ ಎಲೆ ಮಾನವ, ಹರಿ ಹರಿ ಗೋವು ನಾನು' ಎಂದು ಜನಪ್ರಿಯ ಕವನವೊಂದರಲ್ಲಿ ಹೇಳಿದ್ದುಂಟು! ಪುರಾಣಗಳ ಪ್ರಕಾರ ನಂದಿಯು ಶಿವನ ವಾಹನ; ಶ್ರೀಕೃಷ್ಣನು ಗೋಕುಲದಲ್ಲಿ ಗೋಪಾಲನಾಗಿ ಪೂಜಿಸಿದ್ದು ಗೋಮಾತೆಯನ್ನು!

ನಿಸರ್ಗದ ಬಯಲಿನಲ್ಲಿ ನೋಡಿದ ತಕ್ಷಣ ಕಣ್ಮನ ಸೆಳೆಯುವ

ಅದ್ಭುತ ಸೃಷ್ಟಿ ಎಂದರೆ ಎಲ್ಲೆಲ್ಲಿಯೂ ವಿಶಾಲವಾಗಿ ಹಸುರಾಗಿ ಹರವಿದ ಎಳೆಯ ಹುಲ್ಲಿನ ಮೈದಾನ. ಹಸಿರು ನೆಲವು ಕವಿಯ ಹೊಸ ಹೊಸ ಕಲ್ಪನೆಗಳಿಗೆ ಮೂಲ ಆಧಾರ, ಸಂತನಿಗೆ ಸೌಂದರ್ಯದ ದಿವ್ಯ ದರ್ಶನ, ಪ್ರೇಮಿಗೆ ತನ್ನ ಪ್ರಿಯೆಯೊಂದಿಗೆ ಮಧುರ ವಾಯು ವಿಹಾರದ ತಾಣ, ಮಕ್ಕಳಿಗೆ ಆಟವಾಡಲು ಒಳ್ಳೆಯ ಸ್ಥಳ, ಮತ್ತು ನಾಯಿಗಳನ್ನು ಬೆಳಗಿನಲ್ಲಿ ನಡೆಸಲು ಬಲು ಉಪಯುಕ್ತವಾದ ಜಾಗ. ಕಾರಣ ಏನೇ ಇರಲಿ ಬೆಳಗಿನಲ್ಲಿ ಟ್ರೆಡ್ ಮಿಲ್ ಎಂಬ ನಿರ್ಜೀವ ಯಂತ್ರದ ಮೇಲೆ ನಿಂತು ಕ್ಯಾಲರೀಸ್ ಬರ್ನ್ ಮಾಡುವದಕ್ಕಿಂತ ಮನೆಯಿಂದ ಆಚೆ ಬಂದು ಪ್ರಕೃತಿಯಲ್ಲಿಯ ಹಸಿರನ್ನು, ಹಸಿರು ಹುಲ್ಲನ್ನು ನೋಡಿ ಆನಂದಿಸುವುದು ಒಂದು ಒಳ್ಳೆಯ ದಿನಚರಿ.

ಇನ್ನು ನಮ್ಮ ಹಿರಿಯರು 'ಹುಲ್ಲು' ಎಂಬ ಪದವನ್ನು ಉಪಯೋಗಿಸಿ ಹಲವು ಗಾದೆಗಳನ್ನು ಮಾಡಿ, ಅದರಲ್ಲಿ ಕೆಲವು ಜೀವನದ ತತ್ವಗಳನ್ನು ಅಳವಡಿಸಿ ಇಟ್ಟಿದ್ದಾರೆ. ನಾನು ಕೆಲವು ನುಡಿಗಟ್ಟುಗಳನ್ನು ಇಲ್ಲಿ ತಮ್ಮ ಮುಂದೆ ಇಡಲು ಇಷ್ಟಪಡುತ್ತೇನೆ.

ಮಾನವರಿಗೆ ಕಣ್ಣು, ಕಿವಿ, ಮೂಗು, ಬಾಯಿ ಮತ್ತು ತ್ವಚೆಗಳೆಂಬ ಐದು ಇಂದ್ರಿಯಗಳಿವೆ. ಆದರೆ ಆರನೆಯ ಇಂದ್ರಿಯವೂ ಇದೆ! ಅದು ಧನ! ಏಕೆಂದರೆ ಹಣ ಇರದಿದ್ದರೆ ಉಳಿದ ಐದು ಇಂದ್ರಿಯಗಳು ಉಪವಾಸ ಬೀಳುತ್ತವೆ! ಆದಾಯವನ್ನು ಅವಲಂಬಿಸಿ ಖರ್ಚು ನಿಭಾಯಿಸಿದರೆ ಸರಿ; ಮಿತವ್ಯಯದಿಂದ ಜೀವನ ನಡೆಸಿದರೆ ಬದುಕಿನ ಜಟಕಾ ಬಂಡಿ ಸುಲಭವಾಗಿ ಓಡುತ್ತದೆ. ಹಾಸಿಗೆ ಇದ್ದಷ್ಟು ಕಾಲು ಚಾಚುವದು ಜಾಣರ ಲಕ್ಷಣ. ಬದುಕು 'ಕಟ್ಟಿದ ಗೂಟ ಹಾಕಿದ ಹುಲ್ಲಿನ' ಪರಿಮಿತಿಯಲ್ಲಿದ್ದರೆ ಚೆನ್ನ !

ಹೆತ್ತವರಿಗೆ ತಮ್ಮ ಮಕ್ಕಳ ಮೇಲೆ ಅಪಾರ ಪ್ರೀತಿ. ಅವರ ಮಕ್ಕಳು ಕೇಳವುದಕ್ಕೆ ಮೊದಲೇ ಅವರ ಕೆಲಸಗಳನ್ನೆಲ್ಲಾ ತಾವೇ ಮಾಡಿಬಿಡುತ್ತಾರೆ. ಅವರು ಶಾಲೆಯಲ್ಲಿ ಯಾವ ವಿಷಯವನ್ನು ಆಯ್ದುಕೊಂಡು ಅಭ್ಯಾಸ ಮಾಡಬೇಕು, ಹೊರಗೆ ಹೊರಟರೆ ಯಾವ ಬಟ್ಟೆ ಹಾಕಿಕೊಳ್ಳಬೇಕು, ಊಟಕ್ಕೆ ಹೋಟೆಲ್‌ಗೆ ಹೋದರೆ ಯಾವ ತಿನಿಸು ಆರ್ಡರ್ ಮಾಡಬೇಕು ಅನ್ನುವದೆಲ್ಲಾ ಹಡೆದವರು ನಿರ್ಧರಿಸುತ್ತಾರೆ. ಮಕ್ಕಳು ಪಾಪ ಮನಸ್ಸಿಲ್ಲದಿದ್ದರೂ ಇವರ ಮಾತನ್ನು ಕೇಳಬೇಕಾಗುತ್ತದೆ. ಈ ತರಹದ ಮಾರ್ಗದರ್ಶನ ಮಕ್ಕಳಿಗೆ ನಲವತ್ತು ದಾಟಿದರೂ ಮುಗಿಯುವದಿಲ್ಲ! ಈ ಅತಿ ಪ್ರೀತಿ ಮಕ್ಕಳಿಗೆ ಮಾರಕವಾಗುತ್ತದೆ. ಅವರ ಸೃಜನಶೀಲ ಶಕ್ತಿಯನ್ನು ಕುಂಠಿತಗೊಳಿಸುತ್ತದೆ. 'ದಟ್ಟವಾಗಿ ಹಬ್ಬಿದ ಮರದ ಕೆಳಗೆ ಹುಲ್ಲು ಹುಟ್ಟಲ್ಲ' ಎಂಬ ಮಾತನ್ನು ಸತ್ಯವಾಗಿಸುತ್ತದೆ.

ನಮಗಿರುವ ಬೆಚ್ಚನೆಯ ಸಣ್ಣ ಮನೆಗಿಂತ ನೆರೆಮನೆಯ ಬಂಗಲೆ ಬಹಳ ಚೆನ್ನಾಗಿದೆ. ಬಲ ಪಕ್ಕದವರ ಮನೆಯ ಅಂಗಳದ ಗಿಡ ಎತ್ತರವಾಗಿ ಬೆಳೆದಿದೆ. ಆಚೆ ಬೀದಿಯಲ್ಲಿರುವ ಸರಸಮ್ಮ ಯುರೋಪ್ ಪ್ರವಾಸಕ್ಕೆ ಹೋಗಿ ಬಂದರು. ಯುರೋಪ್ ಪ್ರವಾಸ ಮಾಡಿದ್ದ ಸರಮ್ಮನವರೂ ಸಹ, ಮತ್ತೊಬ್ಬರು ಹೊರದೇಶಕ್ಕೆ ಪ್ರವಾಸ ಕೈಗೊಂಡದ್ದನ್ನು ನೆನೆದು

ಕೊರಗುತ್ತಿರುತ್ತಾರೆ. ಹೀಗೆಯೇ ಅವರಿವರ ಬಗ್ಗೆ ಯೋಚಿಸಿ ಮನಸ್ಸನ್ನು ನೋವಿಗೆ ಎಡೆ ಮಾಡಿಕೊಳ್ಳುವುದು ಸರ್ವೇಸಾಮಾನ್ಯವಾದ ವಿಷಯ. ಅದಕ್ಕೆ ಇಂಗ್ಲಿಷ್‌ನಲ್ಲಿ, 'The grass is always greener on the other side of the fence.' ಎಂದು ಹೇಳಿದ್ದಾರೆ. ಕೊರಗುವುದಕ್ಕೆ ಇಂಥದೇ ಕಾರಣವಾಗಬೇಕಿಲ್ಲ, ಅದು ಹುಲು ಮಾನವನ ಹುಟ್ಟು ಸ್ವಭಾವ ತಾನೇ?

ಮೇಲಿನ ಮಾತಿಗೆ ವ್ಯತಿರಿಕ್ತವಾದ ರೀತಿಯಲ್ಲಿ ಕನಕದಾಸರ 'ತಲ್ಲಣಿಸದಿರು ಕಂಡ್ಯ ತಾಳು ಮನವೆ, ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ' ಎಂಬ ಕೀರ್ತನೆಯಲ್ಲಿ ಅಡವಿಯಲ್ಲಿ ಹುಟ್ಟಿದ ಪ್ರಾಣಿ ಪಕ್ಷಿಗಳಾದ ಕಾಗೆ, ಕೋಗಿಲೆ, ಇರುವೆಗಳಿಗೆ ತಕ್ಕ ಆಹಾರ, ತೂಕದ ಆಹಾರ ಅಲ್ಲಲ್ಲಿಗೆ ಒದಗಿಸಿ ರಕ್ಷಿಸುವವನು ಆದಿಕೇಶವನು ಎಂದು ಹೇಳಿದ್ದಾರೆ. ಹಾಗೆಯೇ ಪರಮಾತ್ಮನಿಗೆ ನಮ್ಮ ಎಲ್ಲ ಕಷ್ಟಗಳ ಪರಿಜ್ಞಾನವು ಇದೆ, ಅದನ್ನು ಪರಿಹರಿಸುವ ಬಗೆಯೂ ಗೊತ್ತಿದೆ, 'ಹುಟ್ಟಿಸಿದ ದೇವರು ಹುಲ್ಲು ಮೇಯಿಸುವದಿಲ್ಲ', ಆದ್ದರಿಂದ ಇವತ್ತಿಗೆ, ನಾಳೆಗೆ ಹೇಗೆ ಎನ್ನುವ ಚಿಂತೆಯ ಆತಂಕವನ್ನು ತೊರೆದು ಲವಲವಿಕೆಯಿಂದ ದುಡಿದು ಆನಂದದಿಂದ ಬದುಕು ಸವೆಸುವದು ಲೇಸು ಎಂದು ಹೇಳಬಹುದು.

ಬರೀ ಕಲ್ಲು-ಮುಳ್ಳುಕಂಟಿಗಳನ್ನು ಹೊಂದಿರುವ ಗುಡ್ಡದಲ್ಲಿ ಎಳೆ ಹುಲ್ಲು ಜೀವಕಳೆಯನ್ನು ತುಂಬುತ್ತದೆ. ಬೆಟ್ಟದ ತುದಿಯಲ್ಲಿ ಹುಲ್ಲು ಬೆಳೆಸಲು ಯಾರೂ ಕಷ್ಟ ಪಡುವದಿಲ್ಲ. ಅದಕ್ಕೆ ಬರೀ ಗಾಳಿ, ತುಸು ತಂಪಾದ ನೆಲ(?), ಸೂರ್ಯನ ಕಿರಣಗಳಿದ್ದರೆ ಸಾಕು, ಬೆಳೆದು ಬಿಡುತ್ತದೆ. ಸಿಮೆಂಟಿನ ಗಾರೆಯಲ್ಲೂ ಸಹ ಹುಲ್ಲು ಚಿಗಿಯುತ್ತದೆ, ಸಕಲ ಅನುಕೂಲತೆ ಮತ್ತು ಸಲಕರಣೆಗಳನ್ನು ಹೊಂದಿದ ಮಾನವರು ಮನೆಗೆ ಮಲ್ಲಿಗೆಯಂತಾಗಿ ಬಾಳಿ ನಗೆಯ ಪರಿಮಳವನ್ನು ಪಸರಿಸಬೇಕಲ್ಲದೆ ಹೃದಯಕ್ಕೆ ಚುಚ್ಚುವ ಮುಳ್ಳಾಗಬಾರದು ಎಂದು ಸುಂದರವಾಗಿ ನಾಲ್ಕು ಸಾಲಿನಲ್ಲಿ ಡಾ. ಡಿ.ವಿ. ಗುಂಡಪ್ಪನವರು ಕನ್ನಡದ ಭಗವದ್ಗೀತವೆಂದೆನಿಸಿರುವ ಮಂಕುತಿಮ್ಮನ ಕಗ್ಗದಲ್ಲಿ ಹೀಗೆ ಹೇಳಿದ್ದಾರೆ:

> ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು।
> ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ॥
> ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ।
> ಎಲ್ಲರೊಳಗೊಂದಾಗು ಮಂಕುತಿಮ್ಮ॥

ಸರ್ವರಲ್ಲಿ ಬೆಲ್ಲ ಸಕ್ಕರೆಯಂತೆ ಬೆರೆತು ಬಾಳುವವರ ಬದುಕು ಸಾರ್ಥಕ ಎಂಬುದಿಲ್ಲಿ ಸ್ಪಷ್ಟವಾಗಿದೆ.

ಸಮಾಜದಲ್ಲಿರುವ ಕೆಲವು ಸಣ್ಣ ಮನಸ್ಸಿನ ವ್ಯಕ್ತಿಗಳಿಂದಾಗಿ, ವೈಯಕ್ತಿಕ ಹಿತಾಸಕ್ತಿಗಳು ಹೆಚ್ಚಿದಾಗ ಪ್ರಗತಿಯು ಕುಂಠಿತವಾಗುತ್ತದೆ; ಕಿತ್ತಾಟ, ಚರ್ಚೆ, ಬಡಿದಾಟದಲ್ಲಿ ಅಮೂಲ್ಯ

ಸಮಯವು ನಷ್ಟವಾಗುತ್ತದೆ. 'ಹತ್ತಾರು ಜನ ಅಡ್ಡಾಡುವ ಹಾದಿಯಲ್ಲಿ ಹುಲ್ಲು ಬೆಳೆಯುವದಿಲ್ಲ' ಎಂದು ಅನಿಸುತ್ತದೆ. ತಿಳಿಯದ ಜನ ದಟ್ಟವಾಗಿ ಅಡ್ಡಾ ದಿಡ್ಡಿಯಾಗಿ ಪ್ರತಿಪಾದಿಸುತ್ತಿದ್ದರೆ ಪ್ರತಿಫಲ ಶೂನ್ಯವಾಗುತ್ತದೆ. ಎತ್ತು ಏರಿಗೆ, ಕೋಣ ನೀರಿಗೆ ಎಳೆದರೆ ಯಾವ ಕಾರ್ಯಸಿದ್ಧಿಯೂ ಕೈಗೂಡದು.

ಮಹಾಭಾರತದ ಚಿತ್ರಾಂಗದೆಯ ಮಗನಾದ ಬಭ್ರುವಾಹನನು ಅರ್ಜುನನ್ನು ಯುದ್ಧಭೂಮಿಯಲ್ಲಿ ಸಂಧಿಸುತ್ತಾನೆ. ಆಗ ಅರ್ಜುನನ್ನು 'ಯಾರು ಅರಿಯರು ನಿನ್ನ ಭುಜ ಬಲದ ಪರಾಕ್ರಮ... ಶ್ರೀಕೃಷ್ಣನು ಸರ್ವಕಾಲದಲ್ಲಿ ನಿನ್ನನ್ನು ಕೈ ಹಿಡಿದು ಕಾಪಾಡಿದವನು. ಅವನಿಲ್ಲದೆ ಬಂದ ನೀನು ತೃಣಕ್ಕೆ ಸಮಾನ, ಅಂದರೆ ಹುಲ್ಲು ಕಡ್ಡಿಗೆ ಸಮಾನ ಆಗಿರುವೆ' ಎಂದು ಹೀಯಾಳಿಸುತ್ತಾನೆ. ಆಗ ತಂದೆ ಮತ್ತು ಮಗನ ನಡುವೆ ಯುದ್ಧವಾಗಿ ಬಭ್ರುವಾಹನನು ಗೆಲ್ಲುತ್ತಾನೆ. ಈ ಒಂದು ಸನ್ನಿವೇಶದಲ್ಲಿ ಹುಲಿಯಂತೆ ಆರ್ಭಟಿಸುತ್ತಿದ್ದ ಅರ್ಜುನ ಶ್ರೀಕೃಷ್ಣನ ಕೃಪಾಕಟಾಕ್ಷ ಇಲ್ಲದ್ದರಿಂದ ಹುಲ್ಲಿನಂತೆ ನೆಲ ಕಚ್ಚುತ್ತಾನೆ. ಇಲ್ಲಿ ಮಗನ ಕೈಯಲ್ಲಿ ತಂದೆಯನ್ನು ಸೋಲಿಸುವ ಕಿರುನಾಟಕದ ಸೂತ್ರಧಾರ ಶ್ರೀಕೃಷ್ಣನೇ ಆಗಿದ್ದ ಎನ್ನಬಹುದು. ನಮ್ಮ ಮೇಲೆಯೂ ಸಹ ದೈವೀ ಕೃಪೆ ಇರದಿದ್ದರೆ ನಾವೂ ತೃಣಕ್ಕೆ ಸಮಾನರೇ ಎಂದು ಹೇಳಬಹುದು!

ಹೆತ್ತವರು ಮುದ್ದಾದ ಅಂಬೆಗಾಲಿಡುವ ಮಗಳನ್ನು ನೋಡಿ ಆನಂದಿಸುತ್ತಾರೆ. ಮಗುವಿಗೆ ವಿವಿಧ ತರಹದ ಬಟ್ಟೆ, ಒಡವೆಗಳನ್ನು ತೊಡಿಸಿ ನಲಿಯುತ್ತಾರೆ. ಮಗು ದೊಡ್ಡದಾಗಿ ಶಾಲೆಯಲ್ಲಿ ವಿದ್ಯೆ ಕಲಿಯುವುದರಲ್ಲಿ ಹಿಂದೆ ಬೀಳದೆ ಏಳಿಗೆ ಹೊಂದುತ್ತಾಳೆ. ಯೌವ್ವನಕ್ಕೆ ಕಾಲಿರಿಸಿದಾಗ ಸರಿಯಾದ ಹುಡುಗನನ್ನು ಹುಡುಕಿ ಮದುವೆಯನ್ನು ಮಾಡುತ್ತಾರೆ. ಆ ಮಗುವಿಗೆ ತಾಯಿಯ ಮನೆಯನ್ನು ತೊರೆದು ದೂರ ಹೋಗುವದಕ್ಕೆ ದುಃಖ. ತಂದೆತಾಯಿಯರಿಗೂ ಮಗಳನ್ನು ಒಪ್ಪಿಸುವದು ಕಷ್ಟದ ಕೆಲಸ! ಆಗ ಜಾಣೆಯಾದ ಅವರ ಮಗಳು ಹೇಳುವುದು, 'ನಿಮ್ಮ ತಲೆಗೆ ಹೂವ ತರುವೆನಲ್ಲದೆ ಹುಲ್ಲ ತಾರೆನು' ಎಂದು. ಅಂದರೆ, ಅವಳು ತನ್ನ ತವರಿಗೆ ಕೀರ್ತಿ ತರುವ ಕೆಲಸಗಳನ್ನೇ ಮಾಡುವುದಾಗಿ ಭರವಸೆಯನ್ನು ಕೊಡುತ್ತಾಳೆ. ಆಗ ಹೆತ್ತವರು ಮಗಳ ಮಾತಿಗೆ ಹೆಮ್ಮೆಪಟ್ಟು ಸಂತೋಷದಿಂದ ಕಳಿಸಿ ಕೊಡುತ್ತಾರೆ.

'ಹುಲ್ಲು' ಎಂಬ ಪದ ಎಷ್ಟು ವಿಧದಲ್ಲಿ ಬಳಕೆಯಾಗಿದೆ ಅನ್ನುವದು ಅಚ್ಚರಿಯ ಸಂಗತಿ. ಹುಡುಕಿದರೆ ಇನ್ನೂ ಅನೇಕ ನುಡಿಗಟ್ಟುಗಳು ಸಿಗಬಹುದು. ಅನುಭವಸ್ಥರು, ಜೀವನದಲ್ಲಿ ನೊಂದು-ಬೆಂದು ಕಡೆಗೊಮ್ಮೆ ಗಟ್ಟಿಗೊಂಡು, ಕಷ್ಟದ ಕರಿಕೆಯ ಬೇರಿಗೆ, ಸಮತೆಯ ಒರತೆಯ ನೀರು ಊಡಿಸಿ, ನಮಗಾಗಿ ನುಡಿಗಟ್ಟುಗಳನ್ನು ಮಾಡಿರುವರು.

ಪರಮಾಶ್ಚರ್ಯದ ಸಂಗತಿಯೆಂದರೆ ಬಯಲಿನಲ್ಲಿ ಹರವಿದ ಎಳೆಯ ಹುಲ್ಲಿನ ಚಮತ್ಕಾರಕ್ಕೆ ತಮ್ಮ ಜೀವವನ್ನೇ ಮುಡಿಪಾಗಿಟ್ಟವರು ವಾಲ್ಟ್ ವ್ಹಿಟ್‌ಮನ್! ಅಮೆರಿಕದ

ಬಹುದೊಡ್ಡ ಅನುಭಾವಿ ಕವಿ ವಾಲ್ಟ್ ವ್ಹಿಟ್‌ಮನ್ ಜಗತ್ತಿನಾದ್ಯಂತ ಸುಪ್ರಸಿದ್ಧವಾಗಿರುವ ಎಂಬ ಕವನ ಸಂಕಲನವನ್ನು ೧೮೮೫ರಲ್ಲಿ ಬರೆದು ಪ್ರಕಟಿಸಿದರು. ಅವರು ತಮ್ಮ ಜೀವಮಾನವನ್ನು ಹುಲ್ಲಿನ ಎಲೆಗಳನ್ನು ನೋಡುವುದರಲ್ಲಿ ಮತ್ತು ಹುಲ್ಲನ್ನು ಕುರಿತು ಕವನ ಬರೆಯುವುದರಲ್ಲಿ ಕಳೆದರು. ನಿಸರ್ಗದ ಸ್ವಚ್ಛಂದದ ಹಸಿರು ಪರಿಸರದಲ್ಲಿ ಸತ್ಯದ ಸಾಕ್ಷಾತ್ಕಾರವನ್ನು ಅವರು ಮಾಡಿಕೊಂಡಿದ್ದರು. ಇವತ್ತಿಗೂ ತತ್ವಜ್ಞಾನಿಗಳಿಗೆ ಮತ್ತು ಆಧ್ಯಾತ್ಮ ಸಂಶೋಧಕರಿಗೆ ಅವರ ಮಾತುಗಳು ಮತ್ತು ಕೃತಿಗಳು ದಾರಿದೀಪವಾಗಿವೆ.

ಶ್ರಾವಣದಲ್ಲಿ ಲಕ್ಷ್ಮಿಯ ಪೂಜೆಗೆ, ಗಣೇಶ ಚತುರ್ಥಿಯಂದು ಗಣೇಶನ ಪೂಜೆಗೆ ಎಳೆಯ ಹುಲ್ಲಿನ ಕರಿಕೆಯನ್ನು ಮಡಿಯಿಂದ ಹುಡುಕಿ ತಂದು ಚೆಂದಾಗಿ ಅಲಂಕರಿಸಿದಾಗಲೇ ಪೂಜೆ ಸಂಪೂರ್ಣವಾಗುತ್ತದೆ. ಕರಿಕೆಯೂ ಭೂಮಿತಾಯಿಯ ಸಸ್ಯರಾಶಿಯನ್ನು ಪ್ರತಿನಿಧಿಸುವಂತೆ ಭಾಸವಾಗುತ್ತದೆ. ನವರಾತ್ರಿಯಲ್ಲಿ ಒಂಭತ್ತು ಧಾನ್ಯಗಳನ್ನು ಸೇರಿಸಿ ಸಸಿಯನ್ನು ಹಾಕಿ ಘಟಸ್ಥಾಪನೆಯನ್ನು ಮಾಡುತ್ತಾರೆ ಮತ್ತು ಹತ್ತು ದಿನ ನಂದಾದೀಪವನ್ನು ಉರಿಸುತ್ತಾರೆ. ಹತ್ತನೇ ದಿನ ಬರುವಷ್ಟರಲ್ಲಿ ಸಸಿಯು ಉದಿಸಿ, ದೇವರಮನೆಯು ಅಪೂರ್ವ ಕಳೆಯಿಂದ ಶೋಭಿಸುತ್ತದೆ. ನನ್ನ ತಾಯಿಯು ಅತ್ಯಂತ ಭಕ್ತಿ ಮತ್ತು ಶ್ರದ್ಧೆಯಿಂದ ಸಸಿ ಹಾಕಿ ದೀಪ ಇಡುವದನ್ನು ನಾನು ಚಿಕ್ಕ ವಯಸ್ಸಿನಿಂದ ನೋಡಿ ಆನಂದಿಸಿದ್ದೇನೆ.

ಬೆಳಿಗ್ಗೆ ಎದ್ದು ಲಗುಬಗೆಯಿಂದ ಹಲ್ಲುಜ್ಜಿ ಮುಖ ತೊಳೆದು ಕಾಫಿ ಹೀರಿ, ಮನೆಯಿಂದ ಅವಸರವಸರ ಮಾಡಿಕೊಂಡು ಯಾಂತ್ರಿಕವಾಗಿ ವಾಕ್ ಮಾಡಲು ಸುಂದರ ಉದ್ಯಾನವನಕ್ಕೆ ಬಂದು ಮೊಬೈಲ್‌ನಲ್ಲಿ ಯಾರದೋ ಸಂಗಡ ಮಾತಾಡುತ್ತ, ಇಲ್ಲವೆ ಐಪಾಡ್‌ನಲ್ಲಿ ಸಿನೆಮಾ ಹಾಡು ಕೇಳುತ್ತ, ಎರಡು ರೌಂಡ್ಸ್ ಹಾಕಿದರೆ, ಅದು ಬರೀ ತಿರುಗಾಟವಾಗಿ ವ್ಯರ್ಥ ಆಗುತ್ತದೆ! ಪ್ರಕೃತಿ ಸೌಂದರ್ಯದ ಸವಿಯನ್ನು ಸವಿಯಲು, ಅದರ ಉಪಾಸನೆಯಲ್ಲಿ ಮೈಮರೆಯಲು ಮುಕ್ತ ಮನಸ್ಸು ಇರಬೇಕು. ಈ ಮುಕ್ತಮನಸ್ಸನ್ನು ಹೊಂದಲು ನಿಸರ್ಗವೂ ಸಹಾಯ ಮಾಡುವುದು. ಮಹಾನ್ ಕವಿಯಾದ ರಾಷ್ಟ್ರಕವಿ ಕುವೆಂಪು ಅವರು 'ಹಸುರು' ಎಂಬ ಕವನದಲ್ಲಿ ಹಬ್ಬಿರುವ ಹಸಿರನ್ನು ಹೀಗೆ ವರ್ಣಿಸಿರುವರು:

ಅದೊ ಹುಲ್ಲಿನ ಮಕಮಲ್ಲಿನ
ಹೊಸ ಪಚ್ಚೆಯ ಜಮಖಾನೆ
ಪಸರಿಸಿ ತಿರೆ ಮೈ ಮುಚ್ಚಿರೆ
ಬೇರೆ ಬಣ್ಣವನೆ ಕಾಣೆ!

ನಿಸರ್ಗದ ಮಡಿಲಿನಲ್ಲಿ ಅನುಭವಿಸುವ ಹಸುರಿನ ಅನನ್ಯ ಭಾವ ಇಲ್ಲಿ ತುಂಬಿ ತುಳುಕುತ್ತಿದೆ. ಇದನ್ನು ಅನುಭವಿಸುವ ಹೃದಯ ಪರಮ ಪವಿತ್ರ ಮತ್ತು ಪರಿಶುದ್ಧ ಹೃದಯವಾಗಿದೆ.

ಕುವೆಂಪು ಅವರ ಹುಲ್ಲಿನ ಮಕಮಲ್ಲಿನ ಜಮಖಾನೆಯ ಜೊತೆಗೆ ಇನ್ನೊಂದು ಕವನವು ತಟ್ಟನೇ ನೆನಪಿಗೆ ಬರುತ್ತದೆ. ಪಾರಿಜಾತದ ಹೂವಿನಂತಹ ಮಾತುಗಳು ಉದುರಿ ಹುಲ್ಲಿನ ಮಕಮಲ್ಲಿನ ಮೇಲೆ ಸುರಿಸಿದಂತಿರಬೇಕು ಎಂದು ಶ್ರೇಷ್ಠ ಕವಿ ಚೆನ್ನವೀರ ಕಣವಿಯವರು ಬರೆದಿರುವ 'ಮಾತು' ಹೀಗೆ ಕವನದಲ್ಲಿ ಮೂಡಿ ಬಂದಿದೆ:

ಮುಂಜಾವದಲಿ ಹಸಿರು ಹುಲ್ಲು ಮಕಮಲ್ಲಿನಲಿ,
ಪಾರಿಜಾತದ ಹೂವು ಸುರಿಸಿದಂತೆ
ಮುಟ್ಟಿದರೆ ಮಾಸುತಿಹ ಮಂಜುಹನಿ ಮುತ್ತಿನಲಿ
ಸೃಷ್ಟಿ ಸಂಪೂರ್ಣತೆಯ ಬಿಂಬಿಪಂತೆ;

ಮೃದು ವಚನ ಮೂಲೋಕ ಗೆಲ್ಲುವುದು ಸಹಜ, ಆದ್ದರಿಂದ ನಾವು ಆಡುವ ಮಾತು ಮಮತೆ, ಮಧುರತೆಗಳಿಂದ ಕೂಡಿರಬೇಕು ಎಂಬುದು ಕವಿ ಆಶಯ ಆಗಿದೆ.

ಅದೇನು ಮಹಾ, ಬರೀ ಹುಲ್ಲು ಎಂದು ಯಾರೂ ಕಡೆಗಣಿಸುವ ಹಾಗಿಲ್ಲ! ಅಮೇರಿಕದಲ್ಲಿ ಹುಲ್ಲನ್ನು ಬೆಳೆಯಾಗಿ ಬೆಳೆಯುತ್ತಾರೆ, ನಮ್ಮ ದೇಶದಲ್ಲಿ ಅಕ್ಕಿಯ ಬೆಳೆಯಲ್ಲಿ ಹಲವು ವಿಧ ಇರುವಂತೆ, ಇಲ್ಲಿ ಹುಲ್ಲಿನ ಬೆಳೆಯಲ್ಲಿ ಹಲವು ವಿಧಗಳಿವೆ. ಕಂಪನಿಗಳು ಹುಲ್ಲಿನಿಂದಾಗಿ ವರ್ಷಕ್ಕೆ ಮಿಲಿಯನ್ ಡಾಲರ್‌ಗೂ ಮೇಲ್ಪಟ್ಟು ಉತ್ಪನ್ನ ಮಾಡುತ್ತಾರಂತೆ.

ಹುಲ್ಲನ್ನು ಔಷಧಿಗಳನ್ನು ತಯಾರಿಸಲು ಬಳಸುತ್ತಾರೆ, ಅದರಲ್ಲಿ ಕ್ಯಾನ್ಸರ್ ರೋಗ ತಡೆಗಟ್ಟುವ ಗುಣವೂ ಇದೆ! ಸೌಂದರ್ಯ ವರ್ಧಕ ಕ್ರೀಮ್ ಮತ್ತು ಲೋಷನ್‌ಗಳನ್ನು ತಯಾರಿಸಲೂ ಉಪಯೋಗಿಸುತ್ತಾರೆ! ಗ್ಲೋಬಲ್ ವಾರ್ಮಿಂಗನ್ನು ತಡೆಗಟ್ಟಲು ಹಸಿರು ಕ್ರಾಂತಿ ಅತಿ ಅವಶ್ಯಕವಾಗಿದೆ. ಹಸಿರು ಶಾಂತಿ ಮತ್ತು ಸಮೃದ್ಧಿಯ ಸಂಕೇತವಾಗಿದೆ. ಧರಣಿದೇವಿಯ ಪಾದಕಮಲದ ಪೂಜೆಗೆ ಹುಡಿಯೇ ಭಸ್ಮ, ಹುಲ್ಲೇ ಪತ್ರೆಯಾಗಿದೆ. ಆದ್ದರಿಂದ ಹುಲ್ಲು ಅತ್ಯಮೂಲ್ಯವಾದದ್ದು, ಅದರ ತೂಕಕ್ಕೆ ಬೆಲೆ ಕಟ್ಟುವದು ಸಾಧ್ಯವೇ ಇಲ್ಲ ಎನ್ನುವದು ನನ್ನ ದೃಢವಾದ ನಂಬಿಕೆಯಾಗಿದೆ.

●

ಅನುಬಂಧಗಳು

ಅನುಬಂಧ ೧

ಲೇಖಕರ ಪರಿಚಯ

ಸಲ್ಲಾಪದಂಗಳ

ಆಹಿತಾನಲ (ನಾಗ ಐತಾಳ್): ಹುಟ್ಟೂರು, ಕರಾವಳಿಯ ಕೋಟ. ಶಿಕಾಗೋ ಯುನಿವರ್ಸಿಟಿಯಲ್ಲಿ ೨೭ ವರ್ಷ ಸಂಶೋಧನಾ ಅಧ್ಯಾಪಕರಾಗಿ ಕೆಲಸ ಮಾಡಿ, ೨೦೦೧ರಲ್ಲಿ ನಿವೃತ್ತರಾಗಿದ್ದಾರೆ. ಪ್ರಸ್ತುತ, ದಕ್ಷಿಣ ಕ್ಯಾಲಿಫೋರ್ನಿಯದ ಆರ್ಕೇಡಿಯದಲ್ಲಿ ಧರ್ಮಪತ್ನಿ ಲಕ್ಷ್ಮಿಯೊಡನೆ ತಮ್ಮ ನಿವೃತ್ತ ಜೀವನವನ್ನು ಅನುಭವಿಸುತ್ತಿದ್ದಾರೆ. ಹವ್ಯಾಸಕ್ಕೆಂದು ಅಷ್ಟಿಷ್ಟು ಬರಹದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಕೆಲವು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಅವರ ಇತ್ತೀಚೆಗಿನ ಕೃತಿ, 'ದೂರ ತೀರದಿಂದ ಹರಿದು ಬಂದ ಕತೆಗಳು' ಎಂಬ ಕಥಾಸಂಕಲನ. ಇವರು ಕನ್ನಡ ಸಾಹಿತ್ಯರಂಗದ ಸ್ಥಾಪಕ ಸದಸ್ಯರು.

ಸಂಪರ್ಕ: 816, Othello Street, Arcadia, California, USA, 91006
Email: nagaaithal@yahoo.com

*

ಹಂ.ಕ. ಕೃಷ್ಣಪ್ರಿಯ: ಹಂಪಾಪುರದ ಕುರುಡು ಘನಪಾಠಿ ಕೃಷ್ಣಯ್ಯಂಗಾರ್ರ ಮನೆತನದವರು. ಅವರ ಶಿಷ್ಯರಾದ ತಮ್ಮ ತಾತ ನಾರಾಯಣಯ್ಯಂಗಾರ್ರಿಂದ ವಿದ್ಯೆ ಕಲಿತವರು. ಬೆಂಗಳೂರಿನಲ್ಲಿ ಬೆಳೆದು ಬೊಂಬಾಯಿ, ನ್ಯೂಯಾರ್ಕ್, ಅಯೋವಗಳ ಮೂಲಕ ಕಾಲಿಫೋರ್ನಿಯಕ್ಕೆ ಬಂದು ನೆಲೆಸಿದ್ದಾರೆ. ಇನ್ನು ಮುಂದೆ ಇದೇ ರೀತಿ ಮುಂದುವರಿದರೆ ಪುನಃ ಬೆಂಗಳೂರು ಸೇರುವ ಸಾಧ್ಯತೆ ಇದೆ. ಉದರನಿಮಿತ್ತವಾಗಿ ಇವರು ಹಾಕಿರುವ ವೇಷಗಳು, ಗಣಿತಾನ್ವೇಷಕ, ಗಣಿತಬೋಧಕ, ಆಸ್ಪತ್ರೆಯಲ್ಲಿ ಹೌಸ್‌ಕೀಪರ್ ಮತ್ತು ಟ್ರಾನ್ಸ್‌ಪೋರ್ಟೇಷನ್ ಅಸಿಸ್ಟಂಟ್, ಕಂಪ್ಯೂಟರ್ ಎಂಜಿನಿಯರ್. ಬರೆಯುವ ಹವ್ಯಾಸವಿರುವ ಸಂಸಾರದಲ್ಲಿ ಹುಟ್ಟಿ ಬೆಳೆದ ಇವರು ಈಚೆಗೆ ತಮ್ಮ ಕೆಲವು ರಚನೆಗಳನ್ನು ದಟ್ಸ್‌ಕನ್ನಡ ಡಾಟ್‌ಕಾಮಿನಲ್ಲಿ, ಉತ್ತರ ಕ್ಯಾಲಿಫೋರ್ನಿಯದ ವಾರ್ಷಿಕ ಸಂಚಿಕೆಯಾದ ಸ್ವರ್ಣಸೇತು ಮುಂತಾದೆಡೆ ಪ್ರಕಟಿಸಿದ್ದಾರೆ. 'ಕನ್ನಡದಮರಚೇತನ' ಎಂಬ ಮಾಸ್ತಿಯವರ ಜೀವನ, ಸಾಹಿತ್ಯದ ಮೇಲಿನ ಲೇಖನಗಳ ಸಂಕಲನದ ಸಹಸಂಪಾದಕರಾಗಿ ಕೆಲಸ ಮಾಡಿದ್ದಾರೆ.

Email: hkrishna_98@yahoo.com

*

ತ್ರಿವೇಣಿ ಶ್ರೀನಿವಾಸರಾವ್: ಹುಟ್ಟೂರು ಚಿಕ್ಕಮಗಳೂರು ಜಿಲ್ಲೆಯ ಕಡೂರು. ಪ್ರಾರಂಭದ ಕವನಗಳು ಬೆಳಕು ಕಂಡದ್ದು 'ಲಂಕೇಶ್ ಪತ್ರಿಕೆ'ಯಲ್ಲಿ. ಕನ್ನಡದ ಪ್ರಮುಖ ಮಾಸಿಕಗಳಾದ

ತುಷಾರ, ಮಯೂರಗಳಲ್ಲಿ ಅನೇಕ ಸಣ್ಣಕಥೆಗಳು ಪ್ರಕಟವಾಗಿವೆ. ಕನ್ನಡದ ಪ್ರಮುಖ ಅಂತರ್ಜಾಲ ಪತ್ರಿಕೆಯಾದ 'ದಟ್ಸ್ ಕನ್ನಡ.ಕಾಂ'ನಲ್ಲಿ ಪ್ರಕಟವಾದ ಅಂಕಣ ಲೇಖನಗಳು 'ತುಳಸಿವನ' ಪ್ರಬಂಧಸಂಕಲನವಾಗಿ ೨೦೦೭ರಲ್ಲಿ ಅಮೆರಿಕದಲ್ಲಿಯೂ, ೨೦೦೮ರಲ್ಲಿ ಭಾರತದಲ್ಲಿಯೂ ಬಿಡುಗಡೆಯಾಗಿದೆ. ವಿದ್ಯಾರಣ್ಯ ಕನ್ನಡ ಕೂಟದ 'ಸಂಗಮ' ಸಂಚಿಕೆಯ ಸಂಪಾದಕತ್ವ ನಿರ್ವಹಣೆಯೊಂದಿಗೆ, ಅಂತರ್ಜಾಲದಲ್ಲಿ 'ತುಳಸಿವನ' ಎಂಬ ಜಾಲತಾಣವನ್ನು ನಿರ್ವಹಿಸುತ್ತಿದ್ದಾರೆ. ಲಲಿತ ಪ್ರಬಂಧ, ವೈಚಾರಿಕ ಲೇಖನ, ದಾಸಸಾಹಿತ್ಯ, ಚಿತ್ರ ಸಾಹಿತ್ಯ, ನಾಟಕ ನಿರ್ದೇಶನ, ಅಭಿನಯ.., ಇತ್ಯಾದಿ ಆಸಕ್ತಿಯ ವಿಷಯಗಳು. ಪ್ರಸ್ತುತ, ಪತಿ ಶ್ರೀನಿವಾಸರಾವ್ ಮತ್ತು ಮಕ್ಕಳು ಸುರಭಿ, ಸುವ್ರತ ಇವರೊಡನೆ ಅಮೆರಿಕದ ಇಲಿನಾಯ್ ರಾಜ್ಯದ 'ಹ್ಯಾನೋವರ್ ಪಾರ್ಕ್' ಬಡಾವಣೆಯಲ್ಲಿ ನೆಲೆಸಿದ್ದಾರೆ.

Website: http://tulasivana.com/

Email: sritri@gmail.com

*

ಎಂ. ಆರ್. ದತ್ತಾತ್ರಿ: ಚಿಕ್ಕಮಗಳೂರಿನವರು, ಈಗ ಸದ್ಯಕ್ಕೆ ಲಾಸ್ ಏಂಜಲಿಸ್‌ನಲ್ಲಿದ್ದಾರೆ. ಇವರ ಪ್ರಕಟಿತ ಪುಸ್ತಕಗಳು- 'ಅಲೆಮಾರಿ ಕನಸುಗಳು' (೨೦೦೨, ಕವನ ಸಂಕಲನ), 'ಪೂರ್ವ-ಪಶ್ಚಿಮ' (೨೦೦೫, ಅಂಕಣ ಬರಹ ಸಂಕಲನ), ಮತ್ತು ಕಾದಂಬರಿ 'ದ್ವೀಪವ ಬಯಸಿ'(೨೦೧೧). 'ಪೂರ್ವ-ಪಶ್ಚಿಮ' ಕೃತಿಗೆ ಶಿವಮೊಗ್ಗ ಕರ್ನಾಟಕ ಸಂಘದಿಂದ ೨೦೦೬ನೇ ಸಾಲಿನ ಡಾ. ಹಾ.ಮಾ. ನಾಯಕ ಪ್ರಶಸ್ತಿ ಬಂದಿದೆ. ಇವರ ಪತ್ನಿ ರೂಪಾ ಮೈಸೂರಿನವರು. ಪುತ್ರರು- ಶಶಾಂಕ ಮತ್ತು ಆದಿತ್ಯ.

Email: dattathri_m_r@yahoo.com

*

ಮಾಲಾ ರಾವ್: ಮೂಲತಃ ತುಮಕೂರಿನವರು. ಕನ್ನಡದ ಹೆಸರಾಂತ ಪತ್ರಿಕೆಗಳಲ್ಲಿ, ಪೋರ್ಟಲ್‌ಗಳಲ್ಲಿ ಮಾಲಾ ಅವರ ಲೇಖನಗಳು, ಕಥೆಗಳು ಪ್ರಕಟವಾಗಿವೆ. ಮಕ್ಕಳಿಗಾಗಿಯೂ ಕಥೆಗಳನ್ನೂ ಹಾಡುಗಳನ್ನೂ ಮಾಲಾರಾವ್ ಬರೆದಿದ್ದಾರೆ. 'ಚಿಟ್ಟೆ ಕಿನ್ನರಿ' ಎಂಬ ಮಕ್ಕಳ ಸಂಗೀತಮಯ ಕಿನ್ನರಿ ಕಥೆ (ಫೇರಿ ಟೇಲ್ ಮ್ಯೂಸಿಕಲ್) ಮಾಲಾ ಅವರ ಇತ್ತೀಚಿನ ಪ್ರಯೋಗ. ಸ್ಯಾನ್ ಫ್ರಾನ್ಸಿಸ್ಕೋ ಬೇಏರಿಯಾದ ನಲವತ್ತೆರಡು ಮಕ್ಕಳು ಮಾಲಾ ರಾವ್ ಬರೆದು ನಿರ್ದೇಶಿಸಿದ ಚಿಟ್ಟೆ ಕಿನ್ನರಿಯಲ್ಲಿ ಪಾತ್ರ ವಹಿಸಿದ್ದರು. ಪ್ರತಿಷ್ಠಿತ ಇಂಡಿಯಾ ಕಮ್ಯುನಿಟಿ ಸೆಂಟರ್‌ನಲ್ಲಿ ಕರ್ನಾಟಕ ದಿನದ (ಜುಲೈ, ೧೧, ೨೦೧೦) ಅಂಗವಾಗಿ ನಡೆದ ಚಿಟ್ಟೆ ಕಿನ್ನರಿ ಪ್ರದರ್ಶನವು ನೆರೆದ ನೂರಾರು ಭಾರತೀಯರ ಮನಸೂರೆಗೊಂಡಿತು. ಚಿತ್ರದುರ್ಗ, ಕಥಾಕಾನನ, ಮೊಗ್ಗಿನ ಜಡೆ, ಮತ್ತು ನಂದಗೋಕುಲ ಬ್ಲಾಗುಗಳಲ್ಲಿ ಬರೆಯುವ ಮಾಲಾ, ಪತಿ ಅರವಿಂದ್ ಮತ್ತು ಮಗ ಅಮರ್ತ್ಯರೊಂದಿಗೆ ಕ್ಯಾಲಿಫೋರ್ನಿಯಾದಲ್ಲಿ ವಾಸವಾಗಿದ್ದಾರೆ.

ಸಂಪರ್ಕ: Mala Rao, 6, Apt #104, Morse Ave, Sunnyvale, CA-94089

Email: mala.rao@gmail.com

*

ಮೀರ ಪಿ. ಆರ್.: ಭಾಷಾವಿಜ್ಞಾನದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿ ಪಡೆದಿರುವ ಮೀರಾ ಶಿಕ್ಷಕಿಯಾಗಿ ಹಾಗೂ ಮೈಸೂರು, ಬೆಂಗಳೂರು ಆಕಾಶವಾಣಿಯಲ್ಲಿ ಹಲವು ವರ್ಷ ಅರೆಕಾಲಿಕ ಉದ್ಘೋಷಕಿಯಾಗಿ ಕೆಲಸ ಮಾಡಿದ್ದಾರೆ. ಕನ್ನಡದ ಹಲವು ನಿಯತಕಾಲಿಕೆಗಳಲ್ಲಿ ಮತ್ತು ವೆಬ್ ಪೋರ್ಟಲ್‌ಗಳಲ್ಲಿ ಇವರ ಹಲವು ಕಥೆ, ಕವಿತೆ, ಪ್ರಬಂಧ, ವಿಮರ್ಶೆ, ಅಂಕಣ ಬರಹಗಳು ಪ್ರಕಟವಾಗಿವೆ. ಮಕ್ಕಳ ಸಾಹಿತ್ಯ ಇವರ ವಿಶೇಷ ಪ್ರೀತಿ. 'ಅಕ್ಕ ೨೦೧೦'ರ ಅಂಗವಾಗಿ ಪ್ರಕಟಗೊಂಡ ಮಕ್ಕಳ ವಿಶೇಷ ಸಂಚಿಕೆ 'ಗುಬ್ಬಿಗೂಡು' ಪುಸ್ತಕದ ರೂವಾರಿ. ಮೀರಾ ಅವರು ತಮ್ಮ ಮನೆಯಲ್ಲಿ ಕರ್ನಾಟಕ ಶಾಸ್ತ್ರೀಯ ಮತ್ತು ಲಘು ಸಂಗೀತದ ತರಗತಿಗಳನ್ನು ನಡೆಸುತ್ತಿದ್ದಾರೆ. ಸಾಹಿತ್ಯ, ಸಂಗೀತ, ಚಿತ್ರಕಲೆ, ಸಿನಿಮಾ, ವೆಬ್‌ಡಿಸೈನಿಂಗ್ ಎಲ್ಲವೂ ಇವರ ಹತ್ತು ಹಲವು ಆಸಕ್ತಿಗಳಲ್ಲಿ ಸೇರಿವೆ. ಭಾರತದಿಂದ ಉತ್ತರ ಅಮೆರಿಕಗೆ ೨೦೦೦ದಲ್ಲಿ ಬಂದ ಇವರು, ಸದ್ಯಕ್ಕೆ ನ್ಯೂಜೆರ್ಸಿಯ 'ಎಡಿಸನ್' ಎಂಬಲ್ಲಿ ತಮ್ಮ ಪತಿ ಹಾಗು ಮಗುವಿನ ಜೊತೆ ನೆಲೆಸಿದ್ದಾರೆ.

ಸಂಪರ್ಕ: Meera P.R., 20, East drive, Edison, NJ 08820
ph: 508-275-3988 Email: bhameera@gmail.com

*

ವಿಮಲ ರಾಜಗೋಪಾಲ್: ಆಕಾಶವಾಣಿ ಮತ್ತಿತರ ಮಾಧ್ಯಮಗಳ ಮೂಲಕ ಜಾನಪದ ಸಂಗೀತ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದ ಎಲ್.ಜಿ. ಸಹೋದರಿಯರಲ್ಲಿ ಒಬ್ಬರು. ಕನ್ನಡದ ಖ್ಯಾತ ಸಾಹಿತಿ ಶ್ರೀ ಎಲ್. ಗುಂಡಪ್ಪನವರ ಮಗಳು. ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಬಿ.ಎ. (ಆನರ್ಸ್) ಪದವಿ. ಆಕಾಶವಾಣಿಯಲ್ಲಿ ಕೆಲಸ. ಕಳೆದ ನಾಲ್ಕು ದಶಕಗಳಿಂದ ಫಿಲಡೆಲ್ಫಿಯಾ ಬಳಿ ವಾಸ. ಅಮೆರಿಕದ Peace Corpsನಲ್ಲಿಯೂ, University of Pennsylvaniaದಲ್ಲೂ ಕನ್ನಡ ಕಲಿಸಿದ್ದಾರೆ. ಎಲ್ವಿನ್ ಸಂಸ್ಥೆಯಲ್ಲಿ Recreation/Music Therapist ಆಗಿ ಕೆಲಸ ಮಾಡಿದ್ದಾರೆ. ಇವರ ಲೇಖನಗಳು ಹಲವಾರು ಕಡೆ ಪ್ರಕಟವಾಗಿವೆ. ಇತ್ತೀಚಿನ ಮುಖ್ಯ ಲೇಖನಗಳು: ಮಳೆ ಬಿಟ್ಟರು ಮರದ ಹನಿ ಬಿಡದು... (ಮಾಸ್ತಿ ಬಗ್ಗೆ) ಮತ್ತು ಮಾನವೀಯ 'ಮಾಯಾಲೋಕ' ಮತ್ತು ಅಸಮಾನ 'ಬದುಕು'. ಕನ್ನಡಕ್ಕೆ ಸಲ್ಲಿಸಿದ ಸೇವೆಗಾಗಿ ೨೦೧೦ ಅಕ್ಕ ವಿಶ್ವಕನ್ನಡ ಸಮ್ಮೇಳನದಲ್ಲಿ ಪುರಸ್ಕಾರ ಗಳಿಸಿದ್ದಾರೆ.

ಸಂಪರ್ಕ: Vimala Rajagopal, 604 Autumn Lane, Media, PA 19063
Email: hyrajagopal@gmail.com

*

ಶಶಿಕಲಾ ಚಂದ್ರಶೇಖರ್: ಮೂಲತಃ ತುಮಕೂರಿನವರು. ಈಗ ವಾಸ ವಾಷಿಂಗ್ಟನ್ ಡಿ.ಸಿ, ಅಮೆರಿಕ. ಹಸಿಗವನ, ಕವನ ಸಣ್ಣ ಕಥೆ ಬರೆಯುವ ಹವ್ಯಾಸ. ಪ್ರಕಟವಾಗಿರುವ ಸಣ್ಣಕಥಾ ಸಂಕಲನ 'ದೀಪವು ನಿನ್ನದೆ ಗಾಳಿಯು ನಿನ್ನದೆ'ಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ರೇವಯ್ಯ ದತ್ತಿ ಪ್ರಶಸ್ತಿ' ಬಂದಿದೆ.

Email: shashi.chandra@gmail.com

*

ಶಾಂತಲಾ ಭಂಡಿ: ಹುಟ್ಟೂರು: ಬೆಂಗಳೆ (ಬನವಾಸಿ). ಪ್ರಸ್ತುತ ವಾಸ: ಕುಪರ್ಟಿನೋ ಕ್ಯಾಲಿಫೋರ್ನಿಯ.

ಓದಿದ್ದು: ಭೂಗೋಳಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ.

Email: shantalabhandi@gmail.com

ಹರಟೆ ಕಟ್ಟೆ

ಅಲಮೇಲು ಅಯ್ಯಂಗಾರ್: ತಮ್ಮ ಪ್ರಹಸನಗಳು, ನಗೆನಾಟಕಗಳು, ನೃತ್ಯ-ರೂಪಕ ನಿರ್ದೇಶನ ಮತ್ತು ಇತರ ಸಾಂಸ್ಕೃತಿಕ ಚಟುವಟಿಕೆಗಳಿಂದ ಅಮೆರಿಕನ್ನಡಿಗರಲ್ಲಿ ಮನೆಮಾತಾಗಿರುವ ಶ್ರೀಮತಿ ಅಲಮೇಲು ಅಯ್ಯಂಗಾರ್ ಅವರು ಅಮೆರಿಕನ್ನಡಿಗರಲ್ಲಿ ಪ್ರಸಿದ್ದರು. ಮೈಸೂರಿನ ಮಾನಸ ಗಂಗೋತ್ರಿಯ ಕನ್ನಡ ಸ್ನಾತಕೋತ್ತರ ಪದವೀಧರೆಯಾದ ಇವರು ಅಮೆರಿಕದ ನೆಲದಲ್ಲಿ ಅನೇಕ ಕನ್ನಡ ಚಟುವಟಿಕೆಗಳ ಅಧ್ವರ್ಯು. ನಾಟಕ, ನಟನೆಗಷ್ಟೇ ಸೀಮಿತವಲ್ಲದ ಅಲಮೇಲು ಅವರ ಸೃಜನಶಕ್ತಿಯ ಹರವು ಕಥೆ, ಕವನ, ವಿಮರ್ಶೆ ಮತ್ತು ಸಂಶೋಧನಾತ್ಮಕ ಪ್ರಬಂಧಗಳ ಬರವಣಿಗೆಯನ್ನು ಒಳಗೊಂಡಿದೆ, ಜೊತೆಗೇ ಚಲನಚಿತ್ರ ಸಂಭಾಷಣೆಯ ನೇಯ್ಗೆಗೂ ಹಬ್ಬಿದೆ. ‘ಹೈಟೆಕ್ ಹಯವದನಾಚಾರ್ ಮತ್ತು ಇತರ ನಾಟಕಗಳು’ ಎಂಬ ಅವರ ನಾಲ್ಕು ನಾಟಕಗಳ ಸಂಕಲನ ಬಹಳ ಜನಪ್ರಿಯವಾಗಿದೆ. ವಿದೇಶೀ ನೆಲದ ದೇಶೀ ಬದುಕಿನ ಸಂದಿಗ್ಧಗಳನ್ನು, ವಿಪರ್ಯಾಸಗಳನ್ನೂ ಚಾಕಚಕ್ಯತೆಯಿಂದ ವಿಡಂಬನೆಗೆ ಗುರಿಮಾಡುವುದರಲ್ಲಿ ಅಲಮೇಲು ಸಿದ್ಧಹಸ್ತರೆಂಬುದನ್ನು ಅವರ ನಾಟಕಗಳು ದೃಢಪಡಿಸುತ್ತವೆ. ಅವರ ತಂದೆ ಡಾ. ಪುತಿನ ಅವರ ‘ಹರಿಣಾಭಿಸರಣ’, ‘ಗೋಕುಲ ನಿರ್ಗಮನ’, ‘ಶ್ರೀರಾಮ ಪಟ್ಟಾಭಿಷೇಕ’ ಮುಂತಾದ ನೃತ್ಯರೂಪಕಗಳ ನಿರ್ಮಾಪಣೆಯ ಹೊಣೆಹೊತ್ತು ಯಶಸ್ವೀ ಪ್ರದರ್ಶನ ನೀಡಿದ್ದಾರೆ. ಈ ಎಲ್ಲ ಪ್ರತಿಭೆ ಮತ್ತು ಸೇವೆಗೆ ಭಾರತ ಮತ್ತು ಅಮೆರಿಕದಾದ್ಯಂತ ಮನ್ನಣೆ ದೊರಕಿದೆ. ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟವು ಅವರಿಗೆ ‘ನಾಟಕ ಕಲಾವತಂಸ’ ಎಂಬ ಬಿರುದನ್ನು ಪ್ರದಾನ ಮಾಡಿ ಸನ್ಮಾನಿಸಿದೆ.

Email: iyengars@gmail.com

*

ನಳಿನಿ ಮೈಯ: ತಮ್ಮ ಪತಿ ಸುಬ್ರಾಯ ಮೈಯ ಅವರೊಡನೆ ಶಿಕಾಗೊ ನಗರದ ಬಡಾವಣೆಯಾದ ಡೇರಿಯನ್‌ನಲ್ಲಿ ವಾಸಿಸುತ್ತಿದ್ದಾರೆ. ಇವರ ಕತೆಗಳು ಅಮೆರಿಕನ್ನಡ, ಶಿಕಾಗೊ ವಲಯದ ಕನ್ನಡ ಪತ್ರಿಕೆ ‘ಸಂಗಮ’ ಹಾಗೂ ಕರ್ನಾಟಕದ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ‘ಮರೀಚಿಕೆ ಮತ್ತು ಇತರ ಕಥೆಗಳು’ ಎಂಬ ಕಥಾ ಸಂಕಲನವನ್ನು ಪ್ರಕಟಿಸಿದ್ದಾರೆ. ಶಿಕಾಗೊ ಕನ್ನಡ ಪತ್ರಿಕೆ ‘ಸಂಗಮ’ದ ಸಂಪಾದಕಿಯಾಗಿದ್ದರು. ‘ಕನ್ನಡ ಸಾಹಿತ್ಯ ರಂಗ’ ಪ್ರಕಟಿಸಿರುವ ಎಲ್ಲ ಪುಸ್ತಕಗಳಿಗೂ ಸಹಸಂಪಾದಕಿಯಾಗಿದ್ದರು. ಜೊತೆಗೆ, ‘ಕನ್ನಡ ಸಾಹಿತ್ಯ ರಂಗ’ದ ಆಡಳಿತ ಮಂಡಲಿಯ ಅಧ್ಯಕ್ಷೆಯಾಗಿಯೂ ಸೇವೆ ಸಲ್ಲಿಸಿದ್ದಾರೆ.

Email: nmaiya@gmail.com

ಮೀನಾ ಸುಬ್ಬರಾವ್: ಮೈಸೂರು ವೈದ್ಯಕೀಯ ವಿದ್ಯಾಲಯದಲ್ಲಿ ವೈದ್ಯಕೀಯ ಪದವಿಯನ್ನು ಪಡೆದು, ಯೂನಿವರ್ಸಿಟಿ ಆಫ್ ಲಾಸ್ ಏಂಜಲಿಸ್‌ನಲ್ಲಿ ಪೀಡಿಯಾಟ್ರಿಕ್ಸ್‌ನಲ್ಲಿ (ಮಕ್ಕಳ ಶಾಸ್ತ್ರ) ಉನ್ನತ ಶಿಕ್ಷಣ ಪಡೆದು, ಪ್ರಸ್ತುತ ಸಲಿನಾಸ್, ಕ್ಯಾಲಿಫೋರ್ನಿಯವಲ್ಲಿ ಸುಮಾರು ೧೫ ವರುಷಗಳಿಂದ ಮಕ್ಕಳ ತಜ್ಞೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಂಗೀತ, ಸಾಹಿತ್ಯ, ನಾಟಕ, ನೃತ್ಯ, ಕಲೆ, ಫೋಟೊಗ್ರಫಿ ಮತ್ತು ಪ್ರವಾಸಗಳಲ್ಲಿ ಆಸಕ್ತಿಯಿದ್ದು, ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಬರೆಯುವ ಹವ್ಯಾಸವನ್ನು ಇಟ್ಟುಕೊಂಡಿದ್ದಾರೆ. ಇವರ ಲೇಖನಗಳು, ಕವನಗಳು, ವರದಿಗಳು, ಪ್ರಬಂಧಗಳು ದಟ್ಸ್ ಕನ್ನಡ, ಸಂಪದ, ಕನ್ನಡ ಧ್ವನಿ, ಸ್ವರ್ಣಸೇತು, ಅಲೆವಾಣಿ ಮುಂತಾದ ತಾಣ ಮತ್ತು ಸಂಚಿಕೆಗಳಲ್ಲಿ ಪ್ರಕಟವಾಗಿವೆ.

Email: subbaraomeena@yahoo.com

*

ಎಚ್. ವೈ. ರಾಜಗೋಪಾಲ್: ೧೯೬೦ರ ದಶಕದಲ್ಲೇ ಈ ದೇಶಕ್ಕೆ ಬಂದವರು. ಇಲ್ಲಿನ ಕನ್ನಡ ಸಮಾಜದೊಂದಿಗೆ ನಿಕಟ ಸಂಪರ್ಕ ಹೊಂದಿದ್ದಾರೆ. ಅಲ್ಲದೆ ಅನೇಕ ಭಾರತೀಯ ಸಂಸ್ಥೆಗಳ ಸ್ಥಾಪಕರೂ, ಕಾರ್ಯಮಂಡಲಿಯ ಸದಸ್ಯರೂ ಆಗಿ ಕೆಲಸ ಮಾಡಿದ್ದಾರೆ. ಕನ್ನಡ ಸಾಹಿತ್ಯಕ್ಕೇ ಮೀಸಲಾದ ಅಮೆರಿಕದ ಏಕೈಕ ರಾಷ್ಟ್ರೀಯ ಸಂಸ್ಥೆಯಾದ ಕನ್ನಡ ಸಾಹಿತ್ಯ ರಂಗದ ಸ್ಥಾಪಕ ಸದಸ್ಯರಲ್ಲೊಬ್ಬರೂ ಅದರ ಅಧ್ಯಕ್ಷರೂ ಆಗಿದ್ದಾರೆ. ಇವರ ಲೇಖನಗಳು ಇಲ್ಲಿನ ಹಾಗೂ ಕರ್ನಾಟಕದ ಹಲವಾರು ಸಂಕಲನಗಳಲ್ಲಿ, ಅಂತರ್ಜಾಲ ತಾಣಗಳಲ್ಲಿ ಪ್ರಕಾಶಗೊಂಡಿವೆ. ಅವರು ಸಹಸಂಪಾದಕರಾಗಿ ಹೊರತಂದ ಕೃತಿ 'ನಗೆಗನ್ನಡಂ ಗೆಲ್ಗೆ!' ಅನೇಕ ಓದುಗರ, ವಿದ್ವಾಂಸರ ಮೆಚ್ಚುಗೆ ಗಳಿಸಿದೆ. ಹೊರನಾಡ ಕನ್ನಡಿಗರಾಗಿ ಕನ್ನಡಕ್ಕೆ ಅವರು ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಕರ್ನಾಟಕ ರಾಜ್ಯ ಸರ್ಕಾರ ೨೦೦೭ರಲ್ಲಿ ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನಿತ್ತು ಸನ್ಮಾನಿಸಿದೆ. ಮೈಸೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನೀರಿಂಗ್, ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ಮತ್ತು ಪೆನ್ಸಿಲ್ವೇನಿಯಾ ಸ್ಟೇಟ್ ಯೂನಿವರ್ಸಿಟಿಗಳಲ್ಲಿ ಇಂಜಿನೀರಿಂಗ್ ವಿಭಾಗದಲ್ಲಿ ಕ್ರಮವಾಗಿ B.E., M.E., Ph.D. ಪದವಿಗಳನ್ನು ಪಡೆದು Raytheon Engineers & Constructors ಕಂಪೆನಿಯಲ್ಲಿ Consulting Engineer ಆಗಿಯೂ, ವಿಲನೋವಾ ವಿಶ್ವವಿದ್ಯಾಲಯದಲ್ಲಿ Adjunct Professor ಆಗಿಯೂ ಕೆಲಸ ಮಾಡಿದ್ದಾರೆ. ಕನ್ನಡ ಲೇಖಕಿ, ಜಾನಪದ ಗಾಯಕಿ ಎಂದು ಹೆಸರು ಪಡೆದಿರುವ ಅವರ ಪತ್ನಿ ವಿಮಲಾ ರಾಜಗೋಪಾಲರೊಂದಿಗೆ ಮೀಡಿಯಾ, ಪೆನ್ಸಿಲ್ವೇನಿಯದಲ್ಲಿ ವಾಸವಾಗಿದ್ದಾರೆ.

ಸಂಪರ್ಕ: H.Y. Rajagopal, 604 Autumn Lane, Media, PA 19063

Email: hyrajagopal@gmail.com

*

ಮವಾಸು (ವಲ್ಲೀಶ ಶಾಸ್ತ್ರಿ): ಹಾಸನ ಜಿಲ್ಲೆಯ 'ಮತ್ತಿಗೋಡು' ಎಂಬ ಹಳ್ಳಿಯಲ್ಲಿ ಹುಟ್ಟಿ, ಬೆಂಗಳೂರಿನಲ್ಲಿ ಕಾಲೇಜು ಜೀವನ ಹಾಗೂ ಸರಕಾರಿ ಕಚೇರಿಯಲ್ಲಿ ಕೆಲಸ. ಬೆಂಗಳೂರಿನಲ್ಲಿದ್ದಾಗ

'ಬೆನಕ' ನಾಟಕ ತಂಡದೊಂದಿಗೆ ರಂಗ ಚಟುವಟಿಕೆ. 'ಹ್ಯಾಮ್ಲೆಟ್', 'ಜೋಕುಮಾರಸ್ವಾಮಿ', 'ಸತ್ತವರ ನೆರಳು'... ಹೀಗೆ ಹಲವಾರು ನಾಟಕಗಳಲ್ಲಿ ಅಭಿನಯ. ನಂತರ ಕೆಲಸದ ನಿಮಿತ್ತ ಧಾರವಾಡ, ಮಣಿಪಾಲ, ಹರಿಹರದಲ್ಲಿ ವಾಸ. ೧೯೮೯ರಿಂದ ಹೊರ ದೇಶಗಳಲ್ಲಿ ಕೆಲಸ. ಸೌದಿ ಅರೇಬಿಯಾ, ದುಬೈ, ಇಟಲಿ, ಇಂಗ್ಲೆಂಡ್ ಸುತ್ತಿ, ಕಡೆಗೆ ೧೯೯೭ರಿಂದ ಅಮೆರಿಕೆಯಲ್ಲಿ ಜೀವನ. ಕನ್ನಡದ ಬಗ್ಗೆ ಬಹಳಷ್ಟು ಕಾಳಜಿ ಇಟ್ಟಿರುವ ಇವರು, ಹಾಲಿ ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿದ್ದಾರೆ. ದಕ್ಷಿಣ ಕ್ಯಾಲಿಫೋರ್ನಿಯ ಕರ್ನಾಟಕ ಸಂಘದ ಉಪಾಧ್ಯಕ್ಷರಾಗಿದ್ದಾರೆ. 'ನಾವಿಕ' ಸಂಸ್ಥೆಯ ಉಪಾಧ್ಯಕ್ಷರಾಗಿ ೨೦೧೦ನೇ 'ನಾವಿಕ' ಸಮ್ಮೇಳನದ ನೇತೃತ್ವವಹಿಸಿ, ಯಶಸ್ವೀ ಸಮ್ಮೇಳನ ನಡೆಸಿದ್ದಾರೆ. ನಾಟಕ ಇವರ ಹವ್ಯಾಸ. 'ಹಾಲಿವುಡ್ನಲ್ಲಿ ಯಮ', 'ಯಮನ ಕಾಲ್ ಸೆಂಟರ್', 'ವೀಕ್ ಎಂಡ್ ಗಂಡ', 'ತಿರುಗೇಟು' ಇವರ ಅಪ್ರಕಟಿತ ನಾಟಕಗಳು. ಇವರು ಹಲವಾರು ನಾಟಕಗಳನ್ನು ನಿರ್ದೇಶಿಸಿ ಅಭಿನಯಿಸಿದ್ದಾರೆ. 'ಹಾಲಿವುಡ್ನಲ್ಲಿ ಯಮ', 'ಯಮನ ಕಾಲ್ ಸೆಂಟರ್', 'ಜೋಕುಮಾರಸ್ವಾಮಿ', 'ತಿರುಗೇಟು', 'ಸಂಗ್ಯಾ ಬಾಳ್ಯಾ'... ಹೀಗೆ ಹಲವಾರು ಇವರ ಯಶಸ್ವೀ ಪ್ರಯೋಗಗಳು. ಇವರ ನಾಟಕ ರಂಗದ ಸೇವೆಗೆ ಕರ್ನಾಟಕ ನಾಟಕ ಅಕಾಡೆಮಿ ಇವರನ್ನು ಪುರಸ್ಕರಿಸಿದೆ. ವೇಳೆ ಸಿಕ್ಕಾಗ ಪತ್ರಿಕೆಗಳಿಗೆ ಲೇಖನ ಬರೆಯುವುದು ಹಾಗೂ ಸಣ್ಣ ಕಥೆಗಳನ್ನು ಬರೆಯುವುದು ಇವರ ಹವ್ಯಾಸ. ಸಾಹಿತ್ಯಕ್ಕೆ ಮೀಸಲಾದ 'ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ.' ಸಂಘದ ಉಪಾಧ್ಯಕ್ಷರೂ ಆಗಿದ್ದಾರೆ.

Email: vmshastry@gmail.com

*

ಶ್ರೀಕಾಂತ ಬಾಬು: ನ್ಯೂಜೆರ್ಸಿಯಲ್ಲಿ ಸುಮಾರು ೨೦ ವರ್ಷಗಳಿಂದ ನೆಲೆಸಿರುವ ಇವರು ನ್ಯೂಯಾರ್ಕ್‌ನ Credit Suisse Bankನಲ್ಲಿ IT Manager ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಹಾಗೂ ಭಾರತೀಯ ಸಂಗೀತದಲ್ಲಿ ತುಂಬಾ ಆಸಕ್ತಿ ಆದರೆ, 'ಸಾಹಿತ್ಯ ರಚನೆ ತಮ್ಮ ಹವ್ಯಾಸವಲ್ಲ' ಎನ್ನುತ್ತಾರೆ.

ಸಂಪರ್ಕ: 39 Lavender Drive, Edison, NJ 08820

Email: svenkatesha@hotmail.com

*

ಶ್ರೀನಾಥ್ ಭಲ್ಲೆ: ವರ್ಜೀನಿಯಾ ರಾಜ್ಯದ ರಿಚ್ಮಂಡ್ ನಗರದಲ್ಲಿ ವಾಸ. ವೃತ್ತಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್. ಹವ್ಯಾಸಿ ಬರಹಗಾರ, ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಾದ ನಗೆಹನಿ, ಚುಟುಕು, ಹಾಸ್ಯ, ಕವನ, ಗಂಭೀರ ಕವನ, ಪತ್ತೇದಾರಿ, ಸಣ್ಣಕಥೆಗಳು, ನಾಟಕ, ಪದರಂಗ ಇತ್ಯಾದಿಯಲ್ಲಿ ಪ್ರಯೋಗ. ನಾಟಕ ನಿರ್ದೇಶನ ಹಾಗೂ ನಟನೆಯಲ್ಲಿ ಸ್ವಲ್ಪ ಅನುಭವ.

Email: srinathbhalle@yahoo.com

*

ಸುಪ್ತದೀಪ್ತಿ (ಜ್ಯೋತಿ ಮಹಾದೇವ್): ಕಥೆ, ಕವನಗಳ ರಚನೆ, ಓದು, ಚರ್ಚೆ, ವಿಮರ್ಶೆ ಮುಂತಾದ ಸಾಹಿತ್ಯಿಕ ಹವ್ಯಾಸಗಳಲ್ಲಿ ತೊಡಗಿಸಿಕೊಂಡವರು. 'ಭಾವಲಹರಿ', 'ಭಾವಗಾನ', 'ಭಾವಬಿಂಬ'- ಪ್ರಕಟಿತ ಕವನ ಸಂಕಲನಗಳು. ಮನಃಶಾಸ್ತ್ರ, ಅಧ್ಯಾತ್ಮ, ಸಂಪೂರ್ಣ (ಮನೋ-ದೈಹಿಕ) ಸ್ವಾಸ್ಥ್ಯ, ಪ್ರಕೃತಿ ಚಿಕಿತ್ಸೆಗಳಲ್ಲಿಯೂ ಆಸಕ್ತಿ. 'ಸುಪ್ತದೀಪ್ತಿ-ಇನ್ನರ್ ಲೈಟ್' ಹಾಗೂ 'ಹರಿವ ಲಹರಿ' ಎಂಬ ಬ್ಲಾಗ್‌ಗಳನ್ನು ನಡೆಸುತ್ತಿರುವರು. ಮಂಗಳೂರು, ಪುತ್ತೂರು, ಕಾರ್ಕಳಗಳಲ್ಲಿ ಹುಟ್ಟಿ-ಬೆಳೆದು, ವಿದ್ಯಾಭ್ಯಾಸ ಪಡೆದು, ಹಲವಾರು ವರ್ಷ ಕ್ಯಾಲಿಫೋರ್ನಿಯಾ ಬೇ ಏರಿಯಾದಲ್ಲಿ ವಾಸವಾಗಿದ್ದವರು. ಈಗ ಪತಿ ಮತ್ತು ಮಗನೊಂದಿಗೆ ಮಣಿಪಾಲದಲ್ಲಿ ನೆಲೆಸಿದ್ದಾರೆ. ಫಿಟ್‌ನೆಸ್ ಮತ್ತು ಹಿಪ್ನೋಥೆರಪಿಗಾಗಿ ಮಣಿಪಾಲದಲ್ಲಿ 'ಇನ್ನರ್‌ಲೈಟ್ ವೆಲ್‌ನೆಸ್ ಸೆಂಟರ್' ಆರಂಭಿಸಿ, ಸಂಪೂರ್ಣ ಸ್ವಾಸ್ಥ್ಯದತ್ತ ಆಸಕ್ತರನ್ನೊಯ್ಯುವ ನಿಟ್ಟಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಸಂಪರ್ಕ: Jyothi Mahadev (suptadeepti), #40, LAHARI, 3rd Cross, Anantha nagar 1st Stage, Manipal, Udupi Dist. 576 104
Email: jyothimahadev@gmail.com

*

ಪಿ.ಎಸ್. ಮೈಯ: ತಮ್ಮ ಹಾಸ್ಯ ಲೇಖನಗಳ ಮೂಲಕ ಜನರ ಗಮನವನ್ನು ಸೆಳೆದ ಇವರ ಬರಹಗಳು ಅಮೆರಿಕನ್ನಡ, ಸಂಗಮ ಹಾಗೂ ದಟ್ಸ್ ಕನ್ನಡ ಅಂತರ್ಜಾಲ ತಾಣಗಳಲ್ಲಿ ಪ್ರಕಟವಾಗಿವೆ. ವಾಸ ಶಿಕಾಗೊ ನಗರದ ಹತ್ತಿರದ ಡೇರಿಯನ್ ಎಂಬಲ್ಲಿ. ನ್ಯೂಯಾರ್ಕ್ ರಾಜ್ಯದಲ್ಲಿದ್ದ ಕೊಲಂಬಿಯ ಮತ್ತು ಕೊರ್ನೆಲ್ಲ್ ಯುನಿವರ್ಸಿಟಿಗಳಲ್ಲಿ M.S., Ph.D. ಡಿಗ್ರಿಗಳನ್ನು ಮುಗಿಸಿ, ಆರ್ಗಾನ್ ನ್ಯಾಷನಲ್ ಲ್ಯಾಬೊರೇಟರಿಯಲ್ಲಿ ವಿಜ್ಞಾನಿಯಾಗಿ ಸಂಶೋಧನೆ ನಡೆಸುತ್ತಿದ್ದರು. ಈಗ ನಿವೃತ್ತರಾಗಿದ್ದಾರೆ.

Email: psmaiya@gmail.com

*

ಚಿಂತನೆ ಚಾವಡಿ

ಅನಿಲ್ ದೇಶಪಾಂಡೆ: ಮೂಲತಃ ರಾಯಚೂರು ಜಿಲ್ಲೆಯ ಮುದಗಲ್‌ನವರು, ವೃತ್ತಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್. ೨೦೦೯ರಲ್ಲಿ ವಿದ್ಯಾರಣ್ಯ ಕನ್ನಡಕೂಟದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಅವರಿಗೆ ಸಾಹಿತ್ಯ, ಸಂಸ್ಕೃತಿ ಕುರಿತಾದ ಕಾರ್ಯಕ್ರಮಗಳಲ್ಲಿ ಅಪಾರ ಆಸಕ್ತಿ. ಪ್ರಸ್ತುತ ಇಲಿನಾಯ್ ರಾಜ್ಯದ ಪ್ಯಾಲಟೈನ್‌ನಲ್ಲಿ ಪತ್ನಿ ಅರ್ಚನಾ ಮತ್ತು ಪುತ್ರ ಆದಿತ್ಯರೊಡನೆ ನೆಲೆಸಿದ್ದಾರೆ.

Email: anildeshpande@anildeshpande.net

*

ಗುರುಪ್ರಸಾದ್ ಕಾಗಿನೆಲೆ: ಹುಟ್ಟಿದ್ದು ಶಿವಮೊಗ್ಗ. ಬೆಳೆದದ್ದು ಮೈಸೂರು ಮತ್ತು ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ. ಬಳ್ಳಾರಿಯ ಸರಕಾರಿ ವೈದ್ಯಕೀಯ ವಿದ್ಯಾಲಯದಲ್ಲಿ ಎಂಬಿಬಿಎಸ್

ಮತ್ತು ಎಂಡಿ ಪದವಿ ಪಡೆದು ತುಮಕೂರಿನ ಸಿದ್ಧಾರ್ಥ ವೈದ್ಯಕೀಯ ವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಕೆಲಸ. ೧೯೯೫ರಲ್ಲಿ ಅಮೆರಿಕೆಗೆ ವಲಸೆ. ಡೆಟ್ರಾಯ್ಟ್‌ನ ವೇಯ್ನ್‌ಸ್ಟೇಟ್ ವಿಶ್ವವಿದ್ಯಾನಿಲಯ ಹಾಗೂ ವಿಸ್ಕಾನ್ಸಿನ್ ವಿಶ್ವವಿದ್ಯಾನಿಲಯಗಳಲ್ಲಿ ತರಬೇತಿ. ಸದ್ಯಕ್ಕೆ ಮಿನೆಸೊಟಾ ರಾಜ್ಯದ ರಾಚೆಸ್ಟರ್‌ನಲ್ಲಿ ಪತ್ನಿ ಪದ್ಮ ಮತ್ತು ಮಕ್ಕಳಾದ ಪ್ರಣಿತ ಮತ್ತು ಪ್ರಭವರೊಟ್ಟಿಗೆ ವಾಸ. ನಾರ್ತ್ ಮೆಮೊರಿಯಲ್ ಆಸ್ಪತ್ರೆಯ ಎಮರ್ಜೆನ್ಸಿ ಮೆಡಿಸಿನ್ ವಿಭಾಗದಲ್ಲಿ ಎಮರ್ಜೆನ್ಸಿ ವೈದ್ಯನಾಗಿ ಕೆಲಸ.

ಪ್ರಕಟಿತ ಕೃತಿಗಳು: 'ನಿರ್ಗುಣ'(೨೦೦೩), ಶಕುಂತಳಾ (೨೦೦೭)- ಕಥಾಸಂಕಲನಗಳು: 'ವೈದ್ಯ, ಮತ್ತೊಬ್ಬ' (೨೦೦೫)- ಲೇಖನ ಸಂಗ್ರಹ. ಸಂಪಾದಿತ ಕಥಾಸಂಕಲನ 'ಆಚೀಚೆಯ ಕಥೆಗಳು' (೨೦೦೫). 'ಬಿಳಿಯ ಚಾದರ' (೨೦೦೭) ಮತ್ತು 'ಗುಣ' (೨೦೧೦) ಕಾದಂಬರಿಗಳು. ಕೆಲವು ಕಥೆಗಳು ಮರಾಠಿ, ತೆಲುಗು ಮತ್ತು ಕೊಂಕಣಿ ಭಾಷೆಗಳಿಗೆ ಅನುವಾದವಾಗಿವೆ. 'ವೈದ್ಯ, ಮತ್ತೊಬ್ಬ' ಕೃತಿಗೆ ೨೦೦೫ರ ಡಾ. ಪಿ.ಎಸ್.ಶಂಕರ್ ಶ್ರೇಷ್ಠ ವೈದ್ಯ ಸಾಹಿತ್ಯ ಪ್ರಶಸ್ತಿ ಲಭಿಸಿದೆ.

ಸಂಪರ್ಕ: 6044 Granite Dr NW, Rochester, MN- 55901

Email: gkaginele@hotmail.com

*

ಗುಂಡು ಶಂಕರ್: ಪತ್ನಿ ಶೈಲಜ ಮತು ಇಬ್ಬರು ಮಕ್ಕಳೊಂದಿಗೆ ಫ್ರೀಹೋಲ್ಡ್, ನ್ಯೂಜೆರ್ಸಿಯಲ್ಲಿ ವಾಸ ಮಾಡುತ್ತಿದ್ದಾರೆ. B. Tech. ಡಿಗ್ರಿ Indian Institute of Science, Bangalore ಮತ್ತು Indian Institute of Management, Calcuttaನಿಂದ M.B.A. ಡಿಗ್ರಿ ಪಡೆದರು. ಈಗ management consultant ಆಗಿ ಕೆಲಸ ಮಾಡುತ್ತಿದ್ದಾರೆ. ಸಾಹಿತ್ಯ ಮತ್ತು ಕಲೆಯಲ್ಲಿ ಆಸಕ್ತಿ ಇದೆ. ಕನ್ನಡ ಸಾಹಿತ್ಯ ರಂಗ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾರೆ.

ಸಂಪರ್ಕ: gundu_shankar@hotmail.com

(ಗುಂಡು ಶಂಕರ್ ಅವರ ಲೇಖನವನ್ನು ಅನುವಾದಿಸಿರುವ ಶ್ರೀಕಾಂತ ಬಾಬು ಅವರ ಲೇಖನವೂ ಈ ಸಂಕಲನದಲ್ಲಿರುವುದರಿಂದ, ಅವರ ಪರಿಚಯವನ್ನು ಪ್ರತ್ಯೇಕವಾಗಿ ನೀಡಲಾಗಿದೆ.)

*

ಮೈ. ಶ್ರೀ. ನಟರಾಜ: ಮೂಲತಃ ಹಾಸನದವರಾದ ಡಾ. ಮೈ. ಶ್ರೀ. ನಟರಾಜರು, ಮೇರೀಲ್ಯಾಂಡ್ ಸಂಸ್ಥಾನದ 'ಪೊಟೋಮೆಕ್' ಎಂಬ ಊರಿನಲ್ಲಿ ವಾಸವಾಗಿದ್ದಾರೆ. ಅಮೆರಿಕೆಯಲ್ಲಿ ನೆಲೆಸಿರುವ ಪ್ರಸಿದ್ಧ ಕನ್ನಡ ಬರಹಗಾರರಲ್ಲಿ ಒಬ್ಬರಾದ ನಟರಾಜ್, ಅಮೆರಿಕದ ಅಣುಶಕ್ತಿನಿಯಂತ್ರಣ ಆಯೋಗದಲ್ಲಿ ತಾಂತ್ರಿಕ ನಿಪುಣ. ಇವರು ಕನ್ನಡದಲ್ಲಿ ಏಳು ನಾಟಕಗಳನ್ನೂ (ಅದರಲ್ಲಿ ಒಂದು ಹಿಂದಿಯಿಂದ ಭಾಷಾಂತರಿಸಿದ್ದು), ಎರಡು ಕವನ ಸಂಕಲನಗಳನ್ನೂ ಮತ್ತು ಎರಡು ಅಂಕಣ ಬರಹಗಳ ಸಂಕಲನಗಳನ್ನೂ ಪ್ರಕಟಿಸಿದ್ದಾರೆ. ೨೦೦೬ರಲ್ಲಿ ನಡೆದ ನಾಲ್ಕನೆಯ ಅಕ್ಕ ಸಮ್ಮೇಳನದ ಸಮಸ್ತ ಸಾಹಿತ್ಯಕ ಚಟುವಟಿಕೆಗಳಿಗೂ ಸೂತ್ರಧಾರರಾಗಿದ್ದು, ಅಲ್ಲಿ ಪ್ರಕಟವಾದ

'ಸುವರ್ಣವಾಹಿನಿ' ಸಂಪುಟಗಳ ಸಾರಥ್ಯವನ್ನು ವಹಿಸಿಕೊಂಡಿದ್ದು ಇವರ ಹೆಗ್ಗಳಿಕೆ. ಅಮೆರಿಕದಲ್ಲಿ ಕನ್ನಡ ಸಾಹಿತ್ಯದ ಬೆಳವಣಿಗೆಗಾಗಿಯೇ ಹುಟ್ಟಿದ 'ಕನ್ನಡ ಸಾಹಿತ್ಯ ರಂಗ'ದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರುವುದಲ್ಲದೆ, ಈ ಸಂಸ್ಥೆ ಇದುವರೆಗೆ ಹೊರತಂದಿರುವ ನಾಲ್ಕು ಸಾಹಿತ್ಯ-ಸಂಪುಟಗಳ ಸಂಪಾದಕವರ್ಗದಲ್ಲಿ ದುಡಿದಿದ್ದಾರೆ. ಡಾ. ನಟರಾಜರಿಗೆ ದೊರೆತಿರುವ ಹಲವಾರು ಪ್ರಶಸ್ತಿಗಳಲ್ಲಿ ೨೦೦೩ರಲ್ಲಿ ದೊರೆತ ಗೊರೂರು ಪ್ರತಿಷ್ಠಾನದ ಪ್ರಶಸ್ತಿ ಮುಖ್ಯವಾದುದು. ಸಂಸ್ಕೃತ ಭಾಷೆಯಲ್ಲಿ ಇವರು ರಚಿಸಿದ ಒಂಬತ್ತು ಕೃತಿಗಳು ('ನವರತ್ನಮಾಲಿಕಾ') ಮತ್ತು ಕನ್ನಡದಲ್ಲಿ ರಚಿಸಿರುವ 'ಸುಂದರಕಾಂಡ' ಕರ್ನಾಟಕ ಸಂಗೀತದ ಧ್ವನಿಸಂಪುಟಗಳಾಗಿ ಹೊರಬಂದಿವೆ.

Email:mysreena@aol.com

*

ಪ್ರಕಾಶ್ ನಾಯಕ್: ಉತ್ತರ ಕನ್ನಡ ಜಿಲ್ಲೆಯವರು. ಸದ್ಯಕ್ಕೆ ಉತ್ತರ ಕ್ಯಾಲಿಫೋರ್ನಿಯದ ಸನ್ನಿವೇಲ್‌ನ ಮಾರ್ವೆಲ್ ಸಂಸ್ಥೆಯಲ್ಲಿ ಪ್ರಾಡಕ್ಟ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ. ಕಥೆ-ಕವನಗಳಲ್ಲಿನ ಆಸಕ್ತಿ ಕೆಲವೊಮ್ಮೆ ಬರೆಯುವಂತೆ ಮಾಡಿದ್ದೂ ಇದೆ. ಸ್ಥಳೀಯ ಕನ್ನಡ ಕೂಟದ ವಾರ್ಷಿಕ ಸಂಚಿಕೆಗಳಲ್ಲಿ ಮತ್ತು ದಟ್ಸ್‌ಕನ್ನಡಡಾಟ್‌ಕಾಮ್ ಪೋರ್ಟಲ್‌ನಲ್ಲಿ ಇವರ ಬರಹಗಳು ಪ್ರಕಟವಾಗಿವೆ.

ಸಂಪರ್ಕ: Address: 1400, Birchmeadow Lane, San Jose, CA 95131

Blog : http://maatumuttu.blogspot.com

Email: phn66@yahoo.com

*

ಹಂ.ಕ. ರಾಮಪ್ರಿಯನ್: ಹಾಸನದಲ್ಲಿ ಹುಟ್ಟಿ ಬೆಂಗಳೂರಿನಲ್ಲಿ ಬೆಳೆದವರು. ಡಾ. ರಾಮಪ್ರಿಯನ್ ಅವರು Indian Institute of Scienceನಲ್ಲಿ Electrical Engineeringನಲ್ಲಿ M.E. ಪದವಿಯನ್ನು ಗಳಿಸಿ ೧೯೬೬ನೆಯ ಇಸವಿಯಲ್ಲಿ ಉನ್ನತ ವಿದ್ಯಾಭ್ಯಾಸಕ್ಕಾಗಿ ಅಮೆರಿಕದ ಮಿನೆಸೋಟಾ ವಿಶ್ವವಿದ್ಯಾಲಯಕ್ಕೆ ತೆರಳಿದರು. ಅಲ್ಲಿ Ph.D. ಪದವಿಯನ್ನು ಸಂಪಾದಿಸಿ ೧೯೭೧ನೆಯ ಇಸವಿಯಿಂದ ಅಮೆರಿಕದ ಬಾಹ್ಯಾಕಾಶ ಸಂಸ್ಥೆಯಲ್ಲಿ (NASAದಲ್ಲಿ) ಕೆಲಸ ಮಾಡುತ್ತಿದ್ದಾರೆ. ೧೯೭೬ನೆಯ ಇಸವಿಯಿಂದ ಅವರ ವಾಸ ಅಮೆರಿಕದ ರಾಜಧಾನಿಯಾದ ವಾಷಿಂಗ್ಟನ್ ನಗರದ ಬಳಿ.

ಚಿಕ್ಕಂದಿನಲ್ಲಿ ಮನೆಯಲ್ಲಿ (ಮತ್ತು ಶಾಲೆಯಲ್ಲೂ) ಸಂಸ್ಕೃತ ಮತ್ತು ಕನ್ನಡ ಭಾಷೆಗಳನ್ನು ಕಲಿತು ಇವೆರಡರಲ್ಲೂ ಮತ್ತು ಇಂಗ್ಲಿಷ್‌ನಲ್ಲೂ ಪದ್ಯಗಳನ್ನು ಬರೆಯುವ ಹವ್ಯಾಸ ಇಟ್ಟುಕೊಂಡಿದ್ದಾರೆ. ಅವರ ಅನೇಕ ಕವನಗಳು 'ದಟ್ಸ್‌ಕನ್ನಡ'ದ ಜಾಲಪುಟಗಳಲ್ಲಿ ಪ್ರಕಟವಾಗಿವೆ ಮತ್ತು ಲೇಖನಗಳೂ ಕವನಗಳೂ ಅಮೆರಿಕದಲ್ಲಿ ಆಗಾಗ ಪ್ರಕಟಿಸಲ್ಪಟ್ಟಿರುವ ಪುಸ್ತಕಗಳಲ್ಲಿ ಹೊರಬಂದಿವೆ. ಇತ್ತೀಚೆಗೆ ಅವರು ಭಗವದ್ಗೀತೆಯನ್ನು ಶ್ಲೋಕರೂಪದಲ್ಲಿ ಕನ್ನಡ ಭಾಷಾಂತರ ಮಾಡಿ ಮುಗಿಸಿದ್ದಾರೆ.

Email: e-mail address: ramapriyan@verizon.net

ಎಚ್. ವಿ. ರಂಗಾಚಾರ್: ವೃತ್ತಿಯಿಂದ ಎಲೆಕ್ಟ್ರಾನಿಕ್ ಎಂಜಿನಿಯರ್. ಬೆಂಗಳೂರು ಎಂಜಿನಿಯರಿಂಗ್ ಕಾಲೇಜಿನಿಂದ ಬಿ.ಇ. ಪದವಿ ಪಡೆದು, ನಂತರ ಅಮೆರಿಕದಲ್ಲಿ ಎಂ.ಎಸ್. ಮತ್ತು ಪಿಎಚ್‌ಡಿ ಪದವಿಗಳನ್ನು ಗಳಿಸಿ RCA ಮತ್ತು Bell Laboratoriesಗಳಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದಾರೆ. ಇವರು ಅಮೆರಿಕದ ಕನ್ನಡ ಬರಹಗಾರರಲ್ಲಿ ಮೊದಲಿಗರು. ಪ್ರಬಂಧ, ಕವನ ಮತ್ತು ಭಾಷಾಂತರಗಳು ಇವರ ಕ್ಷೇತ್ರ. 'ನೆಲದ ಕರೆ'(ಕವನ ಸಂಕಲನ), 'ಹೇರೋದೂತನ ಸಮರ ಕಥೆಗಳು' (ಕಥಾಸಂಗ್ರಹ), 'Hill Temple' (ಪು.ತಿ.ನ. ಅವರ 'ಮಲೆದೇಗುಲ'ದ ಆಂಗ್ಲಾನುವಾದ) ಮತ್ತು 'ತರಗೆಲೆಯ ಹಾರಾಟ'(ಪ್ರಬಂಧ ಸಂಕಲನ) ಇವರ ಪ್ರಕಟಿತ ಕೃತಿಗಳು.

ಸಂಪರ್ಕ: 6 Somer Court, English Town, NJ 07726, USA

Email: padmaranga3@aol.com

*

ವೈಶಾಲಿ ಹೆಗಡೆ: ಊರು, ಪಿಯುಸಿವರೆಗಿನ ಓದು, ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ. ಹುಬ್ಬಳ್ಳಿಯ ಬಿ.ವಿ.ಬಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಇ. ಪದವಿ, ಎಲೆಕ್ಟ್ರೋನಿಕ್ಸ್ ಹಾಗೂ ಕಮ್ಯುನಿಕೇಶನ್ ಕ್ಷೇತ್ರದಲ್ಲಿ. ಯುನಿವರ್ಸಿಟಿ ಆಫ್ ಮ್ಯಸ್ಸಚುಸೆಟ್ಸ್‌ನಿಂದ ಕಂಪ್ಯೂಟರ್ ಸೈನ್ಸ್‌ನಲ್ಲಿ ಮಾಸ್ಟರ್ಸ್ ಪದವಿ. ಮಾಸ್ಟರ್ಸ್ ಥೀಸಿಸ್ ಪ್ರಬಂಧ IEEE ೨೦೦೫ರ ಕಾನ್ಫರೆನ್ಸಿನಲ್ಲಿ ಮಂಡಿತವಾಗಿದೆ. ಚಿಕ್ಕಂದಿನಿಂದಲೂ ಸಾಹಿತ್ಯದ ಗೀಳು. ಕಳೆದ ಹನ್ನೊಂದು ವರ್ಷಗಳಿಂದಲೂ ಅಮೆರಿಕದಲ್ಲಿ ವಾಸ. ಪ್ರತಿಷ್ಠಿತ ಟೆಲಿಕಾಂ ಕಂಪನಿಯೊಂದರಲ್ಲಿ ಕೆಲಸ. ಬಾಸ್ಟನ್ ಉತ್ತರದ ಊರೊಂದರಲ್ಲಿ ಸದ್ಯ ನೆಲೆಸಿದ್ದು, ಪತಿ, ಇಬ್ಬರು ಮಕ್ಕಳು, ಮನೆ, ಕೆಲಸದೊತ್ತಡದ ನಡುವೆಯೂ ಬರೆಯುವ ಹವ್ಯಾಸ. ಹಲವಾರು ಪ್ರಬಂಧ, ಕತೆ, ಕವಿತೆಗಳು ಪ್ರಕಟವಾಗಿವೆ.

Email: vaishalimadhu@gmail.com

*

ಶಶಿಕಲಾ ನಿಂಬಾಳ: ತವರೂರು ಕರ್ನಾಟಕದ ಧಾರವಾಡ. ಭೌತಶಾಸ್ತ್ರದಲ್ಲಿ ಪದವೀಧರೆಯಾಗಿದ್ದು, ಉತ್ತರ ಕ್ಯಾಲಿಫೋರ್ನಿಯ ಕನ್ನಡಕೂಟದಲ್ಲಿ ಸ್ವಯಂಸೇವಕಿಯಾಗಿ, 'ಕನ್ನಡ ಕಲಿ' ತಂಡದಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡಿದ್ದಾರೆ. 'ಸ್ವರ್ಣಸೇತು' ವಾರ್ಷಿಕ ಸಂಚಿಕೆಯ ಸಂಪಾದಕ ಸಮಿತಿಯ ಸದಸ್ಯೆಯಾಗಿ ಸಕ್ರಿಯ ಸೇವೆ ಸಲ್ಲಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ಹೊಂದಿರುವ ಇವರು ಹಲವು ಹನಿಗವನಗಳನ್ನು ರಚಿಸಿ ವಾರ್ಷಿಕ ಸಂಚಿಕೆಗಳಲ್ಲಿ ಪ್ರಕಟಿಸಿದ್ದಾರೆ. ಪತಿ ಡಾ. ಚಂದ್ರಶೇಖರ ನಿಂಬಾಳ ಮತ್ತು ಮಕ್ಕಳಾದ ವರ್ಷಾ, ವಾಣಿಯೊಂದಿಗೆ ಸಾಂಟಾ ಕ್ಲಾರಾದಲ್ಲಿ ವಾಸವಾಗಿದ್ದಾರೆ.

ಸಂಪರ್ಕ: 4393 Laird Cir, Santa Clara, CA, 95054

Email:shanti_1331@yahoo.com

ಅನುಬಂಧ ೨

ಕನ್ನಡ ಸಾಹಿತ್ಯ ರಂಗ

ನಮ್ಮ ಕನ್ನಡ ಸಾಹಿತ್ಯ ರಂಗದ ಮೂಲ ಉದ್ದೇಶ ಅಮೆರಿಕದಲ್ಲಿ ನೆಲೆಸಿರುವ ಕನ್ನಡಿಗರ ಸಾಹಿತ್ಯಾಸಕ್ತಿಯನ್ನು ಪೋಷಿಸುವುದು, ಬೆಳೆಸುವುದು; ಅದರ ಸಾಧನೆಗಾಗಿ ಬೇಕಾದ ಎಲ್ಲ ಕಾರ್ಯಕ್ರಮಗಳನ್ನೂ ಕೈಗೊಳ್ಳುವುದು. ಇಂಥ ಒಂದು ಸಂಸ್ಥೆ ಏಕೆ ಬೇಕು, ಈಗಾಗಲೆ ಬೇಕಾದಷ್ಟು ಕನ್ನಡ ಸಂಘಗಳೂ, ಕೂಟಗಳೂ ಇಲ್ಲವೆ ಎಂದು ನೀವು ಕೇಳಬಹುದು. ನಿಜ, ಅಮೆರಿಕದಲ್ಲಿ ಕನ್ನಡಿಗರ ಜನಸಂಖ್ಯೆ ಹೆಚ್ಚಿದಂತೆಲ್ಲ ಕನ್ನಡ ಕೂಟಗಳ ಸಂಖ್ಯೆಯೂ ಹೆಚ್ಚುತ್ತಿದೆ. ಅಮೆರಿಕದಾದ್ಯಂತ ಮೂವತ್ತಕ್ಕೂ ಮೇಲ್ಪಟ್ಟು ಕನ್ನಡ ಸಂಘಗಳಿವೆ. ಆದರೆ ಅವೆಲ್ಲ ಬಹುಮಟ್ಟಿಗೆ ಸಾಂಸ್ಕೃತಿಕ ಸಂಘಗಳು. ಯುಗಾದಿಯಿಂದ ದೀಪಾವಳಿಯವರೆಗೆ ನಾನಾ ಹಬ್ಬಗಳನ್ನಾಚರಿಸಿ ಕನ್ನಡಿಗರ ಮನ ತಣಿಸುತ್ತವೆ, ಬಿಸಿಬೇಳೆ ಹುಳಿಯನ್ನದಿಂದ ಅವರ ಹೊಟ್ಟೆ ತುಂಬಿಸುತ್ತವೆ. ಅದೊಂದು ಸಂಭ್ರಮದ ವಾತವರಣ. ಅದು ಎಲ್ಲರಿಗೂ ಬೇಕು. ಇನ್ನು ಎರಡು ವರ್ಷಕ್ಕೊಮ್ಮೆ ಅಮೆರಿಕದ ವಿವಿಧ ಮುಖ್ಯ ಪಟ್ಟಣಗಳಲ್ಲಿ ನಡೆಯುವ ಅಕ್ಕ ವಿಶ್ವ ಸಮ್ಮೇಳನಗಳ ಅದ್ಧೂರಿಯನ್ನು ನೀವು ನೋಡೇ ಅರಿಯಬೇಕು. ಹೊರದೇಶವೊಂದರಲ್ಲಿ ನಾಲ್ಕಾರು ಸಾವಿರ ಕನ್ನಡಿಗರನ್ನು ಒಂದೇ ಛಾವಣಿಯ ಕೆಳಗೆ ನೋಡುವ ಸೌಭಾಗ್ಯ ಯಾರಿಗೆ ಬೇಡ? ೨೦೧೦ರಲ್ಲಿ ನಾವಿಕ ಎಂಬ ಹೊಸ ಸಂಸ್ಥೆ ಇದೇ ರೀತಿ ಒಂದು ದೊಡ್ಡ ಸಮ್ಮೇಳನವನ್ನು ಕ್ಯಾಲಿಫೋರ್ನಿಯಾದಲ್ಲಿ ನಡೆಸಿತು. ಅದೆಲ್ಲ ನಿಜವೆ ಸರಿ, ಆದರೆ ಅಂಥ ಹಬ್ಬದ ಸಂಭ್ರಮದಲ್ಲಿ ಸಾಹಿತ್ಯ ಚಿಂತನೆಯಂಥ ಗಂಭೀರ ಮನೋವ್ಯಾಪಾರಕ್ಕೆ ತಾವೆಲ್ಲಿ? ಎಂಬ ಯೋಚನೆಯೂ ಸಾಹಿತ್ಯಾಸಕ್ತರಿಗೆ ಬಾರದೆ ಇರದು. ಅದರಿಂದಲೇ ಕನ್ನಡ ಸಾಹಿತ್ಯ ರಂಗದಂಥ ರಾಷ್ಟ್ರೀಯ ಸಂಸ್ಥೆಯೊಂದು ಹಲವರಿಗೆ ಬೇಕೆನಿಸಿತು; ಆ ಸಂಸ್ಥೆ ೨೦೦೩ರಲ್ಲಿ ಉದ್ಭವವಾಗಿ ೨೦೦೪ರಲ್ಲಿ ತನ್ನ ಮೊದಲ ಕನ್ನಡ ವಸಂತ ಸಾಹಿತ್ಯೋತ್ಸವವನ್ನು ಅತ್ಯಂತ ಉತ್ಸಾಹದಿಂದ ಶ್ರದ್ಧೆಯಿಂದ ನೆರವೇರಿಸಿತು.

ಅಂದಿನಿಂದ ಮೊದಲುಗೊಂಡು ಈ ಸಂಸ್ಥೆ ಹಲವಾರು ಉತ್ತಮ ಕಾರ್ಯಕ್ರಮಗಳನ್ನು ಕೈಗೂಡಿಸಿದೆ. ನಾಲ್ಕು ಕನ್ನಡ ವಸಂತ ಸಾಹಿತ್ಯೋತ್ಸವಗಳನ್ನು ನಡೆಸಿ ಈಗ ಐದನೆಯದಕ್ಕೆ ಸಿದ್ಧಗೊಳ್ಳುತ್ತಿದೆ: ಮೊದಲ ಸಮ್ಮೇಳನ ಪೆನ್ಸಿಲ್ವೇನಿಯಾದ ವಿಲನೋವಾ ವಿಶ್ವವಿದ್ಯಾಲಯದಲ್ಲೂ,

ಎರಡನೆಯದು ಕ್ಯಾಲಿಫೋರ್ನಿಯಾದ ಲಾಸ್ ಏಂಜಲಿಸ್ ನಗರದ ಬಳಿಯಲ್ಲೂ, ಮೂರನೆಯದು ಚಿಕಾಗೋ ನಗರದ ಬಳಿಯಲ್ಲೂ, ನಾಲ್ಕನೆಯದು ಬಾಲ್ಟಿಮೋರ್-ವಾಷಿಂಗ್ಟನ್ ಬಳಿಯ ಮೇರಿಲೆಂಡ್ ವಿಶ್ವವಿದ್ಯಾಲಯದಲ್ಲಿ ನಡೆಯಿತು. ಐದನೆಯ ಸಮ್ಮೇಳನ ಈ ವರ್ಷ ಕ್ಯಾಲಿಫೋರ್ನಿಯಾದ ಸ್ಯಾನ್‌ಫ್ರಾನ್ಸಿಸ್ಕೋ ಬಳಿ ನಡೆಯುತ್ತಿದೆ.

ಪ್ರತಿ ಸಮ್ಮೇಳನದ ಅಂಗವಾಗಿ ಒಂದೊಂದು ಪುಸ್ತಕವನ್ನು ಹೊರತಂದಿದ್ದೇವೆ: 'ಕುವೆಂಪು ಸಾಹಿತ್ಯ ಸಮೀಕ್ಷೆ' (೨೦೦೪), 'ಆಚೀಚೆಯ ಕತೆಗಳು' (೨೦೦೫), 'ನಗೆಗನ್ನಡಂ ಗೆಲ್ಗೆ!' (೨೦೦೭), ಮತ್ತು 'ಕನ್ನಡ ಕಾದಂಬರಿ ಲೋಕದಲ್ಲಿ... ಹೀಗೆ ಹಲವು...' (೨೦೦೮). ಈ ವರ್ಷದ ಸಮ್ಮೇಳನದ ಸಂದರ್ಭದಲ್ಲಿ ರಂಗ ನಮ್ಮ ಲೇಖಕರನ್ನು ಸೃಜನಶೀಲ ಪ್ರಬಂಧ ಸಾಹಿತ್ಯದೆಡೆಗೆ ಒಯ್ದಿದೆ. ಇಲ್ಲಿನ ಲೇಖಕರೇ ಬರೆದ ಲಲಿತ ಗದ್ಯ ರಚನೆಗಳ ಸಂಕಲನ 'ಮಥಿಸಿದಷ್ಟೂ ಮಾತು' ಈ ಸಮ್ಮೇಳನದಲ್ಲಿ ನಿಮ್ಮ ಕೈಸೇರುತ್ತದೆ.

ನಮ್ಮ ಪ್ರಕಟನೆಗಳ ಒಂದು ವೈಶಿಷ್ಟ್ಯವೆಂದರೆ ಸಾಧ್ಯವಾದ ಮಟ್ಟಿಗೂ ಎಲ್ಲ ಲೇಖನಗಳನ್ನೂ (ಮುನ್ನುಡಿ, ಇತ್ಯಾದಿ ಬಿಟ್ಟು) ಇಲ್ಲಿ ನೆಲೆಸಿರುವ ಕನ್ನಡಿಗರ ಕೈಯಲ್ಲೇ ಬರೆಸಿರುವುದು. ಈ ಮೂಲಕ ನಮ್ಮಲ್ಲಿರುವ ಸಾಹಿತ್ಯಾಸಕ್ತಿಯನ್ನು ಹೆಚ್ಚು ಕೃಷಿ ಮಾಡಿದಂತಾಗುತ್ತದೆ ಎಂಬುದು ನಮ್ಮ ಮೂಲ ನಂಬಿಕೆ.

ಈ ಮೇಲಿನ ಪ್ರಕಟನೆಗಳೇ ಅಲ್ಲದೆ, ಕನ್ನಡ ಸಾಹಿತ್ಯ ರಂಗ ಕ್ಯಾಲಿಫೋರ್ನಿಯಾದ ಸಾಹಿತ್ಯಾಂಜಲಿ ಹೊರತಂದ 'ಕನ್ನಡದಮರ ಚೇತನ (ಮಾಸ್ತಿ ವೆಂಕಟೇಶ ಅಯ್ಯಂಗಾರ್ ಸಾಹಿತ್ಯ ಸಮೀಕ್ಷೆ)' ಪುಸ್ತಕದ ಪ್ರಕಾಶನಕ್ಕೂ, ಪೆನ್ಸಿಲ್ವೇನಿಯ, ನ್ಯೂ ಜೆರ್ಸಿ ಮತ್ತು ಡೆಲವೇರ್ ತ್ರಿರಾಜ್ಯಗಳ ಕನ್ನಡ ಸಂಸ್ಥೆ ತ್ರಿವೇಣಿ ೨೦೦೫ರಲ್ಲಿ ನಡೆಸಿದ ಪುತಿನ ಜನ್ಮ ಶತಮಾನೋತ್ಸವಕ್ಕೂ ಧನಸಹಾಯ ಮಾಡಿದೆ.

ಕನ್ನಡ ಸಾಹಿತ್ಯ ರಂಗ ಕೈಗೊಂಡ ಒಂದು ವಿಶಿಷ್ಟ ಕೆಲಸವೆಂದರೆ ೨೦೦೬ರಲ್ಲಿ ಅಮೆರಿಕದಾದ್ಯಂತ ಒಂಬತ್ತು ಕಡೆ ಕನ್ನಡ ಸಾಹಿತ್ಯ ಶಿಬಿರವನ್ನು ನಡೆಸಿದ್ದು. ಶಿಲಾಶಾಸನಗಳಿಂದ ಹಿಡಿದು ನವೋದಯದವರೆಗೂ ನಮ್ಮ ಕನ್ನಡ ಸಾಹಿತ್ಯ ಬೆಳೆದು ಬಂದ ದಾರಿಯಲ್ಲಿ ಮುಖ್ಯ ಮೈಲಿಗಲ್ಲುಗಳನ್ನು ಗುರುತಿಸಿ ಅವುಗಳನ್ನು ಪರಿಚಯಿಸುವ ಕಾರ್ಯಕ್ರಮವನ್ನು ಹೆಸರಾಂತ ಕವಿ ಮತ್ತು ಉಪನ್ಯಾಸಕಾರ ಡಾ. ಎನ್.ಎಸ್. ಲಕ್ಷ್ಮೀನಾರಾಯಣಭಟ್ಟರಿಂದ ಏರ್ಪಡಿಸಿತ್ತು. ಎರಡು ದಿನದ ಈ ಶಿಬಿರದಲ್ಲಿ ಸುಮಾರು ೨೦೦ಕ್ಕೂ ಹೆಚ್ಚು ಮಂದಿ ಭಾಗವಹಿಸಿದರು. ಅಮೆರಿಕದಲ್ಲಿ ಇಂಥ ಒಂದು ಶಿಬಿರ ಈ ಪ್ರಮಾಣದಲ್ಲಿ ನಡೆದದ್ದು ಅದೇ ಮೊದಲು.

ನಮ್ಮ ಸಮ್ಮೇಳನಗಳಲ್ಲಿ ಕರ್ನಾಟಕದಿಂದ ಹಲವಾರು ಉತ್ತಮ ಸಾಹಿತಿಗಳು ಆಹ್ವಾನಿತರಾಗಿ ಬಂದು ಭಾಗವಹಿಸಿದ್ದಾರೆ, ಭಾಷಣಗಳನ್ನು ನೀಡಿದ್ದಾರೆ. ಡಾ. ಪ್ರಭುಶಂಕರರ 'ಕನ್ನಡ ಸಾಹಿತ್ಯ: ಒಂದು ಮಿಂಚು ನೋಟ' (೨೦೦೪), ಪ್ರೊ. ಬರಗೂರು ರಾಮಚಂದ್ರಪ್ಪನವರ 'ಕನ್ನಡ ಸಾಹಿತ್ಯ ಮತ್ತು ಸೃಜನಶೀಲ ಸ್ವಾತಂತ್ರ್ಯ' (೨೦೦೫), ಪ್ರೊ. ಅ.ರಾ. ಮಿತ್ರ ಅವರ

‘ಕನ್ನಡ ಸಾಹಿತ್ಯದಲ್ಲಿ ಹಾಸ್ಯಶೀಲತೆ’ (೨೦೦೭), ಡಾ. ವೀಣಾ ಶಾಂತೇಶ್ವರ ಅವರ ‘ಕನ್ನಡ ಕಾದಂಬರಿ ಕಳೆದ ಕಾಲು ಶತಮಾನದಲ್ಲಿ’ (೨೦೦೯) ಇವನ್ನು ರಂಗ ಪ್ರತ್ಯೇಕವಾಗಿ ತನ್ನ ಭಾಷಣಮಾಲೆಯಲ್ಲಿ ಮುದ್ರಿಸಿದೆ. ಇಲ್ಲಿ ನೆಲಸಿರುವ ಕನ್ನಡಿಗರ ಸಾಹಿತ್ಯಾಭಿಲಾಷೆ ಮತ್ತು ಅದರ ಅಭಿವ್ಯಕ್ತಿಯನ್ನು ಕುರಿತು ೨೦೦೭ರ ಸಮ್ಮೇಳನಕ್ಕೆ ವಿಶೇಷ ಅತಿಥಿಯಾಗಿ ಬಂದಿದ್ದ ಡಾ. ಎಚ್.ಎಸ್. ರಾಘವೇಂದ್ರ ರಾವ್ ಉಪನ್ಯಾಸ ಮಾಡಿದರು. ಕಳೆದ ಸಮ್ಮೇಳನಕ್ಕೆ ಕನ್ನಡದ ಪ್ರಖ್ಯಾತ ಲೇಖಕಿ ಶ್ರೀಮತಿ ವೈದೇಹಿ ಅವರು ಬಂದು ತಮ್ಮ ಕೆಲ ಕತೆಗಳನ್ನೋದಿ, ಸಂವಾದಗಳಲ್ಲಿ ಭಾಗವಹಿಸಿ ಎಲ್ಲರ ಮನಸ್ಸನ್ನೂ ತಣಿಸಿದರು. ಈ ಐದನೇ ಸಮ್ಮೇಳನದಲ್ಲಿ ಕರ್ನಾಟಕದ ಸುಪ್ರಸಿದ್ಧ ಕವಿ, ಪ್ರಬಂಧಕಾರರೂ ಆದ ಡಾ. ಸುಮತೀಂದ್ರ ನಾಡಿಗ ಅವರೂ ಖ್ಯಾತ ಹಾಸ್ಯ ಲೇಖಕಿ ಶ್ರೀಮತಿ ಭುವನೇಶ್ವರಿ ಹೆಗಡೆಯವರೂ ಬರುತ್ತಿದ್ದಾರೆ.

ಸಮ್ಮೇಳನದ ಅಂಗವಾಗಿ ನಾವು ನಡೆಸುವ ಎಲ್ಲ ಕಾರ್ಯಕ್ರಮಗಳಲ್ಲೂ ಇಲ್ಲಿನ ಕನ್ನಡಿಗರ ಸಾಹಿತ್ಯಾಸಕ್ತಿಯನ್ನು ಪ್ರಚೋದಿಸುವ, ಅವರ ಸಾಹಿತ್ಯ ಸಾಧನೆಗಳನ್ನು ಎತ್ತಿ ಹಿಡಿಯುವ ಆಶಯವಿರುತ್ತದೆ. ಈ ದಿಕ್ಕಿನಲ್ಲಿ, ಇಲ್ಲಿನ ಬರಹಗಾರರನ್ನೂ, ಅವರ ಕೃತಿಗಳನ್ನೂ ಜನರ ಮುಂದಿಡುವ ‘ನಮ್ಮ ಬರಹಗಾರರು’ ಕಾರ್ಯಕ್ರಮ, ಕವಿಗೋಷ್ಠಿ, ಕನ್ನಡ ಕಲಿಯಲು ಮನೆಯಿಂದ ಹಿಡಿದು ಕಾಲೇಜಿನ ಮಟ್ಟದವರೆಗೂ ಇರುವ ಅವಕಾಶಗಳು, ಹಿರಿಯ ಸಾಹಿತಿಗಳ ಸ್ಮರಣೆ, ಇಲ್ಲಿನ ಬರಹಗಾರರ ಪುಸ್ತಕಗಳನ್ನು ಕೊಳ್ಳಲು ಅನುಕೂಲವಾದ ಒಂದು ಪುಸ್ತಕ ಭಂಡಾರ, ಇಲ್ಲಿನ ಕಲಾವಿದರಿಂದಲೇ ತಯಾರಾದ ಉತ್ತಮ ನಾಟಕ, ಭಾವಗೀತೆ ಮುಂತಾದ ಮನರಂಜನೆಯ ಕಾರ್ಯಕ್ರಮಗಳು–ನಮ್ಮ ಜನರಿಗೆ ಪ್ರಿಯವಾಗಿವೆ. ನಮ್ಮ ಪುಸ್ತಕಗಳಲ್ಲಿ ಬರೆಯುವ ಎಷ್ಟೋ ಮಂದಿ ಇಲ್ಲಿನ ಲೇಖಕರು ಇದೇ ತಮ್ಮ ಮೊಟ್ಟಮೊದಲ ಲೇಖನ ಎಂದು ಹಿಗ್ಗಿದ್ದಾರೆ. ರಂಗಕ್ಕೆ ಅದೊಂದು ತೃಪ್ತಿ.

ಕನ್ನಡ ಸಾಹಿತ್ಯ ರಂಗ ಒಂದು ವಿಶಿಷ್ಟ ಸಂಸ್ಥೆ. ಅದಕ್ಕೆ ಒಂದು ನಿರ್ದಿಷ್ಟವಾದ ಗುರಿಯಿದೆ, ಕಾರ್ಯಕ್ಷೇತ್ರವಿದೆ. ಸಾಹಿತ್ಯಕ ಮೌಲ್ಯವಿಲ್ಲದ ಕಾರ್ಯಕ್ರಮಗಳಲ್ಲಿ ಅದಕ್ಕೆ ಆಸಕ್ತಿಯಿಲ್ಲ. ಅದರ ಕಾರ್ಯಸಾಧನೆಗೆ ಸಾಹಿತ್ಯದಲ್ಲಿ ಒಲವುಳ್ಳ ಕನ್ನಡಿಗರೆಲ್ಲರ ಬೆಂಬಲ, ಪ್ರೋತ್ಸಾಹ, ಸಹಾಯ ಅಗತ್ಯ. ಅದು ಇದುವರೆಗೆ ಮಾಡಿರುವ ಕೆಲಸ ಅದರ ಬಗ್ಗೆ ನಿಮ್ಮಲ್ಲಿ ಭರವಸೆ ಮೂಡಿಸುವುದೆಂದು ನಂಬಿದ್ದೇವೆ. ಅದು ಒಂದು ಲಾಭೋದ್ದೇಶವಿಲ್ಲದ ಸಾಂಸ್ಕೃತಿಕ ಸಂಸ್ಥೆ (Non-profit) ಎಂದು ಅಮೆರಿಕದ Internal Revenue Service ಗುರುತಿಸಿದೆ. ನಮ್ಮಲ್ಲಿ ವಿಶ್ವಾಸ ತೋರಿ ನಮ್ಮ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಧನ ಸಹಾಯ ಮಾಡಿ ನಮ್ಮನ್ನು ಪ್ರೋತ್ಸಾಹಿಸಿರುವ ಎಲ್ಲ ಸಹೃದಯರಿಗೂ ರಂಗದ ಅನಂತ ವಂದನೆಗಳು.

ನಮ್ಮ ಸಮ್ಮೇಳನಗಳನ್ನು ನಡೆಸುವಲ್ಲಿ ಹಲವಾರು ಸ್ಥಳೀಯ ಕನ್ನಡ ಕೂಟಗಳು ನಮ್ಮೊಂದಿಗೆ ಸಹಕರಿಸಿವೆ, ನಮ್ಮ ಸಹಪ್ರಾಯೋಜಕರಾಗಿ ನೆರವಿತ್ತಿವೆ. ತ್ರಿವೇಣಿ, ದಕ್ಷಿಣ

ಕ್ಯಾಲಿಫೋರ್ನಿಯಾದ ಕನ್ನಡ ಸಾಂಸ್ಕೃತಿಕ ಸಂಘ, ಅಂಜಲಿ, ಸಾನ್ ಡಿಯೇಗೋನ ಕಸ್ತೂರಿ, ಇಲಿನಾಯ್ ರಾಜ್ಯದ ವಿದ್ಯಾರಣ್ಯ, ಅಮೆರಿಕದ ರಾಜಧಾನಿ ವಾಷಿಂಗ್ಟನ್ ಪ್ರದೇಶದ ಕಾವೇರಿ ಕನ್ನಡ ಸಂಘ–ಈ ಎಲ್ಲ ಸಂಸ್ಥೆಗಳಿಗೂ ನಮ್ಮ ಧನ್ಯವಾದಗಳು. ಈಗ ಈ ಐದನೆಯ ಸಮ್ಮೇಳನ ಉತ್ತರ ಕ್ಯಾಲಿಫೋರ್ನಿಯಾ ಕನ್ನಡ ಕೂಟದ ಸಹಯೋಗದಲ್ಲಿ ಮತ್ತು ಸಾಹಿತ್ಯ ಗೋಷ್ಠಿ ಸಂಸ್ಥೆಯ ಸಹಕಾರದಲ್ಲಿ ನಡೆಯುತ್ತಿರುವುದು ಒಂದು ಸಂತಸದ ಸಂಗತಿ.

ನಮ್ಮ ಪುಸ್ತಕ ಪ್ರಕಟನೆಯ ಕಾರ್ಯದಲ್ಲಿ ಅತ್ಯಂತ ವಿಶ್ವಾಸದಿಂದ ಮುತುವರ್ಜಿಯಿಂದ ನಮ್ಮೊಂದಿಗೆ ಸಹಕರಿಸಿರುವ ಬೆಂಗಳೂರಿನ ಅಭಿನವ ಸಂಸ್ಥೆಗೆ ನಮ್ಮ ಹೃತ್ಪೂರ್ವಕ ವಂದನೆಗಳು. ನಮ್ಮ ಎರಡನೆಯ ಪುಸ್ತಕ 'ಆಚೀಚೆಯ ಕತೆಗಳು' ಪ್ರಕಟನೆಯಿಂದ ಮೊದಲಾದ ನಮ್ಮ ಸಹೋದ್ಯಮ ಹೀಗೆಯೇ ಬಹು ಕಾಲ ಸಾರ್ಥಕವಾಗಿ ಮುಂದುವರೆಯಲೆಂದು ಹಾರೈಸುತ್ತೇವೆ.

ನಮ್ಮ ರಂಗದ ಯೋಜನೆಗಳನ್ನು ಕನ್ನಡ ಜನಕ್ಕೆ ತಿಳಿಸುವುದರಲ್ಲಿ ನಮಗೆ thatskannada.com ಅಂತರ್ಜಾಲ ತಾಣದ ಶ್ರೀ ಎಸ್. ಕೆ. ಶ್ಯಾಮಸುಂದರ ಬಹು ಕಾಲದಿಂದಲೂ ಬೆಂಬಲ ನೀಡಿದ್ದಾರೆ. ಅವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.

ನಮ್ಮ ಹಿಂದಿನ ಪುಸ್ತಕಗಳಂತೆಯೇ ಇದೂ ಕನ್ನಡಿಗರ ಪ್ರೀತಿ ಗಳಿಸುವುದೆಂದು ನಂಬಿದ್ದೇವೆ.

–ಎಚ್.ವೈ. ರಾಜಗೋಪಾಲ್
ಕಾರ್ಯಕಾರಿ ಸಮಿತಿಯ ಅಧ್ಯಕ್ಷ

–ಎಚ್.ಕೆ. ಚಂದ್ರಶೇಖರ್
ಆಡಳಿತ ಮಂಡಲಿಯ ಅಧ್ಯಕ್ಷ

ಅನುಬಂಧ - ೩

ನಮ್ಮ ಪ್ರಕಟಣೆಗಳ ಕುರಿತು

೧. ಕನ್ನಡ ಕಾದಂಬರಿ ಲೋಕದಲ್ಲಿ...ಹೀಗೆ ಹಲವು... (೨೦೦೯)

೨. ನಗೆಗನ್ನಡಂ ಗೆಲ್ಗೆ! (೨೦೦೭)

೩. ಆಚೀಚೆಯ ಕಥೆಗಳು (೨೦೦೫)

೪. ಕುವೆಂಪು ಸಾಹಿತ್ಯ ಸಮೀಕ್ಷೆ (೨೦೦೪)

ಅಭಿಪ್ರಾಯಗಳು

೧. ಕನ್ನಡ ಕಾದಂಬರಿ ಲೋಕದಲ್ಲಿ...ಹೀಗೆ ಹಲವು... (೨೦೦೯)

'ಕಾದಂಬರಿ ಲೋಕದಲ್ಲಿ...' ಬಹಳ ವಿಶಿಷ್ಟವಾದ ಪ್ರಯತ್ನ. ನಾನು ೧೯೮೭ರಿಂದ ನೋಡುತ್ತಿದ್ದೇನೆ. ಅಮೆರಿಕದ ಕನ್ನಡಿಗರು ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದಾರೆ. ಇಂಥ ಪ್ರಯತ್ನವನ್ನು ನೋಡಿದಾಗ...(ಅವರು) ಕನ್ನಡದ ಕ್ಷಿತಿಜವನ್ನು ಹೆಚ್ಚಿಸಿದ್ದಾರೆನಿಸುತ್ತದೆ...

–ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ

('ಅಭಿನವ'ದ ಶ್ರೀ ರವಿಕುಮಾರ್ ಅವರೊಂದಿಗೆ ನಡೆಸಿದ ದೂರವಾಣಿ ಸಂಭಾಷಣೆಯಲ್ಲಿ)

ಈ ಪುಸ್ತಕದಲ್ಲಿ ಎದ್ದು ಕಾಣುವ ಒಂದು ವೈಶಿಷ್ಟ್ಯವೆಂದರೆ ಇಲ್ಲಿ ಓದಿಗಾಗಿ ಆಯ್ದುಕೊಂಡ ಎಲ್ಲ ಕಾದಂಬರಿಗಳು... ಕಳೆದ ಮೂರು ದಶಕಗಳಲ್ಲಿ ಪ್ರಕಟವಾದವು. ಇವುಗಳಲ್ಲಿ ಬಹಳಷ್ಟು ಕೃತಿಗಳ ಬಗ್ಗೆ ವಿಶೇಷ ಚರ್ಚೆ ನಡೆದಿಲ್ಲ. ಅಷ್ಟೇ ಮಹತ್ವದ ಇನ್ನೊಂದು ವೈಶಿಷ್ಟ್ಯವೆಂದರೆ ಈ ಪುಸ್ತಕಕ್ಕೆ ಸೇರಿದ ಲೇಖನಗಳನ್ನು ಬರೆದವರಲ್ಲಿ ಹೆಚ್ಚಿನವರು ಸಾಹಿತ್ಯ ಕ್ಷೇತ್ರಕ್ಕೆ ಹೊರಗಿನವರು... ಸಾಹಿತ್ಯೇತರ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿದವರು, ಕನ್ನಡ ಓದುಗರಿಗೆ ಹೊಸಬರು. ಆದರೆ ಚೆನ್ನಾಗಿ ಬರೆಯಬಲ್ಲವರು. ಇವರನ್ನು ಒಳಗೊಳ್ಳುವ

ಮೂಲಕ ಪುಸ್ತಕಕ್ಕೆ ತಾಜಾತನ ಹಾಗೂ ವೈವಿಧ್ಯ ಬಂದಿದೆ... ಈ ಪುಸ್ತಕದ ಲೇಖನಗಳಲ್ಲಿ ಹೆಚ್ಚಿನವು ಪರಿಚಯಾತ್ಮಕ ಬರಹಗಳು...ಆದರೆ ಕೃತಿಗಳೊಡನೆ ಇನ್ನೂ ಹೆಚ್ಚು ಗಂಭೀರವಾದ ತೊಡಗಿಕೊಳ್ಳುವಿಕೆಯನ್ನು ತೋರುವ ಹಲವಾರು ಲೇಖನಗಳೂ ಈ ಪುಸ್ತಕದಲ್ಲಿವೆಯೆನ್ನುವುದು ಮಹತ್ವದ್ದಾಗಿದೆ...ಆವರಣದ ವಿಶ್ಲೇಷಣೆ ಭೈರಪ್ಪನವರ ಈ ಕಾದಂಬರಿಯನ್ನು ಕುರಿತು ಬಂದ ಅತ್ಯುತ್ತಮ ಲೇಖನಗಳಲ್ಲೊಂದಾಗಿದೆ...

–ಡಾ. ಜಿ.ಎಸ್. ಆಮೂರ (ಮುನ್ನುಡಿಯಲ್ಲಿ)

ಕನ್ನಡ ಸಾಹಿತ್ಯ ರಂಗ... ಕನ್ನಡದ ಕೆಲ ಮುಖ್ಯ ಕಾದಂಬರಿಗಳ ಕುರಿತು ಇಲ್ಲಿ ಅವಲೋಕನ ನಡೆಸಿದೆ. ಒಮ್ಮೆಗೇ ಒಟ್ಟಿಗೇ ತೆರೆದುಕೊಂಡ ಈ ರೀತಿಯ ಕಾದಂಬರಿ ಅವಲೋಕನವೂ ಚರ್ಚೆಯೂ ಕನ್ನಡ ಸಾಹಿತ್ಯದಮಟ್ಟಿಗೆ ಪ್ರಾಯಶಃ ಪ್ರಪ್ರಥಮ ಎನ್ನಿಸುತ್ತದೆ...

'ಸಹೃದಯ ವಿಮರ್ಶೆ' ಎಂಬುದಕ್ಕೆ ಈ ಹೊತ್ತಗೆ ಒಂದು ಉತ್ತಮ ಮಾದರಿಯೆನ್ನಬಹುದು. ಇಂಥ ಸಾರ್ಥಕ ಹೊಳವಿಗಾಗಿ ಅಮೆರಿಕದ ಕನ್ನಡ ಸಾಹಿತ್ಯ ರಂಗಕ್ಕೆ, ಅದರ ರೂವಾರಿಗಳಿಗೆ ನಮ್ಮೆಲ್ಲರ ಅಭಿನಂದನೆ ಜೊತೆಗೆ ಕೃತಜ್ಞತೆಯೂ ಸಲ್ಲಲೇ ಬೇಕು.

–ವೈದೇಹಿ (ಬೆನ್ನುಡಿಯಲ್ಲಿ)

This anthology certainly adds a new dimension to Kannada criticism; and I happily congratulate the editors and authors on the meaningful work...

—C.N. Ramachandran, ***The Hindu***

ಇಲ್ಲಿಯ ಎಲ್ಲ ಇಪ್ಪತ್ತನಾಲ್ಕೂ ಬರಹಗಳಲ್ಲಿಯ ಒಂದೊಂದೂ 'ಪರಿಶ್ರಮಿತ' ಬರಹಗಳೇ ಎಂಬಲ್ಲಿ ಎರಡನೆಯ ಮಾತೇ ಇಲ್ಲ. ಇಲ್ಲಿಯ ಎಲ್ಲ ಲೇಖನಗಳ ಹಿಂದಿರುವಂತಹ ಅಧ್ಯಯನ, ಚಿಂತನ, ಕಾಳಜಿ, ಕಳಕಳಿ, ತತ್ಪರತೆ, ವಿವೇಚನೆ ಮತ್ತು ವಿನೂತನತೆ ಇಂಥ ಒಂದೊಂದು ಅಂಶಗಳೂ ಪ್ರತ್ಯೇಕ ಪ್ರಸ್ತಾಪಕ್ಕೇ ಅರ್ಹವಾದವುಗಳು... ಇಲ್ಲಿಯ ಕೆಲವು ಕಾದಂಬರಿಗಳು ಬಿಗುಮೋರೆ ಹಾಕಿಕೊಂಡಿರುವಂಥವು. ಕೆಲವು ಬಗೆಯ 'ಮಾತುಕತೆ' ಮಾತ್ರಗಳಿಂದಲೇ ಇವು 'ಸಂವಾದ' ಒಂದಕ್ಕೆ ಸರ್ವಥಾ ತೆರೆದುಕೊಳ್ಳುವುದಿಲ್ಲ... ಇಂಥ ಕೆಲವು ಕಾದಂಬರಿಗಳಿಗೆ ಸಂಬಂಧಿಸಿದಂತೆಯೂ ಕೂಡ, ಇಲ್ಲಿಯ ಬರಹಗಾರರು ಕೆಲವರು, ಎಷ್ಟು ಸರಳವಾಗಿ, ಆ ಕೃತಿಯ ಒಳಗಿನ ಮೃದು ಭಾಗವನ್ನು ಸ್ಪರ್ಶಿಸಿಬಿಡುವಲ್ಲಿ ಯಶಸ್ವಿಯಾಗಿಬಿಡುತ್ತಾರಲ್ಲ ಎಂದು ಆಶ್ಚರ್ಯವಾಗುತ್ತದೆ. ಯಾವುದೋ ಒಂದು ಎಳೆಯನ್ನು ಕಂಡು ಪಚಡವನ್ನು ನುಂಗಲೆತ್ನಿಸುವ ಇವರ ಸಾಹಸದ ರೀತಿ ಅಚ್ಚರಿದಾಯಕ... ಈ ಕೊಡುಗೆಗಳು ಈಗಾಗಲೇ, ನೂರಾರು ಬಾರಿ ಉತ್ತಿ ಬಿತ್ತಿ ಬೆಳೆದಂತಹ ಸತ್ವ ಸವೆದ

ಹೊಲಗಳಲ್ಲಿ ಬೆಳೆದ ಬೆಳೆಗಳಲ್ಲ; ಇವು, ವಿಕ್ಟರ್ ವರ್ಜಿನ್ ಲ್ಯಾಂಡಿನಲ್ಲಿ ಬೆಳೆದಂತಹ ಸತ್ವಯುತ ಮತ್ತು ಸಮೃದ್ಧ ಫಸಲುಗಳು....

–ದೇಶಪಾಂಡೆ ಸುಬ್ಬರಾಯ

(೨೦೦೯ರ 'ಅಕ್ಕ' ವಿಶ್ವ ಕನ್ನಡ ಸಮ್ಮೇಳನದಲ್ಲಿ ನಡೆದ 'ಸಾಹಿತ್ಯ ಗೋಷ್ಠಿ'ಯಲ್ಲಿ ಮಂಡಿಸಿದ ಭಾಷಣದಿಂದ)

*

೨. ನಗೆಗನ್ನಡಂ ಗೆಲ್ಗೆ! (೨೦೦೭)

ಸಂಪಾದಕರು: ಎಚ್.ಕೆ. ನಂಜುಂಡಸ್ವಾಮಿ ಮತ್ತು ಎಚ್.ವೈ. ರಾಜಗೋಪಾಲ್

ಈ ನಾಲ್ಕು ದಿನಗಳೂ... 'ನಗೆಗನ್ನಡಂ ಗೆಲ್ಗೆ!' ಓದುವುದರಲ್ಲೇ ಕಳೆದುಹೋಯಿತು. ಅನೇಕ ಮುಖ್ಯವಾಗಿದ್ದ ಕೆಲಸಗಳೆಲ್ಲ ಹಾಳಾಗಿ ಹೋದವು. ನಿಮಗೆ ನಾನು ಕೃತಜ್ಞನಾಗಿರಬೇಕೊ ಬೇಡವೋ ಎಂಬ ಸ್ಥಿತಿಗೆ ಬಂದಿದ್ದೇನೆ... ಒಟ್ಟಿನಲ್ಲಿ ಒಂದು ಸಾಹಿತ್ಯಕ ಚರಿತ್ರೆ ಮತ್ತು ಸಾಹಿತ್ಯದ ಹಾಸ್ಯ ಸಂಕಲನ ಎರಡೂ ಒಂದೆಡೆ ಸೇರಿ ರಮ್ಯ ಲೋಕವನ್ನು ಪ್ರಕಟಿಸಿಬಿಟ್ಟಿದ್ದೀರಿ. ಇದರಲ್ಲಿ ಲೇಖಕರ ಸಾಹಿತ್ಯದ ರಸಪ್ರಜ್ಞೆ ನಿರಂತರವಾಗಿ ಪ್ರಕಟಗೊಂಡಿದೆ. ನನಗೆ ಎಪ್ಪತ್ತು ವರ್ಷದ ಹಿಂದಿನ ಮೈಸೂರು ನಗರ ಮತ್ತು ಮಹಾರಾಜ ಕಾಲೇಜು ನೆನಪಿಗೆ ಬಂದವು. ಜನರು ಮರೆತಿದ್ದ ಕೇಫನ ಬಗೆಗೆ ತೋರಿಸುವ ಪ್ರೇಮ ಅಪೂರ್ವವಾದುದು. ರಾಶಿ, ನಾಕ, ಜಿಪಿ, ಬೀಚಿ, ಗೊರೂರು, ನಾಡಿಗೇರ, ವೈಯೆನ್ಕೆ, ಅರಾಸೆ, ಶ್ರೀರಂಗ ಇಂಥವರಲ್ಲದೆ ರಂಗಮಂಚದ ಮೇಲೆ ಮಿರುಗಿದ ಹಲವಾರು ಹಾಸ್ಯಗಾರರು ಇದ್ದಾರೆ... ಈ ಬೃಹತ್ ಸಂಕಲನ ಕನ್ನಡ ಸಾಹಿತ್ಯದಲ್ಲಿ ಒಂದು ಪ್ರಮುಖ ರೆಕಾರ್ಡ್ ಆಗಿರುತ್ತದೆ ಸದಾಕಾಲ. ಇದನ್ನು ಸಂಪಾದಿಸಿದ ನನ್ನ ಯುವ ಮಿತ್ರರಿಗೆ ನನ್ನ ಅನಂತ ನಮಸ್ಕಾರಗಳನ್ನು ತಿಳಿಸಿ. ಅಭಿನವಕ್ಕೂ ಅಭಿನಂದನೆಗಳು.

–ಪ್ರೊ. ಜಿ. ವೆಂಕಟಸುಬ್ಬಯ್ಯ

ಕನ್ನಡದ ಹಿರಿಯ ಸಾಹಿತಿ ('ಅಭಿನವ'ದ ಶ್ರೀ ರವಿಕುಮಾರ್ ಅವರಿಗೆ ಬರೆದ ಪತ್ರದಿಂದ)

ಕತೆ, ಕವಿತೆ ಮತ್ತು ಕಾದಂಬರಿಗಳಿಗೆ ಅತಿಯಾದ ಮಹತ್ವಕೊಟ್ಟು, ಉಳಿದ ಪ್ರಕಾರಗಳನ್ನು ನಿರ್ಲಕ್ಷಿಸಿರುವ ಕರ್ನಾಟಕದ ನಮಗೆ ಬುದ್ಧಿಕಲಿಸುವಂತೆ, ಈ ಕೃತಿಯು ಪ್ರಕಟವಾಗಿದೆ... ಕನ್ನಡ ಹಾಸ್ಯ ಸಾಹಿತ್ಯವನ್ನು ಬೆಳೆಸಿದ ಮಹನೀಯರ ಸಾಧನೆಗಳನ್ನು ಬಹುಮಟ್ಟಿಗೆ ಮೆಚ್ಚಿಗೆಯಿಂದ ಅಪರೂಪಕ್ಕೆ ವಿಮರ್ಶಾತ್ಮಕವಾಗಿ ನೋಡಿರುವ ಲೇಖನಗಳು ಈ ಪುಸ್ತಕದ ಮಹತ್ವವನ್ನು ಹೆಚ್ಚಿಸಿವೆ. ಕೈಲಾಸಂ, ರಾಜರತ್ನಂ, ರಾಶಿ, ಬಿ.ಜಿ.ಎಲ್. ಸ್ವಾಮಿ, ಅ.ರಾ.ಸೇ. ಅವರಂತದ ಹಿರಿಯರಿಂದ ಮೊದಲಾಗಿ ದುಂಡಿರಾಜ್ ಅವರವರೆಗೆ ಈ

ಲೇಖನಗಳ ಹರಹಿದೆ. ಕರಾವಳಿ, ಉತ್ತರ ಕರ್ನಾಟಕ, ಜಾನಪದ ಮುಂತಾದವಕ್ಕೆ ವಿಶಿಷ್ಟವಾದ ಹಾಸ್ಯ-ವಿನೋದಗಳ ಸಮೀಕ್ಷೆಯೂ ಇಲ್ಲಿ ನಡೆದಿದೆ. ಇದು ಉಪಯುಕ್ತವಾದ, ಸಂತೋಷ ಕೊಡುವ ಸಂಪುಟ. ನಗೆಗನ್ನಡವು ಇಲ್ಲಿ ಗೆದ್ದಿದೆ.

ಪ್ರೊ. ಎಚ್.ಎಸ್. ರಾಘವೇಂದ್ರರಾವ್

ಸಾಹಿತಿ ಮತ್ತು ವಿಮರ್ಶಕರು ('ನಗೆಗನ್ನಡಂ ಗೆಲ್ಗೆ!'ಯ ಬೆನ್ನುಡಿಯಿಂದ)

...ಈ ಕೃತಿಯಲ್ಲಿ ನಗೆಗನ್ನಡ ನಲಿದಿದೆ, ವಿಜೃಂಭಿಸಿದೆ. ಕನ್ನಡದ ಹಾಸ್ಯಾಸಕ್ತರೆಲ್ಲರೂ ಅಭಿಮಾನದಿಂದ ತಮ್ಮ ಮೆಚ್ಚಿನ ಹಿರಿ ಕಿರಿಯ ಹಾಸ್ಯಸಾಹಿತಿಗಳನ್ನು ಓದಿ ಅವರ ಕುರಿತು ಪ್ರಬುದ್ಧ ಪರಿಚಯವನ್ನು ಮಾಡಿಕೊಂಡು ಕೃತಾರ್ಥಭಾವ ತಾಳುವಂತೆ ಪುಸ್ತಕ ಹೊರಬಂದಿದೆ... ಹೊರನಾಡ ಬಂಧುಗಳ ಕನ್ನಡ ಪ್ರೇಮ ಅನುಕರಣೀಯವಾದುದು.

–ಭುವನೇಶ್ವರಿ ಹೆಗಡೆ

ಹೆಸರಾಂತ ಹಾಸ್ಯ ಲೇಖಕಿ (ವಾರ್ತಾ ಭಾರತಿ ಪತ್ರಿಕೆಯ ಅಂಕಣದಲ್ಲಿ)

....ಮುಂದಿನ ಬರಹಗಾರರು ಈ ಪುಸ್ತಕವನ್ನು ಒಂದು ಆಕರ ಗ್ರಂಥವಾಗಿ ಉಪಯೋಗಿಸುವುದರಲ್ಲಿ ಆಶ್ಚರ್ಯವೇನಿಲ್ಲ... ಇಷ್ಟು ದೂರದಲ್ಲಿದ್ದರೂ ತಮ್ಮ ಕನ್ನಡ ಪ್ರೇಮವನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದಿರುವುದಕ್ಕಾಗಿ, 'ಅಪರಂಜಿ' ಇಲ್ಲಿನ ಅನೇಕ ಲೇಖಕರನ್ನು ಅಭಿನಂದಿಸುತ್ತಾಳೆ.

–ಶಿವು

'ಅಪರಂಜಿ' ಮಾಸಪತ್ರಿಕೆಯ ಸಂಪಾದಕರು

'ನಗೆಗನ್ನಡಂ ಗೆಲ್ಗೆ!' ಹತ್ತಿರ ಹತ್ತಿರ ಐದುನೂರು ಪುಟಗಳ ಬೃಹತ್ ಗ್ರಂಥ. ಆಧುನಿಕ ಕನ್ನಡದಲ್ಲಿನ ವಿನೋದ ಸಾಹಿತ್ಯವನ್ನು ಕುರಿತು ಇಷ್ಟೊಂದು ಸಮಗ್ರತೆಯನ್ನು ಎಟುಕಿಸಿಕೊಂಡ ಇನ್ನೊಂದು ಪುಸ್ತಕ ಕನ್ನಡದಲ್ಲಿ ಈವರೆಗೆ ಬಂದೇ ಇಲ್ಲ. 'ನಗೆನಾಡ ಸಿರಿವಂತರು' ಹಾಗೂ 'ಹೊರನಾಡ ನಗೆಹೊನಲು' ಎಂಬ ಎರಡು ಭಾಗಗಳಲ್ಲಿ ಇಲ್ಲಿನ ಲೇಖನಗಳು ಸಂಕಲಿತವಾಗಿವೆ. ಮೊದಲ ಭಾಗ ಆಧುನಿಕ ಕನ್ನಡದ ನಗೆಬರಹಗಾರರಾದ ಕೈಲಾಸಂ, ರಾಶಿ, ಕಸ್ತೂರಿ, ರಾಜರತ್ನಂ–ಹೀಗೆ ಸುಮಾರು ಇಪ್ಪತ್ಮೂರು ಮಂದಿ ಲೇಖಕರನ್ನು ಅವರ ಕೃತಿಗಳನ್ನೂ ಸಾಕಷ್ಟು ವಿವರವಾಗಿ ಪರಿಚಯಿಸುತ್ತದೆ. ದೂರದ ಅಮೆರಿಕೆಯಲ್ಲಿದ್ದುಕೊಂಡು ಕರ್ನಾಟಕದ ಲೇಖಕರನ್ನೂ ಅವರ ಕೃತಿಗಳನ್ನೂ ಸಮಗ್ರವಾಗಿ ಪರಿಚಯಿಸುವುದು ಸುಲಭದ ಮಾತೇನಲ್ಲ. ಆದಾಗ್ಯೂ, ಎಲ್ಲ ಮಿತಿಗಳ ನಡುವೆ ಇಲ್ಲಿನ ಲೇಖನಗಳು ತಕ್ಕಷ್ಟು ಸಮಗ್ರವಾಗಿರುವಂತೆ ನೋಡಿಕೊಂಡಿರುವುದು ಎದ್ದುಕಾಣುವಂತಿದೆ. ತಮ್ಮ ಅನ್ನಿಸಿಕೆ ಅಭಿಪ್ರಾಯಗಳಿಗೆ ಸೂಕ್ತ ಆಧಾರಗಳನ್ನು ಒದಗಿಸಿ, ಲೇಖನಗಳಿಗೆ ಅಧಿಕೃತತೆ ಪ್ರಾಪ್ತವಾಗುವಂತೆಯೂ ಪ್ರಯತ್ನಿಸಲಾಗಿದೆ. ಇಷ್ಟಾದರೂ ಇಲ್ಲಿನ ಬರಹಗಳು ಕೇವಲ ಒಣ

ಮಾಹಿತಿಗಳ ಸಂಗ್ರಹವಾಗಿರದೆ, ಸ್ವಾರಸ್ಯಪೂರ್ಣವಾಗಿದ್ದು ಅತ್ಯಂತ ವಾಚನೀಯವಾಗಿವೆ. ಮೊದಲ ಭಾಗದಲ್ಲಿರುವ ಲೇಖನಗಳಿಂದಾಗಿ ಈ ಗ್ರಂಥಕ್ಕೆ ಒಂದು ಆಕರ ಗ್ರಂಥದ ಮೌಲ್ಯ ಪ್ರಾಪ್ತವಾಗಿದೆ–ಎನ್ನಿಸಿದರೆ ಅತ್ಯುಕ್ತಿಯಲ್ಲ.

–ಎನ್. ಶ್ರೀನಿವಾಸ ಉಡುಪ

ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು

'ನಗೆಗನ್ನಡಂ ಗೆಲ್ಗೆ!'ಯನ್ನು ಓದಿದಾಗ, ಇದು ಎಷ್ಟು ಒಳ್ಳೆಯ ಸಾರ್ಥಕ ಶ್ರಮ ಎನಿಸಿತು. ನಗೆ ಬಳ್ಳಿಯ ಬೇರಿನಿಂದ ಹಿಡಿದು ಹಣ್ಣಿನ ತನಕ ನಮಗೆಲ್ಲಾ ಕನ್ನಡ ಹಾಸ್ಯದ ರುಚಿ ಉಣಬಡಿಸಿಬಿಟ್ಟಿರುವಿರಿ. ನಾವು ನಮ್ಮದೇ ಮಣ್ಣಿನಲ್ಲಿ ಬಿತ್ತದೇ ಹೋದದ್ದನ್ನು ನೀವು ಪರನಾಡಿನಲ್ಲಿ ನೆಟ್ಟು ಪೋಷಿಸಿದ್ದೀರಿ. ನಿಮಗೂ ನಗೆಗನ್ನಡಂ ಗೆಲ್ಗೆಯಲ್ಲಿ ಪಾಲ್ಗೊಂಡವರೆಲ್ಲರಿಗೂ ನಮ್ಮ ಧನ್ಯವಾದಗಳು.

–ನೀಳಾದೇವಿ

ಹೆಸರಾಂತ ಕನ್ನಡದ ಲೇಖಕಿ

...ಇದು ಉತ್ಕೃಷ್ಟವಾದ ಸಂಪುಟ. ಕರ್ನಾಟಕದಲ್ಲೇ ನಡೆಯದ ಕೆಲಸವನ್ನು ಅಮೆರಿಕದ ಸಾಹಿತ್ಯರಂಗದ ಗೆಳೆಯರು ಸಾಧಿಸಿದ್ದಾರೆ.

–ಎಂ.ವಿ.ವಿ. ಮೂರ್ತಿ

ವಿ.ಸೀ. ಸಂಪದ

...ಇವುಗಳೆಲ್ಲದರ ತಲೆಗೂ ಗರಿಮೂಡಿಸುವಂತಿದೆ ಯು.ಎಸ್.ಎ.ಯ ಕನ್ನಡ ಸಾಹಿತ್ಯ ರಂಗದವರು ಬೆಂಗಳೂರಿನ ಅಭಿನವದೊಂದಿಗೆ ಹೊರತಂದಿರುವ 'ನಗೆಗನ್ನಡಂ ಗೆಲ್ಗೆ!' ಬೃಹದ್‌ಗ್ರಂಥ. ಇದುವರೆಗೆ ಕರ್ನಾಟಕದಲ್ಲೇ ನಡೆಯದ ಒಂದು ಮಹತ್ತರ ಕೆಲಸವನ್ನು ಎಚ್.ಕೆ. ನಂಜುಂಡಸ್ವಾಮಿ ಮತ್ತು ಎಚ್.ವೈ. ರಾಜಗೋಪಾಲ್ ಇವರು ತಮ್ಮ ಗೆಳೆಯರ ಜೊತೆ ಸೇರಿ ಸಾಧಿಸಿ ತೋರಿಸಿದ್ದಾರೆ.

–ಎಚ್.ಎಸ್. ಪಾರ್ವತಿ

ಹೆಸರಾಂತ ಕನ್ನಡ ಲೇಖಕಿ

ಈ 'ನಗೆಗನ್ನಡಂ ಗೆಲ್ಗೆ! ಪುಸ್ತಕ, ಕನ್ನಡ ಹಾಸ್ಯ ಸಾಹಿತ್ಯದ ಆಕರ ಗ್ರಂಥ. ಕೇವಲ ಆಕರ ಗ್ರಂಥ ಮಾತ್ರವಲ್ಲ. ಈ ರೀತಿಯ ಕೃತಿ ಮೊಟ್ಟಮೊದಲನೆಯದಾಗಿರುವುದರಿಂದ, ಇದು ಆದ್ಯ ಆಕರ ಗ್ರಂಥ. ಇಂಥ ಮೌಲ್ಯಾತ್ಮಕ ಕೃತಿಯನ್ನು ಕೊಟ್ಟಂತಹ ಸಂಬಂಧಿಸಿದ ಎಲ್ಲರನ್ನು ನಾನು ಅಭಿನಂದಿಸುತ್ತೇನೆ.

–ದೇಶಪಾಂಡೆ ಸುಬ್ಬರಾವ್

ಸಾಹಿತಿ-ರಂಗಕರ್ಮಿ

...I did get the wonderful book four days ago... Many thanks and my congratulations. I have already read most of the book and my wife started reading it with much enthusiasm....

–T. S. Satyan

Renowned photo-journalist

The very expance of the articles assures the discerning reader to have the most rewarding material to digest and enjoy and thus develop that pride which is his/her heritage that is almost defunct at the place of its birth...

–Prof. S. Raghavendra Bhatta

Professor of Kannada (Rtd.), Sarada Vilas College, Mysore

೩. ಆಚೀಚೆಯ ಕಥೆಗಳು

(ಕಡಲಾಚೆಯ ಕನ್ನಡ ಕಥಾಸಂಕಲನ)

ಪ್ರಧಾನ ಸಂಪಾದಕ: ಗುರುಪ್ರಸಾದ್ ಕಾಗಿನೆಲೆ

'ಆಚೀಚೆಯ ಕತೆಗಳು' ಕನ್ನಡದಲ್ಲಿ ನಡೆದ ಇತ್ತೀಚಿನ ಆಕರ್ಷಕ ಪ್ರಯೋಗವಾಗಿದೆ. ತಾಯಿ ನೆಲದಿಂದ ದೂರವಾದ–ಕನ್ನಡದ ಜೀವಂತ ಸಂಪರ್ಕ ಅಸಾಧ್ಯವಾದ–ಜಾಗದಲ್ಲಿ ಕುಳಿತು, ಕೇವಲ ತಮ್ಮ ಮಾತೃಭಾಷೆಯ ಪ್ರೀತಿಗಾಗಿ–'ಎಂದೆಂದಿಗೂ ಕನ್ನಡವಾಗಿರುವ' ಹಟದಲ್ಲಿ–ರಚಿಸಿದ ಈ ಕತೆಗಳು ಕನ್ನಡ ಕಥಾಸಾಹಿತ್ಯಕ್ಕೆ ಕಡಲಾಚೆಯ ಕನ್ನಡಿಗರಿತ್ತ ಅಪೂರ್ವ ಕೊಡುಗೆಯಾಗಿವೆ...

–ಯಶವಂತ ಚಿತ್ತಾಲ (ಬೆನ್ನುಡಿಯಿಂದ)

ಈ ಕೃತಿಯ ಮಾಲೆಯಲ್ಲಿ ಸೇರಿರುವ ಇಪ್ಪತ್ತೆರಡು ಹೊಚ್ಚಹೊಸ ಕತೆಗಳಲ್ಲಿ ಪ್ರತಿಯೊಂದು ಹೂವೂ ಬೇರೆ-ಬೇರೆ ರೀತಿಯ ಬರವಣಿಗೆಯನ್ನು ಹೊಂದಿವೆ. ಓದಿ ಮುಗಿಸಿದ ಮೇಲೆ ಇಪ್ಪತ್ತೆರಡು ವಿವಿಧ ಮನಸ್ಸಿನೊಂದಿಗೆ ಒಡನಾಡಿದ, ಅಲ್ಲಿಯ ಪಾತ್ರಗಳೊಂದಿಗೆ ಮೌನ ಸಂವಾದ ನಡೆಸಿದ ಖುಷಿಯ ಅನುಭವವಾಗುತ್ತದೆ...

ತುಂಬಾ ವಿಸ್ತಾರವಾದ ಬದುಕಿನ ಕ್ರಮ, ಸಂಸ್ಕೃತಿಯ ಸಂಘರ್ಷ, ಆಸೆ, ನಿರಾಸೆ, ಪ್ರೇಮ, ಕಾಮ, ದುಃಖ, ಸಂಕಷ್ಟ, ಸುಖಭೋಗ, ಹೊಂದಾಣಿಕೆ ಇವುಗಳೆಲ್ಲ ಜೀವಿಯೊಬ್ಬನ ಮನಃಸ್ಥಿತಿಯನ್ನು ಹೇಗೆ ರೂಢಿಸುತ್ತವೆ ಹಾಗೂ ನಮ್ಮಲ್ಲಿ ಬೇರೆ ಬೇರೆ ದೃಷ್ಟಿಕೋನಗಳು ನಿರ್ಮಾಣಗೊಳ್ಳುವ ಹಂತದಲ್ಲಿ ಈ ಕತೆಗಳು ತನ್ನದೇ ಆದ ಒಂದು ಪ್ರಾಮಾಣಿಕ ಹಸಿತನ ಮತ್ತು ಬಿಗಿಯಲ್ಲಿ ಓದುಗನ ಮನಸ್ಸನ್ನು ಹೇಗೆ ಪಕ್ವಗೊಳ್ಳುತ್ತಾ ಸಾಗುತ್ತವೆ ಎಂಬ ಬಗ್ಗೆ

ಅಚ್ಚರಿ ಎನಿಸುತ್ತದೆ. ಆ ನಿಟ್ಟಿನಲ್ಲಿ ಇಲ್ಲಿಯ ಪ್ರತಿ ಕತೆಯೂ ಒಂದಿಲ್ಲೊಂದು ಕಾರಣದಿಂದ ಮಹತ್ವದ್ದೇ...

-ಸುನಂದಾ ಪ್ರಕಾಶ ಕಡಮೆ
'ಗಾಂಧಿ ಬಜಾರ್' ಪತ್ರಿಕೆ, ಜೂನ್ ೨೦೦೬

...ಇಲ್ಲಿನ ಕಥೆಗಳಲ್ಲಿ ಸುಮಾರು ಹತ್ತಕ್ಕೂ ಮೀರಿ ಒಳ್ಳೆಯ ಕಥೆಗಳಿವೆ ಎಂಬ ಅಂಶವೇ ಒಂದು ಆಪ್ತತೆಯನ್ನು ಸಂಕಲನದಮಟ್ಟಿಗೆ ಒದಗಿಸುವಂತದು. ಬಿಟ್ಟುಬಂದ ದೇಶದ ಅನುಭವಗಳ ಒಟ್ಟೊಟ್ಟಿಗೆ ಸೇರಿದ ದೇಶದಲ್ಲಿ ಸೌಭಾಗ್ಯವಾಗಿ ಬಂದ ಅನುಭವಗಳ ಹಿನ್ನೆಲೆಯಲ್ಲಿ ಕಥೆಗಳೆಲ್ಲ ಬಹುತೇಕ ಅನನ್ಯತೆ ಪಡೆಯುತ್ತವೆ.

-ಮಹಾಬಲಮೂರ್ತಿ ಕೊಡ್ಲೆಕೆರೆ, ವಿಜಯ ಕರ್ನಾಟಕ, ಆಗಸ್ಟ್ ೨೦, ೨೦೦೬

ಸಂಸ್ಕೃತಿಯ ಪಲ್ಲಟಗಳು, ವಲಸೆಗಾರರ ದ್ವಂದ್ವಗಳು, ಆಧುನಿಕ ಬದುಕಿನ ವೈಪರೀತ್ಯಗಳು, ಜಾಗತಿಕ ಪರಿಸರದಲ್ಲಿ ನೆಲೆಸಿ ಕನ್ನಡತನ ಉಳಿಸಿಕೊಳ್ಳುವ ಹಂಬಲ-ಇವೆಲ್ಲ ಕಥೆಗಳಾಗಿವೆ...

-ರಘುನಾಥ ಚ.ಹ., 'ಸುಧಾ'

*

೪. ಕುವೆಂಪು ಸಾಹಿತ್ಯ ಸಮೀಕ್ಷೆ

ಪ್ರಧಾನ ಸಂಪಾದಕ: ಅಹಿತಾನಲ

ಪ್ರ: ವಸಂತ ಪ್ರಕಾಶನ, ಬೆಂಗಳೂರು. ೨೦೦೪. ೩೫೩ ಪುಟಗಳು

'....ಕುವೆಂಪು ಸಾಹಿತ್ಯ ಸಮೀಕ್ಷೆ' ಕುವೆಂಪು ಸಾಹಿತ್ಯದ ಹಲವು ಮುಖಗಳನ್ನು ಕುರಿತು ಕಡಲಾಚೆಯ ಕನ್ನಡಿಗರು ಬರೆದ ಲೇಖನಗಳ ಒಂದು ಸಂಪುಟ... ಅಮೆರಿಕದಲ್ಲಿದ್ದೂ, ತಮ್ಮ ಕನ್ನಡ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವ ಸಂರಕ್ಷಕ ಕವಚಗಳನ್ನು ಕಂಡುಕೊಳ್ಳುವುದು ಅವರಿಗೆ ಅಗತ್ಯವಾಗಿದೆ... ತಮ್ಮೊಳಗಿನ ಕನ್ನಡತನವನ್ನು ತುಕ್ಕು ಹಿಡಿಯದಂತೆ ಕಾಪಾಡಿಕೊಂಡಿದ್ದಾರೆ. ಹೀಗೆ... ತಮ್ಮ ಕನ್ನಡತನವನ್ನು... ಉಳಿಸಿಕೊಂಡಿದ್ದರ ಸಂಕೇತವೇ ಈ 'ಕುವೆಂಪು ಸಾಹಿತ್ಯ ಸಮೀಕ್ಷೆ'.... ಕುವೆಂಪು ಸಾಹಿತ್ಯ ನಿರ್ಮಿತಿಯನ್ನು ಕುರಿತು ಒಂದು ಒಳ್ಳೆಯ ಸಮೀಕ್ಷೆ ಇದು...

-ಜಿ. ಎಸ್. ಶಿವರುದ್ರಪ್ಪ

....ಅನಿವಾಸಿ ಕನ್ನಡಿಗರ ಈ ಕೊಡುಗೆ ಕುವೆಂಪು ಅವರಿಗೆ ಅರ್ಪಿಸುವ ಒಂದು ದೊಡ್ಡ ನಮನ. ಕರ್ನಾಟಕದ ಸಮಕಾಲೀನ ಲೇಖಕರ ಮಟ್ಟಕ್ಕೇನೂ ಕಮ್ಮಿಯಿಲ್ಲದ ಲೇಖನಗಳು ಇಲ್ಲಿ ಹೊರಬಂದಿದೆ ಎನ್ನಲು ಹೆಮ್ಮೆಯಾಗುತ್ತದೆ.

-ಪ್ರಭುಶಂಕರ

....'ಕುವೆಂಪು ಸಾಹಿತ್ಯ ಸಮೀಕ್ಷೆ'ಯಲ್ಲಿ ಅಧ್ಯಯನಪೂರ್ಣ ಲೇಖನಗಳನ್ನು ಬರೆದಿರುವ ಅಮೆರಿಕದ ಲೇಖಕರ ಬಗ್ಗೆ ಕರ್ನಾಟಕದ ಕನ್ನಡಿಗರೂ ಅಭಿಮಾನ ಪಡಬೇಕು. ಕುವೆಂಪು ಸಾಹಿತ್ಯದ ವಿವಿಧ ಮುಖಗಳನ್ನು ಆಸಕ್ತಿಯಿಂದ ಚರ್ಚಿಸಿದ ಎಲ್ಲ ಲೇಖಕ ಲೇಖಕಿಯರೂ ತಾವು ಆರಿಸಿಕೊಂಡ ವಸ್ತುವಿನ ಬಗ್ಗೆ ಸಮರ್ಥವೆನಿಸುವ ಗ್ರಹಿಕೆಯನ್ನು ವ್ಯಕ್ತಪಡಿಸಿದ್ದಾರೆ...

-ವ್ಯಾಸರಾಯ ಬಲ್ಲಾಳ

....'ಕುವೆಂಪು ಸಾಹಿತ್ಯ ಸಮೀಕ್ಷೆ' ಕೃತಿಯು ಸುಂದರವಾಗಿ ರೂಪುಗೊಂಡಿದೆ. ಕನ್ನಡದ ಹಿರಿಯ ಕವಿಗೆ ಸಾಗರದಾಚೆಯ ಕನ್ನಡಿಗರಯೋಗ್ಯ ಉಡುಗೊರೆ ಇದು. ಅದಕ್ಕಾಗಿ ಸಂಪಾದಕ ಮಂಡಳಿ ಮತ್ತು ಲೇಖಕರಿಗೆ ಹಾರ್ದಿಕ ಅಭಿನಂದನೆಗಳು.

-ಟಿ. ವಸಂತಕುಮಾರ

(ಮುಂಬಯಿ ವಿ.ವಿ.ದ ಕನ್ನಡ ವಿಭಾಗದ ಮುಖ್ಯಸ್ಥರು)

ಅಮೆರಿಕದಲ್ಲಿ ನೆಲೆಸಿರುವ ಕನ್ನಡಿಗರು ಕಳೆದ ಮೂರ್ನಾಲ್ಕು ದಶಕಗಳಲ್ಲಿ ಅನೇಕ ಕನ್ನಡ ಕೂಟಗಳನ್ನು ಸ್ಥಾಪಿಸಿಕೊಂಡಿದ್ದಾರೆ... ಆದರೆ, ಕನ್ನಡ ಸಾಹಿತ್ಯಕ್ಕೆಂದೇ ಮೀಸಲಾದ ಸಂಘಟನೆ–ಕನ್ನಡ ಸಾಹಿತ್ಯ ರಂಗ... ಅಮೆರಿಕದಲ್ಲಿ ಮನೆಮಾಡಿ, ಇಂಗ್ಲಿಷ್ ಪರಿಸರದಲ್ಲಿ ಕನ್ನಡವನ್ನು ನೆನಪು ಮಾಡಿಕೊಳ್ಳುವುದೇ ದೊಡ್ಡ ಸಂಗತಿ. ಅದರಲ್ಲೂ ಕುವೆಂಪು ಕುರಿತು ೩೫೦ ಪುಟಗಳ ಬೃಹತ್ ಗ್ರಂಥ ಹೊರತರುವುದಿದೆಯಲ್ಲ ಅದು ನಿಜಕ್ಕೂ ಅಭಿನಂದನಾ ವಿಷಯ. ಈ ಪುಸ್ತಕದಿಂದ ನಾವು ಕಲಿಯುವಂಥದು ಸಾಕಷ್ಟಿದೆ. ಅಮೆರಿಕನ್ನಡಿಗರ ಪ್ರೀತಿಗೆ ಸಲಾಮು.

-ವಿಶ್ವೇಶ್ವರ ಭಟ್

(ವಿಜಯ ಕರ್ನಾಟಕ ಸಂಪಾದಕೀಯ)

ಕರ್ನಾಟಕದ ವಿವಿಧ ಭಾಗಗಳಿಂದ ಕನ್ನಡಿಗರು ಉದ್ಯೋಗಾರ್ಥಿಗಳಾಗಿ ವಿದೇಶಕ್ಕೆ ಹೋಗಿದ್ದಾರೆ. ಅದನ್ನು ಪ್ರತಿಭಾ ಪಲಾಯನ, ಡಾಲರ್ ಪೌಂಡ್ ಗಳಿಕೆಯ ಆಸೆ ಅಂತ ಟೀಕಿಸುವವರಿದ್ದಾರೆ. ಭಾಷೆಗಳ ಅಭಿಮಾನದಿಂದ ವಿಮುಖರಾಗಿದ್ದಾರೆಂದು ದೂರುವವರಿದ್ದಾರೆ! ಈ ಅನಿಸಿಕೆ ಸರಿಯಲ್ಲವೆಂದು ಕುವೆಂಪು ಜನ್ಮಶತಾಬ್ದಿ ಸಂದರ್ಭದಲ್ಲಿ ಅಮೆರಿಕನ್ನಡಿಗರ 'ಕುವೆಂಪು ಸಾಹಿತ್ಯ ಸಮೀಕ್ಷೆ' ಎಂಬ ಪುಸ್ತಕ ಸೂಚಿಸುತ್ತದೆ. ಅಮೆರಿಕನ್ನಡಿಗರ ಈ ಕಾರ್ಯ ಸ್ತುತ್ಯರ್ಹ. ನಮ್ಮ ಸಂಸ್ಕೃತಿ, ನಡೆ-ನುಡಿಗಳೆಲ್ಲವೂ ದೂರಾಯಿತೇನೋ ಅನ್ನುವಾಗಲೇ ಪರದೇಶದ ಪರಿಸರದಲ್ಲೂ 'ಇಲ್ಲೂ ಇದೆ ತುಡಿಯುವ ಎದೆ– ಕನ್ನಡ ನಾಡಿಗೆ ನುಡಿಗೆ' ಎಂಬ ಮಾತನ್ನು ಸಫಲಗೊಳಿಸಿದ್ದಾರೆ... ಆದರೆ ಇಂಥ ಸಂಗ್ರಹಯೋಗ್ಯ ಮೌಲಿಕವಾದ ಗ್ರಂಥಕ್ಕೆ ಕನ್ನಡ ನಾಡಿನಲ್ಲಿ ಪ್ರಚಾರ ಸಿಗದಿರುವುದು ಖೇದಕರ.

-ಎಚ್.ಜಿ. ಸೋಮಶೇಖರ ರಾವ್ (ಪ್ರಜಾವಾಣಿ)

...ಕುವೆಂಪು ಅವರನ್ನು ಕೇಳಿ, ಓದಿ ಮೆಚ್ಚಿಕೊಂಡು ಇರುವವರ ಹತ್ತಿರ ಕುವೆಂಪು ಬಗ್ಗೆ ನಾಲ್ಕು ಸಾಲು ಬರೆದುಕೊಡಿ ಅಂತ ಕೇಳಿದರೆ ಅವರು ಥಟ್ಟನೆ ಹುಷಾರಾಗುತ್ತಾರೆ... ಅವರವರು ಕಂಡ ಕುವೆಂಪು ಆ ಲೇಖನಗಳಲ್ಲಿ ಹಣಕಿ ಹಾಕುತ್ತಾರೆ. ಹಾಗಾಗಿಲ್ಲ ಎನ್ನುವುದು 'ಕುವೆಂಪು ಸಾಹಿತ್ಯ ಸಮೀಕ್ಷೆ' ಎಂಬ ಸಂಕಲನದ ಹೆಗ್ಗಳಿಕೆ.

-ಜಾನಕಿ (ದಟ್ಸ್ ಕನ್ನಡ ಅಂತರ್ಜಾಲ ಪತ್ರಿಕೆ)

'...ಎಲ್ಲಿದ್ದರೆ ಏನ್, ಎಂತಿದ್ದರೆ ಏನ್, ನೀ ಮೆಟ್ಟಿದ ನೆಲ ಅದೆ ಕರ್ನಾಟಕ'-ಎಂಬ ಕುವೆಂಪು ಕವನದ ಸಾಲಿನ ಜೇನುನುಡಿಯನ್ನು ಸಾರ್ಥಕಗೊಳಿಸಿಕೊಂಡು, ತಾವಿದ್ದೂರನ್ನೇ ಕರ್ನಾಟಕವಾಗಿಸಿಕೊಂಡು, ಕನ್ನಡವನ್ನು ಉಸಿರಾಗಿಸಿಕೊಂಡು ಅಮೆರಿಕದಲ್ಲಿ ಅನಿವಾಸಿ ಕನ್ನಡಿಗರು ಜೀವನ ನಡೆಸುತ್ತಿದ್ದಾರೆ. ಕುವೆಂಪುರವರು ಕೈಗೊಂಡ ಸಾಹಿತ್ಯ ಕೃಷಿಯನ್ನು ಅವಲೋಕಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, 'ಕುವೆಂಪು ಸಾಹಿತ್ಯ ಸಮೀಕ್ಷೆ' ಎಂಬ ಒಂದು ಉತ್ತಮ ಗ್ರಂಥವನ್ನು ಸಾಹಿತ್ಯ ಲೋಕಕ್ಕೆ ಅರ್ಪಿಸಿದ್ದಾರೆ...

-ಮೂಗಲು ಮಲ್ಲಿಕಾರ್ಜುನ (ದಟ್ಸ್ ಕನ್ನಡ ಅಂತರ್ಜಾಲ ಪತ್ರಿಕೆ)

ಅಭಿನವ

೧೭/೧೮-೨, ಮೊದಲನೆಯ ಮುಖ್ಯರಸ್ತೆ, ಮಾರೇನಹಳ್ಳಿ, ವಿಜಯನಗರ. ಬೆಂಗಳೂರು-೪೦ ದೂ. ೦೮೦ ೨೩೫೦೫೮೨೫

ನಮ್ಮ ಪ್ರಕಟಣೆಗಳು

ಕರ್ನಾಟಕ ಸೂಫಿಗಳು	ರಹಮತ್ ತರೀಕರೆ	150/-
ಹೊಸಾಹತು ಪ್ರಜ್ಞೆ ಮತ್ತು ಸಾಂಸ್ಕೃತಿಕ ಅಧ್ಯಯನ	ಮೂಲ : ಗೂಗಿ ವಾ ತಿಯಾಂಗೊ ಅನು: ರಹಮತ್ ತರೀಕರೆ	35/-
ಲೋಕವಿರೋಧಿಗಳ ಜತೆಯಲ್ಲಿ (ಸಂದರ್ಶನಗಳು)	ರಹಮತ್ ತರೀಕೆರೆ	200/-
ಎಲೆಮರೆಯ ಅಲರು (ಉಳಿದ ನೆನಪುಗಳು)	ಬೆಳಗೆರೆ ಕೃಷ್ಣಶಾಸ್ತ್ರೀ	50/-
ಸಾಹಿತಿಗಳ ಸ್ಮೃತಿ (ನೆನಪುಗಳು)	ಬೆಳಗೆರೆ ಕೃಷ್ಣಶಾಸ್ತ್ರಿ	100/-
ಮರೆಯಲಾದೀತೆ? (ನೆನಪುಗಳು)	ಬೆಳಗೆರೆ ಕೃಷ್ಣಶಾಸ್ತ್ರಿ	250/-
ಹೊರಲಾರದ ಗಾಳ ಬಾರದಲ್ಲ (ಮಿಲನ್ ಕುಂದೇರಾ)	ಅನು: ಸುಕನ್ಯಾಕನಾರಳ್ಳಿ	200/-
ಹದ ತಪ್ಪಿದ ಬಾಲ್ಯ ಬದುಕು (ಬಾಲಪರಾಧಿಗಳು ಮತ್ತು ಮಹಿಳೆಯರ ಸತ್ಯಕಥೆಗಳು)	ಶಾಂತಾ ನಾಗರಾಜ್	75/-
ಪೂರ್ವಾವಲೋಕನ (ವಸಾಹತು ಪ್ರಜ್ಞೆ ಮತ್ತು ಸಾಂಸ್ಕೃತಿಕ ಅಧ್ಯಯನ)	ಎಸ್.ಎನ್. ಬಾಲಗಂಗಾಧರ	150/-
ನಮ್ಮದಿದು ಇತಿಹಾಸ (ಸ್ಥಳೀಯ ಚರಿತ್ರೆಗಳು ಮತ್ತು ಸಂಸ್ಕೃತಿಗಳು)	ಹೆಚ್.ಎಸ್. ಗೋಪಾಲರಾವ್	100/-
ಆಳ-ನಿರಾಳ : 3 (ಅಂಕಣ ಬರಹ)	ಕೆ.ವಿ. ತಿರುಮಲೇಶ್	175/-
ಮರೆಯಲಾಗದ ಮಹಾನುಭಾವರು (ನೆನಪುಗಳು)	ಹೊಸಬಾಳೆ ಸೀತಾರಾಮರಾವ್	125/-
ಕತ್ತಿಯಂಚಿನ ದಾರಿ (ಸಾಹಿತ್ಯ-ಸಂಸ್ಕೃತಿ ಚಿಂತನೆ) ೨೦೧೦ನೇ ಸಾಲಿನ ಕೇಂದ್ರ ಸಾಹಿತ್ಯ ಪ್ರಶಸ್ತಿ ಪಡೆದ ಕೃತಿ	- ರಹಮತ್ ತರೀಕೆರೆ	150/-
ಕಾಸ್ಮಿಕ್ ಡಿಟೆಕ್ಟೀವ್ (ನಮ್ಮ ವಿಶ್ವದ ನಿಗೂಢಗಳ ಅನ್ವೇಷಣೆ)	ಮೂಲ: ಮಣಿ ಭೌಮಿಕ್, ಅನು: ಕೆ. ಪುಟ್ಟಸ್ವಾಮಿ	100/-
ಮರೆಯಲಾಗದ ಸಾಮ್ರಾಜ್ಯ (ಮೂಲ : ಎಂ.ವೈ. ಘೋರ್ಪಡೆ)	ಅನು: ಭಾರತೀ ಕಾಸರಗೋಡು	65/-
ಮುಕ್ತಿಯ ರಹಸ್ಯ (ಕಥೆಗಳು) (ಮೂಲ : ಎಂ.ವೈ. ಘೋರ್ಪಡೆ)	ಅನು: ಭಾರತೀ ಕಾಸರಗೋಡು	75/-
ಬೆಳದಿಂಗಳು (ಮಕ್ಕಳ ಕಾದಂಬರಿ)	ಆನಂದ ವಿ. ಪಾಟೀಲ	20/-
ದಿಟ ನಾಗರ ಕಂಡರೆ (ಹಾವುಗಳ ಜಗತ್ತಿಗೊಂದು ಪಯಣ)	ಡಾ. ಟಿ.ಎಸ್.ರಮಾನಂದ	100/-
ಅಂಟಿದ ನಂಟು (ಅಸಮಗ್ರ ಲೇಖನಗಳು)	ಪಂ.ತಾರಾನಾಥ	300/-
ತಾರಾ ಸ್ಮರಣೆ (ಪಂ. ತಾರಾನಾಥರನ್ನು ಕುರಿತ ಲೇಖನಗಳು)	ಸಂ: ಎಂ. ಧ್ರುವ ನಾರಾಯಣ	150/-
ಪರಿಮಳದ ಬೀಜ (ಕವನ ಸಂಕಲನ)	ಗೀತಾ ವಸಂತ	50/-
ಸಾಹಿತ್ಯದ ಸಪ್ತಧಾತುಗಳು (ಪ್ರಬಂಧ ಸಂಕಲನ)	ಯಶವಂತ್ ಚಿತ್ತಾಲ	75/-
ಕೆಲವು ಕಥಾನಕಗಳು (ಕಥಾಸಂಕಲನ)	ಕೆ.ವಿ.ತಿರುಮಲೇಶ್	100/-
ವಿಶ್ಲೇಷಣೆ (ವಿಮರ್ಶಾ ಲೇಖನಗಳು)	ಹೆಚ್.ಎಸ್. ರಾಘವೇಂದ್ರರಾವ್	100/-
ಶಂಗಂ ತಮಿಳಗಂ ಮತ್ತು ಕನ್ನಡ ನಾಡು-ನುಡಿ	(ಆರಂಭ ಕಾಲದ ದ್ರಾವಿಡ ಸಂಬಂಧದ ಚಿಂತನೆ) ಪ್ರೊ ಷ. ಶೆಟ್ಟರ್	175/-
ನಾ.ಬಂದ ಹಾದಿಯಲ್ಲಿ (ಅನುಭವ ಕಥನ)	ಕೆ.ವಿ. ಘನಶ್ಯಾಮ	200/-
ದೂರ ತೀರದಿಂದ ಹರಿದು ಬಂದ ಕತೆಗಳು	ನಾಗ ಐತಾಳ (ಆಹಿತಾನಲ)	150/-
ಅಕ್ಷಯ ಕಾವ್ಯ	ಕೆ.ವಿ. ತಿರುಮಲೇಶ್	250/-
ಗಂಗಾವತರಣ (ಗಂಗೂಬಾಯಿ ಹಾನಗಲ್ ರವರ ಜೀವನ ಚಿತ್ರ)	ದಮಯಂತಿ ನರೇಗಲ್ಲ	75/-
ಮಳೆ ಬಿದ್ದ ನೆಲದಲ್ಲಿ (ಕವನ ಸಂಕಲನ)	ಹೆಚ್.ಎಸ್.ಶಿವಪ್ರಕಾಶ್	50/-
ದೇವರು ಎಂಬ ಸಂಕೇತನಾಮ (ಆತ್ಮಕಥೆ)	ಮೂಲ : ಮಣಿಭೌಮಿಕ್, ಅನು: ಕೆ. ಪುಟ್ಟಸ್ವಾಮಿ	100/-
ಕಣ್ಣಂಚಿನ ಕಡಲು (ಕವನ ಸಂಕಲನ)	ನಾಗರಾಜ್ ಹೆಗಡೆ ಅಪಗಾಲ	50/-
ವಿಸ್ತರಣೆ (ಲೇಖನಗಳು)	ಶ್ರೀಧರ ಹೆಗಡೆ ಭದ್ರನ್	೧೦೦/-
ಎಲ್ಲಿದೆ ಶಿವಾಪುರ? (ಕವನ ಸಂಕಲನ)	ಚಂದ್ರಶೇಖರ ಕಂಬಾರ	೧೦೦/-
ಅಭಿವೃದ್ಧಿ, ಆಳಿಕೆ ಮತ್ತು ಮಾನವೀಯ ಮೌಲ್ಯಗಳು	ಡಾ.ಪಿ. ಎಸ್. ಗೀತಾ (ಅನು. ಶಾಂತಾನಾಗರಾಜ್)	೬೦/-
ಅನಂತಮುಖದ ಮೂರ್ತಿ (ಅನಂತಮೂರ್ತಿ ಕುರಿತು)	ಸಂ: ನಾಗ ಐತಾಳ	೧೦೦/-
ಆಳ-ನಿರಾಳ : ೧ (ಅಂಕಣ ಬರಹ)	ಕೆ.ವಿ. ತಿರುಮಲೇಶ್	೧೨೫/-
ಆಳ-ನಿರಾಳ : ೨ (ಅಂಕಣ ಬರಹ)	ಕೆ.ವಿ. ತಿರುಮಲೇಶ್	೧೨೫/-
ಕಾಲಮಾನ (ಲೇಖನಗಳ ಸಂಕಲನ)	ಯು.ಆರ್.ಅನಂತಮೂರ್ತಿ	೨೫/-
ನೆನಪಿನ ಚಿತ್ರಗಳು (ಆತ್ಮಕಥೆ)	ಎಂ.ವೈ. ಘೋರ್ಪಡೆ	100/-
ಸಾಸುವೆ ಹೂವ ಚರಿತ (ಕವನ ಸಂಕಲನ)	ಹೆಚ್. ಆರ್ ರಮೇಶ್	40/-
ಸೈಬಾದರೂ ಬೇಡವೇ ಸ್ವಾಮಿ ನಮಗೆ (ಕವನ ಸಂಕಲನ)	ಕೆ.ಎಸ್. ಶ್ರೀನಿವಾಸ್ ಮೂರ್ತಿ	25/-
ಲೆಕ್ಕಕ್ಕೆ ಸಿಗದವರು (ಕವನ ಸಂಕಲನ)	ರಶ್ಮಿ ಹೆಗಡೆ	40/-
ಸಮಕ್ಷಮ (ಲೇಖನಗಳು)	ಯು. ಆರ್.ಅನಂತಮೂರ್ತಿ	100/-

ಸನ್ನಿವೇಶ (ವಿಮರ್ಶೆ)	ಯು. ಆರ್.ಅನಂತಮೂರ್ತಿ	50/-
ಅಂಕೆ ತಪ್ಪಿದ ಆರ್ಟುರೋ ಊಯಿ	ಅನು: ಕೆ.ವಿ. ನಾರಾಯಣ	50/-
ನಮಗೆ ಬೇಕಾದ ಕನ್ನಡ (ಭಾಷಣಗಳು)	ಸಂ: ನ. ರವಿಕುಮಾರ	75/-
ಚಲ್ ಮೇರಿ ಲೂನಾ (ಪ್ರಬಂಧಗಳು*)	ಆರ್. ನಿರ್ಮಲಾ	75/-
ಬೇಂದ್ರೆ ಕಾವ್ಯ (ವಿಮರ್ಶೆ)	ರಂ. ಶ್ರೀ. ಮುಗಳಿ	75/-
ಹತ್ತು ಹತ್ತು ಇಪ್ಪತ್ತು	ಆನಂದ ವಿ. ಪಾಟೀಲ	100/-
ಧ್ವನ್ಯಾಲೋಕದ ಓದು	ಕೆ.ವಿ. ನಾರಾಯಣ	150/-
ಪಾಶುಪತಾಸ್ತ್ರ (ನಾಟಕ)	ಬೆಳಗೆರೆ ಕೃಷ್ಣಶಾಸ್ತ್ರೀ	25/-
ಅಮೆರಿಕಾ ಗಾಂಧಿ	ದೇ.ಜ.ಗೌ	75/-
ಯುಗಪಲ್ಲಟ (ಸಂಸ್ಕೃತಿ ಚಿಂತನೆ)	ಯು.ಆರ್.ಅನಂತಮೂರ್ತಿ	75/-
ಬೆಂಕಿಯ ನೆನಪು (ಪರ್ಯಾಯಚರಿತ್ರೆ)	ಎಡುವರ್ಡೊ ಗೆಲಿಯಾನೊ/ಕೆ.ಪಿ. ಸುರೇಶ	75/-*
ಬಣ್ಣದ ತೆರೆ (ಕಾದಂಬರಿ)	ಅನು: ತಮಿಳ್ ಸೆಲ್ವಿ	100/-
ಶತಮಾನದ ಕವಿ ರಿಲ್ಕೆ	ಯು.ಆರ್. ಅನಂತಮೂರ್ತಿ	50/-
ಅಭಾವ (ಕವನ)	ಯು.ಆರ್. ಅನಂತಮೂರ್ತಿ	50/-
ಇಂದಿನ ಕನ್ನಡ: ರಚನೆ ಮತ್ತು ಬಳಕೆ	ಎಸ್.ಎನ್. ಶ್ರೀಧರ್	75/-
ಪರಿಶ್ರಮ (ಹೋರಾಟದ ಬದುಕು ಬರಹ)	ಎಸ್. ವೆಂಕಟರಾಮ್	250/-
ಜಾಲತರಂಗಿಣಿ (ಅಂಕಣ ಬರಹ)	ಮೈ.ಶ್ರೀ. ನಟರಾಜ	175/-
ಕನ್ನಡ ಕಾದಂಬರಿ ಲೋಕದಲ್ಲಿ... ಹೀಗೆ ಹಲವು	ಮೈ.ಶ್ರೀ. ನಟರಾಜ	250/-
ಆಗಾಗ (ಪರಿಚಾರಿಕೆಯ ನಡುವಿನ ಮಾತು-ಬರಹ)	ಚಿ.ಶ್ರೀನಿವಾಸರಾಜು	300/-
ನಾನು ಒಲಿದಂತೆ ಹಾಡುವೆ (ಪ್ರಬಂಧಗಳು)	ಚಂದ್ರಶೇಖರ ಆಲೂರು	75/-
ಬರುವ ನಾಳೆಗಳಿಗೆ ರಾತ್ರಿಗಳೇ ಇರುವುದಿಲ್ಲ	ಸಿದ್ದು ದೇವರಮನಿ	50/-
ಒಂದು ಮುಷ್ಠಿ ನಕ್ಷತ್ರ (ಕಥೆಗಳು)	ಕೋಡಿಬೆಟ್ಟು ರಾಜಲಕ್ಷ್ಮಿ	50/-
ಪ್ರತಿ ಸಂಸ್ಕೃತಿ (ವಿಮರ್ಶೆ)	ರಹಮತ್ ತರೀಕೆರೆ	100/-
ಆ ಕ್ಷಣದ ಸತ್ಯ (ಪ್ರಬಂಧಗಳು)	ಚಂದ್ರಶೇಖರ ಆಲೂರು	75/-
ನನ್ನ ರಸಯಾತ್ರೆ(ಆತ್ಮಕಥೆ)	ಮಲ್ಲಿಕಾರ್ಜುನ ಮನ್ಸೂರ್	50/-
ಮಚ್ಚಿನಹಾಗೆ ಕಣಿವೆಯಾಸಿ	ಎಚ್.ಎಸ್.ಶಿವಪ್ರಕಾಶ	50/-
ಶತಮಾನದ ಕವಿ ಯೇಟ್ಸ್	ಯು. ಆರ್. ಅನಂತಮೂರ್ತಿ	75/-
ಯುವ ಕವಿಗೆ ಬರೆದ ಪತ್ರಗಳು (ರಿಲ್ಕೆ)	ಅನು: ಓ.ಎಲ್. ನಾಗಭೂಷಣಸ್ವಾಮಿ	35/-
ಕರೆಯಿತೋ ಕಡಲತೀರ (ಕೇರಳ ಕಥನ)	ಜಿ. ಪಿ. ಬಸವರಾಜು	75/-
ಗೆಲುವಿನ ಚಿಲುಮೆ ರಾಜರತ್ನಂ	ಸಂ: ಆಹಿತಾನಲ	150/-
ಬಟವಾಡೆಯಾಗದ ರಸೀತಿ	ಲಕ್ಕೂರು ಆನಂದ	40/-
ಅಗ್ನಿದಿವ್ಯ (ಕಾವ್ಯ)	ಸಂಧ್ಯಾದೇವಿ	30/-
ಕೊಸಿಮೊ (ಕಾದಂಬರಿ) ಇಟಾಲೊ ಕಾಲ್ವಿನೊ.	ಅನು: ಕೆ. ಪಿ. ಸುರೇಶ	100/-
ಹೈದರಾಲಿ (ನಾಟಕ)	ಡಿ. ಎ. ಶಂಕರ್	40/-
ಬೆಳ್ಳೀಕೆರೆ ಹಳ್ಳಿಥೇಟರ್ (ಗ್ರಾಮೀಣ ರಂಗಭೂಮಿಯ ಆತ್ಮಕಥೆ)	ಪ್ರಸಾದ್ ರಕ್ಷಿದಿ	100/-
ಸೋಮನಾಥಪುರ-ಷ ಶೆಟ್ಟರ್ (ಇಂಗ್ಲಿಷ್/ಕನ್ನಡ ಭಾಷೆಗಳಲ್ಲಿ)	450/- ಸಾದಾ	100/-
ಗಿರಿಜಾಕಲ್ಯಾಣ- (ನಾಟಕ)	ಚಿ ಸುರೇಶ	50/-
ನನಗೆ ದೇವರ ಗೊಡವೆ ಕೂಡ ಬೇಡ (ಮಿರ್ಜಾ ಗಾಲಿಬ್ ಜೀವನ- ಕೃತಿಗಳು)		50/-
ನಿಮ್ಮ ಸಿಮ್ಮ3 (ಅಂಕಣ ಬರಹ)	ಸಿ.ಆರ್. ಸಿಂಹ	100/-
ಕನ್ನಡದ ಗರಡಿಯಾಳು (ಜಿ.ಪಿ.ರಾಜರತ್ನಂ ಕುರಿತ ನೆನಪುಗಳು)	ವಿವಿಧ ಲೇಖಕರು	100/-
ನಲ್ನುಡಿ ನಿಘಂಟು (ಕನ್ನಡ-ಕನ್ನಡ)	ಎಚ್. ಅಲ್ಲಿಸಾಬ್	175/-
ಮಾಲ್ಟಲೌರಿಡ್ಸ್‌ಬ್ರಿಗ್ಗನ ಟಿಪ್ಪಣಿ ಪುಸ್ತಕ-ರಿಲ್ಕೆ	(ಅನು:ಕಾದಂಬರಿ -ಕೆ. ವಿ.ತಿರುಮಲೇಶ್)	100/-
ಮದುವೆಯ ಆಟಗಳು (ನಾಟಕ)	ಎಚ್.ಎಸ್.ಶಿವಪ್ರಕಾಶ್	75/-
ಕರುಳಬಳ್ಳಿಯ ಸೊಲ್ಲು (ಬೇಂದ್ರೆ ಕಾವ್ಯ ವಿಮರ್ಶೆ)	ರಾಜೇಂದ್ರ ಚೆನ್ನಿ	50/-
ಆಧುನಿಕ ಕನ್ನಡ ಮಹಾಕಾವ್ಯಗಳು (ರಾಮಾಯಣದ ವಿಷಯಕ್ಕೆ ಸಂಬಂಧಿಸಿದಂತೆ)	ಶ್ರೀಧರ ಹೆಗಡೆ ಭದ್ರನ್	200/-
ಒಂದಾನೊಂದು ಕಾಲದಲ್ಲಿ (ಕಟ್ಟು ಕಥೆಗಳು)	ಸಂ. ಆಹಿತಾನಲ (ನಾಗಐತಾಳ)	150/-
ಕಾದೇ ಇರುವಳು ರಾಧೆ (ಕಾದಂಬರಿ)	ಆಹಿತಾನಲ (ನಾಗಐತಾಳ)	50/-
ಶೂನ್ಯಸಂಪಾದನೆಯ ಪರಾಮರ್ಶೆ	ಸಂ.ಶಿ. ಭೂಸನೂರಮಠ	610/-
ಬಲ್ಲವರು ಬಹಳಿಲ್ಲ (ಆಯ್ದ ಲೇಖನಗಳು)	ಎಚ್.ವೈ. ಶಾರದಾಪ್ರಸಾದ್	75/-
ಕುಸುಮಬಾಲೆ - ದೇವನೂರ ಮಹಾದೇವ (ಲಯಾಕಾರ ವಿನ್ಯಾಸ: ಎಲ್. ಬಸವರಾಜು)		75/-
ಹಿಂಸೆಯ ಎಡ-ಬಲ	ಯು.ಆರ್. ಅನಂತಮೂರ್ತಿ	10/-
ಮಳೆ ತೊಳೆದ ಕಲ್ಲುಗಳು (ಕವಿತೆ)	ಡಿ.ಆರ್. ಚಂದ್ರ ಮಾಗಡಿ	35/-

ಜೀವಾಳ (ಕಥೆಗಳು)	ಬಸವರಾಜು ಕುಕ್ಕರಹಳ್ಳಿ	50/-
ಈಡಿಪಸ್ ಕಾಂಪ್ಲೆಕ್ಸ್ (ಮನೋವೈಜ್ಞಾನಿಕ ಲೇಖನಗಳು)	ಎಂ ಬಸವಣ್ಣ	100/-
ಪೊರೆ ಕಳಚಿದ ಮೇಲೆ (ಕವನ)	ಸಿಬಂತಿ ಪದ್ಮನಾಭ	40/-
ಎಲ್ಲಿಹಳು ನನ್ನ ಛಾಯಾ? (ಕವನ)	ಆರತಿ ಪಟ್ರಮೆ	35/-
ಮಾತು ಸೋತ ಭಾರತ (ವಿಮರ್ಶೆ)	ಯು. ಆರ್. ಅನಂತಮೂರ್ತಿ	150/-
ಪ್ರಶ್ನೆಗಳಿರುವುದು ಶೇಕ್ಸ್‌ಪಿಯರನಿಗೆ	ಜಿ.ಎನ್. ಮೋಹನ್	50/-
ಉಲ್ಲೇಖ (ವಿಮರ್ಶೆ)	ಕೆ.ವಿ. ತಿರುಮಲೇಶ್	100/-
ಕನ್ನಡ ಕಾವ್ಯಾಲಂಕಾರ	ಕೆ. ಕೃಷ್ಣಮೂರ್ತಿ	100/-
ಕನ್ನಡ ಧ್ವನ್ಯಾಲೋಕ	ಕೆ. ಕೃಷ್ಣಮೂರ್ತಿ	150/-
ಕಾಲಿದಾಸ (ವಿಮರ್ಶೆ)	ಶ್ರೀರಂಗ	100/-
ಸಪ್ತಪದಿ (ಕವನ)	ಬಿ.ಸಿ.ರಾಮಚಂದ್ರಶರ್ಮ	40/-
ಬಕುಲದ ಹೂವುಗಳು (ಕವನ)	ಸು. ರಂ.ಎಕ್ಕುಂಡಿ	75/-
ದೇಸಿ ನಗು (ಲೇಖನಗಳು)	ಎಂ.ಎಸ್. ಮೂರ್ತಿ	75/-
ಬಾಗಿಲು-ಈತನಕದ ತಮಿಳು ಕತೆಗಳು	ಜಯಲಲಿತ	75/-
ಹೀಗೆ ಹಾಳೆಯ ಮೇಲೆ ಹಾಡು(ಕವನ)	ಮಮತಾ ಜಿ. ಸಾಗರ	25/-
ನಿಮ್ಮ2ಸಿಮ್ಮ (ಅಂಕಣ ಬರಹ)	ಸಿ. ಆರ್. ಸಿಂಹ	100/-
ಮೌನ (ಗಜಲ್‌ಗಳು)	ಚಿದಾನಂದ ಸಾಲಿ	35/-
ಪ್ರಶ್ನೆ ಮತ್ತು ದೇವರು (ಕವನ)	ಚೀಮನಹಳ್ಳಿ ರಮೇಶಬಾಬು	50/-
ನಗೆಗನ್ನಡಂ ಗೆಲ್ಗೆ!-ಸಂ.ಎಚ್. ಕೆ. ನಂಜುಂಡಸ್ವಾಮಿ.	ಎಚ್.ವೈ.ರಾಜಗೋಪಾಲ್	250/-
ಅರ್ಥಶಾಸ್ತ್ರ ಪರಿಭಾಷೆ	ಸಿ. ಕೆ. ರೇಣುಕಾರ್ಯ	75/-
ಜೀವ ಸಂಪಿಗೆ (ಕವನ)	ದು.ಸರಸ್ವತಿ	45/-
ಬಾಪು ಕುಟೀ (ಗಾಂಧಿ. ನಂತರದ ಗಾಂಧೀ ಚಿಂತನೆಗಳು)	ರಜನಿಭಕ್ಷೀ ಅನು:ವೆಂಕಟರಾಜು	150/-
ಕನ್ನಡದ ಮರ ಚೇತನ (ಮಾಸ್ತಿ ವೆಂಕಟೇಶ ಅಯ್ಯಂಗಾರ್ ಸಾಹಿತ್ಯ ಸಮೀಕ್ಷೆ)	ಸಂ.ಆಹಿತಾನಲ	175/-
ವಾಲ್ಮೀಕಿಯನೆವದಲ್ಲಿ (ಸಂಸ್ಕೃತಿ ಚಿಂತನೆ)	ಯು.ಆರ್.ಅನಂತಮೂರ್ತಿ	160/-
ನಾಗಾರ್ಜುನನ ಮೂಲಮಾಧ್ಯಮಕಕಾರಿಕಾ	ನಟರಾಜ ಬೂದಾಳು	150/-
ಆರದ ದೀಪ (ಜಿ.ಪಿ. ರಾಜರತ್ನಂ ಜೀವನ ಚಿತ್ರ)	ನೀಲತ್ತಹಳ್ಳಿ ಕಸ್ತೂರಿ	60/-
ಕಸೂತಿ (ಕಾದಂಬರಿ)	ಸ. ಉಷಾ	100/-
ಅಂಗದಧರೆ (ಕಾದಂಬರಿ)	ಕೇಶವ ಮಳಗಿ	50/-
ಚಾರುಚರಿತ (ಕಾದಂಬರಿ)	ಕೇಶವಶರ್ಮ.ಕೆ	110/-
ಚೂರುಪಾರುರೇಷಿಮೆ (ಕವನ)	ಕಮಲಾಕರ ಕಡವೆ	75/-
ನಿಲ್ಲಿಸಬೇಡ ಕಾಯುವುದನ್ನು (ಕವನ)	ಭಾರತೀದೇವಿ	40/-
ಕನಸು ಕನ್ನಡಿ (ಕವನ)	ಸರಸ್ವತಿ ಗಂಗೊಳ್ಳಿ	40/-
ಇದರ ಹೆಸರು (ಕವನ)	ಅಂಕುರ್ ಬೆಟಗೇರಿ	75/-
ಗುಬ್ಬಿಯ ಸ್ವರ್ಗ (ಮಕ್ಕಳ ಪದ್ಯಗಳು)	ಭಾಗೀರಥಿ ಹೆಗಡೆ	30/-
ಪಚ್ಚೆತೇರು (ಮಕ್ಕಳಿಗಾಗಿ)	ಆರ್. ನಿರ್ಮಾಲಾ	40/-
ಹೂ ಅಂದ್ರ ಹೂ (ಪುಟಾಣಿಗಳಿಗಾಗಿ ಪುಟಾಣಿ ಪದ್ಯಗಳು)	ಆನಂದ ಪಾಟೀಲ	40/-
ಕನ್ನಡ-ಇಂಗ್ಲಿಷ್ ನಿಘಂಟು	ಪ್ರಭುಶಂಕರ ಮತ್ತು ಬಾ.ವೇ. ಶ್ರೀಧರ	250/-
ಜೀವಜಾಲ (ಪರಿಸರ ವಿಜ್ಞಾನ)	ಕೆ. ಪುಟ್ಟಸ್ವಾಮಿ, ಕೃಪಾಕರ-ಸೇನಾನಿ	100/-
ನಮಸ್ಕಾರ (ಸಾಹಿತ್ಯ ವಿಮರ್ಶೆ)	ಎಚ್.ಎಸ್. ರಾಘವೇಂದ್ರರಾವ್	150/-
ಎಲ್ಲಬಲ್ಲವರಿಲ್ಲ (ಆಯ್ದ ಲೇಖನಗಳು)	ಎಚ್.ವೈ. ಶಾರದಾಪ್ರಸಾದ್	75/-
ಆಕಾಶದಗಲ ನಗುವಿನ ಅವಧೂತ	(ಬೆಳಗೆರೆ ಕೃಷ್ಣಶಾಸ್ತ್ರೀ ಅವರನ್ನು ಕುರಿತು)	50/-
ನೆಲಕ್ಕೆ ಬಿದ್ದ ನಕ್ಷತ್ರಗಳು (ಹೂ ಕುರಿತು)	ಸಂ. ರವಿಕುಮಾರ	75/-
ಟಿಬೆಟ್ (ಜಗತ್ತು ಕೇಳಿಸಿಕೊಳ್ಳಬೇಕಾದ ಆರ್ತಮೊರೆ)	ಮಂಗ್ಳೂರ ವಿಜಯ	375/-
ಡಂಡಂ ಊರಿಗೆ ಡಿಂಡಿಂ ಗಾಡಿ (ಮಕ್ಕಳಿಗಾಗಿ)	ಆನಂದ ಪಾಟೀಲ	20/-
ವೈದ್ಯರ ಶಿಕಾರಿ (ಶಿಕಾರಿಯಲ್ಲದ ಶಿಕಾರಿ ಅನುಭವಗಳು)	ಟಿ.ಎಸ್.ರಮಾನಂದ್)	70/-
ಈ ತನಕದ ಕಥೆಗಳು	ಅಬ್ದುಲ್ ರಷೀದ್	150/-
ನಮ್ಮ ಕನ್ನಡ (ಕನ್ನಡ ಚಿಂತನೆ)	ಕೆ.ವಿ.ತಿರುಮಲೇಶ್	60/-
ಆಚೀಚೆಯ ಕಥೆಗಳು (ಕಥಾ ಸಂಕಲನ)	ಸಂ.ಗುರುಪ್ರಸಾದ್ ಕಾಗಿನೆಲೆ	150/-
ನೀರತೇರು (ಕವನ)	ಕವಿತಾ ರೈ	60/-*
ಅಬ್ದುಲ್ಲನ ಕೈಲಾಸ (ಕವಿತೆ)	ಸುದೇಶ್ ಮಹಾನ್	50/-*
ನಿಮ್ಮ ಸಿಮ್ಮ (ಅಂಕಣ ಬರಹ)	ಸಿ.ಆರ್.ಸಿಂಹ	125/-*
ನಿನ್ನ ನೆನಪಿಗೊಂದು ನವಿಲುಗರಿ(ಕವನ ಸಂಕಲನ)	ಆನಂದ ಋಗ್ವೇದಿ	50/-*

ಪಂಜರಿಯರವ (ಜಾನಪದ ಅಧ್ಯಯನ)	ಎಸ್.ಪಿ. ಶಂಕರ ನಾರಾಯಣರಾವ್	150/-*
ಹವಳ ಹಾರಿದ ಹೊತ್ತು (ಕವನ ಸಂಕಲನ)	ಸ.ಉಷಾ	50/-*
ಪುಗಳೇಂದಿ ಪ್ರಹಸನ (ನಾಟಕ)	ರಾಮನಾಥ	60/-*
ಹಿಡಿದ ಉಸಿರು (ಕವನ ಸಂಕಲನ)	ಅಂಕುರ್ ಬೆಟಗೇರಿ	40/-*
ಯದುಗಿರಿಯ ಬೆಳಕು (ಪು.ತಿ.ನ ಸಾಹಿತ್ಯ ಕುರಿತು)	ಸಂ. ಆಹಿತಾನಲ	150/-*
ಹೇ ರಾಮ್ (ಭಾರತದ ಆತ್ಮಚ್ಛೇದ ಕಥನ)	ಸಂ. ನ. ರವಿಕುಮಾರ	275/-
ಭಾರತೀಯತತ್ವಶಾಸ್ತ್ರದ ರೂಪುರೇಖೆಗಳು	ಮೂಲ:ಎಂ.ಹಿರಿಯಣ್ಣ/ಪ್ರಭುಶಂಕರ	275/-
ಅಮೆರಿಕಾಯಣ	ವೈ.ಆರ್. ಮೋಹನ್	650/-
ಅಮೂರ್ತತೆ ಮತ್ತು ಪರಿಸರ (ವಿಮರ್ಶೆ)	ರಾಜೇಂದ್ರ ಚೆನ್ನಿ	180/-
ಫಾದರ್ 55 (ಕವನ ಸಂಕಲನ)	ವಿ.ಎಂ.ಮಂಜುನಾಥ್	50/-*
ಮಂದಹಾಸ ಮೀಮಾಂಸೆ (ಸಮಗ್ರ ಲಲಿತ ಪ್ರಬಂಧ)	ಪ್ರಭುಶಂಕರ	150/-
ಖಲೀಲ್ ಗಿಬ್ರಾನ್ (ಜೀವನ ದರ್ಶನ)	ಪ್ರಭುಶಂಕರ	60/-
ಆಂಟೋನಿಯೊ ಗ್ರಾಮ್ಷಿ (ಶತಮಾನ ಚಿಂತನೆ)	ಕೆ. ಫಣಿರಾಜ್	50/-*
ಹಳೆಯಕಾಲದ ಹೊಸಕತೆ(ಕಥಾ ಸಂಕಲನ)	ಕೆ.ಸತ್ಯನಾರಾಯಣ	125/-
ಮನುಕುಲದ ಮಾತುಗಾರ (ಚಾಮ್‌ಸ್ಕಿ ಚಿಂತನೆ/ದರ್ಶನ)	ವಿವಿಧ ಲೇಖಕರು	150/-
ಮಾಯಾಪಾತಾಳ (ಕವಿತೆ)	ರಾಮಲಿಂಗಪ್ಪ ಟಿ.ಬೇಗೂರು	50/-
ಗೌರವ (ಜಿ.ಎಸ್.ಎಸ್. 75)	ಸಂ.ಜಿ. ಶ್ರೀನಿವಾಸರಾಜು	250/-
ಹಕ್ಕಿ ಪುಟಾಣಿ (ಮಕ್ಕಳ ಕವಿತೆ)	ಆನಂದ ವಿ. ಪಾಟೀಲ	50/-*
ಅರಹಂತ (ನಾಟಕ)	ರಾಮನಾಥ	75/-*
ಪ್ರೀತಿಸುವುದೆಂದರೆ (ಆರ್ಟ್ ಆಫ್ ಲವಿಂಗ್)	ಮೂಲ : ಎರಿಕ್ ಫ್ರಾಂ ಅನು : ಕೆ.ವಿ.ನಾರಾಯಣ. ಎಚ್.ಎಸ್. ರಾಘವೇಂದ್ರರಾವ್	75/-
ಯೇಗ್ದಾಗೆಲ್ಲಾ ಐತೆ	ಬೆಳಗೆರೆ ಕೃಷ್ಣಶಾಸ್ತ್ರಿ	50/-
ಗೊಂದಲಪುರ (ಹಿಂಸೆ ಕುರಿತು*)	ಸಂ.ನ.ರವಿಕುಮಾರ. ಡಿ.ಆರ್.ಚಂದ್ರಮಾಗಡಿ	175/-
ಫಾದರ್ (ಸ್ಟ್ರಿಂಡ್‌ಬರ್ಗ್ ನಾಟಕ)	ಅನು : ಸಿ. ನಾಗಣ್ಣ	40/-
ರಚನೆ-ನಿರಚನೆ (ವಿಮರ್ಶೆ*)	ಕೇಶವಶರ್ಮ. ಕೆ	80/-
ಯಾರಜಪ್ತಿಗೂ ಸಿಗದ ನವಿಲುಗಳು (ದೇವನೂರ ಮಹಾದೇವ ಸಾಹಿತ್ಯ ಕುರಿತು)	ಪಿ.ಚಂದ್ರಿಕಾ	120/-
ನೀಲಿತತ್ತಿ (ಕವನ ಸಂಕಲನ*)	ಲಕ್ಷ್ಮೀಪತಿ ಕೋಲಾರ	50/-
ಜನ್ನ ಮತ್ತು ಅನೂಹ್ಯ ಸಾಧ್ಯತೆ(ಕಥಾ ಸಂಕಲನ*)	ಆನಂದ ಋಗ್ವೇದಿ	50/-
ವಿರೋಧ ವಿಲಾಸ (ವಕ್ರೋಕ್ತಿ ವರಸೆಗಳು)	ಎಮ್.ಎಸ್.ಕೆ. ಪ್ರಭು	30/-
ದೇಶೀ ದರ್ಶನಗಳು*	ವಿವಿಧ ಲೇಖಕರು	60/-
ನಮ್ಮ ತವಕ ತಲ್ಲಣಗಳು (ಲೇಖನಗಳು*)	ಕೆ.ವಿ. ಸುಬ್ಬಣ್ಣ	60/-
ಮಾಗಿ ಮೂವತ್ತೈದು (ಕಥೆಗಳು)	ಕೇಶವ ಮಳಗಿ	65/-
ಪಾತಿದೋಣಿ (ಕಥೆಗಳು*)	ಉಮಾ ಹೆಗಡೆ	45/-
ಶಬ್ದರೇಖೆ (ವಿಮರ್ಶೆ)	ಕೇಶವಶರ್ಮ ಕೆ.	50/-
ಅನಾಹತನಾದ (ಸಂಗೀತ ಕುರಿತು*)	ವಿವಿಧ ಲೇಖಕರು	35/-
ಕದಳೀವನ ಕರ್ಪೂರ (ಪರಿಸರ ಚಿಂತನೆ*)	ವಿವಿಧ ಲೇಖಕರು	50/-
ಯದುಗಿರಿಯ ಅಂಗಳದಿಂದ (ಪು.ತಿ.ನ. ಸಾಹಿತ್ಯ ಕುರಿತು*)	ವಿವಿಧ ಲೇಖಕರು	45/-
ಕ್ಯಾಪ್ಸೂಲಗಿತ್ತಿ (ಅಂಕಣ ಬರಹ)	ನಾಗೇಶ ಹೆಗಡೆ	30/-
ಪಾ.ವೆಂ. ಹೇಳಿದ ಕಥೆ (ಕಥೆಗಳು)	ರವಿ ಬೆಳಗೆರೆ	100/-
ದಾಂಪತ್ಯಕ್ಕೊಂದು ಶೀಲ (ಪ್ರಬಂಧಗಳು)	ಕೆ. ಸತ್ಯ ನಾರಾಯಣ	30/-
ಒಂದು ಅನುರಾಗಕ್ಕಾಗಿ ಎಷ್ಟೆಲ್ಲಾ(ಕವನ*)	ಕೆ.ಪಿ. ಮೃತ್ಯುಂಜಯ	20/-
ಆಶಯ ಆಕೃತಿ (ವಿಮರ್ಶೆ*)	ಸಿ. ಎನ್. ರಾಮಚಂದ್ರನ್	120/-
ಖಾಸ್‌ಬಾತ್ 97 (ಅಂಕಣ ಬರಹ*)	ರವಿ ಬೆಳಗೆರೆ	100/-
ಕಂಪ್ಯೂಟರ್‌ಗೊಂದು ಕನ್ನಡಿ*	ಸಿ.ಪಿ.ರವಿಕುಮಾರ್	27/-
ನೋಟಪಲ್ಲಟ (ದೃಶ್ಯ ಸಂಸ್ಕೃತಿ ಕುರಿತು)	ಎಚ್.ಎ. ಅನಿಲ್‌ಕುಮಾರ್	35/-
ಇಚ್ಛಾಶಕ್ತಿಯ ನಿರೂಪ (ವೋಲೆ ಷೋಯಿಂಕಾ ಸಾಹಿತ್ಯ ಕುರಿತು*)	ವಿವಿಧ ಲೇಖಕರು	35/-
ಅಂಧ ಮಕ್ಕಳ ಅರಿವಿನಂಗಣ (ಮಹಾ ಪ್ರಬಂಧ)	ಎಮ್.ಆರ್. ಮಂದಾರವಲ್ಲಿ	25/-
ಮೊದಲ ಕಟ್ಟಿನ ಗದ್ಯ (ಲೇಖನಗಳು)	ಎಚ್.ಎಸ್. ಶಿವಪ್ರಕಾಶ್	70/-
ಆಟ-ಮಾಟ (ಸೃಜನಶೀಲತೆ ಕುರಿತು)	ಕೆ.ಜಿ.ಸುಬ್ರಹ್ಮಣ್ಯನ್/ಶ್ರೀನಿವಾಸಮೂರ್ತಿ	100/-
ನಮನ (ಅನುಭಾವಿ ಕಥನ)	ಆನಂದ ಪಾಟೀಲ	50/-*
ಕಲ್ಲರಳಿ ಹೂವ್ವಂತೆ (ಕೆ.ಟಿ.ಶಿವಪ್ರಸಾದ್ ಕುರಿತು)	ಸಂ.ಕೆ. ಪುಟ್ಟಸ್ವಾಮಿ	150/-*
ಮಕ್ಕಳ ಸಾಹಿತ್ಯ ಶತಮಾನ (ಮಕ್ಕಳ ಸಾಹಿತ್ಯ ಸಮೀಕ್ಷೆ)	ಸಂ: ಆನಂದ ಪಾಟೀಲ. ನ. ರವಿಕುಮಾರ	75/-

* ಪ್ರತಿಗಳು ಮುಗಿದಿವೆ

ಕನ್ನಡ ಸಾಹಿತ್ಯ ರಂಗ ಪುಸ್ತಕ ಮಾಲೆ ೫೫

ಮಧನಿದಷ್ಟೆ ಮಾತು

ಸಾರ್ಥಕ ಸಲ್ಲಾಪ

ಅಮೆರಿಕೆಯಲ್ಲಿ ಬಿಡಾರ ಹೂಡಿರುವ ಕನ್ನಡ ಪರಿಸರದ ಸ್ಥಾಯೀ ಮತ್ತು ಸಂಚಾರೀ ಭಾವಗಳ, ವೈವಿಧ್ಯಪೂರ್ಣ ಆಧುನಿಕ ಅಭಿವ್ಯಕ್ತಿಯ ವಿಶಿಷ್ಟ ಸೊಲ್ಲುಗಳ ಸಂಕಲನ ಇದು. ಕಾವ್ಯದ ಧ್ವನಿಶಕ್ತಿಯ ಜೊತೆಗೆ ಕಥನದ ಕುತೂಹಲವನ್ನೂ ಹೊಂದಿರುವ ಈ ಲಲಿತ ನಿಬಂಧಗಳು, ತಮ್ಮ ಅನುಭವಜನ್ಯ ವಿವರಗಳಲ್ಲಿ ಮೈದಾಳುತ್ತಲೇ, ಅದರಾಚೆಗೂ ಚಿಂತನಶೀಲವಾಗಿ ರೆಕ್ಕೆ ಬಿಚ್ಚುವ ರೀತಿ ಭಾವೋದ್ದೀಪಕವಾಗಿದೆ. ಹೊಸ ಆವರಣ, ಜೀವನಶೈಲಿಯ ವಿವರ, ಮಾಹಿತಿಗಳಷ್ಟೆ ಪ್ರಬಂಧವಾಗಲಾರವು. ವಿವರಗಳು ಅರಿವಿನೆಡೆಯ ಕಿಟಕಿಗಳೂ, ಬಾಗಿಲುಗಳೂ, ಕಾಲ್ದಾರಿಗಳೂ ಆದಾಗ ಮಾತ್ರ ಅದು ಸಾರ್ಥಕ ಸಲ್ಲಾಪ.

'ಕೆಂಪು ಗಾಜಿನ ಹಣ್ಣುಗಳಂತೆ ಕಾಣುವ ಗಾರ್ನೆಟ್‌ಗಳು', 'ಸ್ಕೂಟರನ್ನು ಬೆದರಿಸುವ ಲಾರಿಯಂತೆ ಲೇಖಕಿಯನ್ನು ಕಂಗೆಡಿಸುವ ಖಾಲಿ ಹಾಳೆ', 'ಬಡಿಸಿದ್ದು ಆರಿ ಹೋಗ್ತಾ ಇದೆ, ಊಟಕ್ಕೆ ಬಾರೋ' ಎಂದು ಕರೆಯುತ್ತಲೇ ಇರುವ ಅಮ್ಮನ ದನಿ, 'ಮತಿಘಟ್ಟದ ಅಪರೂಪದ ಹತ್ತಿಯಷ್ಟೇ ಮೃದುವಾದ ನೆಹರೂರ ಕೈಕುಲುಕನ್ನು ನೆನೆಯುವ ಅಜ್ಜಯ್ಯ', 'ಐಸಿಯು'ನ ವೆಂಟಿಲೇಟರಿನಲ್ಲಿ ಹೋಗದ ಗಂಗೋದಕ', 'ಊರಿನ ಆಯಿಗೆಂದೇ ಕಾದಿರಿಸಿದ ಮಾಲ್‌ನ ಇಪ್ಪತ್ತು ಪೌಂಡ್ ಅಕ್ಕಿಯ ಸೋನಾ ಮಸೂರಿಯ ಖಾಲಿ ಚೀಲ', 'ಬಡವನ ಪಾಲಿನ ಕೇವಲ ಕಪ್ಪುಬಿಳಿ ಬಣ್ಣದ ಕಾಮನಬಿಲ್ಲು', 'ಎಂದೂ ಹಾದಿ ತಪ್ಪಿಸದ ಎದೆಯ ಜಿ.ಪಿ.ಎಸ್', 'ಎಚ್‌ಒನ್ ಎನ್‌ಒನ್'ಗಿಂತ ಭಯಾನಕವಾದ 'ಎಚ್‌ಒನ್'(ವೀಸಾ) ಆತಂಕ, 'ಕ್ಷಣವನ್ನು ಹಿಡಿಯುವುದನ್ನು ಹೇಳಿಕೊಡುವ ಟೀವಿ ಗುರು', 'ಕಳೆದುಕೊಂಡದ್ದರ ಕುರಿತ ದಿಢೀರ್ ವೈರಾಗ್ಯ', 'ಸೊನ್ನೆಯಿಂದ ಅನಂತದ ನಡುವಿನ ಶೂನ್ಯ ಸಂಪಾದನೆ', 'ನೆನಪಿನ ಚಿಲಿಪಿಲಿಗಳಿಂದ ನೇಯ್ದು ಖಾಲಿ ಗೂಡು', 'ಬರೆದು ಒರೆಸಿದಷ್ಟೂ ನುಣುಪಾಗುವ, ಅಂಚು ಮೊಂಡಾದ ಕಲ್ಲಿನ ಪಾಟಿ (ಸ್ಲೇಟ್)'– ಇಂಥ ಎಷ್ಟೊಂದು ಸಜೀವ ಸಂಗತಿಗಳು, ಒಟ್ಟಾಗಿ ಒಂದು ದರ್ಶನದೆಡೆಗೆ ಪ್ರಾಮಾಣಿಕವಾಗಿ ಚಲಿಸುವ ರೀತಿಯೇ ಈ ನಿಬಂಧಗಳ ನಿರಾಡಂಬರ ಸ್ಥೈರ್ಯವಾಗಿದೆ. ಇಂಥ ವಿವರಗಳು ಕೇವಲ ಕಲೆಹಾಕುವ 'ಮಾಹಿತಿ'ಗಳಾಗದೆ, ಒಂದು ಮನೋಧರ್ಮವನ್ನು ರೂಪಿಸುವ ಸ್ಪಂದನವಾಗಿ ಬೆಳೆಯುವುದರಿಂದಲೇ, ಇಲ್ಲಿನ ಹೆಚ್ಚಿನ ಬರಹಗಳು ಕನ್ನಡ ಸಂವೇದನೆಯನ್ನು ಹಿಗ್ಗಿಸುವಷ್ಟು ಸತ್ವಶಾಲಿಯಾಗಿವೆ.

ಜಯಂತ ಕಾಯ್ಕಿಣಿ



ಕನ್ನಡ ಸಾಹಿತ್ಯ ರಂಗ, ಯುಎಸ್‌ಎ

ಅಭಿನವ